ಜಯಪ್ರಕಾಶ್ ನಾರಾಯಣ:

ಒಂದು ಅಪೂರ್ಣ ಕ್ರಾಂತಿಯ ಕಥೆ



ಡಿ.ಎಸ್. ನಾಗಭೂಷಣ

ಜಯಪ್ರಕಾಶ್ ನಾರಾಯಣ

ಒಂದು ಅಪೂರ್ಣ ಕ್ರಾಂತಿಯ ಕಥೆ

(ಪರಿಷ್ಕೃತ ಆವೃತ್ತಿ)

ಡಿ. ಎಸ್. ನಾಗಭೂಷಣ

ಅಭಿರುಚಿ ಪ್ರಕಾಶನ
ನಂ. ೩೮೭, ೧೪ನೆಯ ಮುಖ್ಯರಸ್ತೆ, ೩ನೆಯ ಅಡ್ಡರಸ್ತೆ,
ಸರಸ್ವತೀಪುರ, ಮೈಸೂರು – ೯

JAYAPRAKASH NARAYAN

ONDU APOORNA KRANTHIYA KATHE

(Jayaprakash Narayan
The story of an incomplete revolution)

by **D. S. Nagabhushana**
HIG-5, 'Nudi', KHB Colony, Kallahalli Extn., Vinobanagar
Shimoga - 577204, 08182-248574, Mob. 94492 42284

Published by : **Abhiruchi Prakashana**
#386, 14th main, 3rd cross
Saraswathipura, Mysore - 9, Karnataka.
Ph. 9448608926
E-mail: Abhiruchiprakashana@yahoo.co.in
Web site : www.Abhiruchiprakashana.com
Pages - 200 . Rs. 120/-
First Impression - 2003
Revised First Edition - 2006
ISBN: 81-7877-070-9
Size : 1/8 Demy
Used paper : 70 gsm maplitho

ಜಯಪ್ರಕಾಶ್ ನಾರಾಯಣ

ಒಂದು ಅಪೂರ್ಣ ಕ್ರಾಂತಿಯ ಕಥೆ

ಮೊದಲ ಮುದ್ರಣ : ೨೦೦೩
ಪರಿಷ್ಕೃತ ಮೊದಲ ಮುದ್ರಣ : ೨೦೦೬
ಹಕ್ಕುಗಳು : ಲೇಖಕರವು
ಪ್ರಕಾಶಕರು: 'ಅಭಿರುಚಿ ಗಣೇಶ್'
[illegible]
ಮುಖಪುಟ ವಿನ್ಯಾಸ : [illegible]
ಮುದ್ರಣ : ವಿಶ್ವಾಸ್ ಪ್ರಿಂಟ್ಸ್
[illegible] – [illegible]
[illegible]

ಎಪ್ಪತ್ತರ ದಶಕದ ಸಂಘರ್ಷದಲ್ಲಿ
ಸಮಾಜವಾದದ ಕನಸು ಕಾಣುವಲ್ಲಿ
ನನಗೆ ಜೊತೆ ನೀಡಿ ಈ ಪುಸ್ತಕ ಬರೆಯಲು ಪ್ರೇರೇಪಿಸಿದ
ಹೃದಯವಂತ ಗೆಳೆಯ, ಪ್ರಕಾಶಕ

ನೆಲಮನೆ ಕೆ. ದೇವೇಗೌಡರ

ನೆನಪಿಗೆ

ಲೇಖಕನ ಮಾತು

ಈ ಪುಸ್ತಕದ ಮೊದಲ ಮುದ್ರಣದ ಲೇಖಕನ ಮಾತುಗಳಲ್ಲೇ ತಿಳಿಸಿರುವಂತೆ, ಈ ಪುಸ್ತಕದ ಬರವಣಿಗೆ ಆರಂಭವಾದದ್ದು ಸುಮಾರು ೩೦ ವರ್ಷಗಳ ಹಿಂದೆ-ಜೆ.ಪಿ. ಇನ್ನೂ ಬದುಕಿದ್ದಾಗ, ಜೆ.ಪಿ. ಚಳುವಳಿಯ ಕಾವು ಇನ್ನೂ ಆರದಿದ್ದಾಗ. ಆಗ ದೆಹಲಿಯಲ್ಲಿದ್ದ ನಾನು ಈ 'ಸಂಪೂರ್ಣ ಕ್ರಾಂತಿ'ಯ ಚಳುವಳಿಯ ಸ್ವರೂಪವನ್ನು ಕಣ್ಣಾರೆ ಕಂಡಿದ್ದೆ. ಸ್ವತಃ ಜೆ.ಪಿ. ಯವರೇ ಭಾಗವಹಿಸಿದ್ದ ಎರಡು ಬೃಹತ್ ಸಭೆಗಳಿಗೆ ದೂರದಲ್ಲೆಲ್ಲೋ ನಿಂತು ಸಾಕ್ಷಿಯಾಗಿದ್ದೆ. ಆಗ ನನಗಿನ್ನೂ ೨೩ ವರ್ಷ. ಸಮಾಜವಾದದ ಪರಿಚಯ ಆಗಿನ್ನೂ ಲೋಹಿಯಾ ಬರಹಗಳ ಮೂಲಕ ಆಗಿತ್ತು. ನನಗೆ ೧೯೬೭ರ 'ಕಾಂಗ್ರೆಸ್ಸೇತರವಾದ'ದ ರೂಪದಲ್ಲಿ ತಪ್ಪಿ ಹೋಗಿದ್ದ ಸಮಾಜವಾದಿ ಕ್ರಾಂತಿ ಈಗ ಆಗಿಯೇ ತೀರುತ್ತದೆಂಬ ಭರವಸೆ! ಅಷ್ಟು ಉತ್ಸಾಹದ, ಆವೇಶದ, ಹೊಸ ಕನಸಿನ ವಾತಾವರಣ, ದೆಹಲಿ ಹಾಗೂ ಸುತ್ತ ಮುತ್ತ. ಇಡೀ ದೇಶ ಇದಕ್ಕೆ ಹುರುಪಿನಿಂದ ಸ್ಪಂದಿಸುತ್ತಿತ್ತು ಎಂಬುದು ಪತ್ರಿಕಾ ವರದಿಗಳಿಂದ ಗೊತ್ತಾಗುತ್ತಿತ್ತು. ಆದರೆ ದೆಹಲಿ ಆಕಾಶವಾಣಿಯ ವಾರ್ತಾ ವಿಭಾಗದಲ್ಲಿದ್ದ ನನಗೆ, ವಾರ್ತೆಗಳ ಮೂಲಕ ಇದಕ್ಕೆ ವಿರುದ್ಧವಾದ ವಾತಾವರಣ ನಿರ್ಮಿಸುವ ಕಾಯಕ! ನಾನು ಈ ವೃತ್ತಿ ಬಿಕ್ಕಟ್ಟಿನಿಂದ ಹೇಗೆ ಹೊರಬರುವುದು ಎಂದು ಯೋಚಿಸುವ ಹೊತ್ತಿಗೆ, ತುರ್ತು ಪರಿಸ್ಥಿತಿ ಘೋಷಣೆಯಾಗಿತ್ತು. ಈ ಘೋಷಣೆಯಾದ ಎರಡು ಮೂರು ದಿನಗಳಲ್ಲೇ, ಸಂಪೂರ್ಣ ಕ್ರಾಂತಿ ಚಳುವಳಿಯ ಸಾಮಾನ್ಯ ಕಾರ್ಯಕರ್ತರನ್ನು ಮನೆಗಳಿಂದ, ಬಸ್ಸುಗಳಿಂದ ಎಳೆದು ಬಂಧಿಸಿ ಸೆರೆಮನೆಗೆ ದೊಡುತ್ತಿದ್ದ ದೃಶ್ಯಗಳನ್ನು ನಾನು ಕಣ್ಣಾರೆ ಕಂಡು ಸ್ತಂಭೀಭೂತನಾದೆ. ಕಡ್ಡಾಯ ಕುಟುಂಬ ಯೋಜನೆಯ ತುರ್ಕ್‌ಮನ್ ಗೇಟ್‌ನ ದೌರ್ಜನ್ಯ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ!

ತುರ್ತು ಪರಿಸ್ಥಿತಿಯ ಎರಡು ವರ್ಷಗಳಲ್ಲಿ ನನ್ನ ಮಾನಸಿಕ ಸ್ಥಿಮಿತವನ್ನು ಕಾಪಾಡಿಕೊಳ್ಳಲು ನನ್ನ ಮಿತಿಯಲ್ಲೇ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಂಡೆ. ಆಗಲೇ ನನಗೆ ಮೈಸೂರಿನ 'ಆಂದೋಲನ' ಪತ್ರಿಕೆಯ ಮಿತ್ರರ ಸಂಪರ್ಕ ಒದಗಿದ್ದು. ರಾಜಶೇಖರ ಕೋಟಿ, ಎಂ.ಬಿ.ಶಿವಣ್ಣ, ನೆಲಮನೆ ದೇವೇಗೌಡ, ದೇವನೂರ ಮಹಾದೇವ, ಕೆ.ರಾಮದಾಸ್, ಎಚ್. ಗೋವಿಂದಯ್ಯ, ಪ.ಮಲ್ಲೇಶ್ ಮುಂತಾದ ಸಮಾಜವಾದಿ ಗೆಳೆಯರ ಪ್ರೇರಣೆಯಿಂದಲೇ ನಾನು ಆಗ ದೆಹಲಿಯಲ್ಲಿ ಗುಪ್ತವಾಗಿ ಮಾತ್ರ ಒಬ್ಬರ ಕೈ ಯಿಂದ ಒಬ್ಬರಿಗೆ ಸಾಗುತ್ತಿದ್ದ ಜೆ.ಪಿ. ಯವರ ಸೆರೆಮನೆಯ ದಿನಚರಿಯನ್ನು ಕನ್ನಡಕ್ಕೆ

ಅನುವಾದಿಸುವ ಧೈರ್ಯಮಾಡಿದ್ದು. ತುರ್ತು ಪರಿಸ್ಥಿತಿಯನ್ನು ಸಡಿಲಿಸಿದ ಕೂಡಲೇ ನೆಲಮನೆ ಪ್ರಕಾಶನದವರು ಪ್ರಕಟಿಸಿದ ಈ ಅನುವಾದ ಹಲವಾರು ಮುದ್ರಣಗಳನ್ನು ಕಂಡು, ನನ್ನನ್ನು ಸಮಾಜವಾದಿ ಚಳುವಳಿಯ ವೃತ್ತದೊಳಕ್ಕೆ ದೂಡಿತು. ಆಗಲೇ ನನಗೆ ಜೆ.ಪಿ. ಮತ್ತು ಲೋಹಿಯಾರ ಸಮಕಾಲೀನರೂ ಒಡನಾಡಿಗಳೂ ಆಗಿದ್ದ ಕಿಷನ್ ಪಟ್ನಾಯಕ್ ಹಾಗೂ ಅವರ ಅನೇಕ ಸಮಾಜವಾದಿ ಗೆಳೆಯರ ಮತ್ತು ಶಿಷ್ಯರ ಪರಿಚಯವಾದದ್ದು. ತುರ್ತು ಪರಿಸ್ಥಿತಿ ಸಡಿಲಗೊಂಡು ಚುನಾವಣೆಗಳು ಘೋಷಣೆಯಾಗಿ, ಇಂದಿರಾಗಾಂಧಿಯವರೂ ಅವರ ಕಾಂಗ್ರೆಸ್ (ಐ) ಪಕ್ಷವೂ ಭಾರಿ ಸೋಲನ್ನು ಅನುಭವಿಸಿದಾಗ, ಇಡೀ ರಾಷ್ಟ್ರ ಬಿಡುಗಡೆಯ ನಿಟ್ಟುಸಿರು ಬಿಟ್ಟಿತು. ಉತ್ತರ ಭಾರತವಂತೂ ಹಬ್ಬದೋಪಾದಿಯಲ್ಲಿ ಈ 'ಹೊಸ ಸ್ವಾತಂತ್ರ್ಯ'ದ ಸಾಧನೆಯನ್ನು ಆಚರಿಸಿತು. ಗಾಂಧಿ ನೇತೃತ್ವದ ಸ್ವಾತಂತ್ರ್ಯ ಹೋರಾಟವನ್ನು ಕಂಡರಿಯದ ನನ್ನ ತಲೆಮಾರಿನವರಿಗೆ ಇದೊಂದು ಹೊಸ ಅನುಭವವೇ ಆಗಿತ್ತು. ಈ ಹೊಸ ವಾತಾವರಣದ, ನವೋತ್ಸಾಹದ ಒಂದು ಭಾಗವಾಗಿ ನಾನು ಈ ಪುಸ್ತಕವನ್ನು ಬರೆಯಲಾರಂಭಿಸಿದ್ದು. ನಂತರ ಏನಾಯಿತೆಂದು ಈ ಪುಸ್ತಕದ ಮೊದಲ ಮುದ್ರಣದ ಲೇಖಕನ ಮಾತುಗಳಲ್ಲಿ ವಿವರಿಸಿರುವೆ.

ಈ ಪರಿಷ್ಕೃತ ಆವೃತ್ತಿಯಲ್ಲಿ ಮೊದಲ ಮುದ್ರಣದಲ್ಲಿಯೂ ಉಳಿದು ಹೋಗಿದ್ದ ಆ ನವೋತ್ಸಾಹದ ಎಳಸು ಬರವಣಿಗೆಯ ಪಳೆಯುಳಿಕೆಗಳನ್ನು ಸ್ವಚ್ಛಗೊಳಿಸಿದ್ದೇನೆ. ಈ ಮುವ್ವತ್ತು ವರ್ಷಗಳಲ್ಲಿ ಭಾರತದ ರಾಜಕಾರಣದಲ್ಲಿ ಆಗಿರುವ ಅನೇಕ ಬದಲಾವಣೆಗಳ ಹಿನ್ನೆಲೆಯಲ್ಲಿ ನನ್ನಲ್ಲಿನ ಸಮಾಜವಾದಿ ಹುರುಪು ಸಹಜವಾಗಿಯೆ ಇಳಿದಿದೆ. ವಿವಿಧ ರಾಜಕೀಯ ತಾತ್ವಿಕತೆಗಳನ್ನು ಕುರಿತು ನನ್ನ ನಿಲುವು ಸಾಕಷ್ಟು ಬದಲಾವಣೆಯಾಗಿದೆ. ಹಾಗಾಗಿ ಈ ಪುಸ್ತಕದ ಮೂಲ ಬರವಣಿಗೆಯಲ್ಲಿ ಅಂತರ್ಗತವಾಗಿದ್ದ ಸಮಾಜವಾದಿ ದೃಷ್ಟಿಕೋನದ ಬದ್ಧತೆ ಒಂದಿಷ್ಟು ಪ್ರಬುದ್ಧತೆಯನ್ನೂ ಪಡೆದಿದೆ ಎಂದು ಹೇಳಬಲ್ಲೆ! ಅಲ್ಲದೆ, ಭಾರತದ ಸಮಾಜವಾದಿ ಚಳುವಳಿಯ ಚರಿತ್ರೆಯನ್ನು ಈ ಅವಧಿಯಲ್ಲಿ ಇನ್ನಷ್ಟು ಓದಿ, ಸಮಾಜವಾದಿಗಳ ಸಹವಾಸದ ನನ್ನ ಅನುಭವದ ಹಿನ್ನೆಲೆಯಲ್ಲಿ ಅದನ್ನೂ ಪುನರ್ಪರಿಶೀಲಿಸಿದ ಪರಿಣಾಮವಾಗಿಯೂ ಈ ಬರವಣಿಗೆಯ ಪರಿಷ್ಕಾರಕ್ಕೆ ಒಂದು ಸಮತೋಲನ ದೊರೆತಿದೆ ಎಂದೂ ನಾನು ಭಾವಿಸಿದ್ದೇನೆ. ಜೊತೆಗೆ ಕರ್ನಾಟಕದಲ್ಲಿ ಜೆ.ಪಿ. ಚಳುವಳಿ ಕುರಿತ ಒಂದು ಸಣ್ಣ ಅಧ್ಯಾಯವನ್ನೂ ಇಲ್ಲಿ ಸೇರಿಸಿದ್ದೇನೆ. ಮೊದಲ ಮುದ್ರಣದಲ್ಲಿ ಇದು ಇಲ್ಲದ್ದರ ಬಗ್ಗೆ ಟೀಕೆ ಮಾಡಿದ ಮಿತ್ರರಾರೂ ಈ ಅಧ್ಯಾಯವನ್ನು ಬರೆಯುವುದರಲ್ಲಿ ನೆರವಿಗೆ ಬರಲಿಲ್ಲ! ಹಾಗೆ ನೋಡಿದರೆ ಇವರಾರೂ, ತಾವು ಆ ಚಳುವಳಿಯಲ್ಲಿ ಭಾಗವಹಿಸದ್ದಾಗಿ ಹೇಳಿಕೊಂಡರೂ; ಅದರ ದಾಖಲೆಗಳನ್ನಾಗಲೀ ನೆನಪುಗಳನ್ನಾಗಲೀ ಉಳಿಸಿಕೊಂಡಂತಿಲ್ಲ. ಕೇಳಿದರೆ ಹೇಳುವ ಸ್ಥಿತಿಯಲ್ಲೂ ಇಲ್ಲ! ಹೀಗಾಗಿ ನಾನು ಸರ್ವೋದಯ ಮುಖಂಡರಾದ ಪಿ. ವೆಂಕೋಬರಾಯರು ತಾವು ಇತ್ತಿಚಿಗ ನಿಧನರಾಗುವ ಮುನ್ನ ಹೊರತಂದ 'ಕರ್ನಾಟಕದಲ್ಲಿ ಜೆ.ಪಿ. ಮತ್ತು ಸಂಪೂರ್ಣ ಕ್ರಾಂತಿ' ಎಂಬ ಕಿರುಪುಸ್ತಕದಿಂದ (ಈ ಪುಸ್ತಕದಲ್ಲೂ ಇರುವುದು ಸ್ಥೂಲ

ವಿವರಗಳಷ್ಟೇ!) ಒಂದಿಷ್ಟು ಮಾಹಿತಿಯನ್ನು ಒಟ್ಟುಗೂಡಿಸಿ, ಈ ಕಿರು ಅಧ್ಯಾಯವನ್ನು ಬರೆದಿರುವೆ. ಈ ಎಲ್ಲ ಕಾರಣಗಳಿಂದಾಗಿ ಇದು ಪರಿಷ್ಕೃತ ಆವೃತ್ತಿ.

ಈ ಪುಸ್ತಕವನ್ನು ನನ್ನ ತಲೆಮಾರಿನವರು ಹಳೆಯ ನೆನೆಪುಗಳನ್ನು ಮೆಲುಕು ಹಾಕಲು, ತಮ್ಮ ಆ ಹಳೆಯ ವೈಭವದ ಹೋರಾಟ-ಹಾರಾಟದ ದಿನಗಳನ್ನು ಪುನಾರಚಿಕೊಳ್ಳಲು ಓದಬಹುದು. ಆದರೆ ಅದಕ್ಕಿಂತ ಹೆಚ್ಚಾಗಿ ಈ ತಲೆಮಾರಿನವರು ತಮ್ಮ ಹಿಂದಿನ ತಲೆಮಾರುಗಳವರು ಒಂದು ರಾಷ್ಟ್ರವನ್ನು ಕಟ್ಟಲು ಏನೆಲ್ಲ ಆದರ್ಶಗಳನ್ನು ರೂಪಿಸಿಕೊಂಡಿದ್ದರು, ಏನೆಲ್ಲ ಮೌಲ್ಯಗಳೆನ್ನು ರೂಢಿಸಿಕೊಂಡಿದ್ದರು ಮತ್ತು ಅವನ್ನು ಸಾಧಿಸಲು ಏನೆಲ್ಲ ತ್ಯಾಗಮಾಡಿದರು, ಎಂತೆಂತಹ ನೋವುಗಳನ್ನು ಅನುಭವಿಸಿದರು ಮತ್ತು ಇಂದು ಆ ರಾಷ್ಟ್ರ ಯಾವೆಲ್ಲ ಆದರ್ಶಗಳನ್ನು ಎತ್ತಿ ಹಿಡಿಯ ಹೊರಟಿದೆ ಮತ್ತು ಏಕೆ ಎಂದು ಯೋಚಿಸುವಂತೆ ಮಾಡುವುದಾದರೆ, ನನ್ನ ಈ ಪ್ರಯತ್ನ ಸಾರ್ಥಕವಾದೀತು. ಭಾರತದ ಸ್ವಾತಂತ್ರ್ಯ ಹೋರಾಟದ ಹಾಗೂ ಸಮಾಜವಾದಿ ಚಳುವಳಿಯ ಮುಂಚೂಣಿ ನಾಯಕರಲ್ಲೊಬ್ಬರಾಗಿದ್ದ ಜಯಪ್ರಕಾಶ್ ನಾರಾಯಣರ ಹಲವು 'ಅವತಾರ'ಗಳು ಹಾಗೂ ಅವುಗಳಿಗೆ ಕಾರಣರಾದ ಅವರ ವ್ಯಕ್ತಿತ್ವದ ಸಂಕೀರ್ಣತೆ ಈ ಪುಸ್ತಕದಲ್ಲಿ ಸೂಕ್ಷ್ಮ ನೆಲೆಯಲ್ಲಾದರೂ ಮೂಡಿ ಬಂದಿದೆ ಎಂದು ನಾನು ಭಾವಿಸಿದ್ದೇನೆ. ಹಾಗೇ, ಸಮಾಜವಾದಿ ಚಳುವಳಿಯ ತಾತ್ವಿಕ ಅಸ್ಪಷ್ಟತೆಗಳು, ಸಂದಿಗ್ಧತೆಗಳು, ವ್ಯಕ್ತಿಪ್ರತಿಷ್ಠೆಗಳು ಹಾಗೂ ಇವುಗಳಿಂದಾಗಿ ಅದು ಅನುಭವಿಸಿದ ಏಳು ಬೀಳುಗಳ ಸೂಚನೆಗಳೂ ಇಲ್ಲಿವೆ. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯೋತ್ತರ ರಾಜಕಾರಣದ ಬಗ್ಗೆ ಅಧ್ಯಯನ ಮಾಡಬಯಸುವವರಿಗೆ ಈ ಪುಸ್ತಕ ಒಂದು ಸಣ್ಣ ಪ್ರಮಾಣದ ಕನ್ನಡ ಆಕರ ಗ್ರಂಥವೂ ಆಗಬಹುದಾಗಿದೆ ಎಂದು ನಾನು ನಂಬಿದ್ದೇನೆ.

ಈ ಪರಿಷ ತ ಮುದ್ರಣವನ್ನು ಹೊರತಲು ಮೈಸೂರಿನ ನನ್ನ ಕಿರಿಯ ಗೆಳೆಯ ಅಭಿರುಚಿ ಗಣೇಶ್ ಮುಂದೆ ಬಂದಿದ್ದಾರೆ ಈ ಮೂಲಕ ನನ್ನ ಬಗ್ಗೆ ತೋರಿದ ಅವರ ವಿಶ್ವಾಸಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಹಾಗೇ ಚೆಂದ ಮುಖಪುಟ ವಿನ್ಯಾಸ ಮಾಡಿದ ಸುಧಾಕರ ದರ್ಬೆ ಅವರಿಗೂ ಮತ್ತು ಅಂದವಾಗಿ ಪುಸ್ತಕವನ್ನು ಮುದ್ರಿಸಿಕೊಟ್ಟಿರುವ ವಿಶ್ವಾಸ ಪ್ರಿಂಟ್ಸ್‌ನ ಎಲ್ಲ ಗೆಳೆಯರಿಗೆ ನನ್ನ ವಂದನೆಗಳು.

೧೫/೩/೨೦೦೮ ಡಿ.ಎಸ್. ನಾಗಭೂಷಣ
ಶಿವಮೊಗ್ಗ

ಲೇಖಕನ ಮಾತು (ಮೊದಲ ಮುದ್ರಣಕ್ಕೆ)

ಸಮತೆ, ಸಮಾಜವಾದ, ಚಳುವಳಿ ಇತ್ಯಾದಿ ಸಮುದಾಯ ಸಂಬಂಧವಾದ ಪರಿಕಲ್ಪನೆಗಳೆಲ್ಲವೂ ಅಪ್ರಸ್ತುತಗೊಳ್ಳಲಾರಂಭಿಸಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ, ನಿರ್ದಿಷ್ಟವಾಗಿ ಇವುಗಳಿಗಾಗಿಯೇ ತನ್ನ ಇಡೀ ಬದುಕನ್ನು ಸಮರ್ಪಿಸಿಕೊಂಡ ವ್ಯಕ್ತಿಯೊಬ್ಬನ ಜೀವನ ಚಿತ್ರವನ್ನು ನಿಮ್ಮ ಮುಂದಿಡುತ್ತಿದ್ದೇನೆ. ಈ ಪುಸ್ತಕವನ್ನು ಬರೆದು ಮುಗಿಸುತ್ತಿದ್ದಾಗ, ಇಂದಿನ ಸಂದರ್ಭದಲ್ಲಿ ನನ್ನ ಈ ಕೆಲಸ ಹುಚ್ಚುತನದ್ದಾಗಿರಬಹುದೇ ಎಂಬ ಪ್ರಶ್ನೆ ನನ್ನನ್ನು ಕಾಡಿದ್ದುಂಟು. ಆದರೆ ಇಂತಹ ಹುಚ್ಚುತನಗಳು ತಂತಾನೇ ಕೆಟ್ಟವೇನಲ್ಲ, ದೀರ್ಘಕಾಲಿಕವಾಗಿ ಅವು ಸತ್ಪರಿಣಾಮವನ್ನೇ ಉಂಟುಮಾಡುವಂತಹವು. ಅದ್ಭುತಗಳು ಅನೇಕಬಾರಿ ಸೃಷ್ಟಿಯಾಗಿರುವುದೇ ಯಾರದೋ ಇಂತಹ ಹುಚ್ಚುಗಳಿಂದಲೇ ಎಂಬ ಅರಿವಿನೊಂದಿಗೆ ಈ ಪುಸ್ತಕವನ್ನು ವಿಶಿಷ್ಟ ಕುತೂಹಲದಿಂದ, ಉತ್ಸಾಹ-ಖುಷಿಗಳಿಂದ ನಿಮ್ಮ ಕೈಗಿಡುತ್ತಿದ್ದೇನೆ.

ಹಾಗೆ ನೋಡಿದರೆ ಈ ಪುಸ್ತಕದ ಬರವಣಿಗೆ ಆರಂಭವಾದದ್ದು ಇಪ್ಪತ್ತೈದು ವರ್ಷಗಳ ಹಿಂದೆ. ಅದು ಎಪ್ಪತ್ತರ ದಶಕ. ಸಮಾನತೆ, ಸಮಾಜವಾದವೆಂದು ಕೂಗಾಡುತ್ತಾ; ಈ ಕೂಗಾಟಕ್ಕೆ ತುರ್ತು ಪರಿಸ್ಥಿತಿ ಘೋಷಣೆ ಅಡ್ಡಿಯುಂಟುಮಾಡಿತೆಂದು ಅದರ ವಿರುದ್ಧ ನಮ್ಮ ನಮ್ಮದೇ ರೀತಿಯಲ್ಲಿ ಹೋರಾಡುತ್ತಾ; ಜನತಾ ಸರ್ಕಾರದ ಸ್ಥಾಪನೆಯೊಂದಿಗೆ ಆ ತುರ್ತುಪರಿಸ್ಥಿತಿ ರದ್ದಾದಾಗ, ಅದಕ್ಕೆ ನಾವೂ ಕಾರಣರೆಂದು ಹಾರಾಡುತ್ತಿದ್ದ ಕಾಲವದು. ಈಗ ನಿಂತು ನೋಡಿದಾಗ ಆ ದಿನಗಳ ಬಗ್ಗೆ ಸ್ವಲ್ಪ ತಮಾಷೆ, ಸ್ವಲ್ಪ ಖುಷಿ, ಸ್ವಲ್ಪ ಹೆಮ್ಮೆ ಎನ್ನಿಸುತ್ತದೆ. ಅಂತಹ ದಿನಗಳಲ್ಲಿ ಈ ಪುಸ್ತಕದ ಬರವಣಿಗೆ ಆರಂಭವಾದದ್ದು. ನಾನಾಗ ದೆಹಲಿಯಲ್ಲಿದ್ದೆ. ಆಗ ಅದು ರಾಜಕೀಯ ಭೂಕಂಪನಗಳ ಕೇಂದ್ರ. ಅಲ್ಲೇ ನಾನು ತುರ್ತುಪರಿಸ್ಥಿತಿಯ ಮುನ್ನ ಹಾಗೂ ಅನಂತರ ಜೆ.ಪಿ.ಯನ್ನು ನೋಡಿದ್ದು, ಕೇಳಿದ್ದು—ದೂರದಿಂದಲೇ ಆದರೂ. ಆಗ ದೇಶದ ಯುವಶಕ್ತಿಯ ಕಣ್ಮಣಿಯಾಗಿ ಹೊರಹೊಮ್ಮಿದ್ದ ಈ ವೃದ್ಧ ನಾಯಕನ ಬಗ್ಗೆ ಕುತೂಹಲದಿಂದ ಅಲ್ಲಲ್ಲಿ ಸಿಕ್ಕ ಪುಸ್ತಕಗಳನ್ನು ಓದತೊಡಗಿದಾಗ—ತನ್ನ ಹದಿಹರೆಯದಿಂದಲೂ ಸಾಹಸದ ನಂತರ ಮತ್ತೊಂದು ಸಾಹಸ, ಪ್ರಯೋಗದ ನಂತರ ಮತ್ತೊಂದು ಪ್ರಯೋಗವನ್ನು ನಿರಂತರವಾಗಿ ಮಾಡುತ್ತಲೇ, ವ್ರತದಂತೆ ಅಧಿಕಾರದಿಂದ ದೂರವೇ ಉಳಿದು; ತನ್ನ ಬದುಕನ್ನೇ ಕ್ರಾಂತಿಯ ಒಂದು ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದ್ದ ಈ ಅಪೂರ್ವ ವ್ಯಕ್ತಿತ್ವವನ್ನು; ನನ್ನ ಹಾಗೇ ಹಾರಾಟವನ್ನೇ ಹೋರಾಟವೆಂದು

ಬಗೆದು ಬಳಲುತ್ತಿದ್ದ ನನ್ನ ಸಮಾಜವಾದಿ ಸ್ನೇಹಿತರಿಗೆ ಪರಿಚಯಿಸುವ ಆಸೆ ನನ್ನಲ್ಲಿ ಉಂಟಾಯಿತು. ಆ ವೇಳೆಗಾಗಲೇ ನಾನು ಜೆ.ಪಿ. ಸೆರೆಮನೆಯ ದಿನಚರಿಯನ್ನು ಕನ್ನಡಕ್ಕೆ ಅನುವಾದಿಸಿದ್ದೆ. ಅದನ್ನು ಪ್ರಕಟಿಸಿದ್ದ ಗೆಳೆಯ ನೆಲಮನೆ ದೇವೇಗೌಡರೂ, ಈಗ 'ಧರೆಗೆ ದೊಡ್ಡವ'ರೆನಿಸಿರುವ ದೇವನೂರ ಮಹಾದೇವ ಅವರೂ ಈ ನನ್ನ ಹೊಸ ಪ್ರಯತ್ನಕ್ಕೆ ಇಂಬು ನೀಡಿದರು.

ಬರವಣಿಗೆ, ಜೆ.ಪಿ.ಯವರು ಪಕ್ಷ ರಾಜಕಾರಣವನ್ನು ತೊರೆದು ಭೂದಾನ ಚಳುವಳಿಯೆಡೆಗೆ ಆಕರ್ಷಿತರಾದ ಘಟ್ಟ ತಲುಪಿದ್ದಾಗ ನಮ್ಮೆಲ್ಲ ಗೆಳೆಯರ 'ಮಹಾ ಗುರು' ಕೆ.ಎಂ. ಶಂಕರಪ್ಪ ತಮ್ಮ 'ಚಲನ' ಚಿತ್ರ–ಸಮಾಜದ ಕೆಲಸದ ಮೇಲೆ ದೆಹಲಿಗೆ ಬಂದು ನನ್ನ ಮನೆಯಲ್ಲಿ ಇಳಿದುಕೊಂಡರು. ನನ್ನ ಬರವಣಿಗೆಯನ್ನು ಗಮನಿಸಿದ ಅವರು, 'ಏನಯ್ಯಾ, ಜೆ.ಪಿ. ಬದುಕಿದ್ದಾಗಲೇ ಅವರನ್ನು ಕಂಡು ಮಾತಾಡಿಸದೆ ಅವರ ಬಗ್ಗೆ ಪುಸ್ತಕ ಬರೆಯುವ ಧಾರ್ಷ್ಟ್ಯವೇ ನಿನಗೆ?' ಎಂದು ತಮ್ಮದೇ ಅರಾಜಕ ಶೈಲಿಯಲ್ಲಿ ನನಗೆ ಛೀಮಾರಿ ಹಾಕಿದರು. ನನಗೆ ನನ್ನ ಬಗೆಗೇ ಜಿಗುಪ್ಸೆ ಬಂದು ಬರವಣಿಗೆ ನಿಲ್ಲಿಸಿದೆ. ಜೆ.ಪಿ. ಅವರನ್ನು ಕಾಣಲು ಪಾಟ್ನಾದ ನನ್ನ ಸಮಾಜವಾದಿ ಮಿತ್ರರಾಗಿದ್ದ ಶಿವಾನಂದ ತಿವಾರಿ (ಈಗ ಲಾಲೂಪ್ರಸಾದ್ ಯಾದವರ ಆಪ್ತ ಸಲಹಾಕಾರನಾಗಿರುವ ಬಿಹಾರದ ಸಚಿವ) ಹಾಗೂ ಮದನ್‌ಲಾಲ್ ಹಿಂದ್‌ರ ಮೂಲಕ ಪ್ರಯತ್ನಿಸಿದೆ. ತೀವ್ರ ಅಸ್ವಸ್ಥತೆಯ ಕಾರಣ ಅವರು ದೆಹಲಿಗೆ ಬರುವ ಸಾಧ್ಯತೆಗಳು ಕಡಿಮೆಯೆಂದೂ, ಪಾಟ್ನಾದಲ್ಲಿ ಕೂಡಾ ಅವರ ಸಂದರ್ಶನದ ಅವಕಾಶ ನನ್ನಂತಹ 'ಅಪ್ರಮುಖ'ರಿಗೆ ಕಷ್ಟಸಾಧ್ಯವೆಂದೂ ನನಗೆ ತಿಳಿಸಲಾಯಿತು. ಆ ಹೊತ್ತಿಗೆ ಜನತಾ ಸರ್ಕಾರ ನನ್ನ ಕಣ್ಮುಂದೆಯೇ ಕುಸಿದು ಬೀಳುತ್ತಿತ್ತು. ನನಗೂ ಉತ್ಸಾಹ ಇಳಿಯಿತು. ಹಸ್ತಪ್ರತಿ ಅಪೂರ್ಣವಾಗಿಯೇ ಉಳಿಯಿತು. ಈ ಮಧ್ಯೆ ಜೆ.ಪಿ.ಯೂ ಕಾಲವಾದರು. ಜೊತೆಗೆ ನನ್ನ ಈ ಎಲ್ಲ ಪ್ರಯತ್ನ, ಉತ್ಸಾಹ ಒತ್ತಡಗಳ ಹಿಂದಿದ್ದ ಸಮಾಜವಾದವೂ ಕ್ರಮೇಣ ಕಾಲವಾಗುತ್ತ ಬಂತು... ನನ್ನ ಹಸ್ತಪ್ರತಿ ಪೂರ್ಣವಾಗದೆ ಹಾಗೇ ಉಳಿಯಿತು.

ಮತ್ತೆ, ನೆಲಮನೆ ದೇವೇಗೌಡರು ಅಕಾಲಿಕ ಮರಣಕ್ಕೆ ತುತ್ತಾಗುವ ಒಂದೆರಡು ತಿಂಗಳುಗಳ ಹಿಂದೆ—ಅಂದರೆ ಈಗ್ಗೆ ಎರಡು ಮೂರು ವರ್ಷಗಳ ಹಿಂದೆ—ಹಸ್ತಪ್ರತಿಯನ್ನು ಪೂರ್ಣಗೊಳಿಸಿಕೊಡುವುದಾದರೆ ತಾವು ಪ್ರಕಟಿಸುವುದಾಗಿ ಹೇಳಿದ್ದರು. ಆದರೆ ಆಗ ನಾನಿದ್ದ ಚಿತ್ರದುರ್ಗದಲ್ಲಿ ಸೂಕ್ತ ಆಕರ ಗ್ರಂಥಗಳು ದೊರೆಯದೆ ಹಸ್ತಪ್ರತಿ ಹಾಗೇ ಉಳಿಯಿತು. ಈಗ ನನ್ನ ಸಮಾನಮನಸ್ಕರೆಲ್ಲ, ಜಾಗತೀಕರಣದ ಒತ್ತಡಗಳನ್ನು ಎದುರಿಸುವ ಬಗೆಗಳು ಯಾವುವು ಎಂಬ ಬಗ್ಗೆ ತೀವ್ರವಾದ ಆಲೋಚನೆಗೆ ತೊಡಗಿರುವ ಸಂದರ್ಭದಲ್ಲಿ ಏಕೋ ಮತ್ತೆ ನನಗೆ ಜೆ.ಪಿ. ನೆನಪಿಗೆ ಬಂದರು. ಅವರೇ ಇದಕ್ಕೆಲ್ಲ ಉತ್ತರ ಎಂಬರ್ಥದಲ್ಲಲ್ಲ; ಆದರೆ ಯಾವ ಅರ್ಥದಲ್ಲಿ ಎಂಬುದು ಈ ಪುಸ್ತಕ ಓದಿದ ನಂತರ ನಿಮಗೇ ಗೊತ್ತಾಗುವುದು. ಅಲ್ಲದೆ

ಇದು, ಜೆ.ಪಿ. ಶತಮಾನೋತ್ಸವ ವರ್ಷ ಬೇರೆ—ಇದೇ ಅಕ್ಟೋಬರ್ ೧೧ಕ್ಕೆ ಅದು ಮುಗಿಯುತ್ತದೆ. ಈ ಹಸ್ತಪ್ರತಿಯನ್ನು ಪೂರ್ಣಗೊಳಿಸಿ ಪ್ರಕಟಿಸಲು ಇದಕ್ಕಿಂತ ಉತ್ತಮ ಸಂದರ್ಭ ಒದಗಲಾರದೇನೋ. ಹಾಗಾಗಿ ನನಗೆ ದೊರೆತ ಅಲ್ಪಕಾಲದಲ್ಲೇ ಗೆಳೆಯರ-ಬಂಧುಗಳ ಸಹಾಯದಿಂದ ಅಗತ್ಯ ಆಕರ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಹೊಂದಿಸಿಕೊಂಡು, ಪುಸ್ತಕವನ್ನು ಪೂರ್ಣಗೊಳಿಸಿದ್ದೇನೆ.

ಈ ಪುಸ್ತಕ ಜೆ.ಪಿ.ಯವರ ಒಂದು ಸಂಕ್ಷಿಪ್ತ ಜೀವನ ಚಿತ್ರವನ್ನು ಕೊಡುವ ಪ್ರಯತ್ನ ಮಾಡಿದೆ. ಸಂಕ್ಷಿಪ್ತ ಎಂಬುದು ಯಾವ ಅರ್ಥದಲ್ಲಿ ಎಂದರೆ, ಜೆ.ಪಿ. ಕುರಿತು ನಾನು ಓದಿದ ಸುಮಾರು ಎರಡೂವರೆ ಸಾವಿರ ಪುಟಗಳ ಸಾಹಿತ್ಯವನ್ನು ಇಲ್ಲಿ ಸುಮಾರು ೨೦೦ ಪುಟಗಳಿಗೆ 'ಭಟ್ಟಿ' ಇಳಿಸಿದ್ದೇನೆ. ಹೀಗೆ ಭಟ್ಟಿ ಇಳಿಸುವಾಗ, ಅವರ ವ್ಯಕ್ತಿತ್ವದ ಸಮಗ್ರತೆಗೆ ಭಂಗ ಬರದಂತೆ, ಇಂದಿನ ಸಂದರ್ಭಕ್ಕೆ ಅವರ ಬದುಕು ಮತ್ತು ಹೋರಾಟ ಒಂದು ಧ್ವನಿಪೂರ್ಣ ಹಿನ್ನೆಲೆಯಾಗಿ ಒದಗಿ ಬರುವಂತೆ ನಿರೂಪಣೆಯನ್ನು ವಿನ್ಯಾಸಗೊಳಿಸಿದ್ದೇನೆ. ಹಾಗಾಗಿಯೇ ಈ ಪುಸ್ತಕಕ್ಕೊಂದು ಉಪಶೀರ್ಷಿಕೆಯೂ ತಾನಾಗಿ ಒದಗಿ ಬಂದಿದೆ. ಈ ಪುಸ್ತಕ ಇಪ್ಪತ್ತೈದು ವರ್ಷಗಳ ಅಂತರದಲ್ಲಿ ಪೂರ್ಣಗೊಂಡಿದ್ದರಿಂದ ಭಾಷೆ, ಶೈಲಿಗಳಲ್ಲಿ ವ್ಯತ್ಯಾಸ ಸಹಜ. ಆದರೆ ಇಪ್ಪತ್ತೈದು ವರ್ಷಗಳ ಹಿಂದೆ ಸಿದ್ಧಪಡಿಸಿದ ಹಸ್ತಪ್ರತಿಯನ್ನು ಆದಷ್ಟೂ ತಿದ್ದಿ, ನಿರೂಪಣೆಯಲ್ಲಿನ ಎಳಸು ಎಳಸಾದ ಭಾಷೆಯನ್ನೂ, ಆಗ ಸಂದೇಹಗಳೇ ಇಲ್ಲದೆ ಒಪ್ಪಿದ್ದ ಸಮಾಜವಾದಿ ಚಳುವಳಿಯು ನನ್ನ ಬರವಣಿಗೆಯ ಮೇಲೆ ಹೇರಿರಬಹುದಾದ ಪ್ರತಿಪಾದನಾತ್ಮಕ ಶೈಲಿಯನ್ನೂ, ಸರಿಪಡಿಸಲು ಪ್ರಯತ್ನಿಸಿದ್ದೇನೆ. ಆದರೂ ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬಂತೆ, ನನ್ನ ಪ್ರಯತ್ನ ಮೀರಿ ಇಂತಹ ದೋಷಗಳು ಉಳಿದುಹೋಗಿದ್ದಲ್ಲಿ ಕ್ಷಮೆ ಇರಲಿ.

ಹಾಗೆಂದ ಮಾತ್ರಕ್ಕೆ ಈ ಪುಸ್ತಕದ ಇಡೀ ಬರವಣಿಗೆಗೆ ಒಂದು ದೃಷ್ಟಿಕೋನವೆಂಬುದಿಲ್ಲ ಎಂದಲ್ಲ. ಅದು ಯಾವುದೇ ರೀತಿಯ ಬರವಣಿಗೆಯಲ್ಲೂ—ವಿಶೇಷವಾಗಿ ಚರಿತ್ರೆಗೆ ಸಂಬಂಧಿಸಿದ ಬರವಣಿಗೆಯಲ್ಲಿ—ಅಸಾಧ್ಯವೇ ಸರಿ. ನಾನು ಈಗಲೂ ಮೂಲತಃ ಸಮಾಜವಾದಿಯೇ; ಆದರೆ ತತ್ವದ ಕಣ್ಣುಪಟ್ಟಿ ಕಳಚಿಕೊಂಡು ವರ್ತಮಾನದ ನಿಜಗಳಿಗೆ ಕಣ್ಣು ತೆರೆದಿಟ್ಟುಕೊಂಡ ಸಮಾಜವಾದಿ. ಹಾಗಾಗಿ ಇಲ್ಲಿನ ಜೆ.ಪಿ. ಜೀವನ ಚಿತ್ರದೊಂದಿಗೆ ಹಾಸುಹೊಕ್ಕಾಗಿ ಹೆಣೆದುಕೊಂಡು ಬಂದಿರುವ ಸಮಾಜವಾದಿ ಚಳುವಳಿಯ ಚರಿತ್ರೆಯನ್ನು ಮುಕ್ತ ಸಮಾಜವಾದಿ ಕಣ್ಣಿನಿಂದ ನೋಡಲು ಯತ್ನಿಸಿದ್ದೇನೆ ಎಂದು ಹೇಳಿಕೊಳ್ಳಲು ನನಗೇನೂ ಸಂಕೋಚವಿಲ್ಲ. ಇಲ್ಲಿ ಒಂದು ಮಾತು ಹೇಳಲೇಬೇಕು. ನಾನು ಈ ಹಸ್ತಪ್ರತಿಯನ್ನು ಪೂರ್ಣಗೊಳಿಸಲು ಕೂತಾಗ ನನ್ನ ಮನದಲ್ಲಿದ್ದ ಜೆ.ಪಿ.ಯ ಚಿತ್ರ ಹಸ್ತಪ್ರತಿ ಕೊನೆಗೊಳ್ಳುವ ಹೊತ್ತಿಗೆ ತನ್ನೆಲ್ಲಾ ವೈಭವವನ್ನು ಕಳೆದುಕೊಂಡು ಚರಿತ್ರೆಯ ಒಂದು ಸರಳವಿನ್ಯಾಸವಾಗಿ ಮಾತ್ರ ನನ್ನ ಮುಂದೆ ಮೂಡಿ ನಿಂತಿತ್ತು. ಜೆ.ಪಿ. ಅಸಾಮಾನ್ಯ ಮನುಷ್ಯ ಮಾತ್ರ ಮಾಡಬಲ್ಲ ಸಾಹಸಗಳನ್ನು ಮಾಡಿದ ಹಾಗೇ, ಸಾಮಾನ್ಯ ಮನುಷ್ಯ ಮಾಡಬಲ್ಲ

ತಪ್ಪುಗಳನ್ನೂ ಮಾಡಿದ್ದಾರೆಂದು ನನಗನ್ನಿಸಿದೆ. ಬೇರೇನೇ ಇರಲಿ, ನನ್ನ ತಲೆಮಾರು ಅಭಿಮಾನವಿಟ್ಟು ಮಾತಾಡುವ ಬಿಹಾರ ಆಂದೋಲನ ಮೂಲದ ಜೆ.ಪಿ. ಚಳುವಳಿ, ಒಂದು ಹಂತದ ನಂತರ—ಇತರೆಲ್ಲ ಪೂರಕ ತಾತ್ವಿಕ ಹಾಗೂ ವಾಸ್ತವಿಕ ಕಾರಣಗಳ ಹೊರತಾಗಿಯೂ—ಜೆ.ಪಿ. ಮತ್ತು ಇಂದಿರಾಗಾಂಧಿಯವರ ನಡುವಣ ವೈಯಕ್ತಿಕ ಜಿದ್ದಾಜಿದ್ದಿಯಾಗಿ ಹೋಯಿತೇನೋ ಎಂಬ ಅನುಮಾನ ನನ್ನಲ್ಲುಂಟಾಗಿದೆ... ಅವರ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆ ಅವರು ಇಡೀ ಬದುಕಿನ ತುಂಬಾ ಮಾಡಿಕೊಂಡು ಬಂದಿದ್ದ ಹೋರಾಟದ ಬಗೆಗಿನ ಅವರದೇ ಆದ ಪ್ರಾಮಾಣಿಕ ಅತೃಪ್ತಿಯ ಹೊಟ್ಟೆಯಲ್ಲಿ ಹುಟ್ಟಿದ ಬಡಕೂಸು ಎಂದೂ ನನಗೆ ಕಾಣಿಸುತ್ತದೆ. ಈ ದೃಷ್ಟಿಯಿಂದ ಅವರ ಸಂಪೂರ್ಣ ಕ್ರಾಂತಿಯನ್ನು ವಿಫಲ ಕ್ರಾಂತಿಯೆಂದು ಕರೆಯಬಹುದೇ? ಈ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಈ ಬಗೆಗಿನ ವಿಶ್ಲೇಷಣೆಯೊಂದನ್ನು ಸೇರಿಸುವ ಯೋಚನೆ ಮಾಡಿ ಕೊನೆಗೆ ಕೈಬಿಟ್ಟೆ. ಏಕೆಂದರೆ ಅದು ಈ ಪುಸ್ತಕದ ಬರವಣಿಗೆಯ ವಿನ್ಯಾಸಕ್ಕೇ ಹೊರತಾದುದು. ಆದುದರಿಂದಲೇ ಮೇಲಿನ ಎಲ್ಲ ಅನ್ನಿಸಿಕೆಗಳನ್ನು ಈ 'ಲೇಖಕನ ಮಾತು'ಗಳಲ್ಲಿ— ಈ ಮುನ್ನುಡಿಯಲ್ಲಿ— ಮಾತ್ರ ಹೇಳುವ ಎಚ್ಚರಿಕೆ ವಹಿಸಿದ್ದೇನೆ. ಈ ದೃಷ್ಟಿಯಿಂದ ಈ ಪುಸ್ತಕವು ಒಂದು ನಿರೂಪಣಾ ಗ್ರಂಥವೇ ಹೊರತು ಸಂಶೋಧನ ಗ್ರಂಥವಲ್ಲವೆಂದು ಇಲ್ಲಿ ಸೂಚಿಸಬಯಸುತ್ತೇನೆ.

ಸಂಪೂರ್ಣ ಕ್ರಾಂತಿಯ ಪರಿಕಲ್ಪನೆಯನ್ನು ಸಹಾನುಭೂತಿಯಿಂದ ನೋಡುವ ಮೂಲಕ ಮಾತ್ರ ನಾವು ಜೆ.ಪಿ.ಗೆ ನ್ಯಾಯ ಸಲ್ಲಿಸಲು ಸಾಧ್ಯ ಎಂಬುದು ನನ್ನ ನಿಲುವು. ಅದು ವಿಫಲವೇ ಆಗಿರುವುದಾದರೆ ಬುದ್ಧ, ಬಸವ, ಗಾಂಧಿ ಮಾಡಿದ ಕ್ರಾಂತಿಗಳು ಎಷ್ಟು ಮತ್ತು ಹೇಗೆ ಸಫಲ ಎಂದು ಕೇಳಬೇಕಾಗುತ್ತದೆ. ಹಾಗೆ ನೋಡಿದರೆ ಎಲ್ಲ ಕ್ರಾಂತಿಗಳೂ ಈ ಅರ್ಥದಲ್ಲಿ ಅಪೂರ್ಣ ಕ್ರಾಂತಿಗಳೇ—ಅವುಗಳ ಅಪೂರ್ಣತೆಯೇ ನಮ್ಮನ್ನು ಇಂದಿಗೂ ಕೆಣಕುತ್ತಾ ತಮ್ಮನ್ನು ಪ್ರಸ್ತುತಗೊಳಿಸಿಕೊಳ್ಳುತ್ತಿರುವುದು. ಹೀಗಾಗಿ, ಜೆ.ಪಿ.ಯನ್ನು ಅವರೆಲ್ಲ ಶಕ್ತಿ-ದೌರ್ಬಲ್ಯಗಳ ಜೊತೆಗೇ ನಾವು ನಮ್ಮ ಚರಿತ್ರೆಯ ಒಂದು ಭಾಗವನ್ನಾಗಿ ಮಾಡಿಕೊಳ್ಳಬೇಕಾಗಿದೆ. ಇದು ಇನ್ನಷ್ಟು ವಿಷದವಾಗಲೆಂದೇ, ಅವರು ಇನ್ನೊಬ್ಬರ ಒತ್ತಾಯದಿಂದಾಗಿ ತಮ್ಮ ಕೆಲಸದ ಪೂರ್ಣತೆಯ ಬಗೆಗೆ ಆಡಿರುವ ಮಾತುಗಳನ್ನು ಒಳಗೊಂಡ ಒಂದು ಸಣ್ಣ ಸಂದರ್ಶನವನ್ನು (ಸಂದರ್ಶಕರು, ಜೆ.ಪಿ. ಅವರ ಗೆಳೆಯ ಹಾಗೂ ಸಮಾಜವಾದಿ ಚಿಂತಕ ಭೋಲಾ ಚಟರ್ಜಿ) ಅನುಬಂಧ (-ಳ)ದಲ್ಲಿ ಸೇರಿಸಲಾಗಿದೆ. ಈ ಸಂದರ್ಶನದಲ್ಲಿ ಜೆ.ಪಿ. ತಮ್ಮ ಪತ್ನಿಯ ಬಗೆಗೂ ತಮ್ಮ ಅನ್ನಿಸಿಕೆಗಳನ್ನು ತಿಳಿಸಿದ್ದಾರೆ. ಇದು ಜೆ.ಪಿ.ಯವರ ಪತ್ನಿ ಪ್ರಭಾವತಿಯವರ ಬಗೆಗೆ—ಮತ್ತೆ, ಈ ಪುಸ್ತಕದ ಬರವಣಿಗೆಯ ವಿನ್ಯಾಸದ ಕಾರಣದಿಂದಲೇ—ಹೆಚ್ಚಿನ ವಿವರಗಳು ಇರದೇ ಹೋಗಿರುವ ವಿಷಾದಪೂರ್ಣ ಕೊರತೆಯನ್ನು, ಭಾವನಾತ್ಮಕ ಅರ್ಥದಲ್ಲಾದರೂ ತುಂಬಿವೆ ಎಂದು ನಾನು ಭಾವಿಸುತ್ತೇನೆ.

ಈ ಪುಸ್ತಕದ ಕಾಲವ್ಯಾಪ್ತಿ ವಿಶಾಲವಾದುದಷ್ಟೇ ಅಲ್ಲ – ಭಾರತದ ಆಧುನಿಕ ಚರಿತ್ರೆಯ ಬಹು ಕ್ರಿಯಾಶೀಲ ಘಟ್ಟವನ್ನೊಳಗೊಂಡಿರುವಂಥದು. ಜೆ.ಪಿ. ಜೀವನಚಿತ್ರ ಕಟ್ಟುವುದರ ಭಾಗವಾಗಿಯೇ ಇಲ್ಲಿ ಸ್ವಾತಂತ್ರ್ಯ ಹೋರಾಟದ ಚರಿತ್ರೆ, ಸಮಾಜವಾದಿ ಚಳುವಳಿಯ ಚರಿತ್ರೆ, ಹಾಗೂ ಸ್ವಾತಂತ್ರ್ಯೋತ್ತರ ಭಾರತದ ಮೊದಲ ಮೂರು ದಶಕಗಳ ರಾಜಕೀಯ ಚರಿತ್ರೆ ಅನುಷಂಗಿಕವಾಗಿ ಮೂಡಿಬಂದಿವೆ. ಇವೆಲ್ಲವೂ ಒಂದರೊಳಗೊಂದು ಹಾಸುಹೊಕ್ಕಾಗಿರುವುದರಿಂದ, ನಿರೂಪಣೆಯಲ್ಲಿ ಅಲ್ಲಲ್ಲಿ ಕಾಲಾನುಕ್ರಮಣಿಕೆ ವ್ಯತ್ಯಸ್ತಗೊಂಡಿರಬಹುದು. ಜೊತೆಗೆ ೭೭ರ ನಂತರದ ಜೆ.ಪಿ. ಜೀವನ ಕುರಿತ ಸಾಹಿತ್ಯ ಇಲ್ಲವೇ ಇಲ್ಲ ಎನ್ನುವಷ್ಟು ಅಲಭ್ಯವಾಗಿರುವುದರಿಂದ, ಲಭ್ಯ ಪತ್ರಿಕಾ ವರದಿಗಳು ಹಾಗೂ ಬಿಡಿ ಲೇಖನಗಳಲ್ಲಿ ದೊರೆಯುವ ಸಣ್ಣ ಪುಟ್ಟ ವಿವರಗಳನ್ನಷ್ಟೇ ಆಧರಿಸಿ ಪುಸ್ತಕದ ಕೊನೆಯ ಪುಟಗಳನ್ನು ಬರೆದಿದ್ದೇನೆ. ಈ ಇಡೀ ಪುಸ್ತಕಕ್ಕೆ ಮುಖ್ಯವಾಗಿ ಆಧಾರವಾಗಿರುವುದು ಅಲನ್ ಮತ್ತು ವೆಂಡಿ ಸ್ಕಾರ್ಫ್, ಡಾ. ಲಕ್ಷ್ಮೀನಾರಾಯಣಲಾಲ್ ಹಾಗೂ ಮೀನೂ ಮಸಾನಿ ಅವರು ಜೆ.ಪಿ. ಜೀವನ, ಆದರ್ಶ ಮತ್ತು ಹೋರಾಟಗಳ ಬಗ್ಗೆ ಬರೆದಿರುವ ಪುಸ್ತಕಗಳು. ಈ ಪುಸ್ತಕಗಳನ್ನಲ್ಲದೆ, ಪುಸ್ತಕದ ಕೊನೆಯಲ್ಲಿ ಗ್ರಂಥ ಋಣ ಶೀರ್ಷಿಕೆಯಡಿ ನಮೂದಿಸಿರುವ ಬಹಳಷ್ಟು ಪುಸ್ತಕಗಳನ್ನು ನನಗೆ ಒದಗಿಸುವಲ್ಲಿ ನೆರವಾದ ಗೆಳೆಯ, ಶಾಸಕ ವೈ. ಮಹೇಶ್ ಅವರ ಮೂಲಕ ಪರಿಚಯವಾದ ಮೈಸೂರು ವಿಶ್ವವಿದ್ಯಾಲಯದಲ್ಲಿ ಉಪ ಗ್ರಂಥಾಲಯಾಧಿಕಾರಿಯಾಗಿರುವ ಡಾ. ಸಿ.ಪಿ. ರಾಮಶೇಷ್ ಹಾಗೂ ಸೋದರರಾದ ಡಿ.ವಿ. ರಾಜಶೇಖರ ಮತ್ತು ವೈ. ರಾಜು ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಹಾಗೂ ಈ ಪುಸ್ತಕದ ಬರವಣಿಗೆಯನ್ನು ಸಕಾಲದಲ್ಲಿ ಪೂರ್ಣಗೊಳಿಸುವಲ್ಲಿನ ನನ್ನ ಗಡಿಬಿಡಿ ವರ್ತನೆಯನ್ನು ಸಹಿಸಿಕೊಂಡು ಸಹಕರಿಸಿದ ಪತ್ನಿ ಸವಿತಾಗೂ ಇಲ್ಲಿ ನನ್ನ ನೆನಕೆಗಳು ಸಲ್ಲುತ್ತವೆ. ಅಲ್ಲದೆ, ೮೦ರ ದಶಕದಲ್ಲಿ ಈ ಪುಸ್ತಕದ ಅಪೂರ್ಣ ಹಸ್ತಪ್ರತಿಯನ್ನೇ ತಮ್ಮ 'ಮುಂಗಾರು' ದೈನಿಕದಲ್ಲಿ ಧಾರಾವಾಹಿಯಾಗಿ ಅಭಿಮಾನದಿಂದ ಪ್ರಕಟಿಸಿದ ವಿ. ರಘುರಾಮ ಶೆಟ್ಟರನ್ನೂ, ಇದಕ್ಕೆ ಕಾರಣರಾದ ಪತ್ರಕರ್ತ ಮಿತ್ರ ವಿಜು ಪೂಣಚ್ಚ ಅವರನ್ನೂ ನಾನಿಲ್ಲಿ ನೆನೆಯದಿರಲಾರೆ.

ನಾನು ಈ ಪುಸ್ತಕದ ಪ್ರಕಟಣೆಯ ಪ್ರಸ್ತಾಪವನ್ನಿಟ್ಟಕೂಡಲೇ 'ಜೆ.ಪಿ. ಬಗ್ಗೆ, ಅದೂ ನೀವು ಬರೆದಿರುವುದಾದರೆ ನಾನು ನಿರಾಕರಿಸುವುದಾದರೂ ಹೇಗೆ?' ಎಂಬ ಪ್ರೀತಿ–ಸದಭಿಮಾನಗಳಿಂದ ಬಳ್ಳಾರಿಯ ಲೋಹಿಯಾ ಪ್ರಕಾಶನದ ಸಿ. ಚೆನ್ನಬಸವಣ್ಣ ಇದನ್ನು ಪ್ರಕಟಿಸುತ್ತಿದ್ದಾರೆ. ಅತ್ಯಲ್ಪ ಕಾಲದಲ್ಲೇ ಆರ್. ಎಸ್. ಶ್ರೀಧರ್ ದಂಪತಿಗಳು ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿಕೊಟ್ಟಿದ್ದಾರೆ. ಸುಧಾಕರ ದರ್ಬೆ ಪುಸ್ತಕಕ್ಕೆ ಸೂಕ್ತವಾದ ರಕ್ಷಾಕವಚವನ್ನು ವಿನ್ಯಾಸ ಮಾಡಿದ್ದಾರೆ. ವಿಶ್ವಾಸ್ ಪ್ರಿಂಟ್ಸ್ ಸಕಾಲದಲ್ಲಿ ಮುದ್ರಿಸಿ ಪುಸ್ತಕವನ್ನು ಸಿದ್ಧಮಾಡಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ಪ್ರೀತಿ ಪೂರ್ವಕ ವಂದನೆಗಳು ಸಲ್ಲುತ್ತವೆ.

೩೦, ಸೆಪ್ಟೆಂಬರ್, ೨೦೦೩ — ಡಿ.ಎಸ್. ನಾಗಭೂಷಣ

ಮೈಸೂರು

ಪರಿವಿಡಿ

೧. ಬಿಹಾರದ ಬಾಲಕ : ಗಾಂಧಿ ದರ್ಶನ

ಸಿತಾಬ್ದಿಯರಾ, ಬಿಹಾರ ಮತ್ತು ಉತ್ತರ ಪ್ರದೇಶಗಳ ಗಡಿಯಲ್ಲಿರುವ ಒಂದು ಸಣ್ಣ ಹಳ್ಳಿ. ಪಾಟ್ನಾ ನಗರ ಇಲ್ಲಿಗೆ ಸುಮಾರು ೫೦ ಮೈಲಿಗಳು. ಹಳ್ಳಿಯ ಒಂದು ಪಕ್ಕದಲ್ಲಿ ವರ್ಷದುದ್ದಕ್ಕೂ ಜೀವ ತುಂಬಿಕೊಂಡಿರುವ ಗಂಗಾನದಿ ಹರಿಯುತ್ತದೆ. ಹಳ್ಳಿಯ ಮತ್ತೊಂದು ಪಕ್ಕದಿಂದ ಸರಜೂ ನದಿ ಹರಿದು ಬಂದು ಗಂಗಾನದಿಯನ್ನು ಸೇರಿಕೊಳ್ಳುತ್ತದೆ. ಮಳೆಗಾಲ ಬಂತೆಂದರೆ ಹಳ್ಳಿ ಇಡಿಯಾಗಿ ನೀರಿನಿಂದ ಸುತ್ತುವರಿಯಲ್ಪಡುತ್ತದೆ. ಗಂಗಾ-ಸರಜೂ ನದಿಗಳ ನೀರು ಹಳ್ಳಿಗರ ಮಣ್ಣಿನ ಗೋಡೆಗಳಿಗೆ ರಾಚಿ ಛಾವಣಿಗಳನ್ನು ಕೆಳಗೆಳೆಯುತ್ತದೆ. ಇದು ಪ್ರತಿ ಮಳೆಗಾಲದಲ್ಲಿಯೂ ನಡೆಯುವ ವಿದ್ಯಮಾನ. ಕಾಲಕ್ರಮೇಣ ಈ ವಿದ್ಯಮಾನ ಹಳ್ಳಿಯ ವಸತಿ ವಿಘಟನೆಗೆ ಕಾರಣವಾಗಿ, ಸಾಮುದಾಯಿಕ ಸಂಬಂಧಗಳು ಕಡಿದುಹೋಗಿ ಮನೆಗಳು ದೂರ ದೂರವಾಗಿವೆ. ಕೆಲವೇ ಮನೆಗಳ ಈ ಒಂದು ಪುಟ್ಟ ಹಳ್ಳಿ ಹಲವಾರು ಮೈಲಿಗಳ ಉದ್ದಗಲಕ್ಕೂ ಚದುರಿಹೋಗಿದೆ.

ಹತ್ತೊಂಬತ್ತನೇ ಶತಮಾನದ ಕೊನೆಯ ಹೊತ್ತಿಗೆ ಈ ಹಳ್ಳಿ, ದೂಮರಾಂವ್ ಮಹಾರಾಜನ ಒಡೆತನಕ್ಕೆ ಸೇರಿತ್ತು. ಸಿತಾಬ್ದಿಯರಾದ ಕುಟುಂಬಗಳು ಮಹಾರಾಜನ ಗೇಣಿದಾರರಾಗಿ ಒಕ್ಕಲುತನದಲ್ಲಿ ತೊಡಗಿದ್ದವು. ಮಹಾರಾಜ, ಈ ಒಕ್ಕಲು ಮಕ್ಕಳಿಂದ ಗೇಣಿ ಪಡೆದು ಬ್ರಿಟಿಷ್ ಸರ್ಕಾರಕ್ಕೆ ತನ್ನ ಕಪ್ಪವನ್ನು ಒಪ್ಪಿಸುತ್ತಿದ್ದ. ಮಹಾರಾಜನಿಂದ ಭೂಮಿ ಪಡೆದೂ ಸಹ ನೇರವಾಗಿ ಒಕ್ಕಲುತನದಲ್ಲಿ ತೊಡಗದ ಕುಟುಂಬಗಳೂ ಹಳ್ಳಿಯಲ್ಲಿದ್ದವು. ಅಂತಹ ಕುಟುಂಬಗಳಲ್ಲಿ ಹರ್ಷುಬಾಬು ಎಂಬುವವರ ಕುಟುಂಬವೂ ಒಂದು. ಬ್ರಾಹ್ಮಣೇತರ ಕಾಯಸ್ಥ ಜಾತಿಗೆ ಸೇರಿದ ಹರ್ಷು ದಯಾಳ್ ಬಾಬು ತಮ್ಮ ಪಾಲಿನ ನೆಲವನ್ನು ಭೂಮಿ ಇಲ್ಲದ ನಿರ್ಗತಿಕರಿಗೆ ಗೇಣಿಯಾಗಿ ಕೊಟ್ಟಿದ್ದರು.

ಹರ್ಷು ದಯಾಳ್ ಬಾಬು, ಶೋಣ್ ನದಿಗೆ ತೋಡುತ್ತಿದ್ದ ಕಾಲುವೆಯೊಂದಕ್ಕೆ ಸಂಬಂಧಿಸಿದ ಕಾರ್ಯದಲ್ಲಿ ಸರ್ಕಾರಿ ನೌಕರರಾಗಿ ಕೆಲಸ ಮಾಡುತ್ತಿದ್ದರು. ಹರ್ಷು ದಯಾಳರ ಹೆಂಡತಿ ಫೂಲ್‌ರಾಣಿ ದೇವಿ. ಕೆಳಮಧ್ಯಮ ವರ್ಗಕ್ಕೆ ಸೇರಿದ ಈ ದಂಪತಿಗಳ ನಾಲ್ಕನೆಯ ಮಗನಾಗಿ ಹುಟ್ಟಿದಾತ ಜಯಪ್ರಕಾಶ್ ನಾರಾಯಣ್. ೧೯೦೨ರ ಅಕ್ಟೋಬರ್ ೧೧ನೇ ದಿನಾಂಕದ ಮುಂಜಾವಿನಲ್ಲಿ ಈ ಜಗತ್ತಿಗೆ ಕಾಲಿಟ್ಟ ಜಯಪ್ರಕಾಶ್ ಮೊಟ್ಟ ಮೊದಲ ಮನುಷ್ಯ ಸ್ಪರ್ಶ ಹೊಂದಿದ್ದು, ಅಸ್ಪೃಶ್ಯ ಜಾತಿಗೆ ಸೇರಿದ ಸೂಲಗಿತ್ತಿಯ ತೋಳುಗಳಲ್ಲಿ.

ಮುದ್ದಿನ ಮಗ

ಜಯಪ್ರಕಾಶ್ ಕೆಲವು ವಿಶೇಷ ಕಾರಣಗಳಿಂದಾಗಿ ತಾಯಿ ತಂದೆಗಳ ಮುದ್ದಿನ ಮಗನಾಗಿ ಬೆಳೆದನು. ಅದರಲ್ಲೂ ತಾಯಿಯ ಆತ್ಮೀಯತೆಯೇ ಹೆಚ್ಚು. ಹರ್ಷುದಯಾಳರ ಮೊದಲನೆಯ ಮಗ ಹರಿಪ್ರಕಾಶ್, ಪ್ರೌಢಶಾಲೆಯ ವಿದ್ಯಾರ್ಥಿಯಾಗಿದ್ದಾಗ ತನ್ನ ಹದಿಮೂರನೆಯ ವಯಸ್ಸಿನಲ್ಲಿ, ಕಾಲರಾಕ್ಕೆ ತುತ್ತಾಗಿ ಮೃತನಾದ. ಆದರೆ ಇದು ತಾಯಿ ತಂದೆಗಳಿಗೆ ಕೇವಲ ಮೊದಲನೆಯ ದುರಂತವಾಗಿತ್ತಷ್ಟೆ. ಎರಡನೆಯ ದುರಂತ, ಜಯಪ್ರಕಾಶರ ಅಕ್ಕ ಚಂದ್ರಭಾನು ಪ್ಲೇಗಿಗೆ ತುತ್ತಾದುದರಲ್ಲಿ ಸಂಭವಿಸಿತು. ತಾಯಿ ಫೂಲ್‌ರಾಣಿ ದೇವಿ, ಉಳಿದಿದ್ದ ಒಬ್ಬಳೇ ಒಬ್ಬಳು ಮಗಳು ಚಂದ್ರಮುಖಿ ಹಾಗೂ ಒಬ್ಬನೆ ಒಬ್ಬ ಮಗ ಜಯಪ್ರಕಾಶ್ ನಾರಾಯಣ್ ಬಗ್ಗೆ ಅತ್ಯಂತ ಹೆಚ್ಚು ಎಚ್ಚರಿಕೆ ವಹಿಸಿದರು. ನಂತರ ಚಂದ್ರಕಲಾ ಎಂಬ ಮಗಳು ಮತ್ತು ರಾಜೇಶ್ವರ್ ಪ್ರಸಾದ್ ಎಂಬ ಮಗ ಹುಟ್ಟಿದರೂ ಸಹ ಫೂಲ್‌ರಾಣಿ ದೇವಿ, ಹಿರಿಯ ಮಗ ಜಯಪ್ರಕಾಶ್‌ನನ್ನು ಯಾವಾಗಲೂ ತನ್ನ ಬಳಿಯಲ್ಲಿಯೇ ಇರಿಸಿಕೊಳ್ಳುತ್ತಿದ್ದರು; ಆ ಕಾಲದಲ್ಲಿ ಸಾಮಾನ್ಯವಾಗಿದ್ದ ಕಾಲರಾ, ತಾಯಿಯನ್ನು ತಲ್ಲಣಗೊಳಿಸಿತ್ತು.

ಬಾಲಕ ಜಯಪ್ರಕಾಶನ ಬೇಸರ ನೀಗಲು, ಆತನ ಒಡನಾಟಕ್ಕಾಗಿ ಹರ್ಷುಬಾಬು ಪಾರಿವಾಳ, ಬಾತುಕೋಳಿ, ನಾಯಿಮರಿ, ಮೊಲ ಮುಂತಾದ ಪ್ರಾಣಿಗಳನ್ನು ಹಿಡಿಸಿ ತಂದುಕೊಡುತ್ತಿದ್ದರು. ಜಯಪ್ರಕಾಶ್ ಈ ಎಲ್ಲ ಪ್ರಾಣಿಗಳನ್ನು ಬಹುವಾಗಿ ಪ್ರೀತಿಸುತ್ತಿದ್ದನು. ಸಮವಯಸ್ಕರ ಗೆಳೆತನವಿಲ್ಲದ ಬಾಲಕ ಈ ಪ್ರಾಣಿಗಳಿಗೆ ತಿನಿಸು ತಿನ್ನಿಸುತ್ತಲೋ, ಅವುಗಳ ಆಟಪಾಟಗಳನ್ನು ಕಂಡು ಹಿಗ್ಗುತ್ತಲೋ ಅಥವಾ ಅವುಗಳೊಂದಿಗೆ ಮಾತನಾಡುತ್ತಲೋ ಕಾಲ ಕಳೆಯುತ್ತಿದ್ದನು. ಜಯಪ್ರಕಾಶನ ಪ್ರಾಣಿ ಪ್ರೇಮಕ್ಕೆ ಸಂಬಂಧಿಸಿದಂತೆ ಒಂದು ಸ್ವಾರಸ್ಯಕರ ಘಟನೆ ಇದೆ. ಹರ್ಷುಬಾಬು ಸಾಕಿದ್ದ ಹೆಣ್ಣು ಕುದುರೆ ಒಮ್ಮೆ ಮರಿ ಹಾಕಿತು. ಜಯಪ್ರಕಾಶ್ ಆ ಮರಿಯ ಮೈದಡವಬೇಕೆಂಬ ಆಸೆಯಿಂದ ಯಾರಿಗೂ ಕಾಣದಂತೆ, ತಾಯಿ ಕುದುರೆ ಮತ್ತು ಮರಿಯನ್ನು ಕಟ್ಟಿ ಹಾಕಿದ್ದ ಸ್ಥಳಕ್ಕೆ ಹೋದನು. ತಾಯಿ ಕುದುರೆ ಆತಂಕದಿಂದ ಜಯಪ್ರಕಾಶನಿಗೆ ತನ್ನ ಗೊರಸುಗಳಿಂದ ಝಾಡಿಸಿದಾಗ, ರಕ್ತ ಸುರಿಸಿಕೊಂಡು ಅರಚುತ್ತಿದ್ದ ಆತನನ್ನು, ಅಲ್ಲಿಂದ ಎತ್ತಿ ಸಾಗಿಸಿಕೊಂಡು ಹೋಗಬೇಕಾಯಿತು.

ತುಂಟ ಜಯಪ್ರಕಾಶ್ ತಂದೆಯ ಕೋಪಕ್ಕೆ ಒಳಗಾದದ್ದು ಒಮ್ಮೆ ಮಾತ್ರ. ಜಯಪ್ರಕಾಶ್ ತಾನೇ ಮಾಡಿಕೊಂಡ ಬಿದಿರಿನ ಬಿಲ್ಲು ಹಾಗೂ ಬಾಣಗಳೊಡನೆ ಆಟವಾಡುತ್ತಿದ್ದಾಗ, ಆತ ಬಿಟ್ಟ ಬಾಣ ಪಕ್ಕದ ಮನೆಯ ಆವರಣ ಪ್ರವೇಶಿಸಿ ಹೆಂಗಸೊಬ್ಬಳ ಮುಖಕ್ಕೆ ಬಡಿಯಿತು. ಬಾಣವನ್ನು ಚುಚ್ಚಿಸಿಕೊಂಡ ಹೆಂಗಸಿನ ಮಾವ ಹರ್ಷುಬಾಬು ಅವರ ಸಹೋದ್ಯೋಗಿ. ಪಕ್ಕದ ಮನೆಯಿಂದ ದೂರು ಬಂದೊಡನೆ, ಜಯಪ್ರಕಾಶ್ ತಂದೆಯ ಸಿಟ್ಟಿಗೆ ಬಲಿಯಾಗಬೇಕಾಯಿತು.

ಹರ್ಷುಬಾಬುವಿನ ತಂದೆ, ತಮ್ಮ ಮೊದಲ ಹೆಂಡತಿ ಸತ್ತ ನಂತರ ಎರಡನೇ ಮದುವೆ ಮಾಡಿಕೊಂಡಿದ್ದರು. ಹರ್ಷುಬಾಬುವಿನ ಮಲತಾಯಿ ಜಯಪ್ರಕಾಶನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಜಯಪ್ರಕಾಶನೂ ಕೂಡಾ ಆಕೆಯನ್ನು—ಅಜ್ಜಿಯನ್ನು—ಬಹುವಾಗಿ ಹಚ್ಚಿಕೊಂಡಿದ್ದನು. ಹರ್ಷುಬಾಬು ಕಾಲುವೆ ನಿರ್ಮಾಣ ಕೆಲಸಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ದೀರ್ಘಕಾಲದವರೆಗೆ ಊರು ಬಿಡಬೇಕಾದ್ದುದರಿಂದ ಜಯಪ್ರಕಾಶನನ್ನು ತಮ್ಮ ಮಲತಾಯಿಯ ವಶಕ್ಕೊಪ್ಪಿಸಿ ಬೇರೆಡೆಗೆ ಹೋಗುವುದು ಸಾಮಾನ್ಯವಾಗಿತ್ತು.

ಅಂತರ್ಮುಖಿಯಾದ ಬಾಲಕ

ಜಯಪ್ರಕಾಶರ ಮನಸ್ಸಿನಲ್ಲಿ ಕೊನೆವರೆಗೂ ಅಚ್ಚಳಿಯದೇ ಉಳಿದಿದ್ದು, ಅವರು ಬಾಲ್ಯದಲ್ಲಿ ಕಾಣುತ್ತಿದ್ದ ಜಲ ಪ್ರಳಯಗಳು. ಮಳೆಗಾಲ ಬಂತೆಂದರೆ ಹಳ್ಳಿ ಒಂಟಿ ದ್ವೀಪವಾಗಿಬಿಡುತ್ತಿತ್ತು. ಬಾಲಕ ಜಯಪ್ರಕಾಶನ ಕಣ್ಮುಂದೆಯೇ ಆತನ ಹಿರಿಯರು, ಪ್ರವಾಹದಿಂದ ಕುಸಿದ ಮನೆಯನ್ನು ನಾಲ್ಕು ಬಾರಿ ಮತ್ತೆ ಮತ್ತೆ ಕಟ್ಟಿಸಬೇಕಾಯಿತು. (ಈಗಲೂ ಕೂಡಾ ಈ ಹಳ್ಳಿಗೆ ಆನೆಯ ಮೇಲೆ ಕೂತು ಹೋಗಬೇಕಂತೆ!) ತಂದೆ-ತಾಯಿ ಅಕ್ಕ-ತಮ್ಮ ಮತ್ತು ತಂಗಿಯರಿಂದ ದೂರಾದ ಜಯಪ್ರಕಾಶನಿಗೆ ತನ್ನ ಮನೆಯ ಸುತ್ತ ಆವರಿಸುತ್ತಿದ್ದ ಅಂಕು ಡೊಂಕಾದ ತೊರೆಗಳು, ಪಿಚಗುಟ್ಟುವ ಕೆಸರು, ತೆಪ್ಪಗಳ ಮೇಲೆ ನೀರನ್ನು ಹಾಯುವ ಜನ, ತೇಲುವ ದಿಮ್ಮಿಯ ಮೇಲೆ ಮೆಲ್ಲಗೆ ನಡೆದು ಬಂದು ಮುರುಕು ದೋಣಿಗೆ ಇಳಿಯುವ, ಧೋತರವನ್ನು ಎತ್ತಿಕಟ್ಟಿದ ಬಡಕಲು ಅಂಬಿಗ, ಹಳ್ಳಿಗರನ್ನು ಹೊತ್ತು ಘನ ಗಂಭೀರವಾಗಿ ಬರುವ ದೊಡ್ಡ ಸೊಂಡಿಲಿನ ಆನೆಗಳು ಮತ್ತು ಹಳ್ಳಿಗೆ ಹುಚ್ಚು ಹುಚ್ಚಾಗಿ ನುಗ್ಗಿ ಬೆಳೆಗಳನ್ನು ಹಾಳುಮಾಡುವ, ದೂರದಲ್ಲಿ ನಿಂತು ವಿಚಿತ್ರವಾಗಿ ನೋಡುವ ಕಡವೆಗಳು, ಹುಲ್ಲೆಗಳು—ಈ ದೃಶ್ಯಗಳು ಹತ್ತಿರವಾದವು. ಅಂತರ್ಮುಖಿಯಾಗ ತೊಡಗಿದ್ದ ಜಯಪ್ರಕಾಶ್ ಸ್ವಲ್ಪ ಕಾಲ ತನ್ನ ಅಕ್ಕ ಹಾಗೂ ತಮ್ಮ ತಂಗಿಯರ ಹೆಸರನ್ನೂ ಮರೆತು ಬಿಟ್ಟಿದ್ದನು.

ಜಯಪ್ರಕಾಶನ ವಿದ್ಯಾಭ್ಯಾಸ ಆದಿತ್ಯ ಮಿಶ್ರ ಎಂಬ ಮನೆ ಮಾಸ್ತರ ಬಳಿ ಆರಂಭವಾಯಿತು. ಅಕ್ಷರಾಭ್ಯಾಸ, ಮಗ್ಗಿ ಕಲಿಕೆ ಮುಂತಾದ ಶಿಶುಪಾಠಗಳು ಮುಗಿದ ನಂತರ, ಆರನೆಯ ವಯಸ್ಸಿನಲ್ಲಿ ಬಾಲಕನನ್ನು ಹಳ್ಳಿಯ ಖಾಸಗಿ ಪ್ರಾಥಮಿಕ ಶಾಲೆಗೆ (ಆಗ ಸರ್ಕಾರಿ ಶಾಲೆ ಇರಲಿಲ್ಲ) ಸೇರಿಸಲಾಯಿತು. ಒಂಬತ್ತನೆಯ ವಯಸ್ಸಿನಲ್ಲಿ ಜಯಪ್ರಕಾಶನನ್ನು ಆತನ ತಾತ ಅಜ್ಜಿಯರು ಎತ್ತಿನ ಗಾಡಿಯೊಂದರಲ್ಲಿ ಕುಳ್ಳಿರಿಸಿಕೊಂಡು ಪಾಟ್ನಾ ನಗರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವನನ್ನು ಅಕ್ಕನ ಮನೆಯಲ್ಲಿರಿಸಿ ಏಳನೇ ತರಗತಿಗೆ ದಾಖಲು ಮಾಡಿದರು. ಹುಡುಗ ಬೆರಗು ಗಣ್ಣುಗಳಿಂದ, ಮೊದಲಬಾರಿಗೆ ನಗರವನ್ನು ನೋಡಲಾರಂಭಿಸಿದ್ದ.

ಗರಿಗೆದರತೊಡಗಿದ ಕಾಂಗ್ರೆಸ್

೧೮೮೫ರಲ್ಲಿ ಕಾಂಗ್ರೆಸ್ ಸ್ಥಾಪಿತವಾದ ನಂತರ ಅದು ಯಾವುದೇ ಸಂಘಟಿತ ಉದ್ದೇಶ ಅಥವಾ ಕಾರ್ಯಕ್ರಮವಿಲ್ಲದೆಯೇ, ಕೆಲವು ಸ್ಥೂಲ ಮತ್ತು ದೂರಗಾಮಿ ಪರಿಣಾಮ ಉಂಟುಮಾಡದಂತಹ ವಿಜ್ಞಾಪನೆಗಳ ಸಲ್ಲಿಕೆ ಮುಂತಾದ ಕಾರ್ಯಗಳಲ್ಲಿ ತೊಡಗಿ ಒಂದು ರೀತಿಯ ವಶೀಲಿಬಾಜಿ ಚಟುವಟಿಕೆಯ ವೇದಿಕೆಯಾಗಿ ಮುಂದುವರಿದಿತ್ತು. ಆದರೆ ೧೯ನೇ ಶತಮಾನದ ಉದಯದೊಂದಿಗೆ, ಜಗತ್ತಿನಾದ್ಯಂತ ಪ್ರಜಾಪ್ರಭುತ್ವದ ಕಲ್ಪನೆ ಸಂಘಟಿತವಾಗತೊಡಗಿತ್ತು. ಈ ಕಲ್ಪನೆಯನ್ನು ಕುರಿತು ಸುದ್ದಿಗಳು ದೂರದೂರದ ದೇಶಗಳಿಂದ ಬರತೊಡಗಿದಾಗ, ಭಾರತದಲ್ಲೂ 'ರಾಷ್ಟ್ರೀಯತೆ'ಯ ಕಲ್ಪನೆ ಉದ್ದೀಪ್ತವಾಯಿತು. ಬ್ರಿಟಿಷ್ ವೈಸ್‌ರಾಯ್‌ಗಳ ಕಾಯಿದೆ ಕಾನೂನುಗಳು ಒತ್ತಾಯಿಸುತ್ತಿದ್ದ ಗುಲಾಮಗಿರಿಯನ್ನು ಗುರುತಿಸುವಷ್ಟು ಸೂಕ್ಷ್ಮ ವಿವೇಕದ ಹಾಗೂ ಭಾವನೆಗಳ ಜನ ಹೆಚ್ಚೆಚ್ಚು ಸಂಖ್ಯೆಯಲ್ಲಿ ಈ ರಾಷ್ಟ್ರೀಯ ವೇದಿಕೆಯನ್ನು ಹತ್ತತೊಡಗಿದರು. ಗೋಖಲೆಯವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ತನ್ನ ರೂಪುರೇಷೆಗಳನ್ನು ಸ್ಪಷ್ಟಗೊಳಿಸಿಕೊಳ್ಳಲಾರಂಭಿಸಿತು. ಬಾಲಗಂಗಾಧರ ತಿಲಕರು "ಸ್ವರಾಜ್ಯ ನನ್ನ ಆಜನ್ಮ ಸಿದ್ಧಹಕ್ಕು; ಅದನ್ನು ನಾನು ಪಡೆದೇ ತೀರುತ್ತೇನೆ" ಎಂದು ಘೋಷಿಸಿದಾಗ, ಆವರೆಗೆ ಕೇವಲ ಧರ್ಮ, ಜನಾಂಗಗಳ ಆಧಾರದ ಮೇಲಷ್ಟೇ ಬ್ರಿಟಿಷ್ ವಿರೋಧಿ ಭಾವನೆಗಳನ್ನು ಬೆಳೆಸಿಕೊಂಡಿದ್ದ ದೇಶ; ಮೊಟ್ಟಮೊದಲ ಬಾರಿಗೆ ಸ್ವರಾಜ್ಯ, ಅಂದರೆ ರಾಷ್ಟ್ರೀಯ ಸ್ವಾತಂತ್ರ್ಯದ ಪೂರ್ಣ ಅರಿವಿಗೆ ಎಚ್ಚೆತ್ತುಕೊಂಡಿತು. ಲಾಲಾ ಲಜಪತ್ ರಾಯ್, ಅರವಿಂದ ಘೋಷ್ ಮುಂತಾದ ನಾಯಕರು ವಂದೇಮಾತರಂ, ಯುಗಾಂತರ, ಕೇಸರಿ ಮುಂತಾದ ಪತ್ರಿಕೆಗಳ ಮೂಲಕ ಬ್ರಿಟಿಷ್ ವಿರೋಧಿ ಸಾರ್ವಜನಿಕಾಭಿಪ್ರಾಯವನ್ನು ಕ್ರೋಢೀಕರಿಸ ತೊಡಗಿದ್ದರು. ಕಾಂಗ್ರೆಸ್ ಸಭೆಗಳಿಗೆ ಜನ ತಾವಾಗಿಯೇ ಬರತೊಡಗಿದ್ದರು.

ಇಂತಹ ಸಂಕ್ರಮಣ ರಾಜಕೀಯ ಸನ್ನಿವೇಶದಲ್ಲಿ ಜಯಪ್ರಕಾಶ್ ತನ್ನ ಓದನ್ನು ಮುಂದುವರಿಸಿದ್ದನು. ತಂದೆ ತಾಯಿಗಳ ಸಂಪರ್ಕವಿಲ್ಲದ ಬಾಲಕ ಪುಸ್ತಕಗಳಲ್ಲಿ ಮುಳುಗಿದನು. ಆತನಿಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡುವ ಜಿಲ್ಲಾಮಟ್ಟದ ವಿದ್ಯಾರ್ಥಿವೇತನ ದೊರೆಯಿತು. ಹದಿನಾರನೆಯ ವಯಸ್ಸಿಗೆ ಆತ ತನ್ನ ಶಾಲಾ ಶಿಕ್ಷಣದ ಕೊನೆಯ ತರಗತಿಯನ್ನು ತಲುಪಿದ್ದನು. ಆ ಹೊತ್ತಿಗೆ ಪಕ್ಕದ ಮುಜಾಫರ್‌ಪುರದಲ್ಲಿ ಖುದಿರಾಮ್ ಬೋಸ್ ಬಾಂಬ್ ಸಿಡಿಸಿ, ಬಿಹಾರದಲ್ಲಿ ಬ್ರಿಟಿಷ್ ವಿರೋಧಿ ಬಂಡಾಯದ ಬೆಂಕಿ ಹೊತ್ತಿಸಿದ್ದ.

ಆದರ್ಶಗಳನ್ನು ಆಹ್ವಾನಿಸುವ ಹದಿಹರೆಯಕ್ಕೆ ಕಾಲಿರಿಸುತ್ತಿದ್ದ ಜಯಪ್ರಕಾಶ್, ದಿನೇ ದಿನೇ ಬಿಸಿಯೇರುತ್ತಿದ್ದ ಆಂದೋಲನದಿಂದ ಪ್ರಭಾವಿತನಾಗದಿರಲು ಸಾಧ್ಯವೇ ಇರಲಿಲ್ಲ. ಬಂಗಾಳದ ರಾಷ್ಟ್ರೀಯ ನಾಯಕರ ಚಳುವಳಿಯ ಪರಿಣಾಮವಾಗಿ ಜಯಪ್ರಕಾಶ್ ಹಿಂದೂ ಶಾಸ್ತ್ರಗಳ, ವಿಶೇಷತಃ ಭಗವದ್ಗೀತೆಯ ಅಭ್ಯಾಸ ಆರಂಭಿಸಿದ. 'ಬ್ರಿಟಿಷರು ನಿನ್ನನ್ನು ಹೊಡೆಯಬಹುದು, ಕೊಲ್ಲಬಹುದು, ಆದರೆ ನಿನ್ನ ಛಲ, ನಿನ್ನ ಹಿಂದೂ ಆತ್ಮ ಅವಿನಾಶಿ' ಎಂಬ ಧಾರ್ಮಿಕ ಪಾಠ ಸಹಜವಾಗಿ ಬಾಲಕನ ಮೈನವಿರೇಳಿಸಿತು. ಜಯಪ್ರಕಾಶ್ ವಿದೇಶೀ

ವಸ್ತ್ರಗಳನ್ನು ಕೈಬಿಡತೊಡಗಿದ. ಖಾದಿ ಕುರ್ತಾ-ಧೋತಿಗಳನ್ನು ತೊಡಲಾರಂಭಿಸಿದ. ಜಯಪ್ರಕಾಶ್ ಕಾಲೇಜಿಗೆ ದಾಖಲಾಗುವ ಹೊತ್ತಿಗೆ ಸಂಪೂರ್ಣ ಬದಲಾಗಿದ್ದ.

ಗಾಂಧೀಜಿಯ ಪ್ರವೇಶ - ಅಸಹಕಾರ ಚಳುವಳಿ ಆರಂಭ

ಅಷ್ಟು ಹೊತ್ತಿಗೆ ಇಂಡಿಯಾದ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ಫೂರ್ತಿ, ನೆಲೆಯೊಂದು ದೊರಕಿತ್ತು. ಮೋಹನದಾಸ ಕರಮಚಂದ ಗಾಂಧಿ ಆ ವೇಳೆಗಾಗಲೇ ಅಹಮದಾಬಾದ್‌ನಲ್ಲಿ 'ಸತ್ಯಾಗ್ರಹ ಆಶ್ರಮ'ವನ್ನು ಸ್ಥಾಪಿಸಿ, ತಮ್ಮ ಮುಂದಿನ ಕಾರ್ಯಾಚರಣೆಗಾಗಿ ಕೇಂದ್ರವೊಂದನ್ನು ನಿರ್ಮಿಸಿಕೊಂಡಿದ್ದರು. ಮುಖ್ಯವಾಗಿ ದಕ್ಷಿಣ ಆಫ್ರಿಕಾದಲ್ಲಿನ ಹೋರಾಟದ ಅನುಭವದಿಂದ ಸ್ಫೂರ್ತಿಗೊಂಡು, ಭಾರತದಲ್ಲಿನ ತಮ್ಮ ಮುಂದಿನ ಆಂದೋಲನಕ್ಕೆ ಪೂರ್ವಭಾವಿಯಾಗಿ ಅವರು ಗೋಖಲೆಯವರೊಂದಿಗೆ ನಿರಂತರವಾಗಿ ಚರ್ಚಿಸಿದ್ದರು. ಈ ಹಿನ್ನೆಲೆಯಲ್ಲಿ ತಾವು ಸಾಗಬೇಕಾದ ಹಾದಿಯ ಬಗ್ಗೆ ಒಂದು ಸ್ಪಷ್ಟ ಚಿತ್ರ ರೂಪಿಸಿಕೊಂಡಿದ್ದ ಗಾಂಧಿ, ದೇಶವನ್ನು ಅರಿಯಲು ವ್ಯಾಪಕ ಪ್ರವಾಸ ಕೈಗೊಂಡಿದ್ದರು. ಮದನ ಮೋಹನ ಮಾಳವೀಯರ ಆಹ್ವಾನವನ್ನು ಸ್ವೀಕರಿಸಿ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಬ್ರಿಟಿಷರ, ಮಹಾರಾಜರ ವಿರುದ್ಧ ಮಾತನಾಡಿದ್ದರು; ಅಲ್ಲಿ ಅನ್ಯಾಯ ಅಸಮಾನತೆಗಳ ವಿರುದ್ಧ ಹೋರಾಟಕ್ಕೆ ಕರೆಕೊಟ್ಟು, ಬನಾರಸ್ ನಗರದಿಂದ ಬಲವಂತವಾಗಿ ಹೊರಹಾಕಲ್ಪಟ್ಟಿದರು. ಚಂಪಾರಣ್‌ಗೆ ಭೇಟಿ ನೀಡಿ ಗೇಣಿ ಮೇಲೆ ನೀಲಿ ಬೆಳೆ ಬೇಸಾಯ ಮಾಡುತ್ತಿದ್ದ ಬಡ ರೈತರ ಪರವಾಗಿ ಅಹಿಂಸಾತ್ಮಕ ಪ್ರತಿಭಟನೆ ಎಂಬ ಹೊಚ್ಚಹೊಸ ರೀತಿಯ ಹೋರಾಟ ರೂಪಿಸಿ, ಸ್ವಾತಂತ್ರ್ಯ ಚಳುವಳಿಗೆ ಹೊಸ ದಿಕ್ಕು ತೋರಿಸಿದ್ದರು.

ರಾಷ್ಟ್ರಮಟ್ಟದಲ್ಲಿ ಗಾಂಧೀಜಿಯ ಮೊಟ್ಟಮೊದಲ ಕಾರ್ಯಾಚರಣೆ ಆರಂಭವಾದದ್ದು, ರೌಲೆಟ್ ಕಾಯಿದೆಯು* ಕಾನೂನಾಗಿ ಜಾರಿಗೆ ಬಂದಾಗ. ಇದರ ವಿರುದ್ಧ ೧೯೧೯ರಲ್ಲಿ ಗಾಂಧೀಜಿ ರಾಷ್ಟ್ರವ್ಯಾಂತ ಹರತಾಳಕ್ಕೆ ಕರೆಕೊಟ್ಟರು. ಆದರೆ ಶಾಂತಿಯುತವಾಗಿ ನಡೆಯ ಬೇಕಾಗಿದ್ದ ಈ ಹರತಾಳ, ಅಮೃತಸರದಲ್ಲಿ ಮೂವರು ಬ್ಯಾಂಕ್ ಅಧಿಕಾರಿಗಳನ್ನು ಕೊಲ್ಲುವ ಮೂಲಕ ಹಿಂಸಾತ್ಮಕ ರೂಪು ತಳೆದಿತ್ತು. ಗಾಂಧೀಜಿ ಹರತಾಳವನ್ನು ಹಿಂತೆಗೆದುಕೊಂಡ ರಾದರೂ, ಜಲಿಯನ್‌ವಾಲಾಬಾಗ್ ನರಹತ್ಯೆಯೊಡನೆ ಬ್ರಿಟಿಷ್ ಸರ್ಕಾರ ಪ್ರತೀಕಾರ ಕೈಗೊಂಡಿತ್ತು. ಕೆಲವೇ ನಿಮಿಷಗಳ ಅಂತರದಲ್ಲಿ ಸುಮಾರು ೪೦೦ ಜನರನ್ನು ಗುಂಡಿಟ್ಟು ಕೊಂದ ಮತ್ತು ಒಂದು ಸಾವಿರಕ್ಕೂ ಹೆಚ್ಚು ಜನರನ್ನು ಗಾಯಗೊಳಿಸಿದ ಈ ಭೀಕರ ನರಹತ್ಯೆ ಇಡೀ ದೇಶದ ಎದೆ ನಡುಗಿಸಿತು; ದೇಶ ಸುದೀರ್ಘ ಹೋರಾಟವೊಂದಕ್ಕೆ ಸಿದ್ಧವಾಯಿತು. ಲಾಲಾಲಜಪತ ರಾಯ್ ನೇತೃತ್ವದಲ್ಲಿ ಕಲ್ಕತ್ತಾದಲ್ಲಿ ನಡೆದ ವಿಶೇಷ ಕಾಂಗ್ರೆಸ್

---

* ಈ ಕಾಯಿದೆ ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುತ್ತಲ್ಲದೆ, ಗುಪ್ತಚರ ದಳದ ಆದೇಶದ ಮೇರೆಗೆ ಯಾರನ್ನು ಬೇಕಾದರೂ ಬಂಧಿಸಲು ಸರ್ಕಾರಕ್ಕೆ ಅವಕಾಶ ನೀಡಿತ್ತು.

ಅಧಿವೇಶನದಲ್ಲಿ ಗಾಂಧೀಜಿ ಮೊದಲಬಾರಿಗೆ ಅಸಹಕಾರ ಚಳುವಳಿಯ ಪ್ರಸ್ತಾಪ ಮಾಡಿದರು.

ಈ ಮಧ್ಯೆ ತುರ್ಕಿಯಲ್ಲಿ ಬ್ರಿಟಿಷರು ಸುಲ್ತಾನನ್ನು ಪದಚ್ಯುತಗೊಳಿಸಿಮದಕ್ಕೆ ಸಂಬಂಧಿಸಿದಂತೆ, ಇಂಡಿಯಾದಲ್ಲಿ ಮುಸ್ಲಿಮರು ಬ್ರಿಟಿಷ್ ಸರ್ಕಾರದ ವಿರುದ್ಧ ತಿರುಗಿಬಿದ್ದರು. ಇದಕ್ಕೆ ಗಾಂಧೀಜಿ ಬೆಂಬಲ ನೀಡಿ ಖಿಲಾಫತ್ ಚಳುವಳಿಗೆ ಕಾರಣರಾಗಿ, ಹಿಂದೂ-ಮುಸ್ಲಿಂ ಐಕ್ಯತೆಯ ಸಂಘಟಕರೂ ಆಗಿದ್ದರು. ಈ ಸಂದರ್ಭದಲ್ಲಿ ನಾಗಪುರದಲ್ಲಿ ನಡೆದ ಅಸಹಕಾರ ಚಳುವಳಿಯ ಠರಾವನ್ನು ಅನುಮೋದಿಸಿದ ಕಾಂಗ್ರೆಸ್ ಅಧಿವೇಶನಕ್ಕೆ ಜನತೆ ನೀಡಿದ ಅಮೋಘ ಪ್ರತಿಕ್ರಿಯೆ, ರಾಷ್ಟ್ರೀಯ ನಾಯಕರ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿತು. ಬ್ರಿಟಿಷ್ ಸರ್ಕಾರದೊಡನೆ ಯಾವುದೇ ರೀತಿಯಲ್ಲಿ ಸಹಕರಿಸದಿರಲು ಜನತೆ ನಿರ್ಧಾರ ಕೈಗೊಂಡರೆ ಇನ್ನೊಂದು ವರ್ಷದಲ್ಲಿ ಇಂಡಿಯಾಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವುದಾಗಿ ಗಾಂಧೀಜಿ ಘೋಷಿಸಿದರು. ನೆಹರೂ ಕುಟುಂಬ ವಕೀಲಿ ವೃತ್ತಿ, ಆಸ್ತಿ-ವ್ಯವಹಾರವೆಲ್ಲವನ್ನೂ ಬಿಟ್ಟು ಪೂರ್ಣಕಾಲಿಕವಾಗಿ ಸ್ವಾತಂತ್ರ್ಯ ಹೋರಾಟವನ್ನು ಪ್ರವೇಶಿಸಿತು. ವಲ್ಲಭಭಾಯಿ ಪಟೇಲರೂ ವಕೀಲಿ ವೃತ್ತಿ ತೊರೆದು ಗಾಂಧೀಜಿ ಬಳಿಗೆ ಬಂದದ್ದೂ ಆಗಲೇ.

ಆಂದೋಲನದ ಆಕರ್ಷಣೆ ನಡುವೆ ವಿವಾಹ

ಜಲಿಯನ್ ವಾಲಾಬಾಗ್ ಪ್ರಕರಣ ದೇಶಾದ್ಯಂತ ಹಲವಾರು ಯುವಕರನ್ನು ಸಿಟ್ಟಿಗೆಬ್ಬಿಸಿತ್ತು. ಜಯಪ್ರಕಾಶ್ ಅಸಹಾಯಕ ಸಿಟ್ಟಿನಿಂದ ಕುದಿಯತೊಡಗಿದ್ದರು. ಅಸಹಕಾರ ಚಳುವಳಿಯ ಕರೆ ದೇಶವನ್ನು ಬಡಿದೆಬ್ಬಿಸಿತ್ತು. ಬಡವ ಬಲ್ಲಿದರೆನ್ನದೆ ಜನ ಕಾಂಗ್ರೆಸಿನ ಸ್ವಯಂಸೇವಕರಾಗಲು ಮುನ್ನುಗ್ಗುತ್ತಿದ್ದರು. ಅನೇಕ ಗಣ್ಯರು ತಮ್ಮ ಸರ್ಕಾರಿ ಬಿರುದು ಬಾವಲಿಗಳನ್ನು ಬಿಟ್ಟುಕೊಟ್ಟರು. ಜಮನ್‌ಲಾಲ್ ಬಜಾಜ್ ಮುಂತಾದ ವಣಿಜರು ಕಾಂಗ್ರೆಸ್ ಆಂದೋಲನಕ್ಕೆ ಧನಸಹಾಯ ಘೋಷಿಸಿದರು. ಸ್ವದೇಶಿ ವಿದ್ಯಾಸಂಸ್ಥೆಗಳು ಆರಂಭವಾದವು. ಚರಕಾ ಚಳುವಳಿ, ವಿದೇಶಿವಸ್ತ್ರ ದಹನ ರಾಷ್ಟ್ರವ್ಯಾಪಿಯಾಗತೊಡಗಿತ್ತು. ಕಾಲೇಜು ವಿದ್ಯಾಭ್ಯಾಸ ಮತ್ತು ಸ್ವಾತಂತ್ರ್ಯ ಹೋರಾಟ—ಇವೆರಡರ ನಡುವೆ ಜಯಪ್ರಕಾಶರ ಮನಸ್ಸು ಹೊಯ್ದಾಡತೊಡಗಿತ್ತು. ಪಾಟ್ನಾನಗರ ಮೌಲಾನ ಅಬುಲ್ ಕಲಂ ಆಜಾದ್, ಬಾಬು ರಾಜೇಂದ್ರ ಪ್ರಸಾದ್, ಮೋತಿಲಾಲ್ ನೆಹರೂ, ಜವಾಹರಲಾಲ್ ನೆಹರೂ ಮುಂತಾದ ಜನನಾಯಕರನ್ನು ಆಕರ್ಷಿಸುತ್ತಿದ್ದ ಸ್ವಾತಂತ್ರ್ಯಾಂದೋಲನದ ಪ್ರಮುಖ ಕೇಂದ್ರವಾಗಿತ್ತು.

ಈ ಮಧ್ಯೆ ಜಯಪ್ರಕಾಶರ ಬದುಕಿನಲ್ಲಿ ಮತ್ತೊಂದು ಪ್ರಮುಖ ಘಟನೆ ನಡೆಯಿತು. ೧೯೨೦ರ ಅಕ್ಟೋಬರ್‌ನಲ್ಲಿ ೧೪ ವರ್ಷಗಳ ವಯಸ್ಸಿನ ಪ್ರಭಾವತಿ ದೇವಿ ಎಂಬ ಕನ್ಯೆಯೊಡನೆ ಅವರ ವಿವಾಹ ನೆರವೇರಿತು. ಪ್ರಭಾವತಿ ದೇವಿಯವರ ತಂದೆ ಬ್ರಿಜ್ ಕಿಶೋರ್ ಪ್ರಸಾದ್, ಬಿಹಾರದ ಸರಣ್ ಜಿಲ್ಲೆಯ ಪ್ರಮುಖ ವಕೀಲರು ಹಾಗೂ ಬಾಬು ರಾಜೇಂದ್ರ ಪ್ರಸಾದರ ಹತ್ತಿರ ಬಂಧುಗಳು ಕೂಡಾ. ಗಾಂಧೀಜಿಯ ಚಂಪಾರಣ್

ಕಾರ್ಯಾಚರಣೆಯಲ್ಲಿ ಬ್ರಿಜ್ ಕಿಶೋರ್ ಪ್ರಸಾದ್ ಪೂರ್ಣ ಪ್ರಮಾಣದ ಕಾಂಗ್ರೆಸ್ ಕಾರ್ಯಕರ್ತರಾಗಿದ್ದರು. ಗಾಂಧೀಜಿ ಕೂಡಾ ಹಲವಾರು ಬಾರಿ ಬಿಹಾರದ ಪ್ರಾಂತ್ಯ ಕಾಂಗ್ರೆಸ್ಸಿನ ಅಧ್ಯಕ್ಷರೂ ಆಗಿದ್ದ ಪ್ರಸಾದರ ಮನೆಗೆ ಭೇಟಿಕೊಟ್ಟಿದ್ದರು. ತಾವು ಹೋದೆಡೆಯಲ್ಲೆಲ್ಲಾ ತಮ್ಮ ಆಶ್ರಮಕ್ಕಾಗಿ ಚಾರಿತ್ರ್ಯವಂತ ಕಾರ್ಯಕರ್ತರ ಹುಡುಕಾಟದಲ್ಲಿರುತ್ತಿದ್ದ ಗಾಂಧೀಜಿ, ಪ್ರಭಾವತಿ ದೇವಿಯನ್ನು ತಮ್ಮ ಆಶ್ರಮಕ್ಕೆ ಕಳಿಸಬೇಕೆಂದು ಬ್ರಿಜ್ ಕಿಶೋರ್ ಪ್ರಸಾದರನ್ನು ಕೇಳಿದ್ದರು. ಆದರೆ ಈ ವಿಷಯದಲ್ಲಿ ಮಾತ್ರ ಗಾಂಧೀಜಿಯ ಕೋರಿಕೆಯನ್ನು ತಮ್ಮ ಪತ್ನಿಯ ಪ್ರತಿಭಟನೆಯಿಂದಾಗಿ ಒಪ್ಪದ ಪ್ರಸಾದರು ತಮ್ಮ ಮಗಳಿಗೆ ಸೂಕ್ತ ವರನ ಅನ್ವೇಷಣೆಯಲ್ಲಿ ತೊಡಗಿದರು. ತಮ್ಮ ಸಂಬಂಧಿಕನೊಬ್ಬನ ಮೂಲಕ, ಪಟ್ನಾದ ಪ್ರತಿಭಾವಂತ ಹಾಗೂ ಸಭ್ಯ ವಿದ್ಯಾರ್ಥಿ ಜಯಪ್ರಕಾಶರ ಪರಿಚಯದೊಡನೆ ಅವರ ವರಾನ್ವೇಷಣೆ ಕೊನೆಗೊಂಡಿತ್ತು.

ಗಾಂಧಿ ದರ್ಶನ - ಆಶ್ರಮವಾಸಿಯಾದ ಪತ್ನಿ

೧೯೨೧ರ ಆದಿ ಭಾಗದಲ್ಲಿ ಗಾಂಧೀಜಿ ಪಾಟ್ನಾಕ್ಕೆ ಭೇಟಿಕೊಟ್ಟರು. ಅಸಹಕಾರ ಚಳವಳಿಗೆ ಕರೆಕೊಡಲಾದ ಆ ಬೃಹತ್ ಸಭೆಯಲ್ಲಿ ಭಾಗವಹಿಸಿ, ಗಾಂಧೀಜಿಯ ಸಾಕ್ಷಾತ್ ದರ್ಶನದೊಂದಿಗಗೆ ಹಿಂತಿರುಗಿ ಬಂದ ಜಯಪ್ರಕಾಶ್, ವಿದ್ಯಾಭ್ಯಾಸ ಮತ್ತು ಸ್ವಾತಂತ್ರ್ಯ ಹೋರಾಟಗಳಲ್ಲಿ ಒಂದನ್ನು ಆರಿಸಿಕೊಂಡಿದ್ದಾಗಿತ್ತು. ಅವರು ವಿಜ್ಞಾನ ಪದವಿ ಎರಡನೇ ವರ್ಷದ ಸಿದ್ಧತಾ ಪರೀಕ್ಷೆಯನ್ನು ಮುಗಿಸಿ ಇನ್ನೊಂದೆರಡು ತಿಂಗಳುಗಳಲ್ಲಿ ಅಂತಿಮ ಪರೀಕ್ಷೆಗೆ ಹಾಜರಾಗಬೇಕಿತ್ತು. ಆದರೆ ಅವರು ತಮ್ಮೆಲ್ಲಾ ಪುಸ್ತಕಗಳನ್ನೂ ಕೆರೆಯೊಂದಕ್ಕೆ ಒಗೆದು, ತಾವಿನ್ನು ಬ್ರಿಟಿಷ್ ಸರ್ಕಾರದ ಆಶ್ರಯದ ಯಾವ ಶಿಕ್ಷಣ ಸಂಸ್ಥೆಯಲ್ಲೂ ವಿದ್ಯಾಭ್ಯಾಸ ಮಾಡುವುದಿಲ್ಲವೆಂದು ಪ್ರತಿಜ್ಞೆ ಕೈಗೊಂಡರು. ಈ ನಿರ್ಧಾರ ಅವರ ತಂದೆ ತಾಯಿಗಳನ್ನು ದಿಗ್ಭ್ರಮೆಗೊಳಿಸಿತು; ವಿಚಲಿತರನ್ನಾಗಿ ಮಾಡಿತು. ಹರ್ಷುಬಾಬು ಮಗನನ್ನು ಬನಾರಸ್ ಹಿಂದೂ ವಿಶ್ವವಿದ್ಯಾಲಯಕ್ಕೆ ಸೇರಿಸಲು ಯತ್ನಿಸಿದರು. ಆದರೆ ಆ ವಿಶ್ವವಿದ್ಯಾಲಯ ಕೂಡಾ ಬ್ರಿಟಿಷ್ ಸರ್ಕಾರದ ಹಣದ ನೆರವು ಪಡೆಯುತ್ತದೆಂಬ ಕಾರಣದ ಮೇಲೆ ಜಯಪ್ರಕಾಶ್, ತಂದೆಯ ಪ್ರಯತ್ನವನ್ನು ವಿಫಲಗೊಳಿಸಿದರು. ಕೊನೆಗೆ ಜಯಪ್ರಕಾಶರು ಬಿಹಾರ ವಿದ್ಯಾಪೀಠದ ವಿದ್ಯಾರ್ಥಿಯಾಗಿ ದಾಖಲಾದರು. ೧೯೨೦ರ ಜುಲೈನಲ್ಲಿ ನಿಧನ ಹೊಂದಿದ್ದ ಬಾಲಗಂಗಾಧರ ತಿಲಕರ ನೆನಪಿನಲ್ಲಿ ಸಂಗ್ರಹಿಸಿದ ಹಣದ ನೆರವಿನೊಡನೆ ಬಿಹಾರ ಕಾಂಗ್ರೆಸ್, ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಮುಂದುವರಿಕೆಗಾಗಿ ಈ ವಿದ್ಯಾಪೀಠವನ್ನು ಸ್ಥಾಪಿಸಿತ್ತು.

ಬ್ರಿಜ್ ಕಿಶೋರ್ ಪ್ರಸಾದ್ ತಮ್ಮ ಮಗಳ ಮದುವೆಯ ನಂತರ, ಜಯಪ್ರಕಾಶರ ವಿದ್ಯಾಭ್ಯಾಸ ಮುಗಿಯುವವರೆಗೆ ಇರಲೆಂದು ಪ್ರಭಾವತಿ ದೇವಿಯನ್ನು ಗಾಂಧಿ ಆಶ್ರಮಕ್ಕೆ ಕಳಿಸಿದ್ದರು. ಗಾಂಧೀಜಿಯ ಆಶ್ರಮ ಈಗ ಅಹಮದಾಬಾದ್‌ನಿಂದ ಸ್ವಲ್ಪ ದೂರದ ಸಾಬರ್ಮತಿ ಎಂಬ ಸ್ಥಳಕ್ಕೆ ವರ್ಗಾವಣೆಯಾಗಿತ್ತು. ಪ್ರಭಾವತಿ ದೇವಿ ಕಸ್ತೂರ್ ಬಾ ಅವರ

ಪ್ರೀತಿಯ ಮಗಳಂತೆ ಆಶ್ರಮದಲ್ಲಿ ಬೆಳೆಯತೊಡಗಿದರು. ಮುಂಜಾನೆ ೪ ಗಂಟೆಗೆ ಎದ್ದು, ಸ್ನಾನಾದಿಗಳನ್ನು ಮುಗಿಸಿ ಪ್ರಾರ್ಥನೆ ಸಲ್ಲಿಸುವುದು, ಗಾಂಧೀಜಿಯವರಿಗೆ ಉಪಾಹಾರ ಒದಗಿಸುವುದು, ಆಶ್ರಮದ ಕೊಠಡಿಗಳನ್ನು ಗುಡಿಸುವುದು, ಕಕ್ಕಸುಗಳನ್ನು ಸ್ವಚ್ಛಗೊಳಿಸುವುದು, ಧಾನ್ಯ ಬೀಸುವುದು, ಚರಕದಲ್ಲಿ ನೂಲು ತೆಗೆಯುವುದು, ಗುಜರಾತಿ ಕಲಿಯುವುದು ಮುಂತಾದ ಕೆಲಸಗಳಲ್ಲಿ ಪ್ರಭಾವತಿ ದೇವಿ ಆಶ್ರಮದ ಅತ್ಯಂತ ನಿಷ್ಠಾವಂತ 'ಸೇವಕಿ'ಯಾದರು. ಇದೇ ಸಮಯದಲ್ಲಿ ಸರೋಜಿನಿ ನಾಯ್ಡು, ಮೀರಾ ಬೆನ್, ಕಮಲಾ ದೇವಿ ಚಟ್ಟೋಪಾಧ್ಯಾಯ, ವಿನೋಬಾ, ಪ್ಯಾರೆ ಲಾಲ್ ಮುಂತಾದವರ ಸ್ನೇಹ ದೊರಕಿ ಪ್ರಭಾವತಿ ದೇವಿ, ಗಾಂಧಿ ಅನ್ವೇಷಿಸುತ್ತಾ ಹೊರಟಿದ್ದ ಬದುಕಿನ ಮಾರ್ಗಕ್ಕೆ ತಮ್ಮನ್ನು ಪೂರ್ಣವಾಗಿ ತೆತ್ತುಕೊಂಡರು. ಒಮ್ಮೆ ಗಾಂಧೀಜಿ ಆಕೆಗೆ ಬ್ರಹ್ಮಚರ್ಯೆಯ ಸಲಹೆ ಮಾಡಿ, ಸತ್ಯಾಗ್ರಹದ ಒಂದು ಭಾಗವಾಗಿ ಅದರ ಮಹತ್ವವನ್ನು ಉಪದೇಶಿಸಿದರು. ಆಶ್ರಮದ ಸರಳ ಸುಂದರ ಸಾಮೂಹಿಕ ಬದುಕಿನೊಂದಿಗೆ ತೀರಾ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡು ವೈಯಕ್ತಿಕ ಜೀವನದ ಆಲೋಚನೆಯನ್ನೂ ಮೀರಿ ಗಾಂಧಿನಿಷ್ಠೆಗೆ ಬದ್ಧವಾಗಿದ್ದ ಬಾಲಕಿ ಪ್ರಭಾವತಿದೇವಿ, ಜೀವನಪರ್ಯಂತ ಬ್ರಹ್ಮಚರ್ಯೆ ಪಾಲಿಸುವುದಾಗಿ ಗಾಂಧೀಜಿಗೆ ಮಾತುಕೊಟ್ಟರು.

ಸಾಮೂಹಿಕ ನಾಗರಿಕ ಸತ್ಯಾಗ್ರಹ - ಗಾಂಧೀಜಿ ಬಂಧನ

ಆ ಮಧ್ಯೆ ವರ್ಷದೊಳಗಾಗಿ ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡುವುದಾಗಿ ಜನತೆಗೆ ನೀಡಿದ್ದ ಆಶ್ವಾಸನೆಯನ್ನು ಈಡೇರಿಸುವಲ್ಲಿ ಗಾಂಧೀಜಿಗೆ ಕಷ್ಟಗಳು ಎದುರಾಗತೊಡಗಿದ್ದವು. ಗಾಂಧೀಜಿಯ ರಾಷ್ಟ್ರಮಟ್ಟದ ಹರತಾಳದ ಬೆದರಿಕೆಗೆ ಒಂದಿಷ್ಟು ಮಣಿದಂತೆ ತೋರಿದ ಸರ್ಕಾರ ಮಾಂಟಗು-ಚೆಮ್ಸ್‌ಫೋರ್ಡ್ ಸುಧಾರಣೆ ಹೆಸರಿನಲ್ಲಿ ದೇಶಕ್ಕೆ ಹೊಸ ಸಂವಿಧಾನವೊಂದನ್ನು ಅಂಗೀಕರಿಸಿ; ಜನರ ಕಣ್ಣೊರೆಸುವ ನಾಟಕವಾಗಿ, ಸರ್ಕಾರದಲ್ಲಿ ಒಂದಿಷ್ಟು ಪ್ರಮಾಣದಲ್ಲಿ ಜನತೆಗೆ ಪ್ರಾತಿನಿಧ್ಯ ನೀಡಲು ಮುಂದೆ ಬಂದಿತು. ಗಾಂಧೀಜಿಯ ನಿರೀಕ್ಷೆ ಸುಳ್ಳಾಯಿತು. ಗಾಂಧೀಜಿ ಸಾಮೂಹಿಕ ನಾಗರಿಕ ಅಸಹಕಾರ ಸತ್ಯಾಗ್ರಹಕ್ಕೆ ಕರೆಕೊಟ್ಟರು. ಮುಂದೆ ಸುಮಾರು ಮೂರು ದಶಕಗಳ ಕಾಲ ಬ್ರಿಟಿಷರ ವಿರುದ್ಧ ಅತ್ಯಂತ ಪ್ರಬಲ ಅಸ್ತ್ರವಾಗಿ ಬಳಸಲ್ಪಟ್ಟ ಸತ್ಯಾಗ್ರಹ ಎಂಬ ಪರಿಕಲ್ಪನೆಗೆ ಈ ಕರೆ ನಾಂದಿ ಹಾಡಿಯಾಗಿತ್ತು.

ಗಾಂಧೀಜಿಯ ಕರೆಯಂತೆ ರಾಷ್ಟ್ರದಾದ್ಯಂತ ಶಾಂತಿಯುತವಾಗಿ ಆರಂಭವಾದ ಚಳುವಳಿ ಕ್ರಮೇಣ, ಪೊಲೀಸರು ನಡೆಸಿದ ಸಾವಿರಾರು ದಸ್ತಗಿರಿಗಳು, ಲಾಠಿ ಪ್ರಹಾರ, ಗೋಲೀಬಾರ್ ಮುಂತಾದ ದಮನಕಾರಿ ಕ್ರಮಗಳ ಮೂಲಕ ಹಿಂಸಾತ್ಮಕ ಸ್ವರೂಪ ಪಡೆಯಿತು. ೧೯೨೨ರ ಫೆಬ್ರವರಿ ೫ ರಂದು ಉತ್ತರ ಪ್ರದೇಶದ ಚೌರಿಚೌರ ಎಂಬಲ್ಲಿ ಕಾಂಗ್ರೆಸ್ ಮೆರವಣಿಗೆಯೊಂದರ ಮೇಲೆ ಪೊಲೀಸರ ದಾಳಿ ನಡೆದು, ಮೆರವಣಿಗೆಕಾರರು ತಾಳ್ಮೆ ಕಳೆದುಕೊಂಡು ೨೨ ಮಂದಿ ಪೊಲೀಸರನ್ನು ಕೊಂದುಹಾಕಿದರು. ಆತಂಕಗೊಂಡ

ಗಾಂಧೀಜಿ ಚಳವಳಿಯನ್ನು ಹಿಂತೆಗೆದುಕೊಂಡರು. ತಮ್ಮ ಕಲ್ಪನೆಯ—ತಾನು ನೊಂದು ಎದುರಾಳಿಯನ್ನು ಸಾತ್ವಿಕವಾಗಿ ಮಣಿಸುವ—ಸತ್ಯಾಗ್ರಹಕ್ಕಿನ್ನೂ ಸಮಾಜ ಅಣಿಯಾಗಿಲ್ಲವೆಂದು ಮನಗಂಡ ಗಾಂಧೀಜಿ; ಚರಕಾ ಚಳುವಳಿ, ಗ್ರಾಮನೈರ್ಮಲ್ಯ, ಹರಿಜನಸೇವೆ ಮುಂತಾದ 'ರಚನಾತ್ಮಕ' ಚಟುವಟಿಕೆಗಳಲ್ಲಿ ತೊಡಗಿಕೊಂಡು ಮನಃಶುದ್ಧಿ ಮಾಡಿಕೊಳ್ಳಬೇಕೆಂದು ಕಾಂಗ್ರೆಸ್ ಸ್ವಯಂಸೇವಕರಿಗೆ ಮನವಿ ಮಾಡಿದರು. ಸರ್ಕಾರ ಕಾಂಗ್ರೆಸ್ಸನ್ನು ಅಧಿಕೃತವಾಗಿ ಬಹಿಷ್ಕರಿಸಿತು. ಗಾಂಧೀಜಿಯನ್ನು ಆರೋಪಿಯನ್ನಾಗಿ ಮಾಡಿ ನ್ಯಾಯಾಲಯದಲ್ಲಿ ಹಾಜರುಪಡಿಸಿತು. ತಮ್ಮ ಅಹಿಂಸಾ ವ್ರತದ ಹಿನ್ನೆಲೆಯಲ್ಲಿ, ಇಡೀ ಹಿಂಸಾಚಾರದ ನೈತಿಕ ಹೊಣೆಯನ್ನು ಒಪ್ಪಿಕೊಂಡ ಗಾಂಧೀಜಿಗೆ ಆರು ವರ್ಷಕಾಲ ಕಾರಾಗೃಹವಾಸದ ಶಿಕ್ಷೆ ವಿಧಿಸಲಾಯಿತು.

ಹತಾಶೆ-ಅಮೆರಿಕಾದೆಡೆಗೆ ಪಯಣ

ತಮ್ಮ ವಿದ್ಯಾಭ್ಯಾಸವನ್ನು ತ್ಯಾಗಮಾಡಿ ಸ್ವಾತಂತ್ರ್ಯ ಹೋರಾಟಕ್ಕೆ ಸನ್ನದ್ಧರಾಗಿದ್ದ ಹರೆಯದ ಯುವಕ ಜಯಪ್ರಕಾಶ್ ಹತಾಶರಾದರು. ಜೊತೆಗೆ ಬಿಹಾರ ವಿದ್ಯಾಪೀಠದಲ್ಲಿ, ಪದವಿಗಾಗಿ ವಿಜ್ಞಾನ ಅಭ್ಯಾಸಕ್ಕೆ ಅನುಕೂಲಗಳಿರಲಿಲ್ಲ. ಇದರಿಂದ ಜಯಪ್ರಕಾಶ್ ಮತ್ತಷ್ಟು ನಿರಾಶೆಗೊಂಡರು. ಆದರೆ ಇದೇ ಸಮಯಕ್ಕೆ ಅಮೆರಿಕಾದಲ್ಲಿ ಜಯಪ್ರಕಾಶರ ಗೆಳೆಯರೊಬ್ಬರು ಪತ್ರ ಬರೆದು, ಅಮೆರಿಕಾದಲ್ಲಿ ದುಡಿದು ಓದುವ ಅಪಾರ ಸೌಲಭ್ಯಗಳಿವೆ ಎಂದು ಆತ್ಮೀಯತೆಯಿಂದ ಆಹ್ವಾನಿಸಿದರು. ಇದೊಂದೇ ದಾರಿ ಎಂದು ಬಗೆದ ಜಯಪ್ರಕಾಶ್ ಅಮೆರಿಕಾಕ್ಕೆ ತೆರಳುವ ತೀರ್ಮಾನ ಮಾಡಿದರು.

ಜಯಪ್ರಕಾಶರ ತೀರ್ಮಾನವನ್ನು ಫೂಲ್‌ರಾಣಿ ದೇವಿ ವಿರೋಧಿಸಿದರು. ಈ ವಿರೋಧವನ್ನು ಜಯಪ್ರಕಾಶ್ ಯಶಸ್ವಿಯಾಗಿ ಎದುರಿಸಿದರಾದರೂ, ಆಕೆ ಜಲೋದರ ರೋಗದಿಂದ ನರಳಲಾರಂಭಿಸಿದಾಗ ತಮ್ಮ ಅಮೆರಿಕಾ ಪ್ರಯಾಣವನ್ನು ಒಂದು ವರ್ಷದ ಮಟ್ಟಿಗೆ ಮುಂದೂಡಿದರು. ಕೊನೆಗೆ ೧೯೨೨ರ ಮೇನಲ್ಲಿ ಅಮೆರಿಕಾ ಪ್ರಯಾಣವನ್ನು ಕೈಗೊಂಡರು. ತಮ್ಮೊಡನೆ ಅಮೆರಿಕಾಕ್ಕೆ ಬರಬೇಕೆಂದು ಕೋರಿ ಜಯಪ್ರಕಾಶ್, ಪ್ರಭಾವತಿ ದೇವಿಗೆ ಪತ್ರ ಬರೆದರು. ಆದರೆ ಗಾಂಧೀಜಿ-ಕಸ್ತೂರಬಾ ಮಡಿಲು ಸೇರಿದ್ದ ಪ್ರಭಾವತಿ ದೇವಿ, ಜಯಪ್ರಕಾಶರೊಡನೆ ಹೋಗಲು ನಿರಾಕರಿಸಿದರು. ಹತ್ತೊಂಬತ್ತು ವರ್ಷಗಳ ವಿವಾಹಿತ ಯುವಕ ಜಯಪ್ರಕಾಶ್, ಬದುಕಿಗೆ ಹೊಸ ದಿಕ್ಕನ್ನು ಕಂಡುಕೊಳ್ಳುವ ಮಹದಾಶಯದೊಡನೆ ಕಲ್ಕತ್ತಾ ಬಂದರಿನಲ್ಲಿ, ಜಪಾನ್ ಕಡೆಗೆ ಹೊರಟಿದ್ದ ಹಡಗೊಂದನ್ನು ಒಂಟಿಯಾಗಿ ಹತ್ತಿದರು.

೨. ಅಮೆರಿಕದಲ್ಲಿ ಶಿಕ್ಷಣ: ಕಮ್ಯೂನಿಸಂ ಒಲವು

ಜಯಪ್ರಕಾಶ್ ಅಮೆರಿಕಾಕಕ್ಕೆ ಬಂದ್ದದು ಆ ದೇಶ ತನ್ನ ಪ್ರಗತಿಯ ಉತ್ತುಂಗ ಸ್ಥಿತಿಯನ್ನು ತಲುಪುತ್ತಿದ್ದ ಪರ್ವ ಕಾಲದಲ್ಲಿ. ಅವನತಿಯ ಸ್ಥಿತಿಯಲ್ಲಿದ್ದ ಹಿಂದೂ ಸಮಾಜ ಮತ್ತು ದಮನಕಾರಿ ಬ್ರಿಟಿಷ್ ಆಳ್ವಿಕೆಗಳ ಪ್ರಪಂಚದಿಂದ ಅವರು, ಸಮೃದ್ಧಿ ತುಂದುಕೊಡುವುದೆಂದು ಹೇಳಲಾದ ವಿಚಿತ್ರ ರೀತಿಯ ಸ್ಪರ್ಧೆ ಹಾಗೂ ಸ್ವಾತಂತ್ರ್ಯಗಳ ಮೂಲಕ ತನ್ನ ಹೊಸ ಗುರುತನ್ನು ಹುಡುಕಿಕೊಳ್ಳುವ ಧಾವಂತದಲ್ಲಿದ್ದ ಚಲನಶೀಲ ಸಮಾಜವೊಂದಕ್ಕೆ ಕಾಲಿರಿಸಿದ್ದರು. ನಿರ್ಮಾಣದ ಹಂತದಲ್ಲಿದ್ದ ಮುಗಿಲು ಮುಟ್ಟುವ ಕಟ್ಟಡಗಳು, ಬಿಸಿ ಬಿಸಿ ಸುದ್ದಿಗಳನ್ನು ಹೊತ್ತು ತರುವ ಬೃಹತ್ ವರ್ತಮಾನ ಪತ್ರಿಕೆಗಳಿಗೆ ಮುತ್ತಿಗೆ ಹಾಕುವ ಜನಸಮುದಾಯದ ಜೀವನೋತ್ಸಾಹ, ಫಿಟ್ಸ್‌ಗೆರಾಲ್ಡ್, ಲಾರೆನ್ಸ್ ಮತ್ತು ಜಾಮ್ಲಾ ಮುಂತಾದವರ ಅಸಂಪ್ರದಾಯಿಕವಾದ—ಹೊಸ ಸಂವೇದನೆಗಳನ್ನರಳಿಸುವ—ಬರಹಗಳು, ರಸ್ತೆಗಳಲ್ಲಿ ಸೊಂಟ ಬಳಸಿ ನಡೆಯುವ ಹುಡುಗ-ಹುಡುಗಿಯರು, ಮುದುಕ-ಮುದುಕಿಯರು, ನೀಗ್ರೋಗಳು ಮತ್ತು ಬಿಳಿಯರ ನಡುವಣ ಸಮಾನತೆಯ ಹೋರಾಟ—ಇವೆಲ್ಲವೂ ಜಯಪ್ರಕಾಶ್‌ರ ಮೇಲೆ ಗಾಢ ಪ್ರಭಾವವನ್ನು ಬೀರಿದವು.

ಜಯಪ್ರಕಾಶ್ ಬರ್ಕಲಿಯಲ್ಲಿದ್ದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯಕ್ಕೆ ಸೇರುವ ಉದ್ದೇಶದಿಂದ ಬಂದಿದ್ದರು. ಆದರೆ ಅವರು ಅಲ್ಲಿಗೆ ತಲುಪುವ ಹೊತ್ತಿಗೆ, ತರಗತಿಗಳು ಆರಂಭವಾಗಿ ಬಹಳ ದಿನಗಳಾಗಿದ್ದವು. ಅವರು ಮುಂದಿನ ವ್ಯಾಸಂಗ ಅವಧಿ ಆರಂಭವಾಗುವುದರವರೆಗೆ—ಎರಡು ತಿಂಗಳುಗಳು—ಕಾಯುವುದು ಅನಿವಾರ್ಯವಾಯಿತು. ಅದೇ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆಯುತ್ತಿದ್ದ ಭಾರತೀಯ ವಿದ್ಯಾರ್ಥಿಗಳು ಮೇರಿಸ್‌ವಿಲೆ ಎಂಬಲ್ಲಿಗೆ ಹೋದರೆ, ಮುಂದಿನ ಶಿಕ್ಷಣಕ್ಕಾಗಿ ಖರ್ಚು ವೆಚ್ಚಗಳನ್ನು ದುಡಿದುಕೊಳ್ಳಲು ಕೆಲಸ ದೊರೆಯುವ ಸಾಧ್ಯತೆಗಳಿವೆ ಎಂದು ಸಲಹೆ ಮಾಡಿದರು.

ದುಡಿಮೆಯೊಂದಿಗೆ ವಿದ್ಯಾಭ್ಯಾಸ

ಜಯಪ್ರಕಾಶ್ ಮೇರಿಸ್‌ವಿಲೆಗೆ ಪ್ರಯಾಣ ಮಾಡಿದರು. ಭಾರತೀಯ ಮೂಲದ ಪಠಾಣನೊಬ್ಬ ಜಯಪ್ರಕಾಶರಿಗೆ ಯೂಬಾ ಬಳಿಯ ಫಲಸಂಸ್ಕರಣಾ ಕಾರ್ಯಾಗಾರ ವೊಂದರಲ್ಲಿ ದಿನಗೂಲಿಯ ಕೆಲಸ ಕೊಡಿಸಿದ. ಜಯಪ್ರಕಾಶ್ ಅಲ್ಲಿ ಪ್ರತಿದಿನ ಒಂಬತ್ತು ತಾಸುಗಳು ದುಡಿಯಬೇಕಾಗಿತ್ತು. ಮಧ್ಯೆ ಅರ್ಧತಾಸು ಮಾತ್ರ ವಿಶ್ರಾಂತಿ. ಹಣ್ಣುಗಳನ್ನು

ಹೊತ್ತು ತಂದು, ಒಣಗಲು ಬಿಸಿಲಿಗೆ ಹರಡುವುದೇ ಅವರ ಕೆಲಸವಾಗಿತ್ತು. ವಾಸಿಸಲು ಅವರಿಗೆ ಮರದ ಹಲಗೆಗಳಿಂದ ಕಟ್ಟಿದ ಜೋಪಡಿಯೊಂದನ್ನು ಒದಗಿಸಲಾಗಿತ್ತು. ಕೆಲಸ ಮುಗಿದ ನಂತರ ಜಯಪ್ರಕಾಶ್ ಇಂತಹ ಜೋಪಡಿಯೊಂದರಲ್ಲಿ ಕೂತು, ತನ್ನ ಸಹಕಾರ್ಮಿಕರಾದ ಭಾರತೀಯ ಮೂಲವಂಶಸ್ಥರು ಬ್ರಿಟಿಷ್ ಆಡಳಿತದ ಬಗ್ಗೆ, ಗಾಂಧೀಜಿಯ ಅಸಹಕಾರ ಚಳುವಳಿಯ ಬಗ್ಗೆ ಆಸಕ್ತಿಯಿಂದ, ಕುತೂಹಲದಿಂದ ಅಭಿಮಾನದಿಂದ ಕೇಳುತ್ತಿದ್ದ ಪ್ರಶ್ನೆಗಳಿಗೆ ಉತ್ಸಾಹದಿಂದ ಉತ್ತರಿಸಿ, ತಮಗೆ ಗೊತ್ತಿದ್ದುದೆಲ್ಲವನ್ನೂ ವಿವರಿಸುತ್ತಿದ್ದರು. ಭಾನುವಾರಗಳಂದು ಮೇರಿಸ್‌ವಿಲೆ ಪಟ್ಟಣಕ್ಕೆ ಹೋಗಿ ಮೂಕ ಸಿನಿಮಾಗಳನ್ನು, ಅಲ್ಲಿನ ಅಂಗಡಿಗಳ ವೈಭವವನ್ನೂ ನೋಡಿಕೊಂಡು ಬರುತ್ತಿದ್ದರು.

ಒಂದು ತಿಂಗಳೊಳಗಾಗಿ ಈ ಕಾರ್ಯಾಗಾರದ ಕೆಲಸ ಮುಗಿದ ನಂತರ ಜಯಪ್ರಕಾಶ್ ಬರ್ಕೆಲಿಗೆ ಹಿಂತಿರುಗಿದರು. ಬಾಡಿಗೆ ಕೋಣೆಯೊಂದರಲ್ಲಿ ವಾಸಿಸತೊಡಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ವಿಜ್ಞಾನ ಪದವಿಯ ವಿದ್ಯಾರ್ಥಿಯಾಗಿ ದಾಖಲಾದರು. ಹೊಟೇಲ್‌ಗಳಲ್ಲಿ ಮೇಜೊರಸುವ ಹುಡುಗನಾಗಿ, ಮಾಣಿಯಾಗಿ ಮತ್ತು ಭಾನುವಾರಗಳಂದು ಇತರ ರೀತಿಯ ಚಿಲ್ಲರೆ ಕೂಲಿ ಕೆಲಸಗಳಲ್ಲಿ ತೊಡಗಿ ಮತ್ತೊಂದು ತಿಂಗಳನ್ನು ತಳ್ಳಿದರು. ಇದೆಲ್ಲವನ್ನೂ ನೆನೆಸಿಕೊಂಡು ಮುಂದೊಂದು ದಿನ ಜಯಪ್ರಕಾಶ್ ಹೀಗೆ ಹೇಳಿದರು: "ಮನುಷ್ಯ ಜೀವಿಗಳ ಸಮಾನತೆ ಮತ್ತು ಕಾಯಕದ ಘನತೆ, ನನ್ನ ಬದುಕಿನಲ್ಲಿ ಮೊಟ್ಟಮೊದಲ ಬಾರಿಗೆ ಇಲ್ಲಿ ನಿಜವಾಗಿದ್ದವು. ಮಾಲೀಕ ಮತ್ತು ಕೆಲಸಗಾರರ ನಡುವೆ ಇಲ್ಲಿ ಹಿರಿಮೆ-ಕಿರಿಮೆಗಳ ಕಲ್ಪನೆಗಳೇ ಇಲ್ಲವಾಗಿದ್ದವು."

ವಿಜ್ಞಾನದಿಂದ ಸಮಾಜಶಾಸ್ತ್ರದೆಡೆಗೆ

ಆದರೆ ಜಯಪ್ರಕಾಶ್ ತನ್ನ ಮೊದಲವರ್ಷದ ಶಿಕ್ಷಣವನ್ನು ಮುಗಿಸಿ ಎರಡನೇ ವರ್ಷಕ್ಕೆ ಕಾಲಿಡುತ್ತಿರುವಂತೆ, ಅವರಿಗೆ ಹೊಸ ಅನುಭವಗಳು ಎದುರಾದವು. ಶ್ರೀಮಂತಿಕೆಯ ತೆರೆಮರೆಯಲ್ಲಿ ಅಡಗಿದ್ದ ಅಸಮಾನತೆ-ಅನ್ಯಾಯಗಳು ಕ್ರಮೇಣ ಪರೋಕ್ಷವಾಗಿ ಪ್ರಕಟವಾಗ ತೊಡಗಿದ್ದವು. ಅಮೆರಿಕನ್ ಸಮಾಜ ಸಮೃದ್ಧ ಸಮಾಜವಾಗುವುದರ ಜತೆಯಲ್ಲಿಯೇ ದುರಾಸೆಯ ಸಮಾಜವೂ ಆಗತೊಡಗಿತ್ತು. ಎಲ್ಲ 'ಸಾಧ್ಯ'ಗಳೂ 'ಅಗತ್ಯ'ಗಳಾಗಿ ಮಾರ್ಪಾಡಾಗತೊಡಗಿದ್ದವು: ಸಮಾಜದ ವಿಪರೀತ ಬೇಡಿಕೆಗಳ ಭಾರಕ್ಕೆ, ಅಮೆರಿಕಾದ ಆರ್ಥಿಕ ವ್ಯವಸ್ಥೆ ಹೊಸ ಹೊಂದಾಣಿಕೆಗಳನ್ನು ಮಾಡಿಕೊಳ್ಳಬೇಕಾದ ಅಗತ್ಯಗಳನ್ನು ಕಾಣತೊಡಗಿತ್ತು. ರಷ್ಯಾದಿಂದ ಮೈನವಿರೇಳಿಸುವ ಸುದ್ದಿಗಳು ಬರತೊಡಗಿದ್ದವು. ಟ್ರಾಟ್‌ಸ್ಕಿ ನೇತೃತ್ವದಲ್ಲಿ ರಷ್ಯ ವಿಶ್ವದ ಒಂದು ಬೃಹತ್ ಶಕ್ತಿಯಾಗಿ ಹೊರ ಹೊಮ್ಮುವ ಸೂಚನೆಗಳನ್ನು ನೀಡತೊಡಗಿದಂತೆ, ಅಮೆರಿಕಾದ ಕಾರ್ಮಿಕ ಆಂದೋಲನಕ್ಕೆ ಹೊಸ ಸ್ಫೂರ್ತಿ ದೊರೆಯಿತು. 'ಶ್ರೀಮಂತರು ಮತ್ತಷ್ಟು ಶ್ರೀಮಂತರಾಗುತ್ತಿದ್ದಾರೆ; ಬಡವರು ಮತ್ತಷ್ಟು ಬಡವರಾಗುತ್ತಿದ್ದಾರೆ' ಎಂಬ ಸಾಮಾನ್ಯಾಭಿಪ್ರಾಯಕ್ಕೆ ಕೆಲವು ವಲಯಗಳಲ್ಲಿ ಮನ್ನಣೆ ದೊರೆಯಲಾರಂಭಿಸಿತು. ಸ್ವತಃ

ದುಡಿಯುವ ಹುಡುಗರಾಗಿದ್ದ ಜಯಪ್ರಕಾಶರ ಯುವ ಚೈತನ್ಯ ಸಹಜವಾಗಿ, ಈ ಎಡಪಂಥೀಯತೆಯ ಮೊದಲ ತೆಳು ಅಲೆಗೇ ಆಕರ್ಷಿತಗೊಂಡಿತು. ಇದರಿಂದಾಗಿ ಜಯಪ್ರಕಾಶರ ಆಸಕ್ತಿ ವಿಜ್ಞಾನದಿಂದ ಸಮಾಜಶಾಸ್ತ್ರದ ಕಡೆ ಹೊರಳಿತು. ಭಾರತದ ಸ್ವಾತಂತ್ರ್ಯ ಹೋರಾಟವೂ ಅವರ ಮನಸ್ಸಿನ ಹಿನ್ನೆಲೆಯಲ್ಲಿದ್ದುದರಿಂದ, ಅವರು ವಿಜ್ಞಾನ ಬಿಟ್ಟು ಸಮಾಜಶಾಸ್ತ್ರದ ಅಧ್ಯಯನವನ್ನು ತಮ್ಮ ವ್ಯಾಸಂಗಕ್ಕಾಗಿ ಆಯ್ಕೆಮಾಡಿಕೊಂಡರು. ಇದಕ್ಕಾಗಿ ಅವರು ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯವನ್ನು ತೊರೆದು ವಿಸ್ಕಾನ್ಸಿನ್ ವಿಶ್ವವಿದ್ಯಾಲಯಕ್ಕೆ ಹೋದರು.

ವಿಸ್ಕಾನ್ಸಿನ್ ವಿಶ್ವವಿದ್ಯಾಲಯ, ಅಮೆರಿಕಾದ ಅತ್ಯಂತ ಪ್ರಗತಿಪರ ವಿಶ್ವವಿದ್ಯಾಲಯ ವೆಂದು ಹೆಸರು ಗಳಿಸಿತ್ತು. ಜಯಪ್ರಕಾಶ್‌ರಲ್ಲಿ ವಿಕಾಸಗೊಳ್ಳುತ್ತಿದ್ದ ಎಡಪಂಥೀಯ ಮನೋಭಾವಕ್ಕೆ ಅಲ್ಲಿ ಪೂರಕ ವಾತಾವರಣವಿತ್ತು. ಬಡವಿದ್ಯಾರ್ಥಿಯಾಗಿ ಸಂಕೋಚದಿಂದ ಒಂಟಿತನವನ್ನು ಅನುಭವಿಸುತ್ತಿದ್ದ ಜಯಪ್ರಕಾಶ್, ಸಮಾಜ ವಿಜ್ಞಾನದ ಉತ್ಸುಕ ವಿದ್ಯಾರ್ಥಿಗಳ ಸಮುದಾಯದಲ್ಲಿ ಆತ್ಮೀಯ ಗೆಳೆತನದ ಮೊದಲ ಅನುಭವ ಪಡೆದರು. ಪೋಲೆಂಡ್‌ನ ಜ್ಯೂ ಜನಾಂಗಕ್ಕೆ ಸೇರಿದ ಅವ್ರೊಮ್ ಲ್ಯಾಂಡಿ ಎಂಬಾತ ಜಯಪ್ರಕಾಶರ ನಿಕಟ ಒಡನಾಡಿಯಾದ. ಜಯಪ್ರಕಾಶ್ ಈಗ ಸೂಟು-ಬೂಟು-ಟೈಗಳ ಸಂಪೂರ್ಣ ಅಮೆರಿಕನ್ ವಿದ್ಯಾರ್ಥಿಯಾಗಿ ಮಾರ್ಪಟ್ಟಿದ್ದರು.

ಮಾರ್ಕ್ಸ್‌ವಾದ-ಕಮ್ಯೂನಿಸಂಗಳ ಪ್ರಭಾವ

ಅವ್ರೊಮ್ ಲ್ಯಾಂಡಿ ಆಧುನಿಕ ಸಮಾಜ ವಿಜ್ಞಾನದ ಶ್ರದ್ಧಾಪೂರ್ಣ ವಿದ್ಯಾರ್ಥಿ ಯಾಗಿದ್ದರು. ಆತ ಜಯಪ್ರಕಾಶಕರಿಗೆ ಅತ್ಯಂತ ತಾಜಾ ಸಮಾಜವಾದೀ ಸಾಹಿತ್ಯವನ್ನು ಒದಗಿಸುತ್ತಿದ್ದನು. ಕಾರ್ಲ್‌ಮಾರ್ಕ್ಸ್, ಲೆನಿನ್, ಟ್ರಾಟ್‌ಸ್ಕಿ, ಪ್ಲೆಖನೋವ್, ರೋಸಾ ಲಕ್ಸಂಬರ್ಗ್ ಮುಂತಾದವರ ಕೃತಿ-ಲೇಖನಗಳನ್ನಷ್ಟೇ ಅಲ್ಲದೆ, ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಘದ ಭಾರತೀಯ ಸದಸ್ಯ ಎಂ.ಎನ್. ರಾಯ್ ಅವರ ಬಿಡಿ ಲೇಖನಗಳು, ಕರಪತ್ರಗಳು ಮತ್ತು ಅಸಹಕಾರದ ದುಷ್ಪರಿಣಾಮ ಹಾಗೂ ಸಂಕ್ರಮಣಾವಸ್ಥೆಯ ಭಾರತ ಮುಂತಾದ ಪುಸ್ತಕಗಳನ್ನು ಜಯಪ್ರಕಾಶರಿಗೆ ಓದಲು ಕೊಡುತ್ತಿದ್ದನು. ಮಾನವ ಇತಿಹಾಸವನ್ನು ಮೊದಲ ಬಾರಿಗೆ ಯಾವುದೇ ಪಾರಮಾರ್ಥಿಕ ಕ್ಲೀಷೆಗಳಿಲ್ಲದೆ ವಿಶ್ಲೇಷಿಸಿದ್ದ ಕಾರ್ಲ್‌ಮಾರ್ಕ್ಸ್, ತನ್ನ ದಾಸ್ ಕ್ಯಾಪಿಟಲ್ ಸಂಪುಟಗಳ ಮೂಲಕ ಜಯಪ್ರಕಾಶರ ಕನಸಿನ ಮಹನ್ನೋತ ನಾಯಕನಾಗಿ ಮೂಡತೊಡಗಿದ.

ಈ ಮಧ್ಯೆ ಜಯಪ್ರಕಾಶರಿಗೆ, ರಷ್ಯನ್ ಜ್ಯೂ ಜನಾಂಗಕ್ಕೆ ಸೇರಿದ ದರ್ಜಿಯೊಬ್ಬನ ಮನೆಯಲ್ಲಿ ಆಗಾಗ್ಗೆ ನಡೆಯುತ್ತಿದ್ದ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳ ಸಭೆಗಳಿಗೆ ಹೋಗುವ ಅವಕಾಶ ದೊರೆಯಿತು. ಅಲ್ಲದೆ ಕಮ್ಯೂನಿಸ್ಟ್ ಪಕ್ಷ ವಿಶ್ವವಿದ್ಯಾಲಯದಲ್ಲಿ ಸಂಘಟಿಸುತ್ತಿದ್ದ 'ಸಂಜೆಯ ಚರ್ಚಾಗೋಷ್ಠಿ'ಗಳಲ್ಲಿಯೂ ಅವರ ಆಸಕ್ತಿ ಬೆಳೆಯಿತು. ದಿನೇ ದಿನೇ ಅಮೆರಿಕಾದ ಬಂಡವಾಳವಾದವನ್ನು ಕುರಿತ ಅವರ ಅಭಿಪ್ರಾಯ ಬದಲಾಗತೊಡಗಿತು. ಬಂಡವಾಳಶಾಹಿಯ

ಇನ್ನೊಂದು ಮುಖ—ಅಶ್ಲೀಲ ಮುಖ—ಗಗನಚುಂಬಿ ಕಟ್ಟಡಗಳ ಅಡಿಯಲ್ಲಿರುವ ಜುಗ್ಗಿ ಜೋಪಡಿಗಳಲ್ಲಿ ಸವೆಯುವ (ಅ)ವರ್ಣೀಯರ ಮುಖಗಳಲ್ಲಿ ಮೂರ್ತಗೊಂಡಿರುವುದನ್ನು ಅವರು ಕಂಡರು. ಸೋವಿಯತ್ ಕಮ್ಯೂನಿಸ್ಟ್ ಪಕ್ಷದ ಬಗ್ಗೆ ಅವರ ಅಭಿಮಾನ ಬೆಳೆಯತೊಡಗಿತು. ಮಾರ್ಕ್ಸ್‌ನ ಸಮಾಜವಾದಿ ತತ್ವಗಳು ಮಾತ್ರ ಜಗತ್ತನ್ನು ಬದಲಿಸಬಲ್ಲದು ಮತ್ತು ಭಾರತದಲ್ಲಿನ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅನ್ಯಾಯಗಳನ್ನೂ ತೊಡೆದುಹಾಕಲು ನೆರವಾಗಬಲ್ಲವು ಎಂಬ ಬಲವಾದ ನಂಬಿಕೆ ಅವರಲ್ಲಿ ಬೇರೂರಿತು.

ಅಮೆರಿಕಾಕ್ಕೆ ಬಂದ ಒಂದು ವರ್ಷದ ಅವಧಿಯಲ್ಲಿ ಜಯಪ್ರಕಾಶ್ ಮನೆಗೆ ಪತ್ರ ಬರೆದಿದ್ದೇ ಅಪರೂಪ. ಪ್ರಭಾವತಿಯವರಿಗೆ ಅಪರೂಪಕ್ಕೊಮ್ಮೆ ಪತ್ರ ಬರೆಯುತ್ತಿದ್ದರಾದರೂ, ಯಾವೊಂದು ಪತ್ರದಲ್ಲೂ ತಮ್ಮ ಬೌದ್ಧಿಕ ಆಲೋಚನೆಗಳನ್ನು ಪ್ರಕಟಪಡಿಸಿರಲಿಲ್ಲ. ತಾವು ಸಮಾಜವಾದದ ಕಡೆ ಆಕರ್ಷಿತರಾಗಿ, ಅದರೆಲ್ಲಾ ತತ್ವಗಳಿಗೆ ತಮ್ಮನ್ನು ತೆತ್ತುಕೊಂಡಿರುವ ವಿಷಯವನ್ನು ಮಿತ್ರ ವಿಶ್ವೇಶ್ವರ್ ಎಂಬುವವರಿಗೆ ಮಾತ್ರ ಜಯಪ್ರಕಾಶ್ ತಿಳಿಸಿದ್ದರು. ಅವರು ತಮ್ಮ ಪತ್ರದಲ್ಲಿ ಮಾರ್ಕ್ಸ್‌ವಾದ ವಿಶ್ವದ ಇತಿಹಾಸವನ್ನು ಹೊಸ ರೀತಿಯಲ್ಲಿ ಅಧ್ಯಯನ ಮಾಡಿರುವ ಬಗ್ಗೆ, ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಈ ತಾತ್ವಿಕತೆ ಎಷ್ಟು ಪೂರಕ ಮುಂತಾದ ಅಂಶಗಳನ್ನು ವಿವರಿಸಿದ್ದರು. ವಿಶ್ವೇಶ್ವರ್ ಅವರು ಈ ಪತ್ರವನ್ನು ರಾಜೇಂದ್ರ ಪ್ರಸಾದರಿಗೆ ಕಳಿಸಿದರು. ಜಯಪ್ರಕಾಶರ ಈ ಆಲೋಚನೆಗಳ ಬಗ್ಗೆ ಪ್ರಸಾದರು ಗಾಬರಿಯಿಂದ ಗಾಂಧೀಜಿಗೆ ತಿಳಿಸಿದಾಗ, ಅವರು "ಆತ ಭಾರತಕ್ಕೆ ಬರಲಿ, ಇಲ್ಲಿನ ಬದುಕನ್ನು ನೇರವಾಗಿ ನೋಡಿದಾಗ ಆತ ತನ್ನೆಲ್ಲಾ ಅಭಿಪ್ರಾಯಗಳನ್ನೂ ಬದಲಿಸಿಕೊಳ್ಳುತ್ತಾನೆ" ಎಂದರು!

ಮಾಸ್ಕೋದೆಡೆಗೆ ಮನಸು

ಆದರೆ ಒಂದು ದಿನ ಜಯಪ್ರಕಾಶರಿಂದ, ಹಣ ಕೇಳಿ ಪತ್ರ ಬಂದಾಗ ಅವರ ಕುಟುಂಬ ತಲ್ಲಣಿಸಿತು. ತಾವು ಉನ್ನತ ವ್ಯಾಸಂಗಕ್ಕಾಗಿ ಮಾಸ್ಕೋಗೆ ಹೋಗಬೇಕೆಂದೂ, ಅಲ್ಲಿ ಎಲ್ಲ ಏರ್ಪಾಡುಗಳನ್ನು ಮಾಡಲಾಗಿದೆಯೆಂದೂ; ಆದರೆ ಅಲ್ಲಿಗೆ ಹೋಗಲು ಪ್ರಯಾಣ ವೆಚ್ಚವನ್ನು ಮಾತ್ರ ತಾವು ಭರಿಸಬೇಕಾಗಿದೆಯೆಂದೂ ಜಯಪ್ರಕಾಶ್ ಬರೆದಿದ್ದರು. ೧೯೨೩ರ ಪೇಷಾವರ್ ಒಳಸಂಚಿನ ಮೊಕದ್ದಮೆಗೆ ಸಂಬಂಧಿಸಿದಂತೆ ಆಗ ಬ್ರಿಟಿಷ್ ಗುಪ್ತಚರ ದಳದವರು ಇಂಡಿಯಾದ ಎಡಪಂಥೀಯರನ್ನು ಅತ್ಯಂತ ಅಮಾನುಷ ರೀತಿಯಲ್ಲಿ ಬೇಟೆಯಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ, ಜಯಪ್ರಕಾಶ್ ಕಮ್ಯೂನಿಸ್ಟ್ ಆಗಿ ಪರಿವರ್ತನೆಗೊಂಡಿರುವ ಸಮಾಚಾರ ಸಹಜವಾಗಿ ಅವರ ಆಪ್ತ ಬಂಧುವರ್ಗದಲ್ಲಿ ಆತಂಕವನ್ನುಂಟುಮಾಡಿತು.

ಜಯಪ್ರಕಾಶ್ ಮಾಸ್ಕೋಗೆ ಹೋಗಲು ಉದ್ದೇಶಿಸಿದ್ದುದು ನಿಜ. ಜಯಪ್ರಕಾಶ್‌ರನ್ನು ಅಮೆರಿಕಾದ ಕಮ್ಯೂನಿಸ್ಟ್ ಪಕ್ಷದ ವಲಯಗಳಲ್ಲಿ ಇಂಡಿಯಾದ, ಕೆಲವೊಮ್ಮೆ ಏಷ್ಯಾದ ಪ್ರತಿನಿಧಿಯೆಂದು ಪರಿಚಯ ಮಾಡಿಕೊಡಲಾಗುತ್ತಿತ್ತು. ಹೀಗಾಗಿ ಪಕ್ಷದ ಪೌರ್ವಾತ್ಯ

ವಿಭಾಗವನ್ನು ನೋಡಿಕೊಳ್ಳುತ್ತಿದ್ದ ಇಬ್ಬರು ಮುಖಂಡರ ನಿಕಟ ಪರಿಚಯ ಜಯಪ್ರಕಾಶರಿಗೆ ಲಭಿಸಿತು. ಅವರಲ್ಲೊಬ್ಬರು ಜಯಪ್ರಕಾಶರಿಗೆ ಮಾಸ್ಕೋಗೆ ಹೋಗಿ ಅಲ್ಲಿ ಹೊಸದಾಗಿ ಆರಂಭವಾಗಿರುವ ಓರಿಯಂಟಲ್ ವಿಶ್ವವಿದ್ಯಾಲಯದಲ್ಲಿ ತಮ್ಮ ಅಧ್ಯಯನವನ್ನು ಮುಗಿಸಿಕೊಂಡು ಕಮ್ಯೂನಿಸ್ಟ್ ಸಿದ್ಧಾಂತ ಹಾಗೂ ತಂತ್ರಗಳಲ್ಲಿ ತರಬೇತಿ ಪಡೆಯಲು ಸಲಹೆ ಮಾಡಿದರು. ಅಲ್ಲಿ ಅವರ ಜೀವನ ವೆಚ್ಚವನ್ನೂ ಮತ್ತು ಶಿಕ್ಷಣ ಶುಲ್ಕವನ್ನೂ ಸೋವಿಯತ್ ಸರ್ಕಾರವೇ ವಹಿಸಿಕೊಳ್ಳುವುದೆಂದು ಸಹ ತಿಳಿಸಲಾಯಿತು. ತಮ್ಮ ಬದುಕಿನಲ್ಲಿ ಹೊಸದೊಂದು ಅಧ್ಯಾಯವೇ ಆರಂಭವಾಗಲಿದೆ ಎಂದು ಸಂತಸಪಟ್ಟ ಜಯಪ್ರಕಾಶರು, ಪ್ರಯಾಣ ವೆಚ್ಚಕ್ಕಾಗಿ ತಂದೆಯವರಿಗೆ ಪತ್ರ ಬರೆದರು. ಅಲ್ಲದೆ, ತಮ್ಮೊಡನೆ ಬರುವಂತೆ ಪ್ರಭಾವತಿಗೂ ಸಹ ಕಾಗದ ಹಾಕಿದರು. ಈ ಮೂಲಕ ಅವರು ತಮ್ಮ ವೈವಾಹಿಕ ಜೀವನವನ್ನು ಆರಂಭಿಸಲು ಬಯಸಿದ್ದರು. ಆದರೆ ಗಾಂಧೀಜಿ-ಕಸ್ತೂರಬಾ ಅವರ ಗಾಢಪ್ರಭಾವಕ್ಕೆ ಸಿಲುಕಿದ್ದ ಪ್ರಭಾವತಿ, ಈ ಕರೆಯನ್ನು ನಿರಾಕರಿಸಿ ಜಯಪ್ರಕಾಶರನ್ನು ನಿರಾಸೆಗೊಳಿಸಿದರು!.

ದುರ್ಭರ ಜೀವನ – ಕಮರಿದ ಆಸೆ

ಅದೇನೇ ಇರಲಿ, ಜಯಪ್ರಕಾಶರಿಗೆ ಉತ್ತರ ಬಂದದ್ದು ರಾಜೇಂದ್ರ ಪ್ರಸಾದ್ ಅವರಿಂದ. ರಾಜೇಂದ್ರ ಪ್ರಸಾದ್ ಅವರು ಪ್ರಭಾವತಿದೇವಿ ಅವರ ಅಕ್ಕ ವಿದ್ಯಾದೇವಿಯವರನ್ನು ವಿವಾಹವಾಗಿದ್ದು; ಜಯಪ್ರಕಾಶರ ಆಪ್ತ ಬಂಧು ಬಳಗದವರಾಗಿದ್ದರು. ಪ್ರಸಾದರು ತಮ್ಮ ಪತ್ರದಲ್ಲಿ ಜಯಪ್ರಕಾಶರ ಬುದ್ಧಿಮತ್ತೆ ಮತ್ತು ದೇಶಪ್ರೇಮವನ್ನು ಶ್ಲಾಘಿಸಿ, ಅವರ ಪಾತ್ರವಿರುವುದು ಭಾರತದಲ್ಲಿನ ಅನ್ಯಾಯ, ಅಸಮಾನತೆಗಳ ವಿರುದ್ಧದ ಹೋರಾಟದಲ್ಲೇ ಹೊರತು ಸೋವಿಯತ್ ಒಕ್ಕೂಟಕ್ಕೆ ಸಂಬಂಧಿಸಿದ ತಾತ್ವಿಕ ರಗಳೆಯಲ್ಲಲ್ಲ ಎಂದು ವಿವರಿಸಿ ಅವರ ಮನಃಪರಿವರ್ತನೆಗೆ ಪ್ರಯತ್ನಿಸಿದ್ದರು. ಇಂಡಿಯಾದಲ್ಲಿ ಕಮ್ಯೂನಿಸ್ಟರಿಗೆ ಒದಗಿರುವ ಸ್ಥಿತಿಯನ್ನು ವಿವರಿಸಿ, ಒಮ್ಮೆ ಜಯಪ್ರಕಾಶ್ ರಷ್ಯಾಕ್ಕೆ ಹೋಗಿ ಬೋಲ್ಷೆವಿಕ್ ಪಕ್ಷದ ಸಂಪರ್ಕ ಪಡೆದರಾದರೆ, ಬ್ರಿಟಿಷ್ ಸರ್ಕಾರ ಅವರಿಗೆ ಸ್ವದೇಶಕ್ಕೆ ಹಿಂತಿರುಗಲು ಅವಕಾಶ ನೀಡಲಾರದು ಎಂಬ ಆತಂಕವನ್ನು ರಾಜೇಂದ್ರ ಪ್ರಸಾದ್ ವ್ಯಕ್ತಪಡಿಸಿದರು.

ಈ ಉತ್ತರದಿಂದ ಜಯಪ್ರಕಾಶ್ ಬೇಸರಗೊಂಡರು. ತಮ್ಮ ಘನ ಆದರ್ಶಗಳನ್ನು ಅರ್ಥಮಾಡಿಕೊಳ್ಳಲು ಎಲ್ಲರೂ ವಿಫಲರಾಗಿದ್ದಾರೆಂದು ತೀವ್ರ ನಿರಾಶೆಗೊಳಗಾದರು. ಏನು ಮಾಡಲೂ ತೋಚದೆ, ಮಾಸ್ಕೋ ಪ್ರಯಾಣದ ವೆಚ್ಚವನ್ನು ತಾವೇ ದುಡಿದು ಗಳಿಸುವ ಯೋಚನೆಯನ್ನೂ ಮಾಡಿದರು. ಆ ಹೊತ್ತಿಗೆ ಆ ವರ್ಷದ ವ್ಯಾಸಂಗ ಕ್ರಮವೂ ಮುಗಿದಿತ್ತು. ಮತ್ತೆ ಕೆಲಸದ ಬೇಟೆ ಆರಂಭವಾಗಿತ್ತು.

ಅವರು ಈ ಮಧ್ಯೆ ಕಸಾಯಿಖಾನೆಯಲ್ಲಿ ಮಾಂಸದ ಯಾಂತ್ರಿಕ ಸಂಸ್ಕರಣೆಯ ಕಾರ್ಯದಲ್ಲಿ ಸ್ವಲ್ಪ ಅನುಭವ ಪಡೆದಿದ್ದರು. ಆದರೆ ಈ ಬಾರಿ ಅವರ ಯಾವ ಅನುಭವವೂ ಪ್ರಯೋಜನಕ್ಕೆ ಬರಲಿಲ್ಲ—ಚಿಕಾಗೋದಲ್ಲಿ ಕೆಲಸಕ್ಕಾಗಿ ಎಷ್ಟು ಅಲೆದರೂ, ವಿದೇಶಿಯ

ರೆಂದೋ, ವರ್ಣೀಯರೆಂದೋ ಅವರಿಗೆ ಕೆಲಸವನ್ನು ನಿರಾಕರಿಸಲಾಯಿತು. ಕೊನೆಗೆ ಜಯಪ್ರಕಾಶ್ ನೀಗ್ರೋ ಕೇರಿಗಳಲ್ಲಿ ಮುಖದ ಬಣ್ಣ ಬದಲಾಯಿಸುವುದು ಎಂದು ಹೇಳಲಾದ ಕ್ರೀಮ್‌ಗಳನ್ನು, ಗುಂಗುರು ಕೂದಲನ್ನು ನೇರ ಮಾಡುತ್ತದೆಂದು ಹೇಳಲಾದ ಸಾಧನಗಳನ್ನು ಮಾರುತ್ತಾ ಬದುಕನ್ನು ತಳ್ಳುವ ಪರಿಸ್ಥಿತಿ ಒದಗಿತು. ದಿನಕ್ಕೆ ಎರಡು ಬಾರಿ ಊಟ ಮಾಡುವುದೂ ದುರ್ಭರವಾಯಿತು. ಇದರ ಪರಿಣಾಮವಾಗಿ ಕ್ರಮೇಣ ಅವರ ಆರೋಗ್ಯ ಹದಗೆಟ್ಟಿತು. ಆ ಅಸಹಾಯಕ ಸ್ಥಿತಿಯಲ್ಲಿ ಅವರು ಹಾಸಿಗೆ ಹಿಡಿದರು.

ಎಷ್ಟು ಕಾಲವಾದರೂ ಜಯಪ್ರಕಾಶರಿಂದ ಪತ್ರ ಬರದಿದ್ದುದರಿಂದ ಆತಂಕಗೊಂಡ ಅವರ ತಂದೆ, ಅಮೆರಿಕಾದಲ್ಲಿದ್ದ ಜಯಪ್ರಕಾಶರ ಸ್ನೇಹಿತರೊಬ್ಬರಿಂದ ಪರಿಸ್ಥಿತಿಯನ್ನು ವಿಚಾರಿಸಿಕೊಂಡರು. ಜಯಪ್ರಕಾಶ್ ಹಣಕ್ಕಾಗಿ, ಹರ್ಷ ಬಾಬು ಅವರಿಗೆ ಕಾಗದ ಬರೆಯಬೇಕೆಂದಿರುವಷ್ಟರಲ್ಲೇ ಅವರಿಂದ ಹಣ ಬಂದಿತು. ತಂದೆಯವರು ತಮ್ಮ ಭೂಮಿ ಕಾಣಿಯನ್ನೆಲ್ಲಾ ಒತ್ತೆ ಇಟ್ಟು ಹಣ ಕಳಿಸಿದ್ದರು. ಚಿಕಿತ್ಸೆಯ ಖರ್ಚುವೆಚ್ಚಗಳನ್ನು ನಿರ್ವಹಿಸುವುದರ ಹೊತ್ತಿಗೆ ಮತ್ತು ಸಕಾಲದಲ್ಲಿ ಬಂದ ತಂದೆಯವರ ಮಮತೆಯ ನೆರವಿನ ಹಿನ್ನೆಲೆಯಲ್ಲಿ, ಸೋವಿಯತ್ ಒಕ್ಕೂಟಕ್ಕೆ ಹೋಗುವ ಅವರ ಆಸೆ ಕಮರಿಹೋಗಿತ್ತು.

ಪದವಿ ಪ್ರದಾನ-ಶ್ಲಾಘನೆ

೧೯೨೮ರ ಆಗಸ್ಟ್‌ನಲ್ಲಿ ಜಯಪ್ರಕಾಶ್ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಪದವಿ ಪಡೆದರು. ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಜಯಪ್ರಕಾಶರಿಗೆ ಓಹಿಯೋ ವಿಶ್ವವಿದ್ಯಾಲಯವು ಸ್ನಾತಕೋತ್ತರ ಪದವಿಗಾಗಿ ವಿದ್ಯಾರ್ಥಿ ವೇತನವನ್ನು ನೀಡಿತು. ಅವರು ತಮ್ಮ ಸ್ನಾತಕೋತ್ತರ ಪದವಿಗಾಗಿ 'ಸಮಾಜದ ಸ್ಥಿತ್ಯಂತರಗಳು' ಎಂಬ ವಿಷಯದ ಮೇಲೆ ಮಹಾಪ್ರಬಂಧವೊಂದನ್ನು ಬರೆದರು. ಅವರು ತಮ್ಮ ಈ ಪ್ರಬಂಧದಲ್ಲಿ ಮಾರ್ಕ್ಸ್‌ನ ದ್ವಂದ್ವಮಾನ ಮತ್ತು ಚಾರಿತ್ರಿಕ ಭೌತವಾದದ ತತ್ವಗಳ ಹಿನ್ನೆಲೆಯಲ್ಲಿ; ಉತ್ಪಾದನಾ ಸಾಧನಗಳು ಮತ್ತು ತಂತ್ರಗಳಲ್ಲಿ ಆಗುವ ಬದಲಾವಣೆಯೇ ಹೇಗೆ ಸಮಾಜದ ಬದಲಾವಣೆಗೂ ಕಾರಣವಾಗುತ್ತದೆ ಎಂದು ವಿವರಿಸಿದ್ದರು. ಅವರ ಈ ಪ್ರಬಂಧವನ್ನು ವರ್ಷದ ಅತ್ಯುತ್ತಮ ಪ್ರಬಂಧವೆಂದು ಆಯ್ಕೆಮಾಡಲಾಯಿತು. ೧೯೨೯ ರಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಜಯಪ್ರಕಾಶ್, ನಂತರ ಸಂಶೋಧನೆಯನ್ನು ಕೈಗೊಳ್ಳಲು ಬಯಸಿದರು. ಆದರೆ ತಾಯಿ ಫೂಲ್‌ರಾಣಿದೇವಿಯ ಆರೋಗ್ಯ ಸ್ಥಿತಿ ಹದಗೆಟ್ಟಿದುದರಿಂದ ಅವರು ಈ ಯೋಜನೆಯನ್ನೂ ಕೈಬಿಟ್ಟು ಇಂಡಿಯಾಕ್ಕೆ ಹಿಂತಿರುಗುವ ಆಲೋಚನೆ ಮಾಡಬೇಕಾಯಿತು.

ಜಯಪ್ರಕಾಶ್ ಅಧ್ಯಾಪಕ ವೃಂದದ ಮಧ್ಯೆ ಮೆಚ್ಚುಗೆ ಮತ್ತು ಗೌರವವನ್ನು ಸಂಪಾದಿಸಿದ್ದರು. ಈ ಅಧ್ಯಾಪಕರು ಜಯಪ್ರಕಾಶರಿಗೆ ನೀಡಿದ ಅರ್ಹತಾ ಪತ್ರಗಳಲ್ಲಿ ಪ್ರತಿಯೊಬ್ಬರೂ ಅವರ ಸೂಕ್ಷ್ಮ ಬುದ್ಧಿಮತ್ತೆ, ಸ್ವಂತ ಆಲೋಚನಾ ಶಕ್ತಿ, ಸಹಜವಾದ ಆದರ್ಶಗುಣ, ನೈತಿಕ ಸಾಮರ್ಥ್ಯ, ಮಾನವ ಕಲ್ಯಾಣದ ಬಗೆಗಿರುವ ಕಳಕಳಿ, ಹೋರಾಟದ

ಮನೋಭಾವ ಮುಂತಾದ ಸದ್ಗುಣಗಳನ್ನು ಮನಸಾರ ಕೊಂಡಾಡಿದರು. ಒಬ್ಬ ಅಧ್ಯಾಪಕರಂತೂ ಜಯಪ್ರಕಾಶರನ್ನು ವಿಶ್ವವಿದ್ಯಾಲಯ ಕಂಡಿರುವ, ಅತ್ಯುತ್ತಮ ವಿದ್ಯಾರ್ಥಿಗಳ ಪೈಕಿ ಒಬ್ಬರೆಂದು ಗುರುತಿಸಿದರು. ಆದರೆ ಇವುಗಳೆಲ್ಲದರ ಮಧ್ಯೆ, ಪ್ರೊಫೆಸರ್ ಡೂಮ್ಲೆ ಎಂಬುವವರ ಈ ಮಾತು ಈಗ ಅತ್ಯಂತ ಗಮನಾರ್ಹವಾಗಿ ಕಾಣುತ್ತದೆ: "ಜಯಪ್ರಕಾಶರಲ್ಲಿ ನಾಯಕನ ಗುಣಗಳು ಮನೆ ಮಾಡಿವೆ. ಆದರೆ ಇವರಲ್ಲಿರುವ ಆಲೋಚನೆಯಲ್ಲಿನ ಆಕ್ರಮಣಶೀಲತೆ ಕಾರ್ಯಾಚರಣೆಯಲ್ಲಿಲ್ಲ; ಮಾನವನ ಅಭ್ಯುದಯದ ಆದರ್ಶಗಳಿವೆಯಾದರೂ, ಇವರು ಬದುಕಿನ ಬಗ್ಗೆ ಯಾವುದೇ ಮೂಲಭೂತ ದಾರ್ಶನಿಕತೆಯನ್ನು ರೂಪಿಸಿಕೊಂಡಂತೆ ಕಾಣುವುದಿಲ್ಲ."

ಏಳು ವರ್ಷಗಳ ಹಿಂದೆ ಮುಗ್ಧರಾಗಿ ಅಮೆರಿಕಾಕ್ಕೆ ಬಂದಿದ್ದ ಜಯಪ್ರಕಾಶ್ ಈಗ ತಳಮಳದ ಯುವಕರಾಗಿ, ಕಟ್ಟಾ ಕಮ್ಯೂನಿಷ್ಟರಾಗಿ ರೂಪುಗೊಂಡು ಸ್ವದೇಶಕ್ಕೆ ಹಿಂತಿರುಗಲು ಸಿದ್ಧರಾಗಿದ್ದರು. ಜಯಪ್ರಕಾಶ್ ಈ ಏಳು ವರ್ಷಗಳ ಅಧ್ಯಯನದ ಹಿನ್ನೆಲೆಯಲ್ಲಿ ಹಲವಾರು ತಾತ್ವಿಕ ಟಿಪ್ಪಣಿಗಳನ್ನು ಮಾಡಿಕೊಂಡಿದ್ದರು. ಮಧ್ಯೆ ಮಧ್ಯೆ ಪದ್ಯಗಳನ್ನೂ ಸಹ ಬರೆದಿದ್ದರು. ತಾಯಿಯನ್ನು ಆದರ್ಶವಾಗಿಟ್ಟುಕೊಂಡಂತೆ ಕಾಣುವ, ಹೆಂಗಸನ್ನು ಕುರಿತ ಈ ಪದ್ಯದ ಸಾಲುಗಳು ಈ ಯುವ ಮಾರ್ಕ್ಸ್‌ವಾದಿಯ ಅಂತರಾಳದ ಮಾರ್ದವತೆಯನ್ನು ಪ್ರತಿಬಿಂಬಿಸುವಂತಿವೆ:

ನಿರ್ಭಾವ, ನಿಶ್ಚಲ, ನಿಸ್ತೇಜ, ಅವಳು—
ಘಾಸಿಗೊಂಡ ಚಿಟ್ಟೆಯಂತೆ ಮನೆಯಲ್ಲಿ ಮೆಲ್ಲಗೆ ನಡೆಯುವಳು.
ಅವಳ ಪಾಲಿಷ್ಟೆ: ದೇಹದಂಡನೆ,
ಆತ್ಮ ದಂಡನೆಯ-ನಿರಂತರ ದುಡಿಮೆಯ ಹಗಲುಗಳು.
ಪುರುಷನ ಸ್ವಾರ್ಥ ಕ್ರೌರ್ಯಗಳು ತುಂಬಿದ ರಾತ್ರಿಗಳು
ಆ ಎಲ್ಲ ನೋವು ತುಂಬಿದ ರಾತ್ರಿಗಳೂ
ಆ ಜಡ, ನಿರಾರ್ದ್ರ ದೈನಿಕಗಳೂ
ಆಕೆಗೆ, ಧರ್ಮಪತ್ನಿಯ ಆದ್ಯ ಕರ್ತವ್ಯಗಳು;
ಆರು ಹೆರಿಗೆ ನೋವುಗಳು-ದೇಹ ಮನಸ್ಸುಗಳೆರಡೂ ಒಡೆದ ಚೂರುಗಳು.

೩. ಗಾಂಧಿ ಸನಿಹದಲ್ಲಿ : ಜನಶಕ್ತಿಯ ಮಧ್ಯೆ

ಗಾಂಧೀಜಿ ಆಗತಾನೇ ಅರವತ್ತು ವರ್ಷಗಳನ್ನು ದಾಟಿದ್ದರು. ಸುಕ್ಕುಗೆನ್ನೆಯ, ಮುರುಕು ಹಲ್ಲಿನ, ಹಳೆಯ ಕನ್ನಡಕದ, ತುಂಡು ಪಂಚೆಯ ಈ ತೆಳುವಾದ ಕಪ್ಪು ಮನುಷ್ಯ ತನ್ನ ಹೊಸಬಗೆಯ ವಿಚಾರಶೀಲತೆಯಿಂದ, ನೈತಿಕ ಬಲದಿಂದ ಇಡೀ ಭಾರತದ ಚೈತನ್ಯವನ್ನು ಉದ್ದೀಪ್ತಗೊಳಿಸಿದ್ದರು. ಕಾಂಗ್ರೆಸ್ ಆಂದೋಲನದ ಹಲವಾರು ಏಳು ಬೀಳುಗಳ ನಡುವೆಯೂ ಜನ, ಗಾಂಧೀಜಿಯಲ್ಲಿ ಅಪಾರ ವಿಶ್ವಾಸವನ್ನು ಉಳಿಸಿಕೊಂಡಿದ್ದರು: ನಿರಂತರವಾಗಿ ಬ್ರಿಟಿಷ್ ಸರ್ಕಾರವನ್ನು ರಾಜಕೀಯ ಹಾಗೂ ನೈತಿಕ ಬಿಕ್ಕಟ್ಟಿಗೆ ಸಿಲುಕಿಸಿರುವಂತಹ ಅವರ ಕಾರ್ಯಾಚರಣೆಯು ಜನರನ್ನು ಹತಾಶೆಗೊಳ್ಳದಂತೆ ತಡೆದು ನಿಲ್ಲಿಸಿತ್ತು. ಬದುಕಿನ ಎಲ್ಲ ದಿಕ್ಕುಗಳಿಂದ ಬಂದ ಜನ, ಗಾಂಧೀಜಿಯ ಆಂದೋಲನದ ಮೂಳೆ ರಕ್ತ-ಮಾಂಸವಾಗಿದ್ದರು. ವಲ್ಲಭಭಾಯಿ ಪಟೇಲ್, ಜವಾಹರಲಾಲ್ ನೆಹರೂ, ಜೆ.ಸಿ. ಕುಮಾರಪ್ಪ, ಅಶೋಕ ಮೆಹತಾ, ಅಚ್ಯುತ ಪಟವರ್ಧನ್ ಮುಂತಾದ ಹೊಸ ಜನಾಂಗದ ಉತ್ಸಾಹಿ ತರುಣರು ಗಾಂಧೀಜಿಯಿಂದ ಸೆಳೆಯಲ್ಪಟ್ಟು ಆಂದೋಲನದ ವಿವಿಧ ಹಂತಗಳಲ್ಲಿ ಕ್ರಿಯಾಶೀಲರಾಗಿದ್ದರು. ಇಡೀ ದೇಶ ತನ್ನ ಸ್ವಾತಂತ್ರ್ಯ ಹೋರಾಟದ ಶಕ್ತಿ ಕೇಂದ್ರವನ್ನು ಗಾಂಧೀಜಿ ಎಂಬ ಒಬ್ಬ ವ್ಯಕ್ತಿಯಲ್ಲಿ ಕಂಡುಕೊಂಡಿತ್ತು. ಆತನನ್ನು 'ಮಹಾತ್ಮ' ಎಂದು ಗುರುತಿಸಿತ್ತು. ಮಹಾತ್ಮನ ಆಶ್ರಮ ಈಗ ಸಹಜವಾಗಿ ದೇಶದ ಮಧ್ಯಭಾಗದಲ್ಲಿದ್ದ ವಾರ್ಧಾಕ್ಕೆ ಸ್ಥಳಾಂತರಗೊಂಡಿತ್ತು. ಇಂತಹ ಪರ್ವಕಾಲದಲ್ಲಿ ಜಯಪ್ರಕಾಶ್ ಭಾರತಕ್ಕೆ ಕಾಲಿರಿಸಿದರು.

ಜಯಪ್ರಕಾಶ್ ಪಾಟ್ನಾಕ್ಕೆ ಬಂದು, ತಮ್ಮ ಸೋದರಿಯ ಮನೆಯಲ್ಲಿ ಇಳಿದುಕೊಂಡರು. ಪ್ರಭಾವತಿ ದೇವಿ ಕೂಡಾ ಜಯಪ್ರಕಾಶರನ್ನು ಕಾಣಲು ಪಟ್ನಾಕ್ಕೆ ಆಗಮಿಸಿದ್ದರು. ಏಳು ವರ್ಷಗಳ ಕಾಲ ಗಾಂಧೀಜಿ ಆಶ್ರಮದಲ್ಲಿ 'ತರಬೇತಿ' ಪಡೆದಿದ್ದ ಆಕೆ, ಜಯಪ್ರಕಾಶರ ಕಣ್ಣಿಗೆ ಘನ ಗಂಭೀರತೆಯ, ವಯಸ್ಸಿಗೆ ಮೀರಿದ ಪ್ರಬುದ್ಧತೆಯ ಮತ್ತು ಕಾರ್ಯತತ್ಪರತೆಯ ಪ್ರತಿಮೂರ್ತಿಯಾಗಿ ಕಂಡರು.

ಜಯಪ್ರಕಾಶರಿಗೆ ಸಿತಾಬ್ದಿಯಾರಾದಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ಇಡೀ ಕುಟುಂಬದಲ್ಲಿ ಇದೇ ಮೊದಲಬಾರಿಗೆ, ಉನ್ನತ ವ್ಯಾಸಂಗವನ್ನು ಯಶಸ್ವಿಯಾಗಿ ಮುಗಿಸಿಕೊಂಡು ಬಂದಿದ್ದ ಮಗನ ಬಗ್ಗೆ ತಂದೆ ತಾಯಿಗಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಮನೆ ತುಂಬಾ ಜನ ಗುಜುಗುಟ್ಟಿತು. ಔತಣಗಳ ಮೇಲೆ ಔತಣಗಳು ನಡೆದವು. ವಾದ್ಯ ಮೇಳದವರೂ ಬಂದು ತಮ್ಮ ಪಾಲಿನ ಕೆಲಸವನ್ನು ಮುಗಿಸಿಹೋದರು.

ನಂಬಿಕೊಂಡ ತತ್ವ - ಕಣ್ಣೆದುರಿನ ವಾಸ್ತವ

ಇದೇ ಸಮಯದಲ್ಲಿ ಸಮೀಪದ ಮೊಂಘೈರ್ ಎಂಬಲ್ಲಿ ಬಿಹಾರ ಕಾಂಗ್ರೆಸ್ಸಿನ ಪ್ರಾದೇಶಿಕ ಸಮ್ಮೇಳನ ನಡೆಯಲಿದೆ ಎಂಬ ಸುದ್ದಿ ಬಂತು. 'ಬಾರ್‌ಡೋಲಿ ಸತ್ಯಾಗ್ರಹದ ವೀರ' ಸರ್ದಾರ್ ಪಟೇಲರು ಕೂಡಾ ಸಮ್ಮೇಳನಕ್ಕೆ ಬರಲಿದ್ದಾರೆ ಎಂಬ ಸುದ್ದಿಯಂತೂ ಆ ಪ್ರದೇಶದ ಜನರ ಉತ್ಸಾಹವನ್ನು ಹೆಚ್ಚಿಸಿತು. ಜಯಪ್ರಕಾಶ್ ತಮ್ಮ ಗೆಳೆಯರೊಡನೆ ಸಮ್ಮೇಳನಕ್ಕೆ ಹೋದರು. ಕಿಕ್ಕಿರಿದ ಸಭೆ, ಯಾವುದೇ ಸೈದ್ಧಾಂತಿಕ ಕ್ಲೀಷೆಗಳಿಲ್ಲದೆಯೇ ಮುಖಂಡರು ಜನರ ನುಡಿಗಟ್ಟಿನಲ್ಲಿ ಮಾಡಿದ ರೋಚಕ ಭಾಷಣಗಳು, ಮುಗಿಲು ಮುಟ್ಟಿದ ಜಯಘೋಷಗಳು ಜಯಪ್ರಕಾಶರನ್ನು ಬೆರಗುಗೊಳಿಸಿದವು. ಮೊದಲ ಬಾರಿಗೆ ಅವರಿಗೆ ಇಂಡಿಯಾದ ಜನಶಕ್ತಿಯ ಹತ್ತಿರದ ಪರಿಚಯವಾಗಿತ್ತು. ತಾವು ದೇಶದಲ್ಲಿ ಇಲ್ಲದಿದ್ದ ಏಳು ವರ್ಷಗಳಲ್ಲಿ ಜನತೆಯ ಸ್ವಾತಂತ್ರ್ಯ ಹೋರಾಟ ಮುಟ್ಟಿದ್ದ ಹೊಸ ಮಜಲಿನ ಅಂದಾಜು ಅವರಿಗೆ ಅಲ್ಲಿ ದೊರೆಯಿತು.

ಆದರೆ ಗಾಂಧೀಜಿ ಮತ್ತೊಮ್ಮೆ ತಮ್ಮ ಪ್ರಯತ್ನಗಳಲ್ಲಿ ವಿಫಲಗೊಳ್ಳುವುದು ಹೆಚ್ಚುಕಡಿಮೆ ಖಚಿತವೆನಿಸಿತ್ತು. ೧೯೨೯ರ ಕೊನೆಯೊಳಗಾಗಿ ಕಾಮನ್‌ವೆಲ್ತ್ ಚೌಕಟ್ಟಿನಲ್ಲಿಯೇ ಭಾರತಕ್ಕೆ ಸ್ವತಂತ್ರ ರಾಷ್ಟ್ರದ ಸ್ಥಾನಮಾನವನ್ನು ಪಡೆಯುವ ಅವರ ಪ್ರಯತ್ನದ ಕೊನೆಯ ಹಂತವನ್ನು ದೇಶ ಎದುರು ನೋಡುತ್ತಿತ್ತು. ಇದಕ್ಕೆ ತಕ್ಕಂತೆ, ಭಾರತಕ್ಕೆ ಸಂವಿಧಾನವೊಂದನ್ನು ರೂಪಿಸುವ ಉದ್ದೇಶದಿಂದ ಭಾರತಕ್ಕೆ ಬರಲಿರುವ ಸೈಮನ್ ಆಯೋಗದೊಡನೆ ಮಾತುಕತೆ ನಡೆಸಲು ಸ್ವಾತಂತ್ರ್ಯ ಹೋರಾಟಗಾರರನ್ನು ಆಹ್ವಾನಿಸಲಾಗಿತ್ತಾದರೂ, ಆಯೋಗದಲ್ಲಿ ಭಾರತದ ಪ್ರಾತಿನಿಧ್ಯವೇ ಇಲ್ಲದಿದ್ದುದರಿಂದ ಕಾಂಗ್ರೆಸ್ ಅದನ್ನು ಬಹಿಷ್ಕರಿಸಿತ್ತು; ಆಯೋಗದ ವಿರುದ್ಧ ದೇಶಾದ್ಯಂತ ಚಳವಳಿಯೊಂದನ್ನು ಸಂಘಟಿಸಿ ಸರ್ಕಾರದ ಧೃತಿಗೆಡಿಸಿತ್ತು. ನೆಹ್ರೂ ನೇತೃತ್ವದ ತರುಣ ಕಾಂಗ್ರೆಸ್ಸಿಗರು ಭಾರತ ಕಾಮನ್‌ವೆಲ್ತ್ ಚೌಕಟ್ಟಿನಿಂದ ಹೊರ ಬಂದು ಸಂಪೂರ್ಣ ಅರ್ಥದಲ್ಲಿ ಸ್ವತಂತ್ರ ರಾಷ್ಟ್ರವಾಗಬೇಕೆಂಬ ಬೇಡಿಕೆಯನ್ನು ಮಂಡಿಸಿ ಅದಕ್ಕಾಗಿ ಸರ್ಕಾರದ ವಿರುದ್ಧ ಕಾರ್ಯಕ್ರಮವೊಂದರ ಆಲೋಚನೆಯನ್ನೂ ಮಾಡಿದ್ದರು. ಗಾಂಧೀಜಿ, ಈ ಬಿಕ್ಕಟ್ಟನ್ನು ಪರಿಹರಿಸುವ ಕೊನೆಯ ಪ್ರಯತ್ನವಾಗಿ ೧೯೨೯ರ ಡಿಸೆಂಬರ್ ೩೧ ರಂದು ದೆಹಲಿಯಲ್ಲಿ ವೈಸರಾಯ್ ಲಾರ್ಡ್ ಇರ್ವಿನ್‌ರನ್ನು ಭೇಟಿ ಮಾಡುವ ನಿರ್ಧಾರ ಕೈಗೊಂಡಿದ್ದರು.

ಗಾಂಧೀಜಿ ನೇತೃತ್ವದಲ್ಲಿ ನಡೆಯುತ್ತಿದ್ದ ಹೋರಾಟದ ಅನಿಶ್ಚಿತತೆ; ಅದೇ ಸಮಯದಲ್ಲಿ ಲೆನಿನ್ ಸಾಧಿಸಿದ್ದ ಯಶಸ್ಸು—ಇವೆರಡೂ ಈಗ ಜಯಪ್ರಕಾಶರ ಮುಂದಿದ್ದವು. ಹಾಗೆಯೇ ಮೊಂಘೈರ್‌ನಲ್ಲಿ ಕಂಡ ಜನಶಕ್ತಿ ಮತ್ತು ಎಂ.ಎನ್. ರಾಯ್ ಅವರ ಬರಹಗಳಲ್ಲಿ ಕಂಡಿದ್ದ ಗಾಂಧೀ ವಿರೋಧಿಯಾದ ತರ್ಕಶಕ್ತಿ—ಇವೆರಡರ ನಡುವೆಯೂ ಅವರಲ್ಲಿ ಘರ್ಷಣೆ ನಡೆದಿತ್ತು. ಅವರು ಮೊಂಘೈರ್ ಸಮ್ಮೇಳನವನ್ನು ಮುಗಿಸಿಕೊಂಡು ಪಾಟ್ನಾಕ್ಕೆ ಹಿಂತಿರುಗಿದ

ನಂತರ, ಗಾಂಧೀಜಿಯನ್ನು ಭೇಟಿ ಮಾಡಬೇಕೆಂದು ಪ್ರಭಾವತಿಯವರು ಜಯಪ್ರಕಾಶರನ್ನು ಒತ್ತಾಯಿಸತೊಡಗಿದರು. ನಂಬಿದ ತತ್ವ ಮತ್ತು ಕಣ್ಣೆದುರಿನ ವಾಸ್ತವದ ನಡುವೆ ವಿಚಿತ್ರ ಸ್ಥಿತಿಯಲ್ಲಿ ತುಯ್ದಾಡುತ್ತಿದ್ದ ಜಯಪ್ರಕಾಶರು ಒಂದು ದಿನ ಪ್ರಭಾವತಿಯವರೊಡನೆ ವಾರ್ಧಾಕ್ಕೆ ಪ್ರಯಾಣ ಮಾಡಿದರು.

ಜವಾಹರರ ಭೇಟಿ - ಮರುಳುಗೊಳಿಸಿದ ಮಹಾತ್ಮ

ವಾರ್ಧಾ ಆಶ್ರಮಧಲ್ಲಿ ಜಯಪ್ರಕಾಶರು ಮೊದಲು ಭೇಟಿ ಮಾಡಿದ್ದು, ಗಾಂಧೀಜಿಯವರಿಂದ ಕಾಂಗ್ರೆಸ್ ಅಧ್ಯಕ್ಷರಾಗಿ ನಾಮಕರಣಗೊಂಡಿದ್ದ ಯುವ ನಾಯಕ ಜವಾಹರಲಾಲರನ್ನು. ಆಶ್ರಮದಲ್ಲಿ ಅಪರಿಚಿತರಂತೆ, ಕೊಠಡಿಯ ಬಾಗಿಲಲ್ಲಿ ಒಂಟಿಯಾಗಿ ನಿಂತಿದ್ದ ಜಯಪ್ರಕಾಶರತ್ತ ಮೇಲಿನ ಮಹಡಿಯಿಂದ ಇಳಿದು ಬಂದ ವ್ಯಕ್ತಿ "ನಾನು ಜವಾಹರ್ ಅಂತ" ಎಂದು ಪರಿಚಯ ಮಾಡಿಕೊಂಡು ಕೈ ಚಾಚಿದಾಗ, ಸಂಕೋಚ ಪ್ರವೃತ್ತಿಯ ಜಯಪ್ರಕಾಶ್, "ನಾನು ಜಯಪ್ರಕಾಶ್ ಅಂತ" ಎಂದು ಸ್ವಲ್ಪ ಗಾಬರಿಯಲ್ಲಿಯೇ ಕೈಕುಲುಕಿದರು. ಹೀಗೆ ಅತ್ಯಂತ ಅಸಂಪ್ರದಾಯಿಕ ರೀತಿಯಲ್ಲಿ ಆರಂಭವಾದ ಈ ಇಬ್ಬರ ನಡುವಣ ಸ್ನೇಹ, ಕೊನೆಯವರೆಗೂ—ನಡು ನಡುವೆ ಉಂಟಾದ ಅನಿವಾರ್ಯ ತಾತ್ವಿಕ ಘರ್ಷಣೆಗಳ ಹೊರತಾಗಿ—ಆತ್ಮೀಯ ಮತ್ತು ಸೌಹಾರ್ದಪೂರ್ಣವಾಗಿತ್ತು.

ಜಯಪ್ರಕಾಶರು ಮಿಶ್ರ ಅಭಿಪ್ರಾಯಗಳೊಡನೆ ಗಾಂಧಿಯವರ ಭೇಟಿಯನ್ನು ಎದುರು ನೋಡುತ್ತಿದ್ದರು. ಗಾಂಧೀಜಿ ಜಯಪ್ರಕಾಶರನ್ನು ಕಂಡೊಡನೆ ತಮ್ಮ ಅಳಿಯನೆಂಬಂತೆ ಆತ್ಮೀಯತೆಯೊಡನೆ ಬರಮಾಡಿಕೊಂಡು ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಆ ತಕ್ಷಣವೇ ಇಡೀ ದೇಶದ ಉದ್ದೀಪನ ಶಕ್ತಿಯಾಗಿದ್ದ ಅರವತ್ತು ವರ್ಷಗಳ ಮಹಾನಾಯಕ ಮತ್ತು ಆಗ ತಾನೇ ವಿದ್ಯಾಭ್ಯಾಸ ಮುಗಿಸಿ ತಲೆ ತುಂಬಾ ಸಿದ್ಧಾಂತಗಳನ್ನು ತುಂಬಿಕೊಂಡು ಕಾರ್ಯಾಚರಣೆಗಾಗಿ ತುದಿಗಾಲಲ್ಲಿ ನಿಂತಂತಿದ್ದ ಇಪ್ಪತ್ತೇಳು ವರ್ಷಗಳ ಉತ್ಸಾಹಿ ಯುವಕನ ನಡುವಣ 'ಅಂತರ' ತಲೆ ತಪ್ಪಿಸಿಕೊಂಡು ಹೋಯಿತು. ಜಯಪ್ರಕಾಶ್‌ಗೆ ಇದೊಂದು ಹೊಸ ಅನುಭವವಾಗಿತ್ತು. ಕೋಟ್ಯಾಂತರ ಜನರಿಂದ 'ಮಹಾತ್ಮ' ಎನಿಸಿಕೊಂಡಾತ, ತಮ್ಮಂತಹ ಹುಡುಗನ ಹೆಗಲಮೇಲೆ ಕೈಹಾಕಿ ನಿರಾಳರಾಗಿ ವೈಯಕ್ತಿಕ ವಿಷಯಗಳನ್ನು ಚರ್ಚಿಸುವ ಸಾಮಾನ್ಯ ಮನುಷ್ಯನಾಗುವ ಅದ್ಭುತ, ಅವರನ್ನು ಬೆರಗುಗೊಳಿಸಿತು. ಮೂಲತಃ ಭಾವನಾತ್ಮಕ ವ್ಯಕ್ತಿಯಾಗಿದ್ದ ಜಯಪ್ರಕಾಶ್, ಮೊದಲ ನೋಟದಲ್ಲಿಯೇ ಮಹಾತ್ಮನಿಗೆ ಮಾರುಹೋದರು.

ಬ್ರಹ್ಮಚರ್ಯದ ದೀಕ್ಷೆ - ಕಾಂಗ್ರೆಸ್ಸಿಗೆ ಪ್ರವೇಶ

ಜಯಪ್ರಕಾಶ್ ಆಶ್ರಮದ ಬದುಕಿಗೆ ಒಗ್ಗಿಕೊಳ್ಳುತ್ತಿದ್ದಂತೆ ಒಂದು ದಿನ ಗಾಂಧೀಜಿ, ಅವರೊಡನೆ ಪ್ರಭಾವತಿಯವರ ಬ್ರಹ್ಮಚರ್ಯ-ವಚನದ ಪ್ರಸ್ತಾಪ ಮಾಡಿದರು. ಪ್ರಭಾವತಿ ತಮ್ಮ ಮಗಳಂತಿರುವುದಾಗಿ ತಿಳಿಸಿದ ಗಾಂಧೀಜಿ, ಆಕೆಯ ಸೇವಾತತ್ಪರತೆ, ಅರ್ಪಣಾ

ಮನೋಭಾವ ಮತ್ತು ಆತ್ಮ ಪರಿಶುದ್ಧತೆಯನ್ನು ಕೊಂಡಾಡಿದರು. ಇದಕ್ಕೆ ಪೂರಕವಾಗಿ ಬ್ರಹ್ಮಚರ್ಯವನ್ನು ಪಾಲಿಸುವಂತೆ ಆಕೆಯ ಮನವೊಲಿಸಿ ತಾವು ಮಾತು ತೆಗೆದುಕೊಂಡಿರುವುದಾಗಿಯೂ, ಆಕೆಯು ಈ ಮಾತನ್ನು ಪುರಸ್ಕರಿಸಬೇಕಾದುದು ನೈತಿಕ ಪ್ರಜ್ಞೆ ಇರುವ ಎಲ್ಲರ ಕರ್ತವ್ಯವೆಂದು ಅವರು ಹೇಳಿದರು. ಈ ಸಂಬಂಧ ಗಾಂಧೀಜಿ ಆತ್ಮ ಸಾಕ್ಷಾತ್ಕಾರದ ನಾಲ್ಕು ಮಾರ್ಗಗಳ—ಜ್ಞಾನಯೋಗ, ಕರ್ಮಯೋಗ, ರಾಜಯೋಗ ಮತ್ತು ಭಕ್ತಿಯೋಗ—ಬಗ್ಗೆ ತಮ್ಮದೇ ವಿವರಣೆ ನೀಡಿದರು. ಇದು ಜಯಪ್ರಕಾಶರಿಗೆ ಅನಿರೀಕ್ಷಿತವಾಗಿತ್ತು. ಅವರು ಈ ಬಗ್ಗೆ ಗಾಢವಾಗಿ ಆಲೋಚನೆ ಮಾಡಿದರು; ಬ್ರಹ್ಮಚರ್ಯದ ಎಲ್ಲ ಸಾಧ್ಯಾ ಸಾಧ್ಯತೆಗಳನ್ನು ಪರಿಶೀಲಿಸಿ ತುಲನೆ ಮಾಡುತ್ತಿದ್ದಂತೆ ಗಾಂಧೀಜಿಯ ವ್ಯಕ್ತಿತ್ವದ ಆತ್ಮೀಯತೆಯ ನೆರಳು ಅವರ ಮನಸ್ಸಿನ ಮೇಲೆ ದಟ್ಟವಾಗುತ್ತಾ ಹೋಯಿತು. ಆಗ್ಗೆಯಾಗಲೇ ತಮ್ಮನ್ನು ಸ್ವಾತಂತ್ರ್ಯ ಹೋರಾಟಕ್ಕೆ ಸಮರ್ಪಿಸಿಕೊಂಡುಬಿಟ್ಟಿದ್ದ ಆದರ್ಶವಾದಿ ಜಯಪ್ರಕಾಶ್, ಹೋರಾಟದಲ್ಲಿ ತ್ಯಾಗ ಬಲಿದಾನಗಳೂ ಸೇರಿವೆ ಎಂಬ ಸರಳ ಭಾವನಾತ್ಮಕ ಅರಿವಿನೊಡನೆ ತಮ್ಮ ಈ ಮೊದಲ ತ್ಯಾಗಕ್ಕೆ ಸಿದ್ಧರಾದರು. ತಮ್ಮೆದುರಿಗೆ ನಿಂತಿದ್ದ ಮಹಾತ್ಯಾಗಿಯ ಮುಂದೆ, ಇದೊಂದು ಅತಿ ಸಣ್ಣ ತ್ಯಾಗವಾಗಿ ಕಂಡಿರಬೇಕು ಜಯಪ್ರಕಾಶರಿಗೆ. ಕೆಲವೇ ದಿನಗಳಲ್ಲಿ ಜಯಪ್ರಕಾಶ್, ಗಾಂಧೀಜಿಯ ಕುಟುಂಬದ ಸದಸ್ಯರಾಗಿ ಸೇರಿಹೋದರು. ಮುಂದಿನ ದಿನಗಳಲ್ಲಿ ಗಾಂಧೀಜಿ ಪ್ರಭಾವತಿಯವರನ್ನು 'ಸಮಾಜವಾದಿ ಚಳುವಳಿಯ ನಮ್ಮ ಒತ್ತೆಯಾಳು' ಎಂದು ವಿನೋದಮಯವಾಗಿ ವರ್ಣಿಸುತ್ತಿದ್ದುದುಂಟು.

ಡಿಸೆಂಬರ್ ೩೧ ರಂದು ವೈಸರಾಯ್ ಲಾರ್ಡ್ ಇರ್ವಿನ್‌ರನ್ನು ಭೇಟಿ ಮಾಡುವ ಕಾರ್ಯಕ್ರಮವಿದ್ದುದರಿಂದ ಗಾಂಧೀಜಿ, ವಾರ್ಧಾದಿಂದ ಜಯಪ್ರಕಾಶ್, ಪ್ರಭಾವತಿ ಮತ್ತು ಜವಾಹರಲಾಲ್‌ರೊಡನೆ ದೆಹಲಿಗೆ ಪ್ರಯಾಣ ಮಾಡಿದರು. ಗಾಂಧೀಜಿ-ಲಾರ್ಡ್ ಇರ್ವಿನರ ಸಂಧಾನ ಮೊದಲೇ ನಿರೀಕ್ಷಿಸಿದಂತೆ ವಿಫಲಗೊಂಡಿತು. ಅಂದೇ ಅವರೆಲ್ಲ ಲಾಹೋರ್‌ನಲ್ಲಿ ನಡೆಯಲಿದ್ದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ರೈಲು ಹತ್ತಿದರು. ರೈಲು ಪ್ರಯಾಣ ಅತ್ಯಂತ ಮಹತ್ವದ್ದಾಗಿತ್ತು. ವಿದೇಶ ವ್ಯಾಸಂಗ ಮಾಡಿದ್ದ ಜಯಪ್ರಕಾಶ್ ಮತ್ತು ಜವಾಹರ್— ಈ ಇಬ್ಬರು ಪ್ರತಿಭಾವಂತ ತರುಣರ ನಡುವೆ ನಿಕಟ ಪರಿಚಯಕ್ಕೆ ಈ ಪ್ರಯಾಣ ಅವಕಾಶ ಮಾಡಿಕೊಟ್ಟಿತು. ಇಬ್ಬರೂ ಅಂದಿನ ರಾಜಕೀಯ ಪರಿಸ್ಥಿತಿಯ ವಿಮರ್ಶೆ ನಡೆಸಿದರು. ಜಯಪ್ರಕಾಶ್ ತಾವು ಅಚಲ ನಂಬಿಕೆಯನ್ನು ಬೆಳೆಸಿಕೊಂಡಿದ್ದ ಮಾರ್ಕ್ಸ್‌ವಾದ ಮತ್ತು ಕಮ್ಯೂನಿಸ್ಟ್ ಮಾರ್ಗಗಳ ಬಗ್ಗೆ ಜವಾಹರಲಾಲರಿಗೆ ದೀರ್ಘ ವಿವರಣೆ ನೀಡಿದರು. ಸೋವಿಯತ್ ಕ್ರಾಂತಿಯಿಂದ ಪ್ರಭಾವಿತರಾಗಿದ್ದ ಮತ್ತು ಸ್ವತಃ ಕ್ರೆಮ್ಲಿನ್‌ಗೆ ಭೇಟಿ ಕೊಟ್ಟು ಬಂದಿದ್ದ ಜವಾಹರ್, ತಾವೂ ಕೂಡಾ ಸಮಾಜವಾದದಲ್ಲಿ ನಂಬಿಕೆ ಇರಿಸಿರುವುದಾಗಿ ಹೇಳಿದರು. ಆದರೆ ಕಮ್ಯೂನಿಸ್ಟ್ ತತ್ವಗಳೊಡನೆ ತಮಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ ಎಂದೂ ತಿಳಿಸಿದರು. ಈ ಮಾತುಕತೆಗಳಲ್ಲಿ ವ್ಯಕ್ತವಾದ ಜಯಪ್ರಕಾಶರ ಬುದ್ಧಿಮತ್ತೆ, ಕಾರ್ಯೋತ್ಸಾಹ ಮತ್ತು ಹೋರಾಟದ ಮನೋಭಾವವನ್ನು ಮನಗಂಡ

ಜವಾಹರಲಾಲರು, ಅಲಹಾಬಾದ್‌ಗೆ ಬಂದು ಕೇಂದ್ರ ಕಾಂಗ್ರೆಸ್ ಕಚೇರಿಯಲ್ಲಿ ತಮ್ಮೊಡನೆ ಸಹಕರಿಸಬೇಕೆಂದು ಜಯಪ್ರಕಾಶರಿಗೆ ಆಹ್ವಾನ ನೀಡಿದರು. ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಬೇಕೆಂದಿದ್ದ ಆಕಾಂಕ್ಷೆಯನ್ನು ತೊರೆದ ಜಯಪ್ರಕಾಶ್, ಜವಾಹರರ ಆಹ್ವಾನವನ್ನು ತಕ್ಷಣ ಒಪ್ಪಿಕೊಂಡರು.

ಕಮ್ಯೂನಿಸ್ಟರ ಟೀಕೆ-ಮೊದಲ ಭಿನ್ನಾಭಿಪ್ರಾಯ

ಲಾಹೋರ್ ಕಾಂಗ್ರೆಸ್ ಅಧಿವೇಶನ, ಜಯಪ್ರಕಾಶರ ರಾಜಕೀಯ ಜೀವನದ ಹೊಸ್ತಿಲಿದ್ದಂತೆ. ಈ ದೃಷ್ಟಿಯಿಂದ ಅದು, ಮಹತ್ವಪೂರ್ಣ ಕೂಡಾ. ಸ್ವಾತಂತ್ರ್ಯ ಚಳುವಳಿಯಲ್ಲಿನ ವಿವಿಧ ಒಲವು-ನಿಲವುಗಳ ಪೂರ್ಣ ಸ್ವರೂಪ ಜಯಪ್ರಕಾಶರಿಗೆ ಗೊತ್ತಾದದ್ದು ಇಲ್ಲಿ. ಗಾಂಧೀಜಿ-ಕಾಂಗ್ರೆಸ್ ನಡುವಣ ಸಂಬಂಧದ ನೆಲೆಗಳು, ಕಾಂಗ್ರೆಸ್ ಅಧ್ಯಕ್ಷರ ಸ್ಥಾನಮಾನ, ಕಾಂಗ್ರೆಸ್ ವರಿಷ್ಠ ಮಂಡಳಿಯ ರಚನೆ ಮತ್ತು ಕಾರ್ಯನಿರ್ವಹಣೆ, ಖಾದಿ ಚಳುವಳಿಯ ಸಂಕೇತಾರ್ಥ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಬ್ರಿಟಿಷ್ ವಿರೋಧಿ ಜನತಾ ಆಂದೋಲನದ ಸರ್ವ ವ್ಯಾಪಕತೆ—ಇವೆಲ್ಲದರ ಅರಿವು ಜಯಪ್ರಕಾಶರಿಗೆ ಮನದಟ್ಟಾದದ್ದು ಇಲ್ಲಿ. ಮೋತೀಲಾಲ್ ನೆಹರೂ ಅವರು ತಮ್ಮ ಮಗ ಜವಾಹರಲಾಲ್ ನೆಹರೂ ಅವರಿಗೆ ವಿಧ್ಯುಕ್ತವಾಗಿ ಕಾಂಗ್ರೆಸ್-ಅಧ್ಯಕ್ಷ ಪದವಿಯನ್ನು ಬಿಟ್ಟುಕೊಟ್ಟರು. ಭಾರತ ಕಾಮನ್‌ವೆಲ್ತ್‌ನಿಂದ ಬಿಡುಗಡೆಯಾಗಿ ಸ್ವತಂತ್ರ ರಾಷ್ಟ್ರವಾಗಿದೆ ಎಂದು ಘೋಷಿಸುವ ನಿರ್ಣಯವೊಂದನ್ನು ಜನಘೋಷಗಳ ನಡುವೆ ಅಂಗೀಕರಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷರೇ ಈಗ ದೇಶದ 'ರಾಷ್ಟ್ರಪತಿ' ಎಂದು ಸಾರಲಾಯಿತು. ಹಸಿರು-ಬಿಳಿ-ಕೆಂಪು ಬಾವುಟ ಮುಗಿಲಿಗೇರಿತು!

ಇದು ಆಂದೋಲನದ ಒಡಲಿನಲ್ಲಿದ್ದ ಅಮಿತೋತ್ಸಾಹ, ಛಲ ಮತ್ತು ಸಿಟ್ಟಿಗೆ ಒಂದು ಹೊರದಾರಿಯಾಗಿದ್ದುದಕ್ಕಿಂತ ಹೆಚ್ಚೇನೂ ಆಗಿರಲಿಲ್ಲ. ಗಾಂಧೀಜಿ ಇದನ್ನು ಕೇವಲ ಒಂದು ನಾಟಕೀಯ ಕ್ರಮ ಎಂದು ಪರಿಗಣಿಸಿದರು ಮತ್ತು ತಮ್ಮ ಈ ಅಭಿಪ್ರಾಯವನ್ನು ಸಾರ್ವಜನಿಕವಾಗಿಯೂ ಪ್ರಕಟಿಸಿದರು. 'ಈ ಸ್ವಾತಂತ್ರ್ಯ ನಿರ್ಣಯದಿಂದ ಯಾರೂ ಧೃತಿಗೆಡಬೇಕಾಗಿಲ್ಲ' ಎಂಬ ಪತ್ರಿಕಾ ಹೇಳಿಕೆ ನೀಡಿದರು. ಗಾಂಧೀಜಿ ಇಂತಹ 'ವಿಶಿಷ್ಟ ಧೈರ್ಯ' ಪ್ರಕಟಿಸಲೆಂದೇ ಕಾದಿದ್ದ ಕಮ್ಯೂನಿಸ್ಟರು ಈ ಬಗ್ಗೆ ಟೀಕೆಗಳ ಸುರಿಮಳೆಯನ್ನೇ ಸುರಿದರು. ಗಾಂಧೀಜಿಯನ್ನು ಬ್ರಿಟಿಷ್ ಸಾಮ್ರಾಜ್ಯವಾದಿಗಳ ಮತ್ತು ಭಾರತದ ಬಂಡವಾಳಶಾಹಿಗಳ ಅಡಿಯಾಳೆಂದೂ, ಜನತಾ ಆಂದೋಲನವನ್ನು ತನ್ನ ನಿಯಂತ್ರಣದಲ್ಲೇ ಇಟ್ಟುಕೊಳ್ಳಲು ಏನೆಲ್ಲಾ ನಿರ್ಬಂಧಗಳನ್ನು ಹೇರಲು ಹೇಸದ ಸ್ವಾರ್ಥಿಯೆಂದೂ ಬಣ್ಣಿಸಿತು. ಗಾಂಧೀಜಿಯನ್ನು ಈಗ ಹತ್ತಿರದಿಂದ ಕಂಡಿದ್ದ ಮತ್ತು ಅವರ ಧ್ಯೇಯೋದ್ದೇಶಗಳ ಹಿಂದಿದ್ದ ಪ್ರಾಮಾಣಿಕತೆಯನ್ನು ಸಂದೇಹಿಸಲು ಯಾವುದೇ ಕಾರಣವನ್ನು ಕಾಣದಿದ್ದ ಜಯಪ್ರಕಾಶರಿಗೆ, ಈ ಟೀಕೆ ವಿಪರೀತವಾಗಿ ಕಂಡಿತು. ಯಾವುದೇ ವೇದಿಕೆಯ ಮೂಲಕವೂ ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧವಾಗಲೀ ಅಥವಾ ಇಂಡಿಯಾದ ಬಂಡವಾಳಶಾಹಿಗಳ

ವಿರುದ್ಧವಾಗಲೀ ಜನರನ್ನು ಸಂಘಟಿಸುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದ ಜನ, ಇಡೀ ದೇಶವನ್ನು ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧ ಮತ್ತು ಜೊತೆಯಲ್ಲಿಯೇ ಧಾರ್ಮಿಕ ಮತ್ತು ಸಾಮಾಜಿಕ ಶೋಷಣೆಯ ವಿರುದ್ಧ ಎಚ್ಚರಗೊಳಿಸಿದ್ದ ವ್ಯಕ್ತಿಯ ಬಗ್ಗೆ ಇಂತಹ ಆಪಾದನೆಗಳನ್ನು ಮಾಡಿದ ಕಮ್ಯೂನಿಸ್ಟರ ಬಗ್ಗೆ ಅವರಿಗೆ ನಿರಾಶೆ ಉಂಟಾಯಿತು.

ತಾಯಿಯ ಅಗಲಿಕೆ

ಕಾಂಗ್ರೆಸ್ ಕಚೇರಿಯ ಕೆಲಸ ವಹಿಸಿಕೊಳ್ಳಲು ಜಯಪ್ರಕಾಶ್ ಮತ್ತು ಪ್ರಭಾವತಿದೇವಿ ಅಲಹಾಬಾದ್‌ಗೆ ಬಂದರು. ಕಾರ್ಮಿಕ ಸಮಸ್ಯೆಗಳ ಅಧ್ಯಯನಾ ವಿಭಾಗದ ಕಾರ್ಯದರ್ಶಿಯಾಗಿ ಅವರು ನೇಮಕಗೊಂಡಿದ್ದರು. ನೆಹರೂ ಕುಟುಂಬದ ಹಳೆಯ ಮನೆಯಲ್ಲಿಯೇ (ಸ್ವರಾಜ್‌ಭವನ) ಅವರ ಕೆಲಸ ಮತ್ತು ವಾಸ. ಆದರೆ, ಜಯಪ್ರಕಾಶ್ ತಮ್ಮ ಪಾಲಿನ ಕೆಲಸವನ್ನು ಖಚಿತವಾಗಿ ಕೈಗೆತ್ತಿಕೊಳ್ಳುವ ಮುನ್ನವೇ ಬಹಳ ದಿನಗಳಿಂದ ಹಾಸಿಗೆ ಹಿಡಿದಿದ್ದ ತಾಯಿಯ ಸಾವಿನ ಸುದ್ದಿ ಬಂತು. ಪಾಟ್ನಾದಲ್ಲಿ ಫೂಲ್‌ರಾಣಿದೇವಿಯವರ ಅಂತಿಮ ಕ್ರಿಯೆಯನ್ನು ನೆರವೇರಿಸಿ ಅಲಹಾಬಾದ್‌ಗೆ ಹಿಂತಿರುಗಿದಾಗ ಅವರು, ಬಾಲ್ಯದಿಂದಲೂ ಬಹುವಾಗಿ ಪ್ರೀತಿಸುತ್ತಿದ್ದ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ನೋವನ್ನು ಅನುಭವಿಸಿದರು. ಈ ನೋವು ಮಾಯುವುದಕ್ಕೆ ಸ್ವಲ್ಪ ಕಾಲವೇ ಬೇಕಾಯಿತು.

ಕಾರ್ಮಿಕ ಸಂಘಟನೆ: ದಂಡಿಯಾತ್ರೆ

ಬ್ರಿಟನ್ ಒಂದು ನೂರು ಕೋಟಿ ಪೌಂಡ್‌ಗಳಷ್ಟು ಮೌಲ್ಯದ ಬಂಡವಾಳವನ್ನು ಭಾರತದಲ್ಲಿ ತೊಡಗಿಸಿತ್ತು. ಇದು ಬ್ರಿಟನ್ನಿನ ಇಡೀ ವಿದೇಶೀ ಬಂಡವಾಳ ಹೂಡಿಕೆಯ ಕಾಲಭಾಗವಾಗಿತ್ತು. ಇಷ್ಟು ಬಂಡವಾಳವನ್ನು ಹೂಡಿದ್ದ ಬ್ರಿಟನ್ ಪ್ರತಿವರ್ಷ ೧೫ ಕೋಟಿ ಪೌಂಡ್‌ಗಳಷ್ಟು ಅಂದರೆ—ಇಡೀ ಇಂಡಿಯಾದ ವಾರ್ಷಿಕ ಆಯವ್ಯಯಕ್ಕಿಂತ (ಆಗ) ಹೆಚ್ಚು—ಲಾಭವನ್ನು ಬ್ರಿಟನ್ನಿಗೆ ಸಾಗಿಸುತ್ತಿತ್ತು. ಕಾರ್ಖಾನೆಗಳಲ್ಲಿ ಗಂಡಾಳಿಗೆ ಮತ್ತು ಹೆಣ್ಣಾಳಿಗೆ ಅನುಕ್ರಮವಾಗಿ ಒಂದು ರೂಪಾಯಿ ಮತ್ತು ಎಂಟಾಣೆಗಿಂತ ಹೆಚ್ಚು ದಿನಗೂಲಿಯನ್ನು ಕೊಡಲಾಗುತ್ತಿರಲಿಲ್ಲ. ಚಹಾ ಮತ್ತು ಕಾಫಿ ತೋಟಗಳ ಕೂಲಿಗಾರರ ಪಾಡೇನೂ ಇವಕ್ಕಿಂತ ಉತ್ತಮವಾಗಿರಲಿಲ್ಲ. ಆಯ್ದ ಒಂದಿಷ್ಟು ಕಾರ್ಖಾನೆಗಳಲ್ಲಿದ್ದ ಸೌಲಭ್ಯ ಬಿಟ್ಟರೆ, ಕಾರ್ಮಿಕ ನೀತಿಸಂಹಿತೆಯ ಸುಳಿವಿರಲಿಲ್ಲ.

ಜಯಪ್ರಕಾಶರು ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಂಪರ್ಕ ಬೆಳೆಸಿಕೊಂಡು ಕಾರ್ಮಿಕ ಸಂಘಟನೆಯ ವಿವಿಧ ಹಂತಗಳ ಸಮಸ್ಯೆಗಳ ಪರಿಶೀಲನೆ ಮಾಡಿದರು. ಈ ದಿಸೆಯಲ್ಲಿ ಕಾಂಗ್ರೆಸ್ ಏನು ಮಾಡಬಹುದು ಎಂದು ಯೋಚಿಸಿದರು. ಕೈಗಾರಿಕಾ ಸ್ಥಳಗಳಿಗೆ ಹೋಗಿ ಕಾರ್ಮಿಕರ ಸಂಘಟನಾಕಾರರೊಡನೆ ಸಮಾಲೋಚನೆಗಳನ್ನು ನಡೆಸಿದರು. ಆದರೆ ಜಯಪ್ರಕಾಶ್, ಈ ದಿಸೆಯಲ್ಲಿ ನಿಜವಾದ ಅರ್ಥದಲ್ಲಿ ಕಾರ್ಯೋನ್ಮುಖರಾಗುವಷ್ಟರಲ್ಲಿ

ಅವರಿಗೆ ತೊಂದರೆಯೊಂದು ಎದುರಾಯಿತು. ಜಯಪ್ರಕಾಶರ ತಂದೆ ಹರ್ಷದಯಾಳ್ ಬಾಬು ಅವರು ವಿಪರೀತ ಸಾಲ ಸೋಲಗಳಿಗೆ ಸಿಕ್ಕಿ ತತ್ತರಿಸಿ ಹೋಗಿದ್ದರು. ತಂದೆಯವರ ನೆರವಿಗೆ ಹೋಗುವುದು ಜಯಪ್ರಕಾಶರಿಗೆ ಅನಿವಾರ್ಯವಾಯಿತು. ನೆಹರೂ ಕುಟುಂಬಕ್ಕೆ ಪರಿಚಿತರಾಗಿದ್ದ ಕೈಗಾರಿಕೋದ್ಯಮಿ ಜಿ.ಡಿ. ಬಿರ್ಲಾ, ಜಯಪ್ರಕಾಶರನ್ನು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ನೇಮಿಸಿಕೊಂಡು ಕೈತುಂಬಾ ಸಂಬಳಕೊಟ್ಟರು. ಎರಡು ತಿಂಗಳ ನಂತರ ಜಯಪ್ರಕಾಶ್ ಮತ್ತೆ ಕಾಂಗ್ರೆಸ್ ಕೆಲಸಕ್ಕೆ ಹಿಂತಿರುಗಿದರು.

ಅಷ್ಟು ಹೊತ್ತಿಗೆ ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ಘರ್ಷಣೆ ನಿರ್ಣಾಯಕ ಘಟ್ಟ ಮುಟ್ಟಿತ್ತು. ತಾನು ಮುಂದಿಟ್ಟ 'ಸ್ವಾತಂತ್ರ್ಯ'ದ ಯಾವುದೇ ಪ್ರಸ್ತಾಪದ ಬಗ್ಗೆ ಬ್ರಿಟಿಷ್ ಸರ್ಕಾರ ಯಾವುದೇ ನಿರ್ದಿಷ್ಟ ಉತ್ತರ ಕೊಡದೆ 'ಕಾಲತಳ್ಳುವ' ತಂತ್ರ ಅನುಸರಿಸುತ್ತಿದೆ ಎಂದು ಭಾವಿಸಿದ ಕಾಂಗ್ರೆಸ್, ಮೊದಲನೇ ದುಂಡು ಮೇಜಿನ ಪರಿಷತ್ತನ್ನು ಬಹಿಷ್ಕರಿಸಿತು. ಅಮಾನುಷ ಆಳ್ವಿಕೆ ಕೊನೆಗೊಳ್ಳುವವರೆಗೂ ಸರಕಾರದೊಡನೆ ಯಾವ ರೀತಿಯಲ್ಲೂ ಸಹಕರಿಸದಿರಲು ಮತ್ತು ತೆರಿಗೆ ನೀಡದಿರಲು ಹಾಗೂ ಯಾವುದೇ ಪ್ರಚೋದನೆಗೆ ಈಡಾಗದೇ ಅಹಿಂಸಾತ್ಮಕ ಹೋರಾಟವನ್ನು ನಾಗರಿಕ ಅಸಹಕಾರ ಸತ್ಯಾಗ್ರಹದ ಮೂಲಕ ಮುಂದುವರಿಸಲು ಅದು ಜನತೆಗೆ ಕರೆಕೊಟ್ಟಿತ್ತು. ಲಾರ್ಡ್ ಇರ್ವಿನ್ ಈ ಕರೆಗೆ ಬೆದರದೆ ಯಾವ ಪ್ರತಿಕ್ರಿಯೆಯನ್ನೂ ಸೂಚಿಸದಿದ್ದಾಗ ಗಾಂಧೀಜಿ, ಅಸಹಕಾರದ ಇನ್ನೊಂದು ಸಂಕೇತವಾಗಿ, ಉಪ್ಪಿನ ಮೇಲೆ ಸುಂಕ ವಿಧಿಸಿದ್ದ ಕಾಯಿದೆಯನ್ನು ಮುರಿಯುವುದಾಗಿ ಇರ್ವಿನರಿಗೆ ಎಚ್ಚರಿಕೆ ನೀಡಿದರು. ನಂತರ ಆರಂಭವಾಯಿತು ದಂಡಿ ಉಪ್ಪಿನ ಸತ್ಯಾಗ್ರಹ. ೨೪೧ ಮೈಲಿಗಳ ಪಾದಯಾತ್ರೆಯನ್ನೊಳಗೊಂಡ ಈ ಐತಿಹಾಸಿಕ ಸತ್ಯಾಗ್ರಹ ಗಾಂಧೀಜಿ ಕಡಲ ನೀರಿನಿಂದ ಉಪ್ಪನ್ನು ತಯಾರಿಸಿ ಸಾಂಕೇತಿಕವಾಗಿ ಎಲ್ಲರಿಗೂ ಹಂಚುವುದರೊಡನೆ ಕೊನೆಗೊಂಡಿತು. ಗಾಂಧೀಜಿಯ ಈ ಅಪೂರ್ವ ಹಾಗೂ ಅರ್ಥಪೂರ್ಣ ರೀತಿಯ ಕಾನೂನು ಉಲ್ಲಂಘನೆ ಇಡೀ ಜಗತ್ತನ್ನೇ ಬೆರಗುಗೊಳಿಸಿತು.

ಆರ್ಥಿಕ ಮುಗ್ಗಟ್ಟು-ಸ್ವದೇಶಿ ಆಂದೋಲನ

ಈ ಮಧ್ಯೆ ವಿಶ್ವಾದ್ಯಂತ ಆರ್ಥಿಕ ಮುಗ್ಗಟ್ಟು ಪರಿಣಮಿಸಿತ್ತು. ಕೃಷಿ ಉತ್ಪನ್ನಗಳಿಂದ ರೈತರಿಗೆ ಪ್ರತಿಫಲವೇ ದೊರೆಯದಾಯಿತು. ಕಾರ್ಮಿಕರನ್ನು ನೂರಾರು ಸಂಖ್ಯೆಯಲ್ಲಿ ಕಾರ್ಖಾನೆಗಳಿಂದ ಹೊರಹಾಕಲಾಯಿತು. ಜನ ಬದುಕುವುದೇ ದುಸ್ಸಾಧ್ಯವಾಯಿತು. ನೆಲಗಂದಾಯವನ್ನು ಕೊಡದಿರಲು ಜವಾಹರಲಾಲ್ ನೆಹರು ಕರೆಕೊಟ್ಟರು. ಬ್ರಿಟನ್ ಉತ್ಪಾದಿಸುತ್ತಿದ್ದ ಮೋಜಿನ ವಸ್ತುಗಳ ಆಮದಿಗಾಗಿ ಭಾರತದ ಚಿನ್ನವನ್ನು ರಫ್ತು ಮಾಡುವುದರ ವಿರುದ್ಧ ಮತ್ತೊಂದು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಯಿತು. ಗಾಂಧೀಜಿ ನಾಗರಿಕ ಅಸಹಕಾರ ಚಳುವಳಿಯನ್ನು ಇನ್ನೊಂದು ಸ್ತರಕ್ಕೆ ಏರಿಸಿ ಬ್ರಿಟಿಷ್ ಸರ್ಕಾರದ ಬಟ್ಟೆ ಅಂಗಡಿಗಳ ಮುಂದೆ ಮತ್ತು ಮದ್ಯದಂಗಡಿಗಳ ಮುಂದೆ ಮತಪ್ರದರ್ಶನ

ನಡೆಸುವಂತೆ ಹಾಗೂ ಬ್ರಿಟಿಷ್ ಕಾರ್ಖಾನೆಗಳಲ್ಲಿ ತಯಾರಾದ ಬಟ್ಟೆಗಳನ್ನು ಸುಟ್ಟು ಹಾಕುವಂತೆ ಕರೆಕೊಟ್ಟರು. ದೇಶಾದ್ಯಂತ 'ಸ್ವದೇಶಿ' ಆಂದೋಲನ ಕರೆ ಮಾರ್ದನಿಸಿಸಿತು. ಸಾವಿರಾರು ಜನರನ್ನು ಬಂಧಿಸಲಾಯಿತು. ಬಂದಿಗಳು ಸೆರೆಮನೆಗಳಲ್ಲಿ ಉಪವಾಸ ಮುಷ್ಕರ ಆರಂಭಿಸಿದರು. ಇಡೀ ದೇಶ ವಿವಿಧರೀತಿಯ ಪ್ರತಿಭಟನೆಗಳಿಂದ ಆಕ್ರಾಂತಗೊಂಡಿತ್ತು. ಒಂದು ದಿನ ಇದ್ದಕ್ಕಿದ್ದಂತೆ ಜವಾಹರಲಾಲ್‌ರನ್ನು ಬಂಧಿಸಲಾಯಿತು. ಪರಿಸ್ಥಿತಿ ತಹಬಂದಿಗೆ ಬರದಿದ್ದಾಗ, ಕರಾಚಿಯಲ್ಲಿದ್ದ ಗಾಂಧೀಜಿಯನ್ನು ಸಹ ಬಂಧಿಸಲಾಯಿತು. ಈ ತೀವ್ರ ಕ್ರಮದ ವಿರುದ್ಧ ಏಳಬಹುದಾದ ದಂಗೆಯನ್ನು ಮುನ್ನೋಡಿದ ಬ್ರಿಟಿಷ್ ಸರ್ಕಾರ ವಿಶೇಷ ಅಧಿಕಾರಗಳನ್ನು ಚಲಾಯಿಸಿ ಕಾಂಗ್ರೆಸ್ ಸಂಸ್ಥೆಯನ್ನು ಬಹಿಷ್ಕರಿಸಿತು. ಜಯಪ್ರಕಾಶರ ಕಾರ್ಯಾಲಯದ ಮೇಲೆ ದಾಳಿ ನಡೆಸಿ ಎಲ್ಲ ದಾಖಲೆ ಪತ್ರಗಳನ್ನೂ ವಶಪಡಿಸಿಕೊಳ್ಳಲಾಯಿತು. ಜಯಪ್ರಕಾಶ್ ಸರ್ಕಾರದ ಕಣ್ಣು ತಪ್ಪಿಸಿ ಭೂಗತರಾದರು. ಅವರು ಮುಂಬೈ ತಲುಪಿ ಹತ್ತಿ ಗಿರಣಿಗಳ ಕಾರ್ಮಿಕರನ್ನು ಸಂಘಟಿಸತೊಡಗಿದರು. ಈ ಮಧ್ಯೆ ಮಹಿಳಾ ಮತಪ್ರದರ್ಶನ ನಡೆಸಿದ ಪ್ರಭಾವತಿಯನ್ನು ಇಡೀ ನೆಹರೂ ಕುಟುಂಬದ ಮಹಿಳೆಯರೊಡನೆ ಬಂಧಿಸಲಾಯಿತು. ಪ್ರೌಢ ಶಾಲೆಯಲ್ಲಿ ಓದುತ್ತಿದ್ದ ಜಯಪ್ರಕಾಶರ ತಮ್ಮ ರಾಜೇಶ್ವರ ಪ್ರಸಾದರನ್ನು ಯೂತ್‌ಲೀಗ್ ಚಟುವಟಿಕೆಗಳಿಗಾಗಿ ಸೆರೆಮನೆಗೆ ತಳ್ಳಲಾಯಿತು. ಪ್ರಭಾವತಿಯವರ ತಂದೆ ಬ್ರಿಜ್ ಕಿಶೋರ್ ಪ್ರಸಾದರನ್ನು ಸಹ ದಸ್ತಗಿರಿ ಮಾಡಲಾಗಿತ್ತು.

ಎರಡನೇ ದುಂಡುಮೇಜಿನ ಪರಿಷತ್ತು

ಇವೆಲ್ಲದರ ನಡುವೆಯೂ, ದೇಶಾದ್ಯಂತ ಮುಷ್ಕರಗಳು. ಮತ ಪ್ರದರ್ಶನಗಳು ಹೆಚ್ಚುತ್ತಲೇ ಹೋದವು. ಲಾರ್ಡ್ ಇರ್ವಿನ್‌ಗೆ ಈ ವ್ಯಾಪಕ ಪ್ರತಿಭಟನೆಯನ್ನು ತಡೆಯುವುದು ಅಸಾಧ್ಯವೆನ್ನಿಸಿತು. ಇದೇ ಹೊತ್ತಿಗೆ ಬ್ರಿಟಿಷ್ ಸರ್ಕಾರ ಮತ್ತು ಸ್ವಾತಂತ್ರ್ಯ ಹೋರಾಟಗಾರರ ನಡುವಣ ಸಂಧಾನಕ್ಕಾಗಿ ಹಾಗೂ ಭಾರತಕ್ಕೆ ನೀಡಬೇಕಾದ ಸ್ವಾತಂತ್ರ್ಯದ ವ್ಯಾಪ್ತಿ ಮತ್ತು ಸ್ವರೂಪದ ಬಗ್ಗೆ ಚರ್ಚೆ ನಡೆಸಲು ಲಂಡನ್‌ನಲ್ಲಿ ಎರಡನೇ ದುಂಡುಮೇಜಿನ ಪರಿಷತ್ತನ್ನು ವ್ಯವಸ್ಥೆಗೊಳಿಸಲಾಗಿತ್ತು. ಗಾಂಧಿ ಇಲ್ಲದ ಮಾತುಕತೆ ಮೊದಲನೇ ದುಂಡುಮೇಜಿನ ಪರಿಷತ್ತಿನಂತೆಯೇ ನಿಷ್ಪ್ರಯೋಜಕವಾದೀತು ಎಂಬ ಅಭಿಪ್ರಾಯದೊಡನೆ, ಇರ್ವಿನ್ ಗಾಂಧೀಜಿಯೊಡನೆ ಮತ್ತೊಂದು ಸಂಧಾನದ ಪ್ರಯತ್ನ ಕೈಗೊಂಡರು. ಯೆರವಾಡ ಸೆರೆಮನೆಯಲ್ಲಿಯೇ ಗಾಂಧೀಜಿ, ಪಟೇಲ್ ನೆಹರೂ ಮತ್ತು ಇತರ ನಾಯಕರ ನಡುವೆ ಸಮಾಲೋಚನೆಗಳು ನಡೆದವು. ನಾಗರಿಕ ಅಸಹಕಾರವನ್ನು ಸ್ವಲ್ಪ ಕಾಲದ ಮಟ್ಟಿಗೆ ಮಾತ್ರ ನಿಲ್ಲಿಸಲು ಗಾಂಧೀಜಿ ಒಪ್ಪಿದರು. ಬ್ರಿಟಿಷ್ ಸರ್ಕಾರ ಸಾಮಾನ್ಯ ಬಂದಿಗಳೆಲ್ಲರನ್ನೂ ಬಿಡುಗಡೆ ಮಾಡಿತು. ಕಾಂಗ್ರೆಸ್ ಮೇಲೆ ವಿಧಿಸಿದ ಬಹಿಷ್ಕಾರವನ್ನೂ ಹಿಂತೆಗೆದುಕೊಂಡಿತು. ಮುಟ್ಟುಗೋಲು ಹಾಕಿಕೊಂಡಿದ್ದ ಆಸ್ತಿಪಾಸ್ತಿಗಳನ್ನು ಹಿಂದಕ್ಕೆ ಕೊಟ್ಟಿತು. ತೆರಿಗೆ ಕೊಡಬೇಡವೆನ್ನುವ ಕರೆಯನ್ನು ಗಾಂಧೀಜಿ ಹಿಂತೆಗೆದುಕೊಂಡರು. ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು

ಒಪ್ಪಿಕೊಂಡರು. ಯಾವುದೇ ಗಮನಾರ್ಹ ಪ್ರತಿಫಲವಿಲ್ಲದೆಯೇ—ಅದೂ ಗಲ್ಲುಶಿಕ್ಷೆಗೆ ಒಳಗಾಗಿದ್ದ ಭಗತ್‌ಸಿಂಗ್ ಮತ್ತು ಆತನ ಗೆಳೆಯರನ್ನು ಉಳಿಸಿಕೊಳ್ಳಲಾಗದೆ—ಜನಶಕ್ತಿಯ ಪ್ರವಾಹದಂತಿದ್ದ ಈ ಚಳುವಳಿಯನ್ನು ತಡೆದು ನಿಲ್ಲಿಸಿದುದು ಜವಾಹರಲಾಲ್ ನೆಹರು, ಜಯಪ್ರಕಾಶ್, ಮಸಾನಿ ಮುಂತಾದ ತರುಣ ಕಾಂಗ್ರೆಸಿಗರಲ್ಲಿ ಅಸಮಾಧಾನ ಉಂಟುಮಾಡಿತು. ಗಾಂಧೀಜಿಯವರ ಕ್ರಮವನ್ನು 'ಶರಣಾಗತಿ' ಎಂದು ಕರೆದ ಸುಭಾಷ್ ಚಂದ್ರಬೋಸ್, ನಂತರ ನಡೆದ ಕರಾಚಿ ಕಾಂಗ್ರೆಸ್ ಸಮ್ಮೇಳನದಲ್ಲಿ ಕಪ್ಪು ಬಾವುಟ ಪ್ರದರ್ಶನ ನಡೆಸಿದರು. ಆದರೆ ಜಯಪ್ರಕಾಶ್, ಜವಾಹರ್ ಮುಂತಾದವರು ಸೇರಿದಂತೆಯೇ ಸಮ್ಮೇಳನ ಗಾಂಧೀಜಿಯವರ ಕ್ರಮವನ್ನು ಅನುಮೋದಿಸಿತು! ಮಹಾತ್ಮ ಸಂಧಾನಗಳಿಗಾಗಿ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಹಡಗು ಹತ್ತಿದರು.

ಇತ್ತ ಜಯಪ್ರಕಾಶರು ಮತ್ತೆ ಕಾರ್ಮಿಕ ಸಂಘಟನೆಯ ಕಾರ್ಯವನ್ನು ಮುಂದುವರಿಸಿದರು. ಆದರೆ ಜಯಪ್ರಕಾಶರ ಕೆಲಸ ಈ ಬಾರಿ ಕಷ್ಟವೆನಿಸಿತು. ಒಂದು ಕಡೆ ದುಂಡು ಮೇಜಿನ ಪರಿಷತ್ತಿಗೆ ಗಾಂಧೀಜಿಯನ್ನು ಆಹ್ವಾನಿಸಿದ ಬ್ರಿಟಿಷ್ ಸರ್ಕಾರ ಇನ್ನೊಂದೆಡೆ ಸ್ವಾತಂತ್ರ್ಯ ಹೋರಾಟದ ಹುಟ್ಟಡಗಿಸುವ ಸೂಚನೆಯೊಂದಿಗೆ, ಇರ್ವಿನ್ನರ ಸ್ಥಾನದಲ್ಲಿ ಕಪಟಿ ಮತ್ತು ಕ್ರೂರಿಯಾದ ಲಾರ್ಡ್ ವಿಲಿಂಗ್‌ಡನ್ ಎಂಬುವನನ್ನು ವೈಸ್‌ರಾಯ್ ಎಂದು ನೇಮಿಸಿತು. ಆತ ವಿಚಾರಣೆಯಿಲ್ಲದ ಬಂಧನಗಳು, ಪತ್ರಿಕಾ ನಿರ್ಬಂಧಗಳು, ಆಸ್ತಿಪಾಸ್ತಿಗಳ ನಿಷ್ಕಾರಣ ಮುಟ್ಟುಗೋಲು, ಹಿಂದೂ ಮುಸ್ಲಿಮರ ನಡುವೆ ಹಾಗೂ ಅಸ್ಪೃಶ್ಯರು ಮತ್ತು ಸವರ್ಣೀಯರ ಭಿನ್ನಾಭಿಪ್ರಾಯ ಉಂಟಾಗುವಂತೆ ಪಿತೂರಿ ನಡೆಸುವುದು ಮುಂತಾದ ಅನಾಗರಿಕ ಕ್ರಮಗಳ ಮೂಲಕ ದೇಶವನ್ನು ಗೊಂದಲ, ಭಯಭೀತಿಗಳಲ್ಲಿ ಮುಳುಗಿಸಿದನು. ಜಯಪ್ರಕಾಶ್ ಈ ಹಿನ್ನೆಲೆಯ ಅತ್ಯಾಚಾರಗಳ ಮಾಹಿತಿಯನ್ನು ಸಂಗ್ರಹಿಸಿ ದೀರ್ಘ ವರದಿಯೊಂದನ್ನು ಸಿದ್ಧಪಡಿಸಿದರು.

ದೇಶವಿಭಜನೆಯ ಮಸಲತ್ತು

ಗಾಂಧೀಜಿ ನಿರಾಶರಾಗಿ ಸ್ವದೇಶಕ್ಕೆ ಹಿಂತಿರುಗಿದರು. ದೇಶ ವಿಭಜನೆಯ ಮಸಲತ್ತಿನ ಸ್ಪಷ್ಟಸೂಚನೆ ಅಲ್ಲಿ ಅವರಿಗೆ ಸಿಕ್ಕಿತ್ತು. ಮುಸ್ಲಿಂಲೀಗ್ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಪ್ರಸ್ತಾಪ ಮಾಡಿದರೆ, ಡಾ. ಅಂಬೇಡ್ಕರರು ದಲಿತರ ಪ್ರತ್ಯೇಕತೆಯ 'ವಾಸ್ತವ'ವನ್ನು ಪ್ರತಿಪಾದಿಸಿ, ಆ ವರ್ಗಕ್ಕೆ ವಿಶೇಷ ರಕ್ಷಣೆ ಒದಗಿಸುವ ಅಗತ್ಯವನ್ನು ಒತ್ತಿಹೇಳಿದ್ದರು. ದೇಶೀ ರಾಜರು ತಂತಮ್ಮ ಸಂಸ್ಥಾನಗಳ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು. ಮುಂಬೈನ ಸಭೆಯೊಂದರಲ್ಲಿ ಗಾಂಧೀಜಿ ತಾವು ಲಂಡನ್‌ನಲ್ಲಿ ನಡೆಸಿದ ಮಾತುಕತೆಗಳ ವಿವರಗಳನ್ನು ನೀಡಲಿದ್ದರು. ಕಾಂಗ್ರೆಸಿನ ಪ್ರಮುಖರೆಲ್ಲರೂ ಮುಂಬೈನೆಡೆಗೆ ಪ್ರಯಾಣ ಮಾಡಿದರು. ತಕ್ಷಣ ಸರ್ಕಾರ ಕಾರ್ಯೋನ್ಮುಖವಾಯಿತು. ಜವಾಹರಲಾಲರು ಸೇರಿದಂತೆ ಹಲವಾರು ಪ್ರಮುಖ

ನಾಯಕರನ್ನು ರೈಲುಗಳಲ್ಲಿ ಬಂಧಿಸಲಾಯಿತು. ಆಗ ಅಷ್ಟೇನೂ ಪ್ರಸಿದ್ಧರಾಗಿರದ ಜಯಪ್ರಕಾಶ್, ಪೊಲೀಸರ ಕಣ್ಣು ತಪ್ಪಿಸಿ ಮುಂಬೈ ತಲುಪಿದರು. ಗಾಂಧೀಜಿಯನ್ನು ಸ್ವಾಗತಿಸಲು ಕಾದುನಿಂತಿದ್ದ ಜನ ಸಮೂಹದಲ್ಲಿ ಸೇರಿಹೋದರು.

೧೯೩೨ರ ಜನವರಿ ೧ ರಂದು ಗಾಂಧೀಜಿ ಹಾಜರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ನಡೆಸಿ ಒಂದು ವರ್ಷದ ಅಸಹಕಾರ ಸತ್ಯಾಗ್ರಹದ ಅವಲೋಕನ ಮಾಡಿತು; ಪೊಲೀಸ್ ಅತ್ಯಾಚಾರಗಳನ್ನು ಖಂಡಿಸಿತು. ಜಯಪ್ರಕಾಶ್ ಸಿದ್ಧಪಡಿಸಿದ್ದ ವರದಿಯನ್ನು ಪರಿಶೀಲಿಸಿ, ಈ ಅನಾಗರಿಕ ಕೃತ್ಯಗಳ ಬಗ್ಗೆ ತನಿಖೆ ನಡೆಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟನ್ನು ಒತ್ತಾಯಪಡಿಸಿತು. ಇದಕ್ಕೆ ಪ್ರತೀಕಾರವೆಂಬಂತೆ ವಿಲಿಂಗ್‌ಡನ್ ದೇಶಾದ್ಯಂತ ಕಾಂಗ್ರೆಸ್ಸಿಗರನ್ನು ಬೇಟೆಯಾಡತೊಡಗಿದನು. ಒಂದು ದಿನ ಗಾಂಧೀಜಿಯನ್ನೂ ದಸ್ತಗಿರಿ ಮಾಡಲಾಯಿತು. ಇದರ ವಿರುದ್ಧ ನಡೆದ ಬೃಹತ್ ಪ್ರದರ್ಶನಗಳಲ್ಲಿ ಮೂವತ್ತು ಸಾವಿರಕ್ಕೂ ಹೆಚ್ಚು ಜನರನ್ನು ಬಂಧಿಸಲಾಯಿತು. ಈಗ ಜಯಪ್ರಕಾಶ್, ರಾಜಗೋಪಾಲಾಚಾರಿ ಮತ್ತು ರಾಜೇಂದ್ರ ಪ್ರಸಾದರ ಹೊರತಾಗಿ ಮಿಕ್ಕೆಲ್ಲ ನಾಯಕರೂ ಸೆರೆಮನೆ ಸೇರಿದ್ದರು.

ಮೊದಲ ಸೆರೆಮನೆ ವಾಸ

ಜಯಪ್ರಕಾಶರು ಮುಂಬೈನಲ್ಲಿ ಗುಪ್ತವಾಗಿ ಕಾಂಗ್ರೆಸ್ ಕಾರ್ಯಾಲಯವೊಂದನ್ನು ಸ್ಥಾಪಿಸಿದರು. ವಿವಿಧ ಜನರನ್ನು ಗುಟ್ಟಾಗಿ ಭೇಟಿಯಾಗಿ ಸರ್ಕಾರ ವಿರೋಧೀ ಕಾರ್ಯಾಚರಣೆಯನ್ನು ಮುಂದುವರಿಸಿದರು. ಒಂದೆರಡು ತಿಂಗಳುಗಳಲ್ಲಿಯೇ ಬನಾರಸ್‌ನಲ್ಲಿ ಗುಟ್ಟಾಗಿ, ರಾಜಗೋಪಾಲಚಾರಿ, ಮದನಮೋಹನ ಮಾಳವೀಯ ಹಾಗೂ ರಾಜೇಂದ್ರ ಪ್ರಸಾದರು ಸೇರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯನ್ನು ವ್ಯವಸ್ಥೆಗೊಳಿಸಿದರು; ಪ್ರಸಕ್ತ ಪರಿಸ್ಥಿತಿಯಲ್ಲಿ ಕೈಗೊಳ್ಳಬಹುದಾದ ಕಾರ್ಯಕ್ರಮವನ್ನು ರೂಪಿಸಿದರು. ಅಷ್ಟರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್, ಪೊಲೀಸ್ ಅತ್ಯಾಚಾರಗಳ ಬಗ್ಗೆ ವರದಿಯೊಂದನ್ನು ಸಿದ್ಧಪಡಿಸಲು ನಿಯೋಗವೊಂದನ್ನು ಕಳಿಸಿತು. ಈ ನಿಯೋಗಕ್ಕೆ ಸಾಕ್ಷ್ಯಾಧಾರಗಳನ್ನು ಒದಗಿಸಲು ಜಯಪ್ರಕಾಶ್ ಮುಂದೆ ಬಂದರು. ಆ ಮೂಲಕ ಜಯಪ್ರಕಾಶ್ ಮೊದಲ ಬಾರಿಗೆ, ಪೊಲೀಸರಿಗೆ ಬೇಕಾದ ವ್ಯಕ್ತಿಯಾದರು. ಅವರ ಹೆಸರು ಪೊಲೀಸ್ ದಾಖಲೆಗಳಲ್ಲಿ ಸೇರಿತು. ಜಯಪ್ರಕಾಶರ ವಿರುದ್ಧ ಬೇಹುಗಾರಿಕೆ ಆರಂಭವಾಯಿತು.

ನಿಯೋಗ ದಕ್ಷಿಣ ಭಾರತದ ಪ್ರವಾಸ ಕೈಗೊಂಡಿತು. ಜಯಪ್ರಕಾಶರೂ ನಿಯೋಗದ ಜತೆ ಮದ್ರಾಸ್‌ಗೆ (ಈಗಿನ ಚೆನ್ನೈ) ಬಂದು, ಹಲವಾರು ಜನರ ಬಳಿ ನಿಯೋಗದ ಸದಸ್ಯರನ್ನು ಕರೆದುಕೊಂಡು ಹೋಗಿ ಬ್ರಿಟಿಷ್ ಸರ್ಕಾರದ ಅತ್ಯಾಚಾರಗಳ ದಾಖಲೆಗಳನ್ನು ಒದಗಿಸಿದರು. ಮದ್ರಾಸ್‌ನಲ್ಲಿ ತನ್ನ ಕೆಲಸ ಮುಗಿಸಿದ ನಿಯೋಗ ಬೆಂಗಳೂರಿಗೆ ಹೊರಟಿತು. ರೈಲ್ವೆ ನಿಲ್ದಾಣಕ್ಕೆ ಹೋಗಿ ಜಯಪ್ರಕಾಶ್ ನಿಯೋಗವನ್ನು ಬೀಳ್ಕೊಟ್ಟರು. ರೈಲು ಹೊರಟೊಡನೆಯೇ ಜಯಪ್ರಕಾಶರ ಹೆಗಲ ಮೇಲೆ ಯಾರೋ ಕೈಇಟ್ಟರು. ಜಯಪ್ರಕಾಶ್ ಹಿಂದಿರುಗಿ ನೋಡಿದಾಗ ಪೊಲೀಸರು ತಮ್ಮ ಬೆನ್ನು ಬಿದ್ದಿರುವುದು ಕಂಡು ಬಂದಿತು:

"ನೀವೇನಾ ಜಯಪ್ರಕಾಶ್?"

"ಏಕೆ?"

"ಏಕೂ ಇಲ್ಲ. ನಿಮ್ಮನ್ನು ಬಂಧಿಸಲಾಗಿದೆ"

"ಯಾವ ಆಪಾದನೆಯ ಮೇಲೆ?"

ಜಯಪ್ರಕಾಶರ ಈ ಉದ್ರಿಕ್ತ ಪ್ರಶ್ನೆಗೆ, ಪೊಲೀಸರು ಉತ್ತರ ಕೊಡಲಿಲ್ಲ. ಅವರನ್ನು ಪೊಲೀಸರು ತಮ್ಮ ಜೀಪಿಗೆ ಕುಳ್ಳಿರಿಸಿ ಠಾಣೆಗೆ ಒಯ್ದರು. ಸೇವಕನ ಮೂಲಕ ಈ ಸುದ್ದಿ ತಿಳಿದ ರಾಜಗೋಪಾಲಾಚಾರಿ ಅವರು, ಮುಂಬೈ ರಾಜ್ಯದ ಶಾಸನದ ಪ್ರಕಾರ ಪೊಲೀಸರು ಜಯಪ್ರಕಾಶರನ್ನು ಮದ್ರಾಸ್ ರಾಜ್ಯದಲ್ಲಿ ಬಂಧಿಸಿರುವುದು ಅಕ್ರಮವೆಂದು ಮದ್ರಾಸ್ ಶ್ರೇಷ್ಠ ನ್ಯಾಯಾಲದಲ್ಲಿ ಅರ್ಜಿ ಸಲ್ಲಿಸಿದರು. ನ್ಯಾಯಾಲಯ ಅರ್ಜಿಯನ್ನು ತಳ್ಳಿಹಾಕಿತು. ಜಯಪ್ರಕಾಶರನ್ನು ೧೯೩೩ರ ಜನವರಿಯಲ್ಲಿ ರೈಲೊಂದರ ಮೂಲಕ ನಾಸಿಕ್‌ಗೆ ಒಯ್ಯಲಾಯಿತು.

ಗೆಳೆಯರ ಗುಂಪಿನಲ್ಲಿ ಕ್ರಾಂತಿಯ ಕನಸು

ನಾಸಿಕ್ ಸೆರೆಮನೆಯಲ್ಲಿ ಕಳೆದ ಒಂದು ವರ್ಷ ಮೂರು ತಿಂಗಳುಗಳ ಅವಧಿ ಜಯಪ್ರಕಾಶರ ಬದುಕಿನ ಮತ್ತೊಂದು ಪ್ರಮುಖ ಘಟ್ಟ. ಗಾಂಧೀಜಿಯ ನಿಕಟ ಸಹವಾಸದಿಂದಾಗಿ ಹಿನ್ನೆಲೆಗೆ ಸರಿದಿದ್ದ ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳು ಮತ್ತೆ ಸೆರೆಮನೆಯಲ್ಲಿ ಜಯಪ್ರಕಾಶರ ಮನಸ್ಸನ್ನು ಕೆಣಕಿದವು. ಆಗ ತಾನೇ ಸೋವಿಯತ್ ಒಕ್ಕೂಟ ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ಎಲ್ಲ ರೀತಿಯ ಪ್ರಚಾರದೊಡನೆ ಆರಂಭಿಸಿತ್ತು. ಸೋವಿಯತ್ ಒಕ್ಕೂಟ ಆ ಕ್ಷಣದಲ್ಲಿ ವಿಶ್ವಾದ್ಯಂತ ಇದ್ದ ಎಲ್ಲ ಸಮಾಜವಾದಿಗಳ ಸ್ಫೂರ್ತಿ ಮತ್ತು ಆಕರ್ಷಣೆಯ ಕೇಂದ್ರವಾಗಿತ್ತು. ಇದಕ್ಕೆ ಜಯಪ್ರಕಾಶ್ ನಾರಾಯಣರೇನೂ ಹೊರತಾಗಿರಲಿಲ್ಲ. ಅಲ್ಲಿ ರಾಷ್ಟ್ರ ಪುನರ್ನಿರ್ಮಾಣದ ಕಾರ್ಯ ಭರದಿಂದ ಸಾಗಿದ್ದರೆ, ಇಲ್ಲಿ ರಾಷ್ಟ್ರ ವಿಮೋಚನೆಯೂ ಆಗದೆ, ಖಚಿತ ಭರವಸೆಯಿಲ್ಲದ ಹಾಗೂ ಅತ್ಯಂತ ವಿಚಿತ್ರವಾದ ನವೀನ ರೀತಿಯ ಹೋರಾಟ ನಡೆಯುತ್ತಿತ್ತು. ಗಾಂಧೀಜಿಯ ನಾಯಕತ್ವದಲ್ಲಿ ಇಂತಹ ಸಾತ್ವಿಕ ಹೋರಾಟವೇ ಮುಂದುವರಿದಲ್ಲಿ ಜಯಪ್ರಕಾಶರಿಗೆ ನಿಕಟ ಭವಿಷ್ಯದಲ್ಲಂತೂ ಸ್ವಾತಂತ್ರ್ಯದ ಮಾತು ಕನಸಿನಂತೆಯೇ ಕಾಣುತ್ತಿತ್ತು. ಜಯಪ್ರಕಾಶ್ ಭಾರತವನ್ನು ಒಂದು ಕಡೆ, ಸೋವಿಯತ್ ಒಕ್ಕೂಟವನ್ನು ಒಂದು ಕಡೆ ಇಟ್ಟು ತೂಗಿ ನೋಡಿದರು. ಸ್ವಾತಂತ್ರ್ಯ ನಂತರದ ಭಾರತವನ್ನು ಕಲ್ಪಿಸಿಕೊಂಡರು; ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದಗಳ ಹೊರತಾಗಿ ಈ ದೇಶದ ಸಮಸ್ಯೆಗಳಿಗೆ ಮತ್ತಾವ ದಾರಿಗಳೂ ಇಲ್ಲವೆನಿಸಿತು ಅವರಿಗೆ.

ಜಯಪ್ರಕಾಶರ ಈ ಆಲೋಚನೆಗಳು, ಸೆರೆಮನೆಯಲ್ಲಿ ಸಮಾನ ಮನೋಧರ್ಮದ ಒಂದು ತಂಡವನ್ನೇ ನಿರ್ಮಿಸಿತು. ಅಲ್ಲಿ ಬಂಧನದಲ್ಲಿದ್ದ ಅಶೋಕ ಮೆಹ್ತಾ, ಅಚ್ಯುತ್ ಪಟವರ್ಧನ್, ಯೂಸೆಫ್ ಮೆಹ್ರೋಲಿ, ಮೀನೂಮಸಾನಿ ಇವರೆಲ್ಲರೂ ಸಮಾಜವಾದದ

ನಿಷ್ಠಾವಂತ ವಿದ್ಯಾರ್ಥಿಗಳಾಗಿದ್ದರು. ಸೆರೆಮನೆಯ ಗ್ರಂಥ ಭಂಡಾರ ಇವರಿಗೆ ಪುಸ್ತಕಗಳನ್ನು ಒದಗಿಸುತ್ತಿತ್ತು. ಈ ಸೆರೆವಾಸದ ಅವಧಿ ಇವರೆಲ್ಲರಿಗೂ ತಮ್ಮ ಸಮಾಜವಾದದ ಅಭ್ಯಾಸವನ್ನು ಮುಂದುವರಿಸಲು ಸಹಾಯಕವಾಗಿತ್ತು. ಸಂಜೆ ಕೋಠಡಿಗಳಿಗೆ ಕೂಡಿ ಹಾಕುವವರೆಗೂ ಇವರೆಲ್ಲ ಸೆರೆಮನೆಯ ಅಂಗಳದಲ್ಲಿ ಕೂತು ಒಟ್ಟಿಗೆ ಓದಲು, ಚರ್ಚಿಸಲು ಹರಟೆ ಹೊಡೆಯಲು ಅವಕಾಶವಿತ್ತು. ಮಾರ್ಕ್ಸ್‌ವಾದ ಮತ್ತು ಲೆನಿನ್‌ವಾದದ ಬಗ್ಗೆ ಈ ಗುಂಪಿನಲ್ಲಿ ವಿವರವಾದ ಚರ್ಚೆ ನಡೆಯಿತು. ಜಯಪ್ರಕಾಶರೊಬ್ಬರನ್ನು ಬಿಟ್ಟು ಮತ್ತಾರೂ ತಮ್ಮನ್ನು ನಿರ್ದಿಷ್ಟವಾಗಿ ಮಾರ್ಕ್ಸ್‌ವಾದಿ ಎಂದಾಗಲೀ ಲೆನಿನ್‌ವಾದಿಯೆಂದಾಗಲೀ ಕರೆದುಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಆದರೆ ವರ್ಗ ಹೋರಾಟದ ಅನಿವಾರ್ಯತೆಯ ಬಗ್ಗೆ ಈ ಯಾರಲ್ಲಿಯೂ ಭಿನ್ನಾಭಿಪ್ರಾಯವಿರಲಿಲ್ಲ. ಸಾಮ್ರಾಜ್ಯವಾದಿಗಳ ವಿರುದ್ಧ ಹೋರಾಡುವುದರೊಡನೆಯೇ ಬಂಡವಾಳಶಾಹಿಯ ವಿರುದ್ಧವೂ ರೈತ-ಕಾರ್ಮಿಕರ ಹೋರಾಟವನ್ನು ಸಂಘಟಿಸಿದರೆ ಮಾತ್ರ ಸ್ವತಂತ್ರ ಭಾರತದ ಸಂಪೂರ್ಣ ಪುನರ್ನಿರ್ಮಾಣ ಸಾಧ್ಯ ಎಂಬುದು ಅವರೆಲ್ಲರ ಸಾಮಾನ್ಯ ಅಭಿಪ್ರಾಯವಾಗಿತ್ತು. ಅಲ್ಲದೆ, ಈ ಮಧ್ಯೆ ಗಾಂಧೀಜಿ ಅಹಿಂಸೆ-ಸಂಧಾನ-ಸಮಾಧಾನಗಳ ನೆಲೆಯಲ್ಲಿ ನಾಗರಿಕ ಅಸಹಕಾರ ಚಳುವಳಿಯನ್ನು ಆಗಾಗ್ಗೆ ಹಿಂತೆಗೆದುಕೊಂಡು ಚಳುವಳಿಕಾರರಿಗೆ 'ರಚನಾತ್ಮಕ' ಕೆಲಸಗಳಲ್ಲಿ ತೊಡಗಲಾರಂಭಿಸುವಂತೆ ಕೊಡುತ್ತಿದ್ದ ಕರೆ, ಅವರೆಲ್ಲರನ್ನೂ ಅಶಾಂತಿ-ಗೊಂದಲಕ್ಕೀಡು ಮಾಡಿತ್ತು. ಅಲ್ಲದೆ, ಬಂಡವಾಳಗಾರರು ತಮ್ಮ ಆಸ್ತಿಯನ್ನು ಸಮಾಜದ ಪ್ರಯೋಜನಕ್ಕಾಗಿ 'ಟ್ರಸ್ಟ್' ಆಗಿ ಪರಿವರ್ತಿಸುವಂತೆ ಅವರ ಮನವೊಲಿಸುವ ಗಾಂಧೀಜಿಯವರ ಆಲೋಚನೆ ಅವರೆಲ್ಲರಿಗೆ ಭೋಳೆತನವಾಗಿ ಕಂಡಿತು. ಮನುಷ್ಯನ ಸಂಕೀರ್ಣ ಚಿತ್ತವೃತ್ತಿಯನ್ನು ಗಾಂಧೀಜಿ ಸರಳೀಕರಿಸಿ ತಪ್ಪಾಗಿ ಅಂದಾಜು ಮಾಡಿದ್ದಾರೆಂದು ಅವರೆಲ್ಲರೂ ಅಭಿಪ್ರಾಯಪಟ್ಟರು. ಆದರೆ ಸದ್ಯಕ್ಕೆ ಹೋರಾಟದ ಏಕೈಕ ಸಾಮೂಹಿಕ ವೇದಿಕೆಯಾಗಿರುವ ಕಾಂಗ್ರೆಸ್ಸನ್ನು, ಅದರ ಆನುಷಂಗಿಕ ದೌರ್ಬಲ್ಯಗಳ ಕಾರಣದ ಮೇಲೆ ತೊರೆಯದೆ, ಅದರಲ್ಲಿಯೇ ಇದ್ದುಕೊಂಡು ಅದಕ್ಕೆ ಪ್ರಗತಿಶೀಲತೆಯ ಸ್ವರೂಪ ಕೊಡುವ ತೀರ್ಮಾನ ಮಾಡಿದರು.

ಸಮಾಜವಾದಿ ಆಂದೋಲನಕ್ಕೆ ನಾಂದಿ

ಜಯಪ್ರಕಾಶ್ ಮಾನಸಿಕವಾಗಿ ಎಂತಹ ಡೋಲಾಯಮಾನ ಸ್ಥಿತಿಯಲ್ಲಿದ್ದರೆಂದರೆ, ಕಮ್ಯೂನಿಸ್ಟ್ ಪಕ್ಷ ಆಗ ಸ್ವಾತಂತ್ರ್ಯ ಹೋರಾಟವನ್ನು ಬೆಂಬಲಿಸಿದ್ದಲ್ಲಿ ಮತ್ತು ಗಾಂಧೀಜಿಯನ್ನು ಅತ್ಯಂತ ವೈಯಕ್ತಿಕವಾಗಿ ದೂಷಿಸುವ ಪ್ರಯತ್ನ ಮಾಡದೆ ಒಂದಿಷ್ಟು ಸಂಯಮ ತೋರಿದ್ದಲ್ಲಿ, ಅವರು ಬಹುಶಃ ಆ ಪಕ್ಷವನ್ನು ಸೇರಿಬಿಡುತ್ತಿದ್ದರು. ಅಲ್ಲದೆ ಕಮ್ಯೂನಿಸ್ಟ್ ಪಕ್ಷ ಜನರನ್ನು ಆಕರ್ಷಿಸುವಲ್ಲಿ ವಿಫಲಗೊಂಡಿದ್ದು, ಯಾವುದೇ ಸ್ಪಷ್ಟ ಕಾರ್ಯಕ್ರಮವನ್ನು ಮಂಡಿಸಲಾಗದಷ್ಟು ದುರ್ಬಲವಾಗಿತ್ತು. ಇದ್ದ ನಾಲ್ಕಾರು ಕಮ್ಯೂನಿಸ್ಟರೂ; ಬ್ರಿಟಿಷ್ ಸರ್ಕಾರ ಕಾಂಗ್ರೆಸ್ಸಿಗರನ್ನು ನಿಷ್ಕರುಣೆಯಿಂದ ಬೇಟೆ ಮಾಡುತ್ತಿದ್ದಾಗ, ಕಾಂಗ್ರೆಸ್ ಧೋರಣೆಯನ್ನು 'ಬೂರ್ಜ್ವಾ

ರಾಷ್ಟ್ರೀಯತೆ' ಎಂದು ತೆಗಳುತ್ತಾ ನೇತಾತ್ಮಕ ವರ್ತನೆಯಲ್ಲಿ ತೊಡಗಿದ್ದರು. ಹೀಗಾಗಿ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಕಾಂಗ್ರೆಸ್ ನೇತೃತ್ವದ ಹೋರಾಟ ಬಿಟ್ಟು ಬೇರೆ ಮಾರ್ಗವೇ ಇಲ್ಲ ಎಂಬ ಮನವರಿಕೆಯೊಡನೆ ಕಾಂಗ್ರೆಸ್‌ನಲ್ಲಿಯೇ ಉಳಿಯಲು ಜಯಪ್ರಕಾಶರು ನಿರ್ಧರಿಸಿದರು. ಆದರೆ 'ಗುಲಾಮಗಿರಿಯ ಕೈಕೋಳಗಳನ್ನು ಕಿತ್ತೆಸೆಯಲು' ಕಾಂಗ್ರೆಸ್ ಸಂಸ್ಥೆಯಲ್ಲಿಯೇ ವರ್ಗಹೋರಾಟವನ್ನಾಧರಿಸಿದ ಸಮಾಜವಾದೀ ವಿಚಾರಧಾರೆಯ ಗುಂಪೊಂದನ್ನು ಕಟ್ಟುವ ಆಲೋಚನೆಯನ್ನೂ ಅವರು ಮಾಡಿದರು. ಈ ಬಗ್ಗೆ ಅವರು ಸೆರೆಮನೆಯಲ್ಲಿದ್ದ ಸಮಾನಮನಸ್ಕ ಗೆಳೆಯರೊಡನೆ ಪ್ರಸ್ತಾಪ ಮಾಡಿದರು. ಎಲ್ಲರ ಇಚ್ಛೆಯೂ ಅದೇ ಆಗಿತ್ತು. ಹೀಗೆ, ಭಾರತದ ಸಮಾಜವಾದಿ ಆಂದೋಲನ ಸೆರೆಮನೆಯ ಅಂಗಳದಲ್ಲಿ ತನ್ನ ಹುಟ್ಟು ಕಂಡಿತು.

ಕೆಲವೇ ದಿನಗಳಲ್ಲಿ ಜಯಪ್ರಕಾಶ್ ಮತ್ತು ಮೀನೂಮಸಾನಿಯವರ ಬಿಡುಗಡೆ ಯಾಯಿತು. ಇನ್ನೂ ತಿಂಗಳುಗಟ್ಟಲೆ ಸೆರೆಮನೆಯಲ್ಲಿ ಕಾಲ ದೂಡಬೇಕಾಗಿದ್ದ ಅವರ ಇತರ ಗೆಳೆಯರು, ಈ ಇಬ್ಬರನ್ನು ಬರಲಿರುವ ರೋಮಾಂಚನಕಾರಿ ಸಮಾಜವಾದಿ ಆಂದೋಲನದ ಕ್ರಾಂತಿದೂತರಂತೆ ಹೆಮ್ಮೆಯಿಂದ ಬೀಳ್ಕೊಟ್ಟರು.

■

೪. ಸಮಾಜವಾದಿ ಸಂಘಟನೆ: ತಾತ್ವಿಕ ಘರ್ಷಣೆ

೧೯೩೪ರ ಜನವರಿಯಲ್ಲಿ ಜಯಪ್ರಕಾಶರು ಸಮಾನ ಮನಸ್ಕ ಗೆಳೆಯರೊಂದಿಗೆ ನಡೆಸಿದ ವೈಚಾರಿಕ ಮಂಥನವಲ್ಲಿ ಹೊಸ ಶಕ್ತಿ ಪಡೆದುಕೊಂಡು ಸೆರೆಮನೆಯಿಂದ ಹೊರ ಬಂದರು. 'ಗುಲಾಮಗಿರಿಯ ಕೈಕೋಳಗಳನ್ನು' ಕಿತ್ತೆಸೆಯುವ ನಿರ್ಧಾರದೊಡನೆ ಹೊರಬಂದಿದ್ದ ಜಯಪ್ರಕಾಶ್, ಸಮಾಜದ ಶ್ರೀಮಂತ ವರ್ಗಗಳು ಅನುವಂಶಿಕವಾಗಿ ಅಥವಾ ರಾಜ್ಯಾನುಗ್ರಹದಿಂದ ಪಡೆದಿದ್ದ ಸವಲತ್ತುಗಳ ವಿರುದ್ಧ ಗಾಢ ಸಿಟ್ಟನ್ನು ಬೆಳೆಸಿಕೊಂಡಿದ್ದರು. ಪ್ರತಿಯೊಬ್ಬನೂ ತನ್ನ ಕೈಲಾದಷ್ಟೂ ದುಡಿಯಬೇಕು ಮತ್ತು ತನಗೆ ಅಗತ್ಯವಾದಷ್ಟು ಪಡೆಯಬೇಕು ಎಂಬುದು ಅವರ ಸಿದ್ಧಾಂತವಾಗಿತ್ತು. ಈ ದಿಸೆಯಲ್ಲಿ ಅವರಿಗೆ ಮಾರ್ಕ್ಸ್ ಮತ್ತು ಲೆನಿನ್—ಈ ಇಬ್ಬರು ಮಾತ್ರ ಮಾರ್ಗದರ್ಶಿಗಳಾಗಿದ್ದರು.

ಲೋಹಿಯಾ ಪ್ರವೇಶ

ಜಯಪ್ರಕಾಶ್ ತಮ್ಮ ತಂದೆ ಹಾಗೂ ಮಾವನವರನ್ನು ಕಾಣಲು ಪಾಟ್ನಾ ತಲುಪಿದ ತದನಂತರದಲ್ಲೇ ಸಮಾಜವಾದೀ ಸಂಘಟನೆಯ ದಿಕ್ಕಿನಲ್ಲಿ ಕಾರ್ಯೋನ್ಮುಖರಾದರು. ತಮ್ಮೊಡನೆ ಸಹಕರಿಸಲು ಬರಬೇಕೆಂದು, ಗಾಂಧಿ ಆಶ್ರಮದಲ್ಲಿದ್ದ ಪ್ರಭಾವತಿಯರನ್ನು ಪಾಟ್ನಾಕ್ಕೆ ಕರೆಸಿಕೊಂಡರು. ಬಿಹಾರದ ತಮ್ಮ ಹಳೇ ಗೆಳೆಯರನ್ನು ಹುರಿದುಂಬಿಸಿ ಸಮಾಜವಾದಿ ಸಂಘಟನೆಯ ಮೊದಲ ಹೆಜ್ಜೆ ಇಟ್ಟರು. ಆ ಹೊತ್ತಿಗೆ ರಾಮಮನೋಹರ ಲೋಹಿಯಾ ಜರ್ಮನಿಯಲ್ಲಿ 'ಉಪ್ಪು ಮತ್ತು ಸತ್ಯಾಗ್ರಹ' ಎಂಬ ವಿಷಯದ ಮೇಲೆ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿ ಪಡೆದು ಭಾರತಕ್ಕೆ ಹಿಂದಿರುಗಿದ್ದರು. ಮೊದಲ ಮಹಾಯುದ್ಧದ ಕಾರ್ಮೋಡಗಳು ಕವಿಯುತ್ತಿದ್ದ ಸಂದರ್ಭದಲ್ಲಿ ಯುರೋಪಿನ ರಾಜಕಾರಣವನ್ನು ಹತ್ತಿರದಿಂದ ನೋಡಿದ್ದ ಲೋಹಿಯಾ, ಪಶ್ಚಿಮದ ಮಾರ್ಕ್ಸ್ ಮತ್ತು ಪೂರ್ವದ ಗಾಂಧಿ ನಡುವೆ ಅನುಸಂಧಾನದ ಸಾಧ್ಯತೆಗಳನ್ನು ಧ್ಯಾನಿಸುತ್ತ ಕಾಂಗ್ರೆಸ್ ಆಂದೋಲನದೊಂದಿಗೆ ಗುರುತಿಸಿಕೊಂಡಿದ್ದಾರು. ಈಗ ಸಮಾಜವಾದಿಗಳ ಸಂಘಟನೆಯ ಪ್ರಯತ್ನ ಆರಂಭವಾದೊಡನೆ ಅವರೂ ಜಯಪ್ರಕಾಶರೊಂದಿಗೆ ಕೈ ಜೋಡಿಸಿದರು.

೧೯೩೪ರ ಮೇ ೧೭ರಂದು ಆಯೋಜಿಸಲಾದ ಸಭೆಯಲ್ಲಿ, ಬಿಹಾರದ ಹಿರಿಯ ನಾಯಕರಾಗಿದ್ದ ಆಚಾರ್ಯ ನರೇಂದ್ರ ದೇವ ಅವರ ಅಧ್ಯಕ್ಷತೆಯಲ್ಲಿ ಬಿಹಾರ್ ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಅಡಿಪಾಯ ಹಾಕಲಾಯಿತು. ಸ್ವತಃ ಜಯಪ್ರಕಾಶರೇ ಪಕ್ಷದ

ಪ್ರಧಾನಕಾರ್ಯದರ್ಶಿಯಾದರು. ಚುನಾವಣೆಗಳ ಮೂಲಕ ರಾಜ್ಯಾಧಿಕಾರ, ಕೇಂದ್ರೀಕೃತ ಅಭಿವೃದ್ಧಿ ಯೋಜನೆ, ಸಾಮೂಹಿಕ ಕೃಷಿ ಹಾಗೂ ಶ್ರಮಿಕ ವರ್ಗದ, ಅಂದರೆ ರೈತರೂ ಸೇರಿದಂತೆ ಭಾರತದ ಕೆಳ ಮತ್ತು ಅಸ್ಪೃಶ್ಯ ಜಾತಿ-ಜನಾಂಗಗಳ ಸರ್ವಾಧಿಕಾರ, ಪಕ್ಷದ ನೀತಿ-ಕಾರ್ಯಕ್ರಮಗಳೆಂದು ಘೋಷಿಸಲಾಯಿತು. ಈ ವ್ಯವಸ್ಥೆಯೊಡನೆ ಜಯಪ್ರಕಾಶರ ಉತ್ಸಾಹ ಇಮ್ಮಡಿಗೊಂಡಿತು. ಅವರು ಸಮಾಜವಾದವನ್ನು ಕುರಿತು ಪತ್ರಿಕೆಗಳಿಗೆ ಲೇಖನಗಳ ಮೇಲೆ ಲೇಖನಗಳನ್ನು ಬರೆದರು.

ಅಖಿಲಭಾರತ ಕಾಂಗ್ರೆಸ್ ಸಮಾಜವಾದಿ ಪಕ್ಷ

ಜಯಪ್ರಕಾಶರ ಪ್ರಯತ್ನಕ್ಕೆ ಅವರ ಪರಿಚಿತ ಗೆಳೆಯರಿಂದ ಮಾತ್ರವಲ್ಲದೆ, ಕಮಲಾದೇವಿ ಚಟ್ಟೋಪಾಧ್ಯಾಯ, ಪುರುಷೋತ್ತಮ್ ತ್ರಿಕಂದಾಸ್ ಮತ್ತು ಚಾರ್ಲ್ಸ್ ಮಸ್ಕರಾನೆಸ್ ಮುಂತಾದ ಗಾಂಧಿ ಸನಿಹದ ಕಾಂಗ್ರೆಸ್ ಗೆಳೆಯರಿಂದಲೂ ಉತ್ತೇಜನ ದೊರಕಿತು. ಸರಿ, ೧೯೩೪ರ ಮುಂಬೈ ಕಾಂಗ್ರೆಸ್ ವಾರ್ಷಿಕ ಸಮಾವೇಶದ ಸಮಯದಲ್ಲಿಯೇ ಅಕ್ಟೋ. ೨೧, ೨೨ ರಂದು ಅಖಿಲಭಾರತ ಸಮಾಜವಾದಿಗಳ ಸಮ್ಮೇಳನವನ್ನು ಸಹ ಕರೆಯಲಾಯಿತು. ಜಯಪ್ರಕಾಶರು ಅಖಿಲಭಾರತ ಮಟ್ಟದಲ್ಲೂ ಕಾಂಗ್ರೆಸ್ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿಯಾದರು. ಪಕ್ಷಕ್ಕೆ ಎಲ್ಲರನ್ನೂ ಸದಸ್ಯರನ್ನಾಗಿ ಮಾಡಿಕೊಳ್ಳಲಾಗುತ್ತಿರಲಿಲ್ಲ. ಪ್ರತಿಯೊಬ್ಬ ಸದಸ್ಯನ ನೋಂದಣಿಯ ಸಮಯದಲ್ಲೂ ಆತನ ಕಾರ್ಯಕ್ಷಮತೆ ಮತ್ತು ನಿಷ್ಠೆಯನ್ನು ಪರೀಕ್ಷಿಸಲಾಗುತ್ತಿತ್ತು. ಯಾವುದೇ ಹೊಸ ಸದಸ್ಯನ ನೋಂದಣಿಗೆ ಇಬ್ಬರು ಸದಸ್ಯರ ಶಿಫಾರಸು ಅಗತ್ಯವಾಗಿತ್ತು. ಪಕ್ಷದ ಧೋರಣೆ ಲೆನಿನ್‌ವಾದಿ ಧೋರಣೆ ಎಂದು ಘೋಷಿಸಲಾಯಿತು. ಆದರೆ ಸ್ವಾತಂತ್ರ್ಯ ಹೋರಾಟದ ಏಕೈಕ ವೇದಿಕೆಯಾಗಿದ್ದ ಕಾಂಗ್ರೆಸ್ ಯಾವ ರೀತಿಯಲ್ಲಿಯೂ ವಿಭಜನೆಯ ಅಪಾಯವನ್ನು ಎದುರಿಸಬೇಕಾಗದಂತೆ, ಕಾಂಗ್ರೆಸ್ ಪಕ್ಷದ ಸದಸ್ಯರಲ್ಲದವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾಗಲು ಅನರ್ಹ ಎಂಬ ನಿಯಮವನ್ನು ಸಹ ಜಾರಿಗೆ ತರಲಾಯಿತು.

ಸಂಘಟನೆ – ಪ್ರಚಾರ

ಜಯಪ್ರಕಾಶ್ ಈಗ ವಾಸ್ತವಿಕವಾಗಿ ಹೊಸ ಪಕ್ಷವೊಂದರ ಸಂಘಟಕರಾಗಿದ್ದರು. ದೇಶಾದ್ಯಂತ ರಚನೆಯಾದ ವಿವಿಧ ಶಾಖೆಗಳ ಕಾರ್ಯಾಚರಣೆ, ಪದಾಧಿಕಾರಿಗಳ ಚುನಾವಣೆ, ನಿಧಿ ಸಂಗ್ರಹದ ಪರಿಶೀಲನೆ, ಹೊಸ ಸದಸ್ಯರ ನೋಂದಣಿ, ಅಶಿಸ್ತು ಪ್ರದರ್ಶಿಸಿದ ಸದಸ್ಯರ ವಜಾ ಮುಂತಾದ ಸರ್ವವಿಧದ ಕೆಲಸಗಳನ್ನೂ ಅವರೇ ನೋಡಿಕೊಳ್ಳಬೇಕಾಯಿತು. ಪಕ್ಷ ಬರೀ ತಾತ್ವಿಕ ಮಟ್ಟದಲ್ಲಿಯೇ ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲು, ತನ್ನದೇ ಆದ ಸಾರ್ವಜನಿಕ ಸಭೆಗಳು, ಮತಪ್ರದರ್ಶನಗಳು ಮುಂತಾದ ಪ್ರತಿಭಟನಾ ಕಾರ್ಯಕ್ರಮಗಳನ್ನು ನಿಯೋಜಿಸಲಾಯಿತು. ಜಯಪ್ರಕಾಶ್ "ಸಮಾಜವಾದ

ಏಕೆ?" ಎಂಬ ಶೀರ್ಷಿಕೆಯ ಕಿರು ಪುಸ್ತಕವೊಂದನ್ನು ಪ್ರಕಟಿಸಿ ಹಂಚಿದರು. ೧೯೩೯ರಲ್ಲಿ ಗುಜರಾತ್‌ನ ಕಛ್ ಜಿಲ್ಲೆಯಲ್ಲಿ ಉಂಟಾದ ಕ್ಷಾಮವನ್ನು ಎದುರಿಸಲು, ಜಯಪ್ರಕಾಶ್ ತಮ್ಮ ಸಮಾಜವಾದೀ ದಳದೊಡನೆ ಅಲ್ಲಿಗೆ ಧಾವಿಸಿ ಪರಿಹಾರ ಕಾರ್ಯಾಚರಣೆಯಲ್ಲಿ ತೊಡಗಿದರು.

ಜಯಪ್ರಕಾಶ್ ಕಾಂಗ್ರೆಸ್ಸಿನ ಕೆಲಸದೊಂದಿಗೆ, ಸಮಾಜವಾದಿ ಕಾಂಗ್ರೆಸ್ಸಿನ ಪ್ರಚಾರ ನಡೆಸಿದ್ದರು. ತಾವು ಹೋದೆಡೆಯಲ್ಲೆಲ್ಲಾ ಸಮಾಜವಾದೀ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳನ್ನು ವಿವರಿಸಿ ಹೇಳುತ್ತಿದ್ದರು. ಶೋಷಣೆ, ಲಾಭಬಡುಕತನ ಮತ್ತು ಬಡತನಗಳ ನಿರ್ಮೂಲನೆ; ಸರ್ವರಿಗೂ ಸಮಾನ ಅವಕಾಶಗಳ ಸೃಷ್ಟಿ; ದೇಶದ ಸರ್ವವಿಧದ ಸಂಪತ್ತಿನ ಸಮಾನ ಹಂಚಿಕೆ ತಮ್ಮ ಪಕ್ಷದ ತತ್ವಾದರ್ಶಗಳು ಎಂದು ಅವರು ಸಾರಿದರು. ಇದಕ್ಕಾಗಿ ಅವರು ಹಲವಾರು ಕ್ರಮಗಳನ್ನು ಸಲಹೆ ಮಾಡಿದರು: ಧರ್ಮಬೇಧ, ಜಾತಿಬೇಧ, ಮತ್ತು ಲಿಂಗಭೇದವಿಲ್ಲದ ರಾಷ್ಟ್ರ ನಿರ್ಮಾಣಮಾಡುವುದು; ಬ್ರಿಟನ್ನಿಗೆ ಹಿಂತಿರುಗಿ ಕೊಡಬೇಕೆಂದು ಹೇಳಲಾದ ಸಾಲವನ್ನು ಮತ್ತು ರೈತರು ಹಾಗೂ ಕುಶಲಕರ್ಮಿಗಳು, ಭೂಮಾಲೀಕರಿಗೆ ಮತ್ತು ಲೇವಾದೇವಿಗಾರರಿಗೆ ಕೊಡಬೇಕಾಗಿರುವ ಸಾಲವನ್ನು ರದ್ದು ಮಾಡುವುದು; ಪ್ರತಿಯೊಬ್ಬನಿಗೂ ದುಡಿಯುವ, ಬದುಕುವ ಹಕ್ಕು ನೀಡುವುದು; ಪ್ರಮುಖ ಕೈಗಾರಿಕೆಗಳನ್ನು, ಬ್ಯಾಂಕ್‌ಗಳನ್ನು ಹಾಗೂ ಲಾಭದಾಯಕವಾದ ಸಾರ್ವಜನಿಕ ಸಂಸ್ಥೆಗಳನ್ನು ಸಾಮಾಜೀಕರಿಸುವುದು, ರಾಜ ಮಹಾರಾಜರುಗಳು, ಊಳಿಗಮಾನ್ಯ ಭೂಮಾಲೀಕರು, ಲೇವಾದೇವಿಗಾರರು ಮುಂತಾದ ಶೋಷಕರಿಗೆ ಯಾವುದೇ ಪರಿಹಾರ ಕೊಡದೆ ಭೂಮಿಯನ್ನು ನ್ಯಾಯಯುತ ರೀತಿಯಲ್ಲಿ ವಿತರಿಸಿ, ಆಧುನಿಕ ಕೃಷಿ ಹಾಗೂ ಸಹಕಾರೀ ಮನೋಭಾವವನ್ನು ಉತ್ತೇಜಿಸುವುದು ಮತ್ತು ಸಾಮುದಾಯಿಕ ಕೃಷಿ ಪದ್ಧತಿಗೆ ಇಂಬು ಕೊಡುವುದು—ಇವೇ ಮುಂತಾದವು.

ದೇಶದ ಉದ್ದಗಲಕ್ಕೂ ಪ್ರವಾಸ ಮಾಡಿದ ಜಯಪ್ರಕಾಶ್ ಈಗ, ಬಹಳ ಜನಕ್ಕೆ ಗೊತ್ತಿರುವ ಮನುಷ್ಯರಾಗಿದ್ದರು. ಅವರ ಕ್ರಾಂತಿಕಾರಿ ವಿಚಾರ ತುಂಬಿದ ರೋಚಕ ಭಾಷಣಗಳಿಗೆ ಜನ ಹೆಚ್ಚೆಚ್ಚು ಕೂಡ ತೊಡಗಿದರು. ಹಾಗೆಯೇ ಸರ್ಕಾರದ ಬಳಿ ಅವರನ್ನು ಕುರಿತ ಕಡತ ಕೂಡಾ ದೊಡ್ಡದಾಗ ತೊಡಗಿತು. ಅವರ ಸುತ್ತ ಬೇಹುಗಾರಿಕೆ ಬಲವಾಯಿತು. ಆದರೂ ಸರ್ಕಾರ ಇವರ ಬಗ್ಗೆ ವಿಚಿತ್ರ ಧೋರಣೆ ತಳೆಯಿತು. ಜಯಪ್ರಕಾಶರು, ಸರ್ಕಾರಕ್ಕಿಂತ ಕಾಂಗ್ರೆಸ್ಸನ್ನೇ ತಮ್ಮ ಭಾಷಣಗಳ ಮೂಲಕ ಗಾಬರಿಗೊಳಿಸುತಿದ್ದಾರೆ ಎಂದು ಅದು ಅಭಿಪ್ರಾಯಪಟ್ಟಿತು.

ಸ್ವಾತಂತ್ರ್ಯದೆಡೆಗೆ ಮೊದಲಹೆಜ್ಜೆ - ವಿರೋಧ

ಈ ಮಧ್ಯೆ ೧೯೩೫ರ ಹೊತ್ತಿಗೆ ದೇಶದೊಳಗಿನ ನಿರಂತರ ಅಶಾಂತಿ ಹಾಗೂ ವಿಶ್ವಾದ್ಯಂತ ಮೂಡಿದ ಯುದ್ಧ ವಾತಾವರಣದ ಆತಂಕಗಳ ಹಿನ್ನೆಲೆಯಲ್ಲಿ ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಸ್ವಲ್ಪ ಮಟ್ಟಿನ ಸ್ವಾತಂತ್ರ್ಯ ನೀಡಲು ಮುಂದೆ ಬಂದಿತ್ತು. ೧೯೩೫ರ ಭಾರತ ಸರ್ಕಾರದ ಕಾಯಿದೆ ಪ್ರಕಾರ ಇಡೀ ದೇಶವನ್ನು ಬ್ರಿಟಿಷ್ ಸರ್ಕಾರದ ನೇರ ಅಧೀನವಲ್ಲಿದ್ದ

ಭಾರತೀಯ ಪ್ರಾಂತ್ಯಗಳು ಮತ್ತು ರಾಜ ಸಂಸ್ಥಾನಗಳ ಮಹಾಸಂಘವೊಂದಾಗಿ ಮಾರ್ಪಡಿಸಿ, ಈ ಪ್ರಾಂತ್ಯಗಳ ಶಾಸಕಾಂಗಳಿಗೆ ಭಾರತೀಯರು ಆಯ್ಕೆಯಾಗುವಂತಹ ಜವಾಬ್ದಾರಿ ಸಂಪುಟ ಸರ್ಕಾರದ ರಚನೆಗೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ ಮತದಾನದ ಹಕ್ಕು ಆಸ್ತಿವಂತರು ಮತ್ತು ಶಿಕ್ಷಿತರಿಗೆ ಮಾತ್ರ ಮೀಸಲಾಗಿತ್ತು. ಅಲ್ಲದೆ ಹಣಕಾಸು, ರಕ್ಷಣೆ, ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳಲು ಬ್ರಿಟಿಷ್ ಸರ್ಕಾರ ತನಗೆ ಬೇಕೆನಿಸಿದ ವ್ಯಕ್ತಿಯನ್ನು ನೇಮಿಸಬಹುದಿತ್ತು; ಯಾವುದೇ ಶಾಸನವನ್ನು ವೈಸ್‌ರಾಯ್ ಅಥವಾ ಆಯಾ ರಾಜ್ಯದ ಗವರ್ನರ್ ತಳ್ಳಿ ಹಾಕಬಹುದಿತ್ತು.

ಸಹಜವಾಗಿ, ಜಯಪ್ರಕಾಶರಿಗೆ ಈ ರೀತಿಯ ಸ್ವಾತಂತ್ರ್ಯದ ಬಗ್ಗೆ ವಿರೋಧವಿತ್ತು. ಮುಂಬೈನ ವೊರ್ಲಿ ಎಂಬಲ್ಲಿ ನಡೆದ ಕಾಂಗ್ರೆಸ್ ಸಮಾಜವಾದಿಗಳ ಸಮ್ಮೇಳನವು ಪೂರ್ಣ ಪ್ರಮಾಣದ ಸ್ವಾತಂತ್ರ್ಯವನ್ನು ಮತ್ತು ಜನತಾ ಸರ್ಕಾರದ ಸ್ಥಾಪನೆಯನ್ನು ಒತ್ತಾಯಪಡಿಸಿತು. ರಾಜ ಮಹಾರಾಜರುಗಳ ಮತ್ತು ಅವರ ಸಂಸ್ಥಾನಗಳ ಮುಂದುವರಿಕೆಯನ್ನು ತಿರಸ್ಕರಿಸಿತು. ಬ್ರಿಟನ್ ಪಾಲ್ಗೊಳ್ಳುವ ಯಾವುದೇ ವಿಶ್ವಯುದ್ಧದಲ್ಲಿ ಭಾರತ ಪಾಲ್ಗೊಳ್ಳುವುದನ್ನು ವಿರೋಧಿಸಿತು. ಈ ವಿಷಯದಲ್ಲಿ ತಮ್ಮೊಂದಿಗೆ ಸಹಕರಿಸಬೇಕೆಂದು ಕಾಂಗ್ರೆಸ್ಸಿಗರಿಗೆ ಮತ್ತು ಚುನಾವಣೆಗಳಲ್ಲಿ ಪಾಲ್ಗೊಳ್ಳದಂತೆ ಕಾಂಗ್ರೆಸ್ ಸಮಾಜವಾದಿಗಳಿಗೆ ಮನವಿ ಮಾಡಿತು. ಆದರೆ ಕಾಂಗ್ರೆಸ್ ವಾರ್ಷಿಕ ಸಮ್ಮೇಳನವು ಚುನಾವಣೆಗಳಲ್ಲಿ ಭಾಗವಹಿಸಲು ನಿರ್ಧರಿಸಿತು. ಗಾಂಧೀಜಿ ಇದನ್ನು ಸಮರ್ಥಿಸುತ್ತಾ "ನಾವೀಗ ಈ ಮೂಲಕ ಹೋಗುತ್ತಿರುವುದು ಅಧಿಕಾರದ ರಾಜಕಾರಣಕ್ಕಲ್ಲ; ಜನತಾ ಸೇವೆಗೆ" ಎಂದು ಹೇಳಿದರು. ಜಯಪ್ರಕಾಶ್ ಮತ್ತು ನೆಹರೂ, ಬ್ರಿಟಿಷರು ಮಂಡಿಸಿದ್ದ ಹೊಸ ಸಂವಿಧಾನವನ್ನು 'ಗುಲಾಮೀ ಸಂವಿಧಾನ' ಎಂದು ವರ್ಣಿಸುವುದಷ್ಟರಲ್ಲೇ ತೃಪ್ತಿ ಪಟ್ಟುಕೊಳ್ಳಬೇಕಾಯಿತು.

ಕಮ್ಯೂನಿಸ್ಟರ ಯೋಜನೆ

ಇದೇ ಹೊತ್ತಿಗೆ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯ ಸೂಚನೆಯ ಮೇರೆಗೆ ಭಾರತದ ಕಮ್ಯೂನಿಸ್ಟ್ ಪಕ್ಷವು ಇದ್ದಕ್ಕಿದ್ದಂತೆ ತನ್ನ ನೀತಿಯನ್ನು ಬದಲಿಸಿಕೊಂಡಿತು. ಬ್ರಿಟಿಷ್ ಸರ್ಕಾರದಿಂದ ಬಹಿಷ್ಕೃತಗೊಂಡಿದ್ದ ಪಕ್ಷವು ತನ್ನ ಜನರನ್ನು ಕಾಂಗ್ರೆಸ್ಸಿನೊಳಕ್ಕೆ ನುಸುಳಿಸಿ, ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಯೋಜನೆಯನ್ನು ಹಾಕಿಕೊಂಡಿತ್ತು. ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಮುಖಂಡರು ಮಾಸ್ಕೋದಲ್ಲಿದ್ದ ಮೀನೂ ಮಸಾನಿಯವರನ್ನು ಭೇಟಿಮಾಡಿ ಭಾರತದಲ್ಲಿ ಕಮ್ಯೂನಿಸ್ಟರು ಮತ್ತು ಕಾಂಗ್ರೆಸ್ ಸಮಾಜವಾದಿಗಳು ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಸಂಯುಕ್ತರಂಗ ರಚಿಸಿ ಒಗ್ಗೂಡಿ ಕೆಲಸ ಮಾಡಬೇಕೆಂದು ಅವರ ಮನವೊಲಿಸಿದ್ದರು. ಭಾರತದ ಕಮ್ಯೂನಿಸ್ಟ್ ಪಕ್ಷವು ಒಂದು ದಿನ, ಕಾಂಗ್ರೆಸ್ ನೇತೃತ್ವದ ಹೋರಾಟಕ್ಕೆ ತನ್ನ ಬೆಂಬಲವನ್ನು ಘೋಷಿಸಿತು. ಇದು ಸಹಜವಾಗಿ ಜಯಪ್ರಕಾಶರಿಗೆ ಸಂತೋಷದಾಯಕ ಸುದ್ದಿಯಾಗಿತ್ತು. ಅಲ್ಲದೆ ಈ ಹೊತ್ತಿಗೆ, ಕಾಂಗ್ರೆಸ್ ಪಕ್ಷವು 'ಗುಲಾಮೀ

ಸಂವಿಧಾನ'ವನ್ನು ಒಪ್ಪಿಕೊಂಡು ಅಧಿಕಾರ ಹಿಡಿಯುವ ಖಚಿತ ಸೂಚನೆ ನೀಡಿ, ಸ್ವಾತಂತ್ರ್ಯ ಹೋರಾಟವನ್ನು ಸ್ಥಗಿತಗೊಳಿಸುತ್ತಿರುವಂತೆ ಜಯಪ್ರಕಾಶರಿಗೆ ಕಂಡಿತ್ತು. ಹೀಗಾಗಿ ಅವರು ಕಮ್ಯೂನಿಸ್ಟ್ ಪಕ್ಷದ ಸಲಹೆಯನ್ನು ಸ್ವಾಗತಿಸಿದರು.

ಜಯಪ್ರಕಾಶ್-ಗಾಂಧಿಜೀ ಸಂವಾದ

ಜಯಪ್ರಕಾಶರ ಈ ನಿಲುವಿನಿಂದಾಗಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಮಾಜವಾದಿ ಗುಂಪಿನ ನಡುವೆ ಬಿಗುವು ಆರಂಭವಾಯಿತು. ಜವಾಹರಲಾಲರು ಜಯಪ್ರಕಾಶರ ಸಲಹೆಯನ್ನು ತಾತ್ವಿಕವಾಗಿ ಒಪ್ಪಿಕೊಂಡರಾದರೂ ತಮ್ಮ ರಾಜಕೀಯ ಭವಿಷ್ಯ ಪೂರ್ಣವಾಗಿ ಗಾಂಧೀಜಿಯವರನ್ನು ಅವಲಂಬಿಸಿದೆ ಎಂದೂ ಅರಿತಿದ್ದುದರಿಂದ ಅವರು ಈ ಬಗ್ಗೆ ಯಾವುದೇ ಖಚಿತ ನಿಲುವು ತಳೆಯುವ ಧೈರ್ಯ ಮಾಡಲಿಲ್ಲ. ಕೊನೆಗೆ ಜಯಪ್ರಕಾಶ್ ನೇರವಾಗಿ ಗಾಂಧೀಜಿಯೊಡನೆ ತಾತ್ವಿಕ ಘರ್ಷಣೆಗೆ ಇಳಿಯಬೇಕಾಯಿತು. ಅವರು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳನ್ನು ಟೀಕಿಸಿದರು:

"ನಾನು ರೈತವರ್ಗವನ್ನು ಸಂಘಟಿಸುವೆ. ಕಾರ್ಮಿಕ ಆಂದೋಲನವನ್ನು ರೂಪಿಸುವೆ. ಆದರೆ ನಿಮ್ಮ ಹರಿಜನಸೇವೆ, ಖಾದಿ ಪ್ರಚಾರ ನನಗೆ ಬೇಕಿಲ್ಲ. ಇದರಿಂದ ನಮಗೆ ಸ್ವಾತಂತ್ರ್ಯವು ದೊರಕಲಾರದು. ನಮ್ಮ ಹಳ್ಳಿಗಳೂ ಸ್ವಾವಲಂಬಿಯಾಗಲಾರವು."

ಗಾಂಧೀಜಿ ಹೇಳಿದರು, "ನೀನು ಮಾಡಬೇಕೆಂದಿರುವ ಕೆಲಸಗಳು ಬಹಳ ಒಳ್ಳೆಯವು ಜಯಪ್ರಕಾಶ್. ಆದರೆ ನಾನು ಹೇಳುವುದರಲ್ಲೂ ಒಂದಿಷ್ಟು ಅರ್ಥವಿದೆ."

ಜಯಪ್ರಕಾಶ್ ಒಪ್ಪಲಿಲ್ಲ. "ಅಹಿಂಸೆ ನನ್ನ ಪಂಥವಲ್ಲ; ಸಮಾಜದ ಪುನರ್ನಿರ್ಮಾಣಕ್ಕೆ ಅದೊಂದು ತಾತ್ವಿಕ ನೆಲೆಯಾಗಬಲ್ಲದು ಎಂದು ನಾನೊಪ್ಪುವುದಿಲ್ಲ."

"ಆದರೆ ಅದು ಅಸ್ತ್ರವಾಗಬಲ್ಲದು ಎಂದು ಒಪ್ಪಿಕೊಂಡರೆ ನನಗಷ್ಟೇ ಸಾಕು ಜಯಪ್ರಕಾಶ್."

"ಅಹಿಂಸಾತ್ಮಕ ಸತ್ಯಾಗ್ರಹದಿಂದ ನಮಗೆ ಅಧಿಕಾರ ದೊರೆಯುವುದಿಲ್ಲ. ದುಡಿಯುವ ಜನ ಸಾಮಾನ್ಯರಲ್ಲಿ ಕ್ರಾಂತಿಕಾರಕ ಜಾಗೃತಿ ಉಂಟಾಗಬೇಕು. ರಾಷ್ಟ್ರದಲ್ಲಿ ತನ್ನ ಯೋಜನೆಗಳು ಜಾರಿಗೆ ಬರಬೇಕೆಂದು ಬಯಸುವ ವಿಶ್ವದಲ್ಲಿನ ಯಾವುದೇ ಗುಂಪು, ಪಕ್ಷ ಅಥವಾ ವ್ಯಕ್ತಿಯು ಮೊದಲು ರಾಜ್ಯವನ್ನು ವಶಪಡಿಸಿಕೊಳ್ಳಬಯಸುತ್ತಾನೆ. ರಾಜ್ಯ ನಮ್ಮ ಕೈಯಲ್ಲಿದ್ದಾಗ ನಾವು ನಿಮಗೆ ಅಗತ್ಯವೆನಿಸಿದ ಕಾನೂನನ್ನು ಜಾರಿಗೆ ತರಬಹುದು, ಆಧುನಿಕ ವಿಜ್ಞಾನ ತಂತ್ರಗಳನ್ನು ಬಳಸಿಕೊಂಡು ಪ್ರಚಾರ ಮತ್ತು ಶಿಕ್ಷಣ ವ್ಯವಸ್ಥೆಯ ಮೂಲಕ ನಮ್ಮ ಉದ್ದೇಶಗಳನ್ನು ಈಡೇರಿಸಕೊಳ್ಳಬಹುದು. ಇದಕ್ಕೆ ವಿರೋಧ ಬಂದರೆ ರಾಜ್ಯದ ವಶದಲ್ಲಿರುವ ಪೊಲೀಸ್ ಮತ್ತು ಸೇನೆಯನ್ನು ಬಳಸಿ ಅದನ್ನು ಮಟ್ಟಹಾಕಬಹುದು"

ಜಯಪ್ರಕಾಶರ ಈ ವಿಚಾರ ಸರಣಿ ಗಾಂಧೀಜಿಯನ್ನು ದಂಗುಬಡಿಸಿತು. ಅವರು ಕೇಳಿದರು, "ಜಯಪ್ರಕಾಶ್ ಅಧಿಕಾರವನ್ನು ನೀನು ಮತದಾನದ ಮೂಲಕ ಪಡೆಯ ಬಯಸುತ್ತಿಯೋ ಅಥವಾ ಹಿಂಸಾತ್ಮಕ ದಂಗೆಯ ಮೂಲಕವೋ?"

"ಸ್ವಾತಂತ್ರ್ಯ ಗಳಿಸಿದ ಮೇಲೆ ಹಿಂಸಾತ್ಮಕ ದಂಗೆಯ ಅಗತ್ಯವಿರಲಾರದು"

"ರಾಜ್ಯ ಎನ್ನುವುದು ಆತ್ಮವಿಲ್ಲದ ಒಂದು ಯಂತ್ರವಿದ್ದಂತೆ. ಜನ ಬೆಂಬಲವಿಲ್ಲದೆಯೇ ಅದಕ್ಕೆ ಕಾನೂನು ಚಲಾವಣೆಯ ಹಕ್ಕು ಹೇಗೆ ಬಂದೀತು? ಇಲ್ಲಿದೆ ನೋಡು ನನ್ನ ಸತ್ಯಾಗ್ರಹದ ಒಳಾರ್ಥ. ಜನರ ಮನಸ್ಸನ್ನು ಕಾನೂನೊಂದರ ಮೂಲಕ ಬದಲಿಸಲು ಸಾಧ್ಯವಿಲ್ಲ ಜಯಪ್ರಕಾಶ್. ಕಾನೂನು ಜಾರಿಯ ಮುಂಚೆ ಮನಃಪರಿವರ್ತನೆ ನಡೆಯಬೇಕು. ಉದಾಹರಣೆಗೆ ನೋಡು, ಇವತ್ತು ನೈರ್ಮಲ್ಯವನ್ನು ಕುರಿತ ನಿಯಮಗಳನ್ನು ಜಾರಿಗೆ ತರುವ ಅಧಿಕಾರ ನಮಗಿದೆ. ಆದರೆ ಈ ಅಧಿಕಾರವಿದ್ದು ಏನು ಪ್ರಯೋಜನ, ಜನರೇ ಸಿದ್ಧರಿಲ್ಲದಿದ್ದಾಗ?"

ಜನತೆಯ ಭಾಗವಹಿಸುವಿಕೆಯ ಬಗ್ಗೆ ಜಯಪ್ರಕಾಶ್ ಹೀಗೆ ಉತ್ತರಿಸಿದ್ದರು— "ಆಯಿತು, ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರಾಗುವಂತೆ ನಾವು ಜನರ ಮನವೊಲಿಸುತ್ತೇವೆ. ಆದರೆ ರಾಜ್ಯವನ್ನು ವಶಪಡಿಸಿಕೊಳ್ಳದೆ ಸಮಾಜವಾದವನ್ನು ಅನುಸರಣೆಗೆ ತರಲು ವಿಶ್ವದಲ್ಲಿ ಈವರೆಗೆ ಯಾವ ಪಕ್ಷಕ್ಕೂ ಸಾಧ್ಯವಾಗಿಲ್ಲ. ರಾಜ್ಯ ತನ್ನ ವಶದಲ್ಲಿದ್ದರೆ ಪಕ್ಷ ಈ ಭೂಮಿಯ ಮೇಲೆ ಸಮಾಜವಾದಿ ಸ್ವರ್ಗವನ್ನೇ ನಿರ್ಮಿಸಬಲ್ಲದು. ನಮ್ಮ ನಾಡಿನ ಬಹುಸಂಖ್ಯಾತ ಜನರು ಬಡತನ, ರೋಗರುಜಿನ, ಕೊಳಕು ಮತ್ತು ಅಜ್ಞಾನಗಳಲ್ಲಿ ನರಳುತ್ತಿರುವಾಗ ಕೆಲವೇ ಕೆಲವರು ಎಲ್ಲ ರೀತಿಯ ಸೌಲಭ್ಯಗಳು, ವೈಭವ, ಸ್ಥಾನಮಾನ ದರ್ಪಗಳಿಂದ ಬೀಗುತ್ತಿರುವುದಕ್ಕೆ ಕಾರಣವೇನು? ಸಮಾಜವಾದಿಯು ಈ ಅಸಮಾನತೆಯ ಸಮಸ್ಯೆಯ ಬೇರನ್ನು ಅಲುಗಿಸಿ ಅಸಮಾನತೆಯ ಹುಟ್ಟನ್ನೇ ಅಡಗಿಸಲು ಪಣತೊಡುತ್ತಾನೆ. ನಿಮ್ಮ 'ಟ್ರಸ್ಟಿಷಿಪ್' ಪರಿಹಾರ, ಮೊದಲಾಗಿ ಅಸಮಾನತೆಯನ್ನು ಸಹಜವೆಂದು ಒಪ್ಪಿಕೊಂಡು, ನಂತರ ಈ ಅಸಮಾನತೆಯನ್ನು ಒಂದಿಷ್ಟು ಸರಿ ಮಾಡಲು ಯತ್ನಿಸುತ್ತಿದಷ್ಟೆ. ತಮ್ಮ ಸಂಪತ್ತನ್ನು ಬಿಟ್ಟುಕೊಡುವಂತೆ ಶ್ರೀಮಂತರನ್ನು ಮತ್ತು ಬೊಜ್ಜು ಹೊಟ್ಟೆಯ ಬಂಡವಾಳಗಾರರನ್ನು ನಾವೇಕೆ ಬಲಾತ್ಕರಿಸಬಾರದು? ಅವರು ಅಷ್ಟೆಲ್ಲಾ ಆಸ್ತಿ ಗಳಿಸಿರುವುದು ಶೋಷಣೆಯ ಮೂಲಕವೆಂದು ನೀವೂ ಒಪ್ಪಿಕೊಳ್ಳುತ್ತೀರಿ"

ಜಯಪ್ರಕಾಶರ ಈ ಆವೇಶಪೂರ್ಣ ವಾದವನ್ನು ಪೂರ್ತಿ ಕೇಳಿದ ನಂತರ ಗಾಂಧೀಜಿ ಹೀಗೆ ನುಡಿದರು:

"ನನ್ನ ಕ್ರಾಂತಿ ನಿನ್ನ ರಷ್ಯಾದ ಕ್ರಾಂತಿಗಿಂತಲೂ ದೊಡ್ಡದು ಜಯಪ್ರಕಾಶ್. ಮನ ವೊಲಿಸುವಿಕೆಯ ಮೂಲಕ ನಾನು ಬಂಡವಾಳಗಾರನ ಹಣವನ್ನು ಮಾತ್ರವಲ್ಲ; ಆತನ ವ್ಯವಹಾರ ಚಾತುರ್ಯ, ಅನುಭವ ಸಂಪತ್ತು, ವಾಣಿಜ್ಯ ಜ್ಞಾನ ಮತ್ತು ಆತನ ವಿಶೇಷ ಪರಿಣತಿಯನ್ನೂ ಪಡೆದುಕೊಳ್ಳುತ್ತೇನೆ. ನನ್ನ ಅಹಿಂಸಾ ತತ್ವದ ಅಡಿಯಲ್ಲಿ, ಉನ್ನತ ಆದರ್ಶಕ್ಕಾಗಿ ನಮ್ಮ ವಿರೋಧಿಯಿಂದ ಆತ್ಮಬಲಿಯನ್ನು ಕೂಡಾ ನಿರೀಕ್ಷಿಸಬಹುದು; ಅದಕ್ಕಾಗಿ ಅವನನ್ನು ಕೇಳಲೂಬಹುದು."

ಆದರೆ ಇಂತಹ ಯಾವ ವಿವರಣೆಯೂ ಜಯಪ್ರಕಾಶರ ಚಿಂತನೆಯನ್ನು ಬದಲಿಸಲಿಲ್ಲ. ಬದಲಾಗಿ ಅವರು ಕಾಂಗ್ರೆಸ್ ಪಕ್ಷದಲ್ಲಿನ ಗಾಂಧಿಮಾರ್ಗ ವಿರೋಧಿ ಗುಂಪಿನ ವಕ್ತಾರರೆಂದು

ಗುರುತಿಸಲ್ಪಟ್ಟರು. ಅವರು ಮತ್ತೆ ನೆಹರೂ ಅವರ ಬೆಂಬಲ ಕೋರಿದರು. ನೆಹರೂ ಅವರ ಬಾಯಿಮಾತಿನ ಸಹಕಾರದೊಡನೆ ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆಯಲ್ಲಿ, ತಮ್ಮ ಕಾಂಗ್ರೆಸ್ ಸಮಾಜವಾದೀ ಪಕ್ಷದ—ರಾಜರು, ಜಮೀನ್ದಾರರು, ಲೇವಾದೇವಿಗಾರರು ಮುಂತಾದ 'ಪರಾವಲಂಬಿ'ಗಳ ನಿರ್ಮೂಲನ, ಬೇಸಾಯದ ಸಮುದಾಯೀಕರಣ, ಭೂಮಿತಿ ನಿಗದೀಕರಣ ಮುಂತಾದ ಕಾರ್ಯಕ್ರಮಗಳನ್ನು ಪ್ರತಿಪಾದಿಸುವ ಮತ್ತು ಖಾದಿ ಗ್ರಾಮೋದ್ಯೋಗವನ್ನು ಮತ್ತು ಅಸ್ಪೃಶ್ಯತಾ ನಿವಾರಣೆಯನ್ನು ಹಿಂದೂ ನೆಲೆಯಲ್ಲಿಯೇ ಕೈಗೊಳ್ಳುವ ಗಾಂಧೀಜಿ ನೀತಿಯನ್ನು ವಿರೋಧಿಸುವ—ನಿರ್ಣಯಗಳನ್ನು ಮಂಡಿಸಿದರು. ಆದರೆ ಆ ಎಲ್ಲ ನಿರ್ಣಯಗಳೂ ಬಿದ್ದು ಹೋದವು.

ಪಟೇಲರ ಎಚ್ಚರಿಕೆ - ಗಾಂಧೀಜಿಯ ಸಾಂತ್ವನ

ಇದರೊಡನೆ ಕಾಂಗ್ರೆಸ್ಸಿನೊಡನೆ ಜಯಪ್ರಕಾಶರ ತಾತ್ವಿಕ ಭಿನ್ನಾಭಿಪ್ರಾಯ ಗಟ್ಟಿಗೊಂಡಿತು. ಈ ಮಧ್ಯೆ ನೆಹರೂ ಅವರು ಮತ್ತೆ ಮತ್ತೆ ದೃಢಪಡಿಸುತ್ತಿದ್ದ 'ನೈತಿಕಬೆಂಬಲ'ವಾಗಲೀ ಪಟೇಲರು ಆಗಾಗ್ಗೆ ಆಡುತ್ತಿದ್ದ ಎಚ್ಚರಿಕೆಯ ಮಾತುಗಳಾಗಲಿ ಅವರ ಮೇಲೆ ಯಾವುದೇ ಪ್ರಭಾವ ಉಂಟುಮಾಡಲಿಲ್ಲ. ಜಯಪ್ರಕಾಶರ ಕ್ರಾಂತಿಕಾರಿ ಆಲೋಚನೆಗಳು ಅವರ ಬಗ್ಗೆ ಗಾಂಧೀಜಿಯ ಆತ್ಮೀಯತೆಯನ್ನು ಹೆಚ್ಚಿಸಿದಂತೆಯೇ ವಲ್ಲಭಭಾಯಿ ಪಟೇಲರಂತಹ "ಹಿರಿಯ ನಿಷ್ಠಾವಂತ" ಕಾಂಗ್ರೆಸ್ಸಿಗರನ್ನು ಕೆರಳಿಸಿತು. ೧೯೩೭ರ ಕಾಂಗ್ರೆಸ್ ವಾರ್ಷಿಕ ಮೇಳದಲ್ಲಿ ಪಟೇಲರು ಕಾಂಗ್ರೆಸ್ ಸಮಾಜವಾದಿಗಳಿಗೆ ಕೊನೆಯ ಎಚ್ಚರಿಕೆ ನೀಡಿದರು: "ನಿಮ್ಮದು ಅತಿಯಾಯಿತು. ನಮ್ಮ ಸಹನೆಯ ಮಿತಿ ಮೀರುತ್ತಿದೆ. ನಿಮಗೆ ಬುದ್ಧಿ ಕಲಿಸುವುದು ಹೇಗೆಂದು ನಮಗೆ ಗೊತ್ತಿದೆ."

ಪಟೇಲರ ಈ ದಾಳಿಗೆ ತಕ್ಷಣ ಪ್ರತಿಕ್ರಿಯೆ ವ್ಯಕ್ತಪಡಿಸಲು ಜಯಪ್ರಕಾಶ್ ಇಷ್ಟಪಡಲಿಲ್ಲ. ಏಕೆಂದರೆ ತಮ್ಮ ಉದ್ವೇಗದ ಭರ ಒಮ್ಮೆ ತಮ್ಮನ್ನೇ ನಾಚಿಕೆಗೆ ಈಡು ಮಾಡಿದ್ದುದು ಅವರಿಗೆ ನೆನಪಿತ್ತು. ೧೯೩೬ರ ಲಕ್ನೋ ಕಾಂಗ್ರೆಸ್ ಅಧಿವೇಶನದಲ್ಲಿ ನೆಹರೂ ಅವರು ಕಟ್ಟಾ ಮಾರ್ಕ್ಸ್‌ವಾದಿಯಂತೆ ರೋಚಕ ಭಾಷಣ ಮಾಡಿ ಜಯಪ್ರಕಾಶರ ಮನಗೆದ್ದಿದ್ದರು. (ಅಲ್ಲದೆ ಅವರನ್ನೂ, ಅಚ್ಯುತ ಪಟವರ್ಧನರನ್ನೂ ಸಮಾಜವಾದಿ ಗುಂಪಿನಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ನೇಮಕ ಮಾಡಿಕೊಂಡಿದ್ದರು.) ಆದರೆ ನಂತರ ಮಾತನಾಡಿದ ರಾಜೇಂದ್ರ ಪ್ರಸಾದರು ಅಷ್ಟೇ ರೋಚಕವಾಗಿ ಭಾಷಣ ಮಾಡಿ ನೆಹರೂ ಮಂಡಿಸಿದ್ದ ವಿಚಾರಧಾರೆಯನ್ನು ಖಂಡಿಸಿದರು. ಜಯಪ್ರಕಾಶರ ಪಕ್ಕದಲ್ಲಿ ಕುಳಿತಿದ್ದ ರಾಜೇಂದ್ರ ಪ್ರಸಾದರ ಅಭಿಮಾನಿಯೊಬ್ಬರು "ನೋಡಿದಿರಾ ನಮ್ಮ ಪ್ರಸಾದರ ಪ್ರತಿಭೆಯನ್ನು?" ಎಂದು ಕೆಣಕಿದಾಗ ಜಯಪ್ರಕಾಶ್ ಸಿಟ್ಟಿಗೆದ್ದು, ಆತನ ಮುಖದ ಮೇಲೇ ಹೇಳಿದರು: "ಏನು ಗೊತ್ತು ನಿಮ್ಮ ಪ್ರಸಾದರಿಗೆ? ಅವರಿಗೆ ಜವಾಹರಲಾಲರ ಬೂಟುಗಳನ್ನೊರಸುವ ಯೋಗ್ಯತೆಯೂ ಇಲ್ಲ". ಉದ್ವೇಗದಲ್ಲಿ ಆಡಿದ ಈ ಮಾತು ಅವರಿಗೆ ಮರುಕ್ಷಣವಲ್ಲಿಯೇ

ಅಸಹ್ಯವೆನಿಸಿತು. ಜಯಪ್ರಕಾಶರಿಗೆ ನಾಚಿಕೆ ಸಹ ಆಯಿತು. ಸಭೆ ಮುಗಿದೊಡನೆಯೇ ಅವರು ಗಾಂಧೀಜಿ ಬಳಿ ಹೋಗಿ ತಮ್ಮ ಅಳಲನ್ನು ತೋಡಿಕೊಂಡರು. ಗಾಂಧೀಜಿ, "ಪ್ರಸಾದ್ ಏನೂ ತಿಳಿದುಕೊಳ್ಳುವುದಿಲ್ಲ-ಯೋಚನೆ ಮಾಡಬೇಡ" ಎಂದು ಅವರನ್ನು ಸಮಾಧಾನಪಡಿಸಿ, "ತಕ್ಷಣ ಹೋಗಿ ಪ್ರಸಾದರ ಕ್ಷಮೆ ಕೇಳು" ಎಂದು ಕಳಿಸಿದರು. ಜಯಪ್ರಕಾಶರ ನಿರೀಕ್ಷೆಗೆ ವಿರುದ್ಧವಾಗಿ ಪ್ರಸಾದರು ಅವರನ್ನು ಮುಗುಳ್ನಗೆಯೊಡನೆ ಸ್ವಾಗತಿಸಿ ಎಲ್ಲವನ್ನೂ ಮರೆತುಬಿಡುವಂತೆ ಹೇಳಿ ಜಯಪ್ರಕಾಶರನ್ನು ದಂಗುಬಡಿಸಿದರು! ಪಟೇಲರೊಡನೆಯೂ ಇದೇ ರೀತಿ ಮಾಡಿಕೊಳ್ಳಲಿಚ್ಛಿಸದ ಜಯಪ್ರಕಾಶರು ನೇರವಾಗಿ ಗಾಂಧೀಜಿಯ ಬಳಿ ಹೋಗಿ ಪಟೇಲರ ಒರಟು ಎಚ್ಚರಿಕೆಯ ಬಗ್ಗೆ ಹೇಳಿದರು. ಗಾಂಧೀಜಿ, ಜಯಪ್ರಕಾಶರ ಬೆನ್ನು ತಟ್ಟಿ "ಅದೊಂದು ವಿಚಿತ್ರ ಪ್ರಾಣಿ; ಆತನ ಹೃದಯದಲ್ಲಿ ಎಷ್ಟು ಅಂತಃಕರಣ ತುಂಬಿದೆಯೋ, ಆತನ ನಾಲಿಗೆಯಲ್ಲಿ ಅಷ್ಟೇ ಮುಳ್ಳುಗಳೂ ತುಂಬಿವೆ" ಎಂದು ಸಮಾಧಾನ ಮಾಡಿ ಕಳಿಸಿದರು.

ಕಮ್ಯೂನಿಸ್ಟರೊಂದಿಗೆ ಸಂಯುಕ್ತರಂಗ - ಭಾರತದ ಲೆನಿನ್!

ಆದರೆ ಈ ವಿಷಯದಲ್ಲಿ ಜಯಪ್ರಕಾಶರ ಸಿಟ್ಟು ಇಳಿಯಲಿಲ್ಲ. ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು. ಅಷ್ಟೇ ಅಲ್ಲದೆ ಕಮ್ಯೂನಿಸ್ಟರನ್ನು ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಸ್ವಾಗತಿಸಿದರು. ಜಯಪ್ರಕಾಶರನ್ನು 'ಭಾರತದ ಲೆನಿನ್', 'ಭಾರತದ ನಂಬರ್ ಒನ್ ಕ್ರಾಂತಿಕಾರಿ' ಮುಂತಾಗಿ ವರ್ಣಿಸುತ್ತಾ ಕಮ್ಯೂನಿಸ್ಟರು ಕಾಂಗ್ರೆಸ್ ಸಮಾಜವಾದಿಗಳೊಂದಿಗೆ 'ಸಾಮ್ರಾಜ್ಯಶಾಹಿ ವಿರೋಧಿ ಸಂಯುಕ್ತರಂಗ'ದ ರಚನೆಯಲ್ಲಿ ಭಾಗಿಯಾದರು. ಸ್ವಲ್ಪ ಸಮಯದಲ್ಲಿಯೇ ಅವರೆಲ್ಲಾ ಕಾಂಗ್ರೆಸ್ ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯ ನಿರ್ವಾಹಕದಲ್ಲೂ ಸ್ಥಾನ ಪಡೆದರು. ಇ.ಎಂ.ಎಸ್. ನಂಬೂದ್ರಿಪಾದ್ ಅವರು ರಂಗದ ಜಂಟಿ ಕಾರ್ಯದರ್ಶಿಗಳಲ್ಲೊಬ್ಬರಾದರು. ರಂಗದ ದಕ್ಷಿಣದಲ್ಲಿನ ಬಹಳಷ್ಟು ಶಾಖೆಗಳು ಕಮ್ಯೂನಿಸ್ಟರ ನೇತೃತ್ವ ಪಡೆದವು. ಎಲ್ಲವು ಸುಗಮವಾಗಿಯೇ ನಡೆದಿತ್ತು. ತಮ್ಮ ಯೋಜನೆಯ ಯಶಸ್ಸಿನ ಬಗ್ಗೆ ಆತ್ಮವಿಶ್ವಾಸದೊಡನೆ ಜಯಪ್ರಕಾಶ್ ಹೀಗೆ ಸಾರಿದರು:

"ಹಲವಾರು ಕೆಲಸಗಳನ್ನು ಮಾಡಬೇಕಾಗಿರುವ ಮತ್ತು ಪರಮ ಗುರಿಯೊಂದನ್ನು ಮುಂದಿಟ್ಟುಕೊಂಡಿರುವ ನಮಗೆ, ರಷ್ಯನರು ದಿಟ್ಟತನದಿಂದ ಕಾರ್ಯಗತಗೊಳಿಸುತ್ತಿರುವ ಹೊಸ ಬದುಕಿನ ಆ ದರ್ಶನ ಮಾತ್ರ ಅಮೂಲ್ಯವಾಗಬೇಕು. ಭಾರತದಲ್ಲಿ ಸಾಮ್ರಾಜ್ಯಶಾಹಿಗಿಂತ ದೊಡ್ಡ ಪಕ್ಷ ಅಥವಾ ಶಕ್ತಿ ಬೇರೊಂದಿಲ್ಲ. ಅದನ್ನು ನಾವು ಒಮ್ಮೆ ನಾಶಮಾಡಿದೆವೆಂದರೆ, ನಮ್ಮ ಪರಮ ಗುರಿಗೆ ಸವಾಲಾಗಬಲ್ಲ ಯಾವ ಶಕ್ತಿಯೂ ಇರುವುದಿಲ್ಲ. ಸಮಾಜವಾದಕ್ಕೆ ಇರುವುದು ಒಂದೇ ಮಾದರಿ, ಒಂದೇ ಸಿದ್ಧಾಂತ—ಅದು ಮಾರ್ಕ್ಸ್‌ವಾದ ಎಂದು ಹೇಳಲು ಎಂದಿಗಿಂತ ಇವತ್ತು ಸಾಧ್ಯವಿದೆ. ಈವರೆಗೆ ಕಮ್ಯೂನಿಸ್ಟರು ಮಾತ್ರ ರಷ್ಯಾದಲ್ಲಿನ ಅಮೋಘ ಮತ್ತು ಅಪೂರ್ವ ವಿಜಯದ ಮೂಲಕ ತಮ್ಮ ಸಿದ್ಧಾಂತದ ಕಾರ್ಯ ಯಶಸ್ಸನ್ನು

ಪ್ರದರ್ಶಿಸಿದ್ದಾರೆ. ಇನ್ನಿತರ ಮಾರ್ಗಗಳ ಪ್ರತಿಪಾದಕರೆಲ್ಲಾ ಇಂದು ಬರೀ ವೈಫಲ್ಯಗಳ ನಡುವೆ ಸಿಕ್ಕಿಹಾಕಿಕೊಂಡಿದ್ದಾರೆ."

ಜಯಪ್ರಕಾಶರ ಈ ಘೋಷಣೆಯಿಂದ ಸಂಯುಕ್ತರಂಗದ ಉತ್ಸಾಹ ನಿಷ್ಠೆಗಳು ಉಕ್ಕಿಹರಿದು ಹೋದವು. ಕಮ್ಯೂನಿಸ್ಟ್ ಕರಪತ್ರಗಳು ದೊಡ್ಡಕ್ಷರಗಳಲ್ಲಿ ಹೀಗೆ ಕೂಗಿ ಹೇಳಿದವು:

ಸಾಮ್ರಾಜ್ಯಶಾಹಿ ವಿರೋಧಿ ಜನತಾರಂಗದ ಘೋಷಣೆ: ಸೋವಿಯತ್ ಹಿಂದೂಸ್ತಾನ ಚಿರಾಯುವಾಗಲಿ!

ಚುನಾವಣೆಗಳನ್ನು ಸಾಮ್ರಾಜ್ಯಶಾಹಿ ವಿರೋಧಿ ಬಲಪ್ರದರ್ಶನಗಳನ್ನಾಗಿ ಮಾರ್ಪಡಿಸಿರಿ!

ಆದರೆ ಇವರ ಯಾವ ಪ್ರಯತ್ನಗಳೂ ಫಲಕಾರಿಯಾಗಲಿಲ್ಲ. ಜವಾಬ್ದಾರಿ ಸಂಪುಟ ಸರ್ಕಾರಕ್ಕಾಗಿ ಚುನಾವಣೆಗಳು ನಡೆದವು. ಕಾಂಗ್ರೆಸ್ ಎಂಟು ಪ್ರಾಂತ್ಯಗಳಲ್ಲಿ ಅಧಿಕಾರಕ್ಕೆ ಬಂತು. ಬಿಹಾರದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ರಚಿಸುವುದರ ವಿರುದ್ಧ ಜಯಪ್ರಕಾಶರು ಮತಪ್ರದರ್ಶನ ನಡೆಸಿದರು. ಈ ಸಂದರ್ಭದಲ್ಲಿ ಅವರನ್ನು ಎರಡು ತಿಂಗಳಿಗೂ ಹೆಚ್ಚು ಕಾಲ ಸೆರೆಮನೆಗೆ ದೂಡಲಾಯಿತು.

ತಂದೆಯ ಸಾವು – ಸಂಸಾರ ಹೂಡಿಕೆ

ಸೆರಮನೆಯಿಂದ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಹರ್ಷ ದಯಾಳ್ ಬಾಬು ಅವರ ಸಾವಿನ ಸುದ್ದಿ ಬಂತು. ಜಯಪ್ರಕಾಶರು ಸಿತಾಬ್ದಿಯಾರಾಗೆ ತೆರಳಿ ತಂದೆಯವರ ಅಂತಿಮಕ್ರಿಯೆಯಲ್ಲಿ ಭಾಗವಹಿಸಿ ಬಂದರು. ದೇಶದ ವಿವಿಧ ಭಾಗಗಳಿಂದ ಅವರಿಗೆ ಸಂತಾಪ ಸೂಚಕ ಸಂದೇಶಗಳು ಬಂದು, ನೋವು ತುಂಬಿದ ಅವರ ಹೃದಯವನ್ನು ಕೊಂಚ ಹಗುರಗೊಳಿಸಿತು.

ಕೆಲವು ದಿನಗಳ ನಂತರ, ಜಯಪ್ರಕಾಶರು ತಮ್ಮ ಕಾರ್ಯಾಲಯಕ್ಕೆಂದು, ಪಾಟ್ನಾದ ಅತಿ ಅಗ್ಗದ ವಾಸಸ್ಥಳವೆನಿಸಿರುವ ಕದಂಕುಂವಾದಲ್ಲಿ ಮನೆಯೊಂದನ್ನು ಬಾಡಿಗೆಗೆ ಹಿಡಿದರು. ತಂದೆಯವರ ಜೀವವಿಮಾ ಪಾಲಿಸಿ ಮೂಲಕ ಹಾಗೂ ಆಪ್ತಸ್ನೇಹಿತ ಗಂಗಾಶರಣ ಸಿನ್ಹಾರಿಂದ ಅವರಿಗೆ ಹಣಕಾಸಿನ ನೆರವು ದೊರಕಿತು. ಜಯಪ್ರಕಾಶ್, ಪ್ರಭಾವತಿ ಹಾಗೂ ಗಂಗಾಶರಣ ಸಿನ್ಹಾ—ಈ ಮೂವರೂ ಈ ಮನೆಯಲ್ಲಿ ವಾಸಿಸತೊಡಗಿದರು. ಕೊಳಕು ಧೋತಿಯೊಂದಿಗೆ ಜೋಗಿಯಂತೆ ಕಾಣುತ್ತಿದ್ದ ಜಯಪ್ರಕಾಶ್, ಒಂದು ಕಡೆ ಮನೆ ಎಂಬುದನ್ನು ಮಾಡಿ ಸಂಸಾರ ಹೂಡಿದೊಡನೆ ಸ್ವಲ್ಪವಾದರೂ ನಾಜೂಕುತನ ಕಲಿಯಬೇಕಾಯಿತು. "ಜಯಪ್ರಕಾಶ್ ಮದುವೆ ಮಾಡಿಕೊಂಡಿರುವುದು ಸಮಾಜವಾದವನ್ನ" ಎಂದು ಗಾಂಧೀಜಿಯವರಿಂದ ತಮಾಷೆಗೊಳಗಾಗಿದ್ದ ಪ್ರಭಾವತಿಯವರು, ಜಯಪ್ರಕಾಶರನ್ನು ಕೌಟುಂಬಿಕ ಜೀವನದ ಕನಿಷ್ಠ ಶಿಸ್ತಿಗೆ ಒಳಪಡಿಸುವ ಸಾಹಸ ಮಾಡಿದರು. ಆದರೆ ನಿಯಮಿತ ಆದಾಯ ಮೂಲವಿಲ್ಲದೆ ಹಾಗೂ ನಿರಂತರ ಪ್ರವಾಸದ ಕನಿಷ್ಟ ಅಗತ್ಯಗಳನ್ನೂ

ಹೊಂದಿಸಿಕೊಳ್ಳಲಾಗದೆ, ಹಣಕಾಸಿನ ಅನಿಶ್ಚಿತತೆಯ ನಡುವೆಯೇ ಜಯಪ್ರಕಾಶರು ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಭದ್ರ ಅಡಿಪಾಯ ಹಾಕುವ ಪ್ರಯತ್ನಗಳನ್ನು ಮುಂದುವರಿಸಿದರು. 'ಕಾಂಗ್ರೆಸ್ ಸೋಷಲಿಸ್ಟ್' ಎಂಬ ವೈಚಾರಿಕ ಪತ್ರಿಕೆ ಆರಂಭಿಸಿದರು.

ಜಯಪ್ರಕಾಶರ ನೇತೃತ್ವದ ಕಾಂಗ್ರೆಸ್ ಸಮಾಜವಾದಿ ಪಕ್ಷ ಕ್ರಮೇಣ ಕಾಂಗ್ರೆಸ್ಸಿಗೆ ಸಮಾನಾಂತರ ಶಕ್ತಿಯಾಗಿ ರೂಪುಗೊಳ್ಳತೊಡಗಿತು. ಒಂದು ಕಡೆ ಕಾಂಗ್ರೆಸ್ ಮಂತ್ರಿಮಂಡಲ ಗಳ ರಚನೆಗೆ 'ಕಾರ್ಯ ಬೆಂಬಲ' ನೀಡಿ ಮತ್ತೊಂದು ಕಡೆ ತಮಗೆ 'ನೈತಿಕ ಬೆಂಬಲ' ವ್ಯಕ್ತಪಡಿಸುವ ಜವಾಹರಲಾಲರ ದ್ವಂದ್ವ ಧೋರಣೆ ಜಯಪ್ರಕಾಶರನ್ನು ಗೊಂದಲ ಗೊಳಿಸಿತ್ತಾದರೂ, ಫಾರ್ವರ್ಡ್ ಬ್ಲಾಕ್ ಗುಂಪಿನ ನಾಯಕ ಸುಭಾಷ್‌ಚಂದ್ರ ಬೋಸ್ ಅವರ ಸಂಪೂರ್ಣ ಬೆಂಬಲ ಸ್ವಲ್ಪ ಮಟ್ಟಿಗೆ ಈ ಗೊಂದಲದಿಂದ ಜಯಪ್ರಕಾಶರು ಧೃತಿಗೆಡದಂತೆ ರಕ್ಷಿಸಿತು. ಅಲ್ಲದೆ ಅಷ್ಟುಹೊತ್ತಿಗೆ ಡಾ. ರಾಮ ಮನೋಹರ ಲೋಹಿಯಾ, ಅಶೋಕ ಮೆಹ್ತಾ, ಅಚ್ಯುತ್ ಪಟವರ್ಧನ್, ಎಸ್.ಎಂ. ಜೋಷಿ, ಎನ್.ಜಿ.ಗೋರೆ, ಯೂಸುಫ್ ಮೆಹ್ರೋಲಿ ಮುಂತಾದ ಸಮಾಜವಾದಿಗಳ ವ್ಯಕ್ತಿತ್ವಗಳು ಸಹ ಜನಸಮೂಹದ ಮಧ್ಯೆ ವಿಕಾಸಗೊಂಡಿದ್ದು, ಅವರೆಲ್ಲರ ಸಕ್ರಿಯ ಬೆಂಬಲ ಜಯಪ್ರಕಾಶರ ಆತ್ಮವಿಶ್ವಾಸವನ್ನು ಹೆಚ್ಚಿಸಿತು.

ಕಮ್ಯೂನಿಸ್ಟರ ವಿಶ್ವಾಸದ್ರೋಹ

ಆದರೆ ೧೯೩೮ರಲ್ಲಿ ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಮ್ಮೇಳನದಲ್ಲಿ ಹೊರಬಿದ್ದ ಅಂಶಗಳು ಜಯಪ್ರಕಾಶರನ್ನು ತಲ್ಲಣಗೊಳಿಸಿದವು. ಭಾರತದ ಕಮ್ಯೂನಿಸ್ಟ್ ಪಕ್ಷ ಕಾಂಗ್ರೆಸ್ ನೇತೃತ್ವದ ರಾಷ್ಟ್ರೀಯ ಆಂದೋಲನಕ್ಕೆ ಇದ್ದಕ್ಕಿದ್ದಂತೆ ಬೆಂಬಲ ನೀಡಲು ನಿರ್ಧರಿಸಿದ್ದರ ಹಿಂದೆ ಒಂದು ನಿರ್ದಿಷ್ಟ ಕಾರಣವಿದ್ದಂತೆ ಕಂಡಿತು. ಎರಡನೇ ಮಹಾಯುದ್ಧ ಆರಂಭವಾಗುವ ಸೂಚನೆಗಳು ಕಾಣಬರತೊಡಗಿದ್ದು, ಬ್ರಿಟನ್ ಮತ್ತು ಜರ್ಮನಿಗಳು ಕ್ರಮವಾಗಿ ಭಾರತ ಮತ್ತು ಪೋಲೆಂಡ್‌ಗಳ ಮೂಲಕ ಸೋವಿಯತ್ ಒಕ್ಕೂಟದ ಮೇಲೆ ದಾಳಿ ನಡೆಸುವ ಸಂಭವವಿದೆ ಎಂದು ಕಮ್ಯೂನಿಸ್ಟರು ಭಾವಿಸಿದ್ದರು. ಆದ್ದರಿಂದ ತಮ್ಮ ಕೈಲಾದ ಮಟ್ಟಿಗೆ ಸೋವಿಯತ್ ಒಕ್ಕೂಟವನ್ನು ಕಾಪಾಡುವ ಉದ್ದೇಶದಿಂದ, ಭಾರತದ ಬ್ರಿಟಿಷ್ ಸರ್ಕಾರವನ್ನು ಕಷ್ಟಕ್ಕೆ ಸಿಲುಕಿಸಲು ರಾಷ್ಟ್ರೀಯ ಆಂದೋಳನಕ್ಕೆ ಬೆಂಬಲ ನೀಡಿದರು. ತಮ್ಮನ್ನು ಆದರದಿಂದ ಬರಮಾಡಿಕೊಂಡ ಕಾಂಗ್ರೆಸ್ ಸಮಾಜವಾದಿಗಳ ಮೂಲಕ, ರಾಷ್ಟ್ರೀಯ ಆಂದೋಲನವನ್ನು ನಿರ್ದೇಶಿಸುವ ಪ್ರಮುಖ ಅಧಿಕಾರ ಕೇಂದ್ರಗಳಿಗೆ ನುಸುಳಿಕೊಳ್ಳುವ ಯೋಜನೆ ಅವರದಾಗಿತ್ತು. ಅದರಂತೆ ಕಾಂಗ್ರೆಸ್ಸಿನ ಬ್ರಿಟನ್–ವಿರೋಧಿ ಆಂದೋಲನವನ್ನು ಪೂರ್ಣವಾಗಿ ತನ್ನ ಹತೋಟಿಗೆ ತೆಗೆದುಕೊಳ್ಳಲು ಸಾಧ್ಯವಾಗುವಂತೆ, ಆಂದೋಲನದ ಸಾಮಾನ್ಯ ಕಾರ್ಯಕರ್ತರನ್ನು ಆಕರ್ಷಿಸಲು ಒಳಗೊಳಗೇ ಕಾಂಗ್ರೆಸ್ ಸಮಾಜವಾದಿಗಳ ವಿರುದ್ಧ ಪ್ರಚಾರ ಆರಂಭಿಸಿತು. ಕಾಂಗ್ರೆಸ್ ಸಮಾಜವಾದಿ

ಪಕ್ಷವು ನಿಜವಾಗಿ ಸಮಾಜವಾದೀ ನೀತಿಯನ್ನನುಸರಿಸುವ ಪಕ್ಷವಲ್ಲವೆಂದೂ, ಸಮಾಜವಾದದ ಅವತರಣಕ್ಕೆ ಅದನ್ನು ಕೇವಲ ವೇದಿಕೆಯಾಗಿ ಬಳಸಿಕೊಳ್ಳಬಹುದೆಂದೂ ಭಾರತದ ಕಮ್ಯೂನಿಸ್ಟ್ ಪಕ್ಷ ತನ್ನ ಕಾಮ್ರೇಡ್‌ಗಳಿಗೆ ಸೂಚಿಸಿತ್ತು. ಈ ಸುದ್ದಿ ತಿಳಿದ ಕಾಂಗ್ರೆಸ್ ಸಮಾಜವಾದಿಗಳು ಸಿಟ್ಟಿಗೆದ್ದರು. ಕಮ್ಯೂನಿಸ್ಟರನ್ನು ಒಳಗೊಂಡಿದ್ದ ಕಾಂಗ್ರೆಸ್ ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯನಿರ್ವಾಹಕವು ಈ ಹಿನ್ನೆಲೆಯಲ್ಲಿ ಕಮ್ಯೂನಿಸ್ಟರನ್ನು ಹೊರಹಾಕಲು ನಿರಾಕರಿಸಿತಾದರೂ, ಇನ್ನು ಮುಂದೆ ಕಮ್ಯೂನಿಸ್ಟರಿಗೆ ಪಕ್ಷದೊಳಕ್ಕೆ ಪ್ರವೇಶ ನೀಡುವುದನ್ನು ನಿಷೇಧಿಸಿತು.

ಆದರೆ ಮುಂದಿನ ಕೆಲವು ದಿನಗಳಲ್ಲಿ ಕಮ್ಯೂನಿಸ್ಟ್ ಪಕ್ಷವು ಕಾಂಗ್ರೆಸ್ ಸಮಾಜವಾದಿಗಳ ವಿರುದ್ಧ ವ್ಯವಸ್ಥಿತ ಯೋಜನೆಯೊಂದನ್ನು ಸಿದ್ಧಪಡಿಸಿರುವ ಖಚಿತ ಸುಳಿವು ದೊರಕಿತು. ಕಮ್ಯೂನಿಸ್ಟ್ ಪಕ್ಷ ಹೊರಡಿಸಿದ್ದ ಪರಿಪತ್ರವೊಂದರಲ್ಲಿ, ತಾನು ಅನುಸರಿಸಬೇಕಾದ ಸಮಗ್ರ ತಂತ್ರಗಳನ್ನು ನಿರೂಪಿಸಿತ್ತು. ಅಲ್ಲದೆ, ಕಾಂಗ್ರೆಸ್ ಮತ್ತು ಕಾಂಗ್ರೆಸ್ ಸಮಾಜವಾದಿಗಳ ನಡುವೆ ಒಳಜಗಳಗಳನ್ನು ಉಂಟು ಮಾಡುವ ಅವರ ಪ್ರಯತ್ನಗಳ ಸುಳಿವುಗಳೂ ಹೊರ ಬೀಳತೊಡಗಿದವು. ೧೯೩೯ರ ಮಧ್ಯಭಾಗದ ಹೊತ್ತಿಗೆ ಬಹಳಷ್ಟು ಕಾಂಗ್ರೆಸ್ ಸಮಾಜವಾದಿಗಳು ಸಂಯುಕ್ತ ರಂಗದ ಕಾರ್ಯನಿರ್ವಾಹಕ ಸಮಿತಿಗೆ ರಾಜೀನಾಮೆ ನೀಡಿದರು. ಮೀನೂ ಮಸಾನಿ, ಅಚ್ಯುತ ಪಟವರ್ಧನ್, ಅಶೋಕ ಮೆಹ್ತಾ ಮತ್ತು ಡಾ. ರಾಮಮನೋಹರ ಲೋಹಿಯಾ ಮುಂತಾದವರು ಕಮ್ಯೂನಿಸ್ಟರು ಸ್ನೇಹಕ್ಕೆ ಯೋಗ್ಯರಲ್ಲ ಎಂದು ತೀರ್ಮಾನಿಸಿದರು; ಅವರ ಪ್ರಾಥಮಿಕ ನಿಷ್ಠೆ ಭಾರತದ ಹೊರಗಿದೆ ಎಂದು ಸೂಚಿಸಿದರು.

ಕಾಂಗ್ರೆಸ್ ಅಧ್ಯಕ್ಷರಾಗಿ ಸುಭಾಷ್ - ಗಾಂಧಿವಾದಿಗಳ ಮುಜುಗರ

ಅಷ್ಟು ಹೊತ್ತಿಗೆ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯೊಳಕ್ಕೆ ನುಸುಳುವಲ್ಲಿ ಕಮ್ಯೂನಿಸ್ಟರ ತಂತ್ರ ಎಷ್ಟು ಸಫಲವಾಗಿತ್ತೆಂದರೆ, ೧೯೩೯ರ ಕಾಂಗ್ರೆಸ್ ಸಮ್ಮೇಳನವು ಎಡಶಕ್ತಿಗಳ ಆಕರ್ಷಣೆಯಾಗಿದ್ದ ಸುಭಾಷ್‌ಚಂದ್ರ ಬೋಸ್ ಅವರನ್ನು (ಆ ಸಂದರ್ಭದಲ್ಲಿ ಇವರು ಗಾಂಧೀಜಿಯ ಪ್ರಬಲ ವಿರೋಧಿಯಾಗಿದ್ದರು) ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿತು! ಈ ಅನಿರೀಕ್ಷಿತದಿಂದ ದಂಗಾದ ಗಾಂಧೀಜಿ ಪರವಿದ್ದ ಕಾಂಗ್ರೆಸ್ಸಿಗರು, ಕಾರ್ಯಕಾರಿ ಸಮಿತಿಗೆ ರಾಜೀನಾಮೆ ನೀಡಿದರು. ಇದರಿಂದ ಕಮ್ಯೂನಿಸ್ಟರ ಕೈ ಕತ್ತರಿಸಿ ದಂತಾಯಿತು. ಕೆಲವು ಅಧಿಕಾರ ಸ್ಥಾನಗಳನ್ನಷ್ಟೆ ಗಳಿಸಿಕೊಂಡಿದ್ದ ಕಮ್ಯೂನಿಸ್ಟರು ಜನತಾ ಸಂಘಟನೆಯ ಭದ್ರ ನೆಲೆಯಾಗಿದ್ದ ಕಾಂಗ್ರೆಸ್ಸಿನ ಸಹಕಾರವಿಲ್ಲದೆಯೇ ಏನೂ ಮಾಡಲಾಗದ ಸ್ಥಿತಿಯಲ್ಲಿದ್ದರು. ತಕ್ಷಣವೇ ಅವರು ಮತ್ತೊಂದು ಮಾರ್ಗೋಪಾಯವನ್ನು ರೂಪಿಸಿದರು. ಗಾಂಧೀಜಿ ನಾಯಕತ್ವದಲ್ಲಿ ಒಗ್ಗಟ್ಟನ್ನು ಮತ್ತೆ ಪ್ರತಿಪಾದಿಸಿದರು. ಆದರೆ ಈಗ ಎಚ್ಚರಗೊಂಡಿದ್ದ ಬಹುಪಾಲು ಕಾಂಗ್ರೆಸ್ ಸಮಾಜವಾದಿಗಳು ಅವರನ್ನು ಪರಿ ಪರಿಯಾಗಿ ಪ್ರಶ್ನಿಸಿದರು. ಅವರ

ಧ್ಯೇಯೋದ್ದೇಶಗಳೇನು ಎಂಬ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಒತ್ತಾಯಪಡಿಸಿದರು. ಬಿಸಿ ಬಿಸಿ ಚರ್ಚೆಗಳು ನಡೆದು, ಎರಡೂ ಗುಂಪುಗಳ ನಡುವೆ ಬಿಗುವು ಹೆಚ್ಚಿದಂತೆ ಪರಸ್ಪರ ದೂಷಣೆಗಳು ಆರಂಭವಾದವು. ಕಮ್ಯೂನಿಸ್ಟರ ಅನಿರೀಕ್ಷಿತ ನೀತಿ ಬದಲಾವಣೆಯ ಹಿಂದಿದ್ದ ಕಾರ್ಯೋದ್ದೇಶವು ಕ್ರಮೇಣ ಬಹಿರಂಗವಾಯಿತು.

ಜಯಪ್ರಕಾಶರ ವಿಷಾದ - ಕಮ್ಯೂನಿಸ್ಟರ ಉಚ್ಚಾಟನೆ

ಈ ಬಗ್ಗೆ ಅತ್ಯಂತ ವಿಷಾದಪಟ್ಟವರು ಜಯಪ್ರಕಾಶ್ ನಾರಾಯಣರು. ೧೯೩೯ರ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಮ್ಮೇಳನದಲ್ಲಿ ಅವರು, "ಭಾರತ ಕಮ್ಯೂನಿಸ್ಟ್ ಪಕ್ಷವು, ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಅಥವಾ ಇನ್ನಾವುದೇ ಪ್ರಗತಿಪರ ಪಕ್ಷಕ್ಕೆ ಆಜನ್ಮ ಶತ್ರುವಾಗಿ ಪರಿಣಮಿಸಿದೆ. ಕೆಲವು ವಾರಗಳಿಂದ ಕಮ್ಯೂನಿಸ್ಟರು ಒಗ್ಗಟ್ಟನ್ನು ಒಡೆಯಲು ಕೈಗೊಳ್ಳದ ಪ್ರಯತ್ನಗಳಿಲ್ಲ, ಹೇಳದ ಸುಳ್ಳುಗಳಿಲ್ಲ" ಎಂಬ ಖಂಡತುಂಡ ಹೇಳಿಕೆ ನೀಡಿದರು. ಈ ಹೇಳಿಕೆಯೊಂದಿಗೆ ಅವರ ಮತ್ತು ಕಮ್ಯೂನಿಸ್ಟ್ ಪಕ್ಷದ ನಡುವಣ ಸಖ್ಯ ಕೊನೆಗೊಂಡಂತಾಯಿತು. ಈ ಮಧ್ಯೆ ಭಾರತದ ಕಮ್ಯೂನಿಸ್ಟ್ ಪಕ್ಷವು ಬ್ರಿಟಿಷ್ ಮತ್ತು ಜರ್ಮನ್ "ಸಾಮ್ರಾಜ್ಯಶಾಹಿಗಳ ಯುದ್ಧ"ವನ್ನು ಎದುರಿಸಲು "ಶ್ರಮಜೀವೀ ಪಥ" ಎಂಬ ಕಾರ್ಯಕ್ರಮವನ್ನು ಹಾಕಿಕೊಂಡು ಸಾರ್ವತ್ರಿಕ ಮುಷ್ಕರಗಳಿಗೆ ಕರೆಕೊಟ್ಟಿತು. ಆದರೆ ೧೯೪೦ರಲ್ಲಿ ರಾಮಘಡದಲ್ಲಿ ನಡೆದ ಕಾಂಗ್ರೆಸ್ ಸಮಾಜವಾದಿ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಇದಕ್ಕೆ ಮರುಳಾಗದೆ ಭಾರತದ ಕಮ್ಯೂನಿಸ್ಟ್ ಪಕ್ಷದ ಎಲ್ಲ ಸದಸ್ಯರನ್ನು ತನ್ನ ಪಕ್ಷದಿಂದ ಹೊರಹಾಕುವ ನಿರ್ಣಯವನ್ನು ಅಂಗೀಕರಿಸಿತು.

ಈ ಹೊತ್ತಿಗೆ ಎರಡನೇ ಮಹಾಯುದ್ಧದ ಕಾರ್ಮೋಡಗಳು ಕವಿಯತೊಡಗಿದ್ದು, ಸಮರ ರೇಖೆಯ ಎರಡೂ ಬದಿಗಳ ಪಕ್ಷಗಳು ಯಾವುವು ಎಂಬುದು ಸ್ಪಷ್ಟವಾಗತೊಡಗಿತ್ತು. ಬ್ರಿಟನ್ ದೊಡ್ಡ ಶಕ್ತಿಯಾಗಿಯೇ ರಣಾಂಗಣಕ್ಕೆ ಇಳಿದಿತ್ತು. ಬ್ರಿಟಿಷ್ ಪಾರ್ಲಿಮೆಂಟ್ ಭಾರತದ ವೈಸ್‌ರಾಯ್‌ಗೆ ಹಾಗೂ ದೆಹಲಿ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರಗಳ ಮೇಲೆ ಸಂಪೂರ್ಣ ನಿಯಂತ್ರಣಕ್ಕೆ ಅವಕಾಶ ಮಾಡಿಕೊಡುವ ತುರ್ತು ಅಧಿಕಾರಗಳ ಶಾಸನವೊಂದನ್ನು ಅಂಗೀಕರಿಸಿ, ಭಾರತವೂ ಯುದ್ಧದಲ್ಲಿ ತನ್ನ ಪರವಾಗಿ ಭಾಗವಹಿಸುವಂತೆ ಒತ್ತಡ ಹೇರಿತು. ಭಾರತದ ಸೇನೆಯನ್ನು ಜಗತ್ತಿನ ವಿವಿಧ ಯುದ್ಧ ರಂಗಗಳಿಗೆ ರವಾನಿಸ ತೊಡಗಿತು. ಈಗ ಯುದ್ಧದಲ್ಲಿ ಬ್ರಿಟನ್‌ನೊಡನೆ ಸಹಕರಿಸದಿರಲು ನಿರ್ಧರಿಸಿದ್ದ ಕಾಂಗ್ರೆಸ್ ಇದನ್ನು ವಿರೋಧಿಸಿತು. ಇದನ್ನೊಪ್ಪದ ಬ್ರಿಟಿಷ್ ಸರ್ಕಾರ ಭಾರತದ ಪ್ರಾಂತೀಯ ಒಕ್ಕೂಟಕ್ಕೆ ತನ್ನ ಪರಮಾಧಿಕಾರದಡಿಯಲ್ಲಿ ಸ್ವಾಯತ್ತ ಸ್ಥಾನಮಾನ (ಡೊಮಿನಿಯನ್) ನೀಡಲಷ್ಟೇ ಮುಂದೆ ಬಂತು. ಇದನ್ನು ತಿರಸ್ಕರಿಸಿದ ಕಾಂಗ್ರೆಸ್, ಕೇಂದ್ರ ಶಾಸನ ಸಭೆಯನ್ನು ಬಹಿಷ್ಕರಿಸಿತಲ್ಲದೆ ತನ್ನ ಸಚಿವರನ್ನು ಅಧಿಕಾರದಿಂದ ಹಿಂತೆಗೆದುಕೊಂಡಿತು. ಅಲ್ಲದೆ ತಾನು ಅಧಿಕಾರದಲ್ಲಿದ್ದ ಎಂಟು ಪ್ರಾಂತೀಯ ಸರ್ಕಾರಗಳಿಗೆ ರಾಜೀನಾಮೆ ನೀಡಿತು. ಗಾಂಧೀಜಿ ಸಂಪೂರ್ಣ

ಸ್ವರಾಜ್ಯದ ಬೇಡಿಕೆಯನ್ನು ಮಂಡಿಸಿದ್ದರು. ಬ್ರಿಟನ್, ಭಾರತದ ಗಡಿ ಮೂಲಕ ಸೋವಿಯತ್ ಒಕ್ಕೂಟದ ಮೇಲೆ ದಾಳಿ ನಡೆಸುವುದೆಂದು ನಿರೀಕ್ಷಿಸಿದ್ದ ಭಾರತದ ಕಮ್ಯೂನಿಸ್ಟ್ ಪಕ್ಷವು, 'ಬ್ರಿಟಿಷ್ ಸಾಮ್ರಾಜ್ಯಶಾಹಿ'ಯೊಡನೆ ಯಾವುದೇ ರೀತಿಯಲ್ಲಿ ಸಹಕರಿಸದಿರಲು ಜನತೆಗೆ ಕರೆಕೊಟ್ಟಿತ್ತು.

ಯುದ್ಧ ವಿರೋಧಿ ಕರೆ – ಬಂಧನ

ಜಯಪ್ರಕಾಶರು ದೇಶಾದ್ಯಂತ ಸಂಚರಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ಕಾರ್ಮಿಕರನ್ನು ಸಂಘಟಿಸುತ್ತಿದ್ದರು. ಕಾರ್ಖಾನೆಗಳ ಆವರಣಗಳಿಗೆ ಭೇಟಿ ಕೊಟ್ಟು, ತಮ್ಮ ಸ್ವಾರ್ಥಕ್ಕೋಸ್ಕರ ಯುದ್ಧಕ್ಕಿಳಿದಿರುವ ಮತ್ತು ತನ್ನ ಗೆಲುವಿಗಾಗಿ ಭಾರತದ ದುಡಿಮೆಗಾರರನ್ನು ಬಳಸಿಕೊಳ್ಳುತ್ತಿರುವ ಶೋಷಕ ಬ್ರಿಟಿಷ್ ಸರ್ಕಾರದೊಡನೆ ಸಹಕರಿಸಕೂಡದೆಂದು ಅವರು ಕರೆ ಕೊಡಲಾರಂಭಿಸಿದ್ದರು. ಅಲ್ಲದೆ ಈ ಸಂದರ್ಭ ಬಳಸಿಕೊಂಡು ರಾಷ್ಟ್ರಾದ್ಯಂತ ಎಲ್ಲ ಕಾರ್ಮಿಕ ಸಂಘಗಳೂ ಒಟ್ಟಿಗೇ ಮುಷ್ಕರ ಹೂಡಿ ಬ್ರಿಟಿಷ್ ಆಡಳಿತವನ್ನು ಮಣಿಸಿ ನಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ರೂಪಿಸಿಕೊಂಡು ನಮಗಾಗಿ ದುಡಿದುಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಳ್ಳಬೇಕೆಂದು ಆಗ್ರಹಪಡಿಸುತ್ತಿದ್ದರು. ಜೇಮ್‌ಷೆಡ್‌ಪುರದ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಾ, ಮುಷ್ಕರ ಹೂಡಿ ಯುದ್ಧಕ್ಕೆ ಸಹಾಯಕವಾಗುವ ಉಕ್ಕಿನ ಉತ್ಪಾದನೆಯನ್ನು ನಿಲ್ಲಿಸಿ ಬ್ರಿಟಿಷ್ ಆಡಳಿತವನ್ನು ನಿಷ್ಕ್ರಿಯಗೊಳಿಸುವಂತೆ ಕರೆಕೊಟ್ಟರು. ಗುಪ್ತಚರ ದಳದವರು ಸರ್ಕಾರಕ್ಕೆ ಈ ಭಾಷಣದ ವರದಿ ಮಾಡಿದರು. ಭಾರತದ ರಕ್ಷಣಾ ಕಾಯಿದೆ ಪ್ರಕಾರ ಅವರನ್ನು ಬಂಧಿಸಲಾಯಿತು.

ಗಾಂಧೀಜಿ ಈ ಬಂಧನವನ್ನು ಖಂಡಿಸಿದರು. ಜಯಪ್ರಕಾಶರು ಬರೀ ತಂಟೆಕೋರನಾದ ಸಾಮಾನ್ಯ ಕಾರ್ಯಕರ್ತರಲ್ಲವೆಂದೂ, ಜವಾಬ್ದಾರಿಯಿರುವ ಬುದ್ಧಿಜೀವಿ ನಾಯಕರೆಂದೂ; ಕಾಯಿದೆಯ ಕೆಲವು ವಿಧಿಗಳನ್ನು ದುರುಪಯೋಗ ಪಡಿಸಿಕೊಂಡು ಈ ಬಂಧನ ನಡೆದಿರಬಹುದೆಂದೂ ವೈಸ್‌ರಾಯ್‌ರಿಗೆ ಪತ್ರ ಬರೆದರು. ಆದರೆ ಜಯಪ್ರಕಾಶರು ನ್ಯಾಯಾಲಯದಲ್ಲಿ ಒಂದು ದೀರ್ಘ ಹೇಳಿಕೆ ನೀಡಿ, ತಾವು ಬ್ರಿಟಿಷ್ ವಿರೋಧಿ ಭಾಷಣ ಮಾಡಿ ಕಾರ್ಮಿಕರನ್ನು ಮುಷ್ಕರಕ್ಕೆ ಪ್ರಚೋದಿಸಿದ್ದಾಗಿಯೂ, ಅದನ್ನು ತಮ್ಮ ಕರ್ತವ್ಯವೆಂದು ಭಾವಿಸಿರುವುದಾಗಿಯೂ, ಹೇಳಿದರು. "ಗುಲಾಮ, ಗುಲಾಮತನವನ್ನು ಸಮರ್ಥಿಸಲಾರ; ಗುಲಾಮಗಿರಿಯನ್ನು ನಾಶಮಾಡುವುದಷ್ಟೇ ಅವನ ಧ್ಯೇಯ" ಎಂದು ನ್ಯಾಯಾಲಯದಲ್ಲಿ ಸಾರಿದರು.

ಜಯಪ್ರಕಾಶರಿಗೆ ಒಂಬತ್ತು ತಿಂಗಳುಗಳ ಕಠಿಣಶಿಕ್ಷೆ ವಿಧಿಸಿ ಜೆಮ್‌ಷೆಡ್‌ಪುರದ ಸೆರೆಮನೆಗೆ ದೂಡಿದರು. ಜಯಪ್ರಕಾಶ್ ನ್ಯಾಯಾಲಯದಲ್ಲಿ ನೀಡಿದ ಹೇಳಿಕೆಯ ಮೂಲಕ ದೇಶಾದ್ಯಂತ ದೊಡ್ಡ ಸುದ್ದಿಯಾದರು. ತಮ್ಮ ಈ ನಿರ್ಭಯತೆಯ ಮೂಲಕ ಗಾಂಧೀಜಿಗೆ ಮತ್ತಷ್ಟು ಹತ್ತಿರವಾದರು.

ಈ ಮಧ್ಯೆ ಭಾರತದ ಕಮ್ಯೂನಿಸ್ಟ್ ಪಕ್ಷದ ನಿರೀಕ್ಷೆಗೆ ವಿರುದ್ಧವಾಗಿ ಜರ್ಮನಿ ಮಾತ್ರ ಸೋವಿಯತ್ ಒಕ್ಕೂಟದ ಮೇಲೆ ದಾಳಿ ಮಾಡಿತು. ಹಿಟ್ಲರನ ಒಪ್ಪಂದ ಉಲ್ಲಂಘನೆಯಿಂದಾಗಿ ಬ್ರಿಟನ್, ಜರ್ಮನಿಯ ವಿರುದ್ಧ ಯುದ್ಧಕ್ಕಿಳಿಯಬೇಕಾಯಿತು. ಬ್ರಿಟನ್ ಮತ್ತು ಸೋವಿಯತ್ ಒಕ್ಕೂಟ ಒಂದೆಡೆ ಸೇರಿದವು. ತಕ್ಷಣವೇ ಭಾರತದ ಕಮ್ಯೂನಿಸ್ಟ್ ಪಕ್ಷವು ತನ್ನ ಧೋರಣೆಯನ್ನು ಬದಲಿಸಿಕೊಂಡಿತು: ಅದು, ತಾನೇ ಆವರೆಗೆ 'ಸಾಮ್ರಾಜ್ಯ ಶಾಹಿಗಳ ಯುದ್ಧ' ಎಂದು ಕರೆಯುತ್ತಿದ್ದ ಯುದ್ಧವನ್ನು ಈಗ 'ಜನತಾ ಯುದ್ಧ' ಎಂದು ಕರೆಯತೊಡಗಿತು. ಬ್ರಿಟಿಷ್ ಸರ್ಕಾರಕ್ಕೆ ತನ್ನ ಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿತು. ಆ ಹೊತ್ತಿಗೆ ಕಾಂಗ್ರೆಸ್ಸೊಂದನ್ನು ಉಳಿದು, ಇನ್ನಿತರ ಪಕ್ಷಗಳೆಲ್ಲವೂ ಬ್ರಿಟನ್ನಿಗೆ ಬೆಂಬಲ ನೀಡಿದ್ದವು. ಮಹಮ್ಮದಾಲಿ ಜಿನ್ನಾ ಅವರ ಮುಸ್ಲಿಂ ಲೀಗ್ ಪಕ್ಷವಂತೂ ಈ ಬೆಂಬಲಕ್ಕೆ ಪ್ರತಿಫಲವಾಗಿ ಪ್ರತ್ಯೇಕ ಮುಸ್ಲಿಂ ರಾಜ್ಯಗಳನ್ನು ಕೇಳಿತು. ದೇಶವನ್ನು ಕಾಂಗ್ರೆಸ್ಸಿನಿಂದ ವಿಮೋಚನೆಗೊಳಿಸುವ ಬ್ರಿಟಿಷರ ಪ್ರಯತ್ನಕ್ಕೆ ಕೃತಜ್ಞತೆಯನ್ನು ಅರ್ಪಿಸುವ ವಿಶೇಷ ದಿನವನ್ನು ಆಚರಿಸಲು ಸಹ ತನ್ನ ಅನುಯಾಯಿಗಳಿಗೆ ಕರೆ ಕೊಟ್ಟಿತ್ತು.

ರಷ್ಯಾ ಬಗೆಗೆ ಭ್ರಮನಿರಸನ

ಸೆರೆಮನೆಯಲ್ಲಿದ್ದ ಜಯಪ್ರಕಾಶ್ ದಿನ ನಿತ್ಯವೂ ಸುದ್ದಿ ಪತ್ರಿಕೆಗಳನ್ನು ಓದಿ, ಹೊಸ ಬೆಳವಣಿಗೆಗಳನ್ನು ತಿಳಿಯುತ್ತಿದ್ದರು. ಪತ್ರಿಕೆಗಳು ಸ್ಟಾಲಿನ್ ನಾಯಕತ್ವದ ರಷ್ಯಾದ ಸುದ್ದಿಗಳನ್ನು ಪ್ರಕಟಿಸುತ್ತಿದ್ದವು. ಕೈಗಾರೀಕರಣದ ಹೆಸರಿನಲ್ಲಿ, ಸಾಮುದಾಯಿಕ ಕೃಷಿಯ ಹೆಸರಿನಲ್ಲಿ, ಮರು ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿದ್ದ ಸ್ಟಾಲಿನ್ ನಿರ್ದೇಶನದ ಸಾಮೂಹಿಕ ನರಹತ್ಯೆಗಳು ಕಮ್ಯೂನಿಸಂ ಬಗೆಗಿನ ಜಯಪ್ರಕಾಶರ ನಂಬಿಕೆಗಳನ್ನು ಅಲುಗಾಡಿಸತೊಡಗಿದವು. ಅಕ್ಟೋಬರ್ ಕ್ರಾಂತಿಯ ಮುಂಚೂಣಿಯಲ್ಲಿದ್ದು ಬಂಡವಾಳಶಾಹಿಯ ವಿರುದ್ಧ ಪ್ರತ್ಯಕ್ಷ ಹೋರಾಟ ನಡೆಸಿ ಜಯಪ್ರಕಾಶರ ಮನಸ್ಸಿನಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದ ಎಲ್ಲ ಲೆನಿನ್‌ವಾದಿ ನಾಯಕರನ್ನೂ ಸ್ಟಾಲಿನ್ ಆಡಳಿತ ತರಿದು ಹಾಕಿದುದು ಕಮ್ಯೂನಿಸಂ ಬಗ್ಗೆ ಅವರ ಹತಾಶೆಯನ್ನು ಹೆಚ್ಚಿಸಿತು. ಕಮ್ಯೂನಿಸಂನ ಒಡಲಲ್ಲಿಯೇ ತನ್ನ ಗುರಿಗಳನ್ನು ತಾನೇ ವಿಕೃತಗೊಳಿಸುವ ವೈರುಧ್ಯಗಳಿವೆ ಎಂಬುದನ್ನು ವಿಶ್ಲೇಷಿಸುವ ಕೆಲವು ಪುಸ್ತಕಗಳೂ—ಯುಜೀನ್ ಲೈನ್‌ನ 'ಅಸೈನ್‌ಮೆಂಟ್ ಇನ್ ಉಟೋಪಿಯಾ' ಮತ್ತು ಆರ್ಥರ್ ಕೊಸ್ಲೆರ್‌ನ ಕಾದಂಬರಿ 'ಡಾರ್ಕ್‌ನೆಸ್ ಅಟ್ ನೂನ್'—ಅವರ ಮೇಲೆ ಗಾಢಪ್ರಭಾವ ಬೀರಿದವು. ರಷ್ಯಾದ ಕ್ರಾಂತಿಯ ನಿಜತ್ವದ ಬಗ್ಗೆಯೇ ಅವರಿಗೆ ಸಂದೇಹ ಮೂಡಿತು: ಬಂಡವಾಳಶಾಹಿಯ ವಿರುದ್ಧ ಹೋರಾಡಿದ ಜನತೆ, ಸ್ವಾತಂತ್ರ್ಯ ಸಮಾನತೆಗಳ ಸುಳಿವಿಲ್ಲದೆ ಅಧಿಕಾರಶಾಹಿಯ ದಮನವನ್ನು ಎದುರಿಸಬೇಕಾಗಿದೆ ಎಂಬ ಸಂಗತಿ ಅವರನ್ನು ತಲ್ಲಣಗೊಳಿಸಿತು.

ಅವರಿಗೆ ಮೊದಲ ಬಾರಿಗೆ, ಮಾರ್ಕ್ಸ್-ಲೆನಿನ್‌ರ ಚಿಂತನೆಯ ಮೂಲ ಪಾಠಗಳ ಬಗ್ಗೆ ಮರುಪರಿಶೀಲನೆ ಮಾಡುವುದು ಅಗತ್ಯವಾಯಿತು. ಸೋವಿಯತ್ ಮಾದರಿಯ

ಕಮ್ಯೂನಿಸಂ, ಶ್ರಮಿಕರ ಸರ್ವಾಧಿಕಾರದ ಹೆಸರಿನಲ್ಲಿ ಅಧಿಕಾರಿಶಾಹಿಯ ಏಕಚಕ್ರಾಧಿಪತ್ಯವನ್ನಷ್ಟೇ ಪ್ರೋತ್ಸಾಹಿಸುತ್ತದೆ ಎಂಬ ಅಭಿಪ್ರಾಯಕ್ಕೆ ಅವರು ಬಂದರು. ಪ್ರಜಾಸತ್ತಾತ್ಮಕ ಸ್ವಾತಂತ್ರ್ಯಗಳು ಇಲ್ಲದೆಡೆ ಸಮಾಜವಾದ ಇರಲಾರದು ಮತ್ತು ಅದನ್ನು ಸೃಷ್ಟಿಸಲೂ ಅಸಾಧ್ಯ ಎಂಬ ಹೊಳಹಿನೊಂದಿಗೆ ಅವರು ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ಹೊಸ ಸೈದ್ಧಾಂತಿಕ ಸ್ವರೂಪ ನೀಡಬೇಕಾದ ಅಗತ್ಯವನ್ನು ಮನಗಂಡರು. ಸಮಾಜವಾದವನ್ನು ಜಾರಿಗೆ ತರುವಲ್ಲಿ ನಾವು ಅನುಸರಿಸುವ ಮಾರ್ಗಗಳು, ನಮ್ಮ ಗುರಿಗಳನ್ನು ನೈತಿಕವಾಗಿಯೂ ಸಮರ್ಥಿಸುವಂತಿರಬೇಕು ಮತ್ತು ಈ ಬಗ್ಗೆ ಅನ್ನ, ಅಧಿಕಾರ, ಭದ್ರತೆ, ಸಮೃದ್ಧಿ ಅಥವಾ ಇನ್ನಾವುದೇ ನೆಪದಲ್ಲಿ ರಾಜಿ ಮಾಡಿಕೊಳ್ಳಕೂಡದು ಎಂಬ ದೃಢ ನಿಲುವಿನೊಡನೆ ಅವರು ಸೆರೆಮನೆಯಿಂದ ಹೊರಬಂದರು.

■

೫. ಹೋರಾಟದ ಅಗ್ನಿದಿವ್ಯ : ರಾಷ್ಟ್ರದ ಕಣ್ಮಣಿ

ಒಂಬತ್ತು ತಿಂಗಳುಗಳ ಸೆರೆವಾಸ ಮುಗಿಸಿ ಜಯಪ್ರಕಾಶರು ೧೯೪೦ರ ಡಿಸೆಂಬರ್ ಹೊತ್ತಿಗೆ ಹೊರ ಬಂದಾಗ ಯುದ್ಧ ನಿರ್ಣಾಯಕ ಘಟ್ಟವನ್ನು ಮುಟ್ಟಿದ್ದು, ಸರ್ಕಾರ ಸಾವಿರಾರು ಕಾಂಗ್ರೆಸ್ಸಿಗರನ್ನು ದಸ್ತಗಿರಿ ಮಾಡಿತ್ತು. ವಿನೋಬಾ ಭಾವೆ ಮುಂತಾದ ಗಾಂಧೀಜಿಯ 'ರಚನಾತ್ಮಕ ಕಾರ್ಯಕ್ರಮ'ದ ಕಾರ್ಯಕರ್ತರು ಜನರಿಗೆ ಯುದ್ಧದ ವಿರುದ್ಧ ಅಹಿಂಸಾತ್ಮಕವಾಗಿ ಮಾತ್ರ ಪ್ರತಿಭಟಿಸಿಬೇಕೆಂದು ಕರೆ ಕೊಡುತ್ತಾ, ಪ್ರಭಾತ್ ಫೇರಿ ನಡೆಸಿದ್ದರು. ಜವಾಹರಲಾಲರನ್ನು ಪ್ರಚೋದಕ ಭಾಷಣ ಮಾಡಿದ ಆಪಾದನೆಯ ಮೇಲೆ ನಾಲ್ಕು ವರ್ಷಗಳ ಕಠಿಣ ಶಿಕ್ಷೆಗೆ ಒಳಪಡಿಸಲಾಗಿತ್ತು.

ಮತ್ತೆ ಬಂಧನ - ದೇವಲಿ ಶಿಬಿರಕ್ಕೆ

ಬ್ರಿಟಿಷ್ ಅಧಿಕಾರದ ವಿರುದ್ಧ ದೇಶದ ಜನತೆ ಬಂಡಾಯವೇಳಲು ಇದೇ ಸೂಕ್ತ ಕಾಲವೆಂದು ಜಯಪ್ರಕಾಶ್ ಭಾವಿಸಿದರು. ಅವರು ದೇಶಾದ್ಯಂತ ಪ್ರವಾಸ ಕೈಗೊಂಡು, ಭೂಗತ ಚಟುವಟಿಕೆಗಳನ್ನು ನಡೆಸಬಲ್ಲ ಜಾಲಗಳನ್ನು ಹಲವಾರು ಕಡೆ ಸ್ಥಾಪಿಸಿದರು. ಆದರೆ ಸರ್ಕಾರದ ಪ್ರಬಲ ಬೇಹುಗಾರಿಕೆಯಿಂದಾಗಿ ಅವರನ್ನು ಮುಂಬೈನಲ್ಲಿ ದಸ್ತಗಿರಿ ಮಾಡಿ, ಭಾರತದ ರಕ್ಷಣಾ ಕಾಯಿದೆ ಪ್ರಕಾರ ವಿಚಾರಣೆಯಿಲ್ಲದೆಯೇ ಸೆರೆಮನೆಯಲ್ಲಿರಿಸಿಲಾಯಿತು. ಗೃಹಖಾತೆಯ ಅಧಿಕಾರಶಾಹಿ ಜಯಪ್ರಕಾಶರ 'ಸ್ಥಾನಮಾನ'ದ ಬಗ್ಗೆ ಖಚಿತ ನಿಲುವು ತಳೆಯುವ ಮುನ್ನವೇ, ಅವರನ್ನು ರಾಜಸ್ಥಾನದ ದೇವಲಿ ಸ್ಥಾನ ಬದ್ಧತಾ ಶಿಬಿರಕ್ಕೆ ವರ್ಗಾಯಿಸಲಾಯಿತು. ಮರುಭೂಮಿಯ ಮಧ್ಯೆ ಗುಡಾರಗಳು ಮತ್ತ ತಂತಿ ಬೇಲಿಗಳಿಂದ ಕೂಡಿದ್ದ ಆ ಶಿಬಿರ, ಹಿಂಸಾಚಾರದಲ್ಲಿ ತೊಡಗಿದ ಭಯೋತ್ಪಾದಕರು ಹಾಗೂ ತೀವ್ರವಾದಿ ಕಮ್ಯೂನಿಸ್ಟರಿಗಾಗಿ ಮೀಸಲಾಗಿತ್ತು. ಅಲ್ಲಿ ಖೈದಿಗಳನ್ನು ಅತ್ಯಂತ ತುಚ್ಛ ರೀತಿಯಲ್ಲಿ ನೋಡಿಕೊಳ್ಳಲಾಗುತ್ತಿತ್ತು. ಅಲ್ಲಿ ಮನುಷ್ಯನಿಗೆ ಯೋಗ್ಯವಾದ ಆಹಾರ, ನೀರು ಹಾಗೂ ಶೌಚ ಸೌಲಭ್ಯಗಳೂ ಸಹ ಇರಲಿಲ್ಲ. ವೈದ್ಯಕೀಯ ಸೌಲಭ್ಯಗಳಂತೂ ಅತ್ಯಂತ ಹೀನಾಯ ಸ್ಥಿತಿಯಲ್ಲಿದ್ದವು. ನಾಲ್ಕು ದಿನಗಳ ಉಪವಾಸ ಮುಷ್ಕರ ನಡೆಸಿದ ನಂತರ ಉತ್ತಮ ವೈದ್ಯಕೀಯ ಸೌಲಭ್ಯಗಳ ಭರವಸೆಯಷ್ಟೇ ದೊರಕಿತು.

ವಿಫಲವಾದ ಪತ್ರ ಸಾಹಸದ ಪ್ರಯತ್ನ

ಈ ಮಧ್ಯೆ ಜಯಪ್ರಕಾಶರನ್ನು ಕಾಣಲು ಶಿಬಿರಕ್ಕೆ ಬಂದಿದ್ದ ಪ್ರಭಾವತಿಯವರು ಅಲ್ಲಿನ ಸ್ಥಿತಿ ಗತಿಗಳನ್ನು ಕಂಡು ಆತಂಕಗೊಂಡರು. ಆದರೆ ಅವರೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಪ್ರಭಾವತಿ ಮತ್ತೊಮ್ಮೆ ಬಂದಾಗ, ಆಕೆಯ ಮೂಲಕ ತಮ್ಮ ಸ್ನೇಹಿತರಿಗೆ ಪತ್ರವೊಂದನ್ನು ಕಳಿಸುವ ಯೋಜನೆಯನ್ನು ಜಯಪ್ರಕಾಶ್ ಹಾಕಿಕೊಂಡರು. ಅದರಂತೆ, ಪ್ರಭಾವತಿ ದೇವಿ ತಮ್ಮನ್ನು ಭೇಟಿ ಮಾಡಲು ಮತ್ತೊಮ್ಮೆ ಅವಕಾಶ ಕೊಡಬೇಕೆಂದು ಅವರು ಶಿಬಿರದ ಅಧಿಕಾರಿಗಳನ್ನು ಕೋರಿದರು. ಅವರ ಕೋರಿಕೆಗೆ ಮನ್ನಣೆ ದೊರೆಯಿತಾದರೂ, ಇಷ್ಟು ಬೇಗ ಮತ್ತೊಂದು ಭೇಟಿಯ ಅವಶ್ಯಕತೆಯ ಬಗ್ಗೆ ಅಧಿಕಾರಿಗಳಿಗೆ ಸಂಶಯ ಬಂದಿತು. ದಂಪತಿಗಳ ಭೇಟಿಯ ಸಮಯದಲ್ಲಿ ತೀವ್ರ ಎಚ್ಚರದಿಂದಿರಬೇಕೆಂದು ಅಧಿಕಾರಿಗಳು ಕಾವಲು ಸಿಬ್ಬಂದಿಯವರಿಗೆ ಸೂಚಿಸಿದರು. ಭೇಟಿ ಏರ್ಪಾಡಾಯಿತು. ಮಾತಿನ ಮಧ್ಯೆ ಜಯಪ್ರಕಾಶರು ತಮ್ಮ ಪಾದ ಹಾಗೂ ಚಪ್ಪಲಿ ನಡುವೆ ಇಟ್ಟುಕೊಂಡಿದ್ದ ಪತ್ರವನ್ನು ಮೆಲ್ಲಗೆ ತೆಗೆದು ಪತ್ನಿಯ ಸೀರೆಯ ಗಂಟಿಗೆ ತುರುಕಿದರು. ಆದರೆ ಈ ಅನಿರೀಕ್ಷಿತದಿಂದ ಪ್ರಭಾವತಿ ಗಾಬರಿಯಾದರು. ಪತ್ರ ಸರಸರ ಶಬ್ದ ಮಾಡಿ ಕೆಳಕ್ಕೆ ಬಿತ್ತು. ತಕ್ಷಣ ಕಾವಲು ಸಿಬ್ಬಂದಿ ಅವರೆಡೆ ಧಾವಿಸಿ ಪತ್ರವನ್ನು ವಶಪಡಿಸಿಕೊಂಡಿತು. ಜಯಪ್ರಕಾಶರನ್ನು ಸೆರೆಗೆ ದೂಡಿ ಪ್ರಭಾವತಿಯವರನ್ನು ಅಧಿಕಾರಿಯ ಮುಂದೆ ಹಾಜರುಪಡಿಸಲಾಯಿತು.

ಎರಡು ದಿನಗಳ ಕಾಲ ಪ್ರಭಾವತಿಯವರನ್ನು ವಿಚಾರಣೆಗಾಗಿ ಕಾಯಿಸಿ, ನಂತರ ತೀವ್ರ ಎಚ್ಚರಿಕೆಯೊಡನೆ ಬಿಡುಗಡೆ ಮಾಡಿದರು. ಜಯಪ್ರಕಾಶರು ಅಂಚೆ ಮೂಲಕ ಪತ್ರ ಬರೆಯುವುದಾಗಲೀ ಅಥವಾ ಪಡೆಯುವುದಾಗಲೀ ರದ್ದಾಯಿತು ಮತ್ತು ದಂಪತಿಗಳ ಭೇಟಿಗೆ ಇನ್ನು ಮುಂದೆ ಅನುಮತಿ ನೀಡದಿರಲು ನಿರ್ಧರಿಸಲಾಯಿತು. ವಶಪಡಿಸಿಕೊಳ್ಳಲಾದ ಪತ್ರವನ್ನು ಬ್ರಿಟಿಷ್ ಸರಕಾರವು ದುರುಪಯೋಗಪಡಿಸಿಕೊಂಡಿತು. ಜಯಪ್ರಕಾಶರು ಆ ಪತ್ರದಲ್ಲಿ ಗಾಂಧಿ ಮಾರ್ಗವನ್ನು ದೊಡ್ಡ ತಕ್ಕು ಎಂದು ಕರೆದಿರುವುದೆಂದೂ; ಕಮ್ಯೂನಿಸ್ಟರನ್ನೂ ತಿರಸ್ಕರಿಸಿ, ಭಯೋತ್ಪಾದಕ ಸಂಸ್ಥೆಗಳೆಂದು ಘೋಷಿಸಲ್ಪಟ್ಟಿದ್ದ ಕ್ರಾಂತಿಕಾರಿ ಸಮಾಜವಾದಿ ಪಕ್ಷ ಹಾಗೂ ಬಹಿಷ್ಕೃತ ಹಿಂದೂಸ್ತಾನ್ ರಿಪಬ್ಲಿಕನ್ ಸಮಾಜವಾದಿ ಸಂಘದ ಬೆಂಬಲ ಕೋರಿದ್ದಾರೆಂದು ಪ್ರಕಟಿಸಿತು. ಅಲ್ಲದೆ, ಬ್ರಿಟಿಷ್ ಸರ್ಕಾರವನ್ನು ಪದಚ್ಯುತಗೊಳಿಸಲು ಹಿಂಸಾಮಾರ್ಗವನ್ನು ಅನುಸರಿಸಬೇಕೆಂದು ಕರೆ ಕೊಟ್ಟಿರುವರೆಂದೂ ಸರ್ಕಾರ ಪತ್ರಿಕೆಗಳಿಗೆ ಹೇಳಿಕೆ ನೀಡಿತು. ಜಯಪ್ರಕಾಶರ ಪತ್ರದ ಕೆಲವು ಸಾಲುಗಳನ್ನು ಮಾತ್ರ ಉಲ್ಲೇಖಿಸಿ ಮತ್ತು ಕೆಲವನ್ನು ವಿಕೃತಗೊಳಿಸುವ ಮೂಲಕ ಸರ್ಕಾರ ಈ ಹೇಳಿಕೆಯನ್ನು ಸಿದ್ಧಪಡಿಸಿದೆ ಎಂದು ಪ್ರಮುಖ ಪತ್ರಿಕೆಗಳು ಈ ಹೇಳಿಕೆಯನ್ನು ಪ್ರಕಟಿಸಲು ನಿರಾಕರಿಸಿದವು. ಕಾಂಗ್ರೆಸ್ಸಿಗರ ಕಣ್ಣಿಗೆ ಜಯಪ್ರಕಾಶರು ಅಪ್ರಾಮಾಣಿಕರಂತೆ ಮತ್ತು ವಿಶ್ವಾಸದ್ರೋಹಿಯಂತೆ ಕಾಣುವಂತೆ ಮಾಡುವುದೇ ಸರ್ಕಾರದ ಉದ್ದೇಶವಾಗಿತ್ತು.

ಸರ್ಕಾರದ ಈ ಹೇಳಿಕೆ ಕಂಡು ಪ್ರಭಾವತಿಯವರು ಸಿಟ್ಟಾದರು. ಎಲ್ಲವೂ ಅಪಪ್ರಚಾರವೆಂದು ಗಾಂಧೀಜಿಗೆ ತಿಳಿಸಿದರು. ಅಲ್ಲದೆ ಜಯಪ್ರಕಾಶರನ್ನು ಬಲ್ಲ ಯಾವ ಗೆಳೆಯರೂ ಸರ್ಕಾರದ ಹೇಳಿಕೆಯನ್ನು ನಂಬಲು ನಿರಾಕರಿಸಿದರು. ಈ ಬಗ್ಗೆ ಗೊಂದಲ ಬೇಡವೆಂದು ಗಾಂಧೀಜಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹೇಳಿಕೆಯೊಂದನ್ನು ಹೊರಡಿಸಿ, ಜಯಪ್ರಕಾಶರು ಸಲಹೆ ಮಾಡಿದ್ದ ಹಿಂಸಾಮಾರ್ಗವನ್ನು 'ಕ್ರಮಬದ್ಧ' ಎಂದು ಸಮರ್ಥಿಸಿದರು. ಆತ ಅಮೆರಿಕಾದಲ್ಲಿ ಹಲವಾರು ವರ್ಷಗಳ ತರಬೇತಿ ಪಡೆದು, ಸ್ವಾತಂತ್ರ್ಯ ಸಾಧನೆಗೆ ಪಾಶ್ಚಿಮಾತ್ಯ ದೇಶಗಳು ಅನುಸರಿಸುವ ಮಾರ್ಗಗಳ ಅಧ್ಯಯನ ಮಾಡಿದಾತ. ಆದ್ದರಿಂದ ತಾನು ತೊಡಗಿರುವ ಹೋರಾಟದಲ್ಲಿ ತಾನು ಅಧ್ಯಯನ ಮಾಡಿರುವ ಮಾರ್ಗವನ್ನು ಬಳಸಿ ವೀರರೆನಿಸಿಕೊಳ್ಳುವುದು ಸಹಜವೇ ಆಗಿದೆ ಎಂದು ಅವರು ವಿವರಣೆ ನೀಡಿದರು. ಈ ಅರ್ಥದಲ್ಲಿ ರಾಬರ್ಟ್ ಕ್ಲೈವ್ ಮತ್ತು ವಾರೆನ್ ಹೇಸ್ಟಿಂಗ್ಸ್ ಕೂಡಾ ವೀರರೇ ಅಲ್ಲವೇ? ಎಂದು ಬ್ರಿಟಿಷ್ ಸರ್ಕಾರವನ್ನು ಪ್ರಶ್ನಿಸಿದರು!

ಉಪವಾಸ ಸತ್ಯಾಗ್ರಹ

ಈ ಮಧ್ಯೆ ದೇವಲಿ ಶಿಬಿರದಲ್ಲಿ ಬಂದಿಗಳು ಅಲ್ಲಿನ ಭಯಾನಕ ಸ್ಥಿತಿಯ ವಿರುದ್ಧ ಮುಷ್ಕರ ಹೂಡುವ ಬೆದರಿಕೆ ಹಾಕಿದ್ದರು. ಬಂದಿಗಳ ವರ್ಗೀಕರಣ ರದ್ದಾಗಬೇಕು, ಬಂದಿಗಳ ಕುಟುಂಬಗಳಿಗೆ ಪರಿಹಾರ ಭತ್ಯೆ ನೀಡಬೇಕು, ಯೋಗ್ಯವಾದ ಮತ್ತು ಹೆಚ್ಚಾದ ಆಹಾರ ಒದಗಿಸಬೇಕು, ಮೂವ್ವರು ಬಂದಿಗಳು ಒಟ್ಟಿಗಿರಲು ಅವಕಾಶ ಕೊಡಬೇಕು ಮುಂತಾದ ಬೇಡಿಕೆಗಳನ್ನು ಗೃಹಖಾತೆಯು ಕೊನೆಗೂ ತಿರಸ್ಕರಿಸಿದಾಗ, ಅವರು ಉಪವಾಸ ಮುಷ್ಕರ ಹೂಡದೆ ಗತ್ಯಂತರವಿಲ್ಲವಾಯಿತು. ಹತ್ತು ದಿನಗಳ ನಿರಂತರ ಉಪವಾಸ ನಡೆಸಿದ ಜಯಪ್ರಕಾಶ್, ಸೆರೆಮನೆಯ ಸ್ಥಿತಿಗತಿಗಳನ್ನು ಕಂಡು ವರದಿ ಮಾಡಲು ರಾಜೇಂದ್ರ ಪ್ರಸಾದ್ ಅಥವಾ ಮತ್ತೊಬ್ಬರನ್ನು ಕಳಿಸುವಂತೆ ಗಾಂಧೀಜಿಗೆ ಮನವಿ ಮಾಡಿದರು. ಉಪವಾಸದ ಹದಿನಾರನೆಯ ದಿನ ಓರ್ವ ಬಂದಿ ಸಾವನ್ನಪ್ಪುವ ಹಂತ ತಲುಪಿದಾಗ ಸರ್ಕಾರ ಎಚ್ಚೆತ್ತುಗೊಂಡಿತು. ಬಲಾತ್ಕಾರದಿಂದ ಆಹಾರ ಕೊಡುವ ಪ್ರಯತ್ನ ಮಾಡಿತು. ಬಂದಿಗಳನ್ನು ಅವರವರ ರಾಜ್ಯಗಳ ಸೆರೆಮನೆಗಳಿಗೆ ಕಳಿಸುವ ಭರವಸೆ ನೀಡಿತು. ಈ ಭರವಸೆಗಳನ್ನು ಒಪ್ಪಿಕೊಂಡ ಕಮ್ಯೂನಿಸ್ಟ್ ಬಂದಿಗಳು ಉಪವಾಸ ನಿಲ್ಲಿಸಿ ಸರ್ಕಾರದ ಕೃಪೆಗೆ ಪಾತ್ರರಾದರು. ಆದರೆ ಜಯಪ್ರಕಾಶ್ ಈ ಭರವಸೆಗಳೆಲ್ಲಾ ಠಕ್ಕು ಎಂದು ತಳ್ಳಿಹಾಕಿ ಉಪವಾಸವನ್ನು ಮುಂದುವರಿಸಿದರು. ಅಧಿಕಾರಿಗಳು ಅವರನ್ನು ಸಣ್ಣ ಕೊಠಡಿಯೊಂದರಲ್ಲಿ ಕೂಡಿ ಹಾಕಿದರು.

ಆದರೆ ಗಾಂಧೀಜಿ ಜಯಪ್ರಕಾಶರ ಆರೋಗ್ಯದ ಬಗ್ಗೆ ಸರ್ಕಾರದ ಮೇಲೆ ಒಂದೇ ಸಮನೆ ಒತ್ತಡ ಹೇರುತ್ತಿದ್ದರು. ಅಲ್ಲದೆ ಜಯಪ್ರಕಾಶರ ಮೆದುವಾಗದ ಹಠಮಾರಿತನವು ಸರ್ಕಾರ, ಗಾಂಧೀಜಿಯವರ ಕಾರ್ಯದರ್ಶಿ ಮಹದೇವ ದೇಸಾಯಿ ಅವರು ಜಯಪ್ರಕಾಶರನ್ನು ಭೇಟಿ ಮಾಡಲು ಅವಕಾಶ ನೀಡುವಂತೆ ಮಾಡಿತು. ಆ ಹೊತ್ತಿಗೆ ಅವರದೊಂದು

ಬೇಡಿಕೆಯಂತೆ, ಅವರನ್ನು ಬಿಹಾರದ ಸೆರೆಮನೆಗೆ ವರ್ಗಾಯಿಸಲು ಸರ್ಕಾರ ಒಪ್ಪಿಕೊಂಡಿತ್ತು. ಮಹದೇವ ದೇಸಾಯಿ ಅವರು ಬಂದು ಜಯಪ್ರಕಾಶರ ಅಭಿಪ್ರಾಯಗಳನ್ನು ಆಲಿಸಿದರು. ಅಲ್ಲದೆ ಈ ಮಧ್ಯೆ ಗಾಂಧೀಜಿ ಕೂಡಾ, ಉಪವಾಸವನ್ನು ನಿಲ್ಲಿಸುವಂತೆ ಜಯಪ್ರಕಾಶರನ್ನು ಕೋರಿಕೊಂಡಿದ್ದರು. ಉಪವಾಸ ನಿಲ್ಲಿಸುವಂತೆ ಜಯಪ್ರಕಾಶರ ಮನವೊಲಿಸುವಲ್ಲಿ ಮಹದೇವ ದೇಸಾಯಿ ಯಶಸ್ವಿಯಾದರು. ಮೂವತ್ತೊಂದು ದಿನಗಳ ಜಯಪ್ರಕಾಶರ ದೀರ್ಘ ಉಪವಾಸ ಕೊನೆಗೊಂಡಿತ್ತು. ಅವರನ್ನು ಕೆಲವೇ ದಿನಗಳಲ್ಲಿ ಬಿಹಾರದ ದಕ್ಷಿಣ ಭಾಗದಲ್ಲಿನ ದಟ್ಟ ಅಡವಿ ಮತ್ತು ಬೆಟ್ಟಗುಡ್ಡಗಳ ಪ್ರದೇಶದಲ್ಲಿರುವ ಹಜಾರಿಬಾಗ್ ಸೆರೆಮನೆಗೆ ವರ್ಗಾಯಿಸಲಾಯಿತು.

ಮಾಡಿ ಇಲ್ಲವೇ ಮಡಿಯಿರಿ

ಈ ಹೊತ್ತಿಗೆ ಮಹಾಯುದ್ಧ ಭಾರತದ ಜನ ಜೀವನದ ಮೇಲೂ ನೇರ ಪ್ರಭಾವ ಬೀರತೊಡಗಿತ್ತು. ಜಪಾನ್ ಬರ್ಮಾದ ಮೇಲೆ ದಾಳಿ ನಡೆಸಿತ್ತು. ಯುದ್ಧ ಭಾರತದ ಗಡಿಯನ್ನು ಮುಟ್ಟಿತ್ತು. ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಭಾರತೀಯ ಪ್ರಜೆಗಳ ಸಹಕಾರ ಅತ್ಯಗತ್ಯವಾಗಿತ್ತು. ಯುದ್ಧ ಮುಗಿದ ನಂತರ ದೇಶಕ್ಕಾಗಿ ಹೊಸ ರಾಜ್ಯಾಂಗ ರಚನಾಸಭೆಯನ್ನು ರಚಿಸುವ ಉದ್ದೇಶಕ್ಕಾಗಿ ಸರ್ ಸ್ಟಾಫರ್ಡ್ ಕ್ರಿಪ್ಸ್ ಅವರನ್ನು ಕಳಿಸುವ ಆಶ್ವಾಸನೆಯೂ ಲಂಡನ್‌ನಿಂದ ಬಂದಿತ್ತು. ಅಲ್ಲದೆ ಅಮೆರಿಕಾದ ಅಧ್ಯಕ್ಷ ರೂಸ್‌ವೆಲ್ಟ್ ಮತ್ತು 'ಚೀನಾ'ದ ಜನರಲ್ ಚಿಯಾಂಗ್ ಕೈಷೇಕ್ ಅವರೂ, ಭಾರತದ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ಮೇಲೆ ಒತ್ತಡ ಹೇರತೊಡಗಿದ್ದರು. ಗಾಂಧೀಜಿ ಪೂರ್ಣ ಪ್ರಮಾಣದ ಸ್ವಾತಂತ್ರ್ಯದ ಹೊರತಾಗಿ ಮತ್ತಾವುದನ್ನೂ ಒಪ್ಪಲು ಸಿದ್ಧರಿರಲಿಲ್ಲ. ಬ್ರಿಟಿಷ್ ಸರ್ಕಾರ ಪೂರ್ಣ ಪ್ರಮಾಣದ ಸ್ವಾತಂತ್ರ್ಯ ನೀಡಲು ಸಿದ್ಧವಿರಲಿಲ್ಲ.

ಗಾಂಧೀಜಿ, ಬ್ರಿಟಿಷ್ ಸರ್ಕಾರಕ್ಕೆ ಕೊನೆಯ ಎಚ್ಚರಿಕೆ ನೀಡಿದರು. ಅವರು ಅಲಹಾಬಾದ್‌ನಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಕರಡು ನಿರ್ಣಯವೊಂದನ್ನು ಕಳುಹಿಸಿ, ಪೂರ್ಣ ಸ್ವಾತಂತ್ರ್ಯವನ್ನು ನಿರಾಕರಿಸಿದಲ್ಲಿ ಮತ್ತೆ ಅಸಹಕಾರ ಸತ್ಯಾಗ್ರಹ ಆರಂಭಿಸುವ ಕರೆ ಕೊಡುವ ಸೂಚನೆ ನೀಡಿದರು. ಕೊನೆಗೆ ೧೯೪೨ರ ಆಗಸ್ಟ್ ೭ ರಂದು ಮುಂಬೈನಲ್ಲಿ ಆರಂಭವಾದ ಕಾಂಗ್ರೆಸ್ ಕಾರ್ಯಕಾರಿ ಸಮಾವೇಶದಲ್ಲಿ ಅದನ್ನು ಪ್ರಕಟಿಸಿ "ಇದು ಬಹಿರಂಗ ಬಂಡಾಯವಾಗಿರುತ್ತದೆ" ಎಂದು ಘೋಷಿಸಿದರು. ನಂತರ ನಡೆದ ಬಹಿರಂಗ ಸಭೆಯಲ್ಲಿ "ದೇಶದ ಬಿಡುಗಡೆಗಾಗಿ ಕೊನೆಯ ಹೋರಾಟ ಕೈಗೊಳ್ಳೋಣ" ಎಂದು ಕರೆಕೊಟ್ಟ ಗಾಂಧೀಜಿ, "ಮಾಡಿ ಇಲ್ಲವೇ ಮಡಿಯಿರಿ" ಎಂಬ ಮೂರು ಶಬ್ದಗಳ ಮಂತ್ರಾದೇಶ ನೀಡಿದರು.

ಗಾಂಧೀಜಿಯ ಬಂಧನ

ಈ ಕರೆ ಕೊಟ್ಟ ಮಾರನೆಯ ಬೆಳಿಗ್ಗೆಯೆ ಪೊಲೀಸರು ಗಾಂಧೀಜಿ ತಂಗಿದ್ದ ಮನೆಯ ಬಾಗಿಲು ತಟ್ಟಿದರು. ಗಾಂಧೀಜಿ ಮತ್ತು ಅವರೊಡನಿದ್ದ ನಾಲ್ವರನ್ನೂ ದಸ್ತಗಿರಿ ಮಾಡಿ

ಯೆರವಾಡ ಸೆರೆಮನೆಗೆ ಕಳಿಸಲಾಯಿತು. ಪ್ರಭಾವತಿಯವರು ಪೊಲೀಸರ ಕಣ್ಣು ತಪ್ಪಿಸಿ ಪಾಟ್ನಾಕ್ಕೆ ಪ್ರಯಾಣ ಮಾಡಿದರು. ಆದರೆ ಅಲ್ಲಿ ಪೊಲೀಸರು ಅವರಿಗಾಗಿಯೇ ಕಾಯುತ್ತಿದ್ದರು!

ಗಾಂಧೀಜಿಯ ಬಂಧನದ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. "ಮಾಡಿ ಇಲ್ಲವೇ ಮಡಿಯಿರಿ" ಎಂಬ ಗಾಂಧೀಜಿಯ ನಿರ್ಣಾಯಕ ಘೋಷಣೆಯನ್ನು ಕೇಳಿ ರೋಮಾಂಚನಗೊಂಡಿದ್ದ ಜಯಪ್ರಕಾಶ್, ಬಂಧನದ ಸುದ್ದಿ ತಿಳಿದು ರೊಚ್ಚಿಗೆದ್ದರು. ಕಾಂಗ್ರೆಸ್ ಪಕ್ಷವನ್ನು ಮೂರು ವರ್ಷಗಳ ಕಾಲ ಬಹಿಷ್ಕರಿಸಿ, ಅದರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸರ್ಕಾರದ ನಿರ್ಧಾರ ಪ್ರಕಟವಾದಾಗ ಅವರು ಬೇರೆಯೇ ದಿಕ್ಕಿನಲ್ಲಿ ಯೋಚನೆ ಮಾಡುವಂತೆ ಮಾಡಿತು. ಇಂತಹ ಸಮಯದಲ್ಲಿ ತಾವೇನು ಮಾಡಬಹುದೆಂದು ಅವರು ತಮ್ಮ ಜೊತೆಗಾರರ ಜೊತೆ ಗುಪ್ತವಾಗಿ ಸಮಾಲೋಚನೆಗೆ ತೊಡಗಿದರು. ಹೊರಗಿನಿಂದ ಬರುತ್ತಿದ್ದ ಸುದ್ದಿಗಳು, ಜಯಪ್ರಕಾಶ್ ಸೆರೆಮನೆಯ ನಾಲ್ಕು ಗೋಡೆಗಳ ನಡುವೆ ಅಶಾಂತರಾಗಿ ಶತಪಥ ಸುತ್ತುವಂತೆ ಮಾಡುತ್ತಿದ್ದವು: ಗಾಂಧೀಜಿಯ ಬಂಧನದ ವಿರುದ್ಧ ದೇಶಾದ್ಯಂತ ಭಾರೀ ಪ್ರತಿಭಟನಾ ಪ್ರದರ್ಶನಗಳು ನಡೆದಿದ್ದವು. "ಇದು ಬಹಿರಂಗ ಬಂಡಾಯವಾಗಿರುತ್ತದೆ" ಎಂಬ ಗಾಂಧೀಜಿಯ ಮಾತನ್ನು ಮಿತಿಮೀರಿ ಅರ್ಥಮಾಡಿಕೊಂಡ ಜನ, ಸರ್ಕಾರ ವಿರೋಧಿ ಬುಡಮೇಲು ಕೃತ್ಯಗಳಲ್ಲಿ ತೊಡಗಿದರು. ಲಾಠೀ ಪ್ರಹಾರ ಮತ್ತು ಗೋಲೀಬಾರ್ ಸಾಮಾನ್ಯ ಘಟನೆಗಳಾದವು. ಎರಡೇ ದಿನಗಳಲ್ಲಿ ೧೫೦ ಜನರು ಪೊಲೀಸರ ಗುಂಡಿಗೆ ಆಹುತಿಯಾದರು. ರೈಲ್ವೇ ಹಳಿಗಳನ್ನು ಕೀಳುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ಅಂಚೆಕಚೇರಿ ಮತ್ತು ರೈಲ್ವೇ ನಿಲ್ದಾಣಗಳ ಮೇಲೆ ದಾಳಿ ನಡೆಸುವುದು ಮುಂತಾದ ಹಿಂಸಾಕೃತ್ಯಗಳು ದಿನ ನಿತ್ಯದ ಸಂಗತಿಗಳಾದವು.

ಇಡೀ ದೇಶ "ಭಾರತವನ್ನು ಬಿಟ್ಟು ತೊಲಗಿ" ಎಂದು ಬ್ರಿಟಿಷ್ ಸರ್ಕಾರಕ್ಕೆ ಆಜ್ಞಾಪಿಸಿತ್ತು. ಸರ್ಕಾರ, ಕಾಂಗ್ರೆಸಿಗರನ್ನು ಸಿಕ್ಕಿದೆಡೆ ಬೇಟೆಯಾಡತೊಡಗಿತ್ತು. ಭಾರತದ ಸ್ವಾತಂತ್ರ್ಯ ಹೋರಾಟವನ್ನು ನಿರ್ಣಾಯಕ ಘಟ್ಟಕ್ಕೆ ಮುಟ್ಟಿಸಿದ ಈ ಸ್ಮರಣೀಯ ಆಂದೋಲನದಲ್ಲಿ ಒಟ್ಟು ಒಂದು ಸಾವಿರಕ್ಕೂ ಹೆಚ್ಚು ಜನ, ಪೊಲೀಸರ ಬಂದೂಕಗಳಿಗೆ ತುತ್ತಾಗಿ ಅಸು ನೀಗಿದರು. ಮೂರು ಸಾವಿರಕ್ಕೂ ಹೆಚ್ಚು ಜನರನ್ನು ಸೆರೆಮನೆಗೆ ತಳ್ಳಲಾಯಿತು. ಇಂತಹ ಸಂದರ್ಭದಲ್ಲಿ ನಿಸ್ಸಹಾಯಕರಾಗಿ ಸೆರೆಮನೆಯಲ್ಲಿ ಕೂಡುವುದು ನಾಚಿಕೆಗೇಡಿನ ಸಂಗತಿ ಎನಿಸಿತು ಜಯಪ್ರಕಾಶರಿಗೆ. ಜನ ಸಂಪೂರ್ಣವಾಗಿ ಧೃತಿಗೆಡುವ ಮುನ್ನವೇ ಅವರನ್ನು ನಿರಂತರವಾಗಿ ಉದ್ದೀಪಿಸಿಡುವ ಕರ್ತವ್ಯ ತಮ್ಮದಾಗಿದೆ ಎಂದವರು ನಿರ್ಧರಿಸಿದರು. ಆದಷ್ಟು ಬೇಗ ಸೆರೆಮನೆಯಿಂದ ಪಾರಾಗುವ ಸಲಹೆಯನ್ನು ಅವರು ತಮ್ಮ ನಂಬುಗೆಯ ಸ್ನೇಹಿತರ ಮುಂದೆ ಮಂಡಿಸಿದರು. ಎ.ಪಿ. ಸಿನ್ಹಾ ಎಂಬ ಅತಿ ನಿಷ್ಠ ಗಾಂಧೀವಾದಿಯೊಬ್ಬರನ್ನು ಉಳಿದು ಮಿಕ್ಕವರೆಲ್ಲರೂ ಜಯಪ್ರಕಾಶರ ಸಲಹೆಯನ್ನು ಅನುಮೋದಿಸಿದರು. ಆದರೆ ಸೆರೆಮನೆಯಿಂದ ಪಾರಾಗಬಯಸುವವರಿಗೆ ತಮ್ಮೆಲ್ಲಾ ನೆರವು ನೀಡುವುದಾಗಿ ಸಿನ್ಹಾ ಭರವಸೆ ನೀಡಿದರು. ಸಿನ್ಹಾ ಎಂದಿನಿಂಲೂ ಹಿಂಸಾತ್ಮಕವಾದ ಬುಡಮೇಲು ಕೃತ್ಯಗಳನ್ನು ವಿರೋಧಿಸುತ್ತಿದ್ದರು.

ಸೆರೆಮನೆಯಿಂದ ಪಲಾಯನ

ಹತ್ತು ಜನ ಮಿತ್ರರು ಸೇರಿ, ಸೆರೆಮನೆಯ ಹೊರಗೋಡೆಯನ್ನು ಹಾರಿ ಪಲಾಯನ ಮಾಡುವ ಯೋಜನೆಯನ್ನು ರೂಪಿಸಿದರು. ೧೯೪೨ರ ನವೆಂಬರ್ ೮ ರಂದು, ಅವರು ತಮ್ಮ ಈ ಕಾರ್ಯಾಚರಣೆಯನ್ನು ಕೈಗೊಳ್ಳಬೇಕೆಂದು ನಿರ್ಧರಿಸಿದರು. ಅಂದು ದೀಪಾವಳಿ ಹಬ್ಬ. ಸೆರೆಮನೆಯ ಅಂಗಳದ ತುಂಬಾ ಹಬ್ಬದ ಸಂಭ್ರಮ. ಕಾವಲು ಸಿಬ್ಬಂದಿಗೂ ಕೂಡಾ ಅಂದು ಏನೋ ಉಲ್ಲಾಸ. ಅವರ ಈ ಉಲ್ಲಾಸವನ್ನು 'ಸದುಪಯೋಗ'ಪಡಿಸಿಕೊಳ್ಳಲು ಈ ಸ್ನೇಹಿತರ ತಂಡ ನಿರ್ಧರಿಸಿತು. ಹತ್ತು ಜನರಲ್ಲಿ ನಾಲ್ವರು, ಕಾವಲು ಸಿಬ್ಬಂದಿಗೆ ಸ್ವಾರಸ್ಯಕರ ಕಥೆಗಳನ್ನು ಹೇಳುತ್ತಾ ಅವರಿಗೆ ಆಗಾಗ್ಗೆ ಸಿಗರೇಟ್‌ಗಳನ್ನು ಕೊಡುತ್ತಾ ಸೆರೆ ಗೂಡುಗಳ ಕಡೆ ಹೆಚ್ಚು ಗಮನ ಕೊಡದಂತೆ ಅವರನ್ನು ಹಬ್ಬದ ಉಲ್ಲಾಸಾತಿರೇಕಗಳಲ್ಲಿ ತಲ್ಲೀನಗೊಳಿಸುವ ಜವಾಬ್ದಾರಿ ವಹಿಸಿಕೊಂಡರು. ಪಲಾಯನ ಮಾಡಲು ಸಿದ್ಧರಿದ್ದ ಜಯಪ್ರಕಾಶ್ ನಾರಾಯಣ, ಶಾಲಿಗ್ರಾಮ ಸಿಂಗ್, ಸೂರಜ್ ನಾರಾಯಣ್ ಸಿಂಗ್, ಜೋಗೇಂದ್ರ ಶುಕ್ಲ, ರಮಾನಂದನ ಮಿಶ್ರ ಮತ್ತು ಗುಲಾಬ್ ಚಂದ್ರಗುಪ್ತ—ಈ ಆರು ಜನರೂ ತಮ್ಮ ಹಾಸಿಗೆಗಳ ಸುತ್ತ ಸೊಳ್ಳೆಪರದೆಗಳನ್ನು ಕಟ್ಟಿ, ಅವುಗಳೊಳಗೆ ಸಣ್ಣಗೆ ಉರಿಯುವ ನಂದಾದೀಪಗಳನ್ನಿರಿಸಿದರು. ದೂರದಿಂದ ನೋಡಿದವರಿಗೆ ಎಲ್ಲರೂ ಮಲಗಿರುವಂತೆ ಕಾಣುವ ದೃಶ್ಯವನ್ನು ಅಲ್ಲಿ ನಿರ್ಮಿಸಲಾಗಿತ್ತು. ಕಾವಲುಗಾರರನ್ನು ಕಾರ್ಯವಿಮಗ್ನ ಗೊಳಿಸುವ ಜವಾಬ್ದಾರಿ ಹೊತ್ತಿದ್ದ ನಾಲ್ವರು ಆಗಲೇ ತಮ್ಮ ಕಾರ್ಯಾಚರಣೆಯನ್ನು ಆರಂಭಿಸಿದ್ದರು. ಕಾವಲುಗಾರರನ್ನು ಒಟ್ಟಿಗೆ ಕೂಡಿಸಿಕೊಂಡು ತಮ್ಮ ಕೆಟ್ಟ ಗಂಟಲುಗಳಲ್ಲಿ "ದೀಪಾವಳಿ ಬಂದಿದೆಯೇ ಪ್ರಿಯೇ..." ಮುಂತಾದ ಪ್ರೇಮಗೀತೆಗಳನ್ನು ಹಾಡುತ್ತಾ, ಕೆಲವರು ವಕ್ರ ವಕ್ರವಾಗಿ ನೃತ್ಯ ಮಾಡುತ್ತಾ ಕಾವಲುಗಾರರನ್ನು ನಗೆಗಡಲಿನಲ್ಲಿ ಮುಳುಗಿಸಿದ್ದರು.

ರಾತ್ರಿ ಹತ್ತು ಗಂಟೆಗೆ ಸರಿಯಾಗಿ ಆರು ಜನರು ಕಳ್ಳ ಹೆಜ್ಜೆ ಇಡುತ್ತಾ ಸೆರೆಮನೆಯ ಹೊರಗೋಡೆಯ ಬಳಿ ತಲುಪಿದರು. ಮೆಲ್ಲಗೆ ಗೋಡೆಯ ಬದಿಗೆ ಮೇಜೊಂದನ್ನು ಹೊತ್ತು ತಂದು ಹಾಕಿದರು. ಯಾರ ನೆರವೂ ಇಲ್ಲದೆ ಗೋಡೆ ಹತ್ತುವಲ್ಲಿ ಸಾಕಷ್ಟು ನಿಪುಣರಾಗಿದ್ದ ಜೋಗೇಂದ್ರ ಶುಕ್ಲ, ಮೇಜಿನ ಮೇಲೆ ಬಗ್ಗಿ ನಿಂತರು. ಅವರ ಬೆನ್ನಿನ ಮೇಲೆ ಮತ್ತೊಬ್ಬರು ನಿಂತರು. ಎಲ್ಲರ ಧೋತಿಗಳನ್ನೂ ಬಿಚ್ಚಿ ಒಂದಕ್ಕೊಂದು ಗಂಟುಹಾಕಿ ಹಗ್ಗ ಮಾಡಿಕೊಳ್ಳಲಾಗಿತ್ತು. ಅದನ್ನು ಸೂರಜ್ ನಾರಾಯಣ್ ಸಿಂಗ್ ಅವರ ಬೆನ್ನಿಗೆ ಕಟ್ಟಲಾಯಿತು. ಸೂರಜ್, ಶುಕ್ಲರ ಬೆನ್ನಿನ ಮೇಲೆ ನಿಂತಿದ್ದ ಗೆಳೆಯನ ಹೆಗಲಿಗೆ ಹತ್ತಿ ಗೋಡೆಯ ತುದಿ ಸೇರಿದರು. ಧೋತಿಗಳ ಒಂದು ತುದಿಯನ್ನು ಕೆಳಗಿದ್ದ ಗೆಳೆಯರೊಬ್ಬರು ಹಿಡಿದಿದ್ದಂತೆ, ಸೂರಜ್ ಗೋಡೆಯಿಂದ ಹೊರಕ್ಕೆ ಧುಮುಕಿದರು. ನಂತರ ಒಬ್ಬರಾದ ಮೇಲೊಬ್ಬರು 'ಧೋತಿ ಹಗ್ಗ'ವನ್ನು ಬಳಸಿಕೊಂಡು ಗೋಡೆ ಹಾರಿದರು. ಎಲ್ಲವೂ ಕೆಲವೇ ನಿಮಿಷಗಳಲ್ಲಿ ಮುಗಿಯಿತಾದರೂ ಕೊನೆಯ ನಿಮಿಷದಲ್ಲಿ ಕಾವಲುಗಾರನೊಬ್ಬ ಆ ಕಡೆ ಬರುವ ಸೂಚನೆಗಳು ಕಂಡಾಗ, ಅವರ ಚಪ್ಪಲಿಗಳು, ಬಟ್ಟೆಬರೆ ಹಾಗೂ ಹಣದ ಗಂಟನ್ನು ಹೊರಕ್ಕೆ ಎಸೆಯಲು ಮತ್ತು ಮೇಜನ್ನು

ಮತ್ತೆ ಅದರ ಸ್ಥಳಕ್ಕೆ ವರ್ಗಾಯಿಸಲು ನಿಗದಿಯಾಗಿದ್ದ ಗೆಳೆಯರು ಗಾಬರಿಗೊಂಡರು. ಹೇಗೋ ಮೇಜನ್ನು ಅದರ ಸ್ಥಳಕ್ಕೆ ಎಳೆದು ಚಪ್ಪಲಿ, ಬಟ್ಟೆ ಹಾಗೂ ಹಣದ ಗಂಟುಗಳನ್ನು ಅವುಚಿಕೊಂಡು ಸೆರೆ ಗೂಡುಗಳ ಕಡೆ ಧಾವಿಸಿ ಕಾವಲುಗಾರನ ಕಣ್ ತಪ್ಪಿಸಿದರು. ಹಾಗೆಯೇ ಕಾವಲುಗಾರ ಬರುತ್ತಿರುವ ಬಗ್ಗೆ, ಹೊರಗೆ ಚಪ್ಪಲಿ, ಬಟ್ಟೆ ಹಾಗೂ ಹಣಕ್ಕಾಗಿ ಕಾಯುತ್ತಿದ್ದ ಗೆಳೆಯರಿಗೆ ಸೂಚನೆ ಕೊಟ್ಟರು. ಗೆಳೆಯನಿಂದ ಈ ಅನಿರೀಕ್ಷಿತ ಸೂಚನೆ ಬಂದೊಡನೆಯೇ ಆರು ಜನರೂ, ಧೋತಿಗಳನ್ನು ಬಿಡಿಸಿ ಸೊಂಟಕ್ಕೆ ಸುತ್ತಿಕೊಳ್ಳುತ್ತಾ ಅಲ್ಲಿಂದ ಪರಾರಿಯಾದರು.

ದಟ್ಟಡವಿಯಲ್ಲಿ ಪಯಣ

ಸ್ವಲ್ಪ ಸಮಯದಲ್ಲಿಯೇ ಅವರು ಹಜಾರಿಬಾಗ್-ಮೊಂಘೈರ್ ಮಲೆನಾಡಿನ ದಟ್ಟ ಅಡವಿಯೊಳಕ್ಕೆ ನುಸುಳಿಕೊಂಡಿದ್ದರು. ಆದರೆ ಎಲ್ಲರಿಗೂ, ಕಾವಲುಗಾರರು ಬೆನ್ನು ಹತ್ತಿರಬಹುದಾದ ಸಂದೇಹವಿತ್ತು. ಅವರು ಒಂದೇ ಸಮನೆ ಕತ್ತಲೆ ತುಂಬಿದ ಕಾಡಿನಲ್ಲಿ ಏಳು-ಬೀಳುಗಳನ್ನೂ ಲಕ್ಷಿಸದೆಯೇ ಓಡತೊಡಗಿದರು. ಆರು ತಾಸುಗಳ ಕಾಲ ಓಡಿದ ನಂತರ ಮುಂದೆ ಓಡಲಾಗದ ಸ್ಥಿತಿಯಲ್ಲಿ ಅವರು, ಮುಂಜಾನೆ ಸುಮಾರು ೪ ಗಂಟೆಯ ಹೊತ್ತಿಗೆ ಒಂದು ಪೊದೆಯ ಹಿಂದೆ ಸೇರಿದರು. ಕಾಲುಗಳು ಕಲ್ಲುಮುಳ್ಳುಗಳಿಂದ ತರಚಿಕೊಂಡು ರಕ್ತಸಿಕ್ತವಾಗಿದ್ದವು. ಯಾವುದನ್ನೂ ಲೆಕ್ಕಿಸದೆ ಅವರು ಪೊದೆಯ ಕೆಳಗೆ ಉರುಳಿಕೊಂಡರು.

ಇತ್ತ ಮಾರನೆಯ ದಿನ ಮುಂಜಾನೆಯವರೆಗೂ, ಆರುಮಂದಿ ಖೈದಿಗಳ ಪಲಾಯನದ ಬಗ್ಗೆ ಯಾರಿಗೂ ಗೊತ್ತಾಗಲಿಲ್ಲ. ಮುಂಜಾನೆ ಸೆರೆ ಕೊಠಡಿಗಳನ್ನು ಚೊಕ್ಕಟ ಮಾಡಲು ಬರುವ ಸಿಬ್ಬಂಧಿಗೂ ಈ ಪಲಾಯನದ ಸೂಚನೆ ದೊರಕದಂತೆ ಮುಖರ್ಜಿ ಎಂಬ ಗೆಳೆಯ ಮುಂಜಾಗರೂಕತೆ ವಹಿಸಿದ್ದರು. ಮಲಮೂತ್ರ ವಿಸರ್ಜನೆಗೆಂದು ಎಲ್ಲರಿಗೂ ಒಂದೊಂದು ಮಡಕೆಯನ್ನು ನಿಗದಿ ಮಾಡಲಾಗಿತ್ತು. ಮುಖ್ಯವಾಗಿ ಜಯಪ್ರಕಾಶರ ಬಗ್ಗೆ ಸಂದೇಹ ಬರದಂತೆ ಮಾಡಿದರೆ ಸಾಕಾದ್ದುದರಿಂದ ಮುಂಜಾನೆ ಎದ್ದ ಮುಖರ್ಜಿ, ತಮ್ಮ ಹಾಗೂ ಜಯಪ್ರಕಾಶರ ಮಡಕೆಗಳೆರಡಲ್ಲೂ ಮಲ ಮೂತ್ರ ವಿಸರ್ಜನೆ ಮಾಡಿ, ಭಂಗಿಗೂ ಕೂಡಾ ಯಾವುದೇ ಸಂದೇಹ ಬರದಂತೆ 'ವ್ಯವಸ್ಥೆ' ಮಾಡಿದ್ದರು! ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಜಯಪ್ರಕಾಶರಿಗೆ ಸಂಬಂಧಿಸಿದ ಆದೇಶವೊಂದು ಕೇಂದ್ರ ಸರ್ಕಾರದಿಂದ ಬಂದಿದ್ದು, ಆ ಬಗ್ಗೆ ವಿಚಾರಿಸಲು ಜಯಪ್ರಕಾಶರನ್ನು ಕರೆತರಬೇಕೆಂದು ಸೆರೆಮನೆಯ ಮೇಲ್ವಿಚಾರಣಾಧಿಕಾರಿ ಕಾವಲು ಸಿಬ್ಬಂದಿಗೆ ಸೂಚಿಸಿದರು. ಇದರೊಡನೆ ಕೆಲವೇ ನಿಮಿಷಗಳಲ್ಲಿ ಆರು ಮಂದಿ ಕೈದಿಗಳ ಪಲಾಯನ ಸುದ್ದಿ ಸೆರೆಮನೆಯ ತುಂಬಾ ಹರಡಿತು. ಅಧಿಕಾರಿ ವರ್ಗ ಈ ಅನಿರೀಕ್ಷಿತ ಘಟನೆಯಿಂದ ತಬ್ಬಿಬ್ಬಾಯಿತು. ದೂರವಾಣಿ ಕರೆಗಳು, ತಂತೀ ಸಂದೇಶಗಳು ಎಲ್ಲ ಕಡೆಗೂ ರವಾನೆಯಾದವು. ಇಡೀ ಮೊಂಘೈರ್ ಅರಣ್ಯದ ಸುತ್ತ ಕೆಲವೇ ತಾಸುಗಳಲ್ಲಿ ಪೊಲೀಸ್ ಕಾವಲನ್ನು ಏರ್ಪಡಿಸಲಾಯಿತು.

ಪೊದೆಯ ಕೆಳಗೆ ಮಲಗಿದ್ದ ಆರು ಜನರೂ ಬೆಳಗಾಗುವುದರಲ್ಲಿ ಎದ್ದು, ಮತ್ತೆ ಬಿರಬಿರನೆ ಪ್ರಯಾಣ ಆರಂಭಿಸಿದರು. ಅವರು ತಮ್ಮ ಪಾದಗಳ ಗಾಯಗಳಿಗೆ ತಮ್ಮ ಧೋತಿಗಳಿಂದ ಹರಿದ ತುಂಡುಗಳನ್ನು ಕಟ್ಟಿಕೊಂಡು ಮುನ್ನಡೆದರು. ರಮಾನಂದನ್ ಮಿಶ್ರ ಅವರ ಕಿಸೆಯಲ್ಲಿ ಮಡಚಿಕೊಂಡು ಹಳೆಯದಾಗಿ ಉಳಿದುಹೋಗಿದ್ದ ನೂರು ರೂಪಾಯಿಗಳ ನೋಟೊಂದನ್ನು ಬಿಟ್ಟರೆ, ಅವರ ಮುಂದಿನ ಕಾರ್ಯಕ್ರಮಕ್ಕೆ ನೆರವಾಗುವಂಹ ಮತ್ತಾವ ವಸ್ತುವು ಅವರ ಬಳಿ ಇರಲಿಲ್ಲ. ಆದರೆ ಆ ಗಿರಿ ಪ್ರದೇಶದಲ್ಲಿ ನೂರು ರೂಪಾಯಿಯನ್ನಿಟ್ಟು ಕೊಂಡು ಏನು ಮಾಡುವುದು?

ಬಂಡೆಕಲ್ಲುಗಳ ನಡುವೆ ಮಾವಿನಮರದ ನೆರಳಿನಲ್ಲಿದ್ದ ಬಿಸಿ ನೀರಿನ ಊಟೆಯೊಂದು ಅವರಿಗೆ ಎದುರಾದಾಗ ಅವರ ಪಾಲಿಗೆ ಸ್ವರ್ಗವೇ ಭೂಮಿಗಿಳಿದಿತ್ತು. ಅವರು ಅಲ್ಲಿ ಮನಸಾರೆ ಸ್ನಾನ ಮಾಡಿ, ಮಾವಿನಮರದ ಕೆಳಗೆ ಉರುಳಿಕೊಂಡರು. ಆಯಾಸದೊಂದಿಗೆ ಹಸಿವೂ ಸೇರಿಕೊಂಡಾಗ ಅವರು, ಮತ್ತೆ ತಮ್ಮೆಲ್ಲಾ ಬಟ್ಟೆಗಳನ್ನೂ ಶೋಧಿಸಿದರು. ಅಂತೂ ಕೊನೆಗೆ ಅವರಲ್ಲೊಬ್ಬರ ಅಂಗಿಯಿಂದ ನಾಲ್ಕಾಣೆ ಕೆಳಗುರುಳಿತು. ತಕ್ಷಣವೇ ಶುಕ್ಲ ಆ ನಾಲ್ಕಾಣೆಯನ್ನೆತ್ತಿಕೊಂಡು ಪಕ್ಕದ ಹಳ್ಳಿಗೆ ಓಡಿ ಅಕ್ಕಿ ಮತ್ತು ಉಪ್ಪನ್ನು ಕೊಂಡುತಂದರು. ಆರು ಜನರೂ ಅಕ್ಕಿ ಕುಟ್ಟಿ ಉಪ್ಪನ್ನು ಬೆರೆಸಿಕೊಂಡು ಹಾಗೇ ಮುಕ್ಕಿದರು; ಉಳಿದುದ್ದನ್ನು ಗಂಟು ಕಟ್ಟಿಕೊಂಡರು. ಮತ್ತೆ ತಮ್ಮ ಪ್ರಯಾಣವನ್ನು ಮುಂದುವರಿಸಿದರು.

ಅಜ್ಞಾತ ಯಾತ್ರೆ - ಬಹುಮಾನ ಘೋಷಣೆ

ಸಂಜೆಯ ಹೊತ್ತಿಗೆ ಜಯಪ್ರಕಾಶರ ಕಾಲು ಬಾತುಕೊಂಡು ಅಸಹನೀಯ ನೋವು ಆರಂಭವಾಯಿತು. ಅವರಿಗೆ ಮುಂದೆ ನಡೆಯುವುದು ಅಸಾಧ್ಯವಾಯಿತು. ಕತ್ತಲಾದೊಡನೆ ಅವರು ಬಿದಿರು ಮೆಳೆಯೊಂದರ ಬಳಿ ರಾತ್ರಿ ಕಳೆಯಲು ನಿರ್ಧರಿಸಿದರು. ಈಗಾಗಲೇ ಅವರು ಕಾಡಿನ ಮಧ್ಯಭಾಗವನ್ನು ಪ್ರವೇಶಿಸಿದ್ದರು. ಹುಲಿ ಮತ್ತು ಭಯಂಕರ ಕರಡಿಗಳ ಆವಾಸ ಸ್ಥಾನವಾಗಿದ್ದ ಆ ಪ್ರದೇಶದಲ್ಲಿ ಅವರು ನಿದ್ರೆ ಇಲ್ಲದೆ ರಾತ್ರಿ ಕಳೆದರು. ಮಾರನೆಯ ಬೆಳಿಗ್ಗೆ ಜಯಪ್ರಕಾಶರು ಮುಂದಡಿ ಇಡಲು ಅಸಾಧ್ಯ ಎನಿಸಿದಾಗ ಅವರನ್ನು ಇಬ್ಬರು ಎತ್ತಿಕೊಂಡು ನಡೆದರು. ಈ ಮಧ್ಯೆ ಬ್ರಿಟಿಷ್‌ಸರ್ಕಾರ, ಜಯಪ್ರಕಾಶ್ ಮತ್ತು ಅವರ ಗೆಳೆಯರನ್ನು ಜೀವಂತ ಅಥವಾ ಮೃತರೂಪದಲ್ಲಿ ತಂದೊಪ್ಪಿಸುವವರಿಗೆ ಐದರಿಂದ ಹತ್ತು ಸಾವಿರ ರೂಪಾಯಿಗಳವರೆಗಿನ ನಗದು ಬಹುಮಾನ ಘೋಷಿಸಿತು

ಮೂರು ದಿನಗಳ ಕಾಲ ಹಗಲಿರುಳೆನ್ನದೆ ನಡೆದ ಈ ಅಜ್ಞಾತಯಾತ್ರೆ ಜಯಪ್ರಕಾಶರಿಗೆ ಹಳ್ಳಿ ಜನರ, ವಿಶೇಷವಾಗಿ ಕೆಳಜಾತಿ ಮತ್ತು ಅಸ್ಪೃಶ್ಯ ಸಮುದಾಯಗಳ ಕಷ್ಟ ನಿಷ್ಠುರಗಳ ಪರಿಚಯ ಮಾಡಿಕೊಟ್ಟಿತು. ಈ ಜನರ ಸಹಾಯ-ಸಹಕಾರದಿಂದ ಈ ಕ್ರಾಂತಿಕಾರಿಗಳ ಗುಂಪು ಬೇಹುಗಾರರ ಕಣ್ತಪ್ಪಿಸಿ ಗಯಾ ಬಳಿಯ ರಮಾನಂದನ ಮಿಶ್ರರ ಮಾವನ ಮನೆ ತಲುಪಲು ಸಾಧ್ಯವಾಯಿತು. ಅಲ್ಲಿಂದ ಗೆಳೆಯರ ಗುಂಪು ಚದುರಿತು. ಜಯಪ್ರಕಾಶರು

ಗಡ್ಡಧಾರಿಯಾಗಿ ಬನಾರಸ್ ತಲುಪಿ, ಅಲ್ಲಿನ ಗೆಳೆಯರ ಸಹಾಯದಿಂದ ಮುಂಬೈನಲ್ಲಿ ಭೂಗತ ಚಟುವಟಿಕೆಗಳ ಕೇಂದ್ರ ಸ್ಥಾಪಿಸಿಕೊಂಡು ಕ್ರಿಯಾಶೀಲರಾಗಿದ್ದ ಅಚ್ಯುತ ಪಟವರ್ಧನ್ ಮತ್ತು ಇತರೆ ಕಾಂಗ್ರೆಸ್ ಸಮಾಜವಾದಿ ಗೆಳೆಯರೊಡನೆ ಸಂಪರ್ಕವೇರ್ಪಡಿಸಿಕೊಂಡರು. ಅವರಿಂದ ಹಣ, ಮಾಹಿತಿ ಪಡೆದ ಜಯಪ್ರಕಾಶರು ದೆಹಲಿಗೆ ರೈಲು ಪ್ರಯಾಣ ಮಾಡುವ ದುಸ್ಸಾಹಸ ಮಾಡಿ ಯಶಸ್ವಿಯಾದರು.

ಭೂಗತಲೋಕದ ನಿರ್ದೇಶನ - ಸ್ವಾತಂತ್ರ್ಯ ಪ್ರೇಮಿಗಳ ಕಣ್ಮಣಿ

ಅಲ್ಲಿ ಜಯಪ್ರಕಾಶರು ಗೆಳೆಯರೊಡನೆ ಸೇರಿ ಸರ್ಕಾರವನ್ನು ದಿಕ್ಕೆಡಿಸುವ ಬುಡಮೇಲು ಕೃತ್ಯಗಳಿಗಾಗಿ ವ್ಯಾಪಕ ಜಾಲವೊಂದನ್ನು ನಿರ್ಮಿಸಿ, 'ಸ್ವಾತಂತ್ರ್ಯ ಹೋರಾಟ ರಂಗ' ಎಂಬ ಗುಪ್ತ ವೇದಿಕೆಯ ಮೂಲಕ ಕಾರ್ಯ ನಿರ್ದೇಶನದಲ್ಲಿ ತೊಡಗಿದರು. ಪ್ರಾಣ ಹಾನಿಯಾಗದಂತೆ ಸರ್ಕಾರಿ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವಂತಹ—ರೈಲ್ವೆ, ಅಂಚೆ ಮುಂತಾದ ಸರ್ಕಾರಿ ಕಛೇರಿಗಳ ಮೇಲೆ ದಾಳಿ, ಟೆಲಿಗ್ರಾಫ್ ತಂತಿ ಕತ್ತರಿಸುವುದು, ಬಾಂಬ್ ತಯಾರು ಮಾಡುವುದು ಮುಂತಾದ—ವಿಧ್ವಂಸಕ ಕಾರ್ಯಾಚರಣೆಯಲ್ಲಿ ಯುವಜನರನ್ನು ತೊಡಗಿಸಿ ಸಂಘಟಿಸಿದರು. ಅವರು ವಿದ್ಯಾರ್ಥಿಗಳಿಗೆ ನೀಡಿದ ಸಂದೇಶದಲ್ಲಿ 'ಇದು ಸ್ವಾತಂತ್ರ್ಯ ಕ್ರಾಂತಿಯ ಎರಡನೇ ಘಟ್ಟ. ನಮಗೀಗ ಹೆಚ್ಚು ಕಾಲ ಉಳಿದಿಲ್ಲ. ನಾವೀಗ ಕಾರ್ಖಾನೆಗಳು, ರೈಲ್ವೆ, ಗಣಿಗಳು, ಸೇನೆ ಮತ್ತು ಸರ್ಕಾರಿ ಕಛೇರಿಗಳು, ಹಳ್ಳಿಗಳು—ಎಲ್ಲ ಕಡೆ ನುಸುಳಿ ನಮ್ಮ ಸಾಹಿತ್ಯ ಹಂಚಿ, ಸಂಪರ್ಕಗಳನ್ನು ಬೆಳೆಸಿಕೊಳ್ಳಬೇಕು. ಬುಡಮೇಲು ಕೃತ್ಯಗಳ-ತಂತ್ರಗಳ ತರಬೇತಿ ಕೊಡಬೇಕು. ಶತ್ರುವಿನ ಮೇಲೆ ಸದಾ ಒತ್ತಡವಿರುವಂತೆ ನೋಡಿಕೊಳ್ಳಬೇಕು' ಎಂದು ಕರೆಕೊಟ್ಟರು. ದೇವಲಿ ಶಿಬಿರದಲ್ಲಿ ಬ್ರಿಟಿಷ್ ಅಧಿಕಾರಿಗಳಿಂದ ಅವರು ಅನುಭವಿಸಿದ ಅವಮಾನ—ಹಿಂಸೆಗಳು ಗಾಂಧೀಜಿಯ ಅಹಿಂಸಾತ್ಮಕ ಪ್ರತಿಭಟನೆಯ ಮಾರ್ಗದ ಬಗ್ಗೆ ಮತ್ತೆ ಅವರಲ್ಲಿ ಅಪನಂಬಿಕೆ ಹುಟ್ಟಿಸಿತ್ತು.

ಇದ್ದಕ್ಕಿದ್ದಂತೆ ಮತ್ತೆ ಆರಂಭವಾದ ಬುಡಮೇಲು ಕೃತ್ಯಗಳು ಸರ್ಕಾರವನ್ನು ದಂಗುಬಡಿಸಿದವು. ಅದು, ಗಲಭೆ-ಹಿಂಸಾಚಾರಗಳಿಗೆ ಕಾಂಗ್ರೆಸ್ ಹೇಗೆ ಕಾರಣವಾಗಿದೆ ಎಂಬುದನ್ನು ವಿವರಿಸುವ ಕರಪತ್ರಗಳನ್ನು ಮುದ್ರಿಸಿ ಹಂಚಿತು. ಸಾರ್ವಜನಿಕರ ಹಿತವನ್ನು ನಿರ್ಲಕ್ಷಿಸಿ, ಭಯೋತ್ಪಾದನೆಯ ಮೂಲಕ ರಾಷ್ಟ್ರಜೀವನವನ್ನು ಹೇಗೆ ಅಸ್ತವ್ಯಸ್ತಗೊಳಿಸಲಾಗುತ್ತಿದೆ ಎಂಬುದನ್ನು ಅದರಲ್ಲಿ ಭಾವೋದ್ವೇಗ ತುಂಬಿದ ಭಾಷೆಯಲ್ಲಿ ಚಿತ್ರಿಸಲಾಗಿತ್ತು. ಇದೆಲ್ಲದರ ಹಿಂದೆ ಜಯಪ್ರಕಾಶರಿದ್ದಾರೆ ಎಂಬ ಪ್ರಬಲ ಗುಮಾನಿಯೂ ಸರ್ಕಾರಕ್ಕಿತ್ತು. ಆದ್ದರಿಂದ ಅದು ನೇರವಾಗಿಯೇ ಜಯಪ್ರಕಾಶರ ವ್ಯಕ್ತಿತ್ವಕ್ಕೆ ಹಾನಿಮಾಡುವುದೆಂದು ತಾನು ನಂಬಿದ ಪ್ರಚಾರ ಪ್ರಯತ್ನಗಳನ್ನು ಕೈಗೊಂಡಿತು. ಇದರಿಂದ ಇಡೀ ರಾಷ್ಟ್ರದ ಗಮನ ಜಯಪ್ರಕಾಶರತ್ತ ತಿರುಗಿತು. ರಾಷ್ಟ್ರದ ಕಣ್ಣಿನಲ್ಲಿ ಅವರೀಗ ಬ್ರಿಟಿಷ್ ಸರ್ಕಾರದ ವಿರುದ್ಧ ಏಕಾಕಿಯಾಗಿ ಸೆಣಸುತ್ತಿದ್ದ ಮಹಾನ್ ನಾಯಕರಾಗಿದ್ದರು. ಇದೇ ಸಂದರ್ಭದಲ್ಲಿ ಗಾಂಧೀಜಿ ಕೂಡಾ,

ಸಾರ್ವತ್ರಿಕವಾಗಿ ಕಾಂಗ್ರೆಸ್ ವಿರುದ್ಧ, ನಿರ್ದಿಷ್ಟವಾಗಿ ಜಯಪ್ರಕಾಶರ ವಿರುದ್ಧ ಸರ್ಕಾರ ನಡೆಸುತ್ತಿದ್ದ ಅಪಪ್ರಚಾರವನ್ನು ಖಂಡಿಸಿ ದೀರ್ಘ ಹೇಳಿಕೆಯೊಂದನ್ನು ನೀಡಿದರು. "ಸರ್ಕಾರ ಕಾಂಗ್ರೆಸ್ಸನ್ನು ದೂಷಿಸುವುದು ತರವಲ್ಲ. ಅದು ಕಾಂಗ್ರೆಸ್ಸಿನ ಆಗ್ರಹವನ್ನು ಪುರಸ್ಕರಿಸುವ ಮನಸ್ಸು ತೋರಿದ್ದಲ್ಲಿ, ಅದು ಯುದ್ಧದಲ್ಲಿ ಸರ್ಕಾರಕ್ಕೆ ಸಹಕಾರ ನೀಡಲು ಸಿದ್ಧವಿತ್ತು... ಜಯಪ್ರಕಾಶರ ಎಲ್ಲ ಅಭಿಪ್ರಾಯಗಳನ್ನು ನಾನು ಒಪ್ಪುವುದಿಲ್ಲವಾದರೂ, ಆತನ ಅಪ್ರತಿಮ ಧೈರ್ಯ ಮತ್ತು ತ್ಯಾಗಗಳ ಬಗ್ಗೆ ನಾನು ಕುರುಡಾಗಿಲ್ಲ. ಆತನ ಕಾರ್ಯಾಚರಣೆಯ ಹಿಂದಿರುವ ಧ್ಯೇಯೋದ್ಯೇಶಗಳಲ್ಲಿ ಅಡಗಿರುವ ಉಜ್ವಲ ದೇಶ ಪ್ರೇಮ ಹಾಗೂ ವಿದೇಶಿ ಆಳ್ವಿಕೆಯ ಬಗ್ಗೆ ಇರುವ ಅಸಹನೆ ನನ್ನ ಕಣ್ಣಿಗೆ ಹೊಡೆಯುತ್ತಿವೆ. ಯಾವುದೇ ದೇಶ ಹೆಮ್ಮೆಪಡಬಹುದಾದ ಸೌಭಾಗ್ಯವಿದು" ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು. ಇದರೊಡನೆ ಜಯಪ್ರಕಾಶ್, ಎಲ್ಲ ಸ್ವಾತಂತ್ರ್ಯ ಪ್ರೇಮಿಗಳ ಕಣ್ಮಣಿಯಾದರು.

ಕುದಿಯುವ ಕೊಪ್ಪರಿಗೆ

ಆ ಹೊತ್ತಿಗೆ ಬ್ರಿಟನ್ ಕೂಡಾ ಯುದ್ಧದಲ್ಲಿ ಹಲವಾರು ಕಡೆ ಸೋಲನ್ನು ಎದುರಿಸುತ್ತಿತ್ತು. ಜಪಾನ್, ಬರ್ಮಾವನ್ನು ಆಕ್ರಮಿಸಿ ಭಾರತದ ಗಡಿ ಕಡೆ ಮುನ್ನುಗ್ಗುತ್ತಿತ್ತು. ಗೃಹಬಂಧನದಿಂದ ಪಾರಾಗಿ ಮಾಸ್ಕೋ ಮೂಲಕ ಬರ್ಲಿನ್ ತಲುಪಿದ್ದ ಸುಭಾಷ್‌ಚಂದ್ರ ಬೋಸ್, ಜರ್ಮನಿಯ ನೆರವಿನೊಂದಿಗೆ ಸಿಂಗಪುರ ತಲುಪಿ ತಮ್ಮದೇ 'ಭಾರತದ ರಾಷ್ಟ್ರೀಯ ಸೇನೆ'ಯೊಡನೆ ಮಲಯಾದ ಮೂಲಕ ಬ್ರಿಟಿಷ್ ಭಾರತದ ಮೇಲೆ ಆಕ್ರಮಣಕ್ಕೆ ಸಿದ್ಧತೆ ನಡೆಸಿದ್ದರು. ಇಂತಹ ಅನಿಶ್ಚಿತತೆಯ ಸಂದರ್ಭದಲ್ಲಿ ವಿಚಲಿತಗೊಂಡ ಕೆಲವು ಕಾಂಗ್ರೆಸ್ಸಿಗರು ಬ್ರಿಟಿಷ್ ಸರ್ಕಾರದ ಬಗ್ಗೆ ಸ್ವಲ್ಪ ಉದಾರವಾದ ಧೋರಣೆಯನ್ನು ತಳೆದು, ಹೋರಾಟವನ್ನು ನಿಲ್ಲಿಸಿ ಮತ್ತೆ ಸಂಧಾನದ ಪ್ರಸ್ತಾಪ ಮಾಡುತ್ತಿರುವ ಸುದ್ದಿ ಜಯಪ್ರಕಾಶರನ್ನು ತಲುಪಿತು. ಅವರು ಉರಿದೆದ್ದು "ಸೆರೆಮನೆಗಳ ಭಯಾನಕ ಮೌನದಲ್ಲಿ ನಮ್ಮೆಷ್ಟೋ ಸೋದರ ಸೋದರಿಯರನ್ನು ಚಿತ್ರಹಿಂಸೆಗೊಳಪಡಿಸಿದ, ಗುಂಡಿಟ್ಟು ಕೊಂದ, ಸುಟ್ಟುಹಾಕಿದ, ಅತ್ಯಾಚಾರಗಳನ್ನೆಸಗಿದ ಜನರೊಡನೆ ಈ ಕಾಂಗ್ರೆಸ್ಸಿಗರು ಕೈ ಕುಲುಕಲು ತಯಾರಾಗಿರುವ ಸಂಗತಿ ನನಗೆ ಅರ್ಥವಾಗದ ವಿಷಯವಾಗಿದೆ" ಎಂಬ ಹೇಳಿಕೆ ಹೊರಡಿಸಿದರು.

ಈ ಮಧ್ಯೆ ಬಂಗಾಳ ಭೀಕರ ಕ್ಷಾಮಕ್ಕೆ ತುತ್ತಾಯಿತು. ಭ್ರಷ್ಟ ಅಧಿಕಾರಿಗಳಿಂದ ತುಂಬಿದ ಆಡಳಿತ ವ್ಯವಸ್ಥೆ, ಈ ದಿಸೆಯಲ್ಲಿ ಯಾವುದೇ ಪರಿಹಾರ ಕ್ರಮ ಕೈಗೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿತು. ಜನ ಕ್ರಿಮಿಗಳಂತೆ ಸಾಯತೊಡಗಿದರು. ಅಲ್ಲದೆ ಜಪಾನ್ ಆಕ್ರಮಣಕ್ಕೆ ಒಳಗಾದ ಪ್ರದೇಶಗಳಿಂದ ಸರ್ಕಾರ, ಬರೀ ಬಿಳಿಯರನ್ನು ಮಾತ್ರ ರಕ್ಷಿಸುವ ಅಮಾನುಷ ಧೋರಣೆ ತಳೆಯಿತು. ಕ್ಷಾಮ ಮತ್ತು ಯುದ್ಧಗಳ ಆ ಪ್ರದೇಶದಲ್ಲಿ ನರಕದ ಪ್ರತಿರೂಪವೊಂದು ಸೃಷ್ಟಿಯಾಗಿತ್ತು. ಕ್ರುದ್ಧರಾದ ಜಯಪ್ರಕಾಶರು, ಗಾಂಧೀಜಿಯ 'ಮಾಡಿ ಇಲ್ಲವೇ ಮಡಿಯಿರಿ' ಘೋಷಣೆಯನ್ನು ತಮ್ಮ ಭೂಗತ ಲೋಕದ ಹೊಸ

ಸಂದರ್ಭದಲ್ಲಿ ಮರುವ್ಯಾಖ್ಯಾನಮಾಡಿ. "ದೇಶವನ್ನು, ಸಾಮ್ರಾಜ್ಯಶಾಹಿಯು ಬೆಂದು ನಾಶವಾಗುವಂತಹ ಕುದಿಯುವ ಕೊಪ್ಪರಿಗೆಯನ್ನಾಗಿ ಪರಿವರ್ತಿಸಿ" ಎಂದು ಕರೆ ಕೊಟ್ಟ ಅವರು, ಸರ್ಕಾರದ ಉಗ್ರಾಣಗಳಿಗೆ ಮುತ್ತಿಗೆ ಹಾಕಿ ಧಾನ್ಯಗಳನ್ನು ದೋಚಿ ಎಂದು ಕ್ಷಾಮಪೀಡಿತ ಜನರನ್ನು ಪ್ರಚೋದಿಸಿದರು. ಜಯಪ್ರಕಾಶರ 'ಹಾವಳಿ' ಬ್ರಿಟಿಷ್ ಸರ್ಕಾರಕ್ಕೆ ಎದುರಿಸಲಾಗದ ವಿಪತ್ತಾಯಿತು. ಅದು ತನ್ನೆಲ್ಲಾ ಪ್ರಯತ್ನಗಳನ್ನೂ ಕ್ರೋಢೀಕರಿಸಿ ಜಯಪ್ರಕಾಶರನ್ನು ಹಿಡಿದುಹಾಕುವ ದೃಢಸಂಕಲ್ಪ ಮಾಡಿತು.

ನೇಪಾಳಕ್ಕೆ ಪಲಾಯನ

ಜಯಪ್ರಕಾಶರ ಉತ್ಸಾಹ ಹೆಚ್ಚಿದಂತೆ ಪೊಲೀಸ್ ಭಯ ಕಡಿಮೆಯಾಗತೊಡಗಿತು. ಈಗವರು ಗುಪ್ತ ವೇಷಗಳಲ್ಲಿ ದೆಹಲಿಯ ಹೊರವಲಯಕ್ಕೂ ಹೋಗುವ ಸಾಹಸ ಮಾಡಿದರು. ಇಷ್ಟು ಹೊತ್ತಿಗೆ ಡಾ. ರಾಮಮನೋಹರ ಲೋಹಿಯಾ ಕೂಡ ಮುಂಬೈ ಬಳಿ ಇಂತಹುದೇ ಭೂಗತ ಚಟುವಟಿಕೆಗಳಲ್ಲಿ ತೊಡಗಿದ್ದರಲ್ಲದೆ, ಖಾಸಗಿ ರೇಡಿಯೋ ಪ್ರಸಾರ ಕೇಂದ್ರಗಳ ಸ್ಥಾಪನೆ ಮಾಡಿ ಬ್ರಿಟಿಷ್ ಸರ್ಕಾರಕ್ಕೆ ದೊಡ್ಡ ತಲೆನೋವಾಗಿ ಪರಿಣಮಿಸಿದ್ದರು. ಈ ಎರಡೂ ಗುಂಪುಗಳು ಸಮನ್ವಯ ಏರ್ಪಡಿಸಿಕೊಂಡು ದೇಶಾದ್ಯಂತ ಸಂಚರಿಸಿ, ಸರ್ಕಾರದ ಅತಿ ಕಠೋರ ಕ್ರಮಗಳ ಪರಿಣಾಮವಾಗಿ ಕ್ರಮೇಣ ದುರ್ಬಲಗೊಳ್ಳುತ್ತಿದ್ದ ಭೂಗತ ಚಳುವಳಿಯನ್ನು ಪುನರ್‌ಸಂಘಟಿಸುವ ನಿರ್ಧಾರ ಮಾಡಿದವು. ಜಯಪ್ರಕಾಶ್ ತಮ್ಮ ಗೆಳೆಯ ಸೂರಜ್ ನಾರಾಯಣಸಿಂಗ್ ಅವರೊಡನೆ ದೆಹಲಿಯಿಂದ ಉತ್ತರ ಗಡಿ ಪ್ರದೇಶದ ಅಂಚನ್ನು ತಲುಪಿ, ಅಲ್ಲಿಂದ ಬಿಹಾರ ಸೇರಿದರು. ಅಲ್ಲಿ ಹಳ್ಳಿಗಳಲ್ಲಿ ಸಂಚರಿಸಿ ಜನಸಂಘಟನೆ ಮಾಡಿದರು. ಹಲವಾರು ಹಳ್ಳಿಗಳನ್ನು ಬ್ರಿಟಿಷ್ ಸರ್ಕಾರದ ಕಂದಾಯ ಆಡಳಿತದಿಂದ ಮುಕ್ತಗೊಳಿಸಿ 'ಸ್ವಾಯತ್ತ ಗ್ರಾಮ'ಗಳ ಘೋಷಣೆ ಮಾಡಿದರು.

ಸರ್ಕಾರದ ಬೇಹುಗಾರಿಕೆ ಎಷ್ಟೇ ಪ್ರಬಲವಾಗಿದ್ದರೂ, ಅದು ಜಯಪ್ರಕಾಶರ ನೆರಳನ್ನು ಹಿಡಿಯುವಲ್ಲಿ ಮಾತ್ರ ಯಶಸ್ವಿಯಾಗಿತ್ತು. ಜಯಪ್ರಕಾಶರು ಯಾವಾಗಲೂ ಪೊಲೀಸರಿಗಿಂತ ಒಂದು ಹೆಜ್ಜೆ ಮುಂದಿರುತ್ತಿದ್ದರು. ಆದರೆ ಬಿಹಾರದ ಗಡಿಯಲ್ಲಿ ಪೊಲೀಸರ ಬೇಹುಗಾರಿಕೆ ವಿಪರೀತ ಒತ್ತಡವನ್ನು ಹೇರತೊಡಗಿದಾಗ ಅವರು ಭಾರತವನ್ನೇ ಬಿಡಲು ನಿರ್ಧರಿಸಿದರು. ಅವರು ಹಿಮಾಲಯ ತಪ್ಪಲಿನ ಅರಣ್ಯವೊಂದರಲ್ಲಿ ತಮ್ಮ ಗೆರಿಲ್ಲಾ ತಂಡದೊಡನೆ ಕಣ್ಮರೆಯಾದರು. ಅಲ್ಲಿಂದಾಚೆ ಅವರು ಆನೆ ಮೇಲೆ ಕುಳಿತು ದೋಣಿಯೊಂದರಲ್ಲಿ ಪಯಣಿಸಿ ನೇಪಾಳವನ್ನು ಪ್ರವೇಶಿಸಿದರು. ಅಲ್ಲಿ ಅವರಿಗಾಗಿಯೇ ಕಾದಿದ್ದಂತೆ ಕ್ರಾಂತಿಕಾರಿ ತಂಡವೊಂದು ನಿರ್ಮಾಣವಾಗಿತ್ತು. ಬ್ರಿಟಿಷ್ ಸೇನೆಯಿಂದ ಹೊರ ಹಾಕಲ್ಪಟ್ಟಿದ್ದ ಭಾರತದ ಕೆಲವು ಮಿಲಿಟರಿ ಅಧಿಕಾರಿಗಳು 'ಆಜಾದ್ ದಸ್ತಾ' ಎಂಬ ಸೇನೆಯನ್ನು ಬ್ರಿಟಿಷರ ವಿರುದ್ಧ ತರಬೇತಿಗೊಳಿಸುತ್ತಿತ್ತು. ಜಯಪ್ರಕಾಶರ ಗುಂಪು ಅದನ್ನು ಸೇರಿತು. ಆ ವೇಳೆಗಾಗಲೇ ಅಲ್ಲಿಗೆ ಗುಪ್ತವಾಗಿ ಬಂದು ಸೇರಿದ್ದ ಲೋಹಿಯಾ ಗೆಳೆಯರ ಗುಂಪಿನ ನೆರವಿನಿಂದ ಅಲ್ಲೊಂದು ಖಾಸಗಿ ರೇಡಿಯೋ ಕೇಂದ್ರ ಸ್ಥಾಪಿತವಾಯಿತು.

ಬಂಧನ—ಮತ್ತೆ ಪಲಾಯನ

ಜಯಪ್ರಕಾಶರು ನೇಪಾಳಕ್ಕೆ ನುಸುಳಿ ಹೋಗಿರುವ ಖಚಿತ ಸುದ್ದಿ ದೊರತೊಡನೆಯೇ ಬ್ರಿಟಿಷ್ ಸರ್ಕಾರ, ಈ ಬಗ್ಗೆ ನೇಪಾಳದದ ದೊರೆಯ ಮೇಲೆ ಒತ್ತಡ ಹೇರಿತು. ಜಯಪ್ರಕಾಶರೀಗ ನೇಪಾಳೀ ಪೊಲೀಸರ ಬಗ್ಗೆ ಕೂಡಾ ಎಚ್ಚರಿಕೆ ವಹಿಸಬೇಕಾಯಿತು. ಒಮ್ಮೆ ನೇಪಾಳೀ ಪೊಲೀಸ್ ತಂಡ ಬಂದೂಕುಗಳೊಡನೆ ಜಯಪ್ರಕಾಶ್‌ರ ಹಿಂದೆ ಬಿದ್ದಿತು. ಜಯಪ್ರಕಾಶ್ ಕಾಡು-ಮೇಡುಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಅವಿತುಕೊಂಡು ತಲೆತಪ್ಪಿಸಿಕೊಂಡರು. ಕೊನೆಗೊಮ್ಮೆ ಪೊಲೀಸರು ಅವರನ್ನು ಅನಿರೀಕ್ಷಿತವಾಗಿ ಸುತ್ತುವರಿದಾಗ ಅವರು ಶರಣಾಗಬೇಕಾಯಿತು. ನೇಪಾಳೀ ಪೊಲೀಸರು ಜಯಪ್ರಕಾಶರಿಗೆ ಕೈ ಕೋಳ ತೊಡಿಸಿ, ಅವರನ್ನು ಭಾರತಕ್ಕೆ ಕರೆದೊಯ್ಯುವ ಏರ್ಪಾಡು ಮಾಡಿದರು. ಆದರೆ ಅಷ್ಟರಲ್ಲಿ ಜಯಪ್ರಕಾಶ್ ತಮ್ಮ ಚಾಣಾಕ್ಷತನದಿಂದ, ಪರಿಚಿತ ಹುಡುಗನೊಬ್ಬನ ಮೂಲಕ ('ಆಜಾದ್ ದಸ್ತಾ'ದ ಸ್ವಯಂ ಸೇವಕ) ತಮ್ಮ ಬಂಧನದ ವಿಷಯವನ್ನು ತಮ್ಮ ಗುಂಪಿಗೆ ತಲುಪಿಸಿದ್ದರು.

ಭಾರತದ ಕಡೆ ಪ್ರಯಾಣದ ನಾಲ್ಕನೆಯ ರಾತ್ರಿ ಜಯಪ್ರಕಾಶ್ ಮತ್ತು ಅವರ ಸಹಚರರನ್ನು ಜಿಲ್ಲಾ ಕಲೆಕ್ಟರರ ನಿವಾಸದ ಪಡಸಾಲೆಯಲ್ಲಿ ಇರಿಸಲಾಗಿತ್ತು. ಆ ಹೊತ್ತಿಗೆ ಜಯಪ್ರಕಾಶರ ಗೆರಿಲ್ಲಾ ತಂಡ ಅಲ್ಲಿಗೆ ಧಾವಿಸಿತ್ತು. ಹೆಚ್ಚಿನ ಪೊಲೀಸರೆಲ್ಲಾ ಮಲಗಿದ್ದ ಸಮಯದಲ್ಲಿ ತಂಡ, ಮನೆಯ ಹಿತ್ತಲಿನ ಒಣಹುಲ್ಲಿಗೆ ಬೆಂಕಿ ಹತ್ತಿಸಿತು. ಜಯಪ್ರಕಾಶ್ ಮತ್ತು ಅವರ ಸಹಚರರನ್ನು ನಿದ್ದೆ ಮಾಡದೆ ಕಾಯುತ್ತಿದ್ದ ಇಬ್ಬರು ಪೊಲೀಸರು ಇತರರನ್ನು ಎಬ್ಬಿಸಿ, ಬೆಂಕಿ ಎದ್ದ ಕಡೆ ಕಳಿಸಿದರು. ಉಳಿದಿದ್ದ ಇಬ್ಬರು ಕಾವಲು ಪೊಲೀಸರ ಮೇಲೆ ಗೆರಿಲ್ಲಾ ತಂಡ ದಾಳಿ ಮಾಡಿತು. ಒಬ್ಬನನ್ನು ಕೊಂದು ಹಾಕಿತು. ಜಯಪ್ರಕಾಶ್ ಮತ್ತು ಲೋಹಿಯಾ ಹಾಗೂ ಇತರ ಖೈದಿಗಳು ಹಾಸಿಗೆಯಿಂದ ಜಿಗಿದು ಅಲ್ಲಲ್ಲಿ ಬಿದ್ದಿದ್ದ ಬಂದೂಕುಗಳನ್ನು ಎತ್ತಿಕೊಂಡರು. ಆದರೆ ಮದ್ದಿಗಾಗಿ ಹುಡುಕಾಡಿ ಸಿಗದೆ, ಮತ್ತೆ ಪೊಲೀಸರು ಈ ಕಡೆ ಮುನ್ನುಗ್ಗುತ್ತಿರುವುದನ್ನು ಕಂಡು ಬಂದೂಕುಗಳೊಡನೆ ಅಲ್ಲಿಂದ ಪರಾರಿಯಾದರು. ಪೊಲೀಸರು ತಮಗಾದ ಮೋಸವನ್ನು ಅರಿತು ಹಿಂಬಾಲಿಸುವ ಹೊತ್ತಿಗೆ ಅವರು ಗುಡ್ಡಗಳಲ್ಲಿ ಮರೆಯಾಗಿದ್ದರು. ಆದರೆ ಲೋಹಿಯಾ ಮಾತ್ರ ಗುಂಪಿನಲ್ಲಿ ಹಿಂದೆ ಬಿದ್ದು ಗುಂಡಿನೇಟನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದ್ದರು!

ಇಡೀ ಗುಂಪು ಬೆಟ್ಟಗುಡ್ಡಗಳಲ್ಲಿ ತಲೆಮರೆಸಿಕೊಂಡು, ಸಂದೇಹಿಸಿದ ಜನರನ್ನು ಬಂದೂಕುಗಳಿಂದ ಬೆದರಿಸಿಕೊಂಡು ಮರಳಿ ದೆಹಲಿ ತಲುಪಿತು. ದೆಹಲಿ ತಲುಪಿದೊಡನೆ ಜಯಪ್ರಕಾಶ್ ತಮ್ಮ ಗಡ್ಡ ಬೋಳಿಸಿಕೊಂಡು ಇಂಗ್ಲಿಷರಂತೆ ಆಧುನಿಕ ವೇಷಭೂಷಣ ಮಾಡಿಕೊಂಡು ಮೇಹರಾಜ್ ಮೆಹತಾ ಎಂಬ ಹೊಸ ಹೆಸರು ಇಟ್ಟುಕೊಂಡರು. ನಂತರ ಅವರು ಭಾಗಲ್ಪುರದವರೆಗೆ ಎತ್ತಿನ ಗಾಡಿಯಲ್ಲಿ ಹೋಗಿ, ಅಲ್ಲಿಂದ ರೈಲು ಹತ್ತಿ ಕಲ್ಕತ್ತ ತಲುಪಿದರು.

ಪೊಲೀಸ್ ಬಲೆಯಿಂದ ತಪ್ಪಿಸಿಕೊಂಡ ಜಯಪ್ರಕಾಶ್ ಮತ್ತು ಲೋಹಿಯಾ ಹಾಗೂ ಅವರ ಸಂಗಡಿಗರು ಮತ್ತೆ ತಮ್ಮ ಗುಪ್ತ ಚಟುವಟಿಕೆಗಳನ್ನು ಆರಂಭಿಸಿದ್ದರು. ಸರ್ಕಾರ ಬೇಹುಗಾರಿಕೆ ವಿಪರೀತವಾಗಿದೆ ಎಂಬ ಅರಿವಿದ್ದೂ ಕೂಡಾ ಜಯಪ್ರಕಾಶ್ ಕ್ರಮೇಣ ತಮ್ಮ ಅತ್ಯುತ್ಸಾಹವನ್ನು ಅದುಮಿಡಲಾಗದೆ, ಕೆಲವು ಬಹಿರಂಗ ಚಟುವಟಿಕೆಗಳಿಗೂ ತೊಡಗಿದರು. ಇದರಿಂದಾಗಿ ಜಯಪ್ರಕಾಶರ ಚಲನ ವಲನಗಳ ಬಗ್ಗೆ ಪೊಲೀಸರಿಗೆ ಸುಳಿವು ದೊರೆಯಲಾರಂಭಿಸಿತು. ಸರ್ಕಾರ ತನ್ನ ಬೇಹುಗಾರರ ಜಾಲವನ್ನು ಚುರುಕುಗೊಳಿಸಿತು.

ತಪ್ಪಿದ ಎಚ್ಚರ - ಮತ್ತೆ ಬಂಧನ

ಖೈಬರ್ ಪ್ರದೇಶದ ಪಠಾಣರನ್ನು ಬ್ರಿಟಿಷರ ವಿರುದ್ಧ ಉದ್ದೀಪಿಸಬೇಕೆಂಬ ಮಹದಾಶೆಯನ್ನು ಹತ್ತಿಕ್ಕಲಾರದೆ, ಜಯಪ್ರಕಾಶ್ ಪೆಷಾವರದಲ್ಲಿದ್ದ ಖಾನ್ ಅಬ್ದುಲ್ ಗಫಾರ್‌ಖಾನ್ (ಗಡಿನಾಡ ಗಾಂಧಿ) ಅವರ ಜೊತೆಗೂಡುವ ಆಲೋಚನೆ ಮಾಡಿದರು. ಸರಿ, ದೆಹಲಿಯಿಂದ ರಾವಲ್ಪಿಂಡಿಗೆ ಪ್ರಯಾಣ ಮಾಡಲು ಅವರಿಗಾಗಿ ರೈಲ್ವೇ ಟಿಕೆಟ್‌ವೊಂದನ್ನು ಕೊಳ್ಳಲಾಯಿತು. ಮೇಹ್ ರಾಜ್‌ಮೆಹ್ತಾ ಎಂಬ ಗುಪ್ತನಾಮದೊಡನೆ ಅವರು ಸೆಪ್ಟೆಂಬರ್ ೧೬ರಂದು ರಾವಲ್ಪಿಂಡಿಯ ರೈಲು ಹತ್ತಿದರು. ಬೋಗಿಯಲ್ಲಿ ಮೇಜರ್ ಖಾನ್ ಎಂಬವರು ಮುಂಗಡ ಮಾಡಿಸಿದ್ದ ಮೀಸಲು ಅಂಕಣದಲ್ಲಿ ಅವರಿಗೂ ಜಾಗ ನೀಡಲಾಗಿತ್ತು. ಆದರೆ ಬೋಗಿಯ ಹೊರಗೆ ಅಂಟಿಸಲ್ಪಟ್ಟ ಮೀಸಲು ಪಟ್ಟಿಯಲ್ಲಿ ಟಿಕೆಟ್ ಕೊಳ್ಳುವ ಜವಾಬ್ದಾರಿ ಹೊತ್ತಿದ್ದ ವ್ಯಕ್ತಿಗೆ ತಿಳಿಸದೇ ಇದ್ದ ತಮ್ಮ ಗುಪ್ತನಾಮ ಇದ್ದುದನ್ನು ಕಂಡು ಅವರಿಗೆ ಸ್ವಲ್ಪ ಆಶ್ಚರ್ಯವಾಯಿತು. ರೈಲು ಹೊರಟ ನಂತರವೂ ಮೇಜರ್‌ಖಾನ್ ಆಗಲೀ ಅಥವಾ ಮತ್ತಾರೇ ಆಗಲಿ, ಆ ಅಂಕಣಕ್ಕೆ ಬರದಿದ್ದುದು ಅವರ ಸಂದೇಹ ಹೆಚ್ಚಲು ಕಾರಣವಾಯಿತು. ತಮ್ಮ ಸಹಚರರಲ್ಲಿ ಯಾರಾದರೂ ಪೊಲೀಸರಿಗೆ ಸುದ್ದಿ ನೀಡಿರಬಹುದೇ ಎಂದವರು ಯೋಚಿಸಿದರು. ಆದರೆ ಅವರ ಮೇರೆ ಅರಿಯದ ಆತ್ಮವಿಶ್ವಾಸ ಈ ಎಲ್ಲ ಸಂದೇಹಗಳನ್ನು ದೂರ ತಳ್ಳಿತು. ಮಧ್ಯದ ನಿಲ್ದಾಣವೊಂದರಲ್ಲಿ ಅವರು ರೈಲಿನಿಂದಿಳಿದು ಪ್ಲಾಟ್‌ಫಾರಂನ ಮೇಲೆ ಅಡ್ಡಾಡುತ್ತಿದ್ದಾಗ ಓರ್ವ ವ್ಯಕ್ತಿ ಒಂದೇ ಸಮನೆ ಅವರನ್ನು ಹಿಂಬಾಲಿಸುತ್ತಾ ಅವರನ್ನು ತೀವ್ರವಾಗಿ ಪರೀಕ್ಷಿಸುತ್ತಿದ್ದಂತೆ ಕಂಡಾಗ, ಒಂದು ಕ್ಷಣ ಜಯಪ್ರಕಾಶರು ಪ್ರಯಾಣವನ್ನು ಅಲ್ಲಿಗೇ ನಿಲ್ಲಿಸಿ ಪಲಾಯನಮಾಡುವ ಯೋಚನೆ ಮಾಡಿದರು. ಆದರೆ ಮರುಕ್ಷಣವೇ ಆ ಮೇರೆ ಅರಿಯದ ಆತ್ಮವಿಶ್ವಾಸ, ಅವರು ಮತ್ತೆ ರೈಲು ಹತ್ತಿ ತಮ್ಮ ಪ್ರಯಾಣವನ್ನು ಮುಂದುವರಿಸುವಂತೆ ಮಾಡಿತು. ಅವರು ಆ ರಾತ್ರಿ ನಿಶ್ಚಿಂತೆಯಿಂದಲೇ ನಿದ್ದೆ ಮಾಡಿದರು! ಬೆಳಿಗ್ಗೆ ಎದ್ದು ಹಾಸಿಗೆ ಸುತ್ತಿದರು. ಅಂಕಣದ ಬಾಗಿಲು ತೆಗೆದು ಬೋಗಿಯ ಹೊರಕ್ಕೆ ನೋಡಿದರು. ಲಾಹೋರ್ ನಿಲ್ದಾಣ ಬಂದಿತ್ತು. ಅವರ ಬೋಗಿಯ ಬಳಿ ಇಬ್ಬರು ಭಾರತೀಯರು ಹಾಗೂ ಒಬ್ಬ ಆಂಗ್ಲ, ಪ್ರಯಾಣಿಕರ ಪಟ್ಟಿಯನ್ನು ಪರಿಶೀಲಿಸುತ್ತಿದ್ದರು. ಜಯಪ್ರಕಾಶರು ಚಹಾದವನನ್ನು ಕೂಗಿ ಕರೆದು ಚಹಾ ತಂದುಕೊಡಲು ಹೇಳಿ ತಮ್ಮ

ಅಂಕಣಕ್ಕೆ ತೆರಳಿದರು. ಬಾಗಿಲು ಮುಚ್ಚಿ ಬಟ್ಟೆ ಬದಲಾಯಿಸಿಕೊಂಡರು. ಯಾರೋ ಬಾಗಿಲು ತಟ್ಟಿದ ಶಬ್ದ ಕೇಳಿದಾಗ, ಜಪಾದವನಿರಬೇಕೆಂದು ಜಯಪ್ರಕಾಶ್, "ಒಳಗೆ ಬಾ. ಇಲ್ಲಿ ನಾನೊಬ್ಬನೇ. ಕೂರುವುದಕ್ಕೆ ಜಾಗವಿದೆ" ಎಂದರು.

ಬಾಗಿಲು ತೆರೆಯಿತು. ಆಂಗ್ಲನೊಬ್ಬ ಒಳಗೆ ಬಂದ. "ನಾನು ನಿನ್ನ ಟಿಕೆಟ್ ಪರೀಕ್ಷಿಸಬೇಕು" ಎಂದು ಆತ ಕೇಳಿದಾಗ, "ನೀನೇನು ರೈಲ್ವೇ ಅಧಿಕಾರಿಯಾ?" ಎಂದು ಜಯಪ್ರಕಾಶ್ ಮರುಪ್ರಶ್ನೆ ಹಾಕಿದರು. ಆಗಬಾರದ್ದು ಆಗಿಹೋಗಿದೆ ಎಂಬುದು ಅವರಿಗೆ ಖಚಿತವಾಗತೊಡಗಿತ್ತು.

ಆ ಆಂಗ್ಲನು "ಅದೆಲ್ಲಾ ನಿನಗೆ ಬೇಡ. ನಿನ್ನ ಟಿಕೆಟ್ ತೋರಿಸು. ನೀನು ಜಯಪ್ರಕಾಶ್ ನಾರಾಯಣ್ ತಾನೇ?" ಎಂದು ನೇರ ವಿಚಾರಣೆಗೆ ತೊಡಗಿದನು.

ಜಯಪ್ರಕಾಶರ ಮುಖ ಕೆಂಪಾಯಿತು. ಅವರು ಏರಿದ ದನಿಯಲ್ಲಿ ಹೇಳಿದರು. "ನಾನು ಯಾವ ನಾರಾಯಣನೂ ಅಲ್ಲ; ನನ್ನ ಹೆಸರು ಮೇಹರಾಜ್ ಮೆಹ್ತಾ."

ಆಂಗ್ಲ ಹಾಗೂ ಅವನ ಸಹಾಯಕರು ಜಯಪ್ರಕಾಶರ ಹಾಸಿಗೆ ಮತ್ತು ಬಟ್ಟೆ ಬರೆಗಳನ್ನು ತಡಕಿದರು. ನಂತರ ಕೇಳಿದರು. "ನಿನ್ನ ಇತರ ಗೆಳೆಯರು ಎಲ್ಲಿ?"

ಜಯಪ್ರಕಾಶ್ ಮತ್ತೆ ಖಚಿತ ದನಿಯಲ್ಲಿ ಹೇಳಿದರು. "ನಾನು ಇನ್ನೊಮ್ಮೆ ಹೇಳುತ್ತಿದ್ದೇನೆ—ನಾನು ಮೇಹರಾಜ್ ಮೆಹ್ತಾ. ಇಲ್ಲಿರುವುದು ನಾನೊಬ್ಬನೇ. ಇನ್ನಾವ ವಿಷಯವೂ ನನಗೆ ಗೊತ್ತಿಲ್ಲ."

ಆ ಆಂಗ್ಲ ಈಗ ತಾನು ಲಾಹೋರ್‌ನ ಪೊಲೀಸ್ ವರಿಷ್ಠಾಧಿಕಾರಿ ಎಂಬುದನ್ನು ಬಹಿರಂಗಗೊಳಿಸಿದ. "ನೋಡು, ಇದು ನೇಪಾಳ ಅಲ್ಲ. ಇಲ್ಲಿ ನಿನ್ನಾಟ ನಡೆಯೋದಿಲ್ಲ. ಇದು ಪಂಜಾಬ್. ಸ್ವಲ್ಪ ಅಲುಗಾಡಿದರೂ ಗುಂಡು ಹಾರಿಸೋದಕ್ಕೆ ನನಗೆ ಅನುಮತಿ ಇದೆ. ಸುಮ್ಮನೆ ಪಲಾಯನ ಮಾಡೋ ವಿಫಲ ಪ್ರಯತ್ನ ಮಾಡಬೇಡ"—ಆ ಅಧಿಕಾರಿ ಶಾಂತವಾಗಿ ಮುನ್ನೆಚ್ಚರಿಕೆ ನೀಡಿದ. ಅನಗತ್ಯ ಗಲಾಟೆಯಾಗಿ ಜನ ಗುಂಪುಗೂಡುವುದು ಅವನಿಗೆ ಬೇಕಿರಲಿಲ್ಲ. ಜಯಪ್ರಕಾಶ್ ಈಗ ಜನರಿಗೆ ಎಷ್ಟು ಪ್ರಿಯವಾದ ವ್ಯಕ್ತಿಯಾಗಿದ್ದಾರೆ ಎಂಬುದು ಆತನಿಗೆ ಗೊತ್ತಿತ್ತು. ಜಯಪ್ರಕಾಶರ ಏರಿದ ದನಿಯ ಪ್ರತಿಭಟನೆಗಳ ನಡುವೆಯೇ ಅವರ ಕೈಗಳಿಗೆ ಬೇಡಿಗಳನ್ನು ತೊಡಿಸಲಾಯಿತು. ಯಾವುದೇ ಘಟನೆ ನಡೆದ ಸುಳಿವಿಲ್ಲದೆಯೇ ರೈಲು ಲಾಹೋರ್ ಪ್ಲಾಟ್‌ಫಾರಂನಿಂದ ಚಲಿಸಿತು. ಶಸ್ತ್ರಸಜ್ಜಿತ ಸಿಬ್ಬಂದಿ ಸರಸರನೆ ಅವರನ್ನು ಪೊಲೀಸ್ ಜೀಪಿಗೆ ನೂಕಿ ಲಾಹೋರ್ ಕೋಟೆಯತ್ತ ಕೊಂಡೊಯ್ದಿತು. ೧೯೪೩ರ ಡಿಸೆಂಬರ್ ೧೪ ರಂದು ಅವರನ್ನು 'ರಾಜ್ಯ ಸೆರೆಯಾಳು' ಎಂದು ಘೋಷಿಸಿ ಸರ್ಕಾರ ವಿಚಾರಣೆಗೆ ಆದೇಶ ನೀಡಿತು.

ಸೆರೆಮನೆಯಲ್ಲಿ ಚಿತ್ರಹಿಂಸೆ

ಲಾಹೋರ್ ಕೋಟೆ—ಅದೊಂದು ಚಕ್ರವ್ಯೂಹದಂತಿರುವ ಬೃಹತ್ ರಚನೆ. ಅದರೊಳಗೊಂದು ವಿಶಾಲ ಸೆರೆಮನೆ. ಚಿತ್ರಹಿಂಸೆ ನೀಡುವ ವಿವಿಧ ವಿಧಾನಗಳಲ್ಲಿ ಪರಿಣತರಾದ ಒಂದು ತಂಡವೇ ಅಲ್ಲಿತ್ತು. ಕೋಟೆಯ ಸುತ್ತಲೂ ಶಸ್ತ್ರಸಜ್ಜಿತರಾದ ನೂರಾರು ಪೋಲಿಸರ ಭದ್ರ ಪಹರೆ ಇತ್ತು. ಜಯಪ್ರಕಾಶರನ್ನು ಸೆರೆಮನೆಯ ಇಕ್ಕಟ್ಟಾದ ಒಂದು ಕೋಣೆಯೊಳಕ್ಕೆ ತಳ್ಳಿ ಬಾಗಿಲು ಹಾಕುವ ಮುನ್ನ ಅಧಿಕಾರಿಯೊಬ್ಬ ಎಚ್ಚರಿಕೆ ನೀಡಿದ: "ಇದು ನೇಪಾಳ ಅಲ್ಲ ಅನ್ನುವುದನ್ನು ನೆನಪಿಟ್ಟುಕೋ. ಇಲ್ಲಿ ಸಾವಿರದ ಆರುನೂರು ಜನರ ಭದ್ರ ಪಹರೆ ಇದೆ. ಯಾವುದೇ ದುಸ್ಸಾಹಸ ಮಾಡಲು ಹೋಗಿ ಹತಾಶನಾಗಬೇಡ ಅಷ್ಟೆ."

ಆ ಇಕ್ಕಟ್ಟಾದ ಕೋಣೆಯಲ್ಲಿ ಜಯಪ್ರಕಾಶರನ್ನು ಒಂದು ತಿಂಗಳ ಕಾಲ ಇಡಲಾಯಿತು. ಯಾರೂ ಅವರೊಡನೆ ಮಾತನಾಡದಿರಲು ಆಜ್ಞೆ ಮಾಡಲಾಗಿತ್ತು. ಆಹಾರ ಕೊಡಲು ಕೂಡಾ ಒಮ್ಮೆಯೂ ಬಾಗಿಲು ತೆರೆಯಲಿಲ್ಲ. ಅನ್ನದ ತಟ್ಟೆಯನ್ನು ಬಾಗಿಲ ಸಂದಿಯಲ್ಲಿ ಒಳಕ್ಕೆ ತಳ್ಳಲಾಗುತ್ತಿತ್ತು. ಚಿತ್ರಹಿಂಸೆಯ ಮೊದಲ ತಂತ್ರ ಆಗಲೇ ಆರಂಭವಾಗಿತ್ತು.

ನಂತರ ವಿಚಾರಣೆ ಆರಂಭವಾಯಿತು. ಪೊಲೀಸರು ಯಾವುದೇ ಪ್ರಶ್ನೆ ಹಾಕುವ ಮುನ್ನವೇ ಜಯಪ್ರಕಾಶ್ ಸ್ಪಷ್ಟ ಶಬ್ದಗಳಲ್ಲಿ ಹೇಳಿದರು: "ಹೇಳುವುದಕ್ಕೆ ನನ್ನಲ್ಲಿ ಅಂತಹ ಯಾವುದೇ ಅಮೂಲ್ಯ ವಿಷಯಗಳಿಲ್ಲ. ನನ್ನ ಇತ್ತೀಚಿನ ಗುಪ್ತ ಚಟುವಟಿಕೆಗಳ ಹೊರತಾಗಿ ನಿಮ್ಮ ಮತ್ತಾವುದೇ ಪ್ರಶ್ನೆಗೆ ನಾನು ಉತ್ತರಿಸಬಲ್ಲೆನಷ್ಟೆ. ಇದನ್ನು ನೆನಪಿನಲ್ಲಿಡಿ, ನಾನು ಬ್ರಿಟಿಷ್ ಸಾಮ್ರಾಜ್ಯದ ಶತ್ರು. ಆದರೆ ಬ್ರಿಟನ್ ದೇಶದ ಬಗ್ಗೆ ನನಗಾವ ದ್ವೇಷವೂ ಇಲ್ಲ. ನಾನು ನನ್ನ ನಾಡಿನ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುತ್ತಿರುವೆ. ಅದು ದೊರೆಯುವವರೆಗೂ ಅಥವಾ ನಾನು ಸಾಯುವವರೆಗೂ ನನ್ನ ಈ ಹೋರಾಟ ಮುಂದುವರಿಯುತ್ತದೆ—ಇಷ್ಟೆ."

ವಿಚಾರಣೆಗೆ ಬಂದಿದ್ದ ಪೊಲೀಸರು ಹೇಳಿದರು: "ನೀನು ನಮಗೆ ಬೇಕಾದ ಸುದ್ದಿ ಕೊಡುವವರೆಗೂ ನಿನ್ನನ್ನು ಬಿಡುವುದಿಲ್ಲ."

ಜಯಪ್ರಕಾಶ್ ಸವಾಲು ಹಾಕಿದರು: "ಹಾಗೋ? ನೋಡೇಬಿಡೋಣ."

ವಿಚಾರಣೆ ಮುಂದುವರಿಯಿತು. ಜಯಪ್ರಕಾಶ್ ತುಟಿ ಎರಡು ಮಾಡಲಿಲ್ಲ. ಸ್ಟೂಲೊಂದರ ಮೇಲೆ ಕುಳ್ಳಿರಿಸಿ ಅವರನ್ನು ಸರಪಳಿಗಳಿಂದ ಕಟ್ಟಿ ಹಾಕಿ, ಒಂದೇ ಸಮನೆ ಪ್ರಶ್ನೆಗಳನ್ನು ಹಾಕತೊಡಗಿದರು. ಮಾತನಾಡದಿದ್ದಾಗ ಕಪಾಳಕ್ಕೆ ಬಾರಿಸಿದರು. ಅಲ್ಲಿಗೂ ಬಾಯಿ ಬಿಡದಿದ್ದಾಗ, ನೆಲಮಾಳಿಗೆಗೊಯ್ದು ಕತ್ತಲೆ ಮನೆಯಲ್ಲಿ ಉರುಳಾಡಿಸಿ ಬೆತ್ತಗಳಿಂದ ಹೊಡೆಯುವ ಬೆದರಿಕೆ ಹಾಕಿದರು. ಈ ಶಿಕ್ಷೆಗೆ ಒಳಗಾಗಿದ್ದ ಜನರ ಚೀತ್ಕಾರಗಳ ಕಡೆ ಅವರ ಗಮನ ಸೆಳೆದರು. ಜಯಪ್ರಕಾಶ್ ಪೊಲೀಸರ ಕಡೆ ನಿರ್ಲಕ್ಷ್ಯದ, ತಿರಸ್ಕಾರದ ನಗೆಯೊಂದನ್ನು ಎಸೆದುದನ್ನು ಬಿಟ್ಟು ಮತ್ತೇನೂ ಮಾಡಲಿಲ್ಲ.

ಆ ಹೊತ್ತಿಗೆ ಲೋಹಿಯಾ, ಪಟವರ್ಧನ್, ರಮಾನಂದರ ಮಿಶ್ರ, ಅರುಣಾ ಆಸಿಫ್ ಅಲಿ ಮುಂತಾದವರನ್ನು ಸಹ ಹಿಡಿದು ಲಾಹೋರ್ ಕೋಟೆಯ ಸೆರೆಮನೆಗೆ ತರಲಾಗಿತ್ತು.

ಈ ಸುದ್ದಿಯನ್ನು ಜಯಪ್ರಕಾಶರಿಗೆ ತಿಳಿಸಿ, ಅವರನ್ನು ಹತಾಶಗೊಳಿಸುವ ಪ್ರಯತ್ನವನ್ನು ಮಾಡಲಾಯಿತು. ಜಯಪ್ರಕಾಶ್ ಬಾಯಿ ಬಿಡದಿದ್ದರೂ, ಲೋಹಿಯಾ, ಪಟವರ್ಧನ್ ಅವರಿಗೆ ನೀಡಲಾಗುತ್ತಿರುವ ಚಿತ್ರಹಿಂಸೆಯಿಂದ ಅವರಿಬ್ಬರೂ ಭೂಗತ ಚಟುವಟಿಕೆಗಳ ಬಗ್ಗೆ ಎಲ್ಲ ಮಾಹಿತಿಯನ್ನೂ ಬಹಿರಂಗಗೊಳಿಸುತ್ತಾರೆ ಎಂದು ಕೂಡ ಹೆದರಿಸಲಾಯಿತು. ಕೊನೆಗೆ ಲೋಹಿಯಾ ಮತ್ತು ಸಂಗಡಿಗರ ತಪ್ಪೊಪ್ಪಿಗೆ ಪತ್ರಗಳೆಂದು ಹೇಳಲಾದ ಸುಳ್ಳು ದಾಖಲೆಗಳನ್ನು ಅವರ ಮುಂದೆ ಓದಿ ಹೇಳಲಾಯಿತು. ಜಯಪ್ರಕಾಶ್ ಇದಾವುದಕ್ಕೂ ಜಗ್ಗದಿದ್ದಾಗ, ಅವರ ಮಾನಸಿಕ ಸಮಸ್ಥಿತಿಯನ್ನು ಕೆಡಿಸುವ ಯೋಜನೆಯನ್ನು ಮಾಡಲಾಯಿತು. ಒಂದಾದರ ಮೇಲೊಂದರಂತೆ ವಿಚಾರಣಾ ತಂಡಗಳು ಅವರನ್ನು ದಿನವಿಡೀ ಎದುರಿಗೆ ಕೋಳ ತೊಡಿಸಿ ಕೂರಿಸಿಕೊಂಡು ಪ್ರಶ್ನೆಗಳನ್ನು ಹಾಕತೊಡಗಿದರು. ಮಲಮೂತ್ರ ವಿಸರ್ಜನೆಯ ಕಾಲಾವಧಿಯನ್ನುಳಿದು ಮಿಕ್ಕೆಲ್ಲಾ ಕಾಲವೂ ಅವರನ್ನು ಎಚ್ಚರದಲ್ಲಿಡಲಾಯಿತು. ಹತ್ತು ದಿನಗಳ ಕಾಲ ನಿರಂತರವಾಗಿ ಅವರಿಗೆ ನಿದ್ದೆ ಇಲ್ಲದಂತೆ ಬಳಲಿಸಲಾಯಿತು. ಒಂದು ತಂಡ "ಇವತ್ತಿಗೆ ಸಾಕು ಮಲಗು ಹೋಗು" ಎಂದು ಅವರನ್ನು ಮಲಗಲು ಕಳಿಸಿದ ಕೆಲವೇ ನಿಮಿಷಗಳಲ್ಲಿ ಮತ್ತೊಂದು ತಂಡ ಬಂದು ಇನ್ನಷ್ಟು ಪ್ರಶ್ನೆಗಳೊಡನೆ ಅವರನ್ನು ಎಬ್ಬಿಸುತ್ತಿತ್ತು. ಕುಳಿತಲ್ಲಿಯೇ ನಿದ್ದೆ ಮಾಡತೊಡಗಿದರೆ ಕಪಾಳಕ್ಕೆ ಬಾರಿಸಲಾಗುತ್ತಿತ್ತು. ನಿದ್ದೆ ಕೆಡಿಸಿ, ಆಹಾರ ಕೊಡದೆ ಅವರ ಮಾನಸಿಕ ಸ್ಥಿತಿಯನ್ನು ಹದಗೆಡಿಸುವ ಈ ಯೋಜನೆ ಉದ್ದೇಶಪೂರ್ವಕ ವಾಗಿತ್ತು.

ಈ ಮಧ್ಯೆ ಜಯಪ್ರಕಾಶರನ್ನು ಬೆತ್ತಲೆಗೊಳಿಸಿ ಎರಡು ದಿನಗಳ ಕಾಲ ಹಿಮಗಡ್ಡೆಯ ಮೇಲೆ ಮಲಗಿಸಿದರೆಂಬ ಸುದ್ದಿ ಸೆರೆಮನೆಯನ್ನು ದಾಟಿ ಹಬ್ಬಿತು. ಮತ್ತೆ ದೇಶಾದ್ಯಂತ ಪ್ರತಿಭಟನೆಗಳು ಆರಂಭವಾದವು. ಮೀನೂ ಮಸಾನಿಯವರ ಸಲಹೆಯ ಮೇರೆಗೆ ಮುಂಬೈನ ವಕೀಲರೊಬ್ಬರು ಜಯಪ್ರಕಾಶರ ಪರವಾಗಿ ಬಂದಿ ಪ್ರತ್ಯಕ್ಷೀಕರಣ ಅರ್ಜಿಯನ್ನು (ಹೇಬಿಯಸ್ ಕಾರ್ಪಸ್) ಸಲ್ಲಿಸಿದರು. ಮರುದಿನವೇ ಆ ವಕೀಲರನ್ನು ಬಂಧಿಸಿ ಲಾಹೋರ್ ಕೋಟೆಗೆ ಒಯ್ಯಲಾಯಿತು. ಇದರಿಂದಾಗಿ ಪ್ರತಿಭಟನೆಗಳು ಮತ್ತಷ್ಟು ಹೆಚ್ಚಿದವು. ಸರ್ಕಾರ ಈ ಬಗ್ಗೆ ತನಿಖೆಯೊಂದನ್ನು ನಡೆಸುವುದು ಅನಿವಾರ್ಯವಾಯಿತು. ಲಾಹೋರ್‌ನ ನ್ಯಾಯಾಲಯವು ವಕೀಲರನ್ನು ದಸ್ತಗಿರಿ ಮಾಡಿದ ಸರ್ಕಾರದ ಕ್ರಮವನ್ನು ಖಂಡಿಸಿತು ಮತ್ತು ವಕೀಲರನ್ನು ಬಿಡುಗಡೆ ಮಾಡುವಂತೆ ಆಜ್ಞೆ ಮಾಡಿತು. ಜಯಪ್ರಕಾಶರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ಜಯಪ್ರಕಾಶರನ್ನು ಹೇಗೆ ನೋಡಿಕೊಳ್ಳ ಬೇಕೆಂಬ ಬಗ್ಗೆ ನ್ಯಾಯಾಧೀಶರು ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ನೀಡಿದರು. ಈ ಎಲ್ಲದರಿಂದಾಗಿ ಜಯಪ್ರಕಾಶರಿಗೆ ನೀಡುತ್ತಿದ್ದ ಚಿತ್ರಹಿಂಸೆಯನ್ನು ನಿಲ್ಲಿಸುವುದು ಅನಿವಾರ್ಯವಾಯಿತು. ಆದರೆ ಈ ಹೊತ್ತಿಗೆ ಜಯಪ್ರಕಾಶ್ ಪೊಲೀಸರ ವಿಚಿತ್ರ ಹಿಂಸೆಗಳಿಗೆ ಸಿಕ್ಕಿ ಅರೆಜೀವವಾಗಿದ್ದರು. ಲೋಹಿಯಾ ಮತ್ತು ರಮಾನಂದನ ಮಿಶ್ರ ಅವರ ಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿತ್ತು. ಸತತವಾಗಿ ಹತ್ತು ದಿನಗಳ ಕಾಲ ನಿದ್ರೆಗೆ ಅವಕಾಶ ಕೊಡದೆ, ಆಹಾರ ಒದಗಿಸದೆ

ಲೋಹಿಯಾರನ್ನು ಬೆತ್ತಗಳಿಂದ ಬಡಿದು ಕುಸಿಯುವಂತೆ ಮಾಡಲಾಗಿತ್ತು.* ರಮಾನಂದನ ಮಿಶ್ರರನ್ನಂತೂ ಹೆಚ್ಚು ಕಡಿಮೆ ಕೊಂದೇ ಹಾಕಲಾಗಿತ್ತು. ಪೊಲೀಸರ ಲಾಠಿ ಏಟುಗಳನ್ನು ತಡೆಯಲಾರದೆ ಅವರು ಹಲವಾರು ಬಾರಿ ಪ್ರಜ್ಞಾಶೂನ್ಯರಾಗಿದ್ದರು. ಗಾಯಗಳ ಗುರುತು ಬೀಳದಂತೆ ಅವರ ಸೊಂಟಕ್ಕೆ ಕಂಬಳಿ ಸುತ್ತಿ ಪೊಲೀಸರು ಅವರಿಗೆ ಬೂಟುಗಾಲುಗಳಲ್ಲಿ ಒದ್ದು ಉರುಳಾಡಿಸಿದ್ದರು. ಒಮ್ಮೆ ಸೆರೆಮನೆಯ ವೈದ್ಯರ ಮುಂದೆಯೇ ಅವರು ಪೊಲೀಸರ ಒದೆತಗಳಿಗೆ ಸಿಕ್ಕಿ ಪ್ರಜ್ಞೆ ಕಳೆದುಕೊಂಡಿದ್ದರು. ಆಗಲೂ ಕೂಡಾ ಅವರಿಗೆ ಚಿಕಿತ್ಸೆ ನಿರಾಕರಿಸಲಾಗಿತ್ತು.

ಬಿಚ್ಚಲ್ಪಟ್ಟ ಬೇಡಿಗಳು - ಅವಿಸ್ಮರಣೀಯ ಕ್ಷಣ

ಜಯಪ್ರಕಾಶರನ್ನು ಈಗ ಮೆದು ರೀತಿಯಲ್ಲಿ ಪ್ರಶ್ನಿಸುವ ತಂತ್ರ ಆರಂಭವಾಯಿತು. ಕೆಲವರು ಅವರ ದಿಟ್ಟತನವನ್ನು, ಅನುಪಮ ದೇಶಪ್ರೇಮವನ್ನು ವಿಧವಿಧವಾಗಿ ವರ್ಣಿಸಿ, ಯುಕ್ತಿಯ ಮೂಲಕ ಅವರಿಂದ ಉತ್ತರಗಳನ್ನು ಪಡೆಯುವ ಪ್ರಯತ್ನಗಳನ್ನು ಮಾಡಿದರೆ, ಕೆಲವರು ಅವರಿಂದ ಉತ್ತರ ಪಡೆಯದೇ ಹೋದರೆ ತಮ್ಮ ಕೆಲಸಗಳನ್ನು ಕಳೆದುಕೊಳ್ಳ ಬೇಕಾಗುತ್ತದೆಂದು ಮೊರೆಯಿಟ್ಟು ಕೈಜೋಡಿಸಿ ಬೇಡಿಕೊಳ್ಳುವ ನಾಟಕಗಳನ್ನು ಹೂಡಿದರು. ಜಯಪ್ರಕಾಶರು ಎಲ್ಲಕ್ಕೂ ಮೌನವಾಗಿದ್ದಾಗ, ಹಜಾರಿಬಾಗ್‌ನಲ್ಲಿ ಮಾಡಿದಂತೆ ಇಲ್ಲಿಯೂ ಪಲಾಯನ ಮಾಡುವುದಿಲ್ಲವೆಂದಾದರೂ ಮಾತು ಕೊಡಬೇಕೆಂದು ಪೊಲೀಸರು ಒತ್ತಾಯಿಸಿದರು. ಜಯಪ್ರಕಾಶರು ಇಂತಹ ಮಾತು ಕೊಡಲು ನಿರಾಕರಿಸಿದಾಗ ಅವರ ಕಾಲುಗಳಿಗೂ ಸಹ ಬೇಡಿಗಳನ್ನು ತೊಡಿಸಲಾಯಿತು. ಕೈಕಾಲುಗಳೆರಡಕ್ಕೂ ಬೇಡಿಗಳನ್ನು ತೊಟ್ಟು ಖೈದಿಗಳಿಗೆ ಕಡ್ಡಾಯವಾಗಿದ್ದ ಬೆಳಗಿನ ವ್ಯಾಯಾಮ ಅಭ್ಯಾಸಕ್ಕೆ ಬರಬೇಕೆಂದು ಸೂಚಿಸಿದಾಗ, ಅವರು ತಮ್ಮ ಕೋಣೆಯಿಂದ ಹೊರಬರುವುದಕ್ಕೆ ನಿರಾಕರಿಸಿದರು. ಪೊಲೀಸರು ಒಂದೆರಡು ಬಾರಿ ಅವರನ್ನು ವ್ಯಾಯಾಮಕ್ಕೆ ಬಲವಂತವಾಗಿ ಹೊತ್ತುಕೊಂಡು ಹೋದರಾದರೂ, ಕೊನೆಗೊಂದು ದಿನ ಅವರ ಕಾಲುಗಳಿಗೆ ಹಾಕಿದ್ದ ಬೇಡಿಗಳನ್ನು ಬಿಚ್ಚಲೇ ಬೇಕಾಯಿತು.

ಜಯಪ್ರಕಾಶರ ಛಲವನ್ನು ಒಂದಿಷ್ಟು ಅಲುಗಿಸಲಾಗದ ಪೊಲೀಸರು ಕೊನೆಗೊಂದು ದಿನ ಅವರನ್ನು "ನಿಷ್ಪ್ರಯೋಜಕ" ಎಂದು ಹೇಳಿ, ವಿಚಾರಣೆಯಿಂದ ಮುಕ್ತಗೊಳಿಸಿದರು. ಆ ಮೂಲಕ ಅವರ ಏಕಾಂತ ಸೆರೆವಾಸವೂ ಕೊನೆಗೊಂಡಿತ್ತು. ಹನ್ನೊಂದು ತಿಂಗಳುಗಳ ಕಾಲ ಯಾವ ಆತ್ಮೀಯತೆಯನ್ನೂ ಕಾಣದೆ ಆ ಸಣ್ಣ ಕೋಣೆಯೊಂದರಲ್ಲಿ ಏಕಾಂಗಿಯಾಗಿ ಒಳಗೊಳಗೇ ಕುಸಿದುಹೋಗುತ್ತಿದ್ದ ಜಯಪ್ರಕಾಶ್ ಒಂದು ಸಂಜೆ, ಅನಿರೀಕ್ಷಿತವಾಗಿ ಕಾವಲುಗಾರರು ತಮ್ಮ ಕೋಣೆಯ ಸರಳುಗಳ ಬಾಗಿಲಿನ ಬೀಗವನ್ನು ತೆಗೆಯಬಂದಾಗ, ಎದುರಿಗೆ ಕೃಶಕಾಯರಾದ; ಆದರೆ "ಕನ್ನಡಕ ಗಾಜುಗಳೊಳಗಿಂದ ಎಂದಿನ ಪ್ರಕಾಶದೊಡನೆ

---

* ವಿವರಗಳಿಗೆ ಲೋಹಿಯಾ ಅವರ **ರಾಜಕೀಯದ ಮಧ್ಯೆ ಬಿಡುವು** ಕೃತಿಯಲ್ಲಿನ 'ಯೋಗದಲ್ಲಿ ಒಂದು ಅಧ್ಯಾಯ' ಲೇಖನವನ್ನು ಗಮನಿಸಿ.

ಮಿನುಗುತ್ತಿದ್ದ ಕಣ್ಣುಗಳ" ಡಾ. ರಾಮಮನೋಹರ ಲೋಹಿಯಾ ಅವರನ್ನು ಕಂಡರು. ಅದು 'ಮಾನವ, ಮಾನವ ಲೋಕಕ್ಕೆ ಹಿಂತಿರುಗಿ ಬಂದ' ಕ್ಷಣವಾಗಿತ್ತು. "ಈ ಕ್ಷಣ ನನ್ನ ಬದುಕಿನ ಒಂದು ಅವಿಸ್ಮರಣೀಯ ಕ್ಷಣ"ವೆಂದು ಜಯಪ್ರಕಾಶರು ಹೇಳುತ್ತಾರೆ.

ಇನ್ನೂ ಅರ್ಥವಾಗದ ಗಾಂಧಿವಾದ

ಈ ಮಧ್ಯೆ ಸರ್ಕಾರವು ಬಲಪ್ರಯೋಗದ ಮೂಲಕ 'ಮಾಡು ಇಲ್ಲವೇ ಮಡಿ' ಚಳುವಳಿಯನ್ನು ಹತ್ತಿಕ್ಕಿ; ಹಿಂಸಾಚಾರವನ್ನು ತಾವು ಖಂಡಿಸಿದ ಹೇಳಿಕೆಯನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡದೆ ಕಾಂಗ್ರೆಸ್ ಕುರಿತು ಸಲ್ಲದ ಅಪಪ್ರಚಾರದಲ್ಲಿ ತೊಡಗಿರುವ ಸರ್ಕಾರದ ವಿರುದ್ಧ ಪ್ರತಿಭಟನೆಯಾಗಿ ಹಾಗೂ ಮಹಮ್ಮದಾಲಿ ಜಿನ್ನಾರ ಪಾಕಿಸ್ತಾನ್‌ವಾದ ಮತ್ತು ಅಂಬೇಡ್ಕರರ ದಲಿತವಾದಗಳಿಂದ ಜಟಿಲಗೊಂಡಿದ್ದ ಸ್ವಾತಂತ್ರ್ಯದ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಗಾಂಧೀಜಿ ತಮ್ಮ ಆತ್ಮ ಪರಿವೀಕ್ಷಣೆಗಾಗಿ ಸೆರೆಮನೆಯಲ್ಲಿ ೨೧ ದಿವಸಗಳ ಉಪವಾಸ ಕೈಗೊಂಡಿದ್ದರು. ನಂತರ ತೀವ್ರ ಅಸ್ವಸ್ಥತೆಯ ಕಾರಣದಿಂದ ಸೆರೆಮನೆಯಿಂದ ಬಿಡುಗಡೆಗೊಂಡು ಮುಂಬೈನ ಜುಹೂನ ಕುಟೀರವೊಂದರಲ್ಲಿ ವಿಶ್ರಾಂತಿಯಲ್ಲಿದ್ದರು. ಅವರು ಆರ್. ಆರ್. ದಿವಾಕರರ ಮೂಲಕ ಭೂಗತ ಸಮಾಜವಾದಿಗಳ ಬಂಡಾಯಕ್ಕೆ ಬೆಂಬಲ ಸೂಚಿಸುವಂತೆ ತಮ್ಮನ್ನು ಕೋರಲು ಭೇಟಿಮಾಡಿದ ಅಚ್ಯುತಪಟವರ್ಧನ್, ಅರುಣಾ ಅಸೀಫ್ ಆಲಿ ಮುಂತಾದ ಕಾಂಗ್ರೆಸ್ ಸಮಾಜವಾದಿಗಳಿಗೆ ಹಿಂಸಾಕೃತ್ಯಗಳನ್ನು ತೊರೆದು ಭೂಗತಲೋಕದಿಂದ ಹೊರಬರುವಂತೆ ಸೂಚಿಸಿದ್ದರು. ಕಾಂಗ್ರೆಸ್ ಸಮಾಜವಾದಿಗಳ ಬುಡಮೇಲು ಕೃತ್ಯಗಳನ್ನು ತಾವು ಒಪ್ಪುವುದಿಲ್ಲವೆಂದೂ, ಸತ್ಯಾಗ್ರಹಿ ಗುಟ್ಟಾಗಿ ಬಚ್ಚಿಟ್ಟುಕೊಂಡು ಪ್ರತಿಭಟನೆ ಮಾಡುವುದಿಲ್ಲ; ಇತರರಿಗೆ ಹಿಂಸೆ ನೀಡುವುದಿಲ್ಲ. ಆತನ ಚಟುವಟಿಕೆಗಳೇನಿದ್ದರೂ ನೇರ, ಬಹಿರಂಗವಾಗಿರತಕ್ಕದ್ದು. ಸಾರ್ವಜನಿಕ ಜೀವನದಲ್ಲಿ ಗುಟ್ಟು-ರಹಸ್ಯ ಚಟುವಟಿಕೆ ಮುಂತಾದವುಗಳು ಪಾಪಕೃತ್ಯಗಳು ಎನಿಸಿಕೊಳ್ಳುವುದು ಎಂದು ಸಾರಿದ್ದರು. ಅಲ್ಲದೆ, ಜಯಪ್ರಕಾಶ್ ಮತ್ತು ಅವರ ಗೆಳೆಯರ ದೇಶಪ್ರೇಮ, ಧೈರ್ಯ-ಸಾಹಸ-ತ್ಯಾಗಗಳನ್ನು ಅಪ್ರತಿಮವೆಂದು ಒಪ್ಪಿಕೊಳ್ಳುತ್ತಲೇ, ಸದ್ಯದ ಹೋರಾಟದಲ್ಲಿ ತಾವು ಜಯಪ್ರಕಾಶರಿಗಿಂತ ಅವರ ಪತ್ನಿಯನ್ನು ಹೆಚ್ಚು ಕ್ರಾಂತಿಕಾರಿ—ಏಕೆಂದರೆ ಆಕೆ ಓರ್ವ ಅಬಲೆಯಾಗಿ ಪ್ರಭುತ್ವದ ವಿರುದ್ಧ ಬಹಿರಂಗ ಪ್ರತಿಭಟನೆ ಮಾಡಿ ಸೆರೆಮನೆವಾಸ ಅನುಭವಿಸುತ್ತಿದ್ದಾಳೆ ಎಂದು ಗಾಂಧೀಜಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಜೊತೆಗೆ ಅಚ್ಯುತ ಪಟವರ್ಧನರಿಗೆ ಬ್ರಿಟಿಷ್ ಸರ್ಕಾರಕ್ಕೆ ಶರಣಾಗಿ ಆ ಮೂಲಕ ಬರುವ ಬಹುಮಾನದ ಹಣವನ್ನು ಹರಿಜನ ಸೇವಕ ಸಂಘಕ್ಕೆ ನೀಡಲೂ ಸಲಹೆ ಮಾಡಿದ್ದರು. ಒಲ್ಲದ ಮನಸ್ಸಿನಿಂದ ಪಟವರ್ಧನರು ಭೂಗತ ಚಟುವಟಿಕೆಗಳಿಂದ ಹಿಂದೆಗೆದಿದ್ದರು. ಆದರೂ, ನಂತರ ಅವರ ಬಂಧನವಾಗಿತ್ತು.

ಇದನ್ನು ಪತ್ರಿಕೆಯ ಮೂಲಕ ತಿಳಿದ ಜಯಪ್ರಕಾಶರಿಗೆ ಸಹಜವಾಗಿಯೇ ಕಿರಿಕಿರಿ ಎನ್ನಿಸಿತ್ತು. ಅದಕ್ಕಿಂತ ಮುಖ್ಯವಾಗಿ ಗಾಂಧೀಜಿ, ಕಾದಾಗ ಕಬ್ಬಿಣ ಬಡಿಯದೆ ಅಹಿಂಸೆಯ

ಪುರಾಣ ಹೇಳಿಕೊಂಡು ಬ್ರಿಟಿಷರೊಂದಿಗೆ ಸ್ವಾತಂತ್ರ್ಯದ 'ಚೌಕಾಶಿ' ನಡೆಸಲಾರಂಭಿಸಿದರೆ ಕೊನೆಗೆ ದೊರಕುವ ಸ್ವಾತಂತ್ರ್ಯವಾದರೂ ಯಾವ ಬಗೆಯದಾಗಿರಬಹುದು ಎಂಬ ಬಗ್ಗೆ ಆತಂಕಗೊಳ್ಳತೊಡಗಿದ್ದರು. ಜಯಪ್ರಕಾಶರಿಗೆ ಗಾಂಧೀಜಿ ಬಗೆದಷ್ಟೂ ಬಿರಿಯುತ್ತಾ ಹೋಗುವ ಒಗಟಾಗಿ ಪರಿಣಮಿಸಿದ್ದರು. ೧೯೪೦ರ ರಾಮಗಢದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮುಂದಿರಿಸಲು ಜಯಪ್ರಕಾಶರು ಸಿದ್ಧಪಡಿಸಿದ್ದ ಕರಡು ನಿರ್ಣಯವನ್ನು ಗಾಂಧೀಜಿ ಸಂಪೂರ್ಣವಾಗಿ ಅನುಮೋದಿಸಿದ್ದರು. ಅದರಲ್ಲಿ ಪ್ರತಿಯೊಬ್ಬ ಪ್ರಜೆಗೂ ಸಮಾನ ಹಕ್ಕು, ಸಣ್ಣ ಹಾಗೂ ಬೃಹತ್ ಕೈಗಾರಿಕೆಗಳ ಸಹಕಾರಿ ಒಡೆತನ, ಸರಾಸರಿ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಹೊಂದಿದ ಕುಟುಂಬಗಳಿಂದ ಭೂಮಿ ಪಡೆದು ಭೂಮಿಯ ಮರುವಿತರಣೆ ಮಾಡುವ ಮೂಲಕ ಜಮೀನ್ದಾರಿ ಪದ್ಧತಿಯ ನಾಶ ಮುಂತಾದ ಕಾರ್ಯಕ್ರಮಗಳು ಒಳಗೊಂಡಿದ್ದವು. ಹೀಗೆ ಸಮಾಜವಾದಿಯಂತೆಯೇ ಸಾಮಾನ್ಯರ ಏಳಿಗೆಯೊಂದಿಗೆ ಗುರುತಿಸಿಕೊಂಡಿದ್ದ ಗಾಂಧೀಜಿ, ಈಗ ಇದೇ ಜನಸಾಮಾನ್ಯರು ಬ್ರಿಟಿಷ್ ಪ್ರಭುತ್ವದ ದಮನಕಾರಿ ವ್ಯವಸ್ಥೆಯಡಿ ನಲುಗಿಹೋಗುತ್ತಿರುವ ಪದೇ ಪದೇ ವಿಶ್ವಾಸ ದ್ರೋಹ ಮಾಡಿರುವ ಸಂದರ್ಭದಲ್ಲಿ ಬ್ರಿಟಿಷರೊಂದಿಗೆ ಮಾತುಕತೆಯಲ್ಲಿ ತೊಡಗಲಾರಂಭಿಸಿರುವುದು ಅವರಿಗೆ ಅರ್ಥವಾಗದ ವಿಷಯವಾಯಿತು. ಗಾಂಧೀಜಿಗೆ ಅಹಿಂಸೆ ಎಂಬುದು ಗುರಿ ಮತ್ತು ಮಾರ್ಗ ಎರಡೂ ಆಗಿದ್ದ ಅಖಂಡ ಧರ್ಮವೇ ಆಗಿತ್ತು ಎಂಬುದು ಅಹಿಂಸೆಯನ್ನು ಸಂದರ್ಭಾನುಸಾರ ಒಪ್ಪುವ-ಬಿಡುವ ಒಂದು ನೀತಿಮಾತ್ರವೆಂಬ ನೆಲೆಯಲ್ಲಷ್ಟೇ ಗ್ರಹಿಸಿದ್ದ ಜಯಪ್ರಕಾಶರಿಗೆ ಇನ್ನೂ ಮನವರಿಕೆಯಾಗಿರಲಿಲ್ಲ.

■

೬. ಸ್ವಾತಂತ್ರ್ಯದ ಅರುಣೋದಯ : ಗಾಂಧೀಜಿಯೊಂದಿಗೆ ಮುಖಾಮುಖಿ

೧೯೪೫ರ ಹೊತ್ತಿಗೆ ಎರಡನೆಯ ವಿಶ್ವಯುದ್ಧ ಮುಗಿದು ಚರ್ಚಿಲ್ ನೇತೃತ್ವದ ಬ್ರಿಟನ್ ಗೆದ್ದು ಸೋತುಹೋಗಿತ್ತು. ಅದು, ಬಂಗಾಳದ ಕ್ಷಾಮದ ಪರಿಣಾಮಗಳಾದ ಬೆಲೆಏರಿಕೆ, ನಿರುದ್ಯೋಗ ಮತ್ತು ನಿರಂತರ ಬುಡಮೇಲು ಕೃತ್ಯಗಳು ಉಂಟುಮಾಡುತ್ತಿದ್ದ ವ್ಯಾಪಕ ಸಾರ್ವಜನಿಕ ಅಶಾಂತಿಯನ್ನು, ಬಂಡಾಯವೇಳತೊಡಗಿದ್ದ ಭಾರತದ ಸೇನೆ ಹಾಗೂ ಪೊಲೀಸರ ಮೂಲಕ ತಹಬಂದಿಗೆ ತರುವಲ್ಲಿ ವಿಫಲಗೊಂಡಿತ್ತು. ಈ ಎಲ್ಲ ಕಾರಣಗಳಿಂದ ನಿರ್ವಹಿಸಲಾಗದಂತಹ ದೇಶವಾಗಿದ್ದ ಭಾರತಕ್ಕೆ ಅಮೆರಿಕಾದ ಅಧ್ಯಕ್ಷರ ಒತ್ತಡ ಹಾಗೂ ತನ್ನ ದೇಶದ ಬುದ್ಧಿಜೀವಿಗಳ ಆಗ್ರಹಕ್ಕೆ ಮಣಿದು, ಸ್ವಾತಂತ್ರ್ಯ ನೀಡುವ ಉದಾರ ನಿರ್ಧಾರಕ್ಕೆ ಬಂದಿತ್ತು. ಇದರ ಅಂಗವಾಗಿ, ಹಿಂಸಾಚಾರದ ಆಪಾದನೆಗಳಿರದ ಎಲ್ಲ ಕಾಂಗ್ರೆಸ್ಸಿಗರನ್ನು ಬಿಡುಗಡೆ ಮಾಡಲಾಯಿತು. ಅದು ಭಾರತದ ವೈಸರಾಯ್ ವೇವಲ್‌ರನ್ನು ಮಾತುಕತೆಗೆ ಕರೆಸಿಕೊಂಡು, ನೆಹರೂ ಅವರನ್ನು ಸ್ವಾತಂತ್ರ್ಯ ನೀಡಿಕೆ ಕುರಿತ ಪೂರ್ವಭಾವಿ ಮಾತುಕತೆಗಳಿಗಾಗಿ ರಚಿಸಲಾದ ವೈಸರಾಯ್‌ರ ಕಾರ್ಯಕಾರಿ ಸಮಿತಿಗೆ ಉಪಾಧ್ಯಕ್ಷರನ್ನಾಗಿ ನೇಮಿಸಲಾಯಿತು.

ಕ್ರಿಪ್ಸ್ ನಿಯೋಗದ ಆಗಮನ

ಆದರೆ ಇನ್ನೂ ಸೆರೆಮನೆಯಲ್ಲಿದ್ದ ಜಯಪ್ರಕಾಶರಿಗೆ ಇದೆಲ್ಲಾ ಅಸಹನೀಯವಾಗಿ ಕಂಡಿತು. ಬ್ರಿಟಿಷ್ ಸರ್ಕಾರದ ಸ್ಥೂಲ ಆಹ್ವಾನದ ಮೇಲೆ ಬಿಡುಗಡೆಹೊಂದಿ ಮಧ್ಯಂತರ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ರಚನೆಗಾಗಿ ಚುನಾವಣೆಗಳಲ್ಲಿ ಭಾಗವಹಿಸಲು ಸಿದ್ಧರಾದ ಕಾಂಗ್ರೆಸ್ಸಿಗರನ್ನು ನೆನೆದು ಅವರು ವ್ಯಥೆಪಟ್ಟರು. ಜಯಪ್ರಕಾಶ್, ಲೋಹಿಯಾ, ಮಿಶ್ರ, ಪಟವರ್ಧನ್, ಅರುಣಾ ಅಸಿಫ್ ಅಲಿ ಮುಂತಾದವರು ಇನ್ನೂ ಸೆರೆಮನೆಗಳಲ್ಲಿ ಕೊಳೆಯುತ್ತಿದ್ದರು. ಸುಭಾಷ್‌ಚಂದ್ರ ಬೋಸ್‌ರ ರಾಷ್ಟ್ರೀಯ ಸೇನೆಯ ಸೈನಿಕರನ್ನು ಬೇಟೆಯಾಡಿ ಗಲ್ಲಿಗೇರಿಸುವ ಆಜ್ಞೆಗಳು ಹೊರಬರುತ್ತಿದ್ದವು. ಹಂಗಾಮಿ ಕೇಂದ್ರ ಸರ್ಕಾರದ ಇಂತಹ ಸಂದರ್ಭದಲ್ಲಿ ನೇತೃತ್ವ ವಹಿಸಿದ್ದ ಜವಾಹರಲಾಲರ ಅಧ್ಯಕ್ಷತೆಯ ಶಾಸನಸಭೆ, ಅಧಿಕಾರ ವರ್ಗಾವಣೆಯನ್ನು ಕುರಿತ ಠರಾವುಗಳನ್ನು ಅನುಮೋದಿಸುವಲ್ಲಿ ತೊಡಗಿದ್ದಿತು. ಮೀನೂ

ಮಸಾನಿ ಮುಂತಾದ ಜಯಪ್ರಕಾಶರ ಗೆಳೆಯರಲ್ಲಿ ಕೆಲವರು ಕಾಂಗ್ರೆಸ್ ಸಮಾಜವಾದಿಗಳ ಬಂಧನವನ್ನು ಇನ್ನೂ ಮುಂದುವರಿಸಿರಿವುದರ ಬಗ್ಗೆ ನಿರ್ಣಯಗಳನ್ನು ಮಂಡಿಸಿ ಚರ್ಚೆ ನಡೆಸಿದರು. ಇಷ್ಟಾದರೂ ಜವಾಹರ್‌ಲಾಲ್ ನೆಹರೂ ಅವರು ತಮ್ಮ ಬಿಡುವಿಲ್ಲದ ಕೆಲಸಗಳ ಮಧ್ಯೆ ಜಯಪ್ರಕಾಶ್, ಲೋಹಿಯಾ ಮುಂತಾದವರ ಬಿಡುಗಡೆಯ ಬಗ್ಗೆ ಗಮನ ಹರಿಸಲಾಗಲಿಲ್ಲ. ಆದರೆ ಬೋಸ್ ಅವರ ರಾಷ್ಟ್ರೀಯ ಸೇನೆಯ ಬಂಧಿತ ಸೈನಿಕರನ್ನು ಗಲ್ಲಿಗೇರಿಸುವ ವಿಷಯವನ್ನು ಸರ್ದಾರ್ ಪಟೇಲರು ಗಾಂಧೀಜಿಯವರಿಗೆ ತಿಳಿಸಿದಾಗ ಅವರು ತಕ್ಷಣವೇ ಈ ಬಗ್ಗೆ ಸರ್ಕಾರಕ್ಕೆ ಬರೆದು, ಯಾವುದೇ ನಿರ್ಣಾಯಕ ಕ್ರಮ ಕೈಗೊಳ್ಳುವ ಮುನ್ನ ವಿಚಾರಣೆಯೊಂದನ್ನು ಏರ್ಪಡಿಸಬೇಕೆಂದು ಆಗ್ರಹಪಡಿಸಿದರು. ಅಲ್ಲದೆ ಬಂದಿಗಳ ಪರವಾಗಿ ವಾದಿಸಲು ಪ್ರತಿಭಾವಂತ ವಕೀಲರೊಬ್ಬರನ್ನು ಕಾಂಗ್ರೆಸ್ ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಆದರೆ ಈ ವಿಷಯ ಗೊತ್ತಾದೊಡನೆಯೇ, ಎಲ್ಲ ಬಂದಿಗಳನ್ನೂ ಬಿಡುಗಡೆ ಮಾಡಬೇಕೆಂದು ಸಾರ್ವಜನಿಕ ಮತಪ್ರದರ್ಶನಗಳು ದೇಶಾದ್ಯಂತ ಆರಂಭವಾದವು. ಮತ್ತೆ ನೂರಾರು ಜನ ಬ್ರಿಟಿಷ್ ಬಂದೂಕುಗಳಿಗೆ ತುತ್ತಾದರು. ಇದರಿಂದಾಗಿ ಪ್ರತಿಭಟನೆ ಮತ್ತಷ್ಟು ತೀವ್ರವಾಯಿತು. ಈ ಮಧ್ಯೆ ಬ್ರಿಟನ್ನಿನ ಚುನಾವಣೆಗಳಲ್ಲಿ ಚರ್ಚಿಲ್ ಸೋತು, ಭಾರತದ ಸ್ವಾತಂತ್ರ್ಯವನ್ನು ಬೆಂಬಲಿಸುತ್ತಿದ್ದ ಲೇಬರ್ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬಂದಿತ್ತು. ಅಟ್ಲಿ ನೇತೃತ್ವದ ಈ ಹೊಸ ಸರ್ಕಾರ ಭಾರತದಲ್ಲಿ ಹಿಂಸಾಚಾರದ ಮತ್ತೊಂದು ಅಧ್ಯಾಯವನ್ನು ತೆರೆಯಬಯಸದೆ, 'ಇಂಡಿಯಾ' ಎಂಬ ಸಮಸ್ಯೆಗೆ ನಿರ್ಣಾಯಕ ಇತ್ಯರ್ಥವೊಂದನ್ನು ರೂಪಿಸಲು, ಅಂತೂ ಸರ್‌ಸ್ಟಾಫರ್ಡ್ ಕ್ರಿಪ್ಸ್ ಅವರ ನೇತೃತ್ವದ ಕ್ಯಾಬಿನೆಟ್ ನಿಯೋಗವೊಂದನ್ನು ಕಳಿಸಿತು.

ಬಿಡುಗಡೆ-ಮತ್ತೆ ಹೋರಾಟಕ್ಕೆ ಕರೆ

ನಿಯೋಗವು ಗಾಂಧೀಜಿ ಅವರೊಡನೆ ಮಾತುಕತೆಗಳನ್ನು ನಡೆಸಿತು. ಮಾತುಕತೆಗಳು ಮುಖ್ಯವಾಗಿ ದೇಶಕ್ಕೆ ಸ್ವಾತಂತ್ರ್ಯ ನೀಡುವ ವಿಧಿ ವಿಧಾನಗಳನ್ನು ಮತ್ತು ಸ್ವಾತಂತ್ರ್ಯದ ಸ್ವರೂಪವನ್ನು ಕುರಿತಾಗಿದ್ದವು. ಅನತಿ ಕಾಲದಲ್ಲಿಯೇ ಸ್ವಾತಂತ್ರ್ಯ ಘೋಷಣೆ ಖಚಿತವಾಗಿರುವ ಪರಿಸ್ಥಿತಿಯಲ್ಲಿ, ಇದಕ್ಕಾಗಿ ಹೋರಾಡಿದ ಯಾರನ್ನೇ ಆಗಲಿ ಬಂಧನದಲ್ಲಿಟ್ಟಿರುವುದು ಯೋಗ್ಯವಲ್ಲ ಎಂದು ಗಾಂಧೀಜಿ ನಿಯೋಗಕ್ಕೆ ತಿಳಿಸಿದರು. ಹೋರಾಟಗಾರರಿನ್ನೂ ಸೆರೆಮನೆಗಳಲ್ಲಿರುವಾಗ ಸ್ವಾತಂತ್ರ್ಯದ ಮಾತೆತ್ತುವುದೂ ಅಪಹಾಸ್ಯವಾಗಿ ಕಾಣುತ್ತದೆ ಎಂದು ಅವರು ವಿವರಿಸಿದರು. ಗಾಂಧೀಜಿಯವರ ವಾದಕ್ಕೆ ನಿಯೋಗ ಮಣಿಯಲೇಬೇಕಾಯಿತು. ಈ ಹೊತ್ತಿಗೆ ಲಾಹೋರ್ ಸೆರೆಮನೆಯಿಂದ ಆಗ್ರಾ ಸೆರೆಮನೆಗೆ ವರ್ಗಾಯಿಸಲ್ಪಟ್ಟಿದ್ದ ಜಯಪ್ರಕಾಶ್, ಲೋಹಿಯಾ ಹಾಗೂ ಅವರ ಇತರ ಸಂಗಡಿಗರನ್ನು ಸುಮಾರು ಎರಡೂವರೆ ವರ್ಷಗಳ ಕಾಲದ ಸೆರೆವಾಸದ ನಂತರ ೧೯೪೬ರ ಏಪ್ರಿಲ್ ೧೧ ರಂದು ಬಿಡುಗಡೆ ಮಾಡಲಾಯಿತು.

ಡೆಪಲಿ ನಿಲ್ದಾಣದಲ್ಲಿ ಈ ಇಬ್ಬರು ಯುವ ನಾಯಕರನ್ನು ಅಪಾರ ಜನಸ್ತೋಮ "ಸ್ವತಂತ್ರ ಭಾರತ ಚಿರಾಯುವಾಗಲಿ", "ಜಯಪ್ರಕಾಶ್ ಚಿರಾಯುವಾಗಲಿ", "ಸಮಾಜವಾದ ಚಿರಾಯುವಾಗಲಿ" ಎಂಬ ಘೋಷಣೆಗಳೊಡನೆ ಸ್ವಾಗತಿಸಿತು. ತಾವೀಗ ಎಂತಹ ಮಹಾ ನಾಯಕರಾಗಿ ಸೆರೆಮನೆಯಿಂದ ಹೊರಬಂದಿರುವೆವು ಎಂಬುದರ ಮೊದಲ ಪರಿಚಯ ಅವರಿಗೆ ಅಲ್ಲಾಯಿತು. ಪಾಟ್ನಾದ ಗಾಂಧಿ ಮೈದಾನದಲ್ಲಿ ನಡೆದ ಲಕ್ಷಾಂತರ ಜನರ ಭಾರಿ ಸಭೆ, ಅವರ ಹೋರಾಟದ ಮುಂದುವರಿಕೆಗೆ ಹೊಸ ಉತ್ಸಾಹವನ್ನು ತುಂಬಿದಂತೆ ಅನಿಸಿತು. ಸೆರೆಮನೆಯಿಂದ ಬಿಡುಗಡೆ ಹೊಂದಿ, ಮಾವನ ಮನೆಯಲ್ಲಿದ್ದ ಪ್ರಭಾವತಿಯವರೊಡಗೂಡಿದ ಜಯಪ್ರಕಾಶ್ ಆ ಜನಸ್ತೋಮವನ್ನು ಉದ್ದೇಶಿಸಿ ಹೇಳಿದರು: "ಕಾಂಗ್ರೆಸ್ ಈಗ ಸ್ವಾತಂತ್ರ್ಯದ ಬಗ್ಗೆ ಸಾಮ್ರಾಜ್ಯಶಾಹಿಗಳೊಡನೆ ರಾಜಿಮಾಡಿಕೊಳ್ಳಲೆತ್ನಿಸುತ್ತಿದೆ. ಇದನ್ನು ನಾವು ಒಪ್ಪುವುದಿಲ್ಲ. ಕಾಂಗ್ರೆಸ್ಸಿಗರಿಗೆ ಈಗ ಹೋರಾಟ ಬೇಡವಾಗಿದೆ. ಅವರಿಗೆ ಎಂತಹುದೋ ಒಂದು ಸ್ವಾತಂತ್ರ್ಯ ಬೇಕಾಗಿದೆ. ಆದರೆ ನಾವು ಕಾಂಗ್ರೆಸ್ ಸಮಾಜವಾದಿಗಳು ಹೋರಾಟವನ್ನು ನಿಲ್ಲಿಸೆವು. ಸ್ವತಃ ನಾವು ಹೋರಾಟ ನಡೆಸುವ ಸ್ಥಿತಿಯಲ್ಲಿಲ್ಲ. ಹೋರಾಟಕ್ಕಾಗಿ ಕಾಂಗ್ರೆಸ್ಸಿನ ಮೇಲೆ ಒತ್ತಡ ತರುವೆವು. ಕಾಂಗ್ರೆಸ್ ಇದಕ್ಕೆ ನಿರಾಕರಿಸಿದರೆ, ನಾವು ಅವರಿಂದ ದೂರವಾಗಿ ಭಾರತೀಯ ಸಮಾಜವಾದಿ ಪಕ್ಷವನ್ನು ಕಟ್ಟುವೆವು. ಬ್ರಿಟಿಷ್ ಕ್ಯಾಬಿನೆಟ್ ನಿಯೋಗವನ್ನು ಗಾಂಧೀಜಿ, ಪಟೇಲ್, ನೆಹ್ರೂ ಮುಂತಾದ ಗಣ್ಯ ಕಾಂಗ್ರೆಸ್ಸಿಗರು ಸ್ವಾಗತಿಸುವಂತೆ ನಾವು ಸ್ವಾಗತಿಸುವುದಿಲ್ಲ. ನನಗೆ, ರಾಮಮನೋಹರನಿಗೆ ಮತ್ತು ಅಶೋಕ (ಮೆಹ್ತಾ)ನಿಗೆ ಒಂದು ವಿಷಯವಂತೂ ಮನವರಿಕೆಯಾಗಿದೆ-ಬಂಡವಾಳಶಾಹಿಯಾದ ಮತ್ತು ಸಾಮ್ರಾಜ್ಯಶಾಹಿಯಾದ ಸರ್ಕಾರ ಕಾಂಗ್ರೆಸ್ಸಿಗರು ಎಣಿಸಿರುವಷ್ಟು ಸುಲಭವಾಗಿ ಅಧಿಕಾರ ಬಿಟ್ಟುಕೊಡುವುದಿಲ್ಲ. ಒಂದು ಕಡೆ ಅದು ಅಧಿಕಾರ ವರ್ಗಾವಣೆಯ ಮಾತನಾಡುತ್ತಿದ್ದರೆ; ಮತ್ತೊಂದು ಕಡೆ ತನ್ನ ಸೇನೆಯನ್ನು ಬಲಗೊಳಿಸಿಕೊಳ್ಳುತ್ತಾ, ಕಾಂಗ್ರೆಸ್ಸಿಗರು ಕಂಡೆಡೆ ಗುಂಡು ಹಾರಿಸಲು ಬಿಹಾರದಲ್ಲಿ ಆದೇಶ ನೀಡಿದೆ. ಮತ್ತೊಂದೆಡೆ ಮುಸ್ಲಿಂ ಬಹುಸಂಖ್ಯಾತ ಪ್ರದೇಶಕ್ಕೆ ಪ್ರತ್ಯೇಕ ರಾಷ್ಟ್ರದ ಸ್ಥಾನಮಾನಕ್ಕಾಗಿ ಒತ್ತಾಯಿಸುತ್ತಿರುವ ಜಿನ್ನಾ ನೇತೃತ್ವದ ವಿಭಜನಕಾರೀ ಶಕ್ತಿಯಾದ ಮುಸ್ಲಿಂ ಲೀಗ್‌ಗೆ ಮತ್ತು ಊಳಿಗ ಮಾನ್ಯತೆಯ ಸಂಕೇತವಾದ ರಾಜ ಮಹಾರಾಜರುಗಳಿಗೆ ಅಧಿಕೃತ ಮಾನ್ಯತೆ ನೀಡಿ, ಕಾಂಗ್ರೆಸ್ಸಿಗರ ವಿರುದ್ಧ ಎತ್ತಿಕಟ್ಟುತ್ತಿದೆ. ಒಡೆದು ಆಳುವ ಬ್ರಿಟಿಷ್ ನೀತಿಯ ವಿರುದ್ಧ ನಾವು ಹೋರಾಟ ಆರಂಭಿಸಬೇಕು. ಅವರಿಂದ ಸ್ವಾತಂತ್ರ್ಯವನ್ನು ಕಸಿದುಕೊಳ್ಳಬೇಕು. ಸ್ವಾತಂತ್ರ್ಯದ ದಿನಗಳು ಹತ್ತಿರ ಬರುತ್ತಿವೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅದಕ್ಕೆ ಮುನ್ನ ನಾವು ಹೋರಾಟವೊಂದನ್ನು ಆರಂಭಿಸಿ ರಾಜಕೀಯ ಕ್ರಾಂತಿಯೊಂದನ್ನು ಉಂಟುಮಾಡದಿದ್ದರೆ ನಮ್ಮ ಸ್ವಾತಂತ್ರ್ಯ ಅರ್ಥವಿಲ್ಲದ್ದಾಗುತ್ತದೆ."

ಜಯಪ್ರಕಾಶರಿಗೆ ಹಲವಾರು ಸ್ಥಳಗಳಲ್ಲಿ ಭಾಷಣಗಳಿಗೆ ಆಹ್ವಾನ ನೀಡಲಾಯಿತು. ಅವರು ಹೋದೆಡೆಯಲ್ಲೆಲ್ಲಾ ಜನಸಾಗರ ತುಂಬಿ ತುಳುಕುತ್ತಿತ್ತು. ಅವರಿಗೆ ಹಲವಾರು ಕಡೆ ಉಡುಗೊರೆಗಳನ್ನು ನೀಡಲಾಯಿತು. ಬಿಹಾರ ರಾಜ್ಯದಲ್ಲಿ ನಡೆಸಿದ ಪ್ರವಾಸದ ಅವಧಿಯಲ್ಲಿಯೇ

ಅವರಿಗೆ ಲಕ್ಷಾಂತರ ರೂಪಾಯಿಗಳ ನಿಧಿಯನ್ನು ಅರ್ಪಿಸಲಾಯಿತು. ದೇವಘಡ ಎಂಬಲ್ಲಿ ಅಸ್ಪೃಶ್ಯ ಜಾತಿಯ ಭಂಗಿಯೊಬ್ಬ ಅವರಿಗೆ ಎರಡು ಪೌಂಡ್‌ಗಳಷ್ಟು ಅಕ್ಕಿಯನ್ನು ಅರ್ಪಿಸಿದ. ಜಯಪ್ರಕಾಶರು ೧೯೪೨ರ ಹೋರಾಟದಲ್ಲಿ ಬ್ರಿಟಿಷ್ ಬಂದೂಕುಗಳಿಗೆ ತುತ್ತಾದ ಬಲ್ಲಿಯಾ ಜಿಲ್ಲೆಯ ಹುತಾತ್ಮರ ಗೋರಿಗಳಿಗೆ ಭೇಟಿ ನೀಡಿ ಗೌರವ ಅರ್ಪಿಸಿದರು. ಅವರು ಆ ಗೋರಿಗಳ ಮುಂದೆ ನಿಂತಿದ್ದಂತೆ ಭಾವಾವೇಶವನ್ನು ತಡೆಯಲಾರದೆ ಕಣ್ಣೀರಿಟ್ಟರು. "ಇಂತಹ ಸ್ಥಳಗಳಿಗೆ ಬಂದಾಗ ನಾನು ನಾಚಿಕೆಗೆಟ್ಟವನಂತೆ ಅನಿಸುತ್ತದೆ. ಈ ಧೀರರು ಯಾವ ಮಹಾನ್ ಧ್ಯೇಯಕ್ಕಾಗಿ ತಮ್ಮ ಆತ್ಮತ್ಯಾಗ ಮಾಡಿದರೋ ಆ ಮಹಾನ್ ಧ್ಯೇಯವನ್ನು ನಾವಿನ್ನೂ ಸಾಧಿಸಿಲ್ಲ—ನಾವಿನ್ನೂ ಗುಲಾಮರಾಗಿಯೇ ಉಳಿದಿದ್ದೇವೆ ಎಂಬ ಸಂಗತಿ ನನ್ನನ್ನು ನಾಚಿಕೆಗೀಡುಮಾಡುತ್ತದೆ.... ನಾವು ಮತ್ತೆ ೪೨ರ ಚಳುವಳಿ ಕಾಲದಲ್ಲಿ ಮಾಡಿದಂತೆ 'ಸ್ವತಂತ್ರ ಗ್ರಾಮಸರ್ಕಾರ'ಗಳ ಸ್ಥಾಪನೆ ಮಾಡಬೇಕು, 'ಸ್ವತಂತ್ರ ಪ್ರಾದೇಶಿಕ ಸರ್ಕಾರ'ಗಳನ್ನು ರಚಿಸಿ ರಾಜ ಸಂಸ್ಥಾನಗಳನ್ನು ಕಿತ್ತೊಗೆದು ಅವುಗಳ ರಾಜ್ಯಪಾಲರುಗಳನ್ನು ಒತ್ತೆಯಾಳುಗಳನ್ನಾಗಿ ಮಾಡಿಕೊಳ್ಳಬೇಕು" ಎಂಬ ದುಃಖ ಬೆರೆತ ವೀರಾವೇಶದ ಮಾತುಗಳೊಡನೆ ಅವರು ಬ್ರಿಟಿಷರ ವಿರುದ್ಧ ನಿರ್ಣಾಯಕ ಹೋರಾಟಕ್ಕೆ ಮತ್ತೆ ಸಂಘಟಿತರಾಗಬೇಕೆಂದು ಜನತೆಗೆ ಕರೆಕೊಟ್ಟರು. ಜಯಪ್ರಕಾಶ್ ಹಗಲು ರಾತ್ರಿಗಳೆನ್ನದೆ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಜನಸಮುದಾಯವೂ ಕೂಡಾ ಹಗಲು ರಾತ್ರಿ ಎನ್ನದೆ, ಜಯಘೋಷ ಮಾಡುತ್ತಾ ಅವರು ಬರುವ ರೈಲಿಗಾಗಿ ಕಾಯುತ್ತಿರುತ್ತಿದ್ದರು. ಮಹಾರಾಜಪುರ ಎಂಬಲ್ಲಿ ಜನರು ಅವರನ್ನು ನೂರು ಎತ್ತುಗಳು ಎಳೆಯುವ ಸಿಂಗರಿಸಿದ ಗಾಡಿಯೊಂದರಲ್ಲಿ ಮೆರವಣಿಗೆ ಮಾಡಿ ನಿಧಿಯೊಂದನ್ನು ಹಾಗೂ ಖಡ್ಗವೊಂದನ್ನು ಅವರಿಗೆ ಸಮರ್ಪಿಸಿದರು.

ಅಖಿಲ ಭಾರತ ರೈಲ್ವೇ ಕಾರ್ಮಿಕರ ಸಂಘ, ಅಖಿಲ ಭಾರತ ಅಂಚೆ ಇಲಾಖೆ ಉದ್ಯೋಗಿಗಳ ಸಂಘ, ಸೈನಿಕ ಸಾಮಗ್ರಿಗಳ ಕಾರ್ಖಾನೆಗಳ ಉದ್ಯೋಗಿಗಳ ಸಂಘ—ಹೀಗೆ ಹಲವಾರು ಕಾರ್ಮಿಕ ಸಂಘಗಳು ಜಯಪ್ರಕಾಶರನ್ನು ತಮ್ಮ ಅಧ್ಯಕ್ಷರಾಗಬೇಕೆಂದು ಕೇಳಿಕೊಂಡವು. ಜಯಪ್ರಕಾಶ್ ಈ ಮನವಿಗಳನ್ನು ಒಪ್ಪಿಕೊಂಡರು. ಸೆರೆಮನೆ ಸೇರುವ ಮುನ್ನ ವ್ಯಾಪಕ ಕ್ಷೇತ್ರಕಾರ್ಯದ ಮೂಲಕ ಸಾಧಿಸಿದ್ದ ಕಾರ್ಮಿಕ ಸಂಘಟನೆಯ ಕಾರಣದಿಂದಾಗಿ ಸರ್ಕಾರಿ ನೌಕರರೂ ಸೇರಿದಂತೆ ದೇಶದ ಇಡೀ ಕಾರ್ಮಿಕ ವರ್ಗದ ನಾಯಕತ್ವವನ್ನು ಸಾಧಿಸಿ ಕೊಂಡಿದ್ದ ಜಯಪ್ರಕಾಶ್, ಆ ಸಂದರ್ಭದಲ್ಲಿ ಸರ್ಕಾರಕ್ಕೆ ಸಿಂಹಸ್ವಪ್ನವಾಗಿದ್ದರು. ಅಂಚೆ ಇಲಾಖೆ ಉದ್ಯೋಗಿಗಳ ಮುಷ್ಕರ ಸರ್ಕಾರವನ್ನು ತಲ್ಲಣಗೊಳಿಸುತ್ತಿದ್ದಂತೆ, ರೈಲ್ವೇ ನೌಕರರ ಮುಷ್ಕರದ ಬೆದರಿಕೆ ಸರ್ಕಾರವನ್ನು ಬಿಕ್ಕಟ್ಟಿಗೆ ಸಿಲುಕಿಸಿತ್ತು. ಬ್ರಿಟಿಷರು ಇನ್ನಾರು ತಿಂಗಳಲ್ಲಿ ದೇಶಬಿಟ್ಟು ತೊಲಗಲು ಕಾಲಾವಕಾಶ ನೀಡಿ; ಅದಕ್ಕಾಗಿ ಒತ್ತಾಯ ಹೇರಲು ಸಂಪೂರ್ಣ ಕೈಗಾರಿಕಾ ಮುಷ್ಕರ, ಸರ್ಕಾರೀ ನೌಕರರ ಅಸಹಕಾರ ಹಾಗೂ ಬಹಿರಂಗ ಬಂಡಾಯಕ್ಕೆ ಕರೆ ನೀಡಿದರು.

ಕಮ್ಯೂನಿಸಂನಿಂದ ದೂರ

ಜಯಪ್ರಕಾಶರು ಸೆರೆಮನೆಯಲ್ಲಿದ್ದ ಸಮಯದಲ್ಲಿ ಮೀನೂ ಮಸಾನಿಯವರು ಕಳುಹಿಸಿದ ಪುಸ್ತಕಗಳಿಂದಾಗಿ ಕಮ್ಯೂನಿಸಂ ಕುರಿತ ಅವರ ಅಭಿಪ್ರಾಯಗಳು ನಿರ್ಣಾಯಕವಾಗಿ ಬದಲಾವಣೆಗೊಳಪಟ್ಟಿದ್ದವು. ಸೋವಿಯತ್ ಒಕ್ಕೂಟದಲ್ಲಿ ಹಲವಾರು ವರ್ಷಗಳ ಕಾಲ ಇದ್ದು ನಂತರ ಅಲ್ಲಿ ನಡೆದ ಕ್ರೌರ್ಯದಿಂದ ಹತಾಶೆಗೊಂಡು ಅಲ್ಲಿಂದ ಹೊರಬಂದ ಕಮ್ಯೂನಿಸ್ಟ್ ಲೇಖಕ ಐಜೀನ್ ಲ್ಯಾನ್ಸ್‌ನ 'ಅಸೈನ್‌ಮೆಂಟ್ ಇನ್ ಉಟೋಪಿಯಾ' ಎಂಬ ಪುಸ್ತಕ ಕಮ್ಯೂನಿಸಂ ಅನ್ನು ಕುರಿತ ಅವರ ಭ್ರಮೆಯನ್ನು ಸ್ವಲ್ಪ ಮಟ್ಟಿಗೆ ತೊಡೆದುಹಾಕಿತ್ತುಜನಿ. ಆದರೆ 'ರಷ್ಯಾದಲ್ಲಿ ಆದಂತೆ ಇಲ್ಲೂ ಏಕೆ ಆಗಬೇಕು? ನಾವು ಅಂತಹ ಕ್ರೌರ್ಯವನ್ನು ತಡೆಯಬಲ್ಲೆವು' ಎಂಬ ಹೊಸ ವಿಶ್ವಾಸವೂ ಅವರಲ್ಲಿ ಮೂಡಿತ್ತು. ಈ ಮಧ್ಯೆ ಜೇಮ್ಸ್ ಬರ್ನ್‌ಹ್ಯಾಮ್‌ನ 'ದಿ ಮೆಕಿವಿಲಿಯನ್ಸ್', ಹ್ಯೇಕ್‌ನ 'ರೋಡ್ ಟು ಸೆರ್ಫ್‌ಡಮ್' ಮತ್ತು ಅರ್ಥೂರ್ ಕೊಸ್ಲೆರ್‌ನ 'ದಿ ಯೋಗಿ ಅಂಡ್ ದಿ ಕಮಿಸಾರ್' ಪುಸ್ತಕಗಳ ಓದು ದ್ವಂದ್ವಮಾನ ಭೌತವಾದವನ್ನು ಕುರಿತ ಅವರ ತಾತ್ವಿಕ ನಂಬಿಕೆಗಳನ್ನೇ ಅಲುಗಾಡಿಸಿದವು. ಮಸಾನಿ ಅವರು ರಷ್ಯಾಕ್ಕೆ ಭೇಟಿ ನೀಡಿ ಹಿಂತಿರುಗಿ, ಕಮ್ಯೂನಿಸಂ ಬಗ್ಗೆ ಇದ್ದ ತಮ್ಮೆಲ್ಲಾ ಆಕರ್ಷಣೆಯನ್ನು ಕಳೆದುಕೊಂಡು ಬರೆದ 'ಸಮಾಜವಾದ—ಒಂದು ಪುನರಾಲೋಚನೆ' ಎಂಬ ಪುಸ್ತಕ ಜಯಪ್ರಕಾಶರ ಮೇಲೆ ಗಾಢ ಪ್ರಭಾವ ಬೀರಿತು. ರಷ್ಯನ್ ಮಾದರಿಯ ಸಮಾಜವಾದದ ಬಗ್ಗೆ ಅವರಿಗೆ ಜಿಗುಪ್ಸೆ ಹುಟ್ಟಿತು. ಭಾರತಕ್ಕೆ ವಿಶಿಷ್ಟವಾದ ಸಮಾಜವಾದವನ್ನು ರೂಪಿಸುವ ಆಲೋಚನೆಯನ್ನು ಅವರು ಮಾಡಿದರು. ಯುದ್ಧಕಾಲದಲ್ಲಿ ಕಮ್ಯೂನಿಸ್ಟರು ವರ್ತಿಸಿದ ರೀತಿ ಅವರನ್ನು ಮತ್ತಷ್ಟು ಹತಾಶಗೊಳಿಸಿತ್ತು. ಅವರು ಸಭೆಯೊಂದರಲ್ಲಿ ಹೇಳಿದರು: "ನಾವು ಕಮ್ಯೂನಿಸ್ಟರೊಡನೆ ಸಂಬಂಧ ಬೆಳೆಸುವುದಿಲ್ಲ. ಅವರಿಗೆ ತಮ್ಮ ಪಕ್ಷ ಮತ್ತು ರಷ್ಯಾಗಳೇ ಎಲ್ಲಕ್ಕಿಂತ ಹೆಚ್ಚಾಗಿವೆ. ಅವರು ಭಾರತದಲ್ಲಿ ಬೆಳೆಯುತ್ತಿರುವ ರಷ್ಯಾದ ಕೂಲಿಯಾಳುಗಳಷ್ಟೆ. ಇಂಡಿಯಾದ ಕಮ್ಯೂನಿಸ್ಟರು ಅಂತಿಮ ವಿಶ್ಲೇಷಣೆಯಲ್ಲಿ ಕಾರ್ಮಿಕ ವಿರೋಧಿ ಮತ್ತು ದೇಶ ವಿರೋಧಿಯಾಗಿರುವರು. ಕಾರ್ಮಿಕರ ಸಂಘಟನೆಗೆ ತೊಂದರೆಯಾಗದಂತೆ ನಾವು ಅವರನ್ನು ಕಾರ್ಮಿಕ ಆಂದೋಲನದಿಂದ ದೂರ ತಳ್ಳಬೇಕು."

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವದ ನಿರಾಕರಣೆ

ಕ್ರಿಪ್ಸ್ ನಿಯೋಗವು ಕಾಂಗ್ರೆಸ್ ಮುಖಂಡರೊಡನೆ ಮಾತುಕತೆ ನಡೆಸಿ, ಅಧಿಕಾರ ವರ್ಗಾವಣೆಗಾಗಿ ಮಧ್ಯಂತರ ಕೇಂದ್ರ ಸರ್ಕಾರವೊಂದನ್ನು ಮತ್ತು ಸ್ವತಂತ್ರ ಭಾರತಕ್ಕಾಗಿ ಸಂವಿಧಾನವನ್ನು ರೂಪಿಸಲು ಸಂವಿಧಾನ ರಚನಾ ಸಮಿತಿಯೊಂದನ್ನು ರಚಿಸುವ ಸಲಹೆಗಳನ್ನು ಮಂಡಿಸಿತ್ತು. ಈ ಸಲಹೆಗಳನ್ನು ಪರಿಶೀಲಿಸಲು ಪಕ್ಷದ ಅಧ್ಯಕ್ಷ ನೆಹರೂ ಅವರು, ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಭಾಗವಹಿಸುವಂತೆ ಜಯಪ್ರಕಾಶ್ ಮತ್ತು ಲೋಹಿಯಾ ಅವರನ್ನು ಆಹ್ವಾನಿಸಿದರು. ಲೋಹಿಯಾ ಅವರನ್ನು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಲೂ

ಕೇಳಿಕೊಂಡರು. ಕೋಮುವಾದಿ ಮತ್ತು ಊಳಿಗಮಾನ್ಯ ಶಕ್ತಿಗಳ ಸಹಕಾರದೊಂದಿಗೆ ರಚಿತವಾಗಿರುವ ಸರ್ಕಾರವೊಂದರ ಆಶ್ರಯದಲ್ಲಿ ನಡೆಯುವ ಯಾವುದೇ ಪ್ರಯತ್ನ ಸಂಪೂರ್ಣ ಹಾಗೂ ಅಖಂಡ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆಯುವ ಪ್ರಯತ್ನವನ್ನು ವಿಫಲಗೊಳಿಸುತ್ತದೆ ಎಂದು ವಾದಿಸಿ, ಆ ಇಬ್ಬರೂ ಸಮಿತಿಯ ಸದಸ್ಯತ್ವವನ್ನು ನಿರಾಕರಿಸಿದರು. ಮಧ್ಯಂತರ ಸರ್ಕಾರಗಳ ರಚನೆಗಾಗಿ ನಡೆಯಲಿರುವ ಚುನಾವಣೆಗಳಲ್ಲಿ ಕೇವಲ ಕೆಲವು ಪ್ರತಿಷ್ಠಿತ ವರ್ಗಗಳ ಜನರಿಗೆ ಮಾತ್ರ ಮತದಾನದ ಹಕ್ಕನ್ನು ಸೀಮಿತಗೊಳಿಸುವ ಕಾಂಗ್ರೆಸ್ಸಿನ ಸಲಹೆಯನ್ನು ಅವರು ಖಂಡಾತುಂಡವಾಗಿ ವಿರೋಧಿಸಿದರು. "ಇಡೀ ಜನತೆಯ ಭವಿಷ್ಯ ಇಡೀ ಜನತೆಯ ಮತಾಧಿಕಾರದ ಮೂಲಕ ನಿರ್ಣಯವಾಗಬೇಕು. ರಾಜಿಕಬೂಲಿಗಳ ಮೂಲಕ ಮೂಡುವ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಗಳೆರಡೂ ಕ್ರೂರ ವ್ಯಂಗ್ಯಗಳಾಗಿ ಪರಿಣಮಿಸುವುದನ್ನು ನಾವು ಸಹಿಸೆವು. ಜನತಾ ಕ್ರಾಂತಿಯ ಉರಿಯಲ್ಲಿ ಮಾತ್ರ ಸಾಮ್ರಾಜ್ಯಶಾಹಿ ಹಾಗೂ ಅದರೊಡನಿರುವ ಕೋಮುವಾದಿ ಹಾಗೂ ಊಳಿಗ ಮಾನ್ಯತೆಯ ಗೋಪುರಗಳು ಸುಟ್ಟು ಬೂದಿಯಾಗಬಲ್ಲವು" ಎಂದು ಅವರು ಸ್ಪಷ್ಟಪಡಿಸಿದರು.

ಗಾಂಧೀಜಿ ಈ ಕಾಂಗ್ರೆಸ್ ಸಮಾಜವಾದಿಗಳ ವಾದವನ್ನು ಸಂಪೂರ್ಣವಾಗಿ ಒಪ್ಪಲಿಲ್ಲ. "ಸಂವಿಧಾನ ರಚನಾ ಸಭೆಯೇ ಜನತಾ ಸಂಸತ್ತಲ್ಲ ಎಂಬುದನ್ನು ನಾನೂ ಒಪ್ಪುವೆ. ಆದರೆ ನಮಗೆ ಒದಗಿರುವ ಅವಕಾಶವನ್ನು ಸದುಪಯೋಗಪಡಿಸಿಕೊಂಡ ನಂತರವೇ ಮುಂದಿನ ಕ್ರಮಕ್ಕೆ ಸಿದ್ಧರಾಗುವುದು ವಿವೇಕದ ಕ್ರಮ. ಸಂವಿಧಾನ ರಚನಾ ಸಭೆಯು ತಪ್ಪುಗಳನ್ನೆಸಗಿದಲ್ಲಿ ಅವನ್ನು ಸರಿಪಡಿಸುವ ಹಕ್ಕಿಗಾಗಿ ಹೋರಾಟ ನಡೆಸಬೇಕು. ಬ್ರಿಟಿಷರೆಲ್ಲರೂ ಕೆಟ್ಟವರು ಮತ್ತು ಬ್ರಿಟಿಷರು ಸೂಚಿಸಿದ್ದೆಲ್ಲಾ ಕೆಟ್ಟದ್ದೇ ಎಂಬ ಧೋರಣೆಯನ್ನು ಬಿಟ್ಟು ರಚನಾತ್ಮಕವಾಗಿ ಆಲೋಚನೆ ಮಾಡಬೇಕು. ಜಯಪ್ರಕಾಶರದು ಸದ್ಯಕ್ಕೆ ಪಲಾಯನ ವಾದದಂತೆ ಕಾಣುತ್ತದೆ. ಜಯಪ್ರಕಾಶರಂತಹ ಧೀರರ ಬಾಯಲ್ಲಿ ಸೋಲಿನ ಮಾತುಗಳನ್ನು ನಾನು ಕೇಳಬಯಸುವುದಿಲ್ಲ. ಸತ್ಯಾಗ್ರಹಿಗೆ ಸೋಲೆಂಬುದೇ ಇಲ್ಲ" ಎಂದು ಅವರು ತಮ್ಮ ನಿಲುವನ್ನು ನಿರೂಪಿಸಿದರು.

ದೇಶವಿಭಜನೆಯ ಹುನ್ನಾರ - ಭುಗಿಲೆದ್ದ ಹಿಂಸಾಚಾರ

ಕಾಂಗ್ರೆಸ್ ಸಮಾಜವಾದಿಗಳ ವಾದವನ್ನು ತಿರಸ್ಕರಿಸಿದ ಕಾಂಗ್ರೆಸ್ ಕಾರ್ಯಕಾರಿಣಿ ಮಧ್ಯಂತರ ಸರ್ಕಾರದ ಸ್ಥಾಪನೆಯ ಹಾಗೂ ರಾಜ್ಯಾಂಗ ರಚನಾ ಸಭೆಗಾಗಿ ಚುನಾವಣೆ ನಡೆಸುವ ಸಲಹೆಗಳನ್ನು ಅನುಮೋದಿಸಿತು. ವೈಸರಾಯ್ ವೇವಲ್ಲರು ತಾತ್ಕಾಲಿಕ ಸರ್ಕಾರವನ್ನು ರಚಿಸಲು ನೆಹರೂ ಅವರನ್ನು ಆಹ್ವಾನಿಸಿದರು. ಇದು ಮಹಮ್ಮದಾಲಿ ಜಿನ್ನಾ ಅವರನ್ನು ಸಿಟ್ಟಿಗೆಬ್ಬಿಸಿತಾದರೂ, ಪ್ರತ್ಯೇಕ ಪಾಕಿಸ್ತಾನಕ್ಕಾಗಿ ಸಿದ್ಧತೆಯನ್ನು ಹಂಗಾಮಿ ಸರ್ಕಾರದೊಳಗಿದ್ದುಕೊಂಡೇ ಮಾಡುವ ಹುನ್ನಾರದೊಡನೆ, ಸರ್ಕಾರದಲ್ಲಿ ಮುಸ್ಲಿಮರಿಗೂ ಪ್ರಾತಿನಿಧ್ಯ ನೀಡುವ ನೆಹರೂ ಪ್ರಸ್ತಾವವನ್ನು ತಿರಸ್ಕರಿಸಿದರು. ಆದರೆ ಸ್ವತಃ ತಾವೇ

ಮುಸ್ಲಿಂಲೀಗ್‌ನ ಐವರು ಸದಸ್ಯರನ್ನು ಸಚಿವ ಸ್ಥಾನಗಳಿಗೆ ನಾಮಕರಣ ಮಾಡಿದರು. ಈ ಹುನ್ನಾರ ಕ್ರಮೇಣ ಕಾಂಗ್ರೆಸ್ಸಿನ ಗಮನಕ್ಕೆ ಬಂದು ಅದು, ತಾನು ದೇಶ ವಿಭಜನೆಯ ಯಾವುದೇ ಪರೋಕ್ಷ ಪ್ರಯತ್ನವನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿತು. ಇದರಿಂದ ಸಿಟ್ಟಿಗೆದ್ದ ಜಿನ್ನಾ ನೇತೃತ್ವದ ಮುಸ್ಲಿಂಲೀಗ್ ದೇಶಾದ್ಯಂತ ೧೯೪೬ರ ಆಗಸ್ಟ್ ೧೬ರಂದು ಪ್ರತ್ಯೇಕ ಮುಸ್ಲಿಂರಾಷ್ಟ್ರ ಪಾಕಿಸ್ತಾನದ ರಚನೆಯನ್ನು ಒತ್ತಾಯಿಸಿ 'ನೇರ ಕಾರ್ಯಾಚರಣೆ'ಗೆ ಕರೆಕೊಟ್ಟಿತು.

ನೆಹ್ರೂ ಮತ್ತಿತರ ಹಿರಿಯ ಕಾಂಗ್ರೆಸ್ಸಿಗರ ಸಂಧಾನ ಪ್ರಯತ್ನಗಳ ಹೊರತಾಗಿಯೂ ಜಿನ್ನಾ ಬೆಂಬಲಿಗಳ ಆಳ್ವಿಕೆಯಲ್ಲಿದ್ದ ಬಂಗಾಳದಲ್ಲಿ "ಹಿಂದೂ ಕಾಂಗ್ರೆಸ್ ಪ್ರಭುತ್ವ"ದ ವಿರುದ್ಧ ಕಾರ್ಯಾಚರಣೆ ಆರಂಭವಾಯಿತು. ಕಲ್ಕತ್ತಾ ನಗರವೊಂದರಲ್ಲಿಯೇ ನೂರಾರು ಜನ ಹಿಂದೂಗಳ ಕೊಲೆಯಾಯಿತು. ಪ್ರತೀಕಾರವಾಗಿ ಮತ್ತೆ ನೂರಾರು ಮುಸ್ಲಿಮರ ಕೊಲೆಗಳು ನಡೆದವು. "ಪಾಕಿಸ್ತಾನ್ ಜಿಂದಾಬಾದ್! ಅಲ್ಲಾ ಹೋ ಅಕ್ಬರ್" ಘೋಷಣೆಗಳು ಬಂಗಾಳ ರಾಜ್ಯಾದ್ಯಂತ ಮೊಳಗಿದವು. ರಕ್ತದ ಕೋಡಿ ಹರಿಯಿತು. ಲೂಟಿ, ಅತ್ಯಾಚಾರ, ಕೊಲೆಗಳು ಹಗಲಿರುಳೆನ್ನದೆ ನಿರಂತರವಾಗಿ ನಡೆದವು. ಗಲಭೆಗಳು ಪಕ್ಕದ ರಾಜ್ಯಗಳಿಗೂ ಹಬ್ಬಿತು. ಗಾಂಧೀಜಿ ಕಲ್ಕತ್ತಾಕ್ಕೆ ಧಾವಿಸಿದರು. ಜಯಪ್ರಕಾಶ್ ಕೂಡಾ ಗಲಭೆಗಳು ನಡೆದ ಪ್ರದೇಶಗಳ ಪ್ರವಾಸ ಕೈಗೊಂಡರು. ಮುಸ್ಲಿಂಲೀಗ್‌ಅನ್ನು ಮತ್ತು ಅದರ ಸರ್ಕಾರಕ್ಕೆ 'ಕಾನೂನು ಮತ್ತು ಶಾಂತಿಪಾಲನೆಗಾಗಿ' ಶಸ್ತ್ರಾಸ್ತ್ರಗಳನ್ನು ಒದಗಿಸುತ್ತಿದ್ದ ಬ್ರಿಟಿಷ್ ಸೇನೆಯ ನಿಲುವನ್ನು ಖಂಡಿಸಿದರು. ಧರ್ಮನಿರಪೇಕ್ಷ ಭಾರತದ ನಿರ್ಮಾಣಕ್ಕೆ ಮುಸ್ಲಿಮ್ ಬಾಂಧವರಿಗೆ ಕರೆ ನೀಡಿದರು. "ನಾನು ಹಿಂದೂಸ್ತಾನಿ; ನನ್ನ ಧರ್ಮ ಕ್ರಾಂತಿ" ಎಂದು ಘೋಷಿಸಿದರು.

ಇಂತಹ ಬಿಕ್ಕಟ್ಟಿನ ಸ್ಥಿತಿಯಲ್ಲಿ ತಮಗೆ ನೆರವಾಗಲೇಬೇಕೆಂದೂ ನೆಹರೂ ಒತ್ತಾಯಿಸಿದಾಗ ಮತ್ತು ಗಾಂಧೀಜಿ ಕೂಡಾ ಆಗ್ರಹಪಡಿಸಿದಾಗ ಜಯಪ್ರಕಾಶ್, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಲು ಒಪ್ಪಿಕೊಂಡರು. ಗಾಂಧೀಜಿಯ ಅಮರಣಾಂತ ಉಪವಾಸದಿಂದಾಗಿ ಬಂಗಾಳದ ಕೊಲೆಗಳು ಕಡಿಮೆಯಾಗುತ್ತಿದ್ದಂತೆ, ಬಿಹಾರದಲ್ಲಿ ಒಂದು ಸಣ್ಣ ಘಟನೆಯೊಂದರಿಂದ ಮತ್ತೊಂದು ಭೀಕರ ಕೋಮು ಘರ್ಷಣೆ ಆರಂಭವಾಯಿತು. ನೆಹರೂ, ಡಾ. ರಾಜೇಂದ್ರ ಪ್ರಸಾದ್, ಕೃಪಲಾನಿ ಮುಂತಾದವರೊಡನೆ ಜಯಪ್ರಕಾಶ್ ಬಿಹಾರದ ಪ್ರವಾಸ ಕೈಗೊಂಡರು. ಅಲ್ಲಿನ ಬಿಹಾರ ಕಾಂಗ್ರೆಸ್ ಸರ್ಕಾರ ಹಿಂದೂಗಳ ಪರವಾಗಿ ಕೆಲಸ ಮಾಡುತ್ತಿದ್ದುದ್ದನ್ನು ಅರಿತು ಅದನ್ನು ಖಂಡಿಸಿದರು. ಜಯಪ್ರಕಾಶರು ಬಿಹಾರದ ಜನತೆಯ ಮೇಲೆ ಹೊಂದಿದ್ದ ಪ್ರಭಾವ ಹಾಗೂ ಕಾಂಗ್ರೆಸ್ ಮುಖಂಡರು ಕೈಗೊಂಡ ವ್ಯಾಪಕ ಪ್ರವಾಸದಿಂದಾಗಿ ಪರಿಸ್ಥಿತಿ ತಹಬಂದಿಗೆ ಬಂದಿತು.

ಮೌಂಟ್ ಬೇಟನ್ನರ ಆಗಮನ

ಸಂವಿಧಾನ ರಚನಾ ಸಭೆಗೆ ಚುನಾವಣೆ ನಡೆದು, ೧೯೪೬ರ ಡಿಸೆಂಬರ್ ೯ರಂದು ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಮುಸ್ಲಿಂಲೀಂಗ್ ಸದಸ್ಯರ ಮುನಿಸಿನ

ಗೈರುಹಾಜರಿಯಲ್ಲಿ ಅದು ಸಮಾವೇಶಗೊಂಡಿತು. ಕಾಂಗ್ರೆಸ್ ಸಮಾಜವಾದಿಗಳು ಈ ಹಿಂದೆ ವಿವರಿಸಿದ ತಾತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ ಚುನಾವಣೆಗಳಿಗೇ ಸ್ಪರ್ಧಿಸಿರಲಿಲ್ಲ. ಸಭೆ ಸ್ವತಂತ್ರ ಭಾರತಕ್ಕಾಗಿ ಸಂವಿಧಾನವೊಂದನ್ನು ರೂಪಿಸುವತ್ತ ಕಾರ್ಯೋನ್ಮುಖವಾಯಿತು. ಎಲ್ಲ ರಾಜ ಸಂಸ್ಥಾನಗಳನ್ನು ಭಾರತೀಯ ಗಣರಾಜ್ಯದಲ್ಲಿ ವಿಲೀನಗೊಳಿಸುವ ವಿಧಿಯೂ ಸಂವಿಧಾನದಲ್ಲಿ ಸೇರಿತು. ಇದು ಜಯಪ್ರಕಾಶರಿಗೆ ಅತ್ಯಂತ ಹರ್ಷ ತಂದ ಸಂಗತಿಯಾಗಿತ್ತು.

ಇತ್ತ ಮುಸ್ಲಿಂಲೀಗ್‌ನ ಹಠ ಮತ್ತು ವೈಸರಾಯ್ ವೇವಲ್ಲರ ಸರ್ಕಾರದ ಅನುಮಾನಾಸ್ಪದ ನೀತಿ ಅಸಹನೀಯ ಹಂತವನ್ನು ತಲುಪಿತ್ತು. ವೇವಲ್‌ರ ಒತ್ತಾಯದ ಮೇರೆಗೆ ಸರ್ಕಾರದಲ್ಲಿ ಪಾಲ್ಗೊಳ್ಳಲು ಮುಸ್ಲಿಂಲೀಗ್ ಸದಸ್ಯರಿಗೆ ಅವರ ಷರತ್ತುಗಳಿಗೆ ಅನುಗುಣವಾಗಿಯೇ ಅವಕಾಶ ಕೊಡಲಾಯಿತಾದರೂ, ನೆಹರೂ ಅವರು ಕರೆಯುತ್ತಿದ್ದ ಸಚಿವ ಸಂಪುಟದ ಔಪಚಾರಿಕ ಸಭೆಗಳಲ್ಲಿ ಅವರೆಂದೂ ಪಾಲ್ಗೊಳ್ಳುತ್ತಿರಲಿಲ್ಲ. ಮುಸ್ಲಿಂಲೀಗ್ ನಿರಂತರವಾಗಿ ಹಿಂದೂ ವಿರೋಧಿ ಮತ್ತು ಕಾಂಗ್ರೆಸ್ ವಿರೋಧಿ ಅಪ ಪ್ರಚಾರದಲ್ಲಿ ತೊಡಗಿತ್ತು. ಇದಕ್ಕೆ ವೈಸರಾಯ್‌ರ ಕುಮ್ಮಕ್ಕು ಕೂಡಾ ದೊರಕುತ್ತಿತ್ತು. ಇದರ ವಿರುದ್ಧ ಪ್ರತಿಭಟಿಸಿ ಸಾಮೂಹಿಕ ಕಾರ್ಯಾಚರಣೆಯಲ್ಲಿ ತೊಡಗಲು, ಕಾಂಗ್ರೆಸ್ಸಿಗರೆಲ್ಲರೂ ಅಧಿಕಾರ ಸ್ಥಾನಗಳನ್ನು ತೊರೆಯಬೇಕೆಂದು ಜಯಪ್ರಕಾಶ್ ಸಲಹೆ ಮಾಡಿದರು. ಈ ಸಲಹೆಯನ್ನು ಕಾರ್ಯಸಾಧುವಲ್ಲವೆಂದು ತಳ್ಳಿಹಾಕಲಾಯಿತಾದರೂ, ಮುಸ್ಲಿಂಲೀಗ್ ಸದಸ್ಯರ ಅಸಹಕಾರ ಮತ್ತು ವೇವಲ್‌ರ ಹಸ್ತಕ್ಷೇಪದಿಂದಾಗಿ ಸರ್ಕಾರ ನಡೆಸುವುದೇ ಕಾಂಗ್ರೆಸ್‌ಗೆ ಕಷ್ಟವಾಯಿತು. ಕೊನೆಗೆ ಅಟ್ಲೀ ಅವರ ಸರ್ಕಾರಕ್ಕೆ ಸಂದೇಶವೊಂದನ್ನು ಕಳುಹಿಸಿ, ವೇವಲ್‌ರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಅದು ಮನವಿ ಮಾಡಿತು. ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಬ್ರಿಟಿಷ್ ಸರ್ಕಾರ ಲಾರ್ಡ್ ಮೌಂಟ್‌ಬೇಟನ್‌ರನ್ನು ಹೊಸ ವೈಸರಾಯ್ ಎಂದು ನೇಮಕ ಮಾಡಿ ಕಳಿಸಿತು.

ದೇಶದ ವಿಭಜನೆ-ಸವಿಯಲಾಗದ ಸ್ವಾತಂತ್ರ್ಯ

ಜಿನ್ನಾ ನೇತೃತ್ವದ ಮುಸ್ಲಿಂಲೀಗ್‌ನ ಕೋಮು ಪ್ರಚೋದನೆ ಎಗ್ಗಿಲ್ಲದೆ ಮುಂದುವರಿದಿತ್ತು. ಹಿಂದೂ ಮುಸ್ಲಿಂ ಘರ್ಷಣೆಗಳು ಬಂಗಾಳದಿಂದ ಪಂಜಾಬ್‌ಗೆ ವ್ಯಾಪಿಸಿದ್ದವು. ಬಂಗಾಳದ ವಿಭಜನೆಯ ಜೊತೆಯಲ್ಲಿಯೇ ಪಂಜಾಬನ್ನು ಸಹ ವಿಭಜಿಸಬೇಕೆಂಬ ಹಿಂಸಾತ್ಮಕ ಒತ್ತಾಯಗಳು ಪಂಜಾಬಿನಿಂದ ಬರತೊಡಗಿದ್ದವು. ಅಸ್ಸಾಂ ಸಹ ವಿಭಜನೆಯ ದುಳ್ಳುರಿಗೆ ಸಿಕ್ಕಿತ್ತು. ಲಾರ್ಡ್ ಮೌಂಟ್‌ಬೇಟನ್ ಅವರು ಪರಿಸ್ಥಿತಿಯ ಸಮೀಕ್ಷೆ ಮಾಡಿ ಕಾಂಗ್ರೆಸ್ ಹಾಗೂ ಮುಸ್ಲಿಂಲೀಗ್ ಸೇರಿದಂತೆ ಎಲ್ಲ ರಾಜಕೀಯ ಹಾಗೂ ಧಾರ್ಮಿಕ ನಾಯಕರೊಂದಿಗೆ ವ್ಯಾಪಕ ಮಾತುಕತೆ ನಡೆಸಿದರು. ನಂತರ ದೇಶದ ವಿಭಜನೆ ಅನಿವಾರ್ಯ ಎಂಬ ನಿರ್ಧಾರಕ್ಕೆ ಬಂದರು. ಗಾಂಧೀಜಿಗೆ ಇದೆಲ್ಲಾ ಭಯಾನಕವಾಗಿ ಕಾಣತೊಡಗಿತ್ತು. ಅವರು ಮೌಂಟ್‌ಬೇಟನ್ ಮಂಡಿಸಿದ್ದ ದೇಶ ವಿಭಜನೆಯ ಪ್ರಸ್ತಾವಗಳನ್ನು ಚರ್ಚಿಸಲು ೧೯೪೭ರ ಜೂನ್ ೨ ರಂದು ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಅನಿರೀಕ್ಷಿತವಾದ ಸಲಹೆಯೊಂದನ್ನು

ಮಂಡಿಸಿದರು. ವಿಭಜನೆಯ ಒತ್ತಾಯದ ಹಿಂದಿರುವ ಜಿನ್ನಾ ಅವರ ಹಂಬಲವೇನು ಎಂಬುದನ್ನು ಕಂಡುಕೊಂಡಿದ್ದ ಅವರು, ಸ್ವತಂತ್ರ ಭಾರತದ ಪ್ರಧಾನಮಂತ್ರಿ ಸ್ಥಾನವನ್ನು ಜಿನ್ನಾ ಅವರಿಗೆ ವಹಿಸಿಕೊಡುವ ಸೂಚನೆಯನ್ನು ಮುಂದಿಟ್ಟರು. ಇದು ಒಂದು ದೃಷ್ಟಿಯಿಂದ ನೇತ್ಯಾತ್ಮಕ ಪರಿಹಾರವಾಗಿ ಕಂಡರೂ, ದೇಶ ಛಿದ್ರವಾಗಿಯೇ ತೀರುವಂತೆ ಕಾಣವ ಈ ವಿಷ ಘಳಿಗೆಯಲ್ಲಿ ಯಾವುದೇ ಸಾಧು ಮಾರ್ಗದಿಂದ ಈ ದುರಂತವನ್ನು ತಡೆಯುವ ಸದುದ್ದೇಶವನ್ನು ಹೊಂದಿತ್ತು. ಆದರೆ ನೆಹರೂ ಮತ್ತು ಪಟೇಲ್ ಇಬ್ಬರೂ ಈ ಸಲಹೆಯನ್ನು 'ದೇಶದಲ್ಲಿನ ಸದ್ಯದ ಕೋಮು ಪರಿಸ್ಥಿತಿಯ ಹಿನ್ನೆಲೆ'ಯಲ್ಲಿ ತಿರಸ್ಕರಿಸಿದಾಗ ಗಾಂಧೀಜಿ ಅಸಹಾಯಕರಾದರು. ಈ ಸಂದರ್ಭದಲ್ಲಿ ಗಾಂಧೀಜಿಯವರಿಗೆ ಬೆಂಬಲವಾಗಿ ನಿಂತವರೆಂದರೆ ಖಾನ್ ಅಬ್ದುಲ್ ಗಫಾರ್ ಖಾನ್, ಜಯಪ್ರಕಾಶ್ ಮತ್ತು ರಾಮಮನೋಹರ ಲೋಹಿಯಾ ಹಾಗೂ ಅವರ ಕಾಂಗ್ರೆಸ್ ಸಮಾಜವಾದಿ ಸಂಗಡಿಗರಷ್ಟೇ. ಸಮಿತಿಯ ಈ ಸಭೆಯಲ್ಲಿ ಯಾವುದೇ ಅಧಿಕೃತ ನಿರ್ಣಯವನ್ನೂ ಅಂಗೀಕರಿಸಲಿಲ್ಲವಾದರೂ, ಗಾಂಧೀಜಿ ಈ ಬಗ್ಗೆ ವ್ಯಾಪಕ ಮಾತುಕತೆಗಳನ್ನು ನಡೆಸಲು ಲಾರ್ಡ್ ಮೌಂಟ್ ಬೇಟನ್‌ರನ್ನು ಭೇಟಿ ಮಾಡುವ ಏರ್ಪಾಡಾಯಿತು. ದೇಶಾದ್ಯಂತ ಶಾಂತಿ ನೆಲೆಸಿ, ಜಿನ್ನಾ ಅವರೊಡನೆ ಶಾಂತಿ ಸಂಧಾನಕ್ಕೆ ಸಹಿ ಹಾಕುವವರೆಗೂ ಯಾವುದೇ ಅಧಿಕೃತ ಕಾರ್ಯಕಲಾಪಗಳು ನಡೆಯಕೂಡದೆಂಬುದೇ ಗಾಂಧೀಜಿಯ ನಿಲುವಾಗಿತ್ತು. ಆದರೆ ದೇಶ ವಿಭಜನೆಯಾಗದೆ ಸ್ವಾತಂತ್ರ್ಯ ಘೋಷಣೆ ಅಸಾಧ್ಯವೆನ್ನಿಸುವ ಸನ್ನಿವೇಶ ಎಲ್ಲ ರಾಜಕಿಯ ವಲಯಗಳಲ್ಲಿ ಸೃಷ್ಟಿಯಾಗಿ ಗಾಂಧೀಜಿ ಅದನ್ನು ಒಡೆದ, ಒಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು. ಆಗಸ್ಟ್ ೧೫ರ ಸ್ವಾತಂತ್ರ್ಯ ಗಾಂಧೀಜಿಯಂತೆ ಕಾಂಗ್ರೆಸ್ ಸಮಾಜವಾದಿಗಳಿಗೂ ಅಷ್ಟೇನೂ ಸವಿಯಾದದ್ದಾಗಿರಲಿಲ್ಲ.

ಗಾಂಧೀಜಿ ಮತ್ತು ಸಮಾಜವಾದ

ಇದೇ ಸಮಯದಲ್ಲಿ ಲಾಹೋರ್ ಕೋಟೆಯಿಂದ ಬಿಡುಗಡೆಯಾದ ನಂತರವೇ ಗೋವಾದ ಪೋರ್ಚುಗೀಸ್ ಸರ್ಕಾರದ ವಿರುದ್ಧ ಗುಪ್ತ ಚಟುವಟಿಕೆಗಳಲ್ಲಿ ತೊಡಗಿ ಸೆರೆಮನೆ ಹೊಕ್ಕು, ಕೆಲ ದಿನಗಳ ನಂತರ ಗೋವಾದಿಂದ ಹೊರದೂಡಲ್ಪಟ್ಟಿದ್ದ ರಾಮಮನೋಹರರ ಅಧ್ಯಕ್ಷತೆಯಲ್ಲಿ ೪೭ರ ಫೆಬ್ರವರಿಯಲ್ಲಿ ಕಾಂಗ್ರೆಸ್ ಸಮಾಜವಾದಿ ಸಮ್ಮೇಳನ ನಡೆಯಿತು. ಈ ಸಮ್ಮೇಳನ ಸ್ವತಂತ್ರ ಭಾರತದ ಅಭಿವೃದ್ಧಿಯ ಗತಿಯನ್ನು ನಿರ್ದೇಶಿಸುವ ವಿವಿಧ ಅಂಶಗಳ ಬಗ್ಗೆ ನಿರ್ಣಯಗಳನ್ನು ಕೈಗೊಂಡಿತು. ಭಾರತದ ಪುನರ್ನಿರ್ಮಾಣಕ್ಕೆ ಸಮಾಜವಾದವೊಂದೇ ಮಾರ್ಗ ಎಂದು ಸಮ್ಮೇಳನ ಪ್ರತಿಪಾದಿಸಿತ್ತು. ಬೆಲೆಗಳ ಹತೋಟಿ, ಕಾರ್ಮಿಕರ ಕನಿಷ್ಠ ವೇತನ, ಜಾತಿ ಹಾಗೂ ಲಿಂಗ ಭೇದಗಳ ನಿರ್ಮೂಲನ, ಮುಷ್ಕರ ಮತ್ತು ಸಂಧಾನಗಳ ಹಕ್ಕುಗಳ ಸ್ಥಾಪನೆ ಮುಂತಾದ ಕ್ರಮಗಳನ್ನು ಅದು ಅನುಮೋದಿಸಿತ್ತು.

ಈ ಬಗ್ಗೆ ಚರ್ಚೆ ನಡೆಸಲು ಕೆಲವು ದಿನಗಳ ನಂತರ ಅಶೋಕ ಮೆಹತಾ ಹಾಗೂ ಅರುಣಾ ಅಸಿಫ್ ಅಲಿ ಗಾಂಧೀಜಿಯವರನ್ನು ಭೇಟಿ ಮಾಡಿದರು. ವರ್ಗರಹಿತ ಸಮಾಜದ ಕಲ್ಪನೆ ಗಾಂಧೀಜಿಯವರಿಗೆ ಹೊಸದೇನಲ್ಲವಾಗಿದ್ದರೂ, ಅಹಿಂಸೆಯನ್ನು ಕುರಿತ ಸಮಾಜವಾದಿಗಳ ಸಿನಿಕತನವನ್ನೂ ಮತ್ತು ಒಟ್ಟಿಗೆ ಬದುಕುವ ನೀತಿಯನ್ನೂ ಪ್ರತಿಪಾದಿಸಬೇಕಾದ ಅಂದಿನ ಸಂದರ್ಭದಲ್ಲಿ ಚಳುವಳಿ, ಮುಷ್ಕರಗಳಿಗೆ ಕರೆಕೊಡುತ್ತಿದ್ದ ಸಮಾಜವಾದಿಗಳ ತಂಟಕೋರ ಪ್ರವೃತ್ತಿಯನ್ನು ಅವರು ಟೀಕಿಸಿದರು. ಸಮಾಜವಾದದ ಬಗ್ಗೆ ಪಂಡಿತ ಶೈಲಿಯಲ್ಲಿ ಮಾತನಾಡಿದ ಅಶೋಕ ಮೆಹ್ತಾ ಅವರಿಗೆ ಹೇಳಿದರು, "ನೀನು ಹುಟ್ಟುವ ಮುನ್ನವೇ ನಾನು ಸಮಾಜವಾದಿಯಾಗಿದ್ದೆ. ನಿನ್ನ ಕಲ್ಪನೆಯಾದರೂ ಏನು? ಪ್ರತಿಯೊಬ್ಬ ಭಾರತೀಯನಿಗೂ ಒಂದು ಬಂಗಲೆ ಮತ್ತು ಒಂದು ಕಾರು ಒದಗಿಸುವ ನಿನ್ನ ಆದರ್ಶ ಮೆಚ್ಚತಕ್ಕದ್ದೇ. ಆದರೆ ಈ ಅದರ್ಶ ನೀವು ೧೯೪೨ರಲ್ಲಿ ನಡೆಸಿದಂತಹ ಹಿಂಸಾಚಾರಗಳಿಂದ ಸಾಧ್ಯವಿಲ್ಲ. ಅಂದು ನೀವು ಪರಿಚಯ ಮಾಡಿಸಿದ ಹಿಂಸಾಚಾರವೇ ಇಂದು, ಹಿಂದೂ ಮುಸ್ಲಿಂ ಗಲಭೆಗಳಿಗೆ, ತಾತ್ವಿಕವಾಗಿಯಲ್ಲವಾದರೂ ಭಾವೋನ್ಮಾದದ ನೆಲೆಯಲ್ಲಿ ಪ್ರೇರಣೆ ನೀಡಿದೆ. ಸಮಾಜವಾದ ಎಂದರೆ ಇದಲ್ಲ. ನನ್ನನ್ನು ಸಮಾಜವಾದಿಯೆಂದು ಕರೆಯುತ್ತೀರೋ ಇಲ್ಲವೋ ಗೊತ್ತಿಲ್ಲ. ಆದರೆ ನಾನು ನನ್ನ ದೇಶದ ಅತಿ ಬಡವನ ಜೀವನ ಸ್ಥಿತಿಗೆ ಇಳಿದು ಬದುಕುವ ರೂಢಿ ಮಾಡಿಕೊಂಡಿದ್ದೇನೆ. ನನ್ನ ಆದರ್ಶಕ್ಕೆ ಇದು ಸೂಕ್ತವಾದ ಮಾರ್ಗ ಎಂದು ತಿಳಿದಿದ್ದೇನೆ. ನೀವು? ಪಟವರ್ಧನ್, ಜಯಪ್ರಕಾಶ್, ಲೋಹಿಯಾ ಮುಂತಾದವರು ತಮ್ಮ ಜೀವವನ್ನೇ ಪಣವಿಟ್ಟು ಹೋರಾಡಿದುದನ್ನು ನಾನು ಹೆಮ್ಮೆಯಿಂದ ನೆನೆಸಿಕೊಳ್ಳುತ್ತೇನೆ. ಆದರೆ ಒಟ್ಟಾರೆ ನಿಮ್ಮ ಕಾರ್ಯಶೈಲಿ ರಚನಾತ್ಮಕವಲ್ಲ. ನಿಮಗೆ ಸಮಾಜವಾದದ ತ್ವರಿತ ಅನುಷ್ಠಾನದಲ್ಲಿ ನಂಬಿಕೆ ಇದ್ದರೆ, ನೀವು ಹಳ್ಳಿಗಳಿಗೆ ಹೋಗಿ ನೆಲಸಬೇಕು; ದಿನಕ್ಕೆ ಎಂಟು ತಾಸುಗಳಂತೆ ದುಡಿಯಬೇಕು. ಹಳ್ಳಿಯ ಉತ್ಪನ್ನಗಳನ್ನೇ ಬಳಸಬೇಕು. ಅಸ್ಪೃಶ್ಯತೆಯನ್ನು ತೊಡೆದು ಹಾಕುವ, ಮಹಿಳೆಯರ ಸ್ಥಾನಮಾನಗಳನ್ನು ಉತ್ತಮಗೊಳಿಸುವ ಕಾರ್ಯಕ್ರಮಗಳಲ್ಲಿ ತೊಡಗಬೇಕು."

ಗಾಂಧೀಜಿ ಈ ಬಗ್ಗೆ ಹರಿಜನ ಪತ್ರಿಕೆಯಲ್ಲೂ ಬರೆದರು. "ಜಯಪ್ರಕಾಶ್ ಹೇಳುವಂತೆ ಸಮಾಜವಾದವಿಲ್ಲದ ಪ್ರಜಾಪ್ರಭುತ್ವ ಅರ್ಥಹೀನ" ಎಂಬುದನ್ನು ಅವರು ಒಪ್ಪಿದರೂ, ಪರಿಶುದ್ಧವಾದ ಅಹಿಂಸಾತ್ಮಕ ಪರಿಸರದಲ್ಲಿ ಮಾತ್ರ ಈ ಉದ್ದೇಶ ಸಫಲವಾಗಬಲ್ಲುದು ಎಂದು ಅಭಿಪ್ರಾಯಪಟ್ಟರು. ಸಮಾಜವಾದದ ತತ್ವ ಭಗವದ್ಗೀತೆಯಲ್ಲಿಯೇ ಇದೆ ಎಂದು ವಾದಿಸಿದ ಅವರು, ಹೇಗೆ ಸತ್ಯ ಮತ್ತು ಅಹಿಂಸೆಗಳ ಮೂಲಕ ಮಾತ್ರ ಸರ್ವರಿಗೂ ಸಮಾನ ಅವಕಾಶಗಳುಳ್ಳ ಸಮತಾ ಸಮಾಜ ಸಾಧ್ಯ ಎಂದು ಪತ್ರಿಕೆಯಲ್ಲಿ ಸುದೀರ್ಘ ಲೇಖನವೊಂದನ್ನು ಬರೆದರು. ಸತ್ಯವೇ ದೇವರಾದ್ದರಿಂದ; ಸಮಾಜವಾದಿಗಳು ಸತ್ಯವಂತರಾಗಿದ್ದರೆ ಅವರು ಮೊದಲು ಧರ್ಮಶ್ರದ್ಧೆ ಬೆಳೆಸಿಕೊಳ್ಳಬೇಕೆಂದೂ ಅವರು ಸೂಚಿಸಿದರು.

ಜಯಪ್ರಕಾಶರ ಸಾಮರ್ಥ್ಯ-ಗಾಂಧೀಜಿಯ ಅಂದಾಜು

ಗಾಂಧೀಜಿಯ ಈ ವಾದವನ್ನು ಜಯಪ್ರಕಾಶ್ ಒಪ್ಪಲಿಲ್ಲ. ಪರ್ಯಾಯ ಚಿಂತನೆಗೆ ವ್ಯವಧಾನವಿಲ್ಲದ ಅವರ ಮನಸ್ಸಿನಲ್ಲಿನ್ನೂ ಮಾರ್ಕ್ಸ್‌ನ ವರ್ಗ ಹೋರಾಟದ ಕಲ್ಪನೆಯೇ ಪ್ರಧಾನವಾಗಿ ಉಳಿದಿತ್ತು. ಕಮ್ಯೂನಿಸ್ಟರು ಪ್ರತಿಪಾದಿಸುವುದಕ್ಕಿಂತ ಭಿನ್ನವಾದ, ಭಾರತದ ವಿಶಿಷ್ಟ ಸಮಾಜಕ್ಕೆ ತಕ್ಕುದಾದ ವರ್ಗ ಹೋರಾಟಕ್ಕೆ ಪೂರಕವಾದ ಹೊಸ ಹೊಳಹುಗಳನ್ನು ಅವರು ಗಾಂಧೀಜಿಯವರ ಚಿಂತನೆಯಲ್ಲಿ ಕಂಡರಾದರೂ, ಕಾಂಗ್ರೆಸ್‌ನ ಮೂಲಕ ಇದು ಸಾಧ್ಯವಾಗಲಾರದು ಎಂದು ದೃಢವಾಗಿ ನಂಬಿದ್ದರು. ಆದರೆ ಜಯಪ್ರಕಾಶರ ಚಾರಿತ್ರ್ಯದ ಸಾಮರ್ಥ್ಯವನ್ನು ಮೊದಲಿನಿಂದಲೂ ಅರಿತಿದ್ದ ಗಾಂಧೀಜಿ, ಈ ಸಾಮರ್ಥ್ಯ ವೈಫಲ್ಯದ ಹಾದಿಯಲ್ಲಿ ನಶಿಸಿಹೋಗಬಾರದೆಂದು ಅವರನ್ನು ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಲು ಸಮಯ ಕಾಯುತ್ತಿದ್ದರು.

ಜಯಪ್ರಕಾಶರ ಕ್ರಾಂತಿ ಸಿದ್ಧಾಂತದ ಬಗ್ಗೆ ಗಾಂಧೀಜಿಗೆ ಯಾವುದೇ ಭಿನ್ನಾಭಿಪ್ರಾಯ ವಿದ್ದರೂ ಕೂಡಾ, ಅವರ ದೇಶಪ್ರೇಮ, ಪರಮ ಗುರಿಯ ಬಗ್ಗೆ ಅವರಿಗಿರುವ ನಿಷ್ಠೆ ಮತ್ತು ಅವರ ಅಗಾಧ ಕಾರ್ಯ ಸಾಮರ್ಥ್ಯದ ಬಗ್ಗೆ ಹೆಮ್ಮೆಪಡುತ್ತಿದ್ದರು. ಜಯಪ್ರಕಾಶರು ತಮಗೆ ದೇವರಲ್ಲಿ ನಂಬಿಕೆ ಇಲ್ಲವೆಂದು ಹೇಳುತ್ತಿದ್ದರೂ, ಗಾಂಧೀಜಿಗೆ ಅವರು ದೇವರಿಗೆ ಭಯಪಡುವ ಮನುಷ್ಯನಂತೆ ಕಾಣುತ್ತಿದ್ದರು. ಗಾಂಧೀಜಿ ತತ್ವಚಿಂತನೆಯ ಬಗ್ಗೆ ಜಯಪ್ರಕಾಶರಿಗೆ ಯಾವುದೇ ಭಿನ್ನಾಭಿಪ್ರಾಯವಿದ್ದರೂ, ಗಾಂಧೀಜಿಯ ಮುಂದೆ ಅವರು ವಿನಮ್ರರಾಗಿಬಿಡುತ್ತಿದ್ದರು. ಗಾಂಧೀಜಿಯವರನ್ನು ಭೇಟಿ ಮಾಡಿದವರೆಲ್ಲಾ ಅವರಿಗೆ ಕೈ ಜೋಡಿಸಿ ನಮಸ್ಕಾರ ಮಾಡಿ ಗೌರವ ಸೂಚಿಸಿದರೆ, ಜಯಪ್ರಕಾಶ್ ಇಡಿಯಾಗಿ ಬಗ್ಗಿ ಅವರ ಕಾಲು ಮುಟ್ಟಿ ನಮಸ್ಕರಿಸುತ್ತಿದ್ದರು. ಜಯಪ್ರಕಾಶರ ಆತ್ಮೀಯ ಸ್ನೇಹಿತರಾಗಿದ್ದ ಮೀನೂ ಮಸಾನಿಯವರೊಮ್ಮೆ 'ಮಾರ್ಕ್ಸ್‌ವಾದಿಯಾದ ನೀವು ಕಾಲುಮುಟ್ಟಿ ನಮಸ್ಕರಿಸುವ ಕೆಲಸ ಮಾಡಬಹುದೇ?' ಎಂದು ಕೆಣಕಿದಾಗ ಅವರು, "ನಾನು ಮಾರ್ಕ್ಸ್‌ವಾದಿಯಾಗುವ ಮುನ್ನ ಹಿಂದೂ ಆಗಿದ್ದೆ; ಹಿರಿಯರನ್ನು ಅತ್ಯಂತ ಗೌರವದಿಂದ ಕಾಣಬೇಕೆಂದು ನನಗೆ ಮನದಟ್ಟು ಮಾಡಲಾಯಿತು. ಇದಕ್ಕೆ ವಿರುದ್ಧವಾದ ಯಾವ ಅಭಿಪ್ರಾಯವೂ ನನ್ನನ್ನು ತಟ್ಟಿಲ್ಲವಾದ್ದರಿಂದ ನಾನು ಮಾರ್ಕ್ಸ್‌ವಾದಿಯಾಗಿಯೂ ಹೀಗೆ ಮಾಡಬಲ್ಲೆ" ಎಂದು ಉತ್ತರಿಸಿದ್ದರು!

ಗಾಂಧೀಜಿ ಕೂಡಾ ಜಯಪ್ರಕಾಶರನ್ನು ಅತ್ಯಂತ ಆಸಕ್ತಿ ಹಾಗೂ ಕುತೂಹಲಗಳಿಂದ ಗಮನಿಸುತ್ತಿದ್ದರು. ಅವರು ಜಯಪ್ರಕಾಶರಲ್ಲಿ, ಆಧುನಿಕ ಭಾರತದ ಧೀಮಂತ ನಾಯಕರೊಬ್ಬರನ್ನು ಕಂಡಿದ್ದರು. ಈ ದೃಷ್ಟಿಯಿಂದಲೇ ಅವರು ಜಯಪ್ರಕಾಶರ 'ತಾತ್ವಿಕ ಗೊಂದಲ'ಗಳ ಬಗ್ಗೆ ಆಗಾಗ್ಗೆ ತಮ್ಮ ಸಹವರ್ತಿಗಳೊಡನೆ ಪ್ರಸ್ತಾಪಿಸುತ್ತಿದ್ದರು. ಹಿಂಸೆ ಮತ್ತು ಅಹಿಂಸೆಗಳ ಪೂರ್ಣ ಸ್ವರೂಪವನ್ನು ಕುರಿತು ಜಯಪ್ರಕಾಶರಿಗೆ ಪೂರ್ಣ ಅರಿವಿಲ್ಲದ ಬಗ್ಗೆ ಗಾಂಧೀಜಿ ವಿಷಾದ ಪಡುತ್ತಿದ್ದರು. ಒಮ್ಮೆ ಗಾಂಧೀಜಿ ಮಸಾನಿಯವರೊಡನೆ ಮಾತನಾಡುತ್ತಾ "ನಮ್ಮ ಜಯಪ್ರಕಾಶ್ ಗುರಿ ಮತ್ತು ಮಾರ್ಗಗಳ ನಡುವೆ ಇರುವ ಸೂಕ್ಷ್ಮ ಸಂಬಂಧಗಳನ್ನು

ಅರಿತುಕೊಳ್ಳುವ ಪ್ರಯತ್ನ ಮಾಡಿದರೆ, ದೇಶದ ಭವಿಷ್ಯದ ಬಗ್ಗೆ ನಾನು ಮತ್ತಷ್ಟು ಆಶಾ ಭಾವನೆ ತಳೆದೇನು" ಎಂದು ಹೇಳಿದಾಗ, ಮಸಾನಿಯವರು "ಹಾಗೇನೂ ಇಲ್ಲ; ಜಯಪ್ರಕಾಶ್‌ಗೆ ಅಹಿಂಸೆಯಲ್ಲಿಯೇ ನಂಬಿಕೆ ಇರುವುದು. ಆತ ಶೀಘ್ರ ಕೋಪಿಯಾದ ತರುಣನಷ್ಟೆ!" ಎಂದು ತಮ್ಮ ಸ್ನೇಹಿತನನ್ನು ಸಮರ್ಥಿಸುವ ಪ್ರಯತ್ನ ಮಾಡಿದರು. ಆದರೆ ಗಾಂಧೀಜಿ ನಸುನಕ್ಕು "ಇಲ್ಲ. ಖಂಡಿತ ಇಲ್ಲ. ಜಯಪ್ರಕಾಶ್‌ಗೆ ಕೋಪ 'ಬರುವುದಿಲ್ಲ', ತನ್ನೆದೆಯಲ್ಲಿ ಆತ ಅದನ್ನು ಸಾಕಿಕೊಂಡಿದ್ದಾನೆ" ಎಂದು ಉತ್ತರಕೊಟ್ಟರು!

ಮಸಾನಿಯವರು ಜಯಪ್ರಕಾಶರನ್ನು ಕೆಲವು ದಿನಗಳ ನಂತರ ಹೊಸ ದೆಹಲಿಯಲ್ಲಿ ಭೇಟಿ ಮಾಡಿದಾಗ ಗಾಂಧೀಜಿಯವರ ಈ ಅಭಿಪ್ರಾಯವನ್ನು ಅವರಿಗೆ ತಿಳಿಸಿದರು. ಮುಖಕ್ಷೌರ ಮಾಡಿಕೊಳ್ಳುತ್ತಿದ್ದ ಜಯಪ್ರಕಾಶ್, ಮಸಾನಿಯವರ ಮಾತನ್ನು ಕೇಳಿದೊಡನೆ ಸ್ವಲ್ಪ ಕಾಲ ರೇಜರ್ ಅನ್ನು ಹೇಗೆ ಹಿಡಿದಿದ್ದರೋ ಹಾಗೇ ಹಿಡಿದು ಮಾತನಾಡದೆ ನಿಂತುಬಿಟ್ಟರು. ತುಸು ಗಾಬರಿಯಿಂದ ಮಸಾನಿ ಈ ವಿಚಿತ್ರ ವರ್ತನೆಗೆ ಕಾರಣವೇನೆಂದು ಕೇಳಿದಾಗ ಜಯಪ್ರಕಾಶ್, ತಮ್ಮನ್ನು ಕುರಿತ ಗಾಂಧೀಜಿಯ ಅಭಿಪ್ರಾಯದಿಂದ ತಾವೆಷ್ಟು ಉದ್ವಿಗ್ನಗೊಂಡರೆಂದರೆ, ಕ್ಷೌರವನ್ನು ಮುಂದುವರಿಸಿದ್ದಲ್ಲಿ ರೇಜರಿನಿಂದ ತಾವಾಗಿಯೇ ಮುಖ ಕತ್ತರಿಸಿಕೊಳ್ಳುತ್ತಿದುದು ಖಂಡಿತ ಎಂದು ಹೇಳಿದರು!

ಕಾಂಗ್ರೆಸ್ ಅಧ್ಯಕ್ಷತೆ - ನೆಹರೂ ವಿರೋಧ

ಜಯಪ್ರಕಾಶರ ಈ ಭಾವಪರವಶತೆಯ ದೌರ್ಬಲ್ಯವನ್ನು ಅರಿತಿದ್ದ ಗಾಂಧೀಜಿ ಉದ್ದೇಶಪೂರ್ವಕವಾಗಿಯೇ, ಅವರನ್ನು ೧೯೪೮ನೇಯ ವರ್ಷಕ್ಕಾಗಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸಲಹೆ ಮಾಡಿದರು. ಈ ಹಿರಿಯ ಹೊಣೆಗಾರಿಕೆಯಿಂದ ಜಯಪ್ರಕಾಶ್ ಸಾಕಷ್ಟು 'ಪ್ರಬುದ್ಧ'ರಾಗುತ್ತಾರೆ ಮತ್ತು ರಾಷ್ಟ್ರ ನಾಯಕರಾಗಿ ಮುಂದೆ ಭಾರೀ ಜವಾಬ್ದಾರಿ ಹೊರಲು ಅನುಭವವನ್ನು ಕ್ರೋಢಿಕರಿಸಿಕೊಳ್ಳುತ್ತಾರೆ ಎಂಬುದು ಗಾಂಧೀಜಿಯ ಆಶಯವಾಗಿತ್ತು. ಅಲ್ಲದೆ ಆಗ್ಗೆಯಾಗಲೇ ಅಧಿಕಾರದ ರುಚಿ ನೋಡಿದ್ದ ಕಾಂಗ್ರೆಸ್ಸಿಗರು ಆತ್ಮಸಾಕ್ಷಿಯನ್ನೇ ಕಳೆದುಕೊಳ್ಳುತ್ತಿದ್ದ ಸೂಚನೆಗಳು ಗಾಂಧೀಜಿಗೆ ಕಂಡುಬಂದಿದ್ದು, ಇಂತಹ ಕಾಂಗ್ರೆಸಿಗರನ್ನು ಸೂಕ್ತ ರೀತಿಯಲ್ಲಿ 'ಹತೋಟಿ'ಯಲ್ಲಿಡಲು ಜಯಪ್ರಕಾಶರೇ ಸಮರ್ಥರೆಂದು ಅವರು ಭಾವಿಸಿದ್ದರು. ಈ ಹೊತ್ತಿಗೆ ಜಯಪ್ರಕಾಶರ ಅದ್ಭುತವಾದ ಸಂಘಟನಾಶಕ್ತಿ ಎಲ್ಲರಿಗೂ ತಿಳಿದ ವಿಷಯವಾಗಿತ್ತು.

ಆದರೆ ಈ ಸಾಮರ್ಥ್ಯ-ಅರ್ಹತೆಗಳೇ ಜಯಪ್ರಕಾಶರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಅನರ್ಹರನ್ನಾಗಿ ಮಾಡಿದವು. ಗಾಂಧೀಜಿ ಜಯಪ್ರಕಾಶರ ಹೆಸರನ್ನು ನೆಹರೂ ಅವರಿಗೆ ಸೂಚಿಸಿದಾಗ, ನೆಹರೂ ಅದನ್ನು 'ಕಾಂಗ್ರೆಸ್ಸಿನ ಏಕತೆಯ ದೃಷ್ಟಿಯಿಂದ' ವಿರೋಧಿಸಿದರು. ಸಮಾಜವಾದಿಗಳಲ್ಲೇ ಒಬ್ಬರು ಕಾಂಗ್ರೆಸ್ ಅಧ್ಯಕ್ಷರಾಗ ಬೇಕಿದ್ದಲ್ಲಿ, ಆಚಾರ್ಯ ನರೇಂದ್ರ ದೇವ ಅವರು ಸೂಕ್ತರಾದ ವ್ಯಕ್ತಿ ಎಂದು ತಮ್ಮ ಅಭಿಪ್ರಾಯ ನೀಡಿದರು. ಆದರೆ ಸಮಾಜವಾದಿಗಳೆಂದರೇ ಬೆಂಕಿಯಾಗುತ್ತಿದ್ದ ಸರ್ದಾರ್ ಪಟೇಲರು ಕಾಂಗ್ರೆಸ್ ಸಂಘಟನೆಯನ್ನು

ಎಡಪಂಥೀಯರೊಬ್ಬರಿಗೆ ಒಪ್ಪಿಸುವುದನ್ನು ಸ್ಪಷ್ಟವಾಗಿ ತಳ್ಳಿ ಹಾಕಿದರು. ಕೊನೆಗೆ ರಾಜೇಂದ್ರ ಪ್ರಸಾದ್ ಅವರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಆರಿಸಲಾಯಿತು.

ಈ ಘಟನೆಯೇನೂ ಅನಿರೀಕ್ಷಿತವಾಗಿರಲಿಲ್ಲವಾದ್ದರಿಂದ, ಜಯಪ್ರಕಾಶ್ ಇದರಿಂದೇನೂ ವಿಚಲಿತಗೊಳ್ಳಲಿಲ್ಲ. ಕಾಂಗ್ರೆಸ್ ಪಕ್ಷ ಸಮಾಜವಾದಕ್ಕೆ ತಿಲಾಂಜಲಿ ಕೊಡುವುದು ಖಚಿತವೆನಿಸಿದ್ದರೂ, ದೇಶದಲ್ಲಿ ಸದ್ಯಕ್ಕೆ ಕಾಂಗ್ರೆಸ್‌ವೊಂದೇ ಸುಸಂಘಟಿತವಾದ ರಾಜಕೀಯ ವೇದಿಕೆ ಎಂಬ ಅರಿವೂ ಅವರಿಗಿತ್ತು. ಆದ್ದರಿಂದಲೇ ಅವರು ಯಾವುದೇ ನಿರ್ಣಾಯಕ ಕ್ರಮಕೈಗೊಳ್ಳದೆ, ದೇಶಾದ್ಯಂತ ಪ್ರವಾಸ ಕೈಗೊಂಡು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಾ ಸ್ವತಂತ್ರ ಭಾರತದ ಕನಸುಗಳು ನನಸಾಗಬೇಕಾದರೆ ಸಮಾಜವಾದವೊಂದೇ ಮಾರ್ಗ ಎಂಬುದನ್ನು ವಿವರಿಸುವ ಕೆಲಸದಲ್ಲಿ ತೊಡಗಿದರು. ಎಲ್ಲ ರಾಜ್ಯಗಳಿಗೂ ಭೇಟಿ ನೀಡಿ ಆಯಾ ರಾಜ್ಯದ ಕಾಂಗ್ರೆಸ್ ಸಮಾಜವಾದಿ ಸಮ್ಮೇಳನಗಳ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಧ್ಯಂತರ ವ್ಯವಸ್ಥೆಯಾಗಿ ಅಧಿಕಾರ ವಹಿಸಿಕೊಂಡಿದ್ದ ಕಾಂಗ್ರೆಸ್ ಪ್ರಾಂತೀಯ ಸರಕಾರಗಳ ಭ್ರಷ್ಟಾಚಾರಗಳ ಬಗ್ಗೆ ಸುದ್ದಿಗಳು ಬರತೊಡಗಿದವು. ಕಾಂಗ್ರೆಸ್ ಸಮಾಜವಾದಿಗಳು ಇದರ ವಿರುದ್ಧ ಸರ್ಕಾರಗಳಿಗೆ ಎಚ್ಚರಿಕೆ ನೀಡಿದರು. ಭಾರತ ವಿದೇಶಿಯರಿಂದ ಸ್ವತಂತ್ರವಾದದ್ದು ಸ್ವದೇಶಿಯರ ಶೋಷಣೆಗೆ ಒಳಗಾಗುವುದಕ್ಕಲ್ಲ ಎಂದು ಕಾಂಗ್ರೆಸ್ ಸಮಾಜವಾದಿ ಪಕ್ಷ ಹೇಳಿತು. ಇಂತಹ ಮಾತುಗಳು ಸರ್ದಾರ್ ಪಟೇಲರಂತಹವರಿಗೆ ಪಕ್ಷದ ಶಿಸ್ತಿನ ಉಲ್ಲಂಘನೆಯಾಗಿ ಕಂಡಿತು. ರಾಷ್ಟ್ರೀಯ ಸರ್ಕಾರದ ನೇತೃತ್ವ ವಹಿಸಿದ್ದ ಜವಾಹರಲಾಲರಿಗೂ ಸಹ ಇಂತಹ ಮಾತುಗಳು ತಮ್ಮನ್ನು ಪೇಚಿಗೆ ಸಿಲುಕಿಸಬಲ್ಲ ಮಾತುಗಳಾಗಿ ಕಂಡವು. ೧೯೪೮ರ ಜನವರಿಯ ಹೊತ್ತಿಗೆ ಪಟೇಲರು ಒಂದು ಹೇಳಿಕೆಯನ್ನು ನೀಡಿ, 'ಪಕ್ಷದ ಒಗ್ಗಟ್ಟು' ಎಂದರೇನು ಎಂಬುದನ್ನು ವಿವರಿಸುತ್ತಾ "ಕಾಂಗ್ರೆಸ್ ಪಕ್ಷದ ಕಾರ್ಯ ನಿರ್ವಹಣೆ ಸರಿಕಂಡು ಬರದ ಜನರ ಸ್ಥಾನ, ಪಕ್ಷದ ಹೊರಗಿದೆ" ಎಂದು ಸ್ಪಷ್ಟವಾಗಿ ತಿಳಿಸಿದರು. ಈ ಹೇಳಿಕೆ ನಿರ್ದಿಷ್ಟವಾಗಿ ಕಾಂಗ್ರೆಸ್ ಸಮಾಜವಾದಿಗಳ ವಿರುದ್ಧವೇ ಉದ್ದೇಶಿತಗೊಂಡಿತ್ತು ಎಂಬುದು ಎಲ್ಲರಿಗೂ ತಿಳಿದಿತ್ತು; ಜವಾಹರಲಾಲರಿಗೂ ಸಹ.

ಗಾಂಧೀಜಿಯ ಕೊಲೆ: ನೆಹರೂ ಪಟೇಲ್ ರಾಜೀನಾಮೆಗೆ ಒತ್ತಾಯ

ಈ ಬಿಕ್ಕಟ್ಟು ಗಟ್ಟಿಗೊಳ್ಳುತ್ತಿದ್ದಂತೆ ಇಡೀ ದೇಶವನ್ನು ತಲ್ಲಣಗೊಳಿಸಿದ ಸುದ್ದಿ ಬಂತು. ೧೯೪೮ರ ಜನವರಿ ೩೦ ರ ಸಂಜೆ ಪ್ರಾರ್ಥನೆಗಾಗಿ ಬಿರ್ಲಾ ಮಂದಿರಕ್ಕೆ ಬಂದಿದ್ದ ಗಾಂಧೀಜಿಯನ್ನು ನಾಥೂರಾಮ್ ಗೋಡ್ಸೆ ಎಂಬ ಹಿಂದೂ ಕೋಮುವಾದಿಯೊಬ್ಬ ಕೊಲೆ ಮಾಡಿದ್ದ. ದೇಶದ ವಿಭಜನೆಯ ಸಮಯದಲ್ಲಿ ಸ್ಫೋಟಗೊಂಡಿದ್ದ ಮತೀಯ ಭಾವ ವಿಕಾರ ತನ್ನ ಕೊನೆಯ ಮಹಾಬಲಿಯನ್ನು ತೆಗೆದುಕೊಂಡಿತ್ತು.

ಹಿಂದೂ ಮಹಾಸಭಾದ ಆಶ್ರಯದಲ್ಲಿ ಸಾವರ್ಕರ್, ನಾರಾಯಣ್ ದತ್ತಾತ್ರೇಯ ಆಪ್ಟೆ, ವಿಷ್ಣು ಕರ್ಕರೆ, ನಾಥೂರಾಂ ಮತ್ತು ಗೋಪಾಲ್ ಗೋಡ್ಸೆ ಮುಂತಾದ ಕೆಲವು

ಹಿಂದೂ ತೀವ್ರವಾದಿಗಳು ಗಾಂಧೀಜಿಯ ಕೊಲೆಯ ಪ್ರಯತ್ನ ನಡೆಸಿದ್ದಾರೆ ಎಂಬು ಸುಳಿವು ದೊರಕಿತ್ತಾದರೂ, ಸರ್ಕಾರ ತಾನು ವಹಿಸಬೇಕಾಗಿದ್ದಷ್ಟು ತೀವ್ರ ಎಚ್ಚರಿಕೆಯನ್ನು ವಹಿಸಿರಲಿಲ್ಲ. ಈ ಬಗ್ಗೆ ಜಯಪ್ರಕಾಶ್ ಕೂಡಾ ಸರ್ಕಾರಕ್ಕೆ ಸುದ್ದಿ ಕೊಟ್ಟಿದ್ದರು. ಪರಿಸ್ಥಿತಿಯ ಅರಿವಿದ್ದೂ ಗಾಂಧೀಜಿಯ ಸುರಕ್ಷತೆಯ ಬಗ್ಗೆ ಎಚ್ಚರಿಕೆ ವಹಿಸದ ಸರ್ಕಾರದ ವಿರುದ್ಧ ಜಯಪ್ರಕಾಶ್ ಸಿಟ್ಟಾದರು. ಜಯಪ್ರಕಾಶ್, ರಾಮ ಮನೋಹರ ಲೋಹಿಯಾ ಹಾಗೂ ಕಮಲಾದೇವಿ ಚಟ್ಟೋಪಾಧ್ಯಾಯ ಅವರುಗಳು ಪತ್ರಿಕಾ ಹೇಳಿಕೆಯೊಂದನ್ನು ನೀಡಿ ನೆಹರೂ ಹಾಗೂ ಪಟೇಲರ ರಾಜೀನಾಮೆಗಾಗಿ ಒತ್ತಾಯಪಡಿಸಿದರು. ನೆಹರೂ ಮತ್ತು ಪಟೇಲ್ ಇದೊಂದು ಬೇಜವಾಬ್ದಾರಿಯುತ ಹೇಳಿಕೆಯೆಂದು ತಳ್ಳಿ ಹಾಕಿದರು.

೭. ಸಮಾಜವಾದಿ ರಾಜಕಾರಣ : ಭೌತವಾದಕ್ಕೆ ವಿದಾಯ

ಗಾಂಧೀಜಿಯ ಕೊಲೆ ಜಯಪ್ರಕಾಶರನ್ನು ದಿಗ್ಮೂಢರನ್ನಾಗಿಸಿತ್ತು. ಇಡೀ ದೇಶ ಅವಮಾನ ಮತ್ತು ಶೋಕದಲ್ಲಿ ಮುಳುಗಿತ್ತು. ಮುಂದಿನ ಹದಿನೈದು ದಿನಗಳ ಕಾಲ ಜಯಪ್ರಕಾಶ್ ಹೆಚ್ಚು ಕಡಿಮೆ ಮೂಕರಾಗಿಬಿಟ್ಟಿದ್ದರು. ಅವರಲ್ಲಿ ಸಮಾಜ ಪರಿವರ್ತನೆ ಕುರಿತ ತಮ್ಮ ನಂಬಿಕೆಗಳ ಬಗ್ಗೆಯೇ ಪುನರಾಲೋಚನೆ ಆರಂಭವಾದಂತಿತ್ತು. ಸ್ವಾತಂತ್ರ್ಯ ಹೋರಾಟದಲ್ಲಿನ ಗಾಂಧಿ ಮಾರ್ಗದ ಸಾಧನೆ ಅವರ ಮನಸ್ಸಿನಲ್ಲಿ ಇನ್ನೂ ಹಸಿಯಾಗಿದ್ದು, ಜಯಪ್ರಕಾಶ್ ಬಹುದಿನಗಳಿಂದಲೂ ಮುಂದೂಡುತ್ತಾ ಬಂದಿದ್ದ ತಮ್ಮ ಸಮಾಜವಾದಿ ಹೋರಾಟದ 'ಮಾರ್ಗ'ದ ಬಗ್ಗೆ ಈಗ ಮಂಥನ ಮಾಡುವುದು ಅನಿವಾರ್ಯವಾಗಿತ್ತು.

ಕಾಂಗ್ರೆಸ್ಸಿಗರ ಭ್ರಷ್ಟಾಚಾರ - ನೆಹರೂಗೆ ಪತ್ರ

ಗಾಂಧೀಜಿ ಕೊಲೆ ದುರಂತದ ನೆನಪು ಕ್ರಮೇಣ ಮಾಸುತ್ತಿದ್ದಂತೆ ಕಾಂಗ್ರೆಸ್ ಮತ್ತೆ ಭ್ರಷ್ಟಾಚಾರದ ಆರೋಪಗಳಿಗೆ ಸಿಲುಕಿತು. ಕಾಂಗ್ರೆಸ್ ಮಂತ್ರಿಗಳು ತಮ್ಮ ಜನರನ್ನೇ ಸರ್ಕಾರದ ವಿವಿಧ ಅಂಗಗಳಿಗೆ ತುಂಬಿ ಮುಂದೆ ೧೯೫೨ರಲ್ಲಿ ನಡೆಯಲಿದ್ದ ಮೊಟ್ಟ ಮೊದಲ ಸಾರ್ವತ್ರಿಕ ಚುನಾವಣೆಗಳಲ್ಲಿ ತಂತಮ್ಮ ಯಶಸ್ಸಿಗಾಗಿ ಸಿದ್ಧತೆ ನಡೆಸಿದ್ದರು. ಸಹಜವಾಗಿ ಇದು ತತ್ವಭ್ರಷ್ಟತೆ, ಸ್ವಜನ ಪಕ್ಷಪಾತ ಮುಂತಾದ ದುಷ್ಟ ಪ್ರವೃತ್ತಿಗಳಿಗೆ ಕಾರಣವಾದವು. ಉದ್ಯಮಗಳ ಸ್ಥಾಪನೆಗೆ ಪರವಾನೆ ನೀಡುವಲ್ಲಿ, ಆಹಾರ ಪೂರೈಕೆ ವ್ಯವಸ್ಥೆಯಲ್ಲಿ, ಅಧಿಕಾರಿಗಳ ನೇಮಕಾತಿಯಲ್ಲಿ—ಹೀಗೆ ಎಲ್ಲ ವಿಷಯಗಳಲ್ಲೂ ರಾಜಕೀಯ ಅಧಿಕಾರದ ದುರುಪಯೋಗ ನಡೆದಿತ್ತು. ಸ್ವಾತಂತ್ರ್ಯ ದೊರೆತ ಕೆಲವೇ ದಿನಗಳಲ್ಲೇ ಅದರ ದುರುಪಯೋಗ ಈ ಪ್ರಮಾಣದಲ್ಲಿ ಆರಂಭವಾಗಿರುವುದು ಜಯಪ್ರಕಾಶರನ್ನು ವಿಚಲಿತಗೊಳಿಸಿತು. ಸ್ವತಃ ಕಾಂಗ್ರೆಸ್ ಪದಾಧಿಕಾರಿಗಳೇ ಭಾರೀ ಉದ್ಯಮಗಳ ಸ್ಥಾಪನೆಗಾಗಿ ಅರ್ಜಿಗಳನ್ನು ಸಲ್ಲಿಸಿ, ಅವುಗಳ ಅನುಮೋದನೆಗಾಗಿ ಸರ್ಕಾರದ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪ ನಡೆಸತೊಡಗಿದ್ದರು. ಜಯಪ್ರಕಾಶರು ಈ ಬಗ್ಗೆ ನೆಹರೂ ಅವರಿಗೆ ದೀರ್ಘ ಪತ್ರವೊಂದನ್ನು ಬರೆದರು. ಭ್ರಷ್ಟಾಚಾರದಲ್ಲಿ ತೊಡಗಿರುವ ಜನರಿಗೆ ತೀವ್ರ ಶಿಕ್ಷೆ ವಿಧಿಸಲು ಸಾಧ್ಯವಾಗುವಂತೆ, ಭ್ರಷ್ಟಾಚಾರ ತನಿಖಾ ಮಂಡಳಿಯೊಂದನ್ನು ರಚಿಸುವ ಸಲಹೆ ಮಾಡಿದರು.

ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಜಯಪ್ರಕಾಶರಿಗೆ ಸ್ವಾತಂತ್ರ್ಯ ಬರುವುದಕ್ಕಿಂತ ಮುನ್ನವೇ ಪರಿಚಯವಾಗಿತ್ತು. ೧೯೪೭ರ ಮಾರ್ಚ್‌ನಲ್ಲಿ ಬಿಹಾರದ ಕಾಂಗ್ರೆಸ್ ಸರ್ಕಾರ

ಕೋಮುವಾರು ಘರ್ಷಣೆಗಳನ್ನು ಎದುರಿಸುವಲ್ಲಿ ವಿಫಲಗೊಂಡಿತ್ತು. ರಾಜ್ಯ ಸರ್ಕಾರ ಹಿಂದೂ ಪರವಾಗಿದ್ದುಕೊಂಡು, ಮುಸ್ಲಿಮರ ಕೊಲೆಗಳ ಬಗ್ಗೆ ನಿರ್ಲಕ್ಷ್ಯ ತಳೆದಿತ್ತು. ಸಮಾಜವಾದಿಗಳು ಇದನ್ನು ತೀವ್ರವಾಗಿ ಖಂಡಿಸಿದ್ದರು ಮತ್ತು ಗಾಂಧೀಜಿಯ ಗಮನಕ್ಕೆ ತಂದಿದ್ದರು. ಇದರಿಂದಾಗಿ ಸಮಾಜವಾದಿಗಳ ಪರವಾಗಿದ್ದ ಪೊಲೀಸರು ಹಿರಿಯ ಅಧಿಕಾರಿಗಳ ಕಿರುಕುಳಕ್ಕೆ ಒಳಗಾದರು. ಒಬ್ಬ ಪೊಲೀಸ್ ಪೇದೆಯ ಮೇಲೆ ಸುಳ್ಳು ಮೊಕದ್ದಮೆಯನ್ನು ಹೊರಿಸಿ ಸರಕಾರ, ತನ್ನದೇ ರೀತಿಯಲ್ಲಿ ಸೇಡು ತೀರಿಸಿಕೊಳ್ಳಲು ಯತ್ನಿಸಿತು. ಇದರಿಂದಾಗಿ ಇಡೀ ಪೊಲೀಸ್ ಪಡೆ ಮುಷ್ಕರ ಹೂಡಿತು. ಮುಷ್ಕರದ ಸಂದರ್ಭದಲ್ಲಿ ಹೊರೆ ಬೀಳಲಾರಂಭಿಸಿದ ಸುದ್ದಿಗಳು ಗೃಹಖಾತೆಯಲ್ಲಿನ ಭ್ರಷ್ಟಾಚಾರಗಳನ್ನು ಹೊರಗೆಡಹಲಾರಂಭಿಸಿದವು. ಕ್ರುದ್ಧಗೊಂಡ ಕಾಂಗ್ರೆಸ್ ಸರ್ಕಾರ ತನ್ನ ಪೊಲೀಸ್ ಪಡೆಯ ಮೇಲೆ ಗುಂಡು ಹಾರಿಸಲು ಸಶಸ್ತ್ರ ದಳಕ್ಕೆ ಸೂಚನೆ ನೀಡಿತು. ಜಯಪ್ರಕಾಶ್ ಇದನ್ನು ಗಾಂಧೀಜಿಯವರ ಗಮನಕ್ಕೆ ತಂದರು. ಜಯಪ್ರಕಾಶರ ಸಲಹೆಯ ಮೇರೆಗೆ ಪೊಲೀಸರ ಸಂಘದ ಅಧ್ಯಕ್ಷ ರಮಾನಂದ ತಿವಾರಿ ಅವರು ಗಾಂಧೀಜಿಯನ್ನು ಭೇಟಿಯಾದರು. ಆತ್ಮಗೌರವವನ್ನು ಕಾಪಾಡಿಕೊಳ್ಳಬಯಸಿದ ಪೊಲೀಸರನ್ನು ಸದೆ ಬಡಿಯಲು ಕಾಂಗ್ರೆಸ್ ಸರ್ಕಾರವೊಂದು ಬ್ರಿಟಿಷ್ ಸೇನೆಯನ್ನು ಬಳಸಿದ ಸಂಗತಿ ಗಾಂಧೀಜಿಯನ್ನು ದಿಗ್ಭ್ರಮೆಗೊಳಿಸಿತು. ಅವರು ಬಿಹಾರ ಸರ್ಕಾರಕ್ಕೆ ಛೀಮಾರಿ ಹಾಕಿ ಸರ್ಕಾರ ಹಾಗೂ ಪೊಲೀಸ್ ಪಡೆಗಳ ನಡುವೆ ರಾಜಿ ಮಾಡಿಸುವ ಪ್ರಯತ್ನ ಮಾಡಿದರು. ಮುಷ್ಕರವನ್ನು ನಿಲ್ಲಿಸುವಂತೆ ಅವರು ರಮಾನಂದ ತಿವಾರಿ ಅವರಿಗೆ ಮನವಿ ಮಾಡಿದರು. ಗಾಂಧೀಜಿಯ ಮನವಿಯನ್ನು ಆದೇಶ ಎಂದು ಪರಿಗಣಿಸಿದ ತಿವಾರಿ ಅವರು ಮುಷ್ಕರವನ್ನು ಹಿಂತೆಗೆದುಕೊಳ್ಳಲು ಒಪ್ಪಿಕೊಂಡರು. ಮತ್ತು ಹಾಗೆಂದು ಪತ್ರಿಕೆಗಳಿಗೂ ಹೇಳಿಕೆ ಕೊಟ್ಟರು. ಮತ್ತು ಪೊಲೀಸರ ಚಿಂತಾಜನಕ ಸ್ಥಿತಿ-ಗತಿಗಳ ಕಡೆ ಗಮನ ಹರಿಸಬೇಕೆಂದು ಗಾಂಧೀಜಿಯನ್ನು ಕೇಳಿಕೊಂಡರು.

ಜಯಪ್ರಕಾಶರ ಹತಾಶೆ–ಜವಾಹರರ ವಿಷಾದ

ಆದರೆ ಮಾರನೆಯ ದಿನವೇ ಜಯಪ್ರಕಾಶರ ಕಣ್ಮುಂದೆಯೇ ತಿವಾರಿ ಅವರನ್ನು ಸರ್ಕಾರ ದಸ್ತಗಿರಿ ಮಾಡಿತು. 'ಕಾನೂನು ಮತ್ತು ಶಿಸ್ತಿನ ಪರಿಸ್ಥಿತಿಯನ್ನು ಹದಗೆಡಿಸಿ ಆ ಮೂಲಕ ಹಲವಾರು ಜನರ ಸಾವಿಗೆ ಕಾರಣವಾದ' ಆಪಾದನೆಯ ಮೇಲೆ ತಿವಾರಿ ಅವರನ್ನು ಸೆರೆಮನೆಗೆ ತಳ್ಳಿತು. ಈ ಮುನ್ನವೇ ಬಿಹಾರದ ಮುಖ್ಯಮಂತ್ರಿಯವರು ಗಾಂಧೀಜಿಯನ್ನು ಭೇಟಿ ಮಾಡಿ, ಎಲ್ಲ ವಿಷಯವನ್ನೂ ತಮಗೆ ಬಿಡಬೇಕೆಂದೂ ಪರಿಸ್ಥಿತಿಯನ್ನು ಹತೋಟಿಗೆ ತರುವ ಜವಾಬ್ದಾರಿ ತಮ್ಮದೆಂದೂ ಹೇಳಿ ಅವರ ಮನವೊಲಿಸಿ ದೆಹಲಿಗೆ ಕಳಿಸಿದ್ದರು. ತಿವಾರಿ ಅವರ ವಿಚಾರಣೆ ಎರಡು ವರ್ಷಗಳ ಕಾಲ ನಡೆಯಿತು. ಅವರನ್ನು ಮೊಕದ್ದಮೆಯಿಂದ ಮುಕ್ತಗೊಳಿಸುವ ಜಯಪ್ರಕಾಶರ ಯಾವ ಪ್ರಯತ್ನವೂ ಸಫಲವಾಗಲಿಲ್ಲ. ಕಾಂಗ್ರೆಸಿನ ನೈತಿಕ ದೃಢತೆ ಬಗ್ಗೆ ಜಯಪ್ರಕಾಶರಲ್ಲಿ ಹತಾಶೆ ಆರಂಭವಾಗಿತ್ತು.

ಜಯಪ್ರಕಾಶರು ನೆಹರೂ ಅವರಿಗೆ ಬರೆದಿದ್ದ ಪತ್ರಕ್ಕೆ ಯಾವ ನಿರ್ದಿಷ್ಟ ಉತ್ತರವೂ ಬರಲಿಲ್ಲ. ಬದಲಾಗಿ ಸಮಾಜವಾದಿಗಳು ನಡೆಸುತ್ತಿದ್ದ ಸಭೆಗಳ ಮೇಲೆ ಹಲ್ಲೆ ಆರಂಭವಾಯಿತು. ಯಾವುದಾವುದೋ ನೆಪಗಳ ಮೇಲೆ ಸಮಾಜವಾದಿಗಳ ಸಭೆಗಳಿಗೆ ಅನುಮತಿಯನ್ನು ನಿರಾಕರಿಸುವ ಪ್ರವೃತ್ತಿ ಆರಂಭವಾಯಿತು. ಸ್ವತಃ ಜಯಪ್ರಕಾಶರು ಭಾಷಣ ಮಾಡಬೇಕಾಗಿದ್ದ ನಾಗಪುರದಲ್ಲಿ ಏರ್ಪಾಡಾಗಿದ್ದ ಸಾರ್ವಜನಿಕ ಸಭೆಯ ಮೇಲೆ ಪ್ರತಿಬಂಧ ಹೇರಲಾಯಿತು. ವಿದೇಶಿ ದಮನ ಕೊನೆಗೊಂಡು ಸ್ವದೇಶಿ ದಮನ ಆರಂಭವಾಗಿತ್ತು. ಈ ಎಲ್ಲದರ ಬಗ್ಗೆ ಜವಾಹರರು "ತುಂಬು ವಿಷಾದ"ವನ್ನು ವ್ಯಕ್ತಪಡಿಸಿ ಕೈತೊಳೆದುಕೊಂಡರು.

ಕಾಂಗ್ರೆಸ್‌ನಿಂದ ಬೇರ್ಪಡೆ: ಪ್ರಜಾಸತ್ತಾತ್ಮಕ ಸಮಾಜವಾದದ ದೀಕ್ಷೆ

ಅಶೋಕ ಮೆಹ್ತಾ ಅವರು ಗಾಂಧೀಜಿಯವರೊಡನೆ ಸಮಾಜವಾದದ ಬಗ್ಗೆ ಚರ್ಚಿಸಿದ್ದ ಸಮಯದಲ್ಲಿ, ಸಮಾಜವಾದಕ್ಕೆ ಭಾರತೀಯ ಸ್ವರೂಪ ನೀಡುವ ಸಾಧ್ಯತೆಗಳ ಹೊಳಹುಗಳು ಮೆಹ್ತಾರಿಗೆ ದೊರೆತಿದ್ದವು. ಗಾಂಧೀಜಿ, ಸಮಾಜವಾದಿಗಳ ಎಲ್ಲ ತತ್ವಾದರ್ಶಗಳನ್ನು ಸಂಪೂರ್ಣರಾಗಿ ಒಪ್ಪಿಕೊಂಡರಾದರೂ, ಹಿಂಸಾ ಮಾರ್ಗವನ್ನು ತೊರೆಯದೆ ಯಾವುದೇ ಗುರಿ ಶಾಶ್ವತವಾಗಿ ಸಾಧಿತವಾಗುವುದಿಲ್ಲ ಎಂದು ತಿಳಿಸಿದ್ದರು. "ನೀವು ಹಿಂಸೆಯನ್ನು ಬಿಡುತ್ತೇವೆಂದು ಹೇಳಿರಿ. ನಾನು ನಿಮ್ಮ ಪಕ್ಷದ ಅಧ್ಯಕ್ಷನಾಗುವೆ" ಎಂದು ಅವರು ಸಮಾಜವಾದಿಗಳಿಗೆ ಹೇಳಿದ್ದರು. ಗಾಂಧೀಜಿಯ ಕೊಲೆಯು ಹಿಂಸಾತ್ಮಕ ಮಾರ್ಗದ ಬಗ್ಗೆ ಪುನರಾಲೋಚನೆ ಮಾಡಲು ಸಮಾಜವಾದಿಗಳನ್ನು ಪ್ರೇರೇಪಿಸಿತ್ತು. ಪ್ರಮುಖ ಸಮಾಜವಾದಿಗಳಲ್ಲಿ ಇಡೀ ಗಾಂಧಿವಾದದ ಪುನರಾವಲೋಕನ ಆರಂಭವಾಗಿತ್ತು. ಇದೇ ಸಮಯದಲ್ಲಿ ಗಾಂಧಿಕೊಲೆ ಸಂದರ್ಭದಲ್ಲಿ ಸಮಾಜವಾದಿಗಳಿಂದ ಕೋಮುವಾದಿ, ಊಳಿಗಮಾನ್ಯಶಾಹಿ ಸಂಪ್ರದಾಯವಾದಿ ಎಂಬೆಲ್ಲಾ ಟೀಕೆಗಳಿಗೆ ಗುರಿಯಾಗಿದ್ದ ಉಪಪ್ರಧಾನಿಯೂ, ಗೃಹಮಂತ್ರಿಯೂ ಆದ ಸರ್ದಾರ್ ಪಟೇಲರು ಕಾಂಗ್ರೆಸ್ ಸಂವಿಧಾನಕ್ಕೆ ಒಂದು ತಿದ್ದುಪಡಿಯನ್ನು ಪ್ರಚೋದಿಸಿ 'ಇತರ ಪಕ್ಷಗಳ ಸದಸ್ಯರಿಗೆ ಕಾಂಗ್ರೆಸ್ ಸದಸ್ಯತ್ವ ನಿಷೇಧಿಸುವಂತೆ' ಮಾಡಿದರು. ಗಾಂಧೀಜಿ ಇಲ್ಲದೆ ತಬ್ಬಲಿಗಳಾಗಿದ್ದ ಸಮಾಜವಾದಿಗಳಿಗೆ ಕಾಂಗ್ರೆಸ್‌ನಲ್ಲಿ ಉಸಿರುಗಟ್ಟಿಸುವ ವಾತಾವರಣ ನಿರ್ಮಾಣವಾಯಿತು. ನೆಹರೂ ಅವರೂ ಸಮಾಜವಾದಿಗಳ ಬೆಂಬಲಕ್ಕೆ ಬರದೆ ತಮ್ಮ ಉಪ ಪ್ರಧಾನಿಯನ್ನು ಬೆಂಬಲಿಸಿದರು.

ಈ ಹಿನ್ನೆಲೆಯಲ್ಲಿ ೧೯೪೮ರ ಏಪ್ರಿಲ್‌ನಲ್ಲಿ ನಾಸಿಕ್‌ನಲ್ಲಿ ನಡೆದ ಕಾಂಗ್ರೆಸ್ ಸಮಾಜವಾದಿ ಸಮ್ಮೇಳನ ಕಾಂಗ್ರೆಸ್ಸಿನಿಂದ ಪ್ರತ್ಯೇಕವಾಗುವ ನಿರ್ಣಯವನ್ನು ಕೈ ಗೊಂಡಿತು. ನೆಹರೂ ಹಿಡಿತದಿಂದ ಕಾಂಗ್ರೆಸ್ಸನ್ನು ಪಾರು ಮಾಡಲಾದರೂ ಸದ್ಯಕ್ಕೆ ಆ ಪಕ್ಷದಲ್ಲೇ ಮುಂದುವರಿಯುವುದು ಒಳಿತು ಎಂಬ ಲೋಹಿಯಾ ಅವರ ಸಲಹೆಯ ಹೊರತಾಗಿಯೂ ಈ ನಿರ್ಣಯವನ್ನು, ಅಂಗೀಕರಿಸಲಾಯಿತು. ಜಯಪ್ರಕಾಶ್ ಪ್ರಧಾನ ಕಾರ್ಯದರ್ಶಿಯಾಗಿ ಮಂಡಿಸಿದ ವರದಿಯಲ್ಲಿ "ನಮ್ಮ ದೇಶದಲ್ಲಿ ಪ್ರಜಾಸತ್ತೆ ಯಶಸ್ವಿಯಾಗಬೇಕಾದರೆ ವಿರೋಧ

ಪಕ್ಷವೊಂದು ಅತ್ಯಗತ್ಯ. ಸಮಾಜವಾದಿಗಳು ಮಾತ್ರ ಈ ಅಗತ್ಯವನ್ನು ಸಮರ್ಪಕ ರೀತಿಯಲ್ಲಿ ಪೂರೈಸಬಲ್ಲರು" ಎಂದು ತಿಳಿಸಿದರು. ಹಾಗೆಯೇ ಹೊಸ ಸಮಾಜವಾದಿ ಪಕ್ಷದ ನೀತಿ ಧೋರಣೆಗಳನ್ನು ನಿರೂಪಿಸಿದರು. ಮಾರ್ಕ್ಸ್‌ವಾದಿ ಲೆನಿನ್‌ವಾದಿ ಸಿದ್ಧಾಂತವು ರಾಜ್ಯ ಬಂಡವಾಳಶಾಹಿ ಮತ್ತು ರಾಜ್ಯ ಅಧಿಕಾರಶಾಹಿಗೆ ಅವಕಾಶ ನೀಡುವುದರಿಂದ, ಎಲ್ಲಕ್ಕೂ ಮೂಲಭೂತವಾದ "ನೈತಿಕ ಪುನರುದ್ದೀಪನ"ವನ್ನು ಪ್ರೇರೇಪಿಸುವ ಗಾಂಧಿ ಮಾರ್ಗದ ಸಮಾಜವಾದವನ್ನು ಪಕ್ಷ ಅಂಗೀಕರಿಸಬೇಕೆಂದು ಮನವಿ ಮಾಡಿದರು. "ಸಮಾಜದ ಪುನರ್‌ನಿರ್ಮಾಣಕ್ಕೆ ರಾಜ್ಯಾಧಿಕಾರ ವೊಂದೇ ಸಾಧನವೆಂದು ನಾವು ಬಗೆದರೆ ನಮಗೆ ದೊರೆಯುವುದು ಕೇವಲ ಸೇನೀಕೃತ ಸಮಾಜ. ಇಲ್ಲಿ ಮನುಷ್ಯನನ್ನು ಒಂದು ಬೃಹತ್ ಮನುಷ್ಯ ಯಂತ್ರದ ಚಕ್ರದ ಹಲ್ಲನ್ನಾಗಿ ಮಾಡಲಾಗುತ್ತದೆ. ಪ್ರಜಾಸತ್ತೆಯೊಂದರಲ್ಲಿ ಜನ, 'ರಾಜ್ಯ'ವನ್ನು ಹತೋಟಿಯಲ್ಲಿಡಬೇಕು; 'ರಾಜ್ಯ' ಜನರನ್ನು ಹತೋಟಿಯಲ್ಲಿಟ್ಟಿರು ವಂತಾಗಬಾರದು" ಎಂದು ಅವರು ವಿವರಿಸಿದರು. ಆದರೆ ಮಾರ್ಕ್ಸ್‌ವಾದದ ಮೂಲಕಲ್ಪನೆಯಾದ 'ವರ್ಗ ಹೋರಾಟ'ದ ಅಗತ್ಯವನ್ನು ಅವರು ತಿರಸ್ಕರಿಸದೆ, ಈ ಹೋರಾಟವನ್ನು ರೂಢಿಸುವ ಮಾರ್ಗ ಮಾತ್ರ ಭಾರತದ ಸಾಮಾಜಿಕ ನಿಜಗಳಿಗೆ ಅನುಗುಣವಾಗಿರಬೇಕೆಂದು ಸೂಚಿಸಿದರು.

ಜಯಪ್ರಕಾಶರು, ದ್ವಂದ್ವಮಾನ ವಸ್ತುವಾದವನ್ನು ತಿರಸ್ಕರಿಸಿದುದು ಕೆಲವು ಪ್ರತಿನಿಧಿಗಳನ್ನು ಸಿಟ್ಟಿಗೆಬ್ಬಿಸಿತಾದರೂ, ಗುರಿ ಮತ್ತು ಮಾರ್ಗಗಳ ನಡುವೆ ಅವಿಭಾಜ್ಯ ಸಂಬಂಧಗಳಿರಬೇಕಾದ ಅಗತ್ಯವನ್ನು ಅವರು ಸ್ಟಾಲಿನ್ ನೇತೃತ್ವದ ಸೋವಿಯತ್ ಒಕ್ಕೂಟದ ಉದಾಹರಣೆಯೊಡನೆ ವಿಷದಪಡಿಸಿದ ನಂತರ ಜಯಪ್ರಕಾಶರ ಹೊಸ ನಿಲುವಿಗೆ ಬಹುಮತದ ಒಪ್ಪಿಗೆ ದೊರೆಯಿತು. ಬ್ರಿಟನ್ನಿನ ಲೇಬರ್ ಪಕ್ಷದ ಮಾದರಿಯ ಮೇಲೆ ಈ ಹೊಸ ಸಮಾಜವಾದಿ ಪಕ್ಷದ ಅಂಗ ರಚನೆಯನ್ನು ರೂಪಿಸಲಾಯಿತು. ಅಂತೂ ಕೊನೆಗೆ, ಕಾಂಗ್ರೆಸ್ ಮತ್ತು ಸಮಾಜವಾದಿಗಳ ನಡುವೆ ಸಂಬಂಧ ನಿರ್ಣಾಯಕವಾಗಿ ಕಡಿದು ಬಿದ್ದಂತಾಯಿತು. ಹೊಸ ಪಕ್ಷವು ಪ್ರಜಾಸತ್ತಾತ್ಮಕ ಸಮಾಜವಾದವೇ ತನ್ನ ಮೂಲ ಧ್ಯೇಯ ಎಂದು ಘೋಷಿಸಿತು.

ಕಾರ್ಮಿಕ ಸಂಘಟನೆ - ಸಮಾಜವಾದಿಗಳ ಬೇಟೆ

ಕಾಂಗ್ರೆಸ್ಸಿನಿಂದ ಬೇರ್ಪಟ್ಟ ನಂತರ, ಸದ್ಯಕ್ಕೆ ಅಧಿಕಾರದ ಆಲೋಚನೆಯನ್ನು ಮಾಡಲಾಗದ ಸಮಾಜವಾದಿಗಳು ಈಗ ತಮ್ಮ ಪೂರ್ಣ ಗಮನವನ್ನು ಕ್ಷೇತ್ರಕಾರ್ಯಕ್ಕೆ ಮೀಸಲಿರಿಸಿದರು. ಜಯಪ್ರಕಾಶರು ಹಿಂದೆಯೇ ಅಖಿಲ ಭಾರತ ರೈಲ್ವೇ ಕಾರ್ಮಿಕರ ಮಹಾಸಂಘ, ಅಖಿಲ ಭಾರತ ಅಂಚೆ ಇಲಾಖೆಯ ನೌಕರರ ಹಾಗೂ ನಾಲ್ಕನೇ ದರ್ಜೆ ಸರ್ಕಾರಿ ಸಿಬ್ಬಂದಿ ಸಂಘ, ರಕ್ಷಣಾ ಉಪಕರಣಗಳ ಕಾರ್ಖಾನೆಗಳ ಕಾರ್ಮಿಕ ಸಂಘ ಮುಂತಾದ ಹಲವಾರು ಬೃಹತ್ ಕಾರ್ಮಿಕ ಸಂಘಗಳಿಗೆ ಅಧ್ಯಕ್ಷರಾಗಿದ್ದರು. ಅಶೋಕ ಮೆಹ್ತಾ ಅವರು ಅಹಮದಾಬಾದ್-ಮುಂಬೈಗಳ ಹತ್ತಿ ಗಿರಣಿಗಳ ಕಾರ್ಮಿಕರ ನಿಕಟ ಸಂಪರ್ಕ ಪಡೆದಿದ್ದರು. ರಾಮ ಮನೋಹರ ಲೋಹಿಯಾ ಅವರು ಉತ್ತರ ಭಾರತದ ಹಲವಾರು ಸಕ್ಕರೆ ಕಾರ್ಖಾನೆಗಳ ಕಾರ್ಮಿಕರ ಮನ ಗೆದ್ದಿದ್ದರು. ಅಲ್ಲದೆ ಕಾರ್ಮಿಕ ಸಂಘಟನೆಗೆ ಆಗ

ಅತ್ಯಂತ ಪ್ರಶಸ್ತ ಕಾಲವಾಗಿತ್ತು. ಎರಡನೇ ಮಹಾಯುದ್ಧದ ಫಲವಾಗಿ ಮುಂದುವರಿದ ದೇಶಗಳೂ ಆರ್ಥಿಕ ಹಿಂಜರಿತವನ್ನು ಎದುರಿಸುತ್ತಿದ್ದವು. ಭಾರತದಂತಹ ಬಡದೇಶವಂತೂ ಹಣದುಬ್ಬರದಿಂದ ತತ್ತರಿಸುತ್ತಿತ್ತು. ಕಾಳಸಂತೆಕೋರರಿಗೆ ಮತ್ತು ಸಟ್ಟಾ ವ್ಯಾಪಾರಗಾರರಿಗೆ ಅದು ಅತ್ಯಂತ 'ಸುಭಿಕ್ಷ'ದ ಕಾಲವಾಗಿತ್ತು. ವ್ಯಾಪಾರಗಾರರ ಅಕ್ರಮ ದಾಸ್ತಾನಿನಿಂದಾಗಿ ಮೊದಲೇ ಮೇಲೇರಿದ್ದ ಬೆಲೆಗಳು ಮತ್ತಷ್ಟು ಏರಿದವು. ಕೆಲವೆಡೆ ಎಲ್ಲ ಅವಶ್ಯಕ ವಸ್ತುಗಳೂ ಬಹಿರಂಗ ಮಾರುಕಟ್ಟೆಯಿಂದ ಕಣ್ಮರೆಯಾದವು. ಸಮಾಜವಾದಿ ಪಕ್ಷ ವ್ಯಾಪಾರಿಗಳ ವಿರುದ್ಧ ಕಠಿಣ ಕ್ರಮ ಕೈಕೊಳ್ಳಬೇಕೆಂದೂ, ಅಕ್ರಮ ದಾಸ್ತಾನನ್ನು ವಶಪಡಿಸಿಕೊಂಡು ಜನರಿಗೆ ನ್ಯಾಯಸಮ್ಮತ ಬೆಲೆಗಳಲ್ಲಿ ಒದಗಿಸುವ ನಾಗರಿಕ ಪೂರೈಕೆ ವ್ಯವಸ್ಥೆಯೊಂದನ್ನು ರೂಪಿಸಬೇಕೆಂದೂ ಸರ್ಕಾರಕ್ಕೆ ಕರೆ ಕೊಟ್ಟಿತು. ಸರ್ಕಾರ ಇದನ್ನು ಕೇವಲ ಒಂದು ರಾಜಕೀಯ ಕರೆ ಎಂದು ವರ್ಣಿಸಿತು.

ಅಚ್ಯುತ ಪಟವರ್ಧನ್ ಅವರ ಸಭೆಯೊಂದರಲ್ಲಿ ಗೂಂಡಾಗಳು ಗಲಭೆ ಎಬ್ಬಿಸಿದಾಗ ಪೊಲೀಸರು ಮಧ್ಯೆ ಪ್ರವೇಶಿಸಿ ಭಾಷಣವನ್ನು ನಿಲ್ಲಿಸಬೇಕೆಂದು ಪಟವರ್ಧನ್ ಅವರಿಗೆ ಸೂಚಿಸಿದರು. ಗೂಂಡಾಗಳು ಸಭಿಕರನ್ನು ಥಳಿಸುತ್ತಿದ್ದರೂ ಸುಮ್ಮನೆ ನೋಡುತ್ತಾ ನಿಂತಿದ್ದ ಪೊಲೀಸರ ವರ್ತನೆಯ ವಿರುದ್ಧ ಪ್ರತಿಭಟನೆಯಾಗಿ ಪಟವರ್ಧನ್ ಅವರು ಸಭೆಯನ್ನು ಮುಕ್ತಾಯಗೊಳಿಸಲು ನಿರಾಕರಿಸಿದರು. ಪೊಲೀಸರು ಪಟವರ್ಧನ್ ಅವರೊಡನೆ ಒರಟಾಗಿ ವರ್ತಿಸಿ ಅವರ ಕೈಗಳಿಗೆ ಬೇಡಿ ತೊಡಿಸಿ, ತೆರೆದ ವಾಹನವೊಂದರಲ್ಲಿ ಅವರನ್ನು ಊರಿನುದ್ದಕ್ಕೂ ಮೆರವಣಿಗೆ ಮಾಡಿಕೊಂಡು ಪೊಲೀಸ್ ಠಾಣೆಗೆ ಕರೆದೊಯ್ದರು. ಈ ಸುದ್ದಿ ಕೇಳಿ ಜಯಪ್ರಕಾಶ್ ಸ್ತಂಭೀಭೂತರಾದರು. ಅವರು ನೆಹರೂ ಅವರಿಗೆ ಅತ್ಯಂತ ಖಾರವಾದ ಪತ್ರವೊಂದನ್ನು ಬರೆದರು: "ನೀವು ದೇಶವನ್ನು ಸಮಾಜವಾದದೆಡೆಗೆ ಕರೆದೊಯ್ಯುತ್ತಿರುವಿರಿ ಎಂದು ಭಾವಿಸಿದ್ದಲ್ಲಿ ಅದು ನಿಮ್ಮ ಭ್ರಮೆ ಮಾತ್ರ. ನೀವು ಎರಡು ಕುದುರೆಗಳ ಸವಾರಿ ಮಾಡಲೆಣಿಸುತ್ತಿದ್ದೀರಿ. ಆದರೆ ಇದು ಸರ್ಕಸ್‌ನಲ್ಲಿ ಮಾತ್ರವೇ ಸಾಧ್ಯವೇ ಹೊರತು ಇತಿಹಾಸ ನಿರ್ಮಾಣ ಕ್ರಿಯೆಯೊಂದರಲ್ಲಿ ಅಲ್ಲ... ನೀವು ಬಂಡವಾಳಶಾಹಿಗಳ ನೆರವಿನಿಂದ ಸಮಾಜವಾದವನ್ನು ಸ್ಥಾಪಿಸಲು ಹೊರಟಿದ್ದೀರಿ. ನೀವು ಈ ಸಾಹಸದಲ್ಲಿ ವಿಫಲವಾಗುವುದು ಖಂಡಿತ; ಇದಕ್ಕೆ ತಕ್ಕನಾದ ಬೆಲೆಯನ್ನು ನೀವು ತೆರಲೇ ಬೇಕಾಗುತ್ತದೆ..."

ಆದರೆ ಈ ಪತ್ರ ಸರ್ಕಾರದ ಮೇಲೆ ಯಾವುದೇ ಪರಿಣಾಮವನ್ನುಂಟುಮಾಡಲಿಲ್ಲ. ಬದಲಾಗಿ ಸಮಾಜವಾದಿಗಳ ಬೇಟೆಯೇ ಆರಂಭವಾಯಿತು. ಸಮಾಜವಾದಿಗಳನ್ನು ಸಿಕ್ಕಿದೆಡೆ ಥಳಿಸಲಾರಂಭಿಸಲಾಯಿತು. ಸಮಾಜವಾದಿಗಳ ಸಭೆಗಳ ಮೇಲೆ ಗೋಲಿಬಾರ್ ಮಾಡಲಾಯಿತು. ಸಾರ್ವಜನಿಕ ರಕ್ಷಣಾ ಕಾಯಿದೆಯ ಹೆಸರಿನಲ್ಲಿ ಸಮಾಜವಾದಿಗಳೆನಿಸಿ ಕೊಂಡವರನ್ನು ದಸ್ತಗಿರಿ ಮಾಡಿ ಸೆರೆಮನೆಗಳಿಗೆ ನೂಕಲಾಯಿತು.

ಮದ್ರಾಸ್ ಸಮಾಜವಾದಿ ಸಮ್ಮೇಳನ

೧೯೫೦ ಜುಲೈನಲ್ಲಿ ಸಮಾಜವಾದಿ ಪಕ್ಷವು ಮದ್ರಾಸ್(ಈಗಿನ ಚೆನ್ನೈ)ನಲ್ಲಿ ಸಮಾವೇಶಗೊಳ್ಳುವ ವೇಳೆಗೆ ಭಾರತ ಸಂವಿಧಾನ ರಚನಾಸಭೆಯ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದರ ನೇತೃತ್ವದಲ್ಲಿ ಗಣರಾಜ್ಯವಾಗಿ ಸಂವಿಧಾನವೊಂದನ್ನು ಅಂಗೀಕರಿಸಿತ್ತು. ಸಮಾಜವಾದಿ ಪಕ್ಷದ ಸಮಾವೇಶವು ಈ ಸಂವಿಧಾನವನ್ನು ಪರಾಮರ್ಶಿಸಿತು. ತಮಗೆ ಸಮ್ಮತವೆನಿಸಿದಾಗ ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸಲು ರಾಷ್ಟ್ರಪತಿಯವರಿಗೆ ನೀಡಿರುವ ಸಾಂವಿಧಾನಿಕ ಅಧಿಕಾರವನ್ನು ಸಮಾವೇಶ ಟೀಕಿಸಿತು. ಹಾಗೆಯೇ ಮತದಾನದ ಹಕ್ಕಿಗೆ ೨೧ ವರ್ಷಗಳ ಕನಿಷ್ಠ ವಯಸ್ಸನ್ನು ನಿಗದಿ ಮಾಡಿರುವ ವಿಧಿಯನ್ನು ಸಹ ಅದು "ಅವಾಸ್ತವಿಕ" ಎಂದು ವರ್ಣಿಸಿತು. ಭಾರತೀಯರ ಸರಾಸರಿ ವಯಸ್ಸು ಈಗ ಕೇವಲ ೨೦ ವರ್ಷಗಳಾಗಿರುವಾಗ ಕನಿಷ್ಠ ವಯಸ್ಸನ್ನು ೨೧ ವರ್ಷಗಳೆಂದು ನಿಗದಿ ಮಾಡಿರುವುದು ಹಾಸ್ಯಾಸ್ಪದ ಎಂದು ಸೂಚಿಸಿದ ಸಮಾವೇಶವು, ಅದನ್ನು ೧೮ ವರ್ಷಗಳಿಗೆ ಇಳಿಸಬೇಕೆಂದು ಸಲಹೆ ಮಾಡಿತು. ಆಸ್ತಿ ಹಕ್ಕನ್ನು ಮೂಲಭೂತ ಹಕ್ಕೆಂದು ಪರಿಗಣಿಸಿರುವುದರಿಂದ ಸಮಾಜವಾದೀ ಗುರಿಗೆ ಅಗತ್ಯವಾದ ಉದ್ಯಮ ರಾಷ್ಟ್ರೀಕರಣಗಳಿಗೆ ನ್ಯಾಯಾಲಯಗಳಿಂದ ಅಡೆತಡೆಗಳುಂಟಾಗಬಹುದು ಎಂದು ಜಯಪ್ರಕಾಶ್ ಅಭಿಪ್ರಾಯಪಟ್ಟರು. ಈ ದೃಷ್ಟಿಯಿಂದ ಸಂವಿಧಾನವನ್ನು ಇಡಿಯಾಗಿ ಪರಿಷ್ಕರಿಸಬೇಕಾಗಿದೆ ಎಂದು ಅವರು ಸೂಚಿಸಿದಾಗ ಪ್ರತಿನಿಧಿಗಳು ಅವರೊಡನೆ ದನಿಗೂಡಿಸಿದರು.

ಸಮ್ಮೇಳನದಲ್ಲಿ ಜಯಪ್ರಕಾಶರು ಪ್ರಧಾನ ಕಾರ್ಯದರ್ಶಿಯಾಗಿ, ಇನ್ನೊಂದು ವರ್ಷದಲ್ಲಿ ನಡೆಯಲಿದ್ದ ಮೊಟ್ಟ ಮೊದಲ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ಪಕ್ಷ ಅನುಸರಿಸಬೇಕಾದ ನೀತಿ-ಧೋರಣೆಗಳ ಬಗ್ಗೆ ದೀರ್ಘ ಪ್ರಸ್ತಾವನೆಯೊಂದನ್ನು ಮಂಡಿಸಿದರು. ಬರಲಿರುವ ಸಾರ್ವತ್ರಿಕ ಚುನಾವಣೆಗಳು ಪಕ್ಷದ ಭವಿಷ್ಯದ ಮೇಲೆ ನಿರ್ಣಾಯಕ ಪ್ರಭಾವ ಬೀರಲಿದೆ ಎಂಬುದು ಪಕ್ಷದ ಸಾಮಾನ್ಯ ಅಭಿಪ್ರಾಯವಾಗಿತ್ತು. ಭಾರತೀಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಸಮಾಜವಾದದ ಕೊರತೆಗಳನ್ನು ಗಾಂಧೀವಾದದ ಮೂಲಕ ತುಂಬಿಕೊಳ್ಳುವ ತಮ್ಮ ಮೊದಲ ಪ್ರಯತ್ನವನ್ನು ಅವರು ಈ ಪ್ರಸ್ತಾವನೆಯಲ್ಲಿ ಕೈಗೊಂಡಿದ್ದರು. ಭಾರತದ ಲೆನಿನ್‌ವಾದಿ ಮತ್ತು ಮಾವೋವಾದಿ ಕಮ್ಯೂನಿಸ್ಟರ ಕ್ರಾಂತಿ ಕಲ್ಪನೆ ಕೇವಲ ಭಯೋತ್ಪಾದನೆಗೆ ಸೀಮಿತವಾಗಿದೆ ಎಂಬುದು ಅವರ ನಿಲುವಾಗಿತ್ತು. ಭಾರತದಲ್ಲಿ ಸಮಾಜವಾದವನ್ನು ಕೇವಲ ಬಂಡವಾಳಶಾಹಿಯ ಪ್ರತಿಶಕ್ತಿಯಾಗಿ ಮತ್ತು ರಾಜ್ಯಶಕ್ತಿಯಾಗಿ ಬೆಳಸದೆ, ಹೊಸದೊಂದು ನಾಗರೀಕತೆಯನ್ನು ವಿಕಾಸಗೊಳಿಸುವ ಸಾಧನವನ್ನಾಗಿ ರೂಪಿಸಬೇಕೆಂದು ಅವರು ಸಲಹೆ ಮಾಡಿದರು. ಸಮಾಜವಾದಿ ಸಮಾಜವೆಂದರೆ, ಸಾಮಾಜಿಕ ಶೋಷಣೆ, ದಮನ ಮತ್ತು ಅನ್ಯಾಯಗಳು ಇಲ್ಲದಂತಹ ಮತ್ತು ದುಡಿಯಲು ಸರ್ವರಿಗೂ ಸಮಾನ ಅವಕಾಶವಿರುವಂತಹ ಹಾಗೂ ಉತ್ಪಾದನೆಯಲ್ಲಿ ಸರ್ವರಿಗೂ ಸಮಪಾಲು ದೊರೆಯುವಂತಹ ವ್ಯವಸ್ಥೆ ಎಂದು ಅವರು ನಿರೂಪಿಸಿದರು.

ಸಮಾಜವಾದಿ ಪಕ್ಷ ಅರ್ಥಪೂರ್ಣ ಪ್ರಜಾಪ್ರಭುತ್ವವೊಂದನ್ನು ಸ್ಥಾಪಿಸಬೇಕಾದರೆ, ಕ್ಷೇತ್ರ ಕಾರ್ಯ ಮತ್ತು ಸಂಸದೀಯ ಕಾರ್ಯಗಳ ನಡುವೆ ಸಮನ್ವಯ ಏರ್ಪಡಿಸಿಕೊಂಡು ಸಮಗ್ರ ಕಾರ್ಯಕ್ರಮವೊಂದನ್ನು ರೂಪಿಸಿಕೊಳ್ಳಬೇಕು. ಜನರ ನಡುವೆ ಬೆರೆತು ಅವರೊಡನೆ ದುಡಿಯಬಲ್ಲ ನಿಸ್ವಾರ್ಥಿ ಕಾರ್ಯಕರ್ತರ ಸಂಪೂರ್ಣ ಸಹಕಾರವನ್ನು ಸಂಪಾದಿಸಿಕೊಳ್ಳಬೇಕು ಮತ್ತು ಸಂಸತ್ತಿನಲ್ಲಿ ಅಧಿಕಾರ ಸ್ಥಾನ ಪಡೆಯುವ ಹಂಬಲ ಆನುಷಂಗಿಕ ಮಾತ್ರವಾಗಿರಬೇಕು ಎಂಬುದು ಜಯಪ್ರಕಾಶರ ಮುಖ್ಯ ಸಲಹೆಗಳಾಗಿದ್ದವು.

ಕಾರ್ಮಿಕ ಆಂದೋಲನಕ್ಕೊಂದು ತಾತ್ವಿಕ ಚೌಕಟ್ಟು

ಸೀಮಿತ ಆದಾಯವಿದ್ದ ಕಾರ್ಖಾನೆಗಳ ಕೆಲಸಗಾರರು ಬದುಕುವುದೇ ಕಷ್ಟವಾಗಿತ್ತು. ಕೈಗಾರಿಕೋದ್ಯಮ ಎಂದರೆ ಖಾಸಗಿ ಒಡೆತನ ಮಾತ್ರವೆಂಬಂತಿದ್ದ ಆ ಕಾಲದಲ್ಲಿ ಕಾರ್ಮಿಕರಿರುವುದು ದುಡಿಯುವುದಕ್ಕಷ್ಟೆ ಎಂಬುದು ಮಾಲೀಕರ ಧೋರಣೆಯಾಗಿತ್ತು; ಅವರಿಗೆ ವೇತನಗಳ ಪರಿಷ್ಕಾರದ ಕಲ್ಪನೆಯೇ ವಿಚಿತ್ರವಾಗಿ ಕಾಣುತ್ತಿತ್ತು. ಸಮಾಜವಾದಿಗಳು ಕಾರ್ಮಿಕರ ಮಾರ್ಗದರ್ಶನಕ್ಕೆ ನಿಂತರು. ವೇತನಗಳನ್ನು ಹೆಚ್ಚಿಸುವಂತೆ ಮಾಲೀಕರನ್ನು ಒತ್ತಾಯಿಸುವ ಕಾರ್ಮಿಕ ಚಳುವಳಿಗಳ ನೇತೃತ್ವ ವಹಿಸಿದರು.

ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ವ್ಯವಸ್ಥಿತವಾದ ಕಾರ್ಮಿಕ ಆಂದೋಲನವೊಂದು ಆರಂಭವಾಗಿತ್ತು. ಆದರೆ ಈ ಆಂದೋಲನ ಆರಂಭದಲ್ಲಿಯೇ ಹಲವಾರು ಸಂಕಷ್ಟಗಳನ್ನು ಎದುರಿಸಬೇಕಾಯಿತು. ಕಾರ್ಖಾನೆಗಳ ಮಾಲೀಕರು ತಮ್ಮ ಹಣ-ಅಧಿಕಾರಗಳ ಮೂಲಕ ಕಾರ್ಮಿಕರನ್ನು ಬೆದರಿಸಿದರು. ಮುಷ್ಕರ ಹೂಡಿದ ಕಾರ್ಮಿಕರ ವಿರುದ್ಧ ಗೂಂಡಾಗಳನ್ನು ಬಿಟ್ಟು ಹಿಂಸಾಚಾರಕ್ಕೆ ತೊಡಗಿದರು. ಆದರೆ ಮೊದಲ ಬಾರಿಗೆ ರಾಷ್ಟ್ರ ಮಟ್ಟದಲ್ಲಿ ತನ್ನ ಶಕ್ತಿಯನ್ನು ಅಂದಾಜು ಮಾಡಿಕೊಳ್ಳುವ ಅವಕಾಶ ಪಡೆದಿದ್ದ ಕಾರ್ಮಿಕ ವರ್ಗ ಮಾಲೀಕರ ವಿರುದ್ಧ ಅಚಲವಾಗಿ ನಿಂತಿತು.

ಸಮಾಜವಾದಿ ಪಕ್ಷವು ಕಾರ್ಮಿಕ ಚಳುವಳಿಗೆ ಒಂದು ನಿರಂತರತೆ ಒದಗಿಸುವ ನೀಡುವ ಉದ್ದೇಶದಿಂದ ಅದಕ್ಕೊಂದು ತಾತ್ವಿಕ ಚೌಕಟ್ಟನ್ನು ರೂಪಿಸಿಕೊಡುವ ಪ್ರಯತ್ನ ಮಾಡಿತು. ಈಗ ಸಂಪತ್ತನ್ನು ಕ್ರೋಢೀಕರಿಸಿಕೊಂಡಿರುವ ಜನರು ಒಂದು ಕಾಲದಲ್ಲಿ ಈ ಸಂಪತ್ತನ್ನು ಬಲಾತ್ಕಾರದಿಂದಲೇ ಪಡೆದಿರುವರು. ನಂತರ ಈ ಸಂಪತ್ತಿನ ಮೂಲಕ ಪಡೆದ ಅಧಿಕಾರದಿಂದ, ತಮಗಷ್ಟೇ ಸೂಕ್ತವಾದ ನೀತಿ ನಿಯಮಾವಳಿಯನ್ನು ರೂಪಿಸಿಕೊಂಡು ಆ ಸಂಪತ್ತನ್ನು ಸದಾ ಹೆಚ್ಚಿಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಈ ಸಂಪತ್ತು ದುಡಿಯುವವರ ನಡುವೆ ಸಮಾನವಾಗಿ ವಿತರಣೆಯಾಗಬೇಕು. ಕಾರ್ಮಿಕರಿಗೆ ದುಡಿಯುವ ಹಕ್ಕು ಮತ್ತು ಬದುಕುವ ಹಕ್ಕು ಎರಡೂ ಇವೆ ಎಂಬುದು ಅವರ ತಾತ್ವಿಕತೆಮಾಗಿತ್ತು.

ಇದೇನೂ ಹೊಸ ಸಿದ್ಧಾಂತವಲ್ಲದಿದ್ದರೂ, ಸರಳ ಶಬ್ದಗಳಲ್ಲಿ ಕಾರ್ಮಿಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸುವ ಒಂದು ಪ್ರಯತ್ನವಾಗಿತ್ತು. ಇದರ ಜತೆಗೆ ಜಯಪ್ರಕಾಶರು ಹೊಸ

ಸಮಾಜವಾದದ ಬಗ್ಗೆ ಆಡುತ್ತಿದ್ದ—ಮನುಷ್ಯನ ಘನತೆಯನ್ನು ಎತ್ತಿ ಹಿಡಿಯುವ ಸಿದ್ಧಾಂತಕ್ಕಿಂತ ದೊಡ್ಡ ರಾಜಕೀಯ ಸಿದ್ಧಾಂತ ಬೇರೊಂದಿಲ್ಲ—ಎಂಬ ಅಧ್ಯಾತ್ಮಿಕತೆಯ ಮಾತುಗಳೂ ಕಾರ್ಮಿಕರನ್ನು ತಟ್ಟುತ್ತಿದ್ದವು. ಪೂರ್ಣ ಸ್ವಾತಂತ್ರ್ಯವಿಲ್ಲದ ಸಮಾಜದಲ್ಲಿ ಮನುಷ್ಯ ಕುಬ್ಜನಾಗುತ್ತಾ ಹೋಗುತ್ತಾನೆ. ಆದರೆ ಪೂರ್ಣ ಸ್ವಾತಂತ್ರ್ಯದ ಚೌಕಟ್ಟಿನಲ್ಲಿ ಆರ್ಥಿಕ ಸ್ವಾತಂತ್ರ್ಯವೂ ಅಡಗಿದೆ ಎಂದು ಹೇಳುತ್ತಿದ್ದ ಅವರು, ಆರ್ಥಿಕ ಸ್ವಾತಂತ್ರ್ಯದ ನಂತರ ಮಾತ್ರ ಸಾಮಾಜಿಕ ಸ್ವಾತಂತ್ರ್ಯ ಎಂಬ ಮಾತನ್ನು ಅವರು ಬರೀ ಠಕ್ಕು ಎಂದು ಅಲ್ಲಗೆಳೆಯುತ್ತಿದ್ದರು. ಸಾಮಾಜಿಕ ಸ್ವಾತಂತ್ರ್ಯ ಮತ್ತು ಆರ್ಥಿಕ ಸ್ವಾತಂತ್ರ್ಯಗಳು ಪರಸ್ಪರ ಪೂರಕವಾದ ಕಲ್ಪನೆಗಳಾದ್ದರಿಂದ ಈ ಎರಡರ ವಿಕಾಸವು ಒಟ್ಟಿಗೆ ಆಗಬೇಕಿದ್ದು; ನಾವು ನಡೆಸುವ ಯಾವುದೇ ಹೋರಾಟವು ಇವುಗಳಲ್ಲಿ ಯಾವುದೊಂದಕ್ಕೂ ಅಡ್ಡಿ ಮಾಡದಂತಿರಬೇಕು ಎಂಬುದು ಒಟ್ಟಾರೆಯಾಗಿ ಜಯಪ್ರಕಾಶರ ನಿಲುವಾಗಿತ್ತು. ಸಹಜವಾಗಿ ಇದು ಕಮ್ಯೂನಿಸ್ಟರನ್ನು ಸಿಟ್ಟಿಗೆಬ್ಬಿಸಿತು. ಜಯಪ್ರಕಾಶರು ಈ ಎಲ್ಲ ಮಾತುಗಳನ್ನು ತಮ್ಮೆಡೆಗೇ ಬೊಟ್ಟು ಮಾಡುತ್ತಿದ್ದಾರೆ ಎಂದು ಅವರು ಭಾವಿಸಿದರು. ಮಾಲೀಕರ ವಿರುದ್ಧ ಕೇವಲ ವರ್ಗ ವೈರವನ್ನು ಬೆಳೆಸುವ ಮೂಲಕ ಕಾರ್ಮಿಕ ಸಂಘಟನೆ ಮಾಡತೊಡಗಿದ್ದ ಕಮ್ಯೂನಿಸ್ಟ್ ಪಕ್ಷಕ್ಕೆ, ಸಮಾಜವಾದೀ ಪಕ್ಷ ಸಮರ್ಥಿಸುತ್ತಿದ್ದ ಉದಾರವಾದೀ ಪ್ರಜಾಸತ್ತಾತ್ಮಕ ಮೌಲ್ಯಗಳು ಅತಿರೇಕಗಳಾಗಿ ಕಂಡವು.

ಸಮಾಜವಾದಿ ಪಕ್ಷದ ಕಾರ್ಮಿಕ ಸಂಘಟನೆ ಕಮ್ಯೂನಿಸ್ಟರಿಂದ ಮಾತ್ರವಲ್ಲದೆ ಕಾಂಗ್ರೆಸಿಗರಿಂದಲೂ ವಿರೋಧವನ್ನು ಎದುರಿಸಬೇಕಾಯಿತು. ಕಾರ್ಮಿಕ ವರ್ಗದ ಬಹುಭಾಗ ಸಮಾಜವಾದಿ ಪಕ್ಷವನ್ನು ಬೆಂಬಲಿಸುವ ಸಾಧ್ಯತೆಯನ್ನು ಮುನ್ನೋಡಿದ ಜವಾಹರಲಾಲ್ ನೆಹರೂ ಅವರು ಎಲ್ಲ ಕೈಗಾರಿಕಾ ಸಂಕೀರ್ಣಗಳಲ್ಲೂ ಕಾಂಗ್ರೆಸ್ ಆಶ್ರಯದ ಕಾರ್ಮಿಕ ಸಂಘಗಳ ರಚನೆಯ ಸಲಹೆ ಮಾಡಿದರು. ಸರ್ದಾರ್ ಪಟೇಲರಿಗೂ ಇದೇ ಬೇಕಾಗಿತ್ತು. ಪ್ರಾಂತೀಯ ಸರ್ಕಾರಗಳ ಸಹಕಾರದೊಡನೆ ಎಲ್ಲ ಕೈಗಾರಿಕಾ ಕೇಂದ್ರಗಳಲ್ಲೂ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಇಂಟಕ್)ನ ಶಾಖೆಗಳು ಆರಂಭವಾದವು. ಸಹಜವಾಗಿ ಈ ಕಾರ್ಮಿಕ ಸಂಘಗಳಿಗೆ ಬೇಗನೆ ಅಧಿಕೃತ ಮಾನ್ಯತೆ ಸಿಕ್ಕಿತು. ಇತರ ಕಾರ್ಮಿಕ ಸಂಘಗಳಿಗೆ ಉದ್ದೇಶಪೂರ್ವಕವಾಗಿಯೇ ಮಾನ್ಯತೆ ನೀಡುವುದನ್ನು ತಡಮಾಡಲಾಯಿತು. ಕಾರ್ಮಿಕರಿಗೆ ಎಲ್ಲ ರೀತಿಯ ಆಮಿಷಗಳನ್ನು ಒಡ್ಡಿ, ಅಧಿಕಾರರೂಢ ಕಾಂಗ್ರೆಸ್ ಪಕ್ಷವು ಸ್ವಲ್ಪವೇ ಸಮಯದಲ್ಲಿ ತನ್ನ ಶಾಖೆಗಳನ್ನು ಬೆಳೆಸಿತು. ಇತರ ಕಾರ್ಮಿಕ ಸಂಘಗಳ ಬೆಂಬಲಿಗರ ವಿರುದ್ಧ ಪುಂಡಾಟಿಕೆ ಆರಂಭವಾಯಿತು. ಕೆಲಸದಿಂದ ವಜಾ ಮಾಡುವ ಬೆದರಿಕೆಗಳನ್ನು ಒಡ್ಡಲಾಯಿತು.

ಜಯಪ್ರಕಾಶರತ್ತ ಕಲ್ಲು ತೂರಾಟ

ಈ ಪುಂಡಾಟಿಕೆ ಜಯಪ್ರಕಾಶರ ವಿರುದ್ಧವೂ ನಡೆಯದಿರಲಿಲ್ಲ. ಅವರು ಡಾಲ್ಟನ್ ಗಂಜ್ ಎಂಬಲ್ಲಿ ಕಾರ್ಮಿಕ ಮುಖಂಡರನ್ನು ಭೇಟಿ ಮಾಡಿ, ಆ ರಾತ್ರಿ ಸ್ನೇಹಿತರ

ಮನೆಯೊಬ್ಬರ ಜಿತ್ತಲಿನಲ್ಲಿ ಮಲಗಿದ್ದಾಗ ಮಧ್ಯರಾತ್ರಿಯ ಹೊತ್ತಿಗೆ ಅವರು ಮಲಗಿದ್ದ ಸ್ಥಳದ ಮೇಲೆ ಒಂದೇ ಸಮನೆ ಕಲ್ಲುಗಳ ಸುರಿಮಳೆಯಾಯಿತು. ಅಂದು ಅವರು ತಮ್ಮ ಸುತ್ತ ಸೊಳ್ಳೆಪರದೆ ಕಟ್ಟಿಕೊಳ್ಳದಿದ್ದಲ್ಲಿ ಜಯಪ್ರಕಾಶ್ ಮತ್ತು ಪ್ರಭಾವತಿಯವರು ತೀವ್ರವಾಗಿ ಗಾಯಗೊಳ್ಳಬೇಕಿತ್ತು. ಜೆಂಷಡ್‌ಪುರದಲ್ಲಿ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಇಂಟಕ್‌ನವರು ಆ ಸಭೆಯಲ್ಲಿ ಗಲಭೆ ಎಬ್ಬಿಸಿ ಜಯಪ್ರಕಾಶರನ್ನು, ಕಾರ್ಮಿಕರ ಒಗ್ಗಟ್ಟನ್ನು ಒಡೆಯುತ್ತಿರುವಾತ ಎಂದು ಹೀಯಾಳಿಸಿದರು. ಮುಂದೆ ಜಯಪ್ರಕಾಶರು ಬರ್ನ್‌ಪುರದಲ್ಲಿ ಭಾಷಣ ಮಾಡುತ್ತಿದ್ದ ಸಮಯದಲ್ಲಿ ಅವರೆಡೆಗೆ ಕಲ್ಲುಗಳನ್ನು ತೂರಲಾಯಿತು. ಚಂದ್ರಪುರ ಎಂಬಲ್ಲಿ ಕಮ್ಯೂನಿಸ್ಟರು ಜಯಪ್ರಕಾಶರ ಸಭೆಯನ್ನು ಅಸ್ತವ್ಯಸ್ತಗೊಳಿಸಿದರು. ಕಾರ್ಮಿಕ ಚಳುವಳಿ ಕೂಡಾ ಹಣ ಅಧಿಕಾರ ಮುಂತಾದ ಪ್ರಲೋಭನೆಗಳಿಗೆ ಸಿಕ್ಕಿ ತನ್ನ ದಿಕ್ಕನ್ನು ಕಳೆದುಕೊಳ್ಳುತ್ತಿರುವುದು ಜಯಪ್ರಕಾಶರಿಗೆ ಖಚಿತವಾಯಿತು.

ಅಂಚೆ ಉದ್ಯೋಗಿಗಳ ಪರ ಹೋರಾಟ – ನೈತಿಕ ವಂಚನೆ

ಸಮಾಜವಾದಿ ಪಕ್ಷದ ನಾಯಕರಾಗಿ ಮೊಟ್ಟ ಮೊದಲ ಸಾರ್ವತ್ರಿಕ ಚುನಾವಣೆಗಳನ್ನು ಎದುರಿಸುವ ಮುನ್ನ ಜಯಪ್ರಕಾಶರು ಸರಕಾರದ ನೈತಿಕ ವಂಚನೆಯೊಂದಕ್ಕೆ ಈಡಾದರು. ಅಂಚೆ ಮತ್ತು ತಂತಿ ಇಲಾಖೆಯ ಉದ್ಯೋಗಿಗಳು ಹೆಚ್ಚಿನ ವೇತನಗಳನ್ನು ಕೇಳಿ, ೧೯೪೬ರಲ್ಲಿ ೨೩ದಿನಗಳ ಕಾಲ ಮುಷ್ಕರ ನಡೆಸಿದ್ದರು. ಆದರೆ ಆಗ ಅಧಿಕಾರರೂಢವಾಗಿದ್ದ ಹಂಗಾಮಿ ಸರಕಾರವು ಸಂಧಾನಗಳನ್ನು ನಡೆಸಿದ ನಂತರ, ಅವರ ಬೇಡಿಕೆಗಳನ್ನು ಮತ್ತು ಮುಷ್ಕರ ಕಾಲದ ಸಂಬಳವನ್ನು ಪಡೆಯುವ ವಿಷಯವನ್ನು ಮುಂಬರುವ ಮಧ್ಯಂತರ ರಾಷ್ಟ್ರೀಯ ಸರಕಾರದ ಪರಿಶೀಲನೆಗೆ ಒಪ್ಪಿಸಬೇಕೆಂದೂ ನಿರ್ಧಾರವಾಗಿತ್ತು. ಆದರೆ ರಾಷ್ಟ್ರೀಯ ಸರಕಾರ ಮುಷ್ಕರ ಕಾಲವನ್ನು ರಜಾ ಕಾಲವೆಂದು ಪರಿಗಣಿಸಿ ಸೂಕ್ತ ಪರಿಹಾರವನ್ನು ಮಾತ್ರ ಕೊಡಲು ಒಪ್ಪಿಕೊಂಡಿತು. ಆ ಹೊತ್ತಿಗೆ ಈ ಉದ್ಯೋಗಿಗಳ ಸಂಘದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಈ ಬಿಕ್ಕಟ್ಟನ್ನು ಪರಿಹರಿಸುವ ಹೊಣೆಯನ್ನು ಹೊರಬೇಕಾಯಿತು. ಮತ್ತೆ ಮುಷ್ಕರದ ನೋಟೀಸು ನೀಡಿದ್ದ ಉದ್ಯೋಗಿಗಳನ್ನು ಸಮಾಧಾನಪಡಿಸಿದ ಜಯಪ್ರಕಾಶ್, ಅಂಚೆ ಮತ್ತು ತಂತಿ ಇಲಾಖೆಯ ಮಂತ್ರಿಯಾಗಿದ್ದ ತಮ್ಮ ಹಳೆಯ ಸ್ನೇಹಿತ ರಫಿಕ್ ಅಹ್ಮದ್ ಕಿದ್ವಾಯಿ ಅವರೊಡನೆ ಮಾತುಕತೆ ನಡೆಸಿ, ಈ ಬಿಕ್ಕಟ್ಟಿಗೆ ಸೂಕ್ತ ಪರಿಹಾರದ ಆಶ್ವಾಸನೆಯನ್ನು ಪಡೆದರು.

ನಂತರ ಒಂದು ವರ್ಷ ಕಳೆದರೂ ಸರಕಾರ ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಉದ್ಯೋಗಿಗಳು ಮತ್ತೆ ಮುಷ್ಕರದ ಬೆದರಿಕೆ ಹಾಕಿದರು. ಕಿದ್ವಾಯಿ ಅವರು ಜಯಪ್ರಕಾಶರೊಡನೆ ಮಾತುಕತೆ ನಡೆಸಿ, ಮುಷ್ಕರ ಸಮಯದ ಸಂಬಳದ ಬಗ್ಗೆ ಇತ್ಯರ್ಥವೊಂದಕ್ಕೆ ಬಂದರು. ಮುಷ್ಕರ ಕಾಲದ ಸಂಬಳವನ್ನು ಪಾವತಿ ಮಾಡಲು ಸರಕಾರ ಒಪ್ಪಿಕೊಂಡಿದೆ ಎಂದು ಜಯಪ್ರಕಾಶರು ಉದ್ಯೋಗಿಗಳಿಗೆ ತಿಳಿಸಿದರು. ಇದರಿಂದಾಗಿ

ಸಾರ್ವಜನಿಕರಿಗೆ ಒದಗಬಹುದಾಗಿದ್ದ ಭಾರೀ ತೊಂದರೆಯೊಂದನ್ನು ನಿವಾರಿಸಲಾಗಿತ್ತು. ಆದರೆ, ಬೆಲೆಗಳು ಏರಿದ ಕಾರಣ ಮತ್ತು ಜಯಪ್ರಕಾಶರ ತೀವ್ರ ಆಗ್ರಹದ ಮೇಲೆ ಉದ್ಯೋಗಿಗಳಿಗೆ ತಿಂಗಳಿಗೆ ಹತ್ತು ರೂಪಾಯಿಗಳ ಹೆಚ್ಚಿನ ತುಟ್ಟಿಭತ್ಯೆಯನ್ನು ನೀಡಲಾಯಿತಾದರೂ, ಮತ್ತೆ ಇನ್ನೊಂದು ವರ್ಷವಾದರೂ ಮುಷ್ಕರ ಕಾಲದ ಸಂಬಳವನ್ನು ನೀಡುವ ಕಡೆ ಸರಕಾರ ಗಮನ ನೀಡಲಿಲ್ಲ. ಜಯಪ್ರಕಾಶ್ ಈ ಬಗ್ಗೆ ನೆಹರೂ ಅವರಿಗೆ ಪತ್ರವೊಂದನ್ನು ಬರೆದರು. ಇದನ್ನು ಕೇವಲ ಒಂದು ಕಾರ್ಮಿಕ ವಿವಾದವೆಂದು ಪರಿಗಣಿಸದೆ ವಚನಪಾಲನೆಯ ಒಂದು ನೈತಿಕ ಪ್ರಶ್ನೆಯಾಗಿ ಪರಿಗಣಿಸಬೇಕಾಗಿದೆ ಎಂದು ತಿಳಿಸಿದರು. ಕ್ಯಾಬಿನೆಟ್ ಮಂತ್ರಿಯೊಬ್ಬರು—ಅದೂ ಸತ್ಯದ ಹೆಸರಿನ ಮೇಲೆ ನಿಂತಿರುವ ಕಾಂಗ್ರೆಸ್ ಸರಕಾರದ ಮಂತ್ರಿಯೊಬ್ಬರು—ಕೊಟ್ಟ ಮಾತಿಗೆ ತಪ್ಪುತ್ತಿರುವುದು ಒಂದು ಘೋರ ಅಪರಾಧವಾಗಿದೆ. ಇದರ ವಿರುದ್ಧ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ಹೂಡಬಹುದು. ಆದರೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ, ಕಾರ್ಮಿಕರು ಹಾಗೂ ಮಂತ್ರಿಯ ನಡುವೆ ಯಶಸ್ವೀ ಸಂಧಾನ ನಡೆಸಿದನೆಂದು ಭಾವಿಸಿ ಈಗ ಹತಾಶ ನಾಗಿರುವ ನಾನು ಉಪವಾಸ ಮುಷ್ಕರ ಹೂಡಲು ನಿರ್ಧರಿಸಿದ್ದೇನೆ ಎಂಬುದಾಗಿ ಸ್ಪಷ್ಟಪಡಿಸಿದರು.

ಕಿದ್ವಾಯಿ ಅವರು ಈಗ ಅಷ್ಟೇ ಸ್ಪಷ್ಟವಾಗಿ ಉತ್ತರ ನೀಡಿದರು: "ಮುಷ್ಕರ ಕಾಲದ ಸಂಬಳವನ್ನು ಕೊಡಲಾಗುವುದು ಎಂದು ನಾನು ಆಶ್ವಾಸನೆ ನೀಡಿರಲಿಲ್ಲ. ಈ ಬಗ್ಗೆ ಸರಕಾರಕ್ಕೆ ತೆರೆದ ಮನಸ್ಸಿದೆ ಎಂದಷ್ಟೇ ನಾನು ಹೇಳಿದ್ದುದು. ನಾನು ಕಾರ್ಮಿಕರ ಬೇಡಿಕೆಯನ್ನು ಕುರಿತಂತೆ ಎಲ್ಲ ಸಾಧ್ಯತೆಗಳನ್ನು ಪರಿಶೀಲಿಸಿದ್ದೇನೆ. ಮುಷ್ಕರ ಕಾಲದ ಸಂಬಳವನ್ನು ಕೊಡಲು ಸಾಧ್ಯವಾಗುತ್ತಿಲ್ಲ ಎಂದಷ್ಟೇ ತಿಳಿಸುತ್ತೇನೆ."

ಪ್ರಾಯಶ್ಚಿತ್ತವಾಗಿ ಉಪವಾಸದ ಸೂಚನೆ

ಈ ಉತ್ತರ ಜಯಪ್ರಕಾಶರಿಗೆ ಅನಿರೀಕ್ಷಿತವಾಗಿತ್ತು. ಅವರು ಸರಕಾರಕ್ಕೆ ಮತ್ತೊಂದು ಪತ್ರ ಬರೆದು, "ಕಳೆದ ಮೂರು ವರ್ಷಗಳಿಂದ ಹಲವಾರು ವಲಯಗಳಲ್ಲಿ ನಾನು ಸಂಧಾನಗಳನ್ನು ನಡೆಸಿದ್ದೇನೆ. ಆದರೆ ಇಂತಹ ಮೂರ್ಖತನಕ್ಕೆ ನಾನೆಂದೂ ಬಲಿಯಾಗಿರಲಿಲ್ಲ. ನನ್ನ ಮೂರ್ಖತನಕ್ಕೆ ಪ್ರಾಯಶ್ಚಿತವಾಗಿ ನಾನು ಉಪವಾಸ ಕೈಗೊಳ್ಳಲಿರುವೆ" ಎಂದು ತಿಳಿಸಿದರು. ಇದು ಜಯಪ್ರಕಾಶರು ತಮ್ಮ ಸಾರ್ವಜನಿಕ ಜೀವನದಲ್ಲಿ ಕೈಗೊಂಡ ಮೊದಲ ಗಾಂಧಿವಾದಿ ನಿರ್ಧಾರವಾಗಿತ್ತು.

ಈ ಹೊತ್ತಿಗೆ ನೆಹರೂ ಕೂಡಾ ದೊಡ್ಡ ರಾಜಕೀಯ ಬಿಕ್ಕಟ್ಟನ್ನು ಎದುರಿಸುತ್ತಿದ್ದರು. ಏರುತ್ತಿದ್ದ ಬೆಲೆಗಳು ಉಂಟುಮಾಡಿದ್ದ ಆರ್ಥಿಕ ಒತ್ತಡದೊಡನೆ, ಕಾಂಗ್ರೆಸ್ಸಿನೊಳಗೇ ಪಟೇಲ್ ಪರವಾದ ಗುಂಪು ಬಲವಾಗತೊಡಗಿತ್ತು. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನೆಹರೂ ಅಭ್ಯರ್ಥಿಯಾಗಿದ್ದ ಕೃಪಲಾನಿಯವರು ಸೋತುಹೋಗಿ, ಪಟೇಲರ ಅಭ್ಯರ್ಥಿ ಪುರುಷೋತ್ತಮ

ದಾಸ್ ಟಂಡನ್ ಆಯ್ಕೆಯಾಗಿದ್ದರು. ಇದರೊಡನೆ ನೆಹರೂ ಅವರನ್ನು ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಪ್ರಯತ್ನವೊಂದು ಆರಂಭವಾಗಿತ್ತು.

ಬೆಲೆಗಳನ್ನು ಇಳಿಸುವುದಾಗಿ ಆಶ್ವಾಸನೆ ನೀಡಿದ್ದ ಸರ್ಕಾರ, ವ್ಯಾಪಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವಲ್ಲಿ ವಿಫಲಗೊಂಡಿತ್ತು. ಸರ್ಕಾರದ ಸಂಬಳದಲ್ಲೇ ಬದುಕು ಸಾಗಿಸಬೇಕಾಗಿದ್ದ ಕೆಳದರ್ಜೆಯ ನೌಕರರಿಗೆ ಎರಡು ಹೊತ್ತು ಊಟಕ್ಕೂ ಕಷ್ಟಕ್ಕಿಟ್ಟುಕೊಂಡಿತ್ತು. ಅಂಚೆ ಮತ್ತು ತಂತಿ ಇಲಾಖೆ ನೌಕರರು ಹಾಗೂ ರೈಲ್ವೇ ಉದ್ಯೋಗಿಗಳು ಸಾರ್ವತ್ರಿಕ ಮುಷ್ಕರದ ಸೂಚನೆ ನೀಡಿದರು. ನೆಹರೂ, ಜಯಪ್ರಕಾಶರಿಗೆ ಪತ್ರ ಬರೆದು "ನಿಮ್ಮ ಉಪವಾಸಕ್ಕೆ ಯಾವುದೇ ಕಾರಣವಿದೆ ಎಂದು ನನಗನಿಸುವುದಿಲ್ಲ. ಇಂತಹ ಬಿಕ್ಕಟ್ಟಿನ ಸಮಯದಲ್ಲಿ ನಾನು ನಿಮ್ಮಂತಹವರ ಸಹಕಾರವನ್ನು ನಿರೀಕ್ಷಿಸುವೆ. ನಾನು ನನ್ನ ಕೈಯಲ್ಲಿ ಎಷ್ಟಾಗುವುದೋ ಅಷ್ಟು ಮಾತ್ರ ಮಾಡಬಲ್ಲೆ; ಹೆಚ್ಚಿಗಿಲ್ಲ" ಎಂದು ಕೊನೆಯ ಮಾತನ್ನು ಬರೆದರು.

ಈಗ ರೈಲ್ವೇ ಉದ್ಯೋಗಿಗಳ ಮುಷ್ಕರ ಅನಿವಾರ್ಯವೆನಿಸಿತು. ಆದರೆ ಈ ಮುಷ್ಕರವನ್ನು ತಡೆಯಲು ಸರ್ಕಾರ 'ಇಂಟಕ್'ನ ಮೂಲಕ ವಿಫಲ ಯತ್ನ ನಡೆಸಿತು. ಕೊನೆಗೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಮುಷ್ಕರವನ್ನು ಕಾನೂನು ಬಾಹಿರ ಎಂದು ಸಾರಿ ಮುಷ್ಕರದಲ್ಲಿ ಭಾಗವಹಿಸುವವರಿಗೆ ಮತ್ತು ಮುಷ್ಕರವನ್ನು ಪ್ರಚೋದಿಸುವವರಿಗೆ ಸೆರೆವಾಸದ ಶಿಕ್ಷೆ ವಿಧಿಸುವ ವಿಶೇಷಾಜ್ಞೆಯೊಂದನ್ನು ಹೊರಡಿಸಿದರು. ಇದು ಭಾರತದಲ್ಲಿ ಕಾರ್ಮಿಕ ಆಂದೋಲನವನ್ನು ಮೊಳಕೆಯಲ್ಲೇ ಚಿವುಟಿ ಹಾಕುವ ಪ್ರಯತ್ನವಾಗಿ ಕಂಡಿತು, ಜಯಪ್ರಕಾಶರಿಗೆ. ಅವರು ರೈಲ್ವೇ ಉದ್ಯೋಗಿಗಳಿಗೆ ಹೇಳಿದರು: 'ಮುಷ್ಕರ ನಡೆಸುತ್ತಿರುವುದು ಜಯಪ್ರಕಾಶ್ ಮತ್ತು ಆತನ ಸಮಾಜವಾದಿ ಪಕ್ಷ ಎಂದು ಸರ್ಕಾರ ತಿಳಿದಂತಿದೆ. ಅದಕ್ಕೇ ಈ ಮುಷ್ಕರವನ್ನು ವಿಫಲಗೊಳಿಸಲು ಇಂಟಕ್ ನಾಯಕರನ್ನು ಬಳಸತೊಡಗಿದೆ. ಈ ಕಾರ್ಮಿಕ ನಾಯಕರಾದರೂ ಎಂತಹವರು? ಸರ್ಕಾರ ಈಗ ಕೊಡುತ್ತಿರುವ ಹದಿನೈದು ರೂಪಾಯಿಗಳ ತುಟ್ಟಿಭತ್ಯೆಯಲ್ಲಿ ಇವರು ನಿಜವಾಗಿ ಜೀವನ ನಡೆಸಬಲ್ಲರಾ? ಅವರ ಮುಖಗಳ ಮೇಲಿನ ಉಲ್ಲಾಸ ನೋಡಿರಿ—ಅವರಿಗೆ ಬೇರೆ ಆದಾಯವಿಲ್ಲದೆ, ಈ ಅನ್ನದ ಬೇಡಿಕೆಯನ್ನು ವಿರೋಧಿಸಲಾರರು. ರೈಲ್ವೇ ಕಾರ್ಮಿಕರು ಮುಷ್ಕರ ಹೂಡಿದರೆ ನಾಗರಿಕ ಪೂರೈಕೆ ವ್ಯವಸ್ಥೆಗೆ ಧಕ್ಕೆ ಒದಗಿ ಜನ ಅನ್ನವಿಲ್ಲದೆ ನರಳುತ್ತಾರೆ ಎಂದು ಸರ್ಕಾರ ಹೇಳುತ್ತಿದೆ. ಇದು ಮೊದಲ ಮುಷ್ಕರ. ಈವರೆಗೆ ಮುಷ್ಕರವಿಲ್ಲದ ಸಮಯದಲ್ಲಿ ಎಷ್ಟು ಜನಕ್ಕೆ ಅನ್ನ ಒದಗಿಸಿದ್ದೀರಿ ಎಂದು ಸರ್ಕಾರವನ್ನು ಕೇಳಿರಿ. ಜನ ಅನ್ನವಿಲ್ಲದೆ ನರಳುವುದು, ಸ್ವತಃ ಅನ್ನವಿಲ್ಲದೆ ನರಳುತ್ತಿರುವ ರೈಲ್ವೇ ಕಾರ್ಮಿಕರಿಂದಲ್ಲ; ರಾಷ್ಟ್ರೀಯ ಹಾಗೂ ಪ್ರಾಂತೀಯ ಸರ್ಕಾರಗಳ ಬಂಡವಾಳಶಾಹಿ ನೀತಿಗಳಿಂದ ಮತ್ತು ಅಧಿಕಾರಶಾಹಿ ವ್ಯವಸ್ಥೆಯಿಂದ ಎಂದು ಅವರಿಗೆ ತಿಳಿಸಿರಿ."

ಜಯಪ್ರಕಾಶರು ರಾಷ್ಟ್ರಪತಿಯವರ ಆಜ್ಞೆಯನ್ನು ಪ್ರಸ್ತಾಪಿಸಿ, "ಹಸಿವಿನಲ್ಲೂ ಕೂಡಾ ಪ್ರತಿಭಟಿಸದೆ ಕಾರ್ಮಿಕರು ಸಾಯಬೇಕೆಂದು ಬಯಸಿದೆ ಈ ಸರ್ಕಾರ. ಫ್ಯಾಸಿಸ್ಟ್

ಆಡಳಿತದಿಂದ ದೇಶವನ್ನು ಮುಕ್ತಗೊಳಿಸಿದೆವೆಂದು ಹೇಳುವ ಜನ, ವಿಶೇಷಾಜ್ಞೆಗಳ ಮೂಲಕ ದೇಶವನ್ನು ಆಳಲು ಹೊರಟಿದ್ದಾರೆ. ಸರ್ಕಾರ ಈ ಒಂದು ಬೆದರಿಕೆಗೆ ನೀವೊಮ್ಮೆ ಶರಣಾದರೆಂದರೆ, ಈ ದೇಶದ ಮುಂದಿನ ಕಾರ್ಮಿಕ ಆಂದೋಲನಕ್ಕೆ ನೀವು ಅನ್ಯಾಯ ಮಾಡಿದಂತಾಗುತ್ತದೆ. ನೀವು ಶರಣಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ" ಎಂದು ತನ್ನ ಮುಂದಿದ್ದ ಕಾರ್ಮಿಕ ಜನಸ್ತೋಮದ ಅಭಿಪ್ರಾಯ ಕೇಳಿದರು. ಇಡೀ ಕಾರ್ಮಿಕ ವರ್ಗ ಒಕ್ಕೊರಲಿನಿಂದ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿತು. ೧೯೫೧ ಆಗಸ್ಟ್ ೨೭ ರಂದು ಮುಷ್ಕರ ಆರಂಭಿಸಲು ಕಾರ್ಮಿಕ ಸಂಘದ ಕಾರ್ಯನಿರ್ವಾಹಕ ಸಮಿತಿ ನಿರ್ಧರಿಸಿತು.

ಲಕ್ನೋದಲ್ಲಿ ಅವರು ಅಂಚೆ ಮತ್ತು ತಂತಿ ಇಲಾಖೆ ನೌಕರರನ್ನು ಉದ್ದೇಶಿಸಿ ಮಾತನಾಡುತ್ತಾ, ಅವರ ಸಂಘದ ಅಧ್ಯಕ್ಷರಾಗಿ ಸಂಧಾನ ನಡೆಸುವಲ್ಲಿ ತಾವು ದಾರಿ ತಪ್ಪಿದುದಕ್ಕಾಗಿ ಕ್ಷಮೆ ಕೋರಿದರು. ತಮ್ಮ ಬೇಜವಾಬ್ದಾರಿತನದಿಂದ ನೌಕರರಿಗಾದ ಅನ್ಯಾಯಕ್ಕಾಗಿ ಅವರು ವಿಷಾದ ವ್ಯಕ್ತಪಡಿಸಿದರು. ರೈಲ್ವೇ ಕಾರ್ಮಿಕರೊಡನೆ ಸೇರಿ ಮುಷ್ಕರವನ್ನು ನಡೆಸಲು ಅವರನ್ನು ಕೋರಿದರು. ಚುನಾವಣೆಗಳನ್ನು ಎದುರಿಸಲು ತಮ್ಮ ಪಕ್ಷ ನಡೆಸುತ್ತಿರುವ ಸಿದ್ಧತೆಗಳು ಮತ್ತು ಅದರಿಂದಾಗಿ ತಮ್ಮ ಮೇಲಿರುವ ಕಾರ್ಯಭಾರಗಳಿಂದ ಮುಕ್ತವಾದೊಡನೆ ತಮ್ಮ ತಪ್ಪಿಗಾಗಿ ಸ್ವಯಂ ಶಿಕ್ಷೆಯಾಗಿ, ಉಪವಾಸ ಕೈಗೊಳ್ಳುವುದಾಗಿ ಪ್ರಕಟಿಸಿದರು. ಮುಷ್ಕರ ನಡೆಸುವ ಅಥವಾ ಬಿಡುವ ನಿರ್ಧಾರವನ್ನು ಕಾರ್ಮಿಕ ಮುಖಂಡರಿಗೇ ಬಿಟ್ಟರು.

ನೆಹರೂ ರಾಜಕಾರಣ

ಈ ಮಧ್ಯೆ ಪಟೇಲ್ ನಿಧನರಾಗಿ, ನೆಹರೂ ಕಾಂಗ್ರೆಸ್ ಪಕ್ಷದ ಏಕೈಕ ನಾಯಕರೆನಿಸಿಕೊಂಡಿದ್ದರು. ಕಾರ್ಯಕಾರಿ ಸಮಿತಿಗೆ ಮತ್ತು ಕೇಂದ್ರೀಯ ಚುನಾವಣಾ ಮಂಡಳಿಗೆ ರಾಜೀನಾಮೆ ನೀಡುವ ಒತ್ತಡ ಹಾಕುವ ಮೂಲಕ ಕಾಂಗ್ರೆಸ್ ಅಧ್ಯಕ್ಷ ಟಂಡನ್‌ರ ಮೇಲೆ ಒತ್ತಡ ಹೇರಿ ಅವರನ್ನು ಕೆಳಗಿಳಿಸಿ, ತಾವೇ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆ ಹೊತ್ತಿಗೆ ಕೃಪಲಾನಿಯವರೂ ಸಹ ಕೆಲವು ಪ್ರಮುಖ ಕಾಂಗ್ರೆಸ್ಸಿಗರೊಂದಿಗೆ ಪಕ್ಷವನ್ನು ತೊರೆದು ಕಿಸಾನ್ ಮಜದೂರ್ ಪ್ರಜಾಪಕ್ಷ ಎಂಬ ಹೊಸ ಪಕ್ಷವನ್ನು ರಚಿಸಿ, ಕಾಂಗ್ರೆಸ್ ಪಕ್ಷದಲ್ಲಿ ನೆಹರೂ ಅವರಿಗೆ ಇನ್ನಷ್ಟು ಸ್ವಾತಂತ್ರ್ಯವನ್ನು ಒದಗಿಸಿದ್ದರು. ಈಗ ನೆಹ್ರೂ ಅವರಿಗೆ ರೈಲ್ವೇ ಮುಷ್ಕರ ಒಂದು ಪ್ರತಿಷ್ಠೆಯ ವಿಷಯವಾಗಿದ್ದು, ಅದನ್ನು ತಡೆಯುವ ದೃಢ ನಿರ್ಧಾರ ಮಾಡಿದ್ದರು. ಅವರು ಜಯಪ್ರಕಾಶರ ಮೇಲೆ ಒಂದೇ ಸಮನೆ "ಸ್ನೇಹ"ದ ಒತ್ತಡ ಹೇರ ತೊಡಗಿದರು. ತಮ್ಮ ಕೊನೆಯ ಅಸ್ತ್ರವಾಗಿ ಪಾಕಿಸ್ತಾನದ ಆಕ್ರಮಣದ ಸಾಧ್ಯತೆಯ ಸುದ್ದಿ ಹರಡಿದರು. ಜಯಪ್ರಕಾಶ್ ಈಗ ಬಿಕ್ಕಟ್ಟಿಗೆ ಸಿಲುಕಿದರು. ಅವರು ಈ ಬಗ್ಗೆ ರೈಲ್ವೇ ಕಾರ್ಮಿಕ ಸಂಘದೊಡನೆ ಚರ್ಚಿಸಿದರು. ಮುಷ್ಕರದ ಸಮಯದಲ್ಲಿ ಆಹಾರ ಸರಬರಾಜಿಗೆ ವಿಶೇಷ ರೈಲುಗಳನ್ನು ನಿರ್ವಹಿಸಲು ಸಂಘ ಒಪ್ಪಿಕೊಂಡಿತು ಮತ್ತು ನೆಹರೂ ಅವರು ಪಾಕಿಸ್ತಾನದ

ಆಕ್ರಮಣದ ಸಾಧ್ಯತೆಯನ್ನು ಅಧಿಕೃತವಾಗಿ ಪ್ರಕಟಿಸಿದಲ್ಲಿ, ರೈಲ್ವೇ ಕಾರ್ಮಿಕರು ಎಲ್ಲರಿಗಿಂತ ಮುನ್ನ ಸರ್ಕಾರದೊಡನೆ ಸಹಕರಿಸಲು ಮುಂದು ಬರುವರೆಂದು ತಿಳಿಸಿತು. ಸರ್ಕಾರ ವರ್ಷವೊಂದಕ್ಕೆ ರೈಲ್ವೇಯಿಂದ ೪೫ ಕೋಟಿ ರೂ.ಗಳ ಲಾಭ ಪಡೆಯುತ್ತಿರುವಾಗ ಕಾರ್ಮಿಕರ ಬೇಡಿಕೆಯನ್ನು ಯಾವ ತಕರಾರಿಲ್ಲದೆಯೇ ಈಡೇರಿಸಬಹುದೆಂದೂ ಅದು ಸೂಚಿಸಿತು.

ನೆಹರೂ ಅರ್ಧ ಗೆದ್ದಿದ್ದರು; ಪಾಕಿಸ್ತಾನದ ಆಕ್ರಮಣದ ಸಾಧ್ಯತೆಯನ್ನು ಅಧಿಕೃತವಾಗಿ ಪ್ರಸ್ತಾಪಿಸುವ ಮೂಲಕ ಪೂರ್ಣವಾಗಿ ಗೆದ್ದರು. ದೇಶದ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ರೈಲ್ವೇ ಕಾರ್ಮಿಕ ಸಂಘ ಮುಷ್ಕರವನ್ನು ಹಿಂತೆಗೆದುಕೊಂಡಿತು. ಆದರೆ ಪಾಕಿಸ್ತಾನವೇನೂ ದೇಶದ ಮೇಲೆ ಆಕ್ರಮಣ ನಡೆಸಲಿಲ್ಲ.

ಮೊದಲ ಸಾರ್ವತ್ರಿಕ ಚುನಾವಣೆ

ಈ ಹೊತ್ತಿಗೆ ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವದಲ್ಲಿ ಮೊಟ್ಟ ಮೊದಲ ವಯಸ್ಕ ಮತದಾನವನ್ನಾಧರಿಸಿದ ಸಾರ್ವತ್ರಿಕ ಚುನಾವಣೆಗಳಿಗಾಗಿ ಸರ್ವ ಸಿದ್ಧತೆಗಳೂ ನಡೆದಿದ್ದವು. ಸುಮಾರು ಹದಿನೇಳೂವರೆ ಕೋಟಿ ಜನರು ಮತದಾನದ ಹಕ್ಕು ಪಡೆದಿದ್ದರು. ಚುನಾವಣಾ ಕಣದಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳಲ್ಲದೆ ಆಗ ತಾನೇ ಆರಂಭವಾಗಿದ್ದ ಡಾ. ಶ್ಯಾಮಪ್ರಸಾದ್ ಮುಖರ್ಜಿ ಅವರ ಹಿಂದೂ ರಾಷ್ಟ್ರವಾದಿ ಪಕ್ಷ—ಭಾರತೀಯ ಜನಸಂಘ, ಕೃಪಲಾನಿ ಅವರ ಗಾಂಧೀತತ್ವಗಳನ್ನು ಆಧರಿಸಿದ ಕಿಸಾನ್ ಮಜದೂರ್ ಪ್ರಜಾ ಪಕ್ಷ ಮತ್ತು ಭಾರೀ ಸಂಖ್ಯೆಯಲ್ಲಿ ಪಕ್ಷೇತರರು ಸೆಣಸಾಟಕ್ಕೆ ಸಿದ್ಧರಾಗಿದ್ದರು.

ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷಕ್ಕೆ ಹಣದ ಅಥವಾ ವಾಹನ ಸೌಲಭ್ಯಗಳ ಕೊರತೆಯಾಗಲೀ ಇರಲಿಲ್ಲ. ಪ್ರಧಾನಮಂತ್ರಿಗೆ ಇರುವ ಸುಭದ್ರತಾ ವ್ಯವಸ್ಥೆಯಡಿಯಲ್ಲಿ ನೆಹರೂ, ಚುನಾವಣಾ ಪ್ರಚಾರಕ್ಕೆ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಬಳಸಿದರು. ಕಾಂಗ್ರೆಸಿನ ಈ ಚುನಾವಣಾ ವೈಭವವನ್ನು ಕಂಡು ಇತರ ಪಕ್ಷಗಳು ಪೆಚ್ಚಾದವು! ಜಯಪ್ರಕಾಶ್, ಚುನಾವಣೆಗೆ ಮುನ್ನ ಕಾಂಗ್ರೆಸ್ ಸರ್ಕಾರ ರಾಜೀನಾಮೆ ನೀಡಬೇಕೆಂದು ಸಲಹೆ ಮಾಡಿದರು. ಆದರೆ ಇದರಿಂದ ಕಾಂಗ್ರೆಸ್ಸಿನವರೇ ಆದ ರಾಷ್ಟ್ರಪತಿ ಮತ್ತು ರಾಜ್ಯಪಾಲರುಗಳಿಗೆ ಮಿತಿ ಮೀರಿದ ಅಧಿಕಾರಗಳು ದೊರೆಯುತ್ತವೆಂದು ಜಯಪ್ರಕಾಶರ ಸ್ನೇಹಿತರು ಈ ಸಲಹೆಯನ್ನು ತಿರಸ್ಕರಿಸಿದರು.

ಜಯಪ್ರಕಾಶ್ ಸ್ವತಃ ತಾವೇ ಬಿಹಾರದಾದ್ಯಂತ ಮನೆ ಮನೆಗೂ, ಅಂಗಡಿ ಅಂಗಡಿಗೂ ಹೋಗಿ ಚುನಾವಣೆಗಾಗಿ ಹಣ ಸಂಗ್ರಹಿಸಲಾರಂಭಿಸಿದರು. ಅಶೋಕ ಮೆಹ್ತಾ ಅವರು ಚುನಾವಣಾ ಪ್ರಚಾರದ ನೇತೃತ್ವ ವಹಿಸಿದ್ದರು. ಸಮಾಜವಾದೀ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಭೂಸುಧಾರಣಾ ಕ್ರಮಗಳಿಗೆ ಅತ್ಯಂತ ಹೆಚ್ಚಿನ ಪ್ರಾಮುಖ್ಯತೆಯನ್ನು

ನೀಡಲಾಗಿತ್ತು. ಭೂಮಾಲೀಕರ ಊಳಿಗಮಾನ್ಯ ವ್ಯವಸ್ಥೆಯನ್ನು ತೊಡೆದು ಹಾಕುವುದೇ ದೇಶದ ಬಡತನದ ನಿರ್ಮೂಲನಕ್ಕೆ ಮೂಲ ಪರಿಹಾರ. ಮಾಲೀಕರಿಗೆ ಯಾವುದೇ ಪರಿಹಾರ ಕೊಡದೆ ಅವರ ಭಾರಿ ಹಿಡುವಳಿಗಳನ್ನು ಸರ್ಕಾರ ವಶಪಡಿಸಿಕೊಂಡು ಭೂಮಿ ಇಲ್ಲದ ಜನರಿಗೆ ಹಂಚಬೇಕು, ವಿದೇಶಿ ಬಂಡವಾಳವುಳ್ಳ ಆಸ್ತಿಯನ್ನು ರಾಷ್ಟ್ರೀಕರಿಸಬೇಕು, ವಿಶ್ವದ ಎರಡು ಬೃಹತ್ ಶಕ್ತಿಗಳ ನಡುವಣ ಶೀತಲ ಸಮರದಲ್ಲಿ ಭಾರತ ಯಾವುದೇ ಪಕ್ಷದ ಪರ ವಹಿಸಕೂಡದು. ಏಷ್ಯಾದ ದೇಶಗಳನ್ನು ಸಂಘಟಿಸಿ ವಿಶ್ವ ನಿಶಸ್ತ್ರೀಕರಣಕ್ಕಾಗಿ ಪ್ರಯತ್ನಗಳನ್ನು ಮಾಡಬೇಕು ಮತ್ತು ಪರಮಾಣುಶಕ್ತಿಯ ಮೇಲಿನ ಹತೋಟಿ ಇಡಿಯಾಗಿ ಯಾವುದೇ ಒಂದು ದೇಶದ ಕೈಯಲ್ಲಿರದೆ, ಅವರಲ್ಲಿ ಎಲ್ಲ ದೇಶಗಳ ಪಾಲೂ ಇರಬೇಕು— ಇದು ಸಮಾಜವಾದೀ ಪಕ್ಷದ ಚುನಾವಣಾ ಪ್ರಣಾಳಿಕೆಯ ಸಾರಂಶವಾಗಿತ್ತು.

ಸ್ವತಃ ಜಯಪ್ರಕಾಶರು ಚುನಾವಣೆಗೆ ನಿಲ್ಲಲು ಬಯಸಲಿಲ್ಲ. ಪಕ್ಷದ ಪ್ರಮುಖರೆಲ್ಲರೂ ಚುನಾವಣೆಗೆ ನಿಲ್ಲಬೇಕೆಂಬ ರಾಷ್ಟ್ರೀಯ ಕಾರ್ಯಕಾರಿಣಿ ನಿರ್ಣಯವನ್ನು ಅವರು ಒಪ್ಪಲಿಲ್ಲ. ತಮಗೂ ಸಂಸದೀಯ ಕಾರ್ಯಕಲಾಪಗಳಿಗೂ ಮೊದಲಿಂದಲೂ ಯಾವ ನಂಟೂ ಇಲ್ಲದಿರುವುದರಿಂದ, ಕ್ಷೇತ್ರ ಕಾರ್ಯದ ತಮ್ಮ ಸಾಮರ್ಥ್ಯವನ್ನು ಪಕ್ಷಕ್ಕೆ ಅರ್ಪಿಸುವುದಾಗಿ ಅವರು ತಿಳಿಸಿದರು. ಎಲ್ಲರೂ ಸಂಸತ್ತಿಗೆ ಹೋಗಿ ಕೂರುವುದು ಸಮಾಜವಾದಿ ಸಿದ್ಧಾಂತಕ್ಕೆ ವಿರುದ್ಧವೆಂದು ಅವರು ಅಭಿಪ್ರಾಯಪಟ್ಟರು. "ನಾವು ಹೊಸ ವ್ಯವಸ್ಥೆಯೊಂದನ್ನು— ಹೊಸ ಸ್ವಭಾವದ ಸಮಾಜವಾದವನ್ನು ರೂಪಿಸುತ್ತಿದ್ದೇವೆ ಎಂಬುದನ್ನು ಮರೆಯದಿರೋಣ. ಪಕ್ಷ ಪೂರ್ಣವಾಗಿ ಸಂಸದೀಯ ಪಕ್ಷವಾದರೆ ಸಮಾಜವಾದ ನಮ್ಮನ್ನು ಭೋಳೆಯಾದ ಉದಾರವಾದ ಅಥವಾ ಕ್ರೂರವಾದ ಪಕ್ಷ-ಸರ್ವಾಧಿಕಾರದತ್ತ ಕೊಂಡೊಯ್ಯುತ್ತದಷ್ಟೆ. ಬರೀ ರಾಜ್ಯಾಧಿಕಾರಕ್ಕೆ ಗಮನ ಕೊಡದೆ, ಸಂಸತ್ತೇತರ ಕಾರ್ಯಕ್ರಮಗಳಲ್ಲಿ ತೊಡಗಿದರೆ ಮಾತ್ರ ಪ್ರಜಾಸತ್ತಾತ್ಮಕ ಸಮಾಜವಾದಿ ಸಮಾಜದ ಕನಸು ನನಸಾಗುವುದು ಸಾಧ್ಯ" ಎಂಬುದು ಅವರ ಕಾಣ್ಕೆಯಾಗಿತ್ತು.

ಚುನಾವಣಾ ಪ್ರಚಾರ ಆರಂಭವಾಯಿತು. ಜನರಲ್ಲಿ ಇನ್ನೂ ಉಳಿದಿದ್ದ, ಗಾಂಧೀಜಿ ಕಾಂಗ್ರೆಸ್ ನೇತಾರರು ಎಂಬ ನಂಬಿಕೆ ಮತ್ತು ನೆಹರೂ ಅವರ 'ರಾಜತೇಜಸ್ಸು' ಕಾಂಗ್ರೆಸ್ ಪಕ್ಷಕ್ಕೆ ಚುನಾವಣಾ ಆಸ್ತಿಯಾಗಿದ್ದವು. ಆಗಲೇ ಅಧಿಕಾರದ ರುಚಿ ಕಂಡಿದ್ದ ಕಾಂಗ್ರೆಸಿಗರಿಗೆ ಮೂವತ್ತೈದು ವರ್ಷಗಳ ಕಾಲದ 'ಹೋರಾಟದ ಮಹಿಮೆ'ಯ ಅನುಕೂಲವೂ ಇತ್ತು. ಚುನಾವಣಾ ನಿಧಿಯ ಪ್ರಮಾಣಕ್ಕನುಸಾರವಾಗಿ ಅವರ ಪ್ರಚಾರ ವೈಖರಿ ರೂಪುಗೊಳ್ಳುತ್ತಿತ್ತು. ಪಾಕಿಸ್ತಾನದ ಆಕ್ರಮಣದಿಂದ, ಕಮ್ಯೂನಿಸಂ ಬೆದರಿಕೆಯಿಂದ, ಆಸ್ತಿ ಹಕ್ಕಿನ ನಿರ್ಮೂಲನದಿಂದ, ಕೊನೆಗೆ ಬಡತನದಿಂದ ದೇಶವನ್ನು ರಕ್ಷಿಸಬಲ್ಲದ್ದು ಕಾಂಗ್ರೆಸ್ ಪಕ್ಷ ಮಾತ್ರ ಎಂಬುದು ಅವರ ಪ್ರಚಾರದ ತಿರುಳಾಗಿತ್ತು.

ಸಮಾಜವಾದಿ ಪಕ್ಷದ ಭಾರೀ ಸೋಲು

ಸಮಾಜವಾದೀ ಪಕ್ಷದ ನಾಯಕರ ಯಾವ ತಾತ್ವಿಕ ಆಶ್ವಾಸನೆಗಳೂ ಗಾಂಧಿ ಮತ್ತು ನೆಹರೂ ಅವರ ಪ್ರಭಾವವನ್ನು ಅಳಿಸಿ ಹಾಕಲು ಸಾಧ್ಯವಿರಲಿಲ್ಲ. ಸಮಾಜವಾದಿಗಳೂ ಗಾಂಧೀಜಿಯನ್ನು ತಮ್ಮ ಮಾರ್ಗದರ್ಶಕರೆಂದು ನಂಬಿದ್ದರೂ, ಜನರ ಕಣ್ಣಲ್ಲಿ ಗಾಂಧಿ ಮತ್ತು ನೆಹರೂ ನಡುವಣ ನಿಕಟ ಸಂಬಂಧವು ಗಾಂಧೀಜಿಯನ್ನು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ ಸೇರಿದ್ದ ಆಸ್ತಿಯನ್ನಾಗಿ ಮಾಡಿತ್ತು. ಲೋಕಸಭೆಯ ೫೦೦ ಸ್ಥಾನಗಳ ಪೈಕಿ ಕಾಂಗ್ರೆಸ್ಸಿಗೆ ೩೬೨ ಸ್ಥಾನಗಳು ದೊರಕಿದವು. ಸಮಾಜವಾದಿ ಪಕ್ಷಕ್ಕೆ ದೊರೆತದ್ದು ೧೨ ಸ್ಥಾನಗಳು ಮಾತ್ರ. ಆದರೆ ಒಟ್ಟಾರೆ ಮತಗಳಲ್ಲಿ ಸಮಾಜವಾದಿ ಪಕ್ಷ ಪಡೆದಿದ್ದ ಮತಗಳಲ್ಲಿ ಅರ್ಧದಷ್ಟನ್ನು ಮಾತ್ರ ಪಡೆದಿದ್ದ ಕಮ್ಯೂನಿಸ್ಟ್ ಪಕ್ಷ ೨೭ ಸ್ಥಾನಗಳನ್ನು ಗಳಿಸಿ ಪ್ರಮುಖ ವಿರೋಧಪಕ್ಷವಾಗಿ ಹೊರಹೊಮ್ಮಿತು.

ಪ್ರಮುಖ ವಿರೋಧಪಕ್ಷದ ಕನಸು ಕಟ್ಟಿದ್ದ ಸಮಾಜವಾದಿ ಪಕ್ಷ, ಚುನಾವಣೆಯಲ್ಲಿ ಉಂಟಾದ ಮುಖಾವಹೇಳನದಿಂದ ತತ್ತರಿಸಿತು. ಸೋಲಿಗೆ ಕಾರಣಗಳನ್ನು ಹುಡುಕುವ ಕೆಲಸ ಆರಂಭವಾಯಿತು. ಅದರೊಡನೆಯೇ ವೈಯಕ್ತಿಕ ದೋಷಾರೋಪಣೆಗಳೂ ಆರಂಭವಾದವು. ಪಕ್ಷದ ಪ್ರಮುಖರ ಸಭೆಯೊಂದರಲ್ಲಿ ತಮ್ಮ ಆತ್ಮೀಯ ಗೆಳೆಯರಾಗಿದ್ದ ರಮಾನಂದರ ಮಿಶ್ರ ಅವರೇ ತಮ್ಮ ಮೇಲೆ ಕ್ಷುದ್ರ ಆರೋಪಗಳನ್ನು ಹೊರಿಸತೊಡಗಿದಾಗ ಜಯಪ್ರಕಾಶ್ ಖೇದಗೊಂಡರು. ಚುನಾವಣೆಯಲ್ಲಿ ಸೋತಿದ್ದ ಮಿಶ್ರ ಅವರು, 'ಚುನಾವಣೆಗೆ ನಿಂತು ಪಕ್ಷದ ನೈತಿಕ ಸಾಮರ್ಥ್ಯವನ್ನು ಹೆಚ್ಚಿಸಲು ನೆರವಾಗದಿದ್ದ' ಜಯಪ್ರಕಾಶ್‌ರನ್ನು ದೂಷಿಸಿದರು. ಚುನಾವಣಾ ನಿಧಿಯ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಜಯಪ್ರಕಾಶರು ತಮಗೆ ಬೇಕಾದ ಅಭ್ಯರ್ಥಿಗಳಿಗೆ ಮಾತ್ರ ಹೆಚ್ಚು ಹಣವನ್ನು ಒದಗಿಸಿದ್ದಾರೆ ಎಂಬ ಆರೋಪ ಮಾಡಿದರು. ಇದನ್ನೆಲ್ಲಾ ಕೇಳುತ್ತಿದ್ದ ಜಯಪ್ರಕಾಶ್ ಗದ್ಗದಿತರಾದರು. ಅಳುವನ್ನು ತಡೆಯಲಾಗದಿದ್ದಾಗ ಸಭೆಯಿಂದೆದ್ದು ಹೋಗಿ ಒಬ್ಬರೇ ಕುಳಿತು ಅತ್ತು ಸಭೆಗೆ ಹಿಂತಿರುಗಿದರು.

ಜಯಪ್ರಕಾಶರಿಗೆ ಪ್ರಾಣ ಸ್ನೇಹಿತರಂತಿದ್ದ ಗಂಗಾಶರಣ ಸಿನ್ಹಾ, ಅವರನ್ನು ಸಮಾಧಾನ ಗೊಳಿಸಿದರು ಮತ್ತು ಪಕ್ಷದ ಕಾರ್ಯಕಲಾಪಗಳಲ್ಲಿ ಮತ್ತೆ ಅವರನ್ನು ತೊಡಗಿಸಿದರು. ವಾಸ್ತವವಾಗಿ ಪಕ್ಷದ ಬಹು ಸಂಖ್ಯಾತ ಕಾರ್ಯಕರ್ತರು ಜಯಪ್ರಕಾಶರ ಬಗ್ಗೆ ಸಹಾನುಭೂತಿ ಹೊಂದಿದ್ದರು; ಮತ್ತು ಪಕ್ಷದ ಸೋಲಿಗೆ ನಾಯಕ ಸಾಮರ್ಥ್ಯದ ಕೊರತೆ ಕಾರಣವಾಗಿರದೆ, ಕೆಲವರ ವೈಯಕ್ತಿಕ ಪ್ರತಿಷ್ಠೆ ಮತ್ತು ಹಣ ಹಾಗೂ ಪಕ್ಷರಾಜಕಾರಣದ ಅನುಭವದ ಕೊರತೆ ಎಂದು ತಿಳಿದಿದ್ದರು. ಈ ಚುನಾವಣಾ ಸೋಲಿನ ಬಗ್ಗೆ ಮುಂದೊಂದು ದಿನ ಜಯಪ್ರಕಾಶ್ ವಿಶ್ಲೇಷಣೆ ಮಾಡುತ್ತಾ ಹೀಗೆ ಹೇಳಿದರು: "ಹಳ್ಳಿಯಲ್ಲಿದ್ದಿದ್ದರೆ ಸಮಾಜವಾದಿ ಪಕ್ಷಕ್ಕೆ ನಾನೂ ಮತ ಹಾಕುತ್ತಿರಲಿಲ್ಲವೆಂದು ಕಾಣುತ್ತದೆ. ಸಮಾಜವಾದಿಗಳ ಹೋರಾಟ ನಡೆದಿದ್ದುದು ನಗರ—ಪಟ್ಟಣಗಳಲ್ಲಿ ಮಾತ್ರ; ಹಳ್ಳಿಗರಿಗೆ ಗೊತ್ತಿದ್ದುದು ಕಾಂಗ್ರೆಸ್ ಮಾತ್ರ. ಸಮಾಜವಾದ,

ಸಮಾಜವಾದಿ ಪಕ್ಷಗಳು ಹಳ್ಳಿಗರಿಗೆ ತೀರಾ ಅಪರಿಚಿತವೇ ಆಗಿದ್ದವು". ಈ ಹಿನ್ನೆಲೆಯಲ್ಲಿ ಪಕ್ಷದ ಭವಿಷ್ಯವನ್ನು ಕುರಿತ ವಾಸ್ತವ ಹಾಗೂ ತಾತ್ವಿಕ ವಿಮರ್ಶೆಯನ್ನು ನಡೆಸಲು ಪಕ್ಷದ ವಿಶೇಷ ಅಧಿವೇಶನವೊಂದನ್ನು ಕರೆಯಲಾಯಿತು.

ಪಂಚಮಡಿ ಅಧಿವೇಶನ - ಹೊಸ ದೃಷ್ಟಿ

ಮಧ್ಯಪ್ರದೇಶದ ಪಂಚಮಡಿ ಎಂಬಲ್ಲಿ ೧೯೫೨ ಮೇನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಸಮಾಜವಾದಿ ಪಕ್ಷಕ್ಕೆ ಒಂದು ಹಚ್ಚ ಹೊಸ ತಾತ್ವಿಕ ಅಡಿಪಾಯವನ್ನು ಒದಗಿಸುವ ಪ್ರಯತ್ನ ಮಾಡಲಾಯಿತು. ಹಿರಿಯ ಮುತ್ಸದ್ದಿ ಆಚಾರ್ಯ ನರೇಂದ್ರದೇವ ಅವರ ಚೀನಾ ಪ್ರವಾಸದ ಕಾರಣದಿಂದಾಗಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಡಾ. ರಾಮಮನೋಹರ ಲೋಹಿಯಾ ಅವರು 'ಸಮಾಜವಾದದ ತಾತ್ವಿಕ ತಳಹದಿ' ಎಂಬ ತಮ್ಮ ಹೊಸ ಧೋರಣಾ ಪತ್ರವನ್ನು ಮಂಡಿಸಿದರು. ಬಂಡವಾಳಶಾಹಿ ಮತ್ತು ಕಮ್ಯೂನಿಸಂಗಳೆರಡನ್ನೂ ತೃತೀಯ ಜಗತ್ತಿನ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂದರ್ಭಗಳಲ್ಲಿ ಪರಿಶೀಲನೆಗೆ ಒಳಪಡಿಸಿದ್ದ ಈ ವಿಚಾರ ಲಹರಿ, ಗಾಂಧೀಜಿಯಿಂದ ಪ್ರಭಾವಿತರಾಗಿದ್ದ ಪ್ರಮುಖ ಸಮಾಜವಾದಿಗಳ ಪರಿಷ್ಕೃತ ಚಿಂತನೆಯನ್ನು ಪ್ರತಿನಿಧಿಸುತ್ತಿತ್ತು. ಮಾರ್ಕ್ಸ್ ಹಾಗೂ ಲೆನಿನ್‌ವಾದಿ ವರ್ಗ ಹೋರಾಟದ ಕಲ್ಪನೆಯನ್ನು, ಸರ್ವಾಧಿಕಾರೀ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತದೆ ಎಂದು ತಿರಸ್ಕರಿಸಿ ಆಳವಾದ ನೈತಿಕ ಪ್ರಜ್ಞೆಯಿಂದ ಉದ್ದೀಪ್ತವಾಗುವ ವರ್ಗಹೋರಾಟವನ್ನು ಅದರಲ್ಲಿ ಪ್ರತಿಪಾದಿಸಲಾಗಿತ್ತು.

ಇಂತಹ ವರ್ಗಹೋರಾಟಕ್ಕೆ ನಾಗರಿಕ ಅಸಹಕಾರ ಸತ್ಯಾಗ್ರಹ ಹೇಗೆ ಅತ್ಯುತ್ತಮ ಸಾಧನವಾಗಿ ಪರಿಣಮಿಸ ಬಲ್ಲುದು ಎಂಬುದರ ಬಗ್ಗೆ ಸಮಾವೇಶದಲ್ಲಿ ವಿವೇಚನೆ ನಡೆಯಿತು. ಕೆಲವು ಪ್ರತಿನಿಧಿಗಳು ಇದು ಮಾರ್ಕ್ಸ್ ವಿರೋಧಿ ವಿಚಾರಲಹರಿಯೆಂದು ಖಂಡಿಸಿ ಮಾತನಾಡಿದರು. ಜಯಪ್ರಕಾಶರು ಸ್ವಾತಂತ್ರ್ಯ ಹೋರಾಟವು ತಮಗೆ ಆತ್ಯಂತಿಕವಾಗಿ ಕಲಿಸಿದ ಪಾಠಗಳ ಹಿನ್ನೆಲೆಯಲ್ಲಿ ಲೋಹಿಯಾ ಅವರ ಭಾಷಣವನ್ನು ಸಮರ್ಥಿಸಿ, ಪ್ರತಿನಿಧಿಗಳ ಸಂದೇಹಗಳಿಗೆ ಉತ್ತರ ನೀಡಿದರು. ಕೆಲವು ಸಂದೇಹಗಳಿಗೆ ಲೋಹಿಯಾ ಅವರೇ ಸ್ಪಷ್ಟೀಕರಣ ನೀಡಿದರು. "ನಾನು, ಹೇಗೆ ಗಾಂಧಿ ವಿರೋಧಿಯಲ್ಲವೋ ಹಾಗೇ ಮಾರ್ಕ್ಸ್ ವಿರೋಧಿಯೂ ಅಲ್ಲ. ಈ ವಿರೋಧಿತನದ ಭಾಷೆಯೇ ಅಪಾಯಕರ. ನಮ್ಮದೇ ಆದ ವಿಶಿಷ್ಟ ಪ್ರಜ್ಞೆ ಮತ್ತು ಪರಿಸರವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅಭಿವೃದ್ಧಿಯ ದಾರಿಯನ್ನು ಕಂಡುಕೊಳ್ಳಬೇಕು. ಸಮಾಜವಾದ ವೆಂಬುದು ಬಂಡವಾಳಶಾಹಿ ಕಮ್ಯೂನಿಸಂಗಳೆರಡರಲ್ಲೂ ಸಾಮಾನ್ಯವಾಗಿರುವ ಉತ್ಪಾದನಾ ತಂತ್ರದ ಸ್ವರೂಪವನ್ನು ಬದಲಿಸ ಬಯಸುತ್ತದೆ. ಅದು ತೃತೀಯ ಜಗತ್ತಿನಲ್ಲಿ ಲಭ್ಯವಿರುವ ಬಂಡವಾಳ ಹಾಗೂ ಮಾನವ ಸಂಪನ್ಮೂಲಗಳನ್ನು ಔಚಿತ್ಯಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಿರುವ 'ಸಣ್ಣಘಟಕ ತಂತ್ರಜ್ಞಾನ'ದ ಮೂಲಕ ಸಮಾಜದ ಪುನಾರಚನೆ ಮಾಡಬಯಸುವ ನವನವೀನ

ಸಿದ್ಧಾಂತವಾಗಿದೆ" ಎಂಬುದು ಅವರ ಸಮಾಜವಾದ ಕುರಿತ ಹೊಸ ನೋಟವಾಗಿತ್ತು. ಸಮಾವೇಶ ಲೋಹಿಯಾ ಅವರ ಹೊಸ ಸಮಾಜವಾದಿ ತಾತ್ವಿಕತೆಯನ್ನು ಅಂಗೀಕರಿಸಿತು. ಹಾಗೆಯೇ ದೇಶದ ಎಡ ಶಕ್ತಿಯನ್ನು ಸಂಘಟಿಸಲು ಇತರ ಸಮಾನ ಮನಸ್ಕ ಎಡ ಪಕ್ಷಗಳ ಸಂಪರ್ಕ ಸಾಧಿಸಲೂ ನಿರ್ಧರಿಸಲಾಯಿತು.

ಪ್ರಜಾಸಮಾಜವಾದಿ ಪಕ್ಷದ ಉದಯ

ಇತರ ಎಡಪಕ್ಷಗಳ ಸಂಪರ್ಕ ಸಾಧಿಸುವ ಮೊದಲ ಪ್ರಯತ್ನವಾಗಿ ಅಶೋಕ ಮೆಹ್ತಾ ಅವರು ಕಿಸಾನ್ ಮಜದೂರ್ ಪಕ್ಷದ ಕೃಪಲಾನಿಯವರೊಡನೆ ಮಾತುಕತೆ ಆರಂಭಿಸಿದರು. ಜಯಪ್ರಕಾಶ ನಾರಾಯಣ್ ಕೂಡ ಈ ಮಾತುಕತೆಗಳಲ್ಲಿ ಭಾಗವಹಿಸಿದರು. ಸಂಸತ್ತಿನಲ್ಲಿ ಎರಡೂ ಪಕ್ಷಗಳು ಒಂದಾಗಿ ಕೆಲಸ ಮಾಡಲು ಒಪ್ಪಿಕೊಳ್ಳಲಾಯಿತು. ನಂತರ ಎರಡೂ ಪಕ್ಷಗಳ ವಿಲೀನದ ಸಾಧ್ಯತೆಗಳನ್ನು ಪರಿಶೀಲಿಸಲಾಯಿತು. ಇದು ಮಾರ್ಕ್ಸ್‌ವಾದದಿಂದ ದೂರ ಸರಿದು ಈಗ ವಿವರ್ಣಗೊಂಡಿರುವ ಗಾಂಧಿವಾದವನ್ನು ಅಪ್ಪುವ ತಪ್ಪು ಹೆಜ್ಜೆಯೆಂದು, ಈ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದ ಬೌದ್ಧ ಮಾರ್ಕ್ಸ್‌ವಾದಿಯೆಂದೇ ಹೆಸರಾಗಿದ್ದ ಆಚಾರ್ಯ ನರೇಂದ್ರ ದೇವ ಅವರ ಮನವೊಲಿಸುವ ಹೊಣೆಯನ್ನು ಅಶೋಕ ಮೆಹ್ತಾ ಮತ್ತು ಲೋಹಿಯಾ ವಹಿಸಿಕೊಂಡರು. ಕಿಸಾನ್ ಮಜದೂರ್ ಪ್ರಜಾಪಕ್ಷ ಮತ್ತು ಸಮಾಜವಾದಿ ಪಕ್ಷಗಳು ಒಂದಾಗಿ ಪ್ರಜಾ ಸಮಾಜವಾದಿ ಪಕ್ಷದ ಉದಯವಾಯಿತು. ಅರುಣಾ ಅಸಿಫ್ ಆಲಿ ಮತ್ತು ರಮಾನಂದನ ಮಿಶ್ರ ಮುಂತಾದ ಕೆಲವರು ಇದನ್ನು ವಿರೋಧಿಸರಾದರೂ, ವಿಲೀನದ ಪರವಾಗಿಯೇ ಹೆಚ್ಚು ಬೆಂಬಲ ವ್ಯಕ್ತವಾಯಿತು. ಕೃಪಲಾನಿಯವರು ಹೊಸ ಪಕ್ಷದ ಅಧ್ಯಕ್ಷರಾದರು. ಡಾ. ಲೋಹಿಯಾ ಪ್ರಧಾನ ಕಾರ್ಯದರ್ಶಿಯಾದರು. ಮಧುಲಿಮಯೆ ಹಾಗೂ ಅಚ್ಯುತ ಪಟವರ್ಧನ್ ಜಂಟಿ ಕಾರ್ಯದರ್ಶಿಗಳಾದರು.

ಉಪವಾಸ: ಆತ್ಮ ನಿರೀಕ್ಷಣೆ

ಪ್ರಜಾಸಮಾಜವಾದಿ ಪಕ್ಷದ ಉದಯವಾದ ನಂತರ ಜಯಪ್ರಕಾಶರ ಮೇಲಿ ರಾಜಕೀಯ ಕೆಲಸಗಳ ಒತ್ತಡ ಕಡಿಮೆಯಾಯಿತು. ಹಿಂದೆ ಅಂಚೆ ಮತ್ತು ತಂತಿ ಇಲಾಖೆಯ ಉದ್ಯೋಗಿಗಳ ಸಭೆಯಲ್ಲಿ ಪ್ರಕಟಿಸಿದಂತೆ ಅವರು ಆತ್ಮಶುದ್ಧೀಕರಣಕ್ಕಾಗಿ ಉಪವಾಸ ಕೈಗೊಳ್ಳಲು ನಿರ್ಧರಿಸಿದರು. ಪ್ರಾಕೃತಿಕ ಚಿಕಿತ್ಸಾ ಶಾಸ್ತ್ರ ಪರಿಣತರಾದ ಡಾ. ದಿನಶಾ ಮೆಹ್ತಾ ಅವರ ಪುಣೆಯ ಚಿಕಿತ್ಸಾ ಕೇಂದ್ರದಲ್ಲಿ ಅವರು ಉಪವಾಸ ಆರಂಭಿಸಿದರು. ಜಯಪ್ರಕಾಶರು ೨ ತಿಂಗಳುಗಳ ಕಾಲ ಉಪವಾಸ ಮಾಡುವ ಉದ್ದೇಶ ಹೊಂದಿದ್ದರಾದರೂ, ಡಾ. ಮೆಹ್ತಾ ಅವರ ಸಲಹೆಯಂತೆ ಉಪವಾಸವನ್ನು ಏಳು ವಾರಗಳಿಗೆ ಸೀಮಿತಗೊಳಿಸಿದರು. ಈ

ಉಪವಾಸ ಯಾರ ವಿರುದ್ಧವೂ ಅಲ್ಲವೆಂದು ಸ್ಪಷ್ಟಪಡಿಸಿದ ಅವರು, ಇದು ಕೇವಲ ತಮ್ಮ ತಪ್ಪೊಂದಕ್ಕಾಗಿ ಪ್ರಾಯಶ್ಚಿತ್ತ ಮತ್ತು ಹಿಂದಿನ ನಿರ್ಧಾರವೊಂದನ್ನು ಕಾರ್ಯಗತಗೊಳಿಸುವ ವೈಯಕ್ತಿಕ ವಿಚಾರವಷ್ಟೆ ಎಂದು ಪತ್ರಿಕಾ ಹೇಳಿಕೆಯನ್ನೂ ನೀಡಿದರು. ಪ್ಯಾರೇಲಾಲರಂತಹ ಗಾಂಧಿವಾದಿಗಳಿಗೆ ಜಯಪ್ರಕಾಶರ ಉಪವಾಸ ಧಾರ್ಮಿಕ ಶ್ರದ್ಧೆಯಾಗಿ ಕಂಡರೆ, ಕೆಲವು ತೀವ್ರವಾದಿ ಸಮಾಜವಾದಿಗಳಿಗೆ ಇದು ಅರ್ಥಹೀನ ಕೆಲಸವಾಗಿ ಕಂಡಿತು. ಆದರೆ ಜಯಪ್ರಕಾಶರನ್ನು ಪ್ರತಿದಿನ ಬಂದು ಕಾಣುತ್ತಿದ್ದ ಮಹಾರಾಷ್ಟ್ರದ ಸಮಾಜವಾದಿ ನಾಯಕ ಎಸ್.ಎಂ. ಜೋಷಿಯವರಿಗೆ, ಈ ಉಪವಾಸ ಹಿಂದೂ ಧಾರ್ಮಿಕ ಶ್ರದ್ಧೆಯ ಅರ್ಥ ವ್ಯಾಪ್ತಿಯನ್ನು ಮೀರಿದ, ಇಡೀ ಸಮಾಜದ ಆತ್ಮಸಾಕ್ಷಿಯನ್ನು ತನ್ನ ಇಂದ್ರಿಯಮುಕ್ತ ಆತ್ಮಬಲದ ಮೂಲಕ ಉದ್ದೀಪಿಸುವ ಸಾಮಾಜಿಕ ಪ್ರಕ್ರಿಯೆಯಾಗಿತ್ತು. ಈ ಸಂದರ್ಭದಲ್ಲಿ ಜಯಪ್ರಕಾಶರಿಗೆ ರಾಶಿರಾಶಿಯಾಗಿ ಶುಭಾಶಯ ಸಂದೇಶಗಳು ಬಂದವು. ಲೋಹಿಯಾ, ಅಶೋಕ ಮೆಹ್ತಾ, ಗಂಗಾಶರಣ ಸಿನ್ಹ ಮುಂತಾದ ಆತ್ಮೀಯ ಗೆಳೆಯರು ಪುಣೆಗೆ ಬಂದು ಅವರಿಗೆ ಶುಭ ಕೋರಿದರು ಮತ್ತು ಜಯಪ್ರಕಾಶ್ ಸಮಾಜವಾದಿ ಸಮುದಾಯದಿಂದ ದೂರ ಹೋಗಲಾರರು ಎಂದು ಆಶಿಸಿದರು.

ಉಪವಾಸದ ಸಮಯದಲ್ಲಿ ಜಯಪ್ರಕಾಶರು ಈವರೆಗೆ ಯಾವ ಸಿದ್ಧಾಂತವೂ ಉತ್ತರ ಕೊಡದಿದ್ದ ತಮ್ಮ ಒಂದು ಪ್ರಶ್ನೆಗೆ ಈಗ ಉತ್ತರವನ್ನು ಪಡೆದುಕೊಳ್ಳುವ ಪ್ರಯತ್ನ ಮಾಡಿದ್ದರು. ಅದು ಅತ್ಯಂತ ಮೂಲಭೂತವಾದ ಪ್ರಶ್ನೆಯಾಗಿತ್ತು: "ಮನುಷ್ಯ ಏಕೆ ಒಳ್ಳೆಯವನಾಗಿರಬೇಕು?" ತಮ್ಮನ್ನು ಭೇಟಿ ಮಾಡಲು ಬಂದ ಲೂಯಿ ಫಿಶರ್ ಅವರಿಗೂ ಸಹ ಇದೇ ಪ್ರಶ್ನೆ ಹಾಕಿದರು. ಫಿಶರ್ ಆಶ್ಚರ್ಯಗೊಂಡು "ಏನು ನೀವು ಧಾರ್ಮಿಕ ವ್ಯಕ್ತಿಯಾಗ ಹೊರಟಿದ್ದೀರಾ ಜಯಪ್ರಕಾಶ್?" ಎಂದು ಪ್ರಶ್ನಿಸಿದರು. ಇದಕ್ಕೆ ಜಯಪ್ರಕಾಶ್ ಕೊಟ್ಟ ಉತ್ತರ, ಉಪವಾಸದ ಹೊತ್ತಿಗಾಗಲೇ ಅವರ ಚಿಂತನಾಕ್ರಮದಲ್ಲುಂಟಾಗಿದ್ದ ಮೂಲಭೂತ ಬದಲಾವಣೆಯನ್ನು ಕೆಲವೇ ಮಾತುಗಳಲ್ಲಿ ಹಿಡಿದಿಡುತ್ತದೆ: "ಇಲ್ಲ ಖಂಡಿತ ಇಲ್ಲ. ಮೊದಲಾಗಿ 'ಧಾರ್ಮಿಕ' ಎಂದರೆ ನಿಮ್ಮ ಅರ್ಥ ಏನು ಎಂಬುದು ನನಗೆ ತಿಳಿಯದು. ನನಗಂತೂ ವೈಯಕ್ತಿಕ ದೇವರು ದಿಂಡಿರುಗಳಲ್ಲಿ ನಂಬಿಕೆ ಇಲ್ಲ. ಆದರೆ ಮನುಷ್ಯ ಮನುಷ್ಯನಾಗಿ ಅತ್ಯುನ್ನತ ಎತ್ತರವನ್ನು ಮುಟ್ಟಲು ಆತನಿಗೆ ಚೈತನ್ಯ ನೀಡುವಂತಹ ನಾಗರಿಕತೆಯೊಂದನ್ನು ನಾನೀಗ ಮುನ್ನೋಡಬಯಸುವೆ."

ಜಯಪ್ರಕಾಶರ ಈ ಆಲೋಚನೆ ಮೀನೂ ಮಸಾನಿಯವರ 'ಫ್ರೀಡಂ ಫಸ್ಟ್' ಪತ್ರಿಕೆಗೆ ಇದೇ ಸಂದರ್ಭದಲ್ಲಿ ಬರೆದ 'ಭೌತವಾದ ಮತ್ತು ಒಳ್ಳೆಯತನ' ಎಂಬ ಲೇಖನದಲ್ಲಿ ಇನ್ನಷ್ಟು ಸ್ಪಷ್ಟರೂಪ ಪಡೆಯುತ್ತದೆ. ಈ ಹೊತ್ತಿಗೆ ಜಯಪ್ರಕಾಶ್ ಮಾರ್ಕ್ಸ್‌ವಾದದಿಂದ ಎಷ್ಟು ದೂರ ಸರಿದಿದ್ದಾರೆ ಎಂಬುದೂ ಈ ಲೇಖನದಿಂದ ತಿಳಿಯುತ್ತದೆ. ಈ ಲೇಖನದಲ್ಲಿ ಅವರು ಮಾರ್ಕ್ಸ್‌ವಾದದ ಹಿನ್ನೆಲೆಯಲ್ಲಿರುವ ದ್ವಂದ್ವಮಾನ ಭೌತವಾದವನ್ನು ಹೀಗೆ ಆತ್ಯಂತಿಕವಾಗಿ ತಳ್ಳಿಹಾಕಿದ್ದಾರೆ:

"ಬಹಳ ವರ್ಷಗಳಿಂದ ನಾನು ದ್ವಂದ್ವಮಾನ ಭೌತವಾದವನ್ನು ದೇವತೆಯಂತೆ 'ಪೂಜಿಸಿಕೊಂಡು' ಬಂದಿದ್ದೆ. ಇದು ನನಗೆ ಮತ್ತಾವುದೇ ತತ್ವಶಾಸ್ತ್ರಕ್ಕಿಂತ ಹೆಚ್ಚು ತೃಪ್ತಿ ನೀಡುತ್ತಿದ್ದಂತೆ ಅನಿಸಿತ್ತು. ತತ್ವಶಾಸ್ತ್ರಗಳ ಶೋಧನೆ ಈಗಲೂ ಮನುಷ್ಯನನ್ನು ಅತೃಪ್ತನನ್ನಾಗಿಯೇ ಉಳಿಸಿದೆಯಾದರೂ, ಯಾವುದೇ ರೀತಿಯ ಭೌತವಾದವೂ ಮನುಷ್ಯ ನಿಜವಾದ ಅರ್ಥದಲ್ಲಿ ಮಾನವೀಯವಾಗುವ ಅವಕಾಶಗಳನ್ನೇ ಕಸಿದುಕೊಂಡುಬಿಡುತ್ತದೆಂದು ನನಗೀಗ ಸ್ಪಷ್ಟವಾಗಿ ಮನವರಿಕೆಯಾಗಿದೆ. ಭೌತವಾದೀ ನಾಗರೀಕತೆಯಲ್ಲಿ ಮನುಷ್ಯನಿಗೆ ತಾನು ಒಳ್ಳೆಯವನಾಗಿರಲು ಯಾವುದೇ ಪ್ರೇರಕ ಶಕ್ತಿ ಇರುವುದಿಲ್ಲ.... ದ್ವಂದ್ವಮಾನ ಭೌತವಾದದ ಸಾಮ್ರಾಜ್ಯದಲ್ಲಿ ಭಯ, ಮನುಷ್ಯನನ್ನು ಸಂಪೂರ್ಣವಾಗಿ ವಿಧೇಯನನ್ನಾಗಿಸುತ್ತದೆ ಮತ್ತು ಪಕ್ಷ ದೇವರ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತದೆ. ಆದರೆ ಈ ದೇವರೇ ದುಷ್ಟನಾದಾಗ, ದುಷ್ಟತನವೇ ಸಾಮಾನ್ಯ ನೀತಿ ಸಂಹಿತೆಯಾಗುತ್ತದೆ!"

■

೮. ಪಕ್ಷರಾಜಕಾರಣದಾಚೆಗೆ: ಸರ್ವೋದಯದೆಡೆಗೆ

ಉಪವಾಸ, ಜಯಪ್ರಕಾಶರು ಈವರೆಗೆ ನಡೆದುಬಂದ ದಾರಿಯ ಬಗ್ಗೆ ಗಾಢವಾದ ಮರುಚಿಂತನೆ ಮಾಡುವ ಒಂದು ದೊಡ್ಡ ಅವಕಾಶವನ್ನು ಒದಗಿಸಿತ್ತು. ಅಮೆರಿಕಾದಿಂದ ಕಟ್ಟಾ ಮಾರ್ಕ್ಸ್‌ವಾದಿಯಾಗಿ ಹಿಂದಿರುಗಿದ್ದ ಅವರು ಗಾಂಧೀಜಿಯೊಡನೆಯ ವೈಯಕ್ತಿಕ ಮುಖಾಮುಖಿ ಹಾಗೂ ಅವರ ನೇತೃತ್ವದ ಕಾಂಗ್ರೆಸ್ ಆಂದೋಲನದಲ್ಲಿನ ತಮ್ಮದೇ ರೀತಿಯ ಸಕ್ರಿಯ ಭಾಗವಹಿಸುವಿಕೆಗಳ ಮೂಲಕ ಮಾರ್ಕ್ಸ್‌ವಾದದ ತಾತ್ವಿಕತೆಗೆ ಗಾಂಧಿವಾದದ ಅನುಭವವನ್ನು ಜೋಡಿಸಿ ಸಮಾಜವಾದದ ಹೊಸ ಎರಕವನ್ನು ಸೃಷ್ಟಿಸುವ ಪ್ರಯೋಗದಲ್ಲಿ ತೊಡಗಿದರು. ಆಗ ಮಾರ್ಕ್ಸ್‌ವಾದಿಗಳೆನಿಸಿಕೊಂಡಿದ್ದ ಭಾರತದ ಕಮ್ಯೂನಿಸ್ಟರು ಕಾಂಗ್ರೆಸ್ ಸಮಾಜವಾದಿ ಪಕ್ಷದೊಳಗೆ ನುಸುಳಿ ನಡೆಸಿದ ಪಿತೂರಿ ಹಾಗೂ ೧೯೪೨ರ ಚಳುವಳಿಯಲ್ಲಿ ಎಸಗಿದ ದ್ರೋಹಗಳಿಂದ ಅವರು ಕಂಗೆಟ್ಟಿದ್ದರು. ಮಾರ್ಕ್ಸ್‌ವಾದದ ತಾತ್ವಿಕತೆಯ ಬಗೆಗೇ ಅವರಲ್ಲಿ ಮೂಲಭೂತ ಸಂದೇಹವಾಗಿ ಏಳತೊಡಗಿದ್ದವು. ಮೊದಲನೇ ಸಾರ್ವತ್ರಿಕ ಚುನಾವಣೆಯ ಭಾರೀ ಸೋಲಿನ ನಂತರ ಸಮಾಜವಾದೀ ಆಂದೋಲನದ ಆತ್ಮ ನಿರೀಕ್ಷಣೆ ಹಾಗೂ ಪುನರ್ ನವೀಕರಣಕ್ಕಾಗಿ ಪಂಚಮಡಿಯಲ್ಲಿ ಸೇರಿದ್ದ ಸಮಾವೇಶದಲ್ಲಿ ಡಾ. ರಾಮಮನೋಹರ ಲೋಹಿಯಾ ಅವರು ಮಂಡಿಸಿದ್ದ. 'ಭಾರತೀಯ ಸಮಾಜವಾದದ ತಾತ್ವಿಕ ಅಡಿಗಲ್ಲು' ಎಂದೇ ಪ್ರಸಿದ್ಧವಾದ ಪ್ರಬಂಧವನ್ನು ಅವರು, ಮಾರ್ಕ್ಸ್‌ವಾದ ಎಂದರೆ ಸತ್ಯದ ವೈಜ್ಞಾನಿಕ ಅನ್ವೇಷಣೆ ಎಂಬರ್ಥದಲ್ಲಿ, ಮೂಲತಃ ಮಾರ್ಕ್ಸ್‌ವಾದೀ ಚಿಂತನೆಯೆಂದೇ ವಿಶ್ಲೇಷಿಸಿ ಸಮರ್ಥಿಸಿದ್ದರು. ಆದರೆ ಗಾಂಧೀಜಿ ಪ್ರಭಾವವಿದ್ದ ಸಮೂಹದೊಳಗೆ ಮನುಷ್ಯರು ವರ್ತಿಸುತ್ತಿದ್ದ ರೀತಿ ನೀತಿಗಳಿಗೂ, ಗಾಂಧಿ ಹತ್ಯೆ ನಂತರ ಅದೇ ಸಮೂಹದೊಳಗೆ ಮನುಷ್ಯ ವರ್ತಿಸುತ್ತಿರುವ ರೀತಿ ನೀತಿಗಳಿಗೂ ಇರುವ ವ್ಯತ್ಯಾಸಗಳನ್ನು, ಕಾಂಗ್ರೆಸ್ ಪಕ್ಷದೊಳಗಿನ ಹಾಗೂ ಕಾಂಗ್ರೆಸ್‌ನಿಂದ ಒಡೆದು ಬಂದ ಸಮಾಜವಾದಿ ಪಕ್ಷದೊಳಗಿನ ವಿದ್ಯಮಾನಗಳ ಮೂಲಕ ಗಮನಿಸಿದ ನಂತರ ಅವರು ಮಾರ್ಕ್ಸ್‌ವಾದ ಹೇಳುವ ವಸ್ತು ಮತ್ತು ಪ್ರಜ್ಞೆಯ ಸಂಬಂಧದ ಬಗೆಗೇ ಮರು ಆಲೋಚನೆಗೆ ತೊಡಗಿದರು.

ವಸ್ತು ಮತ್ತು ಪ್ರಜ್ಞೆಯ ಪ್ರಶ್ನೆ

ಮಾರ್ಕ್ಸ್‌ವಾದ ಹೇಳುವ ಹಾಗೆ ಮನುಷ್ಯಪ್ರಜ್ಞೆ ಮತ್ತು ಆ ಮೂಲಕ ಅವನು ಕಟ್ಟಿದ ಸಮಾಜ ಹಾಗೂ ಸಂಸ್ಕೃತಿ, ಕೇವಲ ವಸ್ತು (matter)ವಿನ ವಿವಿಧ ಪ್ರತಿ ರೂಪಗಳೇ ಆಗಿದ್ದಲ್ಲಿ, ಅಂತಹ ಸಮಾಜದಲ್ಲಿ ಮನುಷ್ಯ ಒಳ್ಳೆಯವನೇ ಆಗಿರಲು-ಅಂದರೆ ಉದಾರನೂ, ಕರುಣಾಮಯಿಯೂ, ನಿಸ್ವಾರ್ಥಿಯೂ ಆಗಿರಲು-ಕಾರಣವೇ ಕಾಣುವುದಿಲ್ಲ ಎಂದು ಅವರು

ಕಂಡು ಕೊಂಡರು. ಮನುಷ್ಯ ಒಳ್ಳೆಯವನಾಗಲು ಪ್ರೇರಣೆಯೇ ಇಲ್ಲದ 'ವಸ್ತುನಿಷ್ಠ' ಮಾರ್ಕ್ಸ್‌ವಾದದ ತಾತ್ವಿಕ ಅಪೂರ್ಣತೆಯೇ, ಆ ಹೊತ್ತಿಗೆ ರಷ್ಯಾದಲ್ಲಿ ಅಂತಿಮ ಹಂತಕ್ಕೆ ಬಂದಿದ್ದ ಕಮ್ಯುನಿಸ್ಟ್ ಪಕ್ಷದೊಳಗಿನ ಎಲ್ಲ ಬಂಡಾಯಗಳನ್ನು ಹತ್ತಿಕ್ಕುವ ಸರ್ವಾಧಿಕಾರೀ ಮನೋಭಾವಕ್ಕೆ ಕಾರಣವಾಗಿದೆ ಎಂದು ಅವರು ಗುರುತಿಸಿದರು. ಮಾರ್ಕ್ಸ್‌ವಾದದ ಮುಖ್ಯ ತೊಂದರೆ ಎಂದರೆ, ಪ್ರಜ್ಞೆಯನ್ನು—ಅದು ಎಲ್ಲಿಂದಲೇ ಬಂದಿರಲಿ—ವಸ್ತುವನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲೇ ಅರ್ಥಮಾಡಿಕೊಳ್ಳಬಹುದೆಂದು ತಿಳಿದಿದ್ದೇ ಆಗಿದೆ ಎಂದು ಜಯಪ್ರಕಾಶರು ವಿಶ್ಲೇಷಿಸಿದರು. ಪ್ರಜ್ಞೆಯನ್ನು ವಸ್ತುವಿನ ವರ್ತನೆಯ ಮಟ್ಟಕ್ಕೆ ಇಳಿಸಿ ವಿಶ್ಲೇಷಿಸುವ ಮಾರ್ಕ್ಸ್‌ವಾದಿಗಳು ಮನುಷ್ಯ ಸಂಸ್ಕೃತಿ ನಿರ್ಮಿಸಿಕೊಂಡು ಬಂದಿದ್ದ ಮೂಲನೀತಿಶಾಸ್ತ್ರದ ಅಡಿಗಲ್ಲುಗಳನ್ನೇ ಅಲುಗಾಡಿಸಿ ಗುರಿ ಮತ್ತು ಮಾರ್ಗದ ನಡುವಣ ಸಂಬಂಧವನ್ನೇ ಅಶ್ಲೀಲಗೊಳಿಸಿದ್ದಾರೆ ಎಂದು ಅವರು ಅಭಿಪ್ರಾಯಪಟ್ಟರು. ಹಾಗಾಗಿಯೇ ಕಮ್ಯೂನಿಸ್ಟರು ತಾವು ನಂಬಿದ ಕ್ರಾಂತಿ ಕಲ್ಪನೆಯನ್ನು ಸಾಕಾರಗೊಳಿಸಲು ಏನು ಮಾಡಲೂ ಸಿದ್ಧರಿರುವುದು —ಸುಳ್ಳು ಹೇಳಲು, ಮೋಸಮಾಡಲು, ಕೊಲೆ ಮಾಡಲು ಕೂಡಾ. ಏಕೆಂದರೆ ದ್ವಂದ್ವಮಾನ ವಸ್ತುವಾದದ ತರ್ಕದಲ್ಲಿ ಎಲ್ಲವೂ ಒಂದಕ್ಕೊಂದು ಸಾಪೇಕ್ಷವಾಗಿ ನಡೆಯುವ ವಿದ್ಯಮಾನ ಮಾತ್ರವಾಗಿದ್ದು, ಮೂಲತ: ಒಳ್ಳೆಯದು ಕೆಟ್ಟದ್ದು ಎಂಬ ಪರಿಕಲ್ಪನೆಗಳೇ ಅಸಂಗತವಾಗಿಬಿಡುತ್ತವೆ. ತಮ್ಮ ಈ ವಿಚಾರಲಹರಿಗೆ ಜಯಪ್ರಕಾಶರು ಆಗತಾನೇ ಬೆಳಕಿಗೆ ಬಂದಿದ್ದ 'ಕ್ವಾಂಟಂ ಚಲನಶಾಸ್ತ್ರ'ದ ಮೂಲ ತತ್ವಗಳನ್ನು ಬೆಂಬಲವಾಗಿ ಪ್ರತಿಪಾದಿಸಿದರು: ವಸ್ತುಲೋಕದ ನಿಯಮಗಳು ಪ್ರಜ್ಞಾ ಲೋಕಕ್ಕೆ ಅನ್ವಯಿಸುವುದಿಲ್ಲ; ಮೊದಲಾಗಿ ವಸ್ತು ಮತ್ತು ಪ್ರಜ್ಞೆಗಳೆಂಬ ಭೇದವಳಿದಾಗಲೇ ಅಸ್ತಿತ್ವದ ನಿಜದರಿವು ಉಂಟಾಗುವುದು; ಅಲ್ಲಿಯವರೆಗೆ ಎಲ್ಲವೂ ಸಂಭವನೀಯತೆಯ ಕ್ಷಣಿಕ ವಿನ್ಯಾಸ ಮಾತ್ರವಾಗಿ ಕಾಣುತ್ತಿರುತ್ತದೆ. ಹೀಗೆ 'ವಸ್ತುನಿಷ್ಠ' ವಿಶ್ಲೇಷಣೆಯನ್ನು ಅವಲಂಬಿಸಿದ ಶಾಸ್ತ್ರಗಳು-ವಿಜ್ಞಾನವೂ ಸೇರಿದಂತೆ-ನೀತಿ ನಿರ್ಲಿಪ್ತ (amoral) ವೆಂದು ತೀರ್ಮಾನಕ್ಕೆ ಬಂದ ಜಯಪ್ರಕಾಶರು, ಅಸ್ತಿತ್ವದ ಅಖಂಡ ದರ್ಶನದ ಆಧ್ಯಾತ್ಮಿಕತೆಯೆಡೆಗೆ ಸೆಳೆಯಲ್ಪಟ್ಟಿದ್ದರು.

ಭೂದಾನ ಚಳುವಳಿಯೆಡೆಗೆ

ಉಪವಾಸ ವ್ರತದ ಸಂದರ್ಭದಲ್ಲಿ ಈ ಮನಃಸ್ಥಿತಿಯನ್ನು ಮುಟ್ಟಿದ್ದ ಜಯಪ್ರಕಾಶ್, ಆ ಹೊತ್ತಿಗೆ ರಾಷ್ಟ್ರಾದ್ಯಂತ ಹೊಸ ಆಶಯ ಹುಟ್ಟಿಸಿದ್ದ ವಿನೋಬಾ ಭಾವೆಯವರ ಭೂದಾನ ಚಳವಳಿಯ ಕಡೆ ಕಣ್ಣು ಹಾಯಿಸಿದ್ದೂ ಸಹಜವೇ ಆಗಿತ್ತು. ಗಾಂಧೀಜಿಯವರ ರಾಜಕಾರಣ ಕ್ಷೇತ್ರಕ್ಕೆ ನೆಹರೂ ಉತ್ತರಾಧಿಕಾರಿಯಾದಂತೆ, ಗಾಂಧೀಜಿಯವರ ಅಧ್ಯಾತ್ಮಿಕ ಕ್ಷೇತ್ರಕ್ಕೆ ಉತ್ತರಾಧಿಕಾರಿ ಎನಿಸಿದ್ದ ವಿನೋಬಾ ಭಾವೆ ಅವರು ಗಾಂಧೀಜಿಯ 'ರಚನಾತ್ಮಕ' ಚಟುವಟಿಕೆಗಳನ್ನಾಧರಿಸಿದ 'ಸರ್ವೋದಯ' ಕಲ್ಪನೆಗೆ ಭೂದಾನ ಚಳುವಳಿಯ ಮೂಲಕ

ಹೊಸದೊಂದು ಆಯಾಮವನ್ನು ಒದಗಿಸಿ ಇಡೀ ದೇಶದ ಗಮನ ಸೆಳೆದಿದ್ದರು. "ಪ್ರೀತಿಯ ಮೂಲಕ ದರೋಡೆ ಮಾಡಲು ನಾನು ನಿಮ್ಮ ಬಳಿ ಬರುತ್ತೇನೆ" ಎಂಬ ಅವರ ಹೇಳಿಕೆ ಜನಜನಿತವಾಗಿತ್ತು.

೧೯೪೮ರಲ್ಲಿ ಕಮ್ಯೂನಿಸ್ಟರು ತೆಲಂಗಾಣದಲ್ಲಿ ಭೂಮಾಲೀಕರ ವಿರುದ್ಧ ಹಿಂಸೆಯನ್ನು ಪ್ರಚೋದಿಸಿ ಆ ಇಡೀ ಪ್ರದೇಶವನ್ನು ರಕ್ತದಿಂದ ತೋಯಿಸಿದಾಗ, ಸರ್ಕಾರ ಇದಕ್ಕೆ ಪರಿಹಾರ ಕಂಡದ್ದು ಪೋಲೀಸ್ ಪ್ರತಿಹಿಂಸೆಯ ಮೂಲಕ. ಆದರೆ ಮೂರು ವರ್ಷಗಳ ನಂತರ ಹೈದರಾಬಾದ್‌ನಲ್ಲಿ ನಡೆದ ಸರ್ವೋದಯ ಸಮ್ಮೇಳನಕ್ಕೆ ಬಂದಿದ್ದ ವಿನೋಬಾ ಅವರು ಕಾಲ್ನಡಿಗೆಯಲ್ಲಿ ತೆಲಂಗಾಣದಾದ್ಯಂತ ಸಂಚರಿಸಿದರು. ಅಲ್ಲಿ ನಡೆದ ಹಿಂಸೆಗೆ ಕಾರಣವಾದ ಸಂಗತಿಗಳ ಬಗ್ಗೆ ಅಧ್ಯಯನ ನಡೆಸಿದರು. ಹಳ್ಳಿಗಳ ಜನರೊಡನೆ ಈ ಬಗ್ಗೆ ಮಾತನಾಡಿದರು. ನಲಗೊಂಡ ಜಿಲ್ಲೆಯ ಪೋಚಂಪಳ್ಳಿಯ ನಲವತ್ತು ಹರಿಜನ ಕುಟುಂಬಗಳು ವಿನೋಬಾರಿಗೆ ತಮ್ಮ ಸಂಕಷ್ಟಗಳನ್ನು ವಿವರಿಸಿ ತಮಗೆ ಎರಡು ಹೊತ್ತು ಅನ್ನ ಹುಟ್ಟುವಷ್ಟು ಭೂಮಿ ಕೊಡಿಸಿದರೆ ನಿರಾಳವಾಗಿ ಬಾಳಲು ಸಾಧ್ಯವಾಗುತ್ತದೆ ಎಂದು ಪರಿಹಾರವನ್ನೂ ಅವರೇ ಸೂಚಿಸಿದರು. ವಿನೋಬಾ, ಭೂಮಿಯನ್ನು ದಾನಮಾಡಲು ಹಳ್ಳಿಯ ಭೂಮಾಲೀಕರಿಗೆ ಈ ಸಂದರ್ಭದಲ್ಲಿ ಮನವಿ ಮಾಡಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ರಾಮಚಂದ್ರ ರೆಡ್ಡಿ ಎಂಬ ಭೂಮಾಲೀಕರೊಬ್ಬರು ತಕ್ಷಣವೇ ನೂರು ಎಕರೆಗಳನ್ನು ದಾನವಾಗಿ ನೀಡಲು ಮುಂದೆ ಬಂದರು. ವಿನೋಬಾ ಅಲ್ಲಿನ ಹರಿಜನ ಕುಟುಂಬಗಳಿಗೆ ತಲಾ ಎರಡು ಎಕರೆಗಳನ್ನು ನೀಡಿ ಉಳಿದ ಇಪ್ಪತ್ತು ಎಕರೆಗಳನ್ನು ಭೂಮಾಲೀಕರಿಗೆ ಹಿಂತಿರುಗಿಸಿದರು. ಹೀಗೆ ಪೋಚಂಪಳ್ಳಿಯ ಜನರು ಮತ್ತು ವಿನೋಬಾ ಸೇರಿ ಭೂ ಸಮಸ್ಯೆಗೆ ಹೊಸ ರೀತಿಯ ಪರಿಹಾರವೊಂದನ್ನು ಕಂಡುಹಿಡಿದ್ದರು. ನಂತರ ಅವರು ಎರಡು ತಿಂಗಳುಗಳ ಕಾಲ ತೆಲಂಗಾಣದ ಪ್ರತಿಹಳ್ಳಿಗೂ ಭೇಟಿ ನೀಡಿ ಅಥವಾ ತಮ್ಮ ಕಾರ್ಯಕರ್ತರನ್ನು ಕಳುಹಿಸಿ ಸಾವಿರಾರು ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಪಡೆದಿದ್ದರು.

ಈ ಅಭೂತಪೂರ್ವ ಯಶಸ್ಸನ್ನು ಕಂಡ ನೆಹರೂ ಸರ್ಕಾರ ಈ ಹೊಸ ಭೂದಾನ ಚಳುವಳಿಗೆ ತನ್ನ ಪೂರ್ಣ ಸಹಕಾರವನ್ನು ನೀಡಲು ಮುಂದೆ ಬಂದಿತು. ಸಾಮುದಾಯಿಕ ಕೃಷಿ ಪದ್ಧತಿಯೆಡೆಗೆ ಆಕರ್ಷಿತರಾಗಿದ್ದ ನೆಹರೂ, ಭೂದಾನ ಚಳುವಳಿಯಲ್ಲಿ ಇದಕ್ಕೆ ಪೂರಕವಾದ ಅಂಶಗಳನ್ನು ಕಂಡರು. ಆಗ ತಾನೇ ಆರಂಭಿಸಲಿದ್ದ ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಈ ಅಂಶಗಳನ್ನು ಅಳವಡಿಸುವ ಬಗ್ಗೆ ಚರ್ಚಿಸಲು ವಿನೋಬಾ ಅವರನ್ನು ಆಹ್ವಾನಿಸಿದರು. ಅವರಿಗೆ ದೆಹಲಿಗೆ ವಿಮಾನ ಸೌಲಭ್ಯವನ್ನು ನೀಡಲೂ ಮುಂದೆ ಬಂದರು. ಆದರೆ ವಿಮಾನ ಸೌಲಭ್ಯವನ್ನು ನಿರಾಕರಿಸಿದ ವಿನೋಬಾ, ಮಧ್ಯಪ್ರದೇಶದಲ್ಲಿರುವ ತಮ್ಮ ಪೌನಾರ್ ಆಶ್ರಮದಿಂದ ಕಾಲ್ನಡಿಗೆಯಲ್ಲಿ ದೆಹಲಿಗೆ ಹೊರಟರು. ಅವರು ಎರಡು ತಿಂಗಳುಗಳಲ್ಲಿ ಸುಮಾರು ೧೩೦೦ ಕಿಲೋಮೀಟರು ಗಳನ್ನು ಕ್ರಮಿಸಿ, ಹದಿನೇಳು ಸಾವಿರ ಎಕರೆಗಳಷ್ಟು ನೆಲವನ್ನು ಭೂದಾನ ರೂಪದಲ್ಲಿ ಪಡೆದರು.

ಭೂದಾನ ಮತ್ತು ಸಮಾಜವಾದ

ಮೊದಮೊದಲು ಜಯಪ್ರಕಾಶ್, ಭೂದಾನ ಮಾರ್ಗದ ಮೂಲಕ ಭೂ ಸಮಸ್ಯೆಯನ್ನು ಪರಿಹರಿಸಲು ನೂರಾರು ವರ್ಷಗಳು ಬೇಕಾಗುತ್ತದೆ ಎಂದು ಅತ್ತ ಕಡೆ ಗಂಭೀರ ಗಮನ ಹರಿಸಲು ನಿರಾಕರಿಸಿದ್ದರು. ಆದರೆ ವಿನೋಬಾ ತಮ್ಮ ಭೂದಾನ ಚಳುವಳಿಯನ್ನು ತೆಲಂಗಾಣದಾಚೆಗೆ ಯಶಸ್ವಿಯಾಗಿ ಕೊಂಡೊಯ್ದ ಸುದ್ದಿಗಳು ಅವರ ವಿಶೇಷ ಗಮನವನ್ನು ಸೆಳೆಯತೊಡಗಿದ್ದವು. ಅವರು ೧೯೫೨ರ ಪಂಚಮಡಿ ವಿಶೇಷ ಅಧಿವೇಶನದಲ್ಲಿಯೇ, ಭೂದಾನ ಚಳುವಳಿಗೆ ಸಮಾಜವಾದಿ ಪಕ್ಷ ಬೆಂಬಲ ವ್ಯಕ್ತಪಡಿಸುವ ನಿರ್ಣಯವನ್ನು ಮಂಡಿಸಿದ್ದರು. ಭೂದಾನ ಚಳುವಳಿ ಕಮ್ಯೂನಿಸ್ಟರ ನೇತೃತ್ವದ ಜನತಾ ಚಳುವಳಿಯನ್ನು ಹತ್ತಿಕ್ಕಲು ಪ್ರಭುತ್ವದ ಪ್ರತಿನಿಧಿಗಳಿಂದ ನಡೆದಿರುವ 'ಕಣ್ಣೊರೆಸುವ ಚಳುವಳಿ' ಎಂಬ ಕಮ್ಯೂನಿಸ್ಟರ ಆಪಾದನೆಯನ್ನು ಪ್ರಸ್ತಾಪ ಮಾಡಿದ ಅವರು ಹೇಳಿದ್ದು: "ನಾವೂ ಭೂ ವಿತರಣೆ ಮಾಡಿದ್ದೇವೆಂದು ಕಮ್ಯೂನಿಸ್ಟರೂ ಹೇಳಿಕೊಳ್ಳುತ್ತಿದ್ದಾರೆ. ಆದರೆ ಇದು ಅವರಿಗೆ ಸಾಧ್ಯವಾಗಿರುವುದು ಮೂರುಸಾವಿರ ಕಗ್ಗೊಲೆಗಳು ಹಾಗೂ ಆರು ಕೋಟಿ ರೂಪಾಯಿಯ ಆಸ್ತಿಪಾಸ್ತಿ ನಷ್ಟದ ನಂತರ. ಅದೂ ಅವರು ಆಕ್ರಮಿಸಿಕೊಂಡಿರುವ ಭೂಮಿ ಕೇವಲ ಮುವ್ವತ್ತು ಸಾವಿರ ಎಕರೆ ಮಾತ್ರ. ಆದರೆ ವಿನೋಬಾ ಪ್ರೇಮದ ಮೂಲಕ ಪಡೆದಿರುವುದು ೧೫ ಲಕ್ಷ ಎಕರೆಯಷ್ಟು ಭೂಮಿಯನ್ನು..."

ಇದಕ್ಕೆ ಪ್ರತಿಸ್ಪಂದಿಸಿದ ಲೋಹಿಯಾ ಅವರು, ತಮ್ಮ 'ಸಮಾಜವಾದದ ತಾತ್ವಿಕ ತಳಹದಿಗಳು' ಎಂಬ ಅಧ್ಯಕ್ಷ ಭಾಷಣದಲ್ಲಿ ಭೂದಾನ ಚಳುವಳಿಯ ಪ್ರಸ್ತಾಪ ಮಾಡಿ ಅದರ ಇತಿಮಿತಿಗಳನ್ನು ವಿಶ್ಲೇಷಿಸಿದ್ದರು. "…. ಇಂತಹ ಚಳುವಳಿಯ ಇತಿಮಿತಿಗಳಿಗೆ ಕುರುಡಾಗದಂತೆ, ಸಮಾಜವಾದಿಗಳು ಇದರಲ್ಲಿ ಭಾಗವಹಿಸಬೇಕು. ಹೃದಯ ಪರಿವರ್ತನೆ ಮತ್ತು ಕಾನೂನುಗಳ ಮೂಲಕ ಪರಿವರ್ತನೆ- ಈ ಎರಡೂ ಒಂದೇ ನಾಣ್ಯದ ಎರಡು ಮುಖಗಳು; ಎರಡೂ ಸಮಾನ ಮಹತ್ವವನ್ನುಳ್ಳವುವು. ಹತಾಶೆಯ ಸಂಭವವಿಲ್ಲದಲ್ಲಿ ಈ ಎರಡೂ ರೀತಿಯ ಬದಲಾವಣೆಗಳು ಒಂದರಲ್ಲೊಂದು ಲೀನವಾಗುವ ಘಟ್ಟವೊಂದಿದೆ…. ಪ್ರೀತಿ ಮತ್ತು ಸಿಟ್ಟು—ಎಲ್ಲರಿಗಾಗಿ ಪ್ರೀತಿ ಮತ್ತು ಅನ್ಯಾಯದ ವಿರುದ್ಧ ಸಿಟ್ಟು—ಇವು ಕ್ರಾಂತಿಯೊಂದರ ಮೂಲಕ ಸಂಯುಕ್ತ ಅಭಿವ್ಯಕ್ತಿ ಪಡೆದಾಗ ಮಾತ್ರ ಮಾನವ ಜನಾಂಗ ಮತ್ತೊಂದು ಹೆಜ್ಜೆಯನ್ನು ಮುಂದಿಡಲು ಸಾಧ್ಯ… ಭೂದಾನ ಚಳವಳಿಯಲ್ಲಿ ಪಾಲ್ಗೊಳ್ಳುವ ಸಮಾಜವಾದಿಗಳು ನ್ಯಾಯವಾಗಿಯೇ, ಅನ್ಯಾಯದ ವಿರುದ್ಧ ಸಿಟ್ಟು ಮತ್ತು ಎಲ್ಲರಿಗಾಗಿ ಪ್ರೀತಿಯನ್ನು ಸೂಸುವ ಸಮಾಜವಾದಿ ಪಕ್ಷದ ಎಲ್ಲ ಆಂದೋಲನಗಳಿಗೂ ಸರ್ವೋದಯ ಬೆಂಬಲ ನೀಡುತ್ತದೆ ಎಂದು ನಿರೀಕ್ಷಿಸುತ್ತಾರೆ" ಎಂದು ಲೋಹಿಯಾ ತಿಳಿಸಿದ್ದರು.

ವಿನೋಬಾ ಅವರೊಡನೆ ಭೇಟಿ

ವಿನೋಬಾ ಉತ್ತರ ಭಾರತದಲ್ಲಿ ತಮ್ಮ ವಿಜಯಯಾತ್ರೆಯನ್ನು ಮುಂದುವರಿಸಿದ್ದರು. ದೆಹಲಿಗೆ ಬಂದಿದ್ದ ವಿನೋಬಾ, ನೆಹರೂ ಅವರ ಪಂಚವಾರ್ಷಿಕ ಯೋಜನೆಯನ್ನು ತಮಗೆ

ಸಂಬಂಧವಿಲ್ಲದ ಸರ್ಕಾರಿ ಕಾರ್ಯಕ್ರಮವೆಂದು ವರ್ಣಿಸಿ ಹಿಮಾಚಲಪ್ರದೇಶವನ್ನು ಪ್ರವೇಶಿಸಿದರು. ಹಮೀರ್‌ಪುರ ಜಿಲ್ಲೆಯ ಮಾಂಗ್ರೋತ್ ಎಂಬ ಹಳ್ಳಿಯ ಜನ, ಹಳ್ಳಿಯ ಇಡೀ ಭೂಮಿಯನ್ನು ವಿನೋಬಾ ಅವರಿಗೆ ಅರ್ಪಿಸಿದ್ದರು. ಇದನ್ನು ವಿನೋಬಾ 'ಗ್ರಾಮದಾನ' ಎಂದು ಕರೆದರು. ಅವರು ಭೂಮಿಯನ್ನು ಹಳ್ಳಿಗೆ ಹಿಂದಿರುಗಿಸಿ ಇಡೀ ಹಳ್ಳಿ ಒಂದಾಗಿ ಕೃಷಿ ನಡೆಸಲು ಸಲಹೆ ಮಾಡಿದರು. ಈ 'ಗ್ರಾಮದಾನ'ದ ಕಲ್ಪನೆ ಜಯಪ್ರಕಾಶರನ್ನು ಹೊಸ ಚಿಂತನೆಗೆ ಹಚ್ಚಿತು. ಅವರು ಕುತೂಹಲದೊಡನೆ ಮಾಂಗ್ರೋತ್‌ಗೆ ಭೇಟಿ ನೀಡಿದರು. ಆ ಹಳ್ಳಿಯ ಜನ ಸಾಮುದಾಯಿಕ ಕೃಷಿಯನ್ನು ಸಂತೋಷದಿಂದ ಅನುಮೋದಿಸಿದ್ದರು. ಮಾಂಗ್ರೋತ್ ಅನುಭವದ ಬಗ್ಗೆ ಜಯಪ್ರಕಾಶ್ ಹೀಗೆ ಬರೆದಿದ್ದಾರೆ: "ನಾನು ಅಲ್ಲಿ ನೋಡಿದುದು, ಭವಿಷ್ಯದ ಬಗ್ಗೆ ನನ್ನಲ್ಲಿ ಹೊಸ ಆಶಯವನ್ನು ಹುಟ್ಟಿಸಿತು. ಮಾಂಗ್ರೋತ್‌ನಲ್ಲಿ ಆಗುವಂತಹದು ಪ್ರತಿ ಹಳ್ಳಿಯಲ್ಲೂ ಆಗುವಂತಿದ್ದರೆ, ದೇಶದ ಉದ್ದಗಲಕ್ಕೂ ಸಂಭವಿಸಬಹುದಾದ ಅಪೂರ್ವವಾದ ನೈತಿಕ, ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಕ್ರಾಂತಿಯ ಕಲ್ಪನೆ ನನ್ನನ್ನು ಪುಳಕಿತಗೊಳಿಸಿತು. ಅಲ್ಲದೆ, ಮಾಂಗ್ರೋತ್‌ನಲ್ಲಿ ಆಗಬಲ್ಲದ್ದು ಇಂಡಿಯಾದ ಎಲ್ಲ ಹಳ್ಳಿಗಳಲ್ಲೂ ಆಗಲಾರದು ಎಂದು ಭಾವಿಸಲು ನನಗೆ ಯಾವ ಕಾರಣವೂ ಹೊಳೆಯಲಿಲ್ಲ. ಮಂಗ್ರೋತ್‌ನ ಜನರು ದೇವತೆಗಳೇನೂ ಆಗಿರಲಿಲ್ಲ."

ಮಾಂಗ್ರೋತ್‌ಗೆ ಭೇಟಿ ನೀಡಿದ ನಂತರ ಜಯಪ್ರಕಾಶ್, ಬಂಡಾ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದ ವಿನೋಬಾ ಅವರನ್ನು ಭೇಟಿಯಾದರು. ಅವರೊಡನೆ ಮಾತುಕತೆ ನಡೆಸಿದರು. ವಿನೋಬಾ ಪಕ್ಷ ರಾಜಕಾರಣವನ್ನು ಖಂಡಿಸಿ, ಸರ್ವೋದಯದ ಸಾಧ್ಯತೆಗಳನ್ನು ಜಯಪ್ರಕಾಶರಿಗೆ ವಿವರಿಸಿದರು. ಆದರೆ ಜಯಪ್ರಕಾಶ್ ಸಂಪೂರ್ಣವಾಗಿ ಸರ್ವೋದಯ ಕಾರ್ಯಕ್ರಮದ ಕಡೆ ಗಮನ ಹರಿಸಿದ್ದು ವಿನೋಬಾ ತಮ್ಮ ಉತ್ತರ ಭಾರತದ ಯಾತ್ರೆಯಲ್ಲಿ ಬಿಹಾರವನ್ನು ಪ್ರವೇಶಿಸಿದಾಗ. ಆಗ ಜಯಪ್ರಕಾಶ್ ಪುಣೆಯಲ್ಲಿ ಉಪವಾಸ ಕೈಗೊಂಡಿದ್ದರು. ೧೯೫೩ರ ಏಪ್ರಿಲ್‌ನಲ್ಲಿ ಗಯಾದಲ್ಲಿ ನಡೆಯಲಿರುವ ಸರ್ವೋದಯ ಸಮ್ಮೇಳನದ ಹೊತ್ತಿಗೆ ಗಯಾದ ಭೂಮಾಲೀಕರಿಂದ ಮೂರು ಲಕ್ಷ ಎಕರೆಗಳಷ್ಟು ಭೂಮಿಯನ್ನು ದಾನವಾಗಿ ಪಡೆಯುವ ಗುರಿಯನ್ನು ವಿನೋಬಾ ಘೋಷಿಸಿದ್ದರು. ಉಪವಾಸ ಮುಗಿದೊಡನೆ ಜಯಪ್ರಕಾಶ್ ಬಿಹಾರಕ್ಕೆ ಹೋದರು. ವಿನೋಬಾ ಅವರ ಗುರಿಯ ಈಡೇರಿಕೆಗಾಗಿ ಗಯಾ ಜಿಲ್ಲೆಯ ಪ್ರತಿಯೊಂದು ಹಳ್ಳಿಗೂ ಭೇಟಿ ನೀಡಿ ಭೂದಾನಕ್ಕಾಗಿ ಮನವಿಗಳನ್ನು ಸಲ್ಲಿಸಿದರು. ಅದೇ ಸಮಯದಲ್ಲಿ ವಿನೋಬಾ ಅವರನ್ನು ಭೇಟಿಮಾಡಿ ಅವರೊಡನೆ ವ್ಯಾಪಕ ಚರ್ಚೆ ನಡೆಸಿದರು.

ಪಕ್ಷ ರಾಜಕಾರಣದಾಚೆಗೆ

ಜಯಪ್ರಕಾಶರ ಮನಸ್ಸೀಗ ಪಕ್ಷ ರಾಜಕಾರಣ ಮತ್ತು ಸರ್ವೋದಯ ಕಲ್ಪನೆಗಳ ನಡುವೆ ತುಯ್ದಾಡುತ್ತಿತ್ತು. ಉಪವಾಸ ಸಂದರ್ಭದಲ್ಲಿ ಅವರು ಸಾಧಿಸಿಕೊಂಡ ಆಧ್ಯಾತ್ಮಿಕತೆಯು

ಪಕ್ಷ ರಾಜಕಾರಣದಾಚೆಯ ಸಾಧ್ಯತೆಗಳತ್ತ ಅವರ ಮನಸ್ಸನ್ನು ತಿರುಗಿಸಿತ್ತು. ಈ ಹಿನ್ನೆಲೆಯಲ್ಲಿ ಅವರು ಭೂದಾನ ಚಳುವಳಿಯ ಬಗ್ಗೆ ಹಲವಾರು ಪ್ರಶ್ನೆಗಳನ್ನು ಕೇಳಿದರು; ಅವರ ಇತಿಮಿತಿಗಳ ಪರಿಶೀಲನೆ ಮಾಡಿದರು. ಈ ಬಗ್ಗೆ ವಿನೋಬಾರನ್ನು ಅವರು ತಮ್ಮ ಸೆರೆಮನೆಯ ದಿನಚರಿ* ಯಲ್ಲಿ (೧೯೭೫) ಹೀಗೆ ಬರೆದಿದ್ದಾರೆ: "ಕ್ರಾಂತಿಯ ಹಂಬಲ ನನ್ನನ್ನು ಮಾರ್ಕ್ಸ್‌ವಾದದ ಕಡೆ ಕೊಂಡೊಯ್ದಿತು; ನಂತರ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಯ ಮೂಲಕ ಪ್ರಜಾಸತ್ತಾತ್ಮಕ ಸಮಾಜವಾದದ ಕಡೆ ತಿರುಗಿ, ತದನಂತರ ವಿನೋಬಾಜಿಯವರ ಪ್ರೇಮ ಮಾರ್ಗದ ಅಹಿಂಸಾತ್ಮಕ ಕ್ರಾಂತಿಗೆ ನನ್ನನ್ನು ಮುಟ್ಟಿಸಿತು. ನಾನು ವಿನೋಬಾಜಿಯನ್ನು ಸೇರುವ ಮುನ್ನ ಅವರೊಂದಿಗೆ ಚರ್ಚೆ ನಡೆಸಿ, ಅವರ ಕಳಕಳಿ ಕೇವಲ ಭೂಮಿಯನ್ನು ವಿತರಿಸುವುದಕ್ಕೆ ಮಾತ್ರ ಸೀಮಿತವಾಗಿರದೆ, ಅದು ಮಾನವ ಮತ್ತು ಸಮಾಜದ ಸಂಪೂರ್ಣ ಪರಿವರ್ತನೆಯ ಎಲ್ಲೆಗಳವರೆಗೆ—ಅದನ್ನು ನಾನು ಉಭಯ ಕ್ರಾಂತಿ: ಮಾನವೀಯ ಕ್ರಾಂತಿಯ ಮೂಲಕ ಸಾಮಾಜಿಕ ಕ್ರಾಂತಿ ಎಂದು ವರ್ಣಿಸಿದೆ—ವ್ಯಾಪಿಸಿರಬೇಕು ಎಂಬುದನ್ನು ಖಚಿತಪಡಿಸಿಕೊಂಡೆ"

ಜಯಪ್ರಕಾಶ್ ಕೇವಲ ಒಂದು ವಾರದಲ್ಲಿ ಏಳುಸಾವಿರ ಎಕರೆಗಳಷ್ಟು ಭೂಮಿಯನ್ನು ವಿನೋಬಾ ಅವರಿಗಾಗಿ ಸಂಗ್ರಹಿಸಿದ್ದರು. ಇದರಲ್ಲಿ ಸ್ವತಃ ಅವರ ಪಿತ್ರಾರ್ಜಿತ ಭೂಮಿಯೂ ಸೇರಿತ್ತು. ರಚನಾತ್ಮಕ ಚಟುವಟಿಕೆಯ ಈ ಮೊದಲ ಅನುಭವವು ಜಯಪ್ರಕಾಶರನ್ನು ಪಕ್ಷ ರಾಜಕಾರಣದಾಚೆಯ ಅಪಾರ ಸಾಧ್ಯತೆಗಳ ಬಗ್ಗೆ ಗಂಭೀರವಾಗಿ ಆಲೋಚಿಸಲು ಪ್ರೇರೇಪಿಸಿತು. ೧೯೫೩ರಲ್ಲಿ ಮುಂಬೈನಲ್ಲಿ ನಡೆದ ಪ್ರಜಾ ಸಮಾಜವಾದಿ ಪಕ್ಷದ ಸಮ್ಮೇಳನದಲ್ಲಿ ಜಯಪ್ರಕಾಶ್ ಭೂದಾನ ಚಳುವಳಿಯ ಪರವಾದ ನಿರ್ಣಯವೊಂದನ್ನು ಮಂಡಿಸಿದರು. ಭೂದಾನ ಚಳುವಳಿಯನ್ನು "ಆರ್ಥಿಕ ಕ್ರಾಂತಿಯ ಒಂದು ಸಾಧನ" ಎಂದು ವರ್ಣಿಸಿದ್ದ ನಿರ್ಣಯವು "ಈ ಕೆಲಸವನ್ನು ಶ್ರದ್ಧೆಯಿಂದ ಕೈಗೆತ್ತಿಕೊಂಡು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಇದಕ್ಕಾಗಿ ಬಳಸಿಕೊಳ್ಳಲು" ಪಕ್ಷದ ಕಾರ್ಯಕರ್ತರಿಗೆ ಕರೆಕೊಟ್ಟಿತ್ತು. ಸಮ್ಮೇಳನ ಈ ನಿರ್ಣಯವನ್ನು ಅಂಗೀಕರಿಸಿತಾದರೂ, ಹಲವಾರು ಪ್ರತಿನಿಧಿಗಳು ಇದರಲ್ಲಿ, ಜಯಪ್ರಕಾಶರು ಪಕ್ಷವನ್ನು ತೊರೆದು ಭೂದಾನ ಚಳುವಳಿಗೆ ಮತಾಂತರಗೊಳ್ಳುವ ಸೂಚನೆಯನ್ನು ಕಂಡು ವಿಚಲಿತಗೊಂಡರು.

ನೆಹರೂ ಅವರೊಂದಿಗೆ ಮಾತುಕತೆ

ಇದೇ ಸಮಯದಲ್ಲಿ ಜಯಪ್ರಕಾಶ್ ಮತ್ತು ನೆಹರೂ ಅವರ ನಡುವೆ ನಡೆಯಲಾರಂಭಿಸಿದ್ದ ಮಾತುಕತೆಗಳೂ ಕೆಲವು ಸಮಾಜವಾದಿಗಳನ್ನು ಸಿಟ್ಟಿಗೆಬ್ಬಿಸಿದವು. 'ರಾಷ್ಟ್ರದ ಹಿತದೃಷ್ಟಿ' ಮತ್ತು 'ದೇಶಕ್ಕೆ ಹೊಸ ದಿಕ್ಕು ನೀಡಬಲ್ಲ ಭೂದಾನ ಚಳುವಳಿಯ ಯಶಸ್ಸಿನ ದೃಷ್ಟಿ'ಯಿಂದ ಕಾಂಗ್ರೆಸ್ ಮತ್ತು ಪ್ರಜಾಸಮಾಜವಾದಿ ಪಕ್ಷಗಳ ನಡುವೆ ಪರಸ್ಪರ ಸಹಕಾರವನ್ನು ಏರ್ಪಡಿಸಿಕೊಳ್ಳುವ ಉದ್ದೇಶದಿಂದ ನೆಹರೂ ಅವರು ಸಮಾಜವಾದಿಗಳ

* 'ಸೆರೆಮನೆಯ ದಿನಚರಿ'ಯ ಆಗಸ್ಟ್ ೨೧ನೇ ದಿನಾಂಕದ ಬರಹ ನೋಡಿರಿ.

ಪ್ರತಿನಿಧಿಯಾಗಿ ಜಯಪ್ರಕಾಶರನ್ನು ಮಾತುಕತೆಗೆ ಕರೆದಿದ್ದರು. ಅವರನ್ನು ನೆಹರೂ ಮುಂದಿನ ಪ್ರಧಾನಿ ಎಂದು ಆಯ್ಕೆ ಮಾಡಿದ್ದಾರೆಂದೂ ಮಾಧ್ಯಮಗಳಲ್ಲಿ ಗುಸುಗುಸು ಆರಂಭವಾಯಿತು. ಆದರೆ ಇದು ವಿರೋಧಪಕ್ಷವನ್ನು ಒಡೆಯಲು ಮಾಡಿದ ಪ್ರಯತ್ನವೆಂಬುದು ಈ ಸಮಾಜವಾದಿಗಳ ಅಭಿಪ್ರಾಯವಾಗಿತ್ತು. ಎರಡೂ ಪಕ್ಷಗಳ ನಡುವೆ ಅಷ್ಟೊಂದು ಭಿನ್ನಾಭಿಪ್ರಾಯಗಳಿರುವಾಗ ಜಯಪ್ರಕಾಶರು ಮೊದಲಾಗಿ ಮಾತುಕತೆಗಳಿಗೇ ಒಪ್ಪಿಕೊಳ್ಳಬಾರದಿತ್ತು ಎಂಬುದು ಇವರ ಸಿಟ್ಟಿಗೆ ಕಾರಣವಾಗಿತ್ತು.

ಡಾ|| ಲೋಹಿಯಾ ಅವರು ಜಯಪ್ರಕಾಶರನ್ನು "ನೀವು ಯಾವಾಗಲೂ, ದೇಶದಲ್ಲಿ ಯಾವ ಅಭಿಪ್ರಾಯ ಮೇಲುಗೈ ಪಡೆದಿರುತ್ತದೋ ಆ ಕಡೆ ಇರುತ್ತೀರಿ" ಎಂದೂ ದೂಷಿಸಿದ್ದರು. ಈಗ ನೋಡಿದರೆ ಜಯಪ್ರಕಾಶ್ ಸಮಾಜವಾದದಿಂದ ಸರ್ವೋದಯಕ್ಕೆ ಜಾರುತ್ತಿದ್ದಾರೆ. ಜಯಪ್ರಕಾಶರನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಆದ್ದರಿಂದಲೇ ಎಲ್ಲರೂ ಜಯಪ್ರಕಾಶರ ಈ ಹೊಸ ಸಾಹಸದ ಬಗ್ಗೆ ತೀವ್ರ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಲೋಹಿಯಾ ಹಿಂದಿನಂತೆಯೇ ಭೂದಾನ ಚಳುವಳಿಯ ರಾಜಕೀಯ ವಿಮರ್ಶೆ ಮಾಡಿದರು. "ಭೂದಾನ, ಹಲವಾರು ಒಳ್ಳೆಯ ಕಾರ್ಯಕ್ರಮಗಳಲ್ಲಿ ಅದೂ ಒಂದಾಗಿದೆಯಷ್ಟೆ. ಆದರೆ ಅದನ್ನೇ ಏಕೈಕ ಕಾರ್ಯಕ್ರಮವೆಂದು ಗಣಿಸಿದರೆ ಅದರಿಂದ ಹಾನಿಯಷ್ಟೆ ಆಗುತ್ತದೆ. ಅಲ್ಲದೆ ವಿವಿಧ ರಾಜಕೀಯ ಪಕ್ಷಗಳ ಭಾಗವಹಿಸುವಿಕೆಯನ್ನು ಒಳಗೊಂಡ ಇಂತಹ ಸಾಮಾನ್ಯ ಕಾರ್ಯಕ್ರಮವನ್ನು, ಈ ಪಕ್ಷಗಳ ನಡುವಣ ವಿಭಿನ್ನತೆಯ ಗೆರೆಗಳನ್ನೇ ಅಸ್ಪಷ್ಟಗೊಳಿಸುವಂತೆ ದುರುಪಯೋಗಪಡಿಸಿಕೊಳ್ಳಬಾರದು" ಎಂದು ಅವರ ಪಕ್ಷದ ಕಾರ್ಯಕರ್ತರನ್ನು ಎಚ್ಚರಿಸುವ ಪ್ರಯತ್ನ ಮಾಡಿದರು.

ಜಯಪ್ರಕಾಶರ ಅತ್ಯಂತ ಆತ್ಮೀಯ ಸ್ನೇಹಿತರಾಗಿದ್ದ ಅಶೋಕ ಮೆಹ್ತಾ ಭೂದಾನ ಚಳವಳಿಗೆ ಸಂಪೂರ್ಣ ಬೆಂಬಲ ನೀಡಿದರು. ಆದರೆ ಪಕ್ಷ ರಾಜಕಾರಣವನ್ನು ತೊರೆದು ಈ ಚಳುವಳಿಯಲ್ಲಿ ಭಾಗವಹಿಸಲು ಅವರು ಇಷ್ಟ ಪಡಲಿಲ್ಲ. ಭೂದಾನ ಚಳುವಳಿ ಹಳ್ಳಿಗರಲ್ಲಿ ಸಹಕಾರದ ಮನೋಭಾವವನ್ನು ಉದ್ದೀಪಿಸಿ, ಸಮಾಜವಾದಿ ಕಾರ್ಯಾಚರಣೆಗಳಿಗೆ ಸೂಕ್ತ ಭೂಮಿಕೆಯನ್ನು ಸಿದ್ಧಪಡಿಸುತ್ತದೆ ಎಂದು ಅವರು ಅಭಿಪ್ರಾಯಪಟ್ಟರು. ಸ್ವತಃ ಮೆಹ್ತಾ ಅವರೇ ಮಹಾರಾಷ್ಟ್ರದಲ್ಲಿ ಭೂರಹಿತರ ನೇತೃತ್ವ ವಹಿಸಿ, ಭೂಮಾಲೀಕರ ಭೂಮಿಯನ್ನು ಬಲವಂತವಾಗಿ ಆಕ್ರಮಿಸಿಕೊಂಡು ಸಾಗುವಳಿ ನಡೆಸುವ ಕಾರ್ಯಾಚರಣೆಯನ್ನು ಕೈಗೊಂಡಿದ್ದರು!

ಮಧು ಲಿಮಯೆ ಅವರು ಲೋಹಿಯಾ ಅವರ ಮಾತುಗಳನ್ನೇ ಇನ್ನಷ್ಟು ಸ್ಪಷ್ಟವಾಗಿ ಹೇಳಿದರು: "ವಿನೋಬಾರಂತಹ ಪ್ರವಾದಿಗಳು ರಾಷ್ಟ್ರೀಯ ಪುನರ್ನಿರ್ಮಾಣದ ಗುರಿಗಳು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಯಶಸ್ವಿಯಾಗಿದ್ದಲ್ಲಿ ಮತ್ತು ಇವನ್ನು ಸಾರ್ವಜನಿಕಾಭಿಪ್ರಾಯದ ಎಲ್ಲ ವಲಯಗಳೂ ಒಪ್ಪಿಕೊಳ್ಳುವಂತೆ ಮಾಡಲು ಸಾಧ್ಯವಾಗಿದ್ದಿದ್ದಲ್ಲಿ, ಯಾವುದೇ ರಾಜಕೀಯ ಪಕ್ಷ—ತನ್ನ ನಿಜವಾದ ಅರ್ಥದಲ್ಲಿ—ಇರುತ್ತಿರಲಿಲ್ಲ. ಇದನ್ನೆಲ್ಲಾ ಮಾಡಿದರೆ ಸರ್ಕಾರ ನಶಿಸಿ ಹೋಗುವ ಕಾಲವೇನೂ ದೂರ ಉಳಿದಿಲ್ಲ. ಆದರೆ

ಇವೆಲ್ಲಾ ಕಲ್ಪನಾ ಪ್ರಪಂಚದ ಚೌಕಟ್ಟಿಗೆ ಸೇರುತ್ತವೆಯೇ ಹೊರತು ಸಾಧ್ಯಗಳ ಪ್ರಪಂಚಕ್ಕಲ್ಲ... ಮಾನವ ಜನಾಂಗವಿನ್ನೂ ಸರ್ವಾಧಿಕಾರದ ವಿರುದ್ಧ ಚುನಾವಣೆಗಳು ಮತ್ತು ಪಕ್ಷ ವ್ಯವಸ್ಥೆಗಿಂತ ಉತ್ತಮವಾದ ಪರಿಹಾರವನ್ನು ಕಂಡುಹಿಡಿದಿಲ್ಲ."

ಪ್ರಜಾಸಮಾಜವಾದಿ ಪಕ್ಷದಲ್ಲಿ ಒಡಕು

ಈ ಮಧ್ಯೆ ೧೯೫೪ರಲ್ಲಿ ಕೇರಳ* ವಿಧಾನಸಭೆಗೆ ಮಧ್ಯಕಾಲೀನ ಚುನಾವಣೆಗಳು ನಡೆದವು. ಅಶೋಕ ಮೆಹ್ತಾ ಚುನಾವಣಾ ಪ್ರಚಾರದ ನೇತೃತ್ವ ವಹಿಸಿ ಯಶಸ್ವಿಯಾದರು. ಹೊರಗಿನಿಂದ ಕಾಂಗ್ರೆಸ್ ಬೆಂಬಲ ಪಡೆದ ಪ್ರಜಾ ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ದೇಶದ ಮೊಟ್ಟಮೊದಲ ಸಮಾಜವಾದಿ ಸರ್ಕಾರ ರಚಿತವಾಯಿತು. ಸಮಾಜವಾದಿಗಳು ತಮ್ಮ ಮೊದಲ ವಿಜಯೋತ್ಸಾಹದಲ್ಲಿ ತೊಡಗಿದ್ದಾಗ, ಅಲ್ಲಿನ ತಮಿಳರ ಭಾಷಾ ಚಳುವಳಿಯೊಂದು ಆರಂಭವಾಗಿ, ಅದು ಗಲಭೆಯ ರೂಪ ತಳೆದು ಪೋಲೀಸರ ಗೋಲೀಬಾರಿಗೆ ಕಾರಣವಾಯಿತು.

ಇದು ಡಾ|| ರಾಮಮನೋಹರ ಲೋಹಿಯಾ ಅವರನ್ನು ಸಿಟ್ಟಿಗೆಬ್ಬಿಸಿತು. ಸಮಾಜವಾದಿ ಸರ್ಕಾರವೊಂದು ತನ್ನ ಜನರ ಮೇಲೆಯೇ ಗುಂಡು ಹಾರಿಸುವುದು ಅವರಿಗೆ ರಾಜಕೀಯ ಅಪರಾಧವಾಗಿ ಕಂಡಿತು. ಅವರು ಆಗ ಉತ್ತರ ಪ್ರದೇಶದಲ್ಲಿ ನೀರಿನ ಸುಂಕ ಏರಿಸಿದ್ದರ ವಿರುದ್ಧ ರೈತರ ಸತ್ಯಾಗ್ರಹವನ್ನು ಸಂಘಟಿಸಿದ್ದರ ಪರಿಣಾಮವಾಗಿ ಅಲಹಾಬಾದ್ ಸೆರೆಮನೆಯಲ್ಲಿದ್ದರು. ಲೋಹಿಯಾ ಅವರು ಸೆರೆಮನೆಯಿಂದಲೇ ತಂತಿ ಸಂದೇಶವೊಂದನ್ನು ಕಳಿಸಿ, ಈ ಅಪರಾಧಕ್ಕಾಗಿ ಸರ್ಕಾರ ರಾಜೀನಾಮೆ ಕೊಡಬೇಕು ಮತ್ತು ಗೋಲೀಬಾರ್ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಆಗ್ರಹಪಡಿಸಿದರು. ಜಯಪ್ರಕಾಶ್ ಸಹ ಇದನ್ನು ಬೆಂಬಲಿಸಿದರು. ಆದರೆ ಕಾಂಗ್ರೆಸ್ ಬೆಂಬಲದ ಸರ್ಕಾರ ರಚನೆಗೆ ಮೂಲ ಕಾರಣರಾಗಿದ್ದ ಅಶೋಕ ಮೆಹ್ತಾ ಈ ಬೇಡಿಕೆಯನ್ನು ತಳ್ಳಿಹಾಕಿದರು. ಮೊದಲು ನ್ಯಾಯಾಂಗ ವಿಚಾರಣೆ ನಡೆಯಲಿ. ಗೋಲೀಬಾರ್ ಅಸಮರ್ಥನೀಯವಾಗಿ ಕಂಡುಬಂದರೆ ಮಾತ್ರ ಸರ್ಕಾರ ರಾಜೀನಾಮೆ ನೀಡಲಿ. ಇಲ್ಲದಿದ್ದಲ್ಲಿ ಯಾರು ಬೇಕಾದರೂ ಗಲಭೆಯನ್ನು ಪ್ರಚೋದಿಸಿ, ಗೋಲಿಬಾರನ್ನು ಅನಿವಾರ್ಯ ಮಾಡಿ ಸರ್ಕಾರವನ್ನು ಉರುಳಿಸಬಹುದು ಎಂಬುದು ಅವರ ವಾದವಾಗಿತ್ತು.

ಲೋಹಿಯಾ ಅವರಿಗೆ ಈ ವಿವರಣೆ ಕೆಟ್ಟ ಅಧಿಕಾರ ರಾಜಕಾರಣದ ಪ್ರತೀಕವಾಗಿತ್ತು. ಗೋಲೀಬಾರ್ ಸಮರ್ಥನೀಯವೇ ಅಥವಾ ಅಸಮರ್ಥನೀಯವೇ ಎನ್ನುವ ಪ್ರಶ್ನೆಯೇ ಅವರ ಪ್ರಕಾರ ಅರ್ಥಹೀನವಾಗಿತ್ತು. ತನ್ನ ಜನರನ್ನೇ ಗುಂಡಿಟ್ಟು ಕೊಲ್ಲುವ ನಿರ್ಧಾರ ಮಾಡುವ ಸರ್ಕಾರದಿಂದ ನಾವೇನೂ ಹೆಚ್ಚಿಗೆ ನಿರೀಕ್ಷಿಸಲಾರೆವು ಎಂಬುದು ಅವರ ಅಭಿಪ್ರಾಯವಾಗಿತ್ತು. ಪಕ್ಷ ತಮ್ಮ ಅಭಿಪ್ರಾಯವನ್ನು ಒಪ್ಪದಿದ್ದಾಗ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಮತ್ತು ಕಾರ್ಯನಿರ್ವಾಹಕ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

---

* ಆಗ ಇದನ್ನು ತಿರುವಾಂಕೂರು-ಕೊಚ್ಚಿನ್ ರಾಜ್ಯವೆಂದು ಕರೆಯಲಾಗುತ್ತಿತ್ತು.

ಅಲ್ಲದೆ ಈ ಹೊತ್ತಿಗೆ ಪಕ್ಷದ ಕೆಲವರು—ಜಯಪ್ರಕಾಶರೂ ಸೇರಿದಂತೆ—ಕಾಂಗ್ರೆಸ್ ಮುಖಂಡರೊಡನೆ 'ಸಹಕಾರ'ದ ಮಾತುಕತೆಗಳನ್ನು ಆರಂಭಿಸಿದ್ದುದನ್ನು ಕುರಿತ ವಿವಾದವೂ ಸೇರಿಕೊಂಡು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿತು. ಜೊತೆಗೆ ಅಶೋಕ ಮೆಹ್ತಾ ಅವರು ತಮ್ಮ 'ಹಿಂದುಳಿದ ಆರ್ಥಿಕತೆಯ ಒತ್ತಾಯಗಳು" ಎಂಬ ಸಿದ್ಧಾಂತ ಮುಂದಿರಿಸಿ ಆಡಳಿತ ಮತ್ತು ವಿರೋಧ ಪಕ್ಷಗಳ ಪರಸ್ಪರ ಸಹಕಾರದ ಅನಿವಾರ್ಯತೆಯನ್ನು ಪ್ರಸ್ತಾಪಮಾಡಿದ್ದರು. ತಮ್ಮ ಪಕ್ಷದ ವಿರುದ್ಧ ಎಲ್ಲ ರೀತಿಯ ರಾಜಕೀಯ ಬುಡಮೇಲು ಕೃತ್ಯಗಳಲ್ಲಿ ತೊಡಗಿದ್ದ ಕಾಂಗ್ರೆಸ್ ಪಕ್ಷದೊಡನೆಯೇ ಮಾತುಕತೆಗಳನ್ನು ನಡೆಸಿದ್ದುದು ಲೋಹಿಯಾ ಅವರಿಗೆ ನಾಚಿಕೆಗೇಡಿನ ಸಂಗತಿಯಾಗಿ ಕಂಡು ಅವರು "ಸಂಸತ್ತಿನಲ್ಲೋ ಅಥವಾ ವಿಧಾನಸಭೆಯಲ್ಲೋ ಒಂದು ಸ್ಥಾನ ಗಿಟ್ಟಿಸಿಕೊಳ್ಳುವ ಕ್ಷುದ್ರ ಆಶೆಗಾಗಿ ತತ್ವಭ್ರಷ್ಟರಾಗಬಲ್ಲ ಜನರಿಂದ ಸಮಾಜವಾದ ನಿರ್ಮಾಣ ಸಾಧ್ಯವೇ?" ಎಂದು ಪ್ರಶ್ನಿಸಿದರು. ಲೋಹಿಯಾ ಅವರ ಈ ಟೀಕೆಯಿಂದ ಕೆರಳಿದ ಪಕ್ಷದ ಕೆಲವು ಪ್ರಮುಖರು ಪ್ರತೀಕಾರವಾಗಿ, ಅಶೋಕ ಮೆಹ್ತಾ ಅವರ ಸಿದ್ಧಾಂತವನ್ನು ಕಟುವಾಗಿ ಖಂಡಿಸಿದ ಮತ್ತು ಲೋಹಿಯಾ ಅವರ ಕಟ್ಟಾ ಬೆಂಬಲಿಗರಾಗಿದ್ದ ಮಧುಲಿಮಯೆ ಅವರನ್ನು ಪಕ್ಷದಿಂದ ಹೊರ ಹಾಕುವಲ್ಲಿ ಯಶಸ್ವಿಯಾದರು. ಲೋಹಿಯಾ ಅವರು ಮಧುಲಿಮಯೆ ಅವರ ಪರವಾಗಿ ನಿಂತರು; ಪಕ್ಷದ ಪ್ರಮುಖರನ್ನು "ಕುಲಗೆಟ್ಟ ಸಮಾಜವಾದದ ಆರಾಧಕರು" ಎಂದು ಕರೆದರು. ಕೊನೆಗೆ ಶಿಸ್ತಿನ ಉಲ್ಲಂಘನೆಗಾಗಿ ಲೋಹಿಯಾ ಅವರನ್ನು ಪಕ್ಷದಿಂದ ಹೊರ ಹಾಕಲಾಯಿತು. ನಂತರ ಲೋಹಿಯಾ ಬೆಂಬಲಿಗರು ಒಂದಾಗಿ ಹೊಸ ಸಮಾಜವಾದಿ ಪಕ್ಷವನ್ನು ರಚಿಸಿಕೊಂಡರು.

ಇದನ್ನು ಬಯಸದ ಜಯಪ್ರಕಾಶ್ ಲೋಹಿಯಾ ಅವರಿಗೆ ಪತ್ರ ಬರೆದು ಅವರ ಕ್ರಮಗಳೆಲ್ಲಾ ಆತುರದವೆಂದೂ ಈಗ ಎಲ್ಲದರ ಬಗ್ಗೆ ಪುನರಾಲೋಚನೆ ಮಾಡಬೇಕೆಂದೂ ಕೋರಿದರು. ಲೋಹಿಯಾ ಎಲ್ಲವನ್ನೂ ವಿವರಿಸಿ, ಸಮಾಜವಾದದ ಮೂಲತತ್ವಗಳಿಗೂ ಅಂಟಿಕೊಳ್ಳದ ಜನರ ಒಡನಾಟ ತಮಗೆ ಒಲ್ಲದಾಗಿದೆ ಎಂದು ಉತ್ತರ ಬರೆದರು. ಈ ಮಧ್ಯೆ ವದಂತಿಕೋರರು ಎರಡೂ ಕಡೆ ಸುಳ್ಳುಗಳನ್ನು, ಚಾಡಿಗಳನ್ನು ಹೇಳಿ ಯಾವುದೇ ರೀತಿಯ ಬಿಚ್ಚುಮನಸ್ಸಿನ ಮಾತುಕತೆಗಳು ಸಾಧ್ಯವಾಗದಂತೆ ಪರಸ್ಪರ ಸಂಬಂಧಗಳನ್ನು ಕಲುಷಿತ ಗೊಳಿಸಿದ್ದರು. ಇಲ್ಲಿಂದ ಮುಂದೆ ಸುಮಾರು ನಾಲ್ಕುವರ್ಷಗಳ ಕಾಲ ಜಯಪ್ರಕಾಶ್ ಮತ್ತು ಲೋಹಿಯಾ ಪರಸ್ಪರ ಭೇಟಿಯಾಗಲಿಲ್ಲ. ಪತ್ರ ವಿನಿಮಯವೂ ನಡೆಯಲಿಲ್ಲ. ಆದರೆ ಪಾಟ್ನಾದ ಜಯಪ್ರಕಾಶರ ಮನೆಯ ಮಲಗುವ ಕೋಣೆಯಲ್ಲಿ ಕೊನೇವರೆಗೂ ಲೋಹಿಯಾ ಭಾವಚಿತ್ರ ಗೋಡೆಯನ್ನು ಅಲಂಕರಿಸಿತ್ತು ಎಂಬುದು ಬಹಳ ಜನಕ್ಕೆ ಗೊತ್ತಿರಲಿಲ್ಲ!

ಜಯಪ್ರಕಾಶ್ ಈ ಎಲ್ಲ ತಾತ್ವಿಕ ಭಿನ್ನಾಭಿಪ್ರಾಯಗಳು ಹಾಗೂ ವೈಯಕ್ತಿಕ ಜಗಳಗಳಲ್ಲಿ ಪಕ್ಷರಾಜಕಾರಣದ ದೌರ್ಬಲ್ಯಗಳನ್ನು ಕಂಡರು. ಆ ವೇಳೆಗಾಗಲೇ ಸರ್ವೋದಯ ಸಿದ್ಧಾಂತದ ಪರಮ ಸಾಧ್ಯತೆಗಳಿಗೆ ಮಾರು ಹೋಗಿದ್ದ ಅವರಿಗೆ ಈ ದೌರ್ಬಲ್ಯಗಳು, ಇದ್ದುದಕ್ಕಿಂತ ದೊಡ್ಡದಾಗಿಯೇ ಕಂಡಿರಬೇಕು. ಅವರು ಪ್ರಜಾಸಮಾಜವಾದಿ ಪಕ್ಷದಲ್ಲಿ ಮುಂದುವರಿದರಾದರೂ

ಸಂಪೂರ್ಣವಾಗಿ ತಮ್ಮ ಸಾರ್ವಜನಿಕ ಸೇವೆಯನ್ನು ಸರ್ವೋದಯ ಕೆಲಸಕ್ಕೆ ಮೀಸಲಿರಿಸಲು ನಿರ್ಧರಿಸಿದರು.

ಜೀವನದಾನ: ಸಂಪೂರ್ಣ ಸಮರ್ಪಣೆ

ತೆಲಂಗಾಣದ ಪೋಚಂಪಳ್ಳಿ ಭೂದಾನದ ಮೂರನೇ ವಾರ್ಷಿಕೋತ್ಸವವಾಗಿ ೧೯೫೪ರ ಏಪ್ರಿಲ್‌ನ ಹೊತ್ತಿಗೆ ಬುದ್ಧಗಯಾದಲ್ಲಿ ಸರ್ವೋದಯ ಸಮ್ಮೇಳನ ಏರ್ಪಾಡಾಯಿತು. ಬುದ್ಧನಿಗೆ ಜ್ಞಾನೋದಯವಾದ ಬೋಧಿವೃಕ್ಷದ ಬಳಿ ವಿನೋಬಾ ಅವರಿಗಾಗಿ ತಾತ್ಕಾಲಿಕ ಆಶ್ರಮವೊಂದು ಸ್ಥಾಪಿತವಾಯಿತು. ಸುಮಾರು ಏಳು ಸಾವಿರ ಜನರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದು ಅವರೆಲ್ಲರಿಗೂ ಊಟ ವಸತಿಗಳ ಏರ್ಪಾಡಾಗಿತ್ತು. ನೆಹರೂ ಅವರ ಅಧಿಕೃತ ಪರಿವಾರ ಕೂಡಾ ತನ್ನೆಲ್ಲಾ ಸರ್ಕಾರಿ ಔಪಚಾರಿಕತೆಗಳೊಡನೆ ಆಗಮಿಸಿತ್ತು. ಜಯಪ್ರಕಾಶ್ ಮೊದಲಬಾರಿಗೆ ಸರ್ವೋದಯ ಸಮ್ಮೇಳನವೊಂದರಲ್ಲಿ ಭಾಗವಹಿಸುತ್ತಿದ್ದರು. ವಿನೋಬಾ ಈ ಜಿಲ್ಲೆಗಾಗಿ ನಿಗದಿ ಮಾಡಿದ್ದ ಮೂರು ಲಕ್ಷ ಎಕರೆಗಳಷ್ಟು ಭೂದಾನವನ್ನು ಸಾಧಿಸದೇ ಹೋಗಿರುವುದಕ್ಕಾಗಿ ವಿಷಾದ ವ್ಯಕ್ತಪಡಿಸಿದರು. ಬಿಹಾರದ ಭೂ ಸಮಸ್ಯೆಯನ್ನೇ ಪರಿಹರಿಸಲು ಸಾಕಷ್ಟು ಕಾರ್ಯಕರ್ತರಿಲ್ಲದಿರುವಾಗ ಇಡೀ ಭಾರತದ ಸಮಸ್ಯೆಗಳನ್ನು ಪರಿಹರಿಸುವುದು ಹೇಗೆ ಎಂದು ಪ್ರಶ್ನಿಸಿದರು. ಭೂದಾನ ಚಳುವಳಿಗೇ ತಮ್ಮನ್ನು ಮುಡುಪಾಗಿಟ್ಟುಕೊಳ್ಳುವ, ಅದರ ಸಲುವಾಗಿ ಕೌಟುಂಬಿಕ ಸಂಬಂಧಗಳನ್ನು ಆದಷ್ಟು ಕಡಿಮೆ ಮಾಡಿಕೊಳ್ಳುವ ಸೇವಾಮನೋಭಾವದ ಕಾರ್ಯಕರ್ತರ ಅಗತ್ಯವನ್ನು ಒತ್ತಿ ಹೇಳಿದರು. ಇದಕ್ಕೆ ಮೊದಲ ಪ್ರತಿಸ್ಪಂದನದಂತೆ ಜಯಪ್ರಕಾಶರು ಭೂದಾನ ಚಳುವಳಿಗೆ ತಮ್ಮ ಜೀವನವನ್ನೇ 'ದಾನ' ಮಾಡುವುದಾಗಿ ಪ್ರಕಟಿಸಿದರು. ಜಯಪ್ರಕಾಶರ ಈ 'ಜೀವನದಾನ'ದ ಹೊಸ ಕಲ್ಪನೆಯಿಂದ ಸ್ಫೂರ್ತಿಗೊಂಡ ವಿನೋಬಾ ತಮ್ಮನ್ನು ಕೂಡಾ 'ಜೀವನ ದಾನಿ' ಎಂದು ಘೋಷಿಸಿಕೊಂಡರು. ನಂತರ ನೂರಾರು ಜನರು ತಮ್ಮ ಜೀವನಗಳನ್ನು 'ದಾನ'ಮಾಡಲು ಮುಂದೆ ಬಂದರು.

ಸಮ್ಮೇಳನದ ಎರಡನೇ ದಿನದಂದು ಜಯಪ್ರಕಾಶ್ ಮೊದಲ ಬಾರಿಗೆ ಸರ್ವೋದಯ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಭಾರತದ ಭೂಸಮಸ್ಯೆಯನ್ನು ಪರಿಹರಿಸಲು ಕೇವಲ ನೂರಾರು ಜನರು ಸಾಲದು. ದೇಶದ ಆರು ಲಕ್ಷ ಹಳ್ಳಿಗಳಲ್ಲಿ ತಲಾ ಒಂದು ಹಳ್ಳಿಯಿಂದ ಕನಿಷ್ಟ ಪಕ್ಷ ಮೂವ್ವರು ಜೀವನ ದಾನಿಗಳಿರಬೇಕೆಂದು ಜಯಪ್ರಕಾಶ್ ಅಭಿಪ್ರಾಯಪಟ್ಟರು. ಈ ಜೀವನ ದಾನಿಗಳು ಸಮುದಾಯ ತಮ್ಮಿಂದ ಏನನ್ನು ನಿರೀಕ್ಷಿಸುತ್ತದೆ ಎಂಬುದರ ಅರಿವನ್ನು ಹೊಂದಿರಬೇಕೇ ಹೊರತು ಸ್ವತಃ ತಾವೇ ಸಮುದಾಯದಿಂದ ಏನನ್ನೂ ನಿರೀಕ್ಷಿಸಬಾರದು; ಏಕೆಂದರೆ, ಸಮುದಾಯ ಸೇವೆಯಲ್ಲಿ ತೊಡಗಿರುವ ಜನರನ್ನು ಸಮುದಾಯ ಮರೆಯುವುದಿಲ್ಲ ಎಂಬುದು ಜಯಪ್ರಕಾಶರು ಜೀವನ ದಾನಿಗಳಿಗೆ ನೀಡಿದ ಸಂದೇಶವಾಗಿತ್ತು.

ಆಶ್ರಮ ಸ್ಥಾಪನೆ

ಭಾರತದಂತಹ ಕೃಷಿಪ್ರಧಾನ ದೇಶದಲ್ಲಿ ಭೂಸಮಸ್ಯೆಗಳ ಪರಿಹಾರದ ಮೂಲಕ ಮಾತ್ರ ಸರ್ವೋದಯ ಸಾಧ್ಯ ಎಂಬ ವಿನೋಬಾ ಅವರ ನಿಲುವನ್ನು ಜಯಪ್ರಕಾಶ್ ಸಂಪೂರ್ಣವಾಗಿ ಒಪ್ಪಿಕೊಂಡರು. ಭೂಸಮಸ್ಯೆಗಳ ಪರಿಹಾರಕ್ಕೆ ಭೂದಾನ ಚಳುವಳಿಯೇ ಅತ್ಯಂತ ಪರಿಣಾಮಕಾರಿ ಮಾರ್ಗ ಎಂದು ನಂಬಿದ್ದ ಅವರು, ತಮ್ಮ ಕ್ಷೇತ್ರ ಕಾರ್ಯದ ಪರಿಣಾಮಕಾರಿ ಸಂಘಟನೆಗಾಗಿ ಒಂದು ಕೇಂದ್ರವನ್ನು ಸ್ಥಾಪಿಸುವ ಆಲೋಚನೆ ಮಾಡಿದರು. ಹಜಾರಿಬಾಗ್ ಸೆರೆಮನೆಯಿಂದ ತಪ್ಪಿಸಿಕೊಂಡು ಬಂದು ಒಂದು ರಾತ್ರಿ ತಾವು ಆಶ್ರಯ ಪಡೆದಿದ್ದ ಬಂಡೆಯ ಬಳಿ ಈ ಕೇಂದ್ರವನ್ನು ಸ್ಥಾಪಿಸಲು ಅವರು ನಿರ್ಧರಿಸಿದರು. ಈ ಉದ್ದೇಶಕ್ಕೆ ನೆರವಾಗಲು ಕೈಗಾರಿಕೋದ್ಯಮಿ ಜೆ.ಆರ್.ಡಿ. ಟಾಟಾ ಅವರು ಮುಂದೆ ಬಂದರು.

ಭಾರೀ ಭೂಮಾಲೀಕರಿಂದ ಸುತ್ತುವರಿಯಲ್ಪಟ್ಟಿದ್ದ ಸೆಖೊದೆವೊರಾ ಎಂಬ ಆ ಹಳ್ಳಿಯಲ್ಲಿ ಅವರು ೧೯೫೪ರಲ್ಲಿ ತಮ್ಮ ಸರ್ವೋದಯ ಕೇಂದ್ರವನ್ನು ಸ್ಥಾಪಿಸಿದರು. ಅದೇ ಹಳ್ಳಿಯ ಜಮೀನ್ದಾರನೊಬ್ಬನಿಂದ ೧೪೦ ಎಕರೆಗಳ ಭೂದಾನ ಪಡೆದು ೬೦ ಎಕರೆಗಳನ್ನು ಕೇಂದ್ರದ ಚಟುವಟಿಕೆಗಳಿಗೆ ಇಟ್ಟುಕೊಂಡು ಮಿಕ್ಕ ಭೂಮಿಯನ್ನು ಭೂರಹಿತರಿಗೆ ಹಂಚಲಾಯಿತು. ಬಿಹಾರ ಸರ್ಕಾರದ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಸಂಪರ್ಕ ಪಡೆದು ಸೆಖೊದೆವೊರಾ ಸುತ್ತಮುತ್ತಲಿನ ಹಳ್ಳಿಗಾಡನ್ನು ಕುಟೀರ ಕೈಗಾರಿಕೆಗಳ ಸ್ಥಾಪನೆಯ ಮೂಲಕ ಅಭಿವೃದ್ಧಿಪಡಿಸುವ ಕಾರ್ಯವನ್ನು ವಹಿಸಿಕೊಳ್ಳಲಾಯಿತು. ಇದಕ್ಕಾಗಿ ತರಬೇತಿ ಕಾರ್ಯಕ್ರಮವೊಂದನ್ನು ಆರಂಭಿಸಲಾಯಿತು. ಆಲೆಮನೆ, ಕಮ್ಮಾರಸಾಲೆ ಮತ್ತು ಬಿದಿರಿನಿಂದ ಕಾಗದ ತಯಾರಿಸುವ ಸರಳ ಕಾರ್ಯಾಗಾರವನ್ನು ತೆರೆಯಲಾಯಿತು. ಮಣ್ಣು ಮರ ಮತ್ತು ಬಿದಿರಿನಿಂದ ಗೊಂಬೆಗಳನ್ನು ಮಾಡುವ ಕೆಲಸವನ್ನು ಆಸಕ್ತಿಯಿದ್ದವರಿಗೆ ಕಲಿಸುವ ಏರ್ಪಾಡುಗಳನ್ನು ಮಾಡಲಾಯಿತು. ಸರ್ವೋದಯ ಕಲ್ಪನೆಯಿಂದ ಆಕರ್ಷಿತರಾಗಿ ಅಮೆರಿಕಾ, ಬ್ರಿಟನ್ ಜಪಾನ್, ಆಸ್ಟ್ರೇಲಿಯಾ ಮುಂತಾದ ದೇಶಗಳಿಂದ ಬಂದಿದ್ದ ಹಲವಾರು ಜನರು, ಇಲ್ಲಿ ಕಾರ್ಯಕರ್ತರಾಗಿ ನೆಲಸಿದರು.

ಇದು 'ಜಯಪ್ರಕಾಶರ ಆಶ್ರಮ' ಎಂಬ ಹೆಸರು ಪಡೆಯಿತಾದರೂ, 'ಆಶ್ರಮ'ದ ಬದುಕಿಗೆ ಸಾಮಾನ್ಯವಾಗಿರುವ ಯಾವ ಕಟ್ಟುನಿಟ್ಟುಗಳನ್ನೂ ಜಯಪ್ರಕಾಶ್ ವಿಧಿಸಲು ಬಯಸಲಿಲ್ಲ. ಬ್ರಹ್ಮಚರ್ಯ ಪಾಲನೆ, ಪಾನ ಪ್ರತಿಬಂಧ, ಧೂಮಪಾನ ನಿಷೇಧ ಮುಂತಾದ ನಿಯಮಗಳೆಲ್ಲಾ ಜಯಪ್ರಕಾಶರಿಗೆ ಅವಾಸ್ತವಿಕವಾಗಿ ಕಂಡವು. ಯಾವುದೇ ಮನುಷ್ಯನ ವೈಯಕ್ತಿಕ ವಿಷಯಗಳಲ್ಲಿ ಕೈಹಾಕುವುದು ಅವರ ಪ್ರಕಾರ 'ಅಸಭ್ಯ' ವರ್ತನೆಯಾಗಿತ್ತು. ಆದರೆ ಆಶ್ರಮದ ಸಾಮುದಾಯಿಕ ಬದುಕಿಗೆ ಅಗತ್ಯವಾದ ಕನಿಷ್ಟ ಶಿಸ್ತು, ಸ್ವಯಂ ಪ್ರೇರಣೆಯಿಂದ ಮೂಡುವಂತಹ ವಾತಾವರಣವನ್ನು ನಿರ್ಮಿಸುವ ಪ್ರಯತ್ನವನ್ನು ಅಲ್ಲಿ ಮಾಡಲಾಯಿತು. ಆಶ್ರಮದಲ್ಲಿ ವಾಸಿಸುವ ಪ್ರತಿಯೊಬ್ಬರೂ ಪ್ರತಿದಿನ ನಿಗದಿತ ಅವಧಿಯಲ್ಲಿ ಶ್ರಮದ ಕೆಲಸ

ಮಾಡಬೇಕಿತ್ತು. ಇದು ಜಾತಿ ಭೇದವನ್ನು ತೊಡೆದು ಹಾಕುವ ಮೂಲಭೂತ ಕಾರ್ಯಕ್ರಮದ ಒಂದು ಅಂಗವಾಗಿತ್ತು.

ಪ್ರತಿ ಕಾರ್ಯಕರ್ತನಿಗೂ ತಿಂಗಳಿಗೆ ನೂರು ರೂಪಾಯಿಗಳ 'ಭತ್ಯೆ'ಯನ್ನು ಕೊಡಲಾಗುತ್ತಿತ್ತು. ಕುಟುಂಬವಿದ್ದವರಿಗೆ ೧೩೦ ರೂಪಾಯಿಗಳನ್ನೂ, ವಿದೇಶಿಯರಿಗೆ ೨೦೦ ರೂಪಾಯಿಗಳನ್ನೂ ಕೊಡಲಾಗುತ್ತಿತ್ತು. ಆದರೆ ಎಲ್ಲರೂ ಸಮಾನ ಕೆಲಸಗಳನ್ನು ನಿರ್ವಹಿಸ ಬೇಕಾಗುತ್ತಿತ್ತು. ಆಶ್ರಮದ ಆವರಣದಲ್ಲಿನ ಶೌಚ ಗೃಹಗಳನ್ನು ಚೊಕ್ಕಟಮಾಡುವುದು ಎಲ್ಲರಿಗೂ ಕಡ್ಡಾಯವಾಗಿತ್ತು. ಪ್ರತಿಯೊಂದು ಕುಟುಂಬಕ್ಕೂ ಎರಡು ಕೊಠಡಿಗಳಿರುವ ವಿದ್ಯುತ್ ಸಂಪರ್ಕವಿಲ್ಲದ ಮಣ್ಣಿನ ಮನೆಗಳನ್ನು ಒದಗಿಸಲಾಗಿತ್ತು. ಸ್ವತಃ ಜಯಪ್ರಕಾಶರೇ ಅಂತಹ ಒಂದು ಮನೆಯಲ್ಲಿ ವಾಸಿಸುತ್ತಿದ್ದರು. ಅವರವರ ಊಟಗಳನ್ನು ಅವರವರೇ ತಯಾರಿಸಿಕೊಳ್ಳುತ್ತಿದ್ದರು. ಮೊಟ್ಟೆ ಮಾಂಸಾಹಾರಗಳ ಮೇಲೆ ಯಾವ ನಿರ್ಬಂಧವೂ ಇರಲಿಲ್ಲ. ಆಶ್ರಮದ ಖರ್ಚುವೆಚ್ಚಗಳು ಹಾಗೂ ಕಾರ್ಯಕ್ರಮ ಸ್ವರೂಪವನ್ನು, ಲಾಭ ನಷ್ಟಗಳಿಲ್ಲದ ಆಧಾರದ ಮೇಲೆ ಆಡಳಿತ ಮಂಡಳಿಯೊಂದು ನೋಡಿಕೊಳ್ಳುತ್ತಿತ್ತು. ಆಶ್ರಮ ನಿರ್ವಹಣೆಗೆ ಆಶ್ರಮದ ಉತ್ಪತ್ತಿಯಲ್ಲದೆ, ಸ್ವತಃ ಜಯಪ್ರಕಾಶರು ಜನರನ್ನು ಭೇಟಿಮಾಡಿ ನಿಧಿ ಸಂಗ್ರಹಿಸುತ್ತಿದ್ದರು. ಆದರೆ ಕಾರ್ಯಕರ್ತರು ನಿಧಿ ಸಂಗ್ರಹಣೆಯಲ್ಲಿ ತೊಡಗಬಾರದೆಂದು ಸೂಚಿಸಿದರು.

ಸಮಾಜವಾದಿ ಆಶ್ರಮ

ಸೆಖೊದೆವೊರಾ ಆಶ್ರಮ, ಸಮಾಜವಾದವು ಸರ್ವೋದಯದಲ್ಲಿ ಲೀನವಾಗುವ ಮೂಲಕ ತನ್ನ ಸಾರ್ಥಕ್ಯ ಪಡೆದುಕೊಳ್ಳಲು ಸಾಧ್ಯ ಎಂಬ ಜಯಪ್ರಕಾಶರ ಇತ್ತೀಚಿನ ತಾತ್ವಿಕ ಪ್ರತಿಪಾದನೆಯ ಒಂದು ಸಣ್ಣ ಕಾರ್ಯರೂಪಿ ಮಾದರಿಯಾಗಿತ್ತು. ಪಂಚಮಡಿ ಅಧಿವೇಶನದ ಅಧ್ಯಕ್ಷ ಭಾಷಣದಲ್ಲಿ ಡಾ. ರಾಮಮನೋಹರ ಲೋಹಿಯಾ ಅವರು ಪ್ರಸ್ತಾಪ ಮಾಡಿದ್ದ 'ಸಮಾಜವಾದಿ ಆಶ್ರಮ'ಗಳ ಕಲ್ಪನೆಯಲ್ಲಿ ಈ ಸೆಖೊದೆವೊರಾ ಆಶ್ರಮ ಸ್ಥಾಪನೆಯ ಮೊಳಕೆಯನ್ನು ಕಾಣಬಹುದು. ಪಂಚಮಡಿ ಅಧಿವೇಶನದ ಬಗ್ಗೆ ಮುಂಬೈನಲ್ಲಿ ಪಕ್ಷಕ್ಕೆ ಸಲ್ಲಿಸಿದ ವರದಿಯಲ್ಲಿ ಜಯಪ್ರಕಾಶರು ಹೀಗೆ ಹೇಳಿದ್ದರು: "...ಮಹಾತ್ಮಗಾಂಧಿ, ಕ್ರಾಂತಿಯ ಅಪೂರ್ವ ತಂತ್ರಜ್ಞರೇ ಆಗಿದ್ದರು. ಅವರಿಗೆ ರಚನಾತ್ಮಕ ಹಾಗೂ ಸಂಘರ್ಷಾತ್ಮಕ ಚಟುವಟಿಕೆಗಳ ನಡುವೆ ಒಂದು ಸೃಜನಶೀಲ ಸಮತೋಲನ ಸಾಧ್ಯವಾಗಿತ್ತು. ರಚನಾತ್ಮಕ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಳ್ಳುವ ಮೂಲಕ ಮಾತ್ರ ಕೆಡಕು ಮತ್ತು ಅನ್ಯಾಯಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಸಿದ್ಧಿಸಿಕೊಳ್ಳಲು ಸಾಧ್ಯ. ಈ ರೀತಿಯ ಹೋರಾಟ ಸಾಮಾಜಿಕ ಅರಿವನ್ನು ಆಳಗೊಳಿಸುವುದಲ್ಲದೆ, ಜನರ ಮನಸ್ಸು ಮತ್ತು ಬದುಕುಗಳಿಗೆ ಒಂದು ನಿರ್ಣಯಾತ್ಮಕ ದಿಕ್ಕು ತೋರಿಸಲೂ ನೆರವಾಗುತ್ತದೆ. ಈ ಸಂಬಂಧ ವಾಗಿ ನಾನು ಲೋಹಿಯಾ ಪ್ರಸ್ತಾಪಿಸಿದ 'ಸಮಾಜವಾದಿ ಆಶ್ರಮ'ಗಳ ಕಲ್ಪನೆ ಕಡೆ ನಿಮ್ಮ

ಗಮನ ಸೆಳೆಯಬಯಸುತ್ತೇನೆ. ಪಕ್ಷದ ಕಾರ್ಯಕಾರಿ ಸಮಿತಿಯ ಪ್ರತಿಯೊಬ್ಬ ಸದಸ್ಯರೂ ಇಂತಹ ಚಟುವಟಿಕೆಯಲ್ಲಿ ತೊಡಗಲಿ; ತನ್ನ ನೆರೆಹೊರೆಯಲ್ಲಿ ನಮ್ಮ ವಿಚಾರಗಳ ಸಾಕ್ಷಾತ್ಕಾರದ ಮಾದರಿ ಕಟ್ಟಲಿ. ಇದನ್ನು ನಾವು ಮೊದಲೇ ಮಾಡಿದ್ದಲ್ಲಿ ಅದು ನಮ್ಮ ಹೋರಾಟಗಳಿಗಿಂತ ಹೆಚ್ಚು ಪರಿಣಾಮವನ್ನು ಉಂಟು ಮಾಡುತ್ತಿತ್ತೇನೋ!. ನನ್ನೆಲ್ಲಾ ಗೆಳೆಯರೂ ಈ ರೀತಿಯ ರಚನಾತ್ಮಕ ಚಟುವಟಿಕೆಯ ಕಡೆ ಗಮನಕೊಟ್ಟು ಅದನ್ನು ಒಂದು ನಿರಂತರ ಕಾರ್ಯಕ್ರಮವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಾದಲ್ಲಿ ನಮ್ಮ ಜಡತೆ ತಂತಾನೇ ಮಾಯವಾಗುತ್ತದೆ; ಶ್ರದ್ಧೆ ಮರುಕಳಿಸಿ ಬಲಗೊಳ್ಳುವುದರಲ್ಲಿ ಸಂದೇಹವಿಲ್ಲ..."

ಜಯಪ್ರಕಾಶರು ತಾವು ಹೊರ ಬಂದ ಕಾಂಗ್ರೆಸ್ ಪಕ್ಷದ ಗೆಳೆಯರು ನಡೆಸುತ್ತಿದ್ದ ಸರ್ಕಾರಿ ಅಧಿಕಾರದ ಪ್ರಯೋಗ ಹಾಗೂ ತಾವು ನಂಬಿಕೊಂಡು ಬಂದ ಸಮಾಜವಾದಿ ಗುಂಪಿನ ಗೆಳೆಯರು ನಡೆಸುತ್ತಿದ್ದ ಸಮಾಜವಾದಿ ಹೋರಾಟ ರಾಜಕಾರಣದ ಆತ್ಯಂತಿಕ ಪರಿಣಾಮಗಳನ್ನು ಅಂದಾಜು ಮಾಡುವ ಒಂದು ಆಳವಾದ ತಾತ್ವಿಕ ಚಿಂತನೆಗೆ ತಮ್ಮನ್ನು ಒಡ್ಡಿಕೊಂಡಿದ್ದರು. ರಾಷ್ಟ್ರ ಪುನರ್‌ನಿರ್ಮಾಣಕ್ಕಾಗಿ ಸಹಕರಿಸುವಂತೆ ಪ್ರಧಾನಿ ನೆಹರೂ ಆಹ್ವಾನ ನೀಡಿದಾಗ ತನ್ನ ಕೆಲವು ಸಮಾಜವಾದಿ ಗೆಳೆಯರ ಕಟು ಟೀಕೆಯಿಂದ ವಿಚಲಿತರಾಗದೆ ೧೪ ಅಂಶಗಳ ಕಾರ್ಯಕ್ರಮದ ಶರತ್ತೊಂದನ್ನು ಅವರು ಸರ್ಕಾರದ ಮುಂದಿಟ್ಟಿದ್ದರು.* ನೆಹರೂ ಅದರ ಬಗ್ಗೆ ಖಚಿತ ಆಶ್ವಾಸನೆ ನೀಡದಿದ್ದಾಗ "...ನಿಮ್ಮ ಪ್ರಚಲಿತ ನೀತಿ ಕಾರ್ಯಕ್ರಮಗಳನ್ನು ಜಾರಿಗೆ ತರುವಲ್ಲಿ ನಿಮ್ಮ ಕೈಬಲಪಡಿಸಲೆಂದು ನಿಮ್ಮ ಸಂಪುಟಕ್ಕೆ ನಾವು ಕೆಲವರು ಸೇರಿಕೊಳ್ಳುವದಷ್ಟೇ ನಿಮ್ಮ ಆಶಯವಾಗಿದ್ದಲ್ಲಿ, ಅಂತಹ ಪ್ರಯತ್ನದಿಂದ ಯಾವುದೇ ಪ್ರಯೋಜನವಿಲ್ಲ... ಬದಲಾಗಿ ನಿಮ್ಮ ಆಶಯ. ರಾಷ್ಟ್ರ ಪುರ್ನನಿರ್ಮಾಣವನ್ನು ನಾವೆಲ್ಲ ಸೇರಿ ಮಾಡಬೇಕಾದ ದಿಟ್ಟ ಸಾಹಸದ ಮಹಾ ಪ್ರಯತ್ನ ಎಂಬುದಾಗಿದ್ದಲ್ಲಿ ಅದೊಂದು ಐತಿಹಾಸಿಕ ಉಪಕ್ರಮವೇ ಆಗಿಬಿಡುತ್ತಿತ್ತು..." ಎಂದು ನೆಹರೂ ಆಹ್ವಾನವನ್ನು ತಿರಸ್ಕರಿಸಿ ಅವರ ಬಗ್ಗೆ ಆಶೆ ಕಳೆದುಕೊಂಡಿದ್ದರು. ಹಾಗೇ ತಮ್ಮ ಪ್ರಜಾಸಮಾಜವಾದೀ ಪಕ್ಷದ ವೇದಿಕೆಯಲ್ಲಿ "ಹನ್ನೊಂದು ವರ್ಷಗಳಲ್ಲಿಯೇ ನಮ್ಮ ಜನ ಸ್ವಾತಂತ್ರ್ಯದ ಬೂದಿಯನ್ನು ತಿನ್ನಬೇಕಾಗಿದೆ... ನಾವು ಹೀಗೆ ಮುಂದುವರಿದರೆ ಸಮಾಜವಾದದ ಬೂದಿಯನ್ನೂ ಜನ ತಿನ್ನಬೇಕಾದ ದಿನಗಳು ಹೆಚ್ಚು ದೂರವಿರಲಾರವು" ಎಂದು ಎಚ್ಚರಿಸಿದ್ದರು. ಆ ಹೊತ್ತಿಗೆ ಪ್ರಜಾಸಮಾಜವಾದಿ ಪಕ್ಷ ಒಡೆದು ಡಾ. ಲೋಹಿಯಾ ನೇತೃತ್ವದ ಸಮಾಜವಾದಿಪಕ್ಷ ಸ್ಥಾಪಿತವಾಗಿತ್ತು. ಸಮಾಜವಾದಿ ಆಂದೋಲನದ ತೀರ್ಥರೂಪರಂತಿದ್ದ ಆಚಾರ್ಯ ನರೇಂದ್ರ ದೇವ ಅವರೂ ಮೃತರಾಗಿ, ಆಂದೋಲನ ಹಿರಿಯರಿಲ್ಲದ ಮನೆಯಂತಾಗಿತ್ತು. ಈ ಹಿನ್ನೆಲೆಯಲ್ಲಿ ಜಯಪ್ರಕಾಶರು 'ಗಾಂಧೀಜಿಯ ಪುನರನ್ವೇಷಣೆ ಹಾಗೂ ಪುರ್ನಮನನ'ದ ಮಹಾ ಪ್ರಯಾಣದ ಒಂಟಿ ಹಾದಿ ಹಿಡಿದಿದ್ದರು. ಅದು ಅವರನ್ನು

* ಅನುಬಂಧ-೧ ನೋಡಿ.

ವಿನೋಬಾರ ಸರ್ವೋದಯದತ್ತ ಕರೆದೊಯ್ದಿತ್ತು. ತಮ್ಮ ಈ ಸರ್ವೋದಯ ಚಳುವಳಿಯ ಚಟುವಟಿಕೆಗಳನ್ನು ರಾಜನೀತಿ (ರಾಜಕಾರಣ)ಯಿಂದ ಭಿನ್ನವಾದ ಲೋಕನೀತಿ (ಲೋಕ ಕಾರಣ) ಎಂದು ಅವರು ಕರೆದರು. ಅವರ ಪ್ರಕಾರ ರಾಜನೀತಿ ಪಕ್ಷ ರಾಜಕಾರಣವಾದರೆ ಲೋಕನೀತಿ ಜನರ ರಾಜಕಾರಣ. 'ತಾವೇ ರೂಪಿಸಿಕೊಂಡ ನಿಯಮಗಳಿಂದಾಗಿಯೇ ಕ್ರಿಯಾಶೀಲವಾಗುವ ಪಂಚಾಯತ್'ಗಳಿಂದ ಕೂಡಿದ್ದೆಂದು ಗಾಂಧೀಜಿ ವರ್ಣಿಸುವ ಗ್ರಾಮ ರಾಜ್ಯದ ಕನಸು ಈ ಲೋಕ ನೀತಿಯದು. ಸೆಖೊದೇವ್ರೊರಾ ಈ ಕನಸಿನ ಕೇಂದ್ರ. ಅದರ ವ್ಯಾಪ್ತಿ ಸದ್ಯಕ್ಕೆ ಇಡೀ ಬಿಹಾರ. ಈ ಕನಸುಕಾಣುತ್ತಿರುವಾಗಲೇ ಜಯಪ್ರಕಾಶರಿಗೆ ಮಧುಮೇಹ ಶುರುವಾಗಿತ್ತು. ಇದರಿಂದಾಗಿ ಇನ್ಸುಲಿನ್, ಪತ್ನಿ ಪ್ರಭಾವತಿಯೊಂದಿಗೆ ಅವರ ಬಾಳಸಂಗಾತಿಯೂ ಆಯಿತು....

ಆಶ್ರಮದಲ್ಲಿ ಆರಂಭವಾದ ದಾಂಪತ್ಯ

ಸೆಖೊದೇವ್ರೊರಾ ಆಶ್ರಮ ಸ್ಥಾಪನೆಯೊಂದಿಗೇ ನಿಜವಾಗಿಯೂ ಜಯಪ್ರಕಾಶರು ತಮ್ಮ ಪತ್ನಿ ಪ್ರಭಾವತಿಯವರೊಂದಿಗೆ ದಂಪತಿಗಳಂತೆ ಒಟ್ಟಿಗೆ ವಾಸಿಸತೊಡಗಿದ್ದು. ೧೯೫೫ರ ಜನವರಿ ಮೂರರಂದು ಅವರು ಆಶ್ರಮದಲ್ಲಿ ಮೊದಲಬಾರಿಗೆ ಒಟ್ಟಿಗೆ ಪ್ರಾರ್ಥನೆ, ಉಪವಾಸ ಮಾಡಿದರು. ಚರಕಾದಲ್ಲಿ ಇಡೀ ದಿನ ನೂಲು ತೆಗೆದರು. ಅವರ ಆ ಆಶ್ರಮ ಹೇಗಿತ್ತು, ಅವರ ದಾಂಪತ್ಯ ಹೇಗೆ ನಡೆದಿತ್ತು ಎಂಬುದರ ಸೂಚನೆ, ಸರ್ವೋದಯ ಕಾರ್ಯಕರ್ತೆ ನಿರ್ಮಲಾ ದೇಶಪಾಂಡೆ ಅವರು ಜಯಪ್ರಕಾಶರನ್ನು ನೋಡಲೆಂದು ಒಮ್ಮೆ ಆಶ್ರಮಕ್ಕೆ ಹೋದ ಸಂದರ್ಭದ ಒಂದು ಸಂಕ್ಷಿಪ್ತ ವಿವರಣೆಯಿಂದ ದೊರೆಯುತ್ತದೆ:

> "ಜೆ.ಪಿ. ಒಂದು ಮುರುಕಲು ಶಾಲಾ ಕಟ್ಟಡದಲ್ಲಿ ತಂಗಿದ್ದರು. ಒಂದು ಪುಸ್ತಕ ಓದುತ್ತಾ ಕೂತಿದ್ದರು. ಮಧ್ಯಾಹ್ನ ಒಂದೂವರೆ ಗಂಟೆಯಾಗಿತ್ತು. ಊಟ-ತಿಂಡಿಗಳ ಸುಳಿವಿರಲಿಲ್ಲ. ತನ್ನ ಪತಿಯ ಅನುಕೂಲಕ್ಕೆಂದೇ ಪ್ರಭಾವತಿ ಪಟ್ನಾದಿಂದ ಟೀ ಸೆಟ್ಟೊಂದನ್ನು ತಂದಿದ್ದ ಸಂಗತಿ ಜಯಪ್ರಕಾಶರನ್ನು ಕೆರಳಿಸಿದ್ದ ಕಾರಣ, ಪ್ರಭಾವತಿ ಗಂಟುಮೂಟೆ ಕಟ್ಟಿಕೊಂಡು ಬೇರೆಡೆ ತಂಗಲು ಹೋಗಿದ್ದರು... ಜಯಪ್ರಕಾಶರು 'ಎಲ್ಲಿ ಊಟ?' ಎಂದು ಆ ಕಟ್ಟಡದಲ್ಲಿ ತಮ್ಮೊಡನಿದ್ದ ಮನುಷ್ಯನನ್ನು ಕೇಳುತ್ತಲೇ ಇದ್ದರು... ಆ ಮನುಷ್ಯ 'ಈಗ ಬಂತು... ಈಗ ಬಂತು..' ಎಂದು ಹೇಳ ಹೇಳುತ್ತಲೇ ಒಂದು ತಾಸಿನ ನಂತರ ಅರೆಬೆಂದ ಆಲೂಗಡ್ಡೆ, ಜೇಳಿ ಹಾಗೂ ಒಂದು ಸಿಪ್ಪೆ ಅನ್ನವನ್ನು ಒಂದು ನಜ್ಜು ಗುಜ್ಜಾಗಿದ್ದ ತಟ್ಟೆಯಲ್ಲಿ ಹಾಕಿಕೊಂಡು ಬಂದ... ನಂತರ ಒಡೆದ ಕಪ್‌ವೊಂದರಲ್ಲಿ ಸಕ್ಕರೆಮಯವಾಗಿದ್ದ ಚಹಾವನ್ನು ತಂದಿಟ್ಟ. ಅವರು ಕಪ್ಪನ್ನು ದೂರ ತಳ್ಳಿದರು. ಪತ್ರಗಳ ಕಡತ ತರ ಹೇಳಿದರು. ಆ ಮನುಷ್ಯ 'ಸಿಗುತ್ತಿಲ್ಲ' ಎಂದ. ಸಂಜೆ ಹೊತ್ತಿಗೆ ತಲೆ ಕೆಟ್ಟಂತಾಗಿದ್ದ ಜಯಪ್ರಕಾಶರು ತಮ್ಮ ಪತ್ನಿಗೆ ವಾಪಸು

ಬರಲು ಕರೆ ಕಳಿಸಿದರು. ಪ್ರಭಾವತಿ ತಮ್ಮ ಗಂಟುಮೂಟೆಯೊಂದಿಗೆ ಒಂದು ಜೀಪ್‌ನಲ್ಲಿ ವಾಪಸು ಬಂದರು. ನಂತರ ಮುಗ್ಧವಾಗಿ ಹೇಳಿದರು: 'ಇವರಿಗೆ ಈ ಗಂಟು ಮೂಟೆಯೂ ಅನರ್ಗತ್ಯ ಭಾರವಂತೆ... ಇದರಲ್ಲೇನಿದೆ... ನನ್ನದೆನ್ನುವುದು ಏನೂ ಇಲ್ಲ... ಎಲ್ಲ ಅವರ ಸರಕೇ... ಚಹಾ ಕುಡಿಯುವುದೂ ಅವರೇ, ಟೀ ಸೆಟ್ಟು ತಂದದ್ದು ಅವರಿಗಾಗಿಯೇ.... ನಾನೆಂದೂ ಚಹ ಮುಟ್ಟಿಲ್ಲ...."

ಸರ್ವೋದಯದ ಮೂಲ ಆಶಯವಾದ 'ಅಂತ್ಯೋದಯ'ದ ಆ 'ಅಂತ್ಯ' ಬದುಕಿಗೆ ಜಯಪ್ರಕಾಶರು ತಮ್ಮನ್ನು ಹಾಗೂ ತಮ್ಮ ಪತ್ನಿಯನ್ನು ಒಗ್ಗಿಸಿಕೊಳ್ಳತೊಡಗಿದ್ದರು.

ಗ್ರಾಮಯಾತ್ರೆ

ಜಯಪ್ರಕಾಶರು ತಮ್ಮ ಸರ್ವೋದಯ ಕಾರ್ಯಕರ್ತರ ದಂಡಿನೊಡನೆ ಬಿಹಾರದ ಮೂಲೆಮೂಲೆಗೂ ನಡೆದರು. ಭೂದಾನ, ಗ್ರಾಮದಾನ, ಸಂಪತ್ತಿದಾನ ಹಾಗೂ ಜೀವನ ದಾನ ಸಂಕಲ್ಪಗಳ ಮೂಲಕ ಗ್ರಾಮರಾಜ್ಯದ ಕನಸನ್ನು ಸಾಕಾರಗೊಳಿಸುವ ಆಂದೋಲನದ ನೇತೃತ್ವ ವಹಿಸಿದರು. ಅದು ಎಂತಹ ನೇತೃತ್ವ? ಅವರೊಂದಿಗೆ ಬಿಹಾರದ ಕೆಲವು ಗ್ರಾಮಗಳ ಪ್ರವಾಸಮಾಡಿದ ಅವರ ಗೆಳೆಯ ಮೀನೂ ಮಸಾನಿ ಅವರ ಪ್ರಕಾರ ಜಯಪ್ರಕಾಶರ ಗ್ರಾಮಯಾತ್ರೆಯ ಚಿತ್ರ ಹೀಗಿರುತ್ತಿತ್ತು:

"ಜಯಪ್ರಕಾಶರು ಜೀಪಿನಲ್ಲಿ ಒಂದು ಹಳ್ಳಿ ತಲುಪಿ, ಹಳ್ಳಿಯ ಗ್ರಂಥಭಂಡಾರದ ಜಗುಲಿಯ ಮೇಲೆ ಊರ ಹಿರಿಯರೊಡನೆ ಅನೌಪಚಾರಿಕ ಮಾತುಕತೆ ಆರಂಭಿಸುತ್ತಾರೆ. ಒಂದಷ್ಟು ಜನ ಸೇರಿದೊಡನೆ ಸಣ್ಣ ಬಯಲಿನಲ್ಲಿ ನಿರ್ಮಿಸಿದ ವೇದಿಕೆಯೇರಿ ಆಗಾಗ್ಗೆ ಕೆಲಸ ನಿಲ್ಲಿಸುವ ಧ್ವನಿವರ್ಧಕದ ಮೂಲಕ ತಾವು ಹಳ್ಳಿಗೆ ಬಂದಿರುವುದು, ಮಾನಪತ್ರ ಪಡೆಯುವುದಕ್ಕಲ್ಲ; ದಾನಪತ್ರ ಪಡೆಯಲು ಎಂದು ತಮ್ಮ ಭೇಟಿಯ ಉದ್ದೇಶ ತಿಳಿಸುತ್ತಾರೆ. ದೂರದ ಮರದ ಕೆಳಗೆ ಊರ ಹಿರಿಯರಿಬ್ಬರು ತಮಗೂ ಈ ಸಭೆಗೂ ಸಂಬಂಧವಿಲ್ಲದಂತೆ ಕೂತಿರುವುದನ್ನು ಕಂಡು ಅವರನ್ನು ಹತ್ತಿರ ಕರೆಯುತ್ತಾರೆ. ಮತ್ತೆ ಮಾತು ಆರಂಭಿಸುತ್ತಾರೆ. ಗುಂಪಿನಲ್ಲಿ ಮಗುವೊಂದು ಅಳಲಾರಂಭಿಸುತ್ತದೆ. ಅದನ್ನು ಸಮಾಧಾನಪಡಿಸಿ ಮತ್ತೆ ಮಾತು ಆರಂಭಿಸುವ ಹೊತ್ತಿಗೆ ಗುಂಪಿನಲ್ಲಿ ಮತ್ತೆ ಗೊಂದಲ ಆರಂಭವಾಗುತ್ತದೆ. ಕೆಲವರು ಗುಂಪು ಬಿಟ್ಟು ಚದುರುತ್ತಾರೆ. ಏಕೆಂದು ನೋಡಿದರೆ, ಸಣ್ಣ ಕುದುರೆ ಮರಿಯ ಮೇಲೆ ಸವಾರಿ ಮಾಡುತ್ತಾ ದೂರದೂರಿನ ಓರ್ವ ವ್ಯಕ್ತಿ ಸಭೆಗೆ ಬಂದಿದ್ದಾನೆ. ಊರಿಗೆ ಬಂದ ಕುದುರೆ ಮರಿಯಿಂದ ಆಕರ್ಷಿತರಾದ ಒಂದಷ್ಟು ಜನ ಕುದುರೆ ಮರಿಯನ್ನು ಕಟ್ಟಿಹಾಕಿದ್ದ ಜಾಗಕ್ಕೆ ಓಡುತ್ತಿದ್ದಾರೆ. ಸಹನೆ ಕಳೆದುಕೊಳ್ಳದ ಜಯಪ್ರಕಾಶ್ ಸ್ವಲ್ಪ ವಿರಾಮದ ನಂತರ ಮಾತು ಮುಂದುವರೆಸುತ್ತಾರೆ. ಹಸಿದಿರುವ ಜನ ಇರುವ

ಊರಲ್ಲಿ ಶಾಂತಿ ಇರಲು ಸಾಧ್ಯವೇ? ನಿಮ್ಮ ಊರು ವರ್ಷಾನುಗಟ್ಟಲೆ ಇದ್ದಂತೆಯೇ ಮುಂದೂ ಇರಲು ಸಾಧ್ಯವೇ? ಜಗತ್ತು ಬದಲಾಗುತ್ತಿದೆ. ಬ್ರಿಟಿಷರು ಹೋದರು, ಮಹಾರಾಜರು ಹೋದರು, ಜಮೀನ್ದಾರರೂ ಹೋಗುತ್ತಿದ್ದಾರೆ... ಕೆಲವರ ಬಳಿ ಅಗತ್ಯಕ್ಕಿಂತ ತುಂಬಾ ಹೆಚ್ಚು ಭೂಮಿ ಇದೆ. ಕೆಲವರ ಬಳಿ ಏನೂ ಇಲ್ಲ... ಇದೂ ಬದಲಾವಣೆಯಾಗಲೇಬೇಕು... ಆ ಬದಲಾವಣೆಯನ್ನು ತರಬೇಕಾದವರೂ ನೀವೇ... ನಾವಿಂದು ನೀತಿಭ್ರಷ್ಟ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ಏಕೆ?... ದೇವರು ಸುಖವಾಗಿರಲಿ ಎಂದು ಮನುಷ್ಯನನ್ನು ಸೃಷ್ಟಿಸಿದ. ಆದರೆ ಇನ್ನೊಬ್ಬರ ಸಂತೋಷದಲ್ಲಿ ಸಂತೋಷವಾಗಿರಬೇಕಾದ, ಇನ್ನೊಬ್ಬರ ದುಃಖದಲ್ಲಿ ದುಃಖಿಯಾಗಿರಬೇಕಾದ ಧರ್ಮದ ಹಾದಿ ಬಿಟ್ಟಿದ್ದಾನೆ... ಧರ್ಮ, ಮೋಕ್ಷ, ಪುಣ್ಯಕ್ಕಾಗಿ ಅಲಹಾಬಾದ್‌ನ ಕುಂಭಮೇಳಕ್ಕೆ ಹೋಗಬೇಕಾಗಿಲ್ಲ, ಗಂಗೆಯಲ್ಲಿ ಮಿಂದು ಶುದ್ಧರಾಗಬೇಕಿಲ್ಲ. ನಿಮಗಿರುವುದನ್ನು ಹಂಚಿಕೊಳ್ಳುವ ಮೂಲಕ ನೀವು ಇಲ್ಲೇ ಈ ಹಳ್ಳಿಯಲ್ಲೇ ಭೂದಾನ ಮಾಡಿ ಶುದ್ಧಿಯಾಗಬಹುದು ...."

ಎಲ್ಲ ಹಳ್ಳಿಗಳಲ್ಲೂ ಜಯಪ್ರಕಾಶರ ಮಾತು ಪರಿಣಾಮ ಉಂಟುಮಾಡುತ್ತಿರಲಿಲ್ಲ. ಕೆಲವರು ರಷ್ಯಾದಲ್ಲಿ ಮಾಡಿದಂತೆ ಏಕೆ ಇಲ್ಲಿ 'ಕ್ರಾಂತಿ' ಮಾಡಬಾರದೆಂದು ಕೇಳುತ್ತಿದ್ದರು. ಅವರಿಗೆ ಜಯಪ್ರಕಾಶರು ರಷ್ಯಾದ ಕ್ರಾಂತಿ ಹೇಗೆ ಹೊಸ ಆಳುವ ವರ್ಗವೊಂದನ್ನು ಸೃಷ್ಟಿಸಿ ವಿಫಲವಾಗಿದೆ ಎಂಬುದನ್ನು ವಿವರಿಸುತ್ತಿದ್ದರು. ಇನ್ನು ಕೆಲವರು ಕಾನೂನು ಮೂಲಕವೇಕೆ ಭೂಮಿಯನ್ನು ವಶಪಡಿಸಿಕೊಂಡು ಮರುವಿತರಣೆ ಮಾಡಬಾರದೆಂದು ಕೇಳುತ್ತಿದ್ದರು. ಕಳ್ಳತನದಲ್ಲಿ ಪಡೆದಿದ್ದನ್ನು ಹಿಂತಿರುಗಿಸಲು ಕಾನೂನು ಅಗತ್ಯ ಎಂದು ವಾದಿಸುವವರು ಮನುಷ್ಯಲೋಕಕ್ಕೇ ಸೇರಿದವರಲ್ಲ ಎಂದು ಅವರಿಗೆ ಜಯಪ್ರಕಾಶರು ಉತ್ತರಿಸುತ್ತಿದ್ದರು. ಒಲ್ಲದ ಮನಸ್ಸಿನಿಂದ ಭೂದಾನ ಮಾಡಿದವರಿಂದ ಅವರು ದಾನಪತ್ರಗಳನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದರು. ಅಂತಹ ಕೆಲವು ಸಂದರ್ಭಗಳಲ್ಲಿ, ಜನ ಮಾರನೆಯ ದಿನ ಊರಿಗೆ ಬಂದು ಖೇದ ವ್ಯಕ್ತಪಡಿಸಿ ದಾನಪತ್ರಗಳನ್ನು ಪ್ರೀತಿಯಿಂದ ಕೊಟ್ಟಿದ್ದೂ ಉಂಟು."

ಈ ಸೆಖೊದೆವೊರಾ ಆಶ್ರಮದ ಸ್ಥಾಪನೆಯೊಂದಿಗೆ ಜಯಪ್ರಕಾಶರ ಸಾಮಾಜಿಕ ದರ್ಶನ ಮಾರ್ಕ್ಸ್‌ವಾದದ ಮೂಲಕ ಹಾದು ಗಾಂಧಿವಾದಿ ದೃಷ್ಟಿಕೋನದ ಸಮಾಜವಾದಿ ಸಿದ್ಧಾಂತವಾಗಿ ಒಡಮೂಡಿ ಸರ್ವೋದಯ ತತ್ವದಲ್ಲಿ ಲೀನಗೊಂಡಿತ್ತು. ಈಗಾಗಲೇ ಅವರು ೫೭ರ ಚುನಾವಣೆಯ ಸಂದರ್ಭದಲ್ಲಿ 'ನೀವೇ ಭವಿಷ್ಯದ ಪ್ರಧಾನಮಂತ್ರಿ' ಎಂದು ಓಲೈಸಿ ಅವರನ್ನು ಮತ್ತೆ ಪಕ್ಷ ರಾಜಕಾರಣದತ್ತ ಸೆಳೆದೊಯ್ಯಲು ಪ್ರಯತ್ನಿಸಿದ ತಮ್ಮ ಸಮಾಜವಾದಿ ಗೆಳೆಯರಿಗೆ ವಿದಾಯದ ಎಚ್ಚರಿಕೆ ನೀಡಿದ್ದರು: "ಈಗಾಗಲೇ ಜನ ಈಗ ಗಳಿಸಿರುವ ಸ್ವಾತಂತ್ರ್ಯದ ಬಗ್ಗೆ ಭ್ರಮನಿರಸನಗೊಂಡಿದ್ದಾರೆ. ನಮ್ಮ ಸಮಾಜವಾದವು ಸರ್ವೋದಯವಾಗಿ ಪರಿವರ್ತಿತವಾಗದಿದ್ದಲ್ಲಿ ಅವರು ಸಮಾಜವಾದದ ಬಗ್ಗೆಯೂ ಭ್ರಮನಿರಸನಗೊಳ್ಳುವುದು

ಖಂಡಿತ." ತಮ್ಮೊಳಗಿನ ಈ ಎಲ್ಲ ಬೆಳವಣಿಗೆಗಳನ್ನು ವಿಷದೀಕರಿಸಿ ಅವರು ಈ ಸಂದರ್ಭದಲ್ಲಿ ಸಿದ್ಧಪಡಿಸಿದ 'ಸಮಾಜವಾದದಿಂದ ಸರ್ವೋದಯದೆಡೆಗೆ' ಎಂಬ ಪ್ರಬಂಧದಲ್ಲಿ ತಮ್ಮ ನಿಲುವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ: "ಪಕ್ಷ ರಾಜಕೀಯ ಹಾಗೂ ಅಧಿಕಾರ ರಾಜಕೀಯದಿಂದ ನಾನು ಹಿಂದೆಗೆದದ್ದು ಯಾವುದೇ ರೀತಿಯ ಜಿಗುಪ್ಸೆ ಅಥವಾ ವೈಯಕ್ತಿಕ ಹತಾಶೆಯಿಂದಲ್ಲ; ಇಂತಹ ರಾಜಕಾರಣಕ್ಕೆ ಯಾವುದೇ ರೀತಿಯ ಒಳ್ಳೆಯ ಕೆಲಸಗಳನ್ನು—ಒಳ್ಳೆಯ ಕೆಲಸಗಳೆಂದರೆ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ, ಶಾಂತಿ ಮುಂತಾದ ಅದೇ ಹಳೆಯ ಗುರಿಗಳೇ— ಮಾಡಲಾಗಲಿಕ್ಕಿಲ್ಲ ಎಂದು ನನಗೆ ಸ್ಪಷ್ಟವಾಗಿ ಅರಿವಾಗಿದ್ದರಿಂದ. ಸರ್ವೋದಯ ರಾಜಕಾರಣಕ್ಕೆ ಪಕ್ಷ ಬೇಕಿಲ್ಲ, ಅದಕ್ಕೆ ಅಧಿಕಾರದ ಸಂಬಂಧವಿಲ್ಲ. ಬದಲಾಗಿ, ಎಲ್ಲ ಅಧಿಕಾರ ಕೇಂದ್ರಗಳನ್ನೂ ನಾಶಮಾಡುವುದೇ ಅದರ ಗುರಿಯಾಗಿರುತ್ತದೆ. ಇಂತಹ ಹೊಸ ರಾಜಕಾರಣ ಹೆಚ್ಚೆಚ್ಚು ಬೆಳೆದಷ್ಟು, ಆ ಹಳೆಯ ರಾಜಕಾರಣ ಹೆಚ್ಚೆಚ್ಚು ನಶಿಸಿಹೋಗುತ್ತದೆ; ಇದೇ ರಾಜ್ಯತ್ವ ನಶಿಸಿ ಹೋಗುವ ನಿಜವಾದ ಕ್ರಿಯೆ..."

ಇದರೊಂದಿಗೆ ಜಯಪ್ರಕಾಶರು ಪಕ್ಷರಾಜಕಾರಣರೊಂದಿಗೆ ತಮ್ಮ ಎಲ್ಲ ಅಧಿಕೃತ ಸಂಪರ್ಕವನ್ನು ತೊಡೆದುಕೊಂಡರು.

ವಿದೇಶ ಪ್ರವಾಸ

ಈ ಮಧ್ಯೆ ೧೯೫೮ರ ಏಪ್ರಿಲ್‌ನಲ್ಲಿ ಪೂರ್ವ ಯುರೋಪಿನ ಹಲವಾರು ಸಮಾಜವಾದಿ ಹಾಗೂ ಶಾಂತಿವಾದಿ ಸಂಸ್ಥೆಗಳು ಜಯಪ್ರಕಾಶರನ್ನು ಅತಿಥಿಗಳನ್ನಾಗಿ ಆಹ್ವಾನಿಸಿದವು. ಎರಡು ವರ್ಷಗಳ ಹಿಂದಷ್ಟೇ ಏಷ್ಯಾದ ಸಮಾಜವಾದಿ ಸಮ್ಮೇಳನದಲ್ಲಿ ಮಾತನಾಡಿದ್ದ ಜಯಪ್ರಕಾಶರು ಸರ್ವೋದಯವೇ ಸಮಾಜವಾದದೆಡೆಗಿನ 'ನಿಜದಾರಿ' ಎಂದು ನಿರೂಪಿಸಿದ್ದರು. ಅವರೀಗ ತಾವು ಕಂಡುಕೊಂಡ ನಿಜದಾರಿಯ ಅನುಭವಗಳನ್ನು ತಮ್ಮ ಪ್ರವಾಸ ಸಂದರ್ಭದಲ್ಲಿ ಈರೋಪಿನ ಸಮಾಜವಾದಿಗಳ ಮುಂದಿಟ್ಟು ಬಂದರು. ಬಂದನಂತರ ಹೇಳಿದರು: "ಜಗತ್ತಿಗೆ ಶಾಂತಿ ಬೇಕಾಗಿದೆ. ಪಶ್ಚಿಮದ ಪ್ರಪಂಚ ಸಿಡಿಮದ್ದಿನ ಮೇಲೆ ಕೂತಿದೆ; ಆದರೂ ಅಣುಬಾಂಬುಗಳ ಸೃಷ್ಟಿ ಮುಂದುವರಿದೇ ಇದೆ... ಜನಶಕ್ತಿಯನ್ನು ಒಳಗೊಳ್ಳದೆ ಹೊಸ ಸಮಾಜ ನಿರ್ಮಾಣ ಆಗದು... ಮೇಲ್ಮಟ್ಟದ ಕೆಲವು ನಾಯಕರಿಂದ ಸಮಾಜವಾದ ಸೃಷ್ಟಿಯಾಗುತ್ತದೆಂದು ನಂಬುವುದು ಮೂರ್ಖತನ. ಸಮಾಜವಾದವನ್ನು ಆಟದಂತೆ ಆಡಲಾಗದು... ಅಧಿಕಾರ ಪೀಠಗಳ ಮೇಲೆ ಕೂತ ನಾಯಕರ ದೂರದ ಕರೆಗಳು ಜನರಲ್ಲಿ ಯಾವುದೇ ಸಂಚಲನವನ್ನುಂಟು ಮಾಡುತ್ತಿಲ್ಲ... ಪಕ್ಷ ರಾಜಕಾರಣದ ಆಟಪಾಠಗಳೂ ಜನರಲ್ಲಿ ಕುತೂಹಲ ಕೆರಳಿಸುತ್ತಿಲ್ಲ. ಅಧಿಕಾರಿಗಳಾಗಲೀ ನೌಕರಶಾಹಿಯಾಗಲೀ ಜನರನ್ನು ಕ್ರಿಯಾಶೀಲಗೊಳಿಸಲಸಾಧ್ಯ. ಏಕೆಂದರೆ ಅವರಲ್ಲಿ ನೈತಿಕ

ಅಧಿಕಾರವಾಗಲೀ, ಸೋದರತೆಯ ಅರಿವಾಗಲೀ, ಸೇವಾಕಾರ್ಯದ ಶ್ರದ್ಧೆಯಾಗಲೀ ಇಲ್ಲ... ಹಾಗಾದರೆ ಈ ಮಹಾಕಾರ್ಯವನ್ನು ಮಾಡುವುದಾದರೂ ಹೇಗೆ? ಕೆಲವೇ ಶಬ್ದಗಳಲ್ಲಿ ಹೇಳುವುದಾದರೆ ಈ ಪ್ರಶ್ನೆಗೆ ಉತ್ತರ ಇದೇ: 'ಮಹಾತ್ಮ ಗಾಂಧಿಯವರಲ್ಲಿಗೆ ಹಿಂದಿರುಗಿ'. ಜನರ ಬಳಿ ಹೋಗಬೇಕು-ಅವರೊಂದಿಗೆ ಬದುಕಲು, ದುಡಿಯಲು, ಕೈಹಿಡಿದು ನಡೆಸಿ ನೆರವಾಗಲು...."

■

೯. ರಾಷ್ಟ್ರದ ಆತ್ಮಸಾಕ್ಷಿ : ಲೋಕ ನಾಯಕ ಪಟ್ಟ

ಸೆಖೆದೊಪೋರಾ ಆಶ್ರಮವು ಸಮಾಜವಾದವನ್ನು ಸರ್ವೋದಯದಲ್ಲಿ ಲೀನಗೊಳಿಸುವ ಜಯಪ್ರಕಾಶರ ಕಲ್ಪನೆಯ ಅನುಸಾರವಾಗಿ ಅನೇಕ ಪ್ರಯೋಗಗಳಲ್ಲಿ ತೊಡಗಿತು. ಭೂದಾನ, ಗ್ರಾಮದಾನ, ಜೀವನದಾನದ ಪರಿಕಲ್ಪನೆಗಳು ಬಿಹಾರ ದಾನವೆಂಬ ಪರಿಕಲ್ಪನೆವರೆಗೂ ವಿಸ್ತರಿಸಿ, ಬಿಹಾರವು ಜಯಪ್ರಕಾಶರ ಸರ್ವೋದಯಕ್ರಾಂತಿಯ ಕಲ್ಪನೆಗೊಂದು ಭೂಮಿಕೆಯಾಗಿ ಪರಿಣಮಿಸಿತು. ಭಾರತ ಸರ್ಕಾರ ತನ್ನ ಪಂಚವಾರ್ಷಿಕ ಯೋಜನೆಯಡಿ ಆರಂಭಿಸಿದ್ದ ಸಾಮುದಾಯಿಕ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಹಳ್ಳಿಗಳಲ್ಲಿನ ಸ್ಥಳೀಯ ಕಸಬುಗಳಿಗೆ ಪೂರಕವಾಗಿ ಅವುಗಳ ತಂತ್ರಜ್ಞಾನವನ್ನು ಸುಧಾರಿಸುವ ಪ್ರಯತ್ನಗಳನ್ನು ಜಯಪ್ರಕಾಶರು ಆರಂಭಿಸಿದರು. ಈ ಸಂಬಂಧವಾಗಿ ಅವರು ಜಪಾನ್, ಇಸ್ರೇಲ್ ಮುಂತಾದ ದೇಶಗಳಿಂದ ಪರಿಣತರನ್ನು ಕರೆಸಿ ಮತ್ತು ಆಯ್ದ ಸರ್ವೋದಯ ಕಾರ್ಯಕರ್ತರನ್ನು ಆ ದೇಶಗಳಿಗೆ ತರಬೇತಿಗಾಗಿ ಕಳಿಸಿದರು. ಭಾರತೀಯ ಸಮಾಜವಾದವು ಪ್ರತಿಪಾದಿಸಿದ್ದ, ಎಣ್ಣೆ ಅಥವಾ ವಿದ್ಯುಚ್ಛಕ್ತಿ ಸಹಾಯದಿಂದ ಚಾಲಿತವಾಗುವ ಸಣ್ಣ ಪ್ರಮಾಣದ ಯಂತ್ರಗಳ ತಂತ್ರಜ್ಞಾನದ ಪ್ರಯೋಗಗಳನ್ನು ಕೃಷಿ-ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ನಡೆಸಿದರು.

ಈ ವಿವಿಧ ರೀತಿಯ ಪ್ರಯೋಗಗಳಲ್ಲಿ ತೊಡಗಿ ಜನರ ಸ್ವಭಾವವನ್ನು ಹತ್ತಿರದಿಂದ ಕಾಣತೊಡಗಿದಂತೆ, ಜಯಪ್ರಕಾಶರಿಗೆ ಗಾಂಧಿಯವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸದೆ ಇಂತಹ ಪ್ರಯೋಗಗಳು ಬಹುಕಾಲ ಬಾಳಲಾರವು ಎಂದೆನ್ನಿಸತೊಡಗಿತು. ಹಾಗಾಗಿ ಗ್ರಾಮಗಳನ್ನು ಆದಷ್ಟೂ ಸ್ವಯಮಾಡಳಿತ ಘಟಕಗಳನ್ನಾಗಿ ರೂಪಿಸಿ, ಹೊಸತಂತ್ರಜ್ಞಾನದ ಈ ಪ್ರಯೋಗಗಳನ್ನು ಅವುಗಳ ಸಾಮಾಜಿಕ-ಆರ್ಥಿಕ ಆಡಳಿತದೊಡನೆ ಸಾವಯವವಾಗಿ ಬೆಸೆಯುವ ಆಲೋಚನೆ ಮಾಡಿದರು. ಆ ಹೊತ್ತಿಗೆ–೧೯೫೯–ಭಾರತ ಸರ್ಕಾರವು ತನ್ನದೇ ಕಲ್ಪನೆಯ ಪಂಚಾಯತ್ ರಾಜ್ ಕಾಯಿದೆಯನ್ನು ಜಾರಿಗೊಳಿಸಿ ಮೂರು ಸ್ತರಗಳಲ್ಲಿ ರಾಷ್ಟ್ರದ ಆಡಳಿತವನ್ನು ವಿಕೇಂದ್ರೀಕರಿಸುವ ಪ್ರಯತ್ನಕ್ಕೆ ಕೈಹಾಕಿತ್ತು. ಈ ವಿಷಯದಲ್ಲಿ ಪರಿಣತರೆನಿಸಿದ್ದ ಎಸ್. ಕೆ. ಡೇ ಅವರಿಗೆ ಇದರ ಜವಾಬ್ದಾರಿ ವಹಿಸಿದ್ದು, ಈ ಸರ್ಕಾರಿ ಕಾರ್ಯಕ್ರಮಕ್ಕೆ ಜಯಪ್ರಕಾಶರು ತಮ್ಮ ಸರ್ವೋದಯ ಕಾರ್ಯಕರ್ತರ ಪಡೆಯೊಂದಿಗೆ 'ಅಖಿಲ ಭಾರತ ಪಂಚಾಯತ್ ಪರಿಷತ್' ಎಂಬ ಸ್ವಯಂಸೇವಾ ಸಂಸ್ಥೆಯ ಸ್ಥಾಪನೆಯ ಮೂಲಕ ಜೀವಕೊಡುವ ಸಂಕಲ್ಪ ಮಾಡಿದರು. ಈ ಸಂಕಲ್ಪದ ಪರಿಣಾಮವೇ ಅವರ 'ಭಾರತದ ರಾಜಕೀಯ ವ್ಯವಸ್ಥೆಯ ಪುನಾರಚನೆ' ಎಂಬ ೮೯ ಪುಟಗಳ ಅಧ್ಯಯನ ಪುಸ್ತಕ.

ಅವರ ಈ ಅಧ್ಯಯನದ ಪ್ರಕಾರ ಮನುಷ್ಯ ಕೇವಲ ವ್ಯಕ್ತಿಯಲ್ಲ; ಮೂಲತಃ ಆತ ಆಂತರಿಕವಾಗಿ ಸಾಮುದಾಯಿಕ ಬಾಳ್ವೆಗೆ ಹಾತೊರೆಯುವ ಸಾಮಾಜಿಕ ಪ್ರಾಣಿ. ಆತನ ಈ ಹುಟ್ಟುಗುಣವನ್ನು ಬಳಸಿಕೊಂಡು; ಹಂಚಿಕೊಳ್ಳುವ, ಭಾಗವಹಿಸುವ, ಜೊತೆಯಾಗಿ ಬದುಕುವ ತತ್ವಗಳನ್ನಾಧರಿಸಿದ ಸಾಮುದಾಯಿಕ ಜೀವನಶೈಲಿಯನ್ನು ರೂಪಿಸುವುದಾದರೆ, ಜಾತಿ, ಮತ, ಜನಾಂಗ, ವರ್ಗ ಹಾಗೂ ರಾಜಕೀಯವನ್ನು ಮೀರಿದ ಒಂದು ಆಡಳಿತ ವ್ಯವಸ್ಥೆಯನ್ನು ಜಾರಿಗೊಳಿಸಬಹುದೆಂಬುದು ಅವರ ಕಾಣ್ಕೆಯಾಗಿತ್ತು. ಅವರ ಪ್ರಕಾರ ರಾಜಕೀಯ ಪಕ್ಷಗಳು ರಾಜ್ಯವ್ಯವಸ್ಥೆಯೊಳಗಿನ ರಾಜ್ಯವ್ಯವಸ್ಥೆಗಳಂತಿದ್ದು, ರಾಜ್ಯವ್ಯವಸ್ಥೆಯ ಎಲ್ಲ ಅಧಿಕಾರ ಗುಣಗಳನ್ನೂ ಆವಾಹಿಸಿಕೊಂಡಿವೆ. ಈ ಕಾರಣದಿಂದಾಗಿ, ರಾಜಕೀಯ ಪಕ್ಷಗಳ ಮುಖಾಂತರ ಪ್ರಜಾಪ್ರಭುತ್ವದ ಪರಮಗುರಿಗಳನ್ನು ಸಾಧಿಸಲು ಅಸಾಧ್ಯ. ಆದುದರಿಂದ ಸಣ್ಣ ಸಾಮುದಾಯಿಕ ಘಟಕವಾಗಿರುವ ಗ್ರಾಮದ ಹಂತದಿಂದ ರಾಜಕೀಯ ಒಮ್ಮತದ ಪ್ರತಿನಿಧಿಗಳನ್ನು ಆಯ್ಕೆ ಮಾಡಿ, ಆ ಪ್ರತಿನಿಧಿಗಳು ಮುಂದಿನ ಹಂತಗಳ ಆಡಳಿತ ಸಂಸ್ಥೆಗಳಿಗೆ ಒಮ್ಮತದ ಪ್ರತಿನಿಧಿಯನ್ನು ಆಯ್ಕೆ ಮಾಡಿ ಕಳಿಸುವ ಮೂಲಕ—ಸಮಾಜವಾದದ ಆತ್ಯಂತಿಕ ಗುರಿಯಾದ—ರಾಜ್ಯವ್ಯವಸ್ಥೆ ಇದ್ದರೂ ಇಲ್ಲದಂತಿರುವ ಸ್ಥಿತಿಯನ್ನು ಮುಟ್ಟಬಹುದೆಂಬುದು ಜಯಪ್ರಕಾಶರ ಪ್ರತಿಪಾದನೆಯಾಗಿತ್ತು.

ಇದಕ್ಕಾಗಿ ನಿಯಮಿತವಾಗಿ ಎಲ್ಲ ಹಳ್ಳಿಗರೂ ಭಾಗವಹಿಸಲು ಅವಕಾಶವಿರುವ ಗ್ರಾಮಸಭೆಗಳು ನಡೆಯಬೇಕು. ಅದು ಒಮ್ಮತದಿಂದ ಆಯ್ಕೆ ಮಾಡುವ ಗ್ರಾಮ ಪಂಚಾಯತ್, ಹಳ್ಳಿಯ ಯಾರೂ ಆಹಾರ, ಕೆಲಸ, ಶಿಕ್ಷಣ, ವಸತಿ, ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿರುವಂತೆ ನೋಡಿಕೊಳ್ಳುವ ಕೆಲಸದಲ್ಲಿ ತೊಡಗಬೇಕು. ಇದೇ ನಿಜವಾದ ಪ್ರಜಾಪ್ರಭುತ್ವದ ಬುನಾದಿ ಎಂಬುದು ಕ್ಷೇತ್ರ ಕಾರ್ಯವನ್ನಾಧರಿಸಿದ ಅವರ ಅಧ್ಯಯನದ ಪರಿಕಲ್ಪನೆಯಾಗಿತ್ತು. ಭೂದಾನ, ಗ್ರಾಮದಾನ ಮತ್ತು ಸಣ್ಣ ಪ್ರಮಾಣದ ತಂತ್ರಜ್ಞಾನವನ್ನಾಧರಿಸಿದ ಕೃಷಿ ಹಾಗೂ ಕೃಷಿ ಸಂಬಂಧಿ ಕಸುಬುಗಳ ಸಹಕಾರೀ ತತ್ವಾಧರಿತ ನಿರ್ವಹಣೆ—ಈಮುಂತಾದ ಸರ್ವೋದಯ ಕಾರ್ಯಕ್ರಮಗಳ ಮೂಲಕ ತಮ್ಮ ಕಲ್ಪನೆಯ ಗ್ರಾಮಸ್ವರಾಜ್ಯದ ಅನುಷ್ಠಾನಕ್ಕಾಗಿ, ಪಂಚಾಯತ್ ರಾಜ್ ಖಾತೆಯ ಸಹಯೋಗದೊಂದಿಗೆ ಯೋಜನೆಗಳನ್ನು ರೂಪಿಸಲಾಯಿತು.

ತಪ್ಪಿದ ತಾಳಮೇಳ-ಸೀಮಿತಗೊಂಡ ಕಾರ್ಯಕ್ಷೇತ್ರ

ಜಯಪ್ರಕಾಶರ ಈ ಪರಿಕಲ್ಪನೆಯ ಪ್ರಯೋಗಕ್ಕೆ ಮ್ಯಾಗ್ಸಸೆ ಪ್ರತಿಷ್ಠಾನದಿಂದ ಪ್ರಶಸ್ತಿಯ ರೂಪದಲ್ಲಿ ಪ್ರೋತ್ಸಾಹ ಸಿಕ್ಕಿತಾದರೂ, ಅನುಷ್ಠಾನದ ಹಂತದಲ್ಲಿ ಹಲವು ತೆರನ ಅಡ್ಡಿ ಆತಂಕಗಳು ಎದುರಾಗಲಾರಂಭಿಸಿದವು. ಈ ಮಹಾ ಪ್ರಯೋಗದ ಅಡಿಪಾಯವಂತಿದ್ದ ಮಹತ್ವಾಕಾಂಕ್ಷೆಯ ಭೂದಾನ ಚಳುವಳಿಯೇ ತನ್ನ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳ ಲಾರಂಭಿಸಿತ್ತು. ವಿನೋಬಾರ ಸರ್ವೋದಯ ಸೇನೆಯ ಆವೇಶಪೂರ್ಣ ಪ್ರಚಾರಾಂದೋಳನ

ಎಂತಹ ಸ್ಥಿತಿಯನ್ನುಂಟು ಮಾಡಲಾರಂಭಿಸಿತೆಂದರೆ—ದಾನ ಪಡೆದ ಭೂಮಿಯೆಷ್ಟು, ಅವರಲ್ಲಿ ವಿತರಣೆಯಾದದ್ದೆಷ್ಟು; ಆ ವಿತರಣೆಯಾದರೂ ಎಷ್ಟು ಸುವ್ಯವಸ್ಥಿತವಾಗಿ ನಡೆದು, ಭೂಮಿಪಡೆದವರು ನಿಜವಾಗಿ ಆ ಭೂಮಿಯಲ್ಲಿ ಉಳಮೆ ಮಾಡುವಂತಹ ವಿಶ್ವಾಸದ ವಾತಾವರಣ ನಿರ್ಮಾಣವಾಗಿದೆಯೇ ಮುಂತಾದ ಪ್ರಶ್ನೆಗಳಿಗೆ ಯಾರಿಂದಲೂ ಸ್ಪಷ್ಟ ಉತ್ತರಗಳೇ ಸಿಗದಂತಾಯಿತು.... ಸದಾ ಸಂಚಾರದಲ್ಲಿರುತ್ತಿದ್ದ ಜಯಪ್ರಕಾಶರಿಗೆ, ಸರ್ವೋದಯ ಕಾರ್ಯಕರ್ತರ ಅತ್ಯುತ್ಸಾಹ, ಅನೌಪಚಾರಿಕವೆನಿಸುವ ಕಾರ್ಯಶೈಲಿ, ಅದರಿಂದ ಹೊಮ್ಮುತ್ತಿದ್ದ ಅವಾಸ್ತವಿಕವಾದ ಅಂಕಿ ಅಂಶಗಳು, ಅವರ ನಡುವಿನ ಸ್ವಭಾವ ಜನ್ಯವಾದ ಘರ್ಷಣೆಗಳು, ಪರಸ್ಪರ ಆರೋಪಗಳು ಮುಂತಾದ ಸಮಸ್ಯೆಗಳನ್ನು ಏಕಾಂಗಿಯಾಗಿ ನಿರ್ವಹಿಸಿ ತಮ್ಮ ಮಹತ್ವಾಕಾಂಕ್ಷೆಯ ಪ್ರಯೋಗವನ್ನು ಸುವ್ಯವಸ್ಥಿತ ರೀತಿಯಲ್ಲಿ ಅನುಷ್ಠಾನಗೊಳಿಸಲು ಅಸಾಧ್ಯವೆನಿಸತೊಡಗಿತು. ವಿನೋಬಾ ನೇತೃತ್ವದಲ್ಲಿ ತರ ಬೇತಿಗೊಂಡು ಬಂದಿದ್ದ ಕಾರ್ಯಕರ್ತರ ಕಾರ್ಯಶೈಲಿಗೂ ಜಯಪ್ರಕಾಶರ ಆಲೋಚನಾ ಲಹರಿಗೂ ತಾಳಮೇಳವಾಗದೆ ಗ್ರಾಮಸಭೆಗಳು ಸರ್ಕಾರಿ ಪಂಚಾಯತ್ ಸಭೆಗಳಾಗತೊಡಗಿದವು. ಜಯಪ್ರಕಾಶರು ಸೆಖೆದೊವೋರಾ ಆಶ್ರಮಕ್ಕೆ ಬರುವುದೇ ಅಪರೂಪವಾಗತೊಡಗಿತು.

ಈ ಹಿನ್ನೆಲೆಯಲ್ಲಿ ಜಯಪ್ರಕಾಶರ ಕನಸನ್ನು ಅವರ ಸಮಾಜವಾದಿ ಸ್ನೇಹಿತರು, ಸಮಾಜ ವಿಜ್ಞಾನಿಗಳು 'ಪಲಾಯನವಾದಿ', 'ತನ್ನ ಬೆಳಕಿನಿಂದಲೇ ಉಂಟುಮಾಡಿಕೊಂಡ ಕುರುಡು', 'ಕಾಗದದ ಮೇಲಿನ ಸಾಧನೆಗಳು' ಮುಂತಾಗಿ ಟೀಕಿಸತೊಡಗಿದರು. ಈ ಟೀಕೆಯೇ ಮಧ್ಯೆಯೇ ವಿನೋಬಾ ಅವರು ಬಿಹಾರದ ಸರ್ವೋದಯ ಮಂಡಳಿ ಅತಿ ಸಾಂಸ್ಥಿಕಗೊಂಡಿದೆಯೆಂದು ಹೇಳಿ ಅದನ್ನು ವಿಸರ್ಜಿಸಿದರು. ಜಯಪ್ರಕಾಶರು ಕೂಡಲೇ ಇದಕ್ಕೆ ಪರ್ಯಾಯವಾಗಿ ಐದುಸಾವಿರ ಜನಸಂಖ್ಯೆಗೆ ಒಬ್ಬರಂತೆ, ಗ್ರಾಮರಾಜ್ಯ ನಿರ್ಮಾಣಕ್ಕಾಗಿ ಕಾರ್ಯಕರ್ತರಾಗಿ ದುಡಿಯುವ ತರುಣ ಶಾಂತಿಸೇನೆಯ ಸ್ಥಾಪನೆಗೆ ಮುಂದಾದರು. ತದನಂತರ ಜಯಪ್ರಕಾಶರು ತಮ್ಮ ಪ್ರಯೋಗವು ಗೊಂದಲದಲ್ಲಿ ಹರಿದು ಹಂಚಿಹೋಗದಂತೆ ನೋಡಿಕೊಳ್ಳಲು ತಮ್ಮ ಕ್ಷೇತ್ರ ಕಾರ್ಯವನ್ನು ಗಯಾ, ಪೂರ್ನಿಯಾ ಹಾಗೂ ಸಂತಾಲ್ ಪರಗಣ ಜಿಲ್ಲೆಗಳಿಗಷ್ಟೇ ಸೀಮಿತಗೊಳಿಸಿಕೊಂಡರು.

ಕ್ಷಾಮ ಪರಿಹಾರ ಕಾರ್ಯಾಚರಣೆ-ಕೃಷಿ ಪುನಶ್ಚೇತನ

ಇವೆಲ್ಲದರ ಮಧ್ಯೆ ೧೯೬೭ರ ಹೊತ್ತಿಗೆ ಬಿಹಾರವನ್ನು ಕಾಡಲಾರಂಭಿಸಿದ ಭೀಕರ ಕ್ಷಾಮ ಜಯಪ್ರಕಾಶರ ಗಮನ ಸೆಳೆಯಿತು. ಜಯಪ್ರಕಾಶರು ಪಾಟ್ನಾದಲ್ಲಿ ಸರ್ವಪಕ್ಷಗಳ ಸಭೆ ಕರೆದು ಬಿಹಾರ ಕ್ಷಾಮ ಪರಿಹಾರ ಸಮಿತಿ ಎಂಬ ಸರ್ಕಾರೇತರ ವೇದಿಕೆ ರಚಿಸಿದರು. ಈ ಸಮಿತಿಗೆ ಅಧ್ಯಕ್ಷರಾದ ಅವರು ಆಗ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದ ತಮ್ಮ ಹಳೆಯ ಸಮಾಜವಾದಿ ಗೆಳೆಯ ಅಶೋಕ ಮೆಹ್ತಾ ಹಾಗೂ ಬಿಹಾರ ವಿಧಾನಸಭೆಗೆ ಆಯ್ಕೆಯಾಗಿದ್ದ ಇನ್ನೋರ್ವ ಹಳೆಯ ಸಮಾಜವಾದಿ ಮಿತ್ರ ರಮಾನಂದ ತಿವಾರಿ ಅವರ

ಸರ್ಕಾರದೊಂದಿಗೆ ಕ್ಷಾಮಪರಿಹಾರ ಕಾರ್ಯದ ಸಮನ್ವಯ ಹಾಗೂ ಮೇಲ್ವಿಚಾರಣೆಯ ಜವಾಬ್ದಾರಿ ವಹಿಸಿಕೊಂಡರು. ರಾಷ್ಟ್ರೀಯ ಅಂತರಾಷ್ಟ್ರೀಯ ಸಂಘ ಸಂಸ್ಥೆಗಳಿಗೆ ನೆರವಿಗಾಗಿ ಮನವಿ ಕಳಿಸಿ, ವಿವಿಧ ದೇಶಗಳಿಂದ ಸ್ವಯಂ ಸೇವಕರನ್ನು ಆಹ್ವಾನಿಸಿ ಹಗಲು ರಾತ್ರಿಯೆನ್ನದೆ ಇಡೀ ಬಿಹಾರದಾದ್ಯಂತ ಸ್ವಯಂ ಸೇವಕರ ದಂಡಿನೊಡನೆ ಎರಡು ವರ್ಷಗಳ ಕಾಲ ೮೦ ಲಕ್ಷ ಜನರಿಗೆ ಅನ್ನ ಬಟ್ಟೆಗಳನ್ನು ಜಯಪ್ರಕಾಶ್ ಒದಗಿಸಿದರು. ತಮ್ಮ ಸಂಘಟನಾ ದಕ್ಷತೆ, ದಣಿವರಿಯದ ದುಡಿಮೆ, ದೇಣಿಗೆಯಾಗಿ ಸಂಗ್ರಹಿಸಿದ್ದ ೪೦ ಲಕ್ಷ ರೂಪಾಯಿಗಳು ಹಾಗೂ ಪ್ರಧಾನಮಂತ್ರಿಗಳ ಪರಿಹಾರ ನಿಧಿಯಿಂದ ಬಂದಿದ್ದ ೬೦ ಲಕ್ಷ ರೂಪಾಯಿಗಳಷ್ಟು ಹಣವನ್ನು ಪೈಸೆ ಪೈಸೆಗೂ ಲೆಕ್ಕವಿಟ್ಟು ಔಚಿತ್ಯಪೂರ್ಣವಾಗಿ ಪರಿಹಾರ ಕಾರ್ಯಕ್ಕಾಗಿ ವಿತರಿಸಿದ ರೀತಿ ಇಡೀ ರಾಷ್ಟ್ರವನ್ನು ದಂಗುಬಡಿಸಿತು. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರಿ ಯಂತ್ರವನ್ನು ಈ ದಿಸೆಯಲ್ಲಿ ಚುರುಕುಗೊಳಿಸುವಲ್ಲಿ ಪ್ರದರ್ಶಿತವಾದ ಅವರ ವ್ಯಕ್ತಿತ್ವದಲ್ಲಿನ ಮಾಂತ್ರಿಕತೆ, ಅವರನ್ನು ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದಲ್ಲಿ ದಂತಕಥೆಯನ್ನಾಗಿಸಿತು.

ಜಯಪ್ರಕಾಶರು ಕೈಗೊಂಡಿದ್ದ ಕ್ಷಾಮ ಪರಿಹಾರ ಕಾರ್ಯಕ್ರಮ ಕೇವಲ ಅನ್ನ ಬಟ್ಟೆ ವಿತರಣೆಗಳಷ್ಟೇ ಸೀಮಿತಗೊಳ್ಳದೇ, ಬಿಹಾರದಾದ್ಯಂತ ೧೯೭೦ರ ಹೊತ್ತಿಗೆ ಒಂದು ಹೊಸ ಕೃಷಿಕ್ರಾಂತಿಯನ್ನೇ ಉಂಟುಮಾಡುವಷ್ಟು ದೂರದರ್ಶಿತ್ವವನ್ನೂ ಪರಿಣಾಮಶೀಲತೆಯನ್ನೂ ಹೊಂದಿತ್ತು. ಕೆಲಸಕ್ಕಾಗಿ ಕಾಳು, ಬೀಜ ಮತ್ತು ಗೊಬ್ಬರ, ಕೃಷಿ ಸಾಲ, ವಿದ್ಯುತ್ ಮತ್ತು ಡೀಸಲ್ ಪಂಪ್‌ಗಳ ವಿತರಣೆ, ಬಾವಿ, ಕೆರೆ, ಕಟ್ಟೆ, ಧಾನ್ಯ ದಾಸ್ತಾನು ಕೇಂದ್ರಗಳ ದುರಸ್ತಿ ಮುಂತಾದ ಕಾರ್ಯಚಟುವಟಿಕೆಗಳೂ ಈ ಸಂದರ್ಭದಲ್ಲಿ ವ್ಯಾಪಕವಾಗಿ ನಡೆದವು. ಬಿಹಾರದ ಕ್ಷಾಮ, ಬಿಹಾರಕ್ಕೆ ಒಳ್ಳೆಯದನ್ನೇ ಮಾಡಿತೇನೋ ಎನ್ನುವಷ್ಟರಮಟ್ಟಿಗೆ, ಕ್ಷಾಮ ಮುಗಿದಾಗ ಅಲ್ಲಿನ ರೈತ ಸಮುದಾಯ ಕೃಷಿ ಸಂಪನ್ನವಾಗಿತ್ತು. ಜಯಪ್ರಕಾಶರ ಆಶ್ರಮದ ದೇಶೀ ಹಾಗೂ ವಿದೇಶೀ ಕಾರ್ಯಕರ್ತರನ್ನೊಳಗೊಂಡ ಸ್ವಯಂಸೇವಾ ಸಂಸ್ಥೆಯೊಂದು ಬಿಹಾರಕ್ಕಾಗಿ ಒಂದು ಸ್ಥಾಯೀ ಜಲಾಭಿವೃದ್ಧಿ ಸಂಘವನ್ನೇ ರಚಿಸಿಕೊಟ್ಟಿತು. ಇದರೊಂದಿಗೆ ಇದಕ್ಕೆ ಪೂರಕವಾಗಿಯೇ ಸ್ಥಾಪಿತವಾದ ತರುಣಶಾಂತಿ ಸೇನೆಯ ಜಾಲವೂ ಸೇರಿಕೊಂಡು, ಜಯಪ್ರಕಾಶರೆಂದರೆ ಕೇವಲ ತನ್ನ ಕನಸಿನ ಹಿಂದೆ ಹೊರಟ ಒಂಟಿ ಪಯಣಿಗನಲ್ಲ; ಬದಲಾಗಿ ಒಂದು ನಿರಂತರ ಸಾಮೂಹಿಕ ಪ್ರಯೋಗಕ್ಕೆ ಮತ್ತೊಂದು ಹೆಸರೂ ಹೌದು ಎಂಬಷ್ಟರಮಟ್ಟಿಗೆ, ರಾಷ್ಟ್ರಾದ್ಯಂತ ಅವರ ಬಗ್ಗೆ ಸದಾಶಯ ಕ್ರೋಢೀಕೃತಗೊಳ್ಳತೊಡಗಿತು.

ಹೊಸಶಕ್ತಿ – ಲೌಕಿಕ ಪ್ರಶ್ನೆಗಳು

ಇದರ ಪರಿಣಾಮವೋ ಎಂಬಂತೆ ಕಾವು ಕಳೆದುಕೊಂಡಿದ್ದ ಭೂದಾನ ಮತ್ತು ಗ್ರಾಮದಾನ ಚಳುವಳಿಗಳು ಮತ್ತೆ ಚಿಗುರಿಕೊಂಡವು. ದರ್ಭಾಂಗಾ ಜಿಲ್ಲೆಯ ಜನತೆ ತನ್ನ ವ್ಯಾಪ್ತಿಯ ಮುಕ್ಕಾಲುಭಾಗ ಭೂಮಿಯನ್ನು ದಾನ ಮಾಡಿ ಜಿಲ್ಲಾ ದಾನ ಎಂಬ ಪರಿಕಲ್ಪನೆಯನ್ನು ಹುಟ್ಟು ಹಾಕಿದ್ದರ ಪರಿಣಾಮವಾಗಿ ಜಯಪ್ರಕಾಶರಲ್ಲಿ 'ಬಿಹಾರ ದಾನ'ದ

ಪರಿಕಲ್ಪನೆ ಮೂಡಿತು: ಬಿಹಾರ, ತನ್ನ ಔಪಚಾರಿಕ ರಾಜಕೀಯ ವ್ಯವಸ್ಥೆಯ ಹೊರತಾಗಿಯೂ ಜಯಪ್ರಕಾಶರ ಸೂತ್ರಧಾರತ್ವದ ಪ್ರಯೋಗಗಳ ಸಾಧ್ಯತೆಗಳಿಗೆ ತನ್ನನ್ನು ಅನೌಪಚಾರಿಕವಾಗಿ ಒಪ್ಪಿಸಿಕೊಂಡಿತ್ತು. ಆ ಮಟ್ಟಿಗೆ, ಅವರು ಇಡೀ ಬಿಹಾರದ ಮಹಾಪೋಷಕರೆಂದು ಮಾನ್ಯ ಮಾಡಲ್ಪಟ್ಟಿದ್ದರು. ಈ ಜನ ಬೆಂಬಲದಿಂದ ಹೊಸಶಕ್ತಿ ತುಂಬಿಕೊಂಡ ಜಯಪ್ರಕಾಶರು ತಮ್ಮ 'ಗ್ರಾಮದಾನ' ಚಳುವಳಿಯನ್ನು ಪುನಶ್ಚೇತನಗೊಳಿಸಿದರು. ಗ್ರಾಮಸಭೆಗಳ ಪ್ರಜಾಸತ್ತಾತ್ಮಕ ಕಾರ್ಯಕಲಾಪಗಳ ಮೂಲಕ ಒಂದು ಪಂಚಾಯತ್ ವ್ಯಾಪ್ತಿಯ ಗ್ರಾಮಸ್ಥರನ್ನು, ಭೂಮಿ ಮೇಲಿನ ಅವರ ಅಧಿಕೃತ ಒಡೆತನವನ್ನು ದಾನ ಪಡೆದುಕೊಂಡು, ಒಂದು ಗ್ರಾಮಕುಟುಂಬ ಸ್ವರೂಪದ ಸಮುದಾಯವನ್ನಾಗಿ ತರಬೇತುಗೊಳಿಸುವುದು ಈ ಚಳುವಳಿಯ ಹೊಸ ಉದ್ದೇಶವಾಗಿದ್ದಿತು. ಇದಕ್ಕಾಗಿ ಜಯಪ್ರಕಾಶರು ಸರ್ವೋದಯ ಕಾರ್ಯಕರ್ತರನ್ನೊಳಗೊಂಡ ಹಲವು ತಂಡಗಳ ಒಂದು ಜಾಲವನ್ನೇ ರಾಜ್ಯಾದ್ಯಂತ ನಿರ್ಮಿಸಿದರು. ಇದರ ಪರಿಣಾಮವಾಗಿ ಬಿಹಾರದ ಉತ್ತರದ ಹಲವು ಜಿಲ್ಲೆಗಳಲ್ಲಿ ಪಂಚಾಯತ್‌ರಾಜ್ ತನ್ನದೇ ಅನೌಪಚಾರಿಕ ರೀತಿಯ ನೆಲೆಯಲ್ಲಿ ಸ್ಥಾಪನೆಗೊಂಡು ಎಲ್ಲರ ಗಮನ ಸೆಳೆಯಿತು.

ನಕ್ಸಲೀಯರ ಕೆಂಗಣ್ಣು - ಅಗ್ನಿಪರೀಕ್ಷೆಯ ಕಾಲ

ಆದರೆ ಈ ವ್ಯವಸ್ಥೆ ತನ್ನ ಅನೌಪಚಾರಿಕತೆಯಲ್ಲಿಯೇ ಕೆಲವು ವಲಯಗಳಲ್ಲಿ ಸಂದೇಹಗಳನ್ನು ಉಂಟುಮಾಡುವಂತಿತ್ತು. ನೈತಿಕ ಉದ್ದೀಪನದ ಮೇಲೆ ನಿಂತಿರುವ ಈ ವ್ಯವಸ್ಥೆ, ಅಂತಹ ನೈತಿಕ ಉದ್ದೀಪನಶಕ್ತಿಯೊಂದು ಇರುವವರೆಗೂ ಉಳಿಯಬಲ್ಲದು. ಅಲ್ಲದೆ, ಈ ಹೊಸವ್ಯವಸ್ಥೆ ಜನಸಾಮಾನ್ಯರ ಲೌಕಿಕ ಅಭಿವೃದ್ಧಿ ಕಡೆ ಗಮನವನ್ನಾದರೂ ಹರಿಸಿದೆಯೇ? ಮರುವಿತರಣೆಯಾದ ಭೂಮಿಯಿಂದ ಆಹಾರ ಉತ್ಪಾದನೆ ಹೆಚ್ಚಿದೆಯೇ? ಆ ಹಳ್ಳಿಗಳ ಮಕ್ಕಳಿಗೆ ಪೌಷ್ಟಿಕ ಆಹಾರದ ಲಭ್ಯತೆ ಹೆಚ್ಚಾಗಿದೆಯೇ? ಅವರ ಶಾಲೆಗಳ ಗುಣಮಟ್ಟ ವೈದ್ಯಕೀಯ ಸೌಲಭ್ಯ ಸುಧಾರಿಸಿದೆಯೇ? ಮುಂತಾದ ಕಣ್ಣೆದುರಿನ ಪ್ರಶ್ನೆಗಳನ್ನು ಆಂದೋಳನ ಎದುರಿಸಬೇಕಾಯಿತು. ಜೊತೆಗೆ ಈ ವ್ಯವಸ್ಥೆ ಬಡವರ, ವಂಚಿತರ, ಶೋಷಿತರ, ಆರ್ಥಿಕ-ಸಾಮಾಜಿಕ ಹಕ್ಕುಗಳನ್ನು ಒತ್ತೆಯಾಗಿಸಿಕೊಂಡು ಮಾನವ ಇತಿಹಾಸಕ್ಕೆ ಮೀಟುಗೋಲೆಂದು ಹೇಳಲಾಗುವ ವರ್ಗ ಹೋರಾಟವನ್ನು ಹತ್ತಿಕ್ಕುತ್ತಿದೆ ಎಂಬ ಟೀಕೆಗೂ ಗುರಿಯಾಗತೊಡಗಿತ್ತು.

ಈ ಹಿನ್ನೆಲೆಯಲ್ಲಿ, ಆ ಹೊತ್ತಿಗೆ ಬಂಗಾಳದಲ್ಲಿ ಹುಟ್ಟಿ ಬೆಳೆದು ಬಿಹಾರಕ್ಕೂ ಹಬ್ಬಿದ್ದ ನಕ್ಸಲೀಯರ ಚಳುವಳಿಯ ಕೆಂಗಣ್ಣು ಜಯಪ್ರಕಾಶರ ಪ್ರಯೋಗದ ಮೇಲೆ ಬಿತ್ತು. ಜಯಪ್ರಕಾಶರು ೧೯೭೦ರ ಜೂನ್‌ನಲ್ಲಿ ಅಸ್ವಸ್ಥರಾಗಿ ಹಿಮಾಲಯ ತಪ್ಪಲಿನ ಪೌರಿ ಎಂಬ ಗಿರಿಧಾಮದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಮಯದಲ್ಲಿ ಬಿಹಾರದ ಮುಜಾಫರ್‌ಪುರದಿಂದ ಅವರಿಗೊಂದು ಪತ್ರ ಬಂದಿತು. ಅದರಲ್ಲಿ ಜಿಲ್ಲಾ ಸರ್ವೋದಯ ಮಂಡಲಿಯ ಇಬ್ಬರು ಪದಾಧಿಕಾರಿಗಳನ್ನು ಕೊಲ್ಲುವುದಾಗಿ ನಕ್ಸಲೀಯ ಗುಂಪಿನಿಂದ ಅವರಿಗೆ ಪತ್ರಗಳನ್ನು

ಕಳುಹಿಸಲಾಗಿದೆ ಎಂದು ತಿಳಿಸಲಾಗಿತ್ತು. ಆಗ ನಕ್ಸಲೀಯರು ಜಮೀನ್ದಾರರು, ಲೇವಾದೇವಿಗಾರರು ಹಾಗೂ ಅವರ ಪರವಿರುವ 'ವರ್ಗ ಶತ್ರು'ಗಳಿಗೆ ಹೀಗೆ ಪತ್ರ ಬರೆದು, ದಿನ ಹಾಗೂ ಸಮಯ ತಿಳಿಸಿ ಕೊಲ್ಲುವ ಪರಿಪಾಠವೇ ನಡೆದಿತ್ತು. ಇದನ್ನು ತಿಳಿದಿದ್ದ ಜಯಪ್ರಕಾಶರು ಕೂಡಲೇ, ನಕ್ಸಲೀಯ ಚಟುವಟಿಕೆಯ ಕೇಂದ್ರವೆಂದು ಹೆಸರಾಗಿದ್ದ ಮುಷೇಹರಿ ಎಂಬ ಸ್ಥಳಕ್ಕೆ ಧಾವಿಸಿಬಂದರು. ಕೊಲೆ ಬೆದರಿಕೆಗೆ ಗುರಿಯಾಗಿದ್ದ ಇಬ್ಬರು ಪದಾಧಿಕಾರಿಗಳನ್ನು ಹುಡುಕಿಸಿ ಧೈರ್ಯ ತುಂಬಿದರು. ನಕ್ಸಲೀಯರ ಪ್ರಭಾವಕ್ಕೆ ಸಿಕ್ಕಿದ್ದ ಮುಷೇಹಾರಿ ವಿಭಾಗದಾದ್ಯಂತ ತಮ್ಮ ಪತ್ನಿ ಪ್ರಭಾವತಿ ಹಾಗೂ ಸರ್ವೋದಯ ಕಾರ್ಯಕರ್ತರೊಡನೆ ಸಭೆ, ಮೆರವಣಿಗೆಗಳನ್ನು ಸಂಘಟಿಸುತ್ತಾ ಪ್ರವಾಸ ಕೈಗೊಂಡರು. ನಕ್ಸಲ್‌ವಾದ ಎಂಬುದು ಅಸಮಾನ ಸಮಾಜವು ಸಮಾನತೆಯೆಡೆಗೆ ನಡೆಯಲು ನಿರಾಕರಿಸುತ್ತಿರುವ ಪ್ರವೃತ್ತಿಗೆ ವ್ಯಕ್ತವಾಗುತ್ತಿರುವ ಸಹಜ ತೀಕ್ಷ್ಣ ಪ್ರತಿಕ್ರಿಯೆ ಎಂದು ವ್ಯಾಖ್ಯಾನಿಸಿದ ಜಯಪ್ರಕಾಶರು, ಸಾಮಾನ್ಯ ಜನತೆ ಹಾಗೂ ನಕ್ಸಲೀಯರಿಬ್ಬರನ್ನೂ ಉದ್ದೇಶಿಸಿ ಮಾತನಾಡುತ್ತಾ ಆ ಪ್ರದೇಶದಲ್ಲಿ ಭೂದಾನ ಚಳುವಳಿಯನ್ನು ತೀವ್ರಗೊಳಿಸಿದರು:

"ಹಿಂಸೆಯನ್ನು ಮೂಲತಃ ಹುಟ್ಟುಹಾಕಿರುವವರು ನಕ್ಸಲೀಯರಲ್ಲ. ಆತ್ಮಸಾಕ್ಷಿ ಕಳೆದಕೊಂಡಿರುವ ಜಮೀನ್ದಾರರು, ದುರಾಸೆಯ ಲೇವಾದೇವಿಗಾರರು, ಭೂಮಿತಿ ಕಾಯಿದೆಯನ್ನು ಸಮರ್ಪಕವಾಗಿ ರೂಪಿಸದ, ಅದನ್ನು ಜಾರಿಗೊಳಿಸದ ರಾಜಕಾರಣಿಗಳು ಮತ್ತು ಅಧಿಕಾರಶಾಹಿ, ನಿಜವಾಗಿ ಹಿಂಸೆಯನ್ನು ಹುಟ್ಟು ಹಾಕಿರುವುದು. ಆದರೆ ನಕ್ಸಲೀಯರಿಗೂ ತಿಳಿದಿರಲಿ, ಸರ್ವೋದಯ ಹಾಗೂ ನಕ್ಸಲ್‌ವಾದದ ಗುರಿ ಒಂದೇ ಆಗಿದೆ; ಅದೆಂದರೆ ಕಾನೂನುಗಳ ನೆರವಿಲ್ಲದೆ ಹೊಸಸಮಾಜವನ್ನು ನಿರ್ಮಿಸುವುದು. ಆದರೆ ಹಿಂಸೆಯ ಮೂಲಕ ಪರಿವರ್ತನೆಗೆ ಹೊರಟಿರುವ ಈ ಜನಕ್ಕೆ ನೆನಪಿರಲಿ—ಹಿಂಸೆಯಿಂದ ಮೂಡುವ ಸಮಾಜ ಮಾನವೀಯ ಸಮಾಜವಾಗಿ ಉಳಿದಿರುವುದಿಲ್ಲ.."

ಹಾಗೆಯೇ ಜಯಪ್ರಕಾಶರು ನಕ್ಸಲೀಯರ ಸವಾಲನ್ನು ತಮ್ಮ ನೇತೃತ್ವದ ಸರ್ವೋದಯ ಚಳುವಳಿಯ ನಿಜವಾದ ಅಗ್ನಿಪರೀಕ್ಷೆಗೆ ಒದಗಿದ ಒಂದು ಸದವಕಾಶವೆಂದೇ ಭಾವಿಸಿದರು: "ನಾವು ಗಾಂಧಿವಾದಿಗಳೆನಿಸಿಕೊಂಡವರು ಇತ್ತೀಚಿನ ವರ್ಷಗಳಲ್ಲಿ ಅಲ್ಪತೃಪ್ತರಾಗಿ, ಸಣ್ಣಪುಟ್ಟ ಜಗಳಗಳಲ್ಲೇ ಕಾಲ ಕಳೆದುಕೊಂಡು, ನಮ್ಮ ಮುಂದಿದ್ದ ಮಹೋದ್ದೇಶದ ಅರಿವನ್ನು ಕಳೆದುಕೊಂಡುಬಿಟ್ಟಿದ್ದೆವು. ಈಗ ನಮ್ಮ ಪ್ರಾಣವನ್ನೇ ಪಣವಾಗಿಟ್ಟು ಕೆಲಸ ಮಾಡಬೇಕಾದ ಸವಾಲು ನಮಗೊದಗಿ ಬಂದಿದೆ. ಇದು ನಮ್ಮನ್ನು ಪರಿಶುದ್ಧಗೊಳಿಸುವಂತಹ ಹೋರಾಟ. ಈಗ ನಮ್ಮಲ್ಲಿ ಹಾಲು ಯಾವುದು ನೀರು ಯಾವುದು ಎಂಬುದು ಗೊತ್ತಾಗುವ ಕಾಲ ಬಂದಿದೆ..."

ಆರು ತಿಂಗಳ ಕಾಲ ಜಯಪ್ರಕಾಶರು ಮುಷೇಹಾರಿ ವಿಭಾಗದಲ್ಲಿ ನಡೆಸಿದ ಆಂದೋಲನ ಎಷ್ಟು ಪರಿಣಾಮಕಾರಿಯಾಯಿತೆಂದರೆ, ನಕ್ಸಲೀಯರ ಪರ ಒಲವು ತೋರಿದ್ದ ಬಡ ರೈತವರ್ಗ ಹಾಗೂ ನಕ್ಸಲೀಯರಿಂದ ಬೆದರಿಹೋಗಿದ್ದ ಭೂಮಾಲಿಕ ವರ್ಗಗಳೆರಡೂ,

ಸರ್ವೋದಯ ಕಾರ್ಯಕರ್ತರು ಸಂಘಟಿಸಿದ ಭೂದಾನ-ಗ್ರಾಮದಾನಗಳಲ್ಲಿ ಸಕ್ರಿಯವಾಗಿ ಭಾಗವಹಿಸತೊಡಗಿದರು. ಗ್ರಾಮಸಭೆಗಳಲ್ಲಿ ಭೂದಾನ ಹಾಗೂ ಭೂ ಮರುವಿತರಣೆಯ ಕೆಲಸ, ಸಹಕಾರಿ ಸಂಘಗಳ ರಚನೆ, ಗ್ರಾಮಕೋಶಕ್ಕೆ ಹಣ, ದವಸಗಳ ಸಂಗ್ರಹಣೆ ಎಲ್ಲವೂ ಚುರುಕುಗೊಂಡಿತು. ನಕ್ಸಲೀಯರ ಆಕರ್ಷಣೆ ಕ್ರಮೇಣ ತಂತಾನೇ ಕಡಿಮೆಯಾಗುತ್ತಾ ನಗಣ್ಯವೆನ್ನಿಸುವಷ್ಟರಮಟ್ಟಿಗೆ ಕುಗ್ಗಿತು.

ಬಂಗ್ಲಾದೇಶದ ಉದಯ : ನೆರವಿಗಾಗಿ ಪ್ರಪಂಚ ಪ್ರವಾಸ

ಆ ಹೊತ್ತಿಗೆ ಬಂಗ್ಲಾದೇಶದ ಉದಯಕ್ಕೆ ಕಾರಣವಾದ ಪೂರ್ವ ಹಾಗೂ ಪಶ್ಚಿಮ ಪಾಕಿಸ್ತಾನಗಳ ನಡುವಣ ಘರ್ಷಣೆ ಜಯಪ್ರಕಾಶರ ಗಮನ ಸೆಳೆಯಿತು. ಪೂರ್ವ ಪಾಕಿಸ್ತಾನಕ್ಕೆ ನೈತಿಕ ಬೆಂಬಲ ಹಾಗೂ ಲಕ್ಷಾಂತರ ಮಂದಿ ನಿರಾಶ್ರಿತರ ಮರು ವಸತಿಗಾಗಿ. ಸಹಾಯವನ್ನು ಸಂಘಟಿಸುವ ಪ್ರಯತ್ನವಾಗಿ ಅವರು ೧೯೭೧ರ ಮಧ್ಯಭಾಗದಲ್ಲಿ ಪ್ರಪಂಚ ಪ್ರವಾಸ ಕೈಗೊಳ್ಳಬೇಕಾಗಿಬಂತು.

ಬಂಗ್ಲಾ ಯುದ್ಧದ ಬಗ್ಗೆ ಜಯಪ್ರಕಾಶರು ತೋರಿಸಿದ ಈ ಆಸಕ್ತಿ, ಅವರು ಬಹು ಹಿಂದೆಯೇ ರಾಜನೀತಿಯಿಂದ ಲೋಕನೀತಿಯೆಡೆಗೆ ಆರಂಭ ಮಾಡಿದ್ದ ಪಯಣದ ಹಿನ್ನೆಲೆಯಲ್ಲಿ ಆಶ್ಚರ್ಯವನ್ನೇನೂ ಉಂಟುಮಾಡುವಂತಹದುದಾಗಿರಲಿಲ್ಲ. ಏಕೆಂದರೆ ಅವರು ಐವತ್ತರ ದಶಕದ ಕೊನೆಯ ಹೊತ್ತಿಗೆ ಪಕ್ಷ ರಾಜಕಾರಣದಿಂದ ನಿವೃತ್ತಿ ಘೋಷಿಸಿ ತಮ್ಮ ಪ್ರಜಾಸಮಾಜವಾದಿ ಪಕ್ಷದ ಗೆಳೆಯರನ್ನುದ್ದೇಶಿಸಿ ನೀಡಿದ್ದ ದೀರ್ಘ ಹೇಳಿಕೆಯ (ಇದು 'ಸಮಾಜವಾದದಿಂದ ಸರ್ವೋದಯದೆಡೆಗೆ' ಎಂಬ ಶೀರ್ಷಿಕೆಯಡಿ ಲೇಖನವಾಗಿ ಪ್ರಕಟಗೊಂಡು ವ್ಯಾಪಕ ಚರ್ಚೆಗೆ ಕಾರಣವಾಯಿತು) ಕೊನೆಯಲ್ಲಿ ಜಯಪ್ರಕಾಶರು ರಾಜನೀತಿ ಹಾಗೂ ಲೋಕನೀತಿಗಳ ನಡುವಣ ಸಂಬಂಧವನ್ನು ಬಹು ಸ್ಪಷ್ಟವಾಗಿ ನಿರೂಪಿಸಿದ್ದರು: "ರಾಜನೀತಿ ಹಾಗೂ ಲೋಕನೀತಿ ಪರಸ್ಪರ ವಿರುದ್ಧವಾದವುಗಳೇನೂ ಅಲ್ಲ; ಅವೆರಡೂ ಒಟ್ಟಿಗೆ ಇರಲಾರದ ಸಂಗತಿಗಳೂ ಅಲ್ಲ... ಲೋಕನೀತಿ, ರಾಜನೀತಿಯ ಮಗುವಿದ್ದಂತೆ. ಅವೆರಡರ ನಡುವೆ ನಿರಂತರ ಸಂಪರ್ಕ ಹಾಗೂ ಸಹಕಾರವಿರಬೇಕು... ಮುಂದೊಂದು ದಿನ ನನಗೆ ಬಿಡುವಾದಾಗ ನಮ್ಮ ರಾಜಕೀಯ ವ್ಯವಸ್ಥೆಯು ಹೇಗೆ ರಾಜನೀತಿಯಿಂದ ಲೋಕನೀತಿಯೆಡೆಗೆ ವಿಕಾಸವಾಗಬೇಕು ಎಂಬುದರ ಬಗ್ಗೆ ನನ್ನ ಆಲೋಚನೆಗಳನ್ನು ದೇಶದ ಮುಂದಿಡುವ ಪ್ರಯತ್ನ ಮಾಡುವೆ.. ಇನ್ನು ಮುಂದೆ ನನ್ನ ಶಕ್ತಿ ಸಾಮರ್ಥ್ಯಗಳೆಲ್ಲಾ ಲೋಕನೀತಿಯನ್ನು ರೂಪಿಸುವ ಕಡೆಗೆ ಬಳಕೆಯಾಗುವುದಾದರೂ, ದೇಶದ ರಾಜನೀತಿ ಬಗ್ಗೆ ನಾನು ಕುರುಡಾಗಿರಲಾರೆ. ಏಕೆಂದರೆ ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ರಾಜನೀತಿ ಜನತೆಯ ಬದುಕಿನ ಮೇಲೆ ಸಾಕಷ್ಟು ಪರಿಣಾಮವನ್ನು ಬೀರುವಂತಹುದೇ ಆಗಿದೆ. ಈ ಪರಿಣಾಮ ಯಾವಾಗಲೂ ರಚನಾತ್ಮಕವಾಗಿಯೇ ಇರುವ ಹಾಗೆ ನಾನು ಹೊರಗಿನವನಾಗಿ ಕಾಳಜಿ ವಹಿಸಿಯೇ ತೀರುವೆ..."

ನೆಹರೂ ಅವರೊಂದಿಗೆ ಮುಖಾಮುಖಿ- 'ನಾಲ್ಕನೇ ಜಗತ್ತಿ'ನ ಕಲ್ಪನೆ

ಈ ಸಿಲುವು ಬಹಳ ಬಾರಿ ಐವತ್ತು-ಅರವತ್ತರ ದಶಕದ ರಾಷ್ಟ್ರೀಯ ರಾಜಕಾರಣದ ಅನಭಿಷಕ್ತ ಸಾಮ್ರಾಟರಂತಿದ್ದ ಪ್ರಧಾನಿ ಜವಾಹರಲಾಲರೊಂದಿಗೆ ಜಯಪ್ರಕಾಶರ ಘರ್ಷಣೆಗೆ ಕಾರಣವಾಗಿತ್ತು. ೧೯೫೫ರಲ್ಲಿ ಪಾಟ್ನಾ ವಿದ್ಯಾರ್ಥಿ ಪ್ರದರ್ಶನದ ಮೇಲೆ ಬಿಹಾರದ ಪೊಲೀಸರು ನಡೆಸಿದ ದೌರ್ಜನ್ಯ, ೧೯೫೬ರಲ್ಲಿ ಹಂಗರಿಯ ಮೇಲೆ ಸೋವಿಯತ್ ಒಕ್ಕೂಟ ಹಾಗೂ ೧೯೫೯ರಲ್ಲಿ ಟಿಬೆಟ್ ಮೇಲೆ ಚೀನಾ ನಡೆಸಿದ ಆಕ್ರಮಣಗಳ ಸಂದರ್ಭದಲ್ಲಿ ಜಯಪ್ರಕಾಶರು ನೆಹರೂ ಸರ್ಕಾರದ ಆಂತರಿಕ ಹಾಗೂ ವಿದೇಶ ನೀತಿಗಳನ್ನು ಕಟುವಾಗಿ ಟೀಕಿಸಿ ಹೇಳಿಕೆಗಳನ್ನು ನೀಡಿದ್ದರು. 'ಕೆಲವೇ ವರ್ಷಗಳ ಹಿಂದೆ ಸ್ವಾತಂತ್ರ್ಯ ಹೋರಾಟಗಾರರಾಗಿದ್ದವರು ಈಗ ಸಾಮ್ರಾಜ್ಯಶಾಹಿಗಳಾಗಿಬಿಟ್ಟಿರುವ' ಬಗ್ಗೆ ಮರುಕ ವ್ಯಕ್ತಪಡಿಸಿ, ನೆಹರೂ ಅವರನ್ನು ಕೆರಳಿಸಿದರು. ೧೯೫೭ರಲ್ಲಿ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಅವರು ಜನತೆ ಕಾಂಗ್ರೆಸ್ಸನ್ನು ತಿರಸ್ಕರಿಸುವಂತೆ ಕರೆ ನೀಡಿ, ನೆಹರೂ ಅವರ ಕಟುವಾಗ್ದಾಳಿಗೆ ಈಡಾದರು. ೧೯೬೨ರಲ್ಲಿ ಚೀನಾ ಭಾರತದ ಮೇಲೆ ಆಕ್ರಮಣ ನಡೆಸಿದ ಸಂದರ್ಭದಲ್ಲಿ ಅವರು, ಇದು ನೆಹರೂ ಸರ್ಕಾರದ ವಿದೇಶ ನೀತಿಯ ಮೂಲದೋಷದ ಫಲ ಎಂದು ಬಣ್ಣಿಸಿದ್ದರು.

ಅಲ್ಲದೆ ಆ ಹೊತ್ತಿಗೆ, 'ಬಂಡವಾಳ ಶಾಹಿ' ಹಾಗೂ 'ಸಮತಾವಾದಿ' ಎಂದು ಗುರುತಿಸಲ್ಪಟ್ಟ ಎರಡು ಜಗತ್ತುಗಳಿಗೆ ಪರ್ಯಾಯವಾಗಿ ನೆಹರೂ ನಾಯಕತ್ವದಲ್ಲಿ ರೂಪುಗೊಳ್ಳುತ್ತಿದ್ದ 'ಅಲಿಪ್ತ ಮೂರನೇ ಜಗತ್ತಿ'ಗೆ ಪ್ರತಿಯಾಗಿ, ಜಯಪ್ರಕಾಶರು ಜಾಗತಿಕ ಶಾಂತಿಗಾಗಿ ತುಡಿಯುವ 'ಕ್ರಿಯಾಶೀಲ ನಾಲ್ಕನೇ ಜಗತ್ತಿ'ನ ಪರಿಕಲ್ಪನೆಯನ್ನು ಮುಂದಿಟ್ಟು ನೆಹರೂ ಅವರಿಗೆ ಮುಜುಗರವನ್ನುಂಟುಮಾಡಿದರು. ಈ ಸಂಬಂಧ ರಚಿತವಾದ ಜಾಗತಿಕ ಶಾಂತಿಪಡೆಯ ಸಹ-ಅಧ್ಯಕ್ಷರಾಗಿ ಪತ್ನಿ ಪ್ರಭಾವತಿಯವರೊಂದಿಗೆ ಆಫ್ರಿಕಾ ಪ್ರವಾಸಮಾಡಿ ಆಫ್ರಿಕನ್ ದೇಶಗಳ ವಿಮೋಚನೆಗಾಗಿ ಶಾಂತಿಪಡೆಯ ಮೆರವಣಿಗೆಗಳನ್ನು ಸಂಘಟಿಸಿದರು. ಇದೇ ಸಂದರ್ಭದಲ್ಲಿಯೇ, ರೊಡೇಷಿಯಾಕ್ಕೆ (ಈಗಿನ ಜಿಂಬಾಬ್ವೆ) ಸಂಪೂರ್ಣ ಸ್ವಾತಂತ್ರ್ಯ ನೀಡಲು ವಿಶ್ವಸಂಸ್ಥೆಯು ಬ್ರಿಟನ್ನನ್ನು ಒಪ್ಪಿಸಿದ ಸುದ್ದಿಯೂ ಬಂದು, ಜಯಪ್ರಕಾಶರ ಆಫ್ರಿಕಾ ಪ್ರವಾಸಕ್ಕೆ ಒಂದು ಅರ್ಥಪೂರ್ಣತೆಯನ್ನು ಒದಗಿಸಿತು. ಭಾರತ-ಚೀನಾ ಯುದ್ಧದ ಸಂದರ್ಭದಲ್ಲಿ ಉಂಟಾಗಿದ್ದ ಎರಡೂ ದೇಶಗಳ ನಡುವಣ ಕಹಿ ವಾತಾವರಣವನ್ನು ನಿವಾರಿಸುವ ಕ್ರಮವಾಗಿ ಜಯಪ್ರಕಾಶರು ಜಾಗತಿಕ ಶಾಂತಿ ಪಡೆಯ ಸೇವೆಯನ್ನು ಕೋರಿದರು. ದೆಹಲಿಯಿಂದ ಕಾಲ್ನಡಿಗೆಯಲ್ಲೇ ಪೂರ್ವ ಪಾಕಿಸ್ತಾನ ಹಾಗೂ ಬರ್ಮಾಗಳನ್ನು ಹಾಯ್ದು ಬೀಜಿಂಗ್ ತಲುಪುವ ಉದ್ದೇಶವಿದ್ದ ಈ ಶಾಂತಿಯಾತ್ರೆಗೆ ಪಾಕಿಸ್ತಾನ, ಬರ್ಮಾ ಹಾಗೂ ಚೀನಾದೇಶಗಳ ಸರ್ಕಾರಗಳ ಅನುಮತಿ ದೊರೆಯದ ಕಾರಣ, ಯಾತ್ರೆ ಚೀನಾ-ಭಾರತಗಳ ಘರ್ಷಣಾ ಕ್ಷೇತ್ರವಾಗಿದ್ದ ಈಶಾನ್ಯ ಗಡಿಯಲ್ಲಿ ಸ್ಥಗಿತಗೊಳ್ಳಬೇಕಾಯಿತು.

ಈ ಯಾತ್ರೆಯ ಪ್ರೇರಕರಾದ ಜಯಪ್ರಕಾಶರು ಚೀನಾ ಸರ್ಕಾರದಿಂದ 'ಅಮೆರಿಕನ್ ಏಜೆಂಟ'ರೆಂದೂ ದೇಶದೊಳಗಿನ ಹಿಂದೂವಾದಿ ಸಂಘಸಂಸ್ಥೆಗಳಿಂದ 'ಕಮ್ಯೂನಿಸ್ಟ್ ಏಜೆಂಟ'ರೆಂದೂ ಟೀಕೆಗೊಳಪಡಬೇಕಾಯಿತು. ಆದರೆ ಜಯಪ್ರಕಾಶರ ಈ ಸೌಹಾರ್ದ ಪ್ರಯತ್ನ ಎರಡೂ ದೇಶಗಳ ನಡುವಣ 'ಕೊಲೊಂಬೊ ಶಾಂತಿ ಒಪ್ಪಂದ'ಕ್ಕೆ ಪರೋಕ್ಷವಾಗಿ ಕಾರಣವಾಯಿತು.

ನಾಗಾ ಬಂಡುಕೋರರೊಂದಿಗೆ ಸಂಧಾನ–ನೆಹರೂ ಸಾವು

ಇದೇ ರೀತಿ ಎರಡು ವರ್ಷಗಳ ನಂತರ ಉಲ್ಬಣಗೊಂಡ ನಾಗಾ ಜನಾಂಗೀಯ ಸಮಸ್ಯೆ ಬಗೆಗೂ ಜಯಪ್ರಕಾಶರು ಕಾಳಜಿ ವಹಿಸಿ, ನಾಗಾ ಬಂಡುಕೋರರ ಮನವೊಲಿಸುವ ಮೂಲಕ ಅವರನ್ನು ಭಾರತ ಸರ್ಕಾರದೊಂದಿಗೆ ಒಪ್ಪಂದಕ್ಕೆ ಅಣಿಮಾಡಿದರು. ಈ ಸಂದರ್ಭದಲ್ಲಿ ಗೃಹಮಂತ್ರಿಯಾಗಿದ್ದ ಲಾಲ್‌ಬಹದೂರ್ ಶಾಸ್ತ್ರಿಗಳು ಜಯಪ್ರಕಾಶರ ಕ್ರಿಯಾಶೀಲತೆ, ದೇಶಪ್ರೇಮ ಹಾಗೂ ದಕ್ಷತೆಗೆ ಮಾರುಹೋಗಿ ಅವರನ್ನು ತಮ್ಮ ಉತ್ತರಾಧಿಕಾರಿಯೆಂದು ಘೋಷಿಸಲು ಪ್ರಧಾನಿ ನೆಹರೂ ಅವರನ್ನು ಕೋರಿದರು. ಜಯಪ್ರಕಾಶರ ಸಾತ್ವಿಕ ಆಕ್ರೋಶಕ್ಕೆ ತುತ್ತಾದಾಗಲೆಲ್ಲಾ ಅವರ ಟೀಕೆಗಳನ್ನು' ಜವಾಬ್ದಾರಿಯಿಂದ ನುಣುಚಿಕೊಂಡಿರುವ ವ್ಯಕ್ತಿಯ ಪ್ರಲಾಪ'ವೆಂದು ಬಣ್ಣಿಸಿ ತಿರುಗೇಟು ಕೊಡುವ ಪ್ರಯತ್ನ ಮಾಡುತ್ತಿದ್ದ ನೆಹರೂ, ಜವಾಬ್ದಾರಿ ವಹಿಸಿಕೊಳ್ಳಲು ಅವರನ್ನು ಆಗಾಗ್ಗೆ ಮಂತ್ರಿ ಪದವಿಗೆ ಆಹ್ವಾನಿಸುತ್ತಿದ್ದುದುಂಟು. ಆದರೆ ಅವರಿಗೆ ಎಂದೂ ಜಯಪ್ರಕಾಶರನ್ನು ತಮ್ಮ ಉತ್ತರಾಧಿಕಾರಿಯೆಂದು ಘೋಷಿಸುವ ಪ್ರೇರಣೆಯಾಗಲಿಲ್ಲ. ಅದಕ್ಕೆ ಅಂದಿನ ಘರ್ಷಣಾತ್ಮಕ ರಾಜಕೀಯ ಸನ್ನಿವೇಶವೂ ಕಾರಣ ವಿದ್ದೀತು. ಅದೇನೇ ಇರಲಿ, ಚೀನೀ ಆಕ್ರಮಣದ ನಂತರ ಸೋತು ಹೋದಂತಿದ್ದ ನೆಹರೂ ಬಹುಕಾಲ ಬದುಕಲಿಲ್ಲ. ಸಾತ್ವಿಕ ಹೃದಯದ ಜಯಪ್ರಕಾಶರು ತನ್ನ ಬಹುದಿನದ 'ಗೆಳೆಯ'ನನ್ನು ಕಳೆದುಕೊಂಡ ದುಃಖಕ್ಕೀಡಾದರು.

ಕಾಶ್ಮೀರ ನೀತಿ - ರಾಷ್ಟ್ರದ ಆತ್ಮಸಾಕ್ಷಿ

ದೇಶ ವಿಭಜನೆಯನ್ನು ತಾತ್ವಿಕವಾಗಿ ಎಂದೂ ಒಪ್ಪದಿದ್ದ ಜಯಪ್ರಕಾಶರು ಪಾಕಿಸ್ತಾನವನ್ನು ಸೋದರ ದೇಶವೆಂದು ಪರಿಗಣಿಸುತ್ತಾ, ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ಐವತ್ತರ ದಶಕದಿಂದಲೂ ತಮ್ಮ ಸಲಹೆ-ಸೂಚನೆಗಳನ್ನು ನೀಡುತ್ತ ಬರುತ್ತಿದ್ದರು. ತಮ್ಮ ಗೆಳೆಯ ಷೇಕ್ ಅಬ್ದುಲ್ಲಾರ ಬಂಧನವಾದಾಗಲೆಲ್ಲ ಪ್ರಧಾನಿ ನೆಹರೂ ಹಾಗೂ ನಂತರ ಇಂದಿರಾಗಾಂಧಿ ಅವರೊಂದಿಗೆ ಸಂಧಾನ ನಡೆಸಿ ಬಿಡುಗಡೆಗೆ ಅವರು ಪ್ರಯತ್ನಿಸುತ್ತಿದ್ದರು. ಅರವತ್ತರ ದಶಕದ ಮಧ್ಯಭಾಗದ ಹೊತ್ತಿಗೆ ಕಾಶ್ಮೀರ ವಿವಾದವೇ ಕಾರಣವಾಗಿ ಎರಡೂ ದೇಶಗಳ ನಡುವಣ ಸಂಬಂಧ ಹದಗೆಟ್ಟು, ಎರಡೂ ಕಡೆ ಕೋಮುವಾದಿಶಕ್ತಿಗಳ ಆರ್ಭಟ ಮುಗಿಲು ಮುಟ್ಟತೊಡಗಿತು. ಆಗ 'ಜಮ್ಮು ಮತ್ತು ಕಾಶ್ಮೀರದಲ್ಲಿ ಮುಕ್ತ ಹಾಗೂ ನ್ಯಾಯಯುತ

ಚುನಾವಣೆ ನಡೆಸುವ ಮೂಲಕ ವಿವಾದದ ಪರಿಹಾರಕ್ಕೆ ಮೊದಲ ಹೆಜ್ಜೆ ಇಡಬೇಕು' ಎಂಬ ಹೇಳಿಕೆ ನೀಡಿದ್ದಕ್ಕಾಗಿ ಅವರು ಹಿಂದೂ ಕೋಮುವಾದಿ ಸಂಘ ಸಂಸ್ಥೆಗಳಿಂದ 'ಚೀನಾ-ಪಾಕಿಸ್ತಾನಗಳ ಏಜೆಂಟ್ ಜಯಪ್ರಕಾಶರನ್ನು ಗಲ್ಲಿಗೇರಿಸಿ' ಎಂಬ ಕಟು ಘೋಷಣೆಗಳಿಗೆ ಈಡಾಗಬೇಕಾಯಿತು. ಆದರೆ ಜಯಪ್ರಕಾಶರ ಈ ನೈತಿಕ ದಿಟ್ಟತನವು, ಧರ್ಮನಿರಪೇಕ್ಷ ಪ್ರಜಾಪ್ರಭುತ್ವವಾದಿ ಗಣರಾಜ್ಯವೆಂದು ಘೋಷಿಸಿಕೊಂಡಿದ್ದ ರಾಷ್ಟ್ರವೊಂದು ಅತ್ಯಂತ ಬಿಕ್ಕಟ್ಟಿನ ಸಮಯದಲ್ಲೂ ತನ್ನ ಆತ್ಮಸಾಕ್ಷಿಯನ್ನು ಕಾಪಾಡಿಕೊಂಡು ಬಂದಿದ್ದುದರ ದ್ಯೋತಕವೂ ಆಗಿತ್ತು.

ಆದರೆ ೧೯೬೫ರಲ್ಲಿ ಪಾಕಿಸ್ತಾನವು ಭಾರತದ ಮೇಲೆ ಆಕ್ರಮಣ ನಡೆಸಿದಾಗ ಜಯಪ್ರಕಾಶರು ಆ ದೇಶದ ಮೇಲಿನ ಪ್ರೀತಿಯನ್ನು ಕಳೆದುಕೊಂಡರು. ಈ ಹಿನ್ನೆಲೆಯಲ್ಲಿಯೇ ಮುಂದೆ ಅವರು ಬಂಗ್ಲಾದೇಶದ ಉದಯವನ್ನು ಸಮರ್ಥಿಸಿ, ಬಂಗ್ಲಾ ವಿಮೋಚನಾ ಚಳುವಳಿಯ ನಾಯಕತ್ವ ವಹಿಸಿದ್ದ ಷೇಕ್ ಮುಜೀಬರ್ ರೆಹಮಾನರನ್ನು ಬೆಂಬಲಿಸಿದ್ದು. ಹಾಗೇ ವ್ಯಾಪಕ ಯುರೋಪ್ ಪ್ರವಾಸ ಮಾಡಿ ಬಂಗ್ಲಾ ನಿರಾಶ್ರಿತರ ಪುನರ್ವಸತಿಗಾಗಿ ಮತ್ತು ಬಂಗ್ಲಾದೇಶದ ಅಧಿಕೃತ ಮಾನ್ಯತೆಗಾಗಿ ಅವರು ಅಂತರಾಷ್ಟ್ರೀಯ ಸಹಕಾರ ಕೋರಿದ್ದು. ಹೀಗೆ ಐವತ್ತರ ದಶಕದಿಂದ ನಿರಂತರವಾಗಿ ಹಂಗೆರಿ, ಟಿಬೆಟ್, ಆಕ್ರಮಣಗಳು ಭಾರತ-ಚೀನಾಯುದ್ಧ, ನಾಗಾ ಸಮಸ್ಯೆ, ಕಾಶ್ಮೀರ ಸಮಸ್ಯೆ, ನಕ್ಸಲೀಯರ ಸಮಸ್ಯೆ, ಬಿಹಾರದ ಕ್ಷಾಮ ಹೀಗೆ ರಾಷ್ಟ್ರೀಯ- ಅಂತಾರಾಷ್ಟ್ರೀಯ ವಿದ್ಯಮಾನಗಳಿಗೆ ಒಬ್ಬ ಧೀಮಂತ ವ್ಯಕ್ತಿಯಾಗಿ, ರಾಜಕೀಯ ಮುತ್ಸದ್ದಿಯಾಗಿ ರಾಷ್ಟ್ರದ ಅಂತಃಕರಣವನ್ನು ಮುಟ್ಟುವಂತಹ ನಿಲುವು ಮತ್ತು ಕ್ರಮಗಳನ್ನು ಕೈಗೊಳ್ಳುತ್ತಿದ್ದ ಜಯಪ್ರಕಾಶರು ಎಪ್ಪತ್ತರ ದಶಕದ ಹೊತ್ತಿಗೆ 'ರಾಷ್ಟ್ರದ ಆತ್ಮಸಾಕ್ಷಿ' ಎಂದೇ ಪ್ರಸಿದ್ಧರಾಗಿದ್ದರು.

ಡಕಾಯಿತರ ಶರಣಾಗತಿ - ಲೋಕನಾಯಕನೆಂಬ ಪ್ರೀತಿ

ಎಪ್ಪತ್ತರ ದಶಕದ ಹೊತ್ತಿಗೆ ಈ ಪ್ರಸಿದ್ಧಿ ರಾಷ್ಟ್ರದ ಜನಮಾನಸದಲ್ಲಿ ಎಷ್ಟು ಆಳಕ್ಕಿಳಿದಿತ್ತೆಂದರೆ, ೧೯೭೧ರ ಅಕ್ಟೋಬರ್‌ನಲ್ಲಿ ಪಾಟ್ನಾದ ಕದಂಕುಂವಾದಲ್ಲಿದ್ದ ಜಯಪ್ರಕಾಶರ ಮನೆಗೆ ಚಂಬಲ್ ಕಣಿವೆಯ ಭಯಂಕರ ಡಕಾಯಿತ ಮಾಧೋಸಿಂಗ್ ಮಾರುವೇಷದಲ್ಲಿ ಬರುವಂತಾಯಿತು! ಆತ ಅವರ ಪಾದ ಹಿಡಿದು 'ವಿನೋಬಾಜಿ ಮಾತಿನ ಮೇಲೆ ಇಲ್ಲಿಗೆ ಬಂದಿದ್ದೇನೆ. ಇಡೀ ದೇಶದಲ್ಲಿ ನಿಮ್ಮೊಬ್ಬರನ್ನೇ ನಾನು ನಂಬುವುದು. ಕಣಿವೆಯ ಡಕಾಯಿತರೆಲ್ಲ ನಿಮಗೆ ಶರಣಾಗಬಯಸುತ್ತೇವೆ' ಎಂದು ನಿವೇದಿಸಿದ. ಅರವತ್ತರ ದಶಕದಲ್ಲೇ ಚಂಬಲ್ ಕಣಿವೆಗೆ ಭೇಟಿ ನೀಡಿ ಡಕಾಯಿತರ ಶರಣಾಗತಿಗೆ ಪ್ರಯತ್ನಿಸಿದ್ದ ವಿನೋಬಾ ಮಾರ್ಗದರ್ಶನದ ಶಾಂತಿ ನಿಯೋಗದ ಇಬ್ಬರು ಸದಸ್ಯರಾದ ಮಹಾವೀರಭಾಯಿ ಹಾಗೂ ಹೇಮದೇವ್ ಅವರಿಗೆ ಪಾಟ್ನಾಕ್ಕೆ ಬರಲು ಜಯಪ್ರಕಾಶರು ಹೇಳಿಕಳುಹಿಸಿದರು. ಅವರನ್ನು ಕೇಂದ್ರದ ಗೃಹಮಂತ್ರಿ, ಮಧ್ಯಪ್ರದೇಶ ರಾಜಸ್ಥಾನ ಹಾಗೂ ಉತ್ತರ ಪ್ರದೇಶಗಳ

ಮುಖ್ಯಮಂತ್ರಿಗಳ ಬಳಿಗೆ ಢಕಾಯಿತರ ಪರವಾಗಿ ಸಂಧಾನಕ್ಕಾಗಿ ಕಳಿಸಿದರು. 'ನಾವು ಶಸ್ತ್ರಾಸ್ತ್ರಗಳನ್ನು ಒಪ್ಪಿಸಿ ಶರಣಾಗಲು ಸಿದ್ಧ; ಆದರೆ ಸಮಾಜ ನಮ್ಮನ್ನು ಒಪ್ಪಲು ಸಿದ್ಧವೇ?' ಎಂಬ ಡಕಾಯಿತರ ಪ್ರಶ್ನೆ ಹಾಗೂ 'ಈಗಾಗಲೇ ಮಾಡಲಾಗಿರುವ ಅಪರಾಧಿಗಳಿಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳದೇ ಇರುವುದು ಹೇಗೆ ಸಾಧ್ಯ?' ಎಂಬ ಸರ್ಕಾರದ ಪ್ರಶ್ನೆಗಳಿಗೆ ಜಯಪ್ರಕಾಶರು ಉತ್ತರ ರೂಪಿಸಿದ್ದರು. ಅವರು ೧೯೭೨ರ ಏಪ್ರಿಲ್ ಹೊತ್ತಿಗೆ, ಶರಣಾಗತರಾಗಲು ಸಿದ್ಧರಾಗಿದ್ದ ೮೨ ಮಂದಿ ಡಕಾಯಿತರಿಗೆ ಬಯಲು ಸೆರೆಮನೆಯಲ್ಲಿ ಪುನರ್‌ವಸತಿಯ ಯೋಜನೆಯನ್ನು ಸರ್ಕಾರದ ಮುಂದಿಟ್ಟು ಯಶಸ್ವಿಯಾದರು. ೧೯೭೪ರ ನವೆಂಬರ್ ಹೊತ್ತಿಗೆ ಮಧ್ಯಪ್ರದೇಶದ ಬೀನಾ ಎಂಬಲ್ಲಿ, ಸರ್ವೋದಯದ ಶಾಂತಿ ಪಡೆಯ ಭಜನೆ, ಮತ್ತು ಜಬ್ಬಲ್‌ಪುರ ಸೆರಮನೆಯ ವಾದ್ಯವೃಂದಗಳ ಸಂಭ್ರಮದ ನಡುವೆ ಅವರು ಮಧ್ಯಪ್ರದೇಶದ ಮುಖ್ಯಮಂತ್ರಿ ಸೇಥಿ ಉಪಸ್ಥಿತಿಯಲ್ಲಿ ಅವರು. 'ನವಜೀವನ ಶಿಬಿರ' ಎಂಬ 'ಬಯಲು ಬಂದಿಖಾನೆ'ಯನ್ನು ಉದ್ಘಾಟಿಸಿದರು. 'ಇವೊತ್ತಿನವರೆಗೆ ನಮ್ಮನ್ನು ಹಿಡಿಯಲು, ಕೊಲ್ಲಲು ಬಯಸುತ್ತಿದ್ದವರನ್ನೇ ನಾವು ನೋಡುತ್ತಿದ್ದೆವು. ಇವರ ಮಧ್ಯೆ ನಮ್ಮನ್ನು ಉಳಿಸ ಬಯಸಿದವರು ನೀವೊಬ್ಬರೇ' ಎಂದು ಜಯಪ್ರಕಾಶರ ಪಾದ ಮುಟ್ಟಿದ ನಾಥುಸಿಂಗ್ ಎಂಬ ಡಕಾಯಿತನೊಬ್ಬ ಕಣ್ಣೀರಿಟ್ಟ. ಢಕಾಯಿತರ ಈ ಅಭೂತಪೂರ್ವ ಶರಣಾಗತಿಯ ಕಾರ್ಯಾಚರಣೆ ಇಡೀ ದೇಶದ ಗಮನ ಸೆಳೆದು ಜಯಪ್ರಕಾಶರನ್ನು ಜನ ಪ್ರೀತಿಯಿಂದ 'ಲೋಕನಾಯಕ' (ಜನನಾಯಕ) ಎಂದು ಕರೆಯಲಾರಂಭಿಸಿದರು.

ವಿಶ್ರಾಂತಿಯ ಹಂಬಲ - ಪ್ರಭಾವತಿಯವರ ಸಾವು

ಈ ಮಧ್ಯೆ ಜಯಪ್ರಕಾಶರ ಆರೋಗ್ಯ ಹದಗೆಟ್ಟು ಅವರಿಗೆ ಒಂದು ಸಣ್ಣ ಹೃದಯಾಘಾತವೂ ಆಗಿರಬಹುದೆಂದು ವೈದ್ಯರು ಶಂಕಿಸಿದರು. ಜಯಪ್ರಕಾಶರಿಗೆ ಅನಿವಾರ್ಯ ವಾಗಿ ವಿಶ್ರಾಂತಿ ಬೇಕಿತ್ತು. ಜೊತೆಗೆ ಅದೇ ವೇಳೆಗೆ ಪ್ರಭಾವತಿ ದೇವಿಯವರ ಆರೋಗ್ಯವೂ ಹದಗೆಡತೊಡಗಿತ್ತು. ೧೯೭೨ರ ಅಕ್ಟೋಬರ್‌ನಲ್ಲಿ ಬನಾರಸ್ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಸಾಮಾನ್ಯ ವೈದ್ಯಕೀಯ ತಪಾಸಣೆಗೆ ಹೋದ ಜಯಪ್ರಕಾಶ್ ದಂಪತಿಗಳಿಗೆ ಆಘಾತ ಕಾದಿತ್ತು. ಜಯಪ್ರಕಾಶರ ಕೆಲಸ ಕಾರ್ಯಗಳಿಗೆ ಅಡ್ಡಿಯಾಗುತ್ತದೆಂಬ ಆತಂಕದಿಂದ ಬಹಳ ಕಾಲದಿಂದ ಪ್ರಭಾವತಿಯವರು ಮೌನವಾಗಿ ಅನುಭವಿಸುತ್ತಿದ್ದ ಹೊಟ್ಟೆ ನೋವಿಗೆ ಈಗಾಗಲೇ ಉಲ್ಬಣಗೊಂಡಿರುವ ಗರ್ಭಕೋಶದ ಅರ್ಬುದವೇ ಕಾರಣವೆಂದು ತಿಳಿಸಲಾಯಿತು. ಕೂಡಲೇ ಶಸ್ತ್ರಕ್ರಿಯೆಯ ವ್ಯವಸ್ಥೆ ಮಾಡಲಾಯಿತಾದರೂ, ಪ್ರಭಾವತಿಯವರು ಕೆಲವು ತಿಂಗಳುಗಳ ಕಾಲ ನೋವಿನಿಂದ ನರಳಿ ೧೯೭೩ರ ಏಪ್ರಿಲ್ ೧೫ ರಂದು ಕೊನೆಯುಸಿರೆಳೆದರು. ತಮ್ಮನ್ನು ಮಾರ್ಕ್ಸ್‌ನಿಂದ ಗಾಂಧಿಯೆಡೆಗೆ ಸೆಳೆದುಕೊಂಡು ಹೋಗಿ, ಎಂದೂ ಗಾಂಧಿವಾದಿ ಜೀವನಶೈಲಿಗೆ ಎರವಾಗದಂತೆ, ತಮ್ಮ ಕಷ್ಟನಿಷ್ಠುರ ಹೋರಾಟಮಯ ಜೀವನದುದ್ದಕ್ಕೂ ಅಶಾಂತಗೊಳ್ಳದೆ ಜೊತೆ ನೀಡಿದ ಪತ್ನಿಯ ಸಾವಿನ ಆಘಾತದಿಂದ ಚೇತರಿಸಿಕೊಳ್ಳಲು

ಮೂಲತಃ ಭಾವನಾಮಯಿಯಾಗಿದ್ದ ಜಯಪ್ರಕಾಶರಿಗೆ ಬಹಳ ಕಾಲವೇ ಬೇಕಾಯಿತು.

೧೯೭೧ರ ಅಕ್ಟೋಬರ್‌ನಲ್ಲೇ ಅವರು '೭೨ರ ಅಕ್ಟೋಬರ್ ೧೧ಕ್ಕೆ ನಾನು ಎಪ್ಪತ್ತು ವರ್ಷದವನಾಗುತ್ತೇನೆ. ಅಲ್ಲಿಯವರೆಗೆ ನಾನು ಬದುಕಿದ್ದರೆ, ಅಲ್ಲಿಂದ ಒಂದು ವರ್ಷ-೭೩ರ ಅಕ್ಟೋಬರ್‌ವರೆಗೆ, ನಾನು ಎಲ್ಲ ಸಂಘ-ಸಂಸ್ಥೆ-ಸಂಘಟನೆಗಳಿಂದ ಸಂಬಂಧ ಕಡಿದುಕೊಂಡು ಎಲ್ಲ ರೀತಿಯ ಸಾರ್ವಜನಿಕ ಹಾಗೂ ಸಾಮಾಜಿಕ ಚಟುವಟಿಕೆಗಳಿಂದ ದೂರ ಉಳಿಯಲು ತೀರ್ಮಾನಿಸಿದ್ದೇನೆ. ಅನಂತರ ನಾನೇನು ಮಾಡುವೆನೋ ನಾನೀಗ ಹೇಳಲಾರೆ. ಆದರೆ ಸದ್ಯಕ್ಕೆ ನಾನು ಕೈಗೊಂಡಿರುವ ಕೆಲಸದ ರೀತಿ ನೀತಿಗಳು ಏಕೋ ಕಾಲ ಹಾಗೂ ಶಕ್ತಿ ವ್ಯಯಗಳೆರಡರ ದೃಷ್ಟಿಯಿಂದಲೂ ವ್ಯರ್ಥವೆನ್ನಿಸತೊಡಗಿದ್ದು, ನನ್ನ ಮುಂದಿನ ಕೆಲಸಕಾರ್ಯಗಳ ಶೈಲಿ ಮೂಲಭೂತವಾಗಿ ಬದಲಾಗಬೇಕೆಂಬುದು ನನಗೆ ಗೊತ್ತಾಗತೊಡಗಿದೆ' ಎಂದು ತಮ್ಮ ಸಹಚರರಿಗೆ ಪತ್ರ ಬರೆದು ತಮ್ಮ ಮನಸ್ಸನ್ನು ತೋಡಿಕೊಂಡಿದ್ದರು. ಆದರೆ ಪತ್ನಿಯ ಅಸ್ವಸ್ಥತೆ ಮತ್ತು ಸಾವು ಹಾಗೂ ಡಕಾಯಿತರ ಶರಣಾಗತಿ ಕಾರ್ಯಾಚರಣೆಯು ಅವರು ಹಂಬಲಿಸಿದ್ದ ವಿಶ್ರಾಂತಿಗೆ ಅವಕಾಶವನ್ನೇ ಕೊಡಲಿಲ್ಲ.

ಜಯಪ್ರಕಾಶರಿಗೆ ತಮ್ಮ ಯಶಸ್ಸಿನ ಸಾರ್ಥಕತೆಯ ಬಗೆಗೇ ಅನುಮಾನಗಳು ಆರಂಭವಾಗಿದ್ದವು. ಭೂದಾನ, ಗ್ರಾಮದಾನ ಮುಂತಾದ ಸರ್ವೋದಯ ಚಟುವಟಿಕೆಗಳು ಮೇಲ್ನೋಟಕ್ಕೆ ಸಮಾಧಾನವನ್ನುಂಟುಮಾಡುತ್ತಿದ್ದರೂ, ಒಟ್ಟಾರೆ ರಾಷ್ಟ್ರದ ಆತ್ಮವನ್ನು ಮುಟ್ಟಿ ಅದರ ವಿಕಾಸಕ್ಕೆ ದಾರಿಮಾಡಿಕೊಡುವಲ್ಲಿ ಅವು ಸೋಲುತ್ತಿವೆ ಎಂಬ ಆತಂಕ ಅವರನ್ನು ಕಾಡತೊಡಗಿತ್ತು. ಅರವತ್ತರ ದಶಕದ ರಾಜಕಾರಣ ಹುಟ್ಟುಹಾಕಿದ್ದ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ನೈತಿಕ ಬಿಕ್ಕಟ್ಟು ಒಂದು ರಾಷ್ಟ್ರೀಯ ದುರಂತವನ್ನೇ ಸೃಷ್ಟಿಸತೊಡಗಿದೆ ಎಂಬುದು ಅವರ ಒಳಮನಸ್ಸಿಗೆ ಅರಿವಾಗತೊಡಗಿತ್ತು. ಜಯಪ್ರಕಾಶರೇ ಹೇಳಿದ್ದರಲ್ಲ, ತಾವು ಲೋಕನೀತಿಯೆಡೆಗೆ ಚಲಿಸಿದರೂ ರಾಜನೀತಿಯೆಡೆಗೆ ತಮ್ಮ ಒಂದು ಪಾಲಿನ ಗಮನ ಇದ್ದೇ ಇರುತ್ತದೆಂದು...

೧೦. ಹಾದಿ ತಪ್ಪಿದ ಆಡಳಿತ : ಸಂಪೂರ್ಣ ಕ್ರಾಂತಿಗೆ ಕರೆ

ಜಯಪ್ರಕಾಶರು ಹಿಂದೆಯೇ ತೊರೆದು ಬಂದಿದ್ದ ರಾಜನೀತಿಯನ್ನು ತಮ್ಮದೇ ವಿಶಿಷ್ಟ ರೀತಿಯಲ್ಲಿ ಮುಂದುವರಿಸಿ 'ಕಾಂಗ್ರೆಸ್ಸೇತರವಾದ' ಎಂಬ ರಾಜಕೀಯ ಕಾರ್ಯತಂತ್ರದ ಮೂಲಕ ೧೯೬೭ರ ಚುನಾವಣೆಗಳಲ್ಲಿ ದೇಶದಲ್ಲಿ ಮೊದಲಬಾರಿಗೆ ಹಲವು ಕಡೆ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರಗಳ ರಚನೆಗೆ ಕಾರಣವಾಗಿ ಆಸೆ ಹುಟ್ಟಿಸಿದ್ದ ಹಾಗೂ 'ಶ್ರೀಮಾನ್ ವಿರೋಧಪಕ್ಷ'ವೆಂದೇ ಹೆಸರಾಗಿದ್ದ ಅವರ ಸಮಾಜವಾದಿ ಗೆಳೆಯ ಡಾ. ರಾಮಮನೋಹರ ಲೋಹಿಯಾ ಅನತಿ ಕಾಲದಲ್ಲೇ ಅಕಾಲ ಮರಣಕ್ಕೆ ತುತ್ತಾಗಿದ್ದರು. ಆ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರಗಳು ಒಳಜಗಳದಿಂದಾಗಿ ಬಹಳ ಕಾಲ ಉಳಿಯದೆ ಎಪ್ಪತ್ತರ ದಶಕದ ಆರಂಭದ ಹೊತ್ತಿಗೆ, ರಾಷ್ಟ್ರದ ರಾಜನೀತಿ ಮತ್ತೆ ಏಕಪಕ್ಷೀಯವಾಗ ತೊಡಗಿತ್ತು. ತನ್ನದೇ ರಾಜಕೀಯ ಮರ್ಯಾದೆ ಕಾಪಾಡಿಕೊಂಡು ಬಂದಿದ್ದ ನೆಹರೂ ಯುಗ ಮುಗಿದಿತ್ತು. ಸರಳತೆಯ ಸಾಕಾರಮೂರ್ತಿ ಎನಿಸಿದ್ದ ಲಾಲ್ ಬಹಾದೂರ್ ಶಾಸ್ತ್ರಿ ಪ್ರಧಾನಿಯಾಗಿ ೧೯೬೫ರ ಭಾರತ ಪಾಕಿಸ್ತಾನ ಯುದ್ಧದ ಇತ್ಯರ್ಥ ಒಪ್ಪಂದಕ್ಕೆ ತಾಷ್ಕೆಂಟ್‌ಗೆ ಹೋಗಿದ್ದವರು ಅಲ್ಲಿಯೇ ಹೃದಯಾಘಾತದಿಂದ ಮರಣ ಹೊಂದಿದ್ದರು. ನೆಹರೂ ಪುತ್ರಿ ಇಂದಿರಾ ಗಾಂಧಿಯವರು ಪ್ರಧಾನಿಯಾಗಿ ರಾಷ್ಟ್ರಾಡಳಿತದ ಹೊಣೆ ಹೊತ್ತಿದ್ದರು.

೧೯೬೯ರ ಕಾಂಗ್ರೆಸ್ ವಿಭಜನೆ ನಂತರದ ವರ್ಷಗಳಲ್ಲಿ ಉಂಟುಮಾಡಿದ ರಾಜಕೀಯ ಅಲ್ಲೋಲಕಲ್ಲೋಲಗಳಲ್ಲಿ ರಾಜಕೀಯ ವೈಚಾರಿಕ ಸಂಘರ್ಷ ತನ್ನ ಸ್ಪಷ್ಟತೆಯನ್ನು ಕಳೆದುಕೊಂಡಿತ್ತು. ಇಂದಿರಾಗಾಂಧಿ ಅವರ 'ಗರೀಬಿ ಹಟಾವೋ' ಎಂಬ ಸ್ಥೂಲ ಕಾರ್ಯಕ್ರಮದಡಿಯಲ್ಲಿ ಮೇಲ್ಮೈ ಸಮಾಜವಾದೀ ಧಾರೆಯೊಂದು ರಾಷ್ಟ್ರದ ಗಮನ ಸೆಳೆದಿತ್ತು. ಕಾಂಗ್ರೆಸ್ಸಿನೊಳಗಿನ ತನ್ನ ಎದುರಾಳಿಗಳನ್ನು 'ಪಟ್ಟಭದ್ರ ಹಿತಾಸಕ್ತಿಗಳು' ಎಂದು ಬಿಂಬಿಸಲು ಇಂದಿರಾಗಾಂಧಿಯವರು ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದತಿ, ಭೂಪರಿಮಿತಿ ಕಾಯಿದೆ ಮುಂತಾದ 'ಪ್ರಗತಿಪರ' ಕ್ರಮಗಳನ್ನು ಜಾರಿಗೊಳಿಸಿ ಜನಸಾಮಾನ್ಯರ ಕಣ್ಣಲ್ಲಿ 'ಕ್ರಾಂತಿಕಾರಿ ನಾಯಕಿ'ಯಂತೆ ಕಾಣಿಸತೊಡಗಿದ್ದರು.

ಈ ಮಧ್ಯೆ ಪೂರ್ವ ಹಾಗೂ ಪಶ್ಚಿಮ ಪಾಕಿಸ್ತಾನಗಳ ನಡುವಣ ಘರ್ಷಣೆಯಲ್ಲಿ ಮಧ್ಯಪ್ರವೇಶಿಸಿ ಬಂಗ್ಲಾದೇಶ ರಚನೆಗೆ ಇಂದಿರಾಗಾಂಧಿ ಕಾರಣವಾಗಿದ್ದರು. ಅಲ್ಲದೆ, ತಮ್ಮ ಬಲಪಂಥೀಯ ಹಾಗೂ ಹಿಂದೂ ರಾಷ್ಟ್ರವಾದಿ ರಾಜಕೀಯ ಎದುರಾಳಿಗಳಿಂದಲೇ 'ದುರ್ಗೆಯ ಅಪರಾವತಾರ' ಎಂಬ ಪ್ರಶಂಸೆಗೆ ಪಾತ್ರರಾಗುವ ಮೂಲಕ ಜನಪ್ರಿಯತೆಯ

ತುಟ್ಟತುದಿಯನ್ನು ಮುಟ್ಟಿದ್ದರು. ಇದರ ಆಧಾರದ ಮೇಲೆ ಅವರು ಮಧ್ಯಕಾಲೀನ ಚುನಾವಣೆ ಘೋಷಿಸಿ ಭಾರಿ ಜಯಗಳಿಸಿದ್ದರು. ಇದು ಕಾಂಗ್ರೆಸ್ ಪಕ್ಷದ ಮೇಲೆ ಅವರ ಹಿಡಿತವನ್ನು ಪೂರ್ಣ ಭದ್ರಗೊಳಿಸಿ, ಪಕ್ಷ ಮತ್ತು ಸರ್ಕಾರಗಳೆರಡೂ ತಮ್ಮ ಸಾಂಸ್ಥಿಕ ಸ್ವರೂಪಗಳನ್ನು ಕಳೆದುಕೊಂಡು ಏಕವ್ಯಕ್ತಿ ಅಧಿಕಾರಕ್ಕೆ ಒಳಪಡಲಾರಂಭಿಸಿದ್ದವು. ಇಂದಿರಾಗಾಂಧಿಯವರ ಸುತ್ತ ಒಂದು ವೃತ್ತಿಪರ ವಂದಿಮಾಗಧರ ಗುಂಪೇ ಸೃಷ್ಟಿಯಾಗತೊಡಗಿತ್ತು. ಎಲ್ಲೆಲ್ಲೂ ರಾಜಕೀಯ ದಲ್ಲಾಳಿಗಳ ಉಪಟಳ ಆರಂಭವಾಗಿತ್ತು. ಇದರಿಂದಾಗಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಂಗಗಳ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿ, ಪ್ರಜಾಪ್ರಭುತ್ವಕ್ಕೆ ಗಂಡಾಂತರ ಒದಗಬಹುದೆಂದು ಪ್ರತಿಪಕ್ಷಗಳ ಪ್ರಮುಖರಲ್ಲದೆ ರಾಷ್ಟ್ರದ ಪ್ರಮುಖ ಬುದ್ಧಿಜೀವಿಗಳೂ ಶಂಕೆ ವ್ಯಕ್ತಪಡಿಸಲಾರಂಭಿಸಿದ್ದರು. ಜೊತೆಗೆ ಇಂದಿರಾಗಾಂಧಿಯವರ ಅವಸರದ ಜನಪ್ರಿಯ 'ಪ್ರಗತಿಪರ' ಕ್ರಮಗಳಾಗಲೀ, 'ಗರೀಬೀ ಹಟಾವೋ' ಘೋಷಣೆಯಾಗಲೀ, ರಾಷ್ಟ್ರದ ಆರ್ಥಿಕ ವಾಸ್ತವವನ್ನು ಬದಲಿಸುವಲ್ಲಿ ವಿಫಲವಾಗತೊಡಗಿರುವುದು ನಿಧಾನವಾಗಿ ಜನಸಾಮಾನ್ಯರ ಗಮನಕ್ಕೂ ಬರತೊಡಗಿತು.

ಆರ್ಥಿಕ ಕುಸಿತ- ಅಶಾಂತಿಯ ತಳಮಳ

ಜನಸಾಮಾನ್ಯರ ನಿತ್ಯಜೀವನ ದುರ್ಭರವೆನ್ನಿಸತೊಡಗಿತ್ತು. ರಾಷ್ಟ್ರಾಡಳಿತ ತನ್ನ ಸಾಮೂಹಿಕತೆಯನ್ನು ಕಳೆದುಕೊಂಡು ವೈಯಕ್ತೀಕರಣಕ್ಕೆ ಒಳಪಟ್ಟಿದ್ದರ ಪರಿಣಾಮವಾಗಿ ಅಭಿವೃದ್ಧಿ ಯೋಜನೆಗಳು ಅಸ್ತವ್ಯಸ್ತಗೊಂಡವು. ತತ್ಕಾಲೀನ ಜನಕಲ್ಯಾಣ ಕಾರ್ಯಕ್ರಮಗಳ ಫಲಗಳೂ ರಾಜಕೀಯ ದಲ್ಲಾಳಿಗಳ ಮಧ್ಯೆಯೇ ಹರಿದು ಹಂಚಿಹೋಗತೊಡಗಿತು. ಬೆಲೆ ಏರಿಕೆ ಸೂಚ್ಯಂಕ ಶೇಕಡಾ ೨೫ರ ಅಂಕಿಯನ್ನು ಮುಟ್ಟಿತು. 'ಹಸಿರು ಕ್ರಾಂತಿ' ಸ್ಥಗಿತಗೊಂಡು ದೇಶ ೬೦ ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವ ಪರಿಸ್ಥಿತಿ ಉಂಟಾಯಿತು. ವಿದೇಶೀ ವಿನಿಮಯ ಸಂಗ್ರಹ ತಳ ಮುಟ್ಟಿತ್ತು. ಬಂಗ್ಲಾ ವಿಮೋಚನಾ ಸಮರದ ಖರ್ಚು ದೇಶದ ಖಜಾನೆಗೆ ದೊಡ್ಡ ಪೆಟ್ಟು ನೀಡಿತ್ತು. ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ ಏರತೊಡಗಿ, ಅದು ದೇಶದ ಜನಸಂಖ್ಯೆಯ ಅರ್ಧದಷ್ಟನ್ನು ಮುಟ್ಟತೊಡಗಿತ್ತು. ನಿರುದ್ಯೋಗ, ಆಹಾರ ಅಭಾವ, ಪಡಿತರದ ಉದ್ದನೆ ಸರತಿ ಸಾಲುಗಳು ಜನರನ್ನು ಕಂಗೆಡಿಸಿತ್ತು. ದೇಶದ ಆರ್ಥಿಕತೆ ಸಂಪೂರ್ಣ ಕುಸಿಯುವ ಸೂಚನೆಗಳನ್ನು ನೀಡತೊಡಗಿತ್ತು. ದೇಶಾದ್ಯಂತ ಅಶಾಂತಿಯ ತಳಮಳ ಆರಂಭವಾಗಿತ್ತು. ಅದರ ಸೂಚನೆ ಗುಜರಾತ್‌ನಲ್ಲಿ ಮುಂದೆ ನವನಿರ್ಮಾಣ ಸಮಿತಿ ರಚನೆಗೆ ಕಾರಣವಾದ ವಿದ್ಯಾರ್ಥಿ ಅಶಾಂತಿಯಲ್ಲಿ ಕಾಣತೊಡಗಿತ್ತು.

ಪ್ರಜಾಪ್ರಭುತ್ವಕ್ಕೆ ಗಂಡಾಂತರ - ಎಚ್ಚರಿಕೆ

ಜಯಪ್ರಕಾಶರು ತಮ್ಮ ಪತ್ನಿಯ ತೀವ್ರ ಅನಾರೋಗ್ಯದ ಆತಂಕದ ಕ್ಷಣಗಳ ಮಧ್ಯೆ ಇದ್ದಾಗಲೇ ಭಾರತೀಯ ಲೋಕದಳದ ಬಿಜು ಪಟ್ನಾಯಕ್ ಅವರು ೭೩ರ ಫೆಬ್ರವರಿಯಲ್ಲಿ

ಅವರನ್ನು ಕಲ್ಕತ್ತಾದಲ್ಲಿ ಭೇಟಿಯಾದರು. ಅವನತಿಯ ಸ್ಥಿತಿಯಲ್ಲಿದ್ದ ರಾಷ್ಟ್ರದ ರಾಜಕಾರಣಕ್ಕೆ ಸರಿಯಾದ ದಿಕ್ಕು ನೀಡುವ ಮೊದಲ ಹೆಜ್ಜೆಯಾಗಿ ವಿರೋಧಪಕ್ಷಗಳ ಅಖಿಲಭಾರತ ರಂಗವೊಂದನ್ನು ಸ್ಥಾಪಿಸುವಲ್ಲಿ ನೆರವಾಗಲು ಅವರು ಕೋರಿದ್ದರು. ಆಗ ಜಯಪ್ರಕಾಶರು ಅಂತಹುದೊಂದು ರಂಗದ ಬಗ್ಗೆ ಒಲವು ತೋರಿದರಾದರೂ, ಪಕ್ಷರಾಜಕಾರಣದಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿರಾಕರಿಸಿದ್ದರು. ಅಂದಮಾತ್ರಕ್ಕೆ ಅವರಿಗೆ ಅಂದಿನ ರಾಷ್ಟ್ರ ರಾಜಕಾರಣದ ಬಗ್ಗೆ ಆಸಕ್ತಿ ಇರಲಿಲ್ಲವೆಂದಲ್ಲ. ೭೨ರ ಹೊತ್ತಿಗೇ ಅವರು ಪತ್ರಿಕಾ ಸಂದರ್ಶನಗಳನ್ನು ನೀಡುತ್ತಾ 'ದೇಶದಲ್ಲಿ ಅಧಿಕಾರದ ಕೇಂದ್ರೀಕರಣದ ಪರಿಣಾಮವಾಗಿ ಏಕವ್ಯಕ್ತಿ ಅಧಿಕಾರ ವ್ಯವಸ್ಥೆ ರೂಪುಗೊಂಡು, ಮುಖ್ಯಮಂತ್ರಿಗಳನ್ನು ರಾಜ್ಯಗಳ ಮೇಲೆ ಹೇರುವ ಪ್ರವೃತ್ತಿ ಪ್ರಜಾಪ್ರಭುತ್ವಕ್ಕೆ ಗಂಡಾಂತರಕಾರಿಯೇ ಹೌದು' ಎಂದು ತಮ್ಮ ಅಭಿಪ್ರಾಯವನ್ನು ಸಾರ್ವಜನಿಕವಾಗಿ ವ್ಯಕ್ತಪಡಿಸಿದ್ದರು. ೭೩ರಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಾಧೀಶರ ಹಿರಿತನವನ್ನು ಕಡೆಗಣಿಸಿ ಮುಖ್ಯನ್ಯಾಯಾಧೀಶರನ್ನು 'ಆಯ್ಕೆ' ಮಾಡಿದ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಅವರು ಪತ್ರಿಕಾ ಹೇಳಿಕೆ ನೀಡಿದರಲ್ಲದೆ, ಪ್ರಧಾನಿ ಇಂದಿರಾಗಾಂಧಿಯವರಿಗೆ ಇಂತಹ ಹಸ್ತಕ್ಷೇಪ ಉಂಟುಮಾಡುವ ಅನಾಹುತಗಳ ಬಗ್ಗೆ ವಿವರಿಸಿ ಪತ್ರ ಬರೆದರು. ಇಂದಿರಾ ಅವರು ಜಯಪ್ರಕಾಶರ ವಾದವನ್ನು ಒಪ್ಪದೇ ಮಾರುತ್ತರದಲ್ಲಿ ಪ್ರಗತಿಪರ ನ್ಯಾಯಾಂಗದ ಪ್ರಸ್ತಾಪ ಮಾಡಿದಾಗ, ಅವರು ತಾವು ಆಗ ತಾನೇ ತಮ್ಮ ಇತ್ತೀಚಿನ ಆಲೋಚನಾ ಲಹರಿಯನ್ನು ವ್ಯಕ್ತಪಡಿಸಲು ದೆಹಲಿಯಿಂದ ಆರಂಭಿಸಿದ್ದ 'ಎವೆರಿಮಾನ್ಸ್' ಎಂಬ ನಿಯತಕಾಲಿಕದ ೭೩ರ ಡಿಸೆಂಬರ್ ಸಂಚಿಕೆಯಲ್ಲಿ ಸಂಸತ್ ಸದಸ್ಯರಿಗೆ ಬಹಿರಂಗ ಪತ್ರವೊಂದನ್ನು ಬರೆದರು. ಅದರಲ್ಲಿ 'ಜನತೆಯ ಮೂಲಭೂತ ಹಕ್ಕುಗಳ ಹಾಗೂ ನ್ಯಾಯಾಂಗ ಸ್ವಾತಂತ್ರ್ಯದ ರಕ್ಷಣೆ ಮತ್ತು ರಾಜಕೀಯ ಹಾಗೂ ಅಧಿಕಾರಿ ವಲಯದ ಭ್ರಷ್ಟಾಚಾರ—ಈ ಎರಡು ವಿಷಯಗಳ ಕಡೆ ಜನತಾ ಪ್ರತಿನಿಧಿಗಳು ತುರ್ತು ಗಮನ ಹರಿಸದೇ ಹೋದರೆ, ನೀವು ಜನತೆಯ ನಂಬಿಕೆಗೆ ದ್ರೋಹ ಬಗೆದಂತಾಗುತ್ತದೆ. ಅಲ್ಲದೆ, ಸಮಾಜವಾದ, ಬಡತನ ನಿವಾರಣೆ, ಪ್ರಜಾಪ್ರಭುತ್ವ ಕುರಿತ ನಿಮ್ಮ ಮಾತು ಕೇವಲ ಬುಡಬುಡಿಕೆಯಾಗುತ್ತದೆ....' ಎಂದು ಎಚ್ಚರಿಸಿದ್ದರು. ಆದರೆ ರಾಜಕಾರಣಿಗಳು ವೃತ್ತಿಪರರಾಗಿ ಹೋಗಿದ್ದರು. ಅವರಿಂದ ಪ್ರತಿಸ್ಪಂದನವೇ ಹೊಮ್ಮಲಿಲ್ಲ.

ವಿದ್ಯಾರ್ಥಿ ಶಕ್ತಿಯ ಸೆಳೆತ - ನವನಿರ್ಮಾಣ ಚಳುವಳಿಯತ್ತ

ಇದರಿಂದ ನಿರಾಶರಾದ ಜನಪ್ರಕಾಶರ ಕಣ್ಣು ಬಿದ್ದದ್ದು ಯುವಶಕ್ತಿಯ ಮೇಲೆ; ವಿಶೇಷತಃ ವಿದ್ಯಾರ್ಥಿಶಕ್ತಿಯ ಮೇಲೆ. ೧೯೭೪ರ ಜನವರಿಯಲ್ಲಿ ಅವರು ವಾರಣಾಸಿಯಲ್ಲಿ ಆಯೋಜಿಸಲಾಗಿದ್ದ, ಯಾವುದೇ ರಾಜಕೀಯಪಕ್ಷದ ವಿದ್ಯಾರ್ಥಿಶಾಖೆಗಳಿಗೆ ಸೇರದ ವಿದ್ಯಾರ್ಥಿಗಳ ಸಂಘಟನೆಯೊಂದನ್ನು ಉದ್ದೇಶಿಸಿ ಮಾತನಾಡಿದರು. ಅಲ್ಲಿ ಅವರು 'ಈಗ ಅಸ್ತಿತ್ವದಲ್ಲಿರುವ ಪ್ರಜಾಸತ್ತಾತ್ಮಕ ಸಂಸ್ಥೆಗಳು ಕುಸಿದು ಹೋಗದಂತೆ ತಡೆದು, ಸ್ವಯಮಾಡಳಿತವುಳ್ಳ

ಪಳ್ಳಿಗಳನ್ನು ಆಧರಿಸಿದ ಗ್ರಾಮರಾಜ್ಯವನ್ನು ಕಟ್ಟುವ ಗಾಂಧೀಜಿ ಕನಸನ್ನು ನನಸು ಮಾಡುವ ಮಹಾಜವಾಬ್ದಾರಿಯನ್ನು ನೀವು ವಹಿಸಿಕೊಳ್ಳಬೇಕಾದ ಕಾಲವೀಗ ಒದಗಿ ಬಂದಿದೆ' ಎಂದು ಕರೆಕೊಟ್ಟರು. ಹಾಗೆಯೇ ಈ ದಿಕ್ಕಿನ ಕಾರ್ಯಾಚರಣೆಯನ್ನು ಕಾಂಗ್ರೆಸ್ ಸರ್ಕಾರ ವಿರೋಧಿಯಾದ ಕಾರ್ಯಕ್ರಮವೆಂಬಂತೆ ರೂಪಿಸದೆ, ಅಹಿಂಸಾ ತತ್ವದ ಆಧಾರದ ಮೇಲೆ ನಡೆಸಲು ಸೂಚಿಸಿದರು.

ಈ ಮಧ್ಯೆ ಕೆಲವು ರಾಜ್ಯ ವಿಧಾನಸಭೆಗಳಿಗಾಗಿ ನಡೆದ ಚುನಾವಣೆಗಳಲ್ಲಿ ಕಂಡು ಬಂದ ಅಪಾರ ಹಣದ ಪ್ರವಾಹ, ಮತಗಟ್ಟೆಗಳ ಆಕ್ರಮಣ ಮುಂತಾದ ಚುನಾವಣಾ ಮೋಸಗಳು ಅವರನ್ನು ಚಿಂತಿತರನ್ನಾಗಿ ಮಾಡಿದವು. ಅವರು ಪ್ರಜಾಪ್ರಭುತ್ವದ ಮೂಲ ಆಧಾರವೆನ್ನಿಸುವ ಚುನಾವಣಾ ವ್ಯವಸ್ಥೆಯನ್ನೇ ಬುಡಮೇಲುಗೊಳಿಸುವ ಈ ಪ್ರವೃತ್ತಿಯನ್ನು ತಡೆಯಲು ದೇಶಾದ್ಯಂತ ವಕೀಲರು, ಶಿಕ್ಷಕರು, ವೈದ್ಯರು, ಲೇಖಕರು ಮುಂತಾದವರನ್ನೊಳಗೊಂಡ ಬುದ್ಧಿಜೀವಿಗಳ ಸಭೆಗಳನ್ನು ಕರೆದು ಸೂಕ್ತ ಕಾರ್ಯಕ್ರಮ ರೂಪಿಸುವಂತೆ ಸೂಚಿಸಿದರು. ಹಾಗೇ ಬಿಹಾರದಲ್ಲಿ ತಾವು ಸಂಘಟಿಸಿದ್ದ ಗ್ರಾಮಸಭೆಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಎಂಬುದನ್ನು ಒಮ್ಮೆ ಅವಲೋಕನ ಮಾಡಿಕೊಂಡು ಬರಲು ತಮ್ಮ ಆಶ್ರಮದ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ಪ್ರವಾಸ ಕೈಗೊಂಡರು.

ವಿದ್ಯಾರ್ಥಿಗಳಿಗೆ ಜಯಪ್ರಕಾಶರ ಕೊಟ್ಟ ಕರೆಗೆ ಪ್ರತಿಧ್ವನಿಯೆಂಬಂತೆ ಗುಜರಾತ್‌ನಲ್ಲಿ ವಿದ್ಯಾರ್ಥಿಗಳು ರಾಜ್ಯ ಸರ್ಕಾರದ ಅದಕ್ಷ ಹಾಗೂ ಜನವಿರೋಧಿ ಆಡಳಿತ ಮತ್ತು ಭ್ರಷ್ಟಾಚಾರಗಳ ವಿರುದ್ಧ ವ್ಯಾಪಕ ಆಂದೋಲನವನ್ನೇ ಸಂಘಟಿಸಿ, ರಾಜ್ಯಾದ್ಯಂತ ವಿಧಾನಸಭಾ ವಿಸರ್ಜನೆಗಾಗಿ ಬಿರುಸಿನ ಚಳುವಳಿ ನಡೆಸಿದ್ದರು. ೧೯೭೪ರ ಫೆಬ್ರವರಿಯಲ್ಲಿ ಗುಜರಾತ್ ಸರ್ವೋದಯ ಮಂಡಲದವರು ಆಯೋಜಿಸಿದ್ದ 'ಲೋಕ ಸ್ವರಾಜ್ ಸಮ್ಮೇಳನ'ವನ್ನು ಉದ್ದೇಶಿಸಿ ಮಾತನಾಡಲು ಅಹಮದಾಬಾದ್‌ಗೆ ಹೋದ ಜಯಪ್ರಕಾಶರನ್ನು ವಿದ್ಯಾರ್ಥಿಗಳು ಸಂಪರ್ಕಿಸಿ, ತಮ್ಮ ನವನಿರ್ಮಾಣ ಚಳುವಳಿಗೆ ಬೆಂಬಲ ಕೋರಿದರು. ಜಯಪ್ರಕಾಶರು ಈ ಚಳುವಳಿಗೆ ಕಾಂಗ್ರೆಸ್ ವಿರೋಧಿ ರಾಜಕೀಯ ಬಣ್ಣ ಬಳಿಯದೆ ಅದನ್ನು ಪಕ್ಷೇತರವಾಗಿ ಹಾಗೂ ಅಹಿಂಸಾತ್ಮಕ ಮಾರ್ಗದಲ್ಲಿ ಕೊಂಡೊಯ್ಯುವಂತೆ ಸಲಹೆ ನೀಡಿದರು ಮತ್ತು ವಿದ್ಯಾರ್ಥಿಗಳ ಅನಿರ್ದಿಷ್ಟ ನಿರಶನವನ್ನು, ಅವರಿಗೆ ನಿಂಬೆ ಪಾನಕ ನೀಡುವ ಮೂಲಕ ಕೊನೆಗೊಳಿಸಿದರು. ಜಯಪ್ರಕಾಶರು ದೆಹಲಿಗೆ ಹೋಗಿ ಪ್ರಧಾನಿ ಇಂದಿರಾಗಾಂಧಿಯವರ ಬಳಿ ಈ ಬಗೆಗೆ ಮಾತನಾಡಿದರು. ಕೆಲವೇ ದಿನಗಳಲ್ಲಿ ಗುಜರಾತ್ ವಿಧಾನಸಭೆಯನ್ನು ವಿಸರ್ಜಿಸಿ, ರಾಷ್ಟ್ರಪತಿ ಆಡಳಿತವನ್ನು ಘೋಷಿಸಲಾಯಿತು.

ನೂರಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿದ್ದ ಸರ್ಕಾರದ ದಮನಕಾರಿ ಕ್ರಮಗಳ ಹೊರತಾಗಿಯೂ ಗುಜರಾತ್‌ನಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ್ದ ಸಂಘಟನಾ ಬಲ ಹಾಗೂ ಛಲ ಜಯಪ್ರಕಾಶರಲ್ಲಿ, ವಿದ್ಯಾರ್ಥಿಬಲವು ತನ್ನ ಕನಸಿನ ಕ್ರಾಂತಿಶಕ್ತಿಯಾಗಬಲ್ಲ ಸಾಧ್ಯತೆಯನ್ನು ಮನಗಾಣಿಸಿತು. ವಿದ್ಯಾರ್ಥಿಗಳು ಒಂದು ವರ್ಷವಾದರೂ ಶಿಕ್ಷಣ ತೊರೆದು ರಾಷ್ಟ್ರ ಪುನರ್

ನಿರ್ಮಾಣ ಚಳುವಳಿಯಲ್ಲಿ ತೊಡಗಿಕೊಳ್ಳಬೇಕೆಂದು ಜಯಪ್ರಕಾಶರು ಪ್ರಥಮಬಾರಿಗೆ ಕರೆ ಕೊಟ್ಟುದುದು ಈ ಸಂದರ್ಭದಲ್ಲಿಯೇ.

ಬಿಹಾರದ ಅಶಾಂತಿ

ಆ ಹೊತ್ತಿಗೆ ಬಿಹಾರದಲ್ಲಾಗಲೇ ವಿದ್ಯಾರ್ಥಿ ಅಶಾಂತಿ ಆರಂಭವಾಗಿತ್ತು. ದೇಶದ ಅರ್ಥವ್ಯವಸ್ಥೆಯ ಅಸ್ತವ್ಯಸ್ತತೆಯ ಅತಿ ಕೆಟ್ಟ ಪರಿಣಾಮಕ್ಕೆ ಈಡಾಗಿದ್ದುದು ಬಿಹಾರ. ಅಲ್ಲಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿನಿಲಯಗಳಲ್ಲಿನ ಊಟದ ಶುಲ್ಕದ ಏರಿಕೆಯ ವಿರುದ್ಧ ಎತ್ತಿದ ದನಿ, ಸಾರ್ವತ್ರಿಕ ಬೆಲೆ ಏರಿಕೆ ವಿರುದ್ಧವಾದ ಹಾಗೂ ಶಿಕ್ಷಣ ಸುಧಾರಣೆಯ ಪರವಾದ ವ್ಯಾಪಕ ಚಳುವಳಿಯಾಗಿ ಬೆಳೆದು, ಬಿಹಾರ ವಿಧಾನಸಭೆಯ ವಿಸರ್ಜನೆಯ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿತ್ತು. ಚಳುವಳಿಯ ನಾಯಕರು ಜಯಪ್ರಕಾಶರ ಬೆಂಬಲ ಕೋರಿ ಬಂದಾಗ, ಅವರು ಗುಜರಾತ್ ವಿಧಾನಸಭೆಯ ವಿಸರ್ಜನೆಯ ನಂತರ ಅಲ್ಲಿನ ನವನಿರ್ಮಾಣ ಚಳುವಳಿ ಹೆಚ್ಚು ಕಡಿಮೆ ಸ್ಥಗಿತಗೊಂಡಿದ್ದುದನ್ನು ಗಮನಿಸಿ, ಕೇವಲ 'ಸರ್ಕಾರ ವಿರೋಧಿ'ಯಾದ ಚಳುವಳಿಗೆ ತಮ್ಮ ಬೆಂಬಲವಿರಲಾರದೆಂದು ತಿಳಿಸಿದ್ದರು. ಆದರೆ, ರಾಷ್ಟ್ರದ ನೈತಿಕ ಹಾಗೂ ಸಾಂಸ್ಥಿಕ ಪುನರ್‌ನಿರ್ಮಾಣಕ್ಕಾಗಿ ದೀರ್ಘಕಾಲಿಕ ಚಳುವಳಿ ನಡೆಸಲು ವಿದ್ಯಾರ್ಥಿಗಳು ಶಿಕ್ಷಣ ತೊರೆದು ಸಿದ್ಧವಿರುವುದಾದರೆ, ಸರ್ವೋದಯ ಚಳುವಳಿಯ ಚೌಕಟ್ಟಿನಲ್ಲಿಯೇ ವಿದ್ಯಾರ್ಥಿ ಚಳುವಳಿಗೆ ಬೆಂಬಲವಾಗಿ ನಿಲ್ಲಲು ತಾವು ಸಿದ್ಧರೆಂದೂ ಜಯಪ್ರಕಾಶರು ಹೇಳಿದ್ದರು.

ಜಯಪ್ರಕಾಶರ ಈ ಪ್ರಸ್ತಾವನೆ ಇನ್ನೂ ಚರ್ಚೆಯಲ್ಲಿದ್ದಾಗಲೇ ೧೯೭೪ರ ಮಾರ್ಚ್ ೧೮ರಂದು ರಾಜ್ಯ ಛಾತ್ರ ಸಂಘರ್ಷ ಸಮಿತಿ ಹೆಸರಿನಲ್ಲಿ ವಿದ್ಯಾರ್ಥಿ ನಾಯಕತ್ವ ಬಿಹಾರ ವಿಧಾನಸಭೆಯ ಘೇರಾವೋಗೆ ಕರೆಕೊಟ್ಟಿತು. ಹತ್ತು ಸಾವಿರ ವಿದ್ಯಾರ್ಥಿಗಳಿದ್ದ ಗುಂಪು ಪೊಲೀಸರ ದಾಳಿಯಿಂದ ಪ್ರಚೋದನೆಗೊಂಡು ವ್ಯಾಪಕ ಹಿಂಸಾಚಾರಕ್ಕಿಳಿಯಿತು; ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟವುಂಟುಮಾಡಿತು. ಇದರಿಂದ ಕುಪಿತಗೊಂಡ ಸರ್ಕಾರ ಸೇನೆಯನ್ನು ಕರೆಸಿ ಪರಿಸ್ಥಿತಿಯನ್ನು ತಹಬಂದಿಗೆ ತರಲು ಯತ್ನಿಸಿತು. ಈ ಸಂಬಂಧ ನಡೆದ ಗೋಲಿಬಾರ್‌ನಲ್ಲಿ ಹತ್ತಾರು ಜನ ಸತ್ತು, ನೂರಾರು ಜನ ಗಾಯಗೊಂಡು ಸಾವಿರಾರು ಜನ ಸೆರೆಮನೆ ಸೇರಿದರು. ಜೊತೆಗೆ ಈ ವಿದ್ಯಾರ್ಥಿ ಚಳುವಳಿಗೆ ಬೆಂಬಲ ನೀಡುತ್ತಿದ್ದ 'ಸರ್ಚ್‌ಲೈಟ್' ದಿನಪತ್ರಿಕೆಯ ಕಛೇರಿ ಅನುಮಾನಾಸ್ಪದ ರೀತಿಯಲ್ಲಿ ಧ್ವಂಸಗೊಂಡು ಹಿಂಸಾಚಾರದಲ್ಲಿ ಹೊರಗಿನವರ ಕೈವಾಡವಿರುವ ಸೂಚನೆಗಳೂ ದೊರಕಿದವು. ಈ ಸಂದರ್ಭದಲ್ಲಿ ಜಯಪ್ರಕಾಶರು ಪ್ರಾಸ್ಟೇಟ್ ಗ್ರಂಥಿ ತೊಂದರೆ ಸಂಬಂಧ ಶಸ್ತ್ರಚಿಕಿತ್ಸೆಗಾಗಿ ಸಿದ್ಧರಾಗುತ್ತಿದ್ದರು. ಆದರೆ ತಮ್ಮ ಕಣ್ಮುಂದೆಯೇ ನಡೆದ ವಿದ್ಯಾರ್ಥಿಶಕ್ತಿಯ ದಮನ ಅವರನ್ನು ಈ ವಿದ್ಯಾರ್ಥಿ ಚಳುವಳಿಯ ಕಡೆ ಸೆಳೆಯಿತು. 'ಜನತೆಯ ಪ್ರತಿಭಟನಾ ಹಕ್ಕನ್ನು ದಮನಕಾರೀ ಕ್ರಮಗಳ ಮೂಲಕ ಹತ್ತಿಕ್ಕುವುದನ್ನು ಸರ್ಕಾರ ಮುಂದುವರಿಸಿದಲ್ಲಿ ಈ ಸಂಘರ್ಷದಲ್ಲಿ ಸ್ವತಃ ತಾವು

ಮಧ್ಯಪ್ರವೇಶಿಸುವುದು ಅನಿವಾರ್ಯವಾಗುತ್ತದೆ; ನಾವು ಗಾಂಧಿ ನೇತೃತ್ವದಲ್ಲಿ ಹೋರಾಡಿದ್ದು ಇಂತಹ ದಮನ ಎದುರಿಸಲಿಕ್ಕಿಲ್ಲ' ಎಂದು ಅವರು ಈ ಸಂದರ್ಭದಲ್ಲಿ ಸರ್ಕಾರವನ್ನು ಎಚ್ಚರಿಸಬೇಕಾಯಿತು.

ಇಂದಿರಾ ದಾಳಿ - ಪ್ರತ್ಯುತ್ತರ

ಗುಜರಾತ್ ವಿಧಾನಸಭೆಯನ್ನು ಒಲ್ಲದ ಮನಸ್ಸಿನಿಂದ ವಿಸರ್ಜಿಸಲು ಒಪ್ಪಿದ್ದ ಪ್ರಧಾನಿ ಇಂದಿರಾಗಾಂಧಿಯವರು ಈಗ ಜಯಪ್ರಕಾಶರು ಬಿಹಾರದಲ್ಲಿ ವಿದ್ಯಾರ್ಥಿ ಚಳುವಳಿಯನ್ನು ಬೆಂಬಲಿಸತೊಡಗಿರುವುದನ್ನು ಕಂಡು, ಇದು ತಮ್ಮ ಪಕ್ಷ ಹಾಗೂ ಸರ್ಕಾರಗಳಿಗೇ ಎಸೆಯಲಾಗುತ್ತಿರುವ ಸವಾಲು ಎಂದು ಭಾವಿಸಿದರು. ಭುವನೇಶ್ವರದ ತಮ್ಮ ಒಂದು ಸಾರ್ವತ್ರಿಕ ಭಾಷಣದಲ್ಲಿ ಅವರು "ಕೆಲವು ಸಾಮಾಜಿಕ ಕಾರ್ಯಕರ್ತರು ಗ್ರಾಮರಾಜ್ಯ ನಿರ್ಮಾಣ ಕೆಲಸಗಳಲ್ಲಿ ಉತ್ಸಾಹ ಕಳೆದುಕೊಂಡು ರಾಜಕೀಯವಾಗಿ ಕ್ರಿಯಾಶೀಲರಾಗ ತೊಡಗಿರುವುದು ಮತ್ತು ವಿನೋಬಾ ನೇತೃತ್ವದ ರಾಜಕೀಯೇತರ ಸರ್ವೋದಯ ಚಳುವಳಿಯನ್ನು ಹೀಗೆ ಕೆಲವಾರು ರಾಜಕೀಯ ಉದ್ದೇಶಗಳಿಗಾಗಿ ಬಳಸತೊಡಗಿರುವ ಸೂಚನೆ ದುರಾದೃಷ್ಟಕರ. ಇಂತಹ ಚಟುವಟಿಕೆಗಳಿಗೆ ಅನುಮಾನಾಸ್ಪದ ಮೂಲಗಳಿಂದ ಹಣ ಬರುತ್ತಿರುವ ವರದಿಗಳಿವೆ..." ಎಂಬ ಪ್ರಚೋದನಕಾರಿ ಟೀಕೆಗೆ ಕೈಹಾಕಿದರು. ತಮ್ಮ ಪ್ರಾಮಾಣಿಕತೆಯನ್ನೇ ಪ್ರಶ್ನಿಸುವಂತಿದ್ದ ಈ ಅನಿರೀಕ್ಷಿತ ದಾಳಿಯಿಂದ ತೀವ್ರವಾಗಿ ನೊಂದ ಜಯಪ್ರಕಾಶರು, "ನನ್ನ ಮತ್ತು ವಿನೋಬಾ ನಡುವೆ ಭಿನ್ನಾಭಿಪ್ರಾಯ ಉಂಟುಮಾಡುವ ಈ ಪ್ರಯತ್ನ ಸಫಲವಾಗದು... ನಮ್ಮ ಕೆಲಸ-ಜವಾಬ್ದಾರಿಗಳು ಯಾವುವು; ಸರ್ವೋದಯ ಕಾರ್ಯಕರ್ತ ಏನು ಮಾಡಬಹುದು, ಏನು ಮಾಡಬಾರದು ಎಂಬುದನ್ನು ಇಂದಿರಾಜಿ ನಮಗೆ ಕಲಿಸುವ ಅಗತ್ಯವಿಲ್ಲ... ನಾನು ನನ್ನ ಬದುಕನ್ನು ಹೇಗೆ ನಡೆಸುತ್ತಿದ್ದೇನೆ ಎಂಬುದು ಜಗತ್ತಿಗೇ ಗೊತ್ತಿದೆ... ಈ ನೆಲೆಯಲ್ಲಿ ನಾನು ಭ್ರಷ್ಟನೆನಿಸಿಕೊಳ್ಳುವುದಾದರೆ ಗಾಂಧೀಜಿ ಭ್ರಷ್ಟಾತಿಭ್ರಷ್ಟರೆನಿಸಿಕೊಳ್ಳಬೇಕಾಗುತ್ತದೆ" ಎಂಬ ವಿವರವಾದ ಮಾರುತ್ತರ ನೀಡಿದರು. ಆದರೆ ಜಯಪ್ರಕಾಶರಂತಹ ಹಿರಿಯ ರಾಜಕೀಯ ಮುತ್ಸದ್ದಿಯನ್ನು, ಸರಳ ಜೀವನಶೈಲಿಯ ಗಾಂಧಿವಾದಿಯನ್ನು ಅನುಮಾನಾಸ್ಪದ ವ್ಯಕ್ತಿಯೆಂಬಂತೆ ಬಿಂಬಿಸುವ ಟೀಕೆ ಟಿಪ್ಪಣಿಗಳಿಂದ ಮುಜುಗರಗೊಂಡ ಶಂಕರ ದಯಾಳ್ ಸಿಂಗ್ ನೇತೃತ್ವದ ಕೆಲವು ಹಿರಿಯ ಕಾಂಗ್ರೆಸ್ಸಿಗರು ಇಂದಿರಾ ಮತ್ತು ಜಯಪ್ರಕಾಶರ ನಡುವೆ 'ಪರಸ್ಪರ ತಿಳುವಳಿಕೆ' ಉಂಟುಮಾಡುವ ಸಂಧಾನ ಸಭೆಗಳ ಪ್ರಯತ್ನ ಮಾಡಿದರು. ಆದರೆ ರಾಷ್ಟ್ರಾದ್ಯಂತ, ನಿರ್ದಿಷ್ಟವಾಗಿ ಬಿಹಾರದಲ್ಲಿ, ಪರಿಸ್ಥಿತಿ ಇಂತಹ ಸಂಧಾನಗಳ ಸಾಧ್ಯತೆಗಳನ್ನು ಮೀರಿ ಬಿಗಡಾಯಿಸತೊಡಗಿತ್ತು.

ಏಪ್ರಿಲ್ ೮ರಂದು ಜಯಪ್ರಕಾಶರು ಬಿಹಾರ ಸರ್ಕಾರಕ್ಕೆ ವಿದ್ಯಾರ್ಥಿ ಆಂದೋಳನವನ್ನು ಹಿಂಸಾತ್ಮಕ ಮಾರ್ಗಗಳ ಮೂಲಕ ಹತ್ತಿಕ್ಕುವ ಪ್ರಯತ್ನದ ವಿರುದ್ಧ ಕೊನೆಯ ಎಚ್ಚರಿಕೆಯಾಗಿ, ಸರ್ವೋದಯ ಮಂಡಲಿ, ಗಾಂಧಿಶಾಂತಿ ಪ್ರತಿಷ್ಠಾನ ಹಾಗೂ ತರುಣ ಶಾಂತಿಸೇನೆಯ

ಆಶ್ರಯದಲ್ಲಿ ಪಾಟ್ನಾದಲ್ಲಿ ಹತ್ತು ಕಿಲೋಮೀಟರ್ ಉದ್ದದ ಮೌನ ಮೆರವಣಿಗೆಯೊಂದನ್ನು ನಡೆಸಿದರು. ಪಾಟ್ನಾದ ಜನತೆ ಬೀದಿ ಬೀದಿಯಲ್ಲಿ ಈ ಮೆರವಣಿಗೆಯ ಮೇಲೆ ಹೂಮಳೆಗರೆದರು. ಮರುದಿನ ತಮ್ಮ ಮೌನಮುರಿದ ಜಯಪ್ರಕಾಶರು, ಗಾಂಧಿ ಮೈದಾನದಲ್ಲಿ ನೆರೆದಿದ್ದ ಒಂದೂವರೆ ಲಕ್ಷದಷ್ಟು ದೊಡ್ಡದಾದ ಜನಸ್ತೋಮದ ಮುಂದೆ, "ಇಪ್ಪತ್ತೇಳು ವರ್ಷಗಳಿಂದ ನೇಪಥ್ಯದಿಂದ ನಿಂತು ನಾನು ರಾಷ್ಟ್ರದ ವಿದ್ಯಮಾನಗಳನ್ನು ಗಮನಿಸುತ್ತಿರುವೆ.... ಹದಗೆಡುತ್ತಿರುವ ಪರಿಸ್ಥಿತಿ ನನ್ನ ಸಹನೆಯನ್ನು ಕೆಣಕುತ್ತಿದೆ. ನಾನಿನ್ನು ಸುಮ್ಮನಿರಲಾರೆ... ನಾನು ಈ ಪರಿಸ್ಥಿತಿಯನ್ನು ಸುಧಾರಿಸುವ ಜವಾಬ್ದಾರಿಯನ್ನು ಹೊರಲೇಬೇಕಾಗಿದೆ...." ಎಂದು ಘೋಷಿಸಿದರು. 'ಲೋಕನಾಯಕ ಜಯಪ್ರಕಾಶ್ ನಾರಾಯಣ್ ಜಿಂದಾಬಾದ್!' ಎಂಬ ಜನಸ್ತೋಮದ ಘೋಷಣೆಗಳು ಮುಗಿಲು ಮುಟ್ಟಿದವು. ಪಾಟ್ನಾದಲ್ಲಿ ಮತ್ತೆ ಗಾಂಧಿಯುಗ ಆರಂಭವಾದಂತಿತ್ತು....

'ಪ್ರಜಾಪ್ರಭುತ್ವಕ್ಕಾಗಿ ಪ್ರಜೆಗಳು'

ಜನತೆಯ ಈ ಅಭೂತಪೂರ್ವ ಪ್ರತಿಕ್ರಿಯೆ, ಪ್ರಾಸ್ಟೇಟ್ ಗ್ರಂಥಿಯ ತೊಂದರೆಯಿಂದಾಗಿ ತೀವ್ರ ಅಸ್ವಸ್ಥತೆ ಅನುಭವಿಸುತ್ತಿದ್ದ ಜಯಪ್ರಕಾಶರಲ್ಲೂ ಹೊಸ ಹುಮ್ಮಸ್ಸು ತುಂಬಿತು. ಬುದ್ಧಿಜೀವಿಗಳೊಂದಿಗೆ ಅವರು ನಡೆಸುತ್ತಿದ್ದ ಮಾತುಕತೆಗಳಿಗೆ ಒಂದು ಮೂರ್ತರೂಪ ಕೊಡುವ ಕ್ರಮವಾಗಿ ಏಪ್ರಿಲ್ ೧೩ ಹಾಗೂ ೧೪ರಂದು ದೆಹಲಿಯಲ್ಲಿ ಸಭೆಯೊಂದನ್ನು ಕರೆದರು. ಎಂ.ಎನ್. ರಾಯ್ ವಾದದಿಂದ ಪ್ರಭಾವಿತರಾಗಿ 'ರ್‍ಯಾಡಿಕಲ್ ಹುಮಾನಿಸ್ಟ್'ಎನಿಸಿದ್ದ ಎ.ಎಂ. ತಾರ್ಕುಂಡೆ ಅವರ ಅಧ್ಯಕ್ಷತೆಯಲ್ಲಿ ಪ್ರಜಾಪ್ರಭುತ್ವವನ್ನು ಕಾಪಾಡುವ ಕಾವಲು ಸಂಸ್ಥೆಯಾಗಿ 'ಪ್ರಜಾಪ್ರಭುತ್ವಕ್ಕಾಗಿ ಪ್ರಜೆಗಳು' (*ಸಿಟಿಜೆನ್ಸ್ ಫಾರ್ ಡೆಮಾಕ್ರಸಿ*) ಎಂಬ ವೇದಿಕೆಯನ್ನು ಹುಟ್ಟುಹಾಕಿದರು. ಪ್ರಸಕ್ತ ಚುನಾವಣಾ ಪದ್ಧತಿಗೆ ಪರ್ಯಾಯವೊಂದನ್ನು ರೂಪಿಸುವ, ಚುನಾವಣೆಗಳು ಮುಕ್ತ ಹಾಗೂ ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವ, ಜನತೆಯಲ್ಲಿ ನಾಗರಿಕ ಹಕ್ಕುಗಳ ಬಗ್ಗೆ ಜಾಗೃತಿ ಉಂಟುಮಾಡುವ, ಆಡಳಿತದ ಉನ್ನತ ಹಂತಗಳಲ್ಲಿನ ಭ್ರಷ್ಟಾಚಾರವನ್ನು ಬಯಲುಗೊಳಿಸುವ ಮೂಲಕ ಸಾರ್ವಜನಿಕ ಜೀವನದ ಸ್ವಚ್ಛತೆ ಕಾಪಾಡಿಕೊಂಡು ಹೋಗುವ ದಿಸೆಯಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನವೊಂದನ್ನು ಸಂಘಟಿಸುವ ಜವಾಬ್ದಾರಿಯನ್ನು ಇದಕ್ಕೆ ವಹಿಸಲಾಯಿತು. ಈ ಸಂಬಂಧ ಅಧಿಕಾರಿಗಳು, ವಾಣಿಜ್ಯೋದ್ಯಮಿಗಳು ಹಾಗೂ ರಾಜಕಾರಣಿಗಳ ಭ್ರಷ್ಟತೆಯಿಂದಾಗಿ ಉಂಟಾಗಿರುವ ಬೆಲೆ ಏರಿಕೆ ವಿರುದ್ಧ ಜನರನ್ನು ಗ್ರಾಹಕ ಹಿತರಕ್ಷಣಾ ಕಾರ್ಯಕ್ರಮಗಳಲ್ಲಿ ತೊಡಗಿಸುವ, ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿಕಾರಗಳನ್ನು ಜನತೆಗೆ ಮನದಟ್ಟುಮಾಡುವ ಮತ್ತು ಪ್ರಜಾಪ್ರಭುತ್ವಕ್ಕೆ ಸದಾ ರಕ್ಷಾಕವಚವಾಗಿರುವಂತೆ, ಭಾರತೀಯ ಭಾಷಾ ಪತ್ರಿಕೆಗಳು ಮುಕ್ತ ಹಾಗೂ ನಿರ್ಭೀತ ರೀತಿಯಲ್ಲಿ ಕೆಲಸ ಮಾಡುವಂತೆ ನೋಡಿಕೊಳ್ಳುವ ಪ್ರಣಾಳಿಕೆಯನ್ನು ಈ ವೇದಿಕೆ ಅನುಮೋದಿಸಿತು.

ಸಮಾನಂತರ ಸರ್ಕಾರದ ಮೊದಲ ಹೆಜ್ಜೆ

ಜಯಪ್ರಕಾಶರು ಈ ವೇದಿಕೆ ರಚನೆಯ ಸಂಬಂಧವಾಗಿ ದೆಹಲಿಯಲ್ಲಿರುವಾಗಲೇ, ಅವರು ತಮ್ಮ ಸೆಖೊದೊವ್ರೋರಾ ಆಶ್ರಮದ ಮೂಲಕ ವ್ಯಾಪಕ ಕ್ಷೇತ್ರ ಕಾರ್ಯ ಮಾಡಿ ಗ್ರಾಮ ಸ್ವಯಮಾಡಳಿತದ ಯಶಸ್ಸನ್ನು ಕಂಡಿದ್ದ ಗಯಾ ಜಿಲ್ಲೆಯಲ್ಲಿ ವಿದ್ಯಾರ್ಥಿ ಚಳುವಳಿಯ ಅಂಗವಾಗಿ ಗಯಾ ನಗರದಲ್ಲಿ ನಡೆದ ಶಾಂತಿಯುತ ಮೆರವಣಿಗೆ ಮೇಲೆ ಪೊಲೀಸರು ಗುಂಡು ಹಾರಿಸಿ ಎಂಟು ಜನರನ್ನು ಕೊಂದ ಸುದ್ದಿ ಬಂದಿತು. ಅಷ್ಟೇ ಅಲ್ಲ, ಗೋಲೀಬಾರನ್ನು ಸರ್ಕಾರ ಅನಿವಾರ್ಯ ಎಂದು ಸಮರ್ಥಿಸಿಕೊಂಡು, ಇದರ ವಿರುದ್ಧ ನಡೆದ ವಕೀಲರ ಮೌನ ಮೆರವಣಿಗೆಯ ಸಂದರ್ಭದಲ್ಲಿ, ಅನೇಕ ವಕೀಲರನ್ನೂ, ಶಿಕ್ಷಕರನ್ನು ವಿದ್ಯಾರ್ಥಿಗಳನ್ನೂ ಬಂಧಿಸಿ ಸೆರೆಮನೆಗೆ ದೂಡಿತ್ತು. ಇಡೀ ಗಯಾ ಜಿಲ್ಲೆ ಅಶಾಂತವಾಯಿತು. ಪಾಟ್ನಾಗೆ ಹಿಂತಿರುಗಿದ ಜಯಪ್ರಕಾಶರು ೧೫ ರಂದು ಮುಖ್ಯಮಂತ್ರಿ ಅಬ್ದುಲ್ ಗಫೂರರನ್ನು ಭೇಟಿ ಮಾಡಿ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವಂತೆ ಅವರ ಮನವೊಲಿಸುವ ಪ್ರಯತ್ನ ಮಾಡಿ ವಿಫಲರಾದರು. ಏಪ್ರಿಲ್ ೧೬ ರಂದು ಗಯಾಗೆ ಧಾವಿಸಿದ ಜಯಪ್ರಕಾಶರು ಎರಡು ಲಕ್ಷ ಜನ ಸೇರಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಇನ್ನು ಮುಂದೆ ತಮ್ಮ ಕಾರ್ಯಾಚರಣೆ ಸರ್ಕಾರದ ವಿರುದ್ಧವೇ; ತಾವೀಗ ಸರ್ಕಾರದಲ್ಲಿ ವಿಶ್ವಾಸ ಕಳೆದುಕೊಂಡು ಬಿಹಾರ ವಿಧಾನಸಭೆಯ ವಿಸರ್ಜನೆಯ ವಿದ್ಯಾರ್ಥಿ ಬೇಡಿಕೆಯನ್ನು ಮಾನ್ಯಮಾಡುತ್ತಿರುವುದಾಗಿ ಮೊದಲಬಾರಿಗೆ ಘೋಷಿಸಿದರು. ಅಲ್ಲದೆ, ಸರ್ಕಾರ ಆದೇಶಿಸಬಹುದಾದ ನ್ಯಾಯಾಂಗ ವಿಚಾರಣೆಯನ್ನು ತಿರಸ್ಕರಿಸಿ, ತಾವೇ ನಿವೃತ್ತ ನ್ಯಾಯಾಧೀಶ ಹಾಗೂ ವಕೀಲರನ್ನೊಳಗೊಂಡ ಒಂದು ವಿಚಾರಣಾ ಆಯೋಗವನ್ನು ಪ್ರಕಟಿಸಿದರು. ಈ ಮೂಲಕ ೧೯೪೨ರ ಕಾರ್ಯಾಚರಣೆಯ ಅಂಗವಾಗಿ, ಬಿಹಾರದ ಅನೇಕ ಹಳ್ಳಿಗಳನ್ನು ಬ್ರಿಟಿಷ್ ಸರ್ಕಾರದಿಂದ ಮುಕ್ತಿಗೊಳಿಸಿ ಸಮಾನಾಂತರ ಸರ್ಕಾರಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದ ಜಯಪ್ರಕಾಶರು, ಸ್ವತಂತ್ರಭಾರತದಲ್ಲೀಗ ಸಮಾನಾಂತರ ಸರ್ಕಾರ ರಚಿಸುವ ಮೊದಲ ಹೆಜ್ಜೆ ಇಟ್ಟಿದ್ದರು.

ಸಂಪೂರ್ಣಕ್ರಾಂತಿಗೆ ಕರೆ – ಬಿರುಗಾಳಿಯ ಆರಂಭ

೧೯೭೪ರ ಏಪ್ರಿಲ್ ೨೯ರಂದು ಜಯಪ್ರಕಾಶರು ಪ್ರಾಸ್ಟೇಟ್ ಗ್ರಂಥಿ ಶಸ್ತ್ರಚಿಕಿತ್ಸೆಗಾಗಿ ತಮಿಳ್ನಾಡಿನ ವೆಲ್ಲೂರು ಆಸ್ಪತ್ರೆಗೆ ಹೊರಡಬೇಕಾಯಿತು. ಆ ಮುನ್ನ ಅವರು ಪಾಟ್ನಾದಲ್ಲಿ ಸಮಾಜದ ವಿವಿಧ ವರ್ಗಗಳ ಜನರೊಂದಿಗೆ ಸಭೆಗಳನ್ನು ನಡೆಸಿ, ಜೂನ್ ೫ರಂದು ಪಾಟ್ನಾದ ಗಾಂಧಿ ಮೈದಾನದಲ್ಲಿ ಬೃಹತ್ ಸಭೆ ಆಯೋಜಿಸಿ ಬಿಹಾರದ ವಿದ್ಯಾರ್ಥಿ ಆಂದೋಲನಕ್ಕೆ ಒಂದು ಸ್ಪಷ್ಟ ದಿಕ್ಕು ಹಾಗೂ ಕಾರ್ಯಕ್ರಮ ಒದಗಿಸುವ ತೀರ್ಮಾನ ಕೈಗೊಂಡರು. ಜೂನ್ ೨ ರಂದು ಅವರು ಯಶಸ್ವೀ ಚಿಕಿತ್ಸೆಯ ನಂತರ ಪಾಟ್ನಾಕ್ಕೆ ವಾಪಸಾದರು. ಮಾರನೇ ದಿನವೇ ಭಾರತದ ಕಮ್ಯೂನಿಸ್ಟ್ ಪಕ್ಷ (ಸಿ.ಪಿ.ಐ) ಹಾಗೂ ಕಾಂಗ್ರೆಸ್ ಜೊತೆಗೂಡಿ ಬಿಹಾರ ವಿದ್ಯಾರ್ಥಿ ಆಂದೋಲನದ ವಿರುದ್ಧ ಹಾಗೂ ರಾಜ್ಯಸರ್ಕಾರದ ಪರವಾಗಿ ಶಸ್ತ್ರ ಸಜ್ಜಿತ ಸಂತಾಲ್ ಬುಡಕಟ್ಟಿನವರನ್ನೊಳಗೊಂಡ ಬೃಹತ್

ಪ್ರದರ್ಶನವನ್ನು ಏರ್ಪಡಿಸಿ, ಜಯಪ್ರಕಾಶರು ಆಯೋಜಿಸಿದ್ದ ಸಾರ್ವಜನಿಕ ಸಭೆಯ ಬಗ್ಗೆ ಆತಂಕವನ್ನು ಸೃಷ್ಟಿಸಿದರು. ಆದರೆ ಆ ಹೊತ್ತಿಗೆ ವಿದ್ಯಾರ್ಥಿಗಳು, ಶಿಕ್ಷಕರು, ವಕೀಲರು, ಲೇಖಕರು, ಸರ್ಕಾರಿ ನೌಕರರು ಮುಂತಾದ ಎಲ್ಲ ಜನವರ್ಗಗಳ ಬೆಂಬಲ ಗಳಿಸುವ ಮೂಲಕ ಜನಾಂದೋಲನವಾಗಿ ಪರಿವರ್ತಿತವಾಗಿದ್ದ ವಿದ್ಯಾರ್ಥಿ ಆಂದೋಲನ ಇದರಿಂದ ಧೃತಿಗೆಡುವ ಸ್ಥಿತಿಯಲ್ಲೇನೂ ಇರಲಿಲ್ಲ.

ಜೂನ್ ೫ ರಂದು ರಾಜ್ಯಪೊಲೀಸರು ಹಾಗೂ ಜಿಲ್ಲಾಡಳಿತವು ಪಾಟ್ನಾಕ್ಕೆ ಬರುವ ಎಲ್ಲ ಮಾರ್ಗಗಳಿಗೂ ಅಡ್ಡಿಯುಂಟುಮಾಡಿ, ರೈಲು ಬಸ್ ಹಾಗೂ ದೋಣಿಗಳ ಸಂಚಾರವನ್ನು ಸ್ಥಗಿತಗೊಳಿಸಿತು. ಆದರೆ ರಾಜ್ಯದ ವಿವಿಧ ಭಾಗಗಳಿಂದ ಲಕ್ಷಾಂತರ ಜನ ರಾಜ್ಯದ ರಾಜಧಾನಿಯಲ್ಲಿ ಸೇರುವಂತೆ ಮಾಡಿದ ಛಾತ್ರ ಸಂಘರ್ಷ ಸಮಿತಿಯು ತನ್ನ ಸಂಘಟನಾ ಚಾತುರ್ಯವನ್ನು ಪ್ರದರ್ಶಿಸಿತು. ಜಯಪ್ರಕಾಶರು ತಮ್ಮ ಸಂಗಡಿಗರೊಡನೆ ಜೀಪ್‌ನಲ್ಲಿ ರಾಜಭವನಕ್ಕೆ ತೆರಳಿದರು. ತಮ್ಮೊಡನೆ ಒಂದು ಟ್ರಕ್ ತುಂಬಾ ತುಂಬಿಕೊಂಡು ಬಂದಿದ್ದ ಬಿಹಾರದ ಲಕ್ಷಾಂತರ ಜನರ ಸಹಿಗಳನ್ನೊಳಗೊಂಡ, ಸರ್ಕಾರದಲ್ಲಿ ಅವಿಶ್ವಾಸ ವ್ಯಕ್ತಪಡಿಸುವ ದಾಖಲೆಪತ್ರಗಳನ್ನು ರಾಜ್ಯಪಾಲ ಆರ್.ಡಿ. ಭಂಡಾರೆ ಅವರಿಗೆ ಒಪ್ಪಿಸಿ, ಸರ್ಕಾರವನ್ನು ವಜಾಮಾಡಿ ವಿಧಾನಸಭೆಯನ್ನು ವಿಸರ್ಜಿಸುವಂತೆ ಕೋರಿದರು.

ನಂತರ ಗಾಂಧಿ ಮೈದಾನದಲ್ಲಿ ಐದುಲಕ್ಷ ಜನರ ಸಾರ್ವಜನಿಕ ಸಭೆ. ಸಭೆಗೆ ಆಗಮಿಸುತ್ತಿದ್ದ ಜನರ ಭಾರಿ ಗುಂಪೊಂದರ ಮೇಲೆ ಇಂದಿರಾಬ್ರಿಗೇಡ್ ಎಂಬ ಕಾಂಗ್ರೆಸ್ ಶಾಸಕನೊಬ್ಬನ ನೇತೃತ್ವ ಗುಂಪೊಂದು ಗುಂಡುಹಾರಿಸಿ ಹತ್ತಾರು ಜನರನ್ನು ಗಾಯಗೊಳಿಸಿತು. ಇಂತಹ ಪ್ರಚೋದನೆಯ ಹೊರತಾಗಿಯೂ ಅತ್ಯಂತ ಶಿಸ್ತು, ಸಂಯಮ ಹಾಗೂ ಶಾಂತಿಯನ್ನು ಪ್ರದರ್ಶಿಸಿದ ಬೃಹತ್ ಜನಸ್ತೋಮ, ಜಯಪ್ರಕಾಶರ ಐತಿಹಾಸಿಕ ಭಾಷಣವನ್ನು ಮಧ್ಯೆ ಮಧ್ಯೆ 'ಲೋಕನಾಯಕ ಜಯಪ್ರಕಾಶ್ ನಾರಾಯಣ್ ಜಿಂದಾಬಾದ್' ಎಂಬ ಮುಗಿಲು ಮುಟ್ಟುತ್ತಿದ್ದ ಘೋಷಣೆಗಳಿಂದ ಮಾತ್ರ ಬಿರಿಯುತ್ತಿದ್ದ ಮಹಾಮೌನದೊಂದಿಗೆ ಆಲಿಸಿತು. ತಮ್ಮ ಇಡೀ ಜೀವನದುದ್ದಕ್ಕೂ ನಡೆಸಿಕೊಂಡು ಬಂದ ಹೋರಾಟ, ರಚನಾತ್ಮಕ ಕಾರ್ಯಕ್ರಮಗಳ ಅವಲೋಕನ ಮಾಡುತ್ತಾ ಅವರು ಹೇಳಿದರು:

"ನಿಮ್ಮ ಮುಂದೀಗ ಕ್ರಾಂತಿಕಾರಿ ಕಾರ್ಯಕ್ರಮವೊಂದನ್ನು ಮುಂದಿಡುತ್ತಿದ್ದೇನೆ. ಇದು ಸುಲಭದ ಕಾರ್ಯಕ್ರಮವಲ್ಲ. ೧೯೪೨ರ ಚಳುವಳಿಯಂತೆಯೇ ಇದು ಕೂಡಾ. ಸಿಟ್ಟಿಗೆ ಒಳಗಾಗದೆ, ಹೇಡಿತನಕ್ಕೆ ಈಡಾಗದೆ, ಲಾಠಿ, ಗುಂಡೇಟು, ಸೆರೆವಾಸಗಳನ್ನು ಎದುರಿಸಬೇಕಾದ ತ್ಯಾಗ-ಸಾಹಸಗಳ ಕಾರ್ಯಾಚರಣೆ ಇದು. ಇದು ಕ್ರಾಂತಿ ಗೆಳೆಯರೇ, ಸಂಪೂರ್ಣ ಕ್ರಾಂತಿ. ವಿಧಾನಸಭೆ ವಿಸರ್ಜನೆಯೊಂದಿಗೆ ಕೊನೆಗೊಳ್ಳುವ ಕ್ರಾಂತಿ ಇದಲ್ಲ. ೨೭ ವರ್ಷಗಳ ಸ್ವಾತಂತ್ರ್ಯದ ನಂತರವೂ ಜನ ಹಸಿವು, ಬಡತನ, ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರಗಳಿಂದ ನರಳಬೇಕಾಗಿರುವ ವ್ಯಗ್ರ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಲು ಹೊರಟಿರುವ ಕ್ರಾಂತಿ ಇದು..."

ಒಂದು ತಾಸಿಗೂ ಹೆಚ್ಚು ಕಾಲ ಮಾತಾಡಿದ ಜಯಪ್ರಕಾಶರು, ಸಭೆಯ ಕೊನೆಯಲ್ಲಿ ಈ ಆಂದೋಲನದ ಮುಂದಿರುವ ಗುರಿಗಳನ್ನು ನಿರೂಪಿಸಿದರು—ವಿಧಾನಸಭೆಯ ವಿಸರ್ಜನೆ, ಸರ್ಕಾರವನ್ನು ಪ್ರದರ್ಶನ, ಮುಷ್ಕರ, ಬಂದ್‌ಗಳ ಮೂಲಕ ನಿಷ್ಕ್ರಿಯ ಗೊಳಿಸುವುದು, ತೆರಿಗೆ ಕೊಡಲು ನಿರಾಕರಿಸುವುದು, ಶಾಲಾ ಕಾಲೇಜುಗಳನ್ನು ಒಂದು ವರ್ಷ ಮುಚ್ಚಿ ಜನ ಸಂಘಟನೆ ಮಾಡುವುದು, ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಉದ್ದೀಪಿಸುವುದು.

ಸಭೆ ಮುಗಿಯುತ್ತಿದ್ದಂತೆ ಎಲ್ಲಿಂದಲೋ ಬಂದ ಬಿರುಗಾಳಿ ಇಡೀ ಗಾಂಧಿ ಮೈದಾನವನ್ನು ಧೂಳಿನಲ್ಲಿ ಮುಚ್ಚಿತು; ಚಪ್ಪರ-ಚಾವಡಿಗಳು ಮುರಿದುಬಿದ್ದವು. ಜನ ದಿಕ್ಕಾಪಾಲಾಗಿ ಓಡಿದರು. ಕಾರ್ಮುಗಿಲು ದಟ್ಟೈಸಿ ಬಿರುಮಳೆ ಝಾಡಿಸಲಾರಂಭಿಸಿತು. ಮಹಾ ಬಿರುಗಾಳಿಯೊಂದು ನಿಜವಾಗಿ ಆರಂಭವಾಗಿತ್ತು...

ಗಾಂಧಿ ಮೈದಾನದಲ್ಲಿ ಪ್ರಸ್ತಾಪಿಸಿದ ಸಂಪೂರ್ಣಕ್ರಾಂತಿಯ ಕಲ್ಪನೆಯನ್ನು ಮೊದಲಬಾರಿಗೆ ಜಯಪ್ರಕಾಶರು ವಿಷದಪಡಿಸಿದ್ದು ೭೪ರ ಜೂನ್ ೨೨ರಂದು ಅಲಹಾಬಾದ್‌ನಲ್ಲಿ ತರುಣ ಶಾಂತಿಸೇನೆ ಆಯೋಜಿಸಿದ್ದ ಅಖಿಲಭಾರತ ಯುವಸಮ್ಮೇಳನದಲ್ಲಿ. ಅವರು ಪ್ರತಿಪಾದಿಸಿದ ಸಂಪೂರ್ಣ ಕ್ರಾಂತಿ ಭೂದಾನ-ಗ್ರಾಮದಾನ ಚಳುವಳಿಗಳ ಮೂಲಕ ಮಾಡುತ್ತಿದ್ದ ಸರ್ವೋದಯ ಕಾರ್ಯಕ್ರಮಗಳನ್ನೇ ಅಲ್ಲದೆ, 'ಪ್ರಜಾಪ್ರಭುತ್ವಕ್ಕಾಗಿ ಪ್ರಜೆಗಳು' ವೇದಿಕೆಯ ಪ್ರಣಾಳಿಕೆಯ ಸಾರ್ವತ್ರಿಕ ಗುರಿಗಳನ್ನೂ ಒಳಗೊಂಡಿತ್ತು. ಅಹಿಂಸೆಯ ಆಧಾರದ ಮೇಲೆ ಜನಶಕ್ತಿಯನ್ನು ಸಂಘಟಿಸುವ ಮೂಲಕ—ರಾಜಕಾರಣಿ, ಅಧಿಕಾರಿ ಹಾಗೂ ವ್ಯಾಪಾರಿಗಳ ಭ್ರಷ್ಟಾಚಾರದ ಜೊತೆಗೆ ಧರ್ಮಾಂಧತೆ, ಜಾತ್ಯಾಂಧತೆಗಳನ್ನೂ ನಿರ್ಮೂಲನ ಮಾಡುವ; ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಸಂರಕ್ಷಿಸಲು ಚುನಾವಣಾ ಸುಧಾರಣೆಗಳನ್ನು ಮತ್ತು ಸಮಾಜಸೇವೆಯನ್ನು ಅವಿಭಾಜ್ಯ ಭಾಗವಾಗಿ ಹೊಂದಿರುವ ವೃತ್ತಿಪರ ಶಿಕ್ಷಣ ಆಧಾರಿತ ಸರ್ವಸಾಮಾನ್ಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರುವ—ಮೂಲಭೂತ ಪರಿವರ್ತನೆಯ ಉದ್ದೇಶ ಇದರದ್ದು.* ಈ ಸಂದರ್ಭದಲ್ಲಿ ಅವರು "ಇಂತಹ ಮಹಾಪರಿವರ್ತನೆಯ ಸಂಧಿಕಾಲ ಈಗ ಒದಗಿ ಬಂದಿದೆ; ಮತ್ತೊಂದು 'ಮಾಡಿ ಇಲ್ಲವೇ ಮಡಿ' ಚಳುವಳಿಗೆ ದೇಶ ಸಿದ್ಧವಾಗಿರುವುದು ನನ್ನ ಅರಿವಿಗೆ ಬರುತ್ತಿದೆ. ಜನರ ಹತಾಶೆ ಹಾಗೂ ಜಿಗುಪ್ಸೆಗಳನ್ನು ನಾವೀಗ ರಚನಾತ್ಮಕ ಮಾರ್ಗದ ಕಡೆ ತಿರುಗಿಸಿ ಅವರನ್ನು ಸಂಘಟಿಸದೇ ಹೋದರೆ ದೇಶ ಸರ್ವಾಧಿಕಾರಕ್ಕೆ ಸಿಕ್ಕುವುದು ಖಂಡಿತ. ನನಗಾಗಿ ನೀವು ಒಂದು ವರ್ಷ ಶಾಲಾ ಕಾಲೇಜು ಬಿಟ್ಟು ಬನ್ನಿ..." ಎಂದು ಯುವಜನತೆಗೆ ಕರೆಕೊಟ್ಟರು. ತಮ್ಮ ಸಂಪೂರ್ಣಕ್ರಾಂತಿ ಆದೇಶದ ಮೇಲೆ ನಡೆಯುವ ಕ್ರಾಂತಿಯಲ್ಲ. ಅದು ಜನರ ಮಧ್ಯೆ ವಿಕಾಸಗೊಳ್ಳುವ ಸಂದರ್ಭದಲ್ಲೇ ತನ್ನ ನಿರ್ದಿಷ್ಟ ರೂಪ ಪಡೆದುಕೊಳ್ಳುವ ಆಶಯ ಹೊಂದಿದೆ. ಹಾಗಾಗಿಯೇ ಇದರ ಪರಿಕಲ್ಪನೆ ಪೂರ್ವಸಿದ್ಧ ವಿವರಗಳ ನಿರೂಪಣೆಗೆ ಸಿಗಲಾರದೆಂದೂ ಅವರು ವಿವರಿಸಿದರು.

---

* ವಿವರಗಳಿಗೆ ಟಿ.ಎಸ್..ಅನಂತರಂಗಾಚಾರ್ ಅನುವಾದಿಸಿರುವ, ಬೆಂಗಳೂರಿನ ಜನಪ್ರಕಾಶನ ಪ್ರಕಟಿಸಿರುವ 'ಸಂಪೂರ್ಣ ಕ್ರಾಂತಿ' ಶೀರ್ಷಿಕೆಯ ಕಿರುಪುಸ್ತಿಕೆಯನ್ನು ಗಮನಿಸಿ.

ವಿನೋಬಾ ಜೊತೆ ಮಾತುಕತೆ

ಜಯಪ್ರಕಾಶರು ಜುಲೈ ೨ ರಂದು ಪಾಟ್ನಾ ಸೆರಮನೆಗೆ ಭೇಟಿನೀಡಿ ಬಂಧಿತರಾಗಿದ್ದ ನೂರಾರು ವಿದ್ಯಾರ್ಥಿ ನಾಯಕರೊಂದಿಗೆ ಮಾತುಕತೆ ನಡೆಸಿದರು. ಅಂದೇ ಸಂಪೂರ್ಣಕ್ರಾಂತಿ ಪರಿಕಲ್ಪನೆಯ ಪ್ರಚಾರಕ್ಕಾಗಿ ಹದಿಮೂರು ಜನರ ಸಮಿತಿಯೊಂದನ್ನು ರಚಿಸಿದರು. ಇದಕ್ಕೆ ಪೂರಕವಾಗಿ ಪ್ರತಿ ಗ್ರಾಮ ಪಂಚಾಯತ್ ಮಟ್ಟದಲ್ಲೂ ಜನಸಂಘರ್ಷ ಸಮಿತಿಗಳನ್ನು ಸಂಘಟಿಸುವ ತೀರ್ಮಾನ ಕೈಗೊಂಡರು. ಈ ಕೆಲಸ ಮಾಡಲು ವಿದ್ಯಾರ್ಥಿಗಳನ್ನು ಮತ್ತು ತರುಣಶಾಂತಿ ಸೇನೆಯ ಹಾಗೂ ಸರ್ವೋದಯ ಕಾರ್ಯಕರ್ತರನ್ನು ನಿಯೋಜಿಸಲಾಯಿತು. ಆದರೆ ಸರ್ವೋದಯ ಕಾರ್ಯಕರ್ತರನ್ನು ಹೀಗೆ 'ಸಂಘರ್ಷ' ಕಾರ್ಯಕ್ರಮಗಳಲ್ಲಿ ತೊಡಗಿಸುವುದು ಸರ್ವೋದಯ ಚಳುವಳಿಯ ಚೌಕಟ್ಟನ್ನು ಉಲ್ಲಂಘಿಸುತ್ತದೆ ಎಂದು ವಿನೋಬಾ ಭಾವಿಸಿದ್ದಾರೆ ಎಂಬ ಸುದ್ದಿ ಹರಡಿತು. ಜಯಪ್ರಕಾಶರು ಜುಲೈ ೮ ರಂದು ವಿನೋಬಾರೊಂದಿಗೆ ಮಾತುಕತೆಗಾಗಿ ಪೌನಾರ್ ಆಶ್ರಮಕ್ಕೆ ತೆರಳಿದರು. ಸರ್ವೋದಯ ಚಳುವಳಿಯ ಮಾರ್ಗದರ್ಶನ ಸಂಸ್ಥೆಯಂತಿದ್ದ ಸರ್ವ ಸೇವಾ ಸಂಘದ ವ್ಯವಸ್ಥಾಪಕ ಸಮಿತಿಯ ಸಭೆಯನ್ನೂ ಕರೆಯಲಾಯಿತು. ಸರ್ವೋದಯ ಚಳುವಳಿ ಎಲ್ಲರ ಸಹಕಾರದಿಂದ ಯಶಸ್ವಿಯಾಗಬೇಕಾಗಿರುವುದರಿಂದ ಸರ್ಕಾರವೂ ಸೇರಿದಂತೆ ಯಾರೊಂದಿಗೂ ಸಂಘರ್ಷದಲ್ಲಿ ತೊಡಗದೆ ಪ್ರೇಮದಿಂದ ಕಾರ್ಯಸಾಧಿಸಬೇಕಾಗುತ್ತದೆಂದು ವಿನೋಬಾ ವಾದಿಸಿದರು. ಪ್ರೇಮದಿಂದ ಸಾಧಿಸಲಾಗದನ್ನು ಅಹಿಂಸಾತ್ಮಕ ಸಂಘರ್ಷದ ಮೂಲಕ ಸಾಧಿಸಬೇಕಾದದ್ದು ಹೊಸ ಕಾಲದ ಅನಿವಾರ್ಯತೆ ಎಂದು ಜಯಪ್ರಕಾಶರು ವಾದಿಸಿದರು. ವ್ಯವಸ್ಥಾಪಕ ಸಮಿತಿಯ ಬಹುಪಾಲು ಸದಸ್ಯರೂ ಜಯಪ್ರಕಾಶರನ್ನು ಬೆಂಬಲಿಸಿದರು. ಇದನ್ನು ಮನಗಂಡ ವಿನೋಬಾರು ಜಯಪ್ರಕಾಶರ ಆಂದೋಲನದಲ್ಲಿ ಭಾಗವಹಿಸುವ ಆಯ್ಕೆಯ ಪ್ರಶ್ನೆಯನ್ನು ಸಂಬಂಧಪಟ್ಟ ಕಾರ್ಯಕರ್ತರ ಆತ್ಮಸಾಕ್ಷಿಗೇ ಬಿಟ್ಟುಬಿಡಬಹುದೆಂಬ ತೀರ್ಮಾನ ನೀಡಿದರು. "ಆಂದೋಲನ ಯಶಸ್ವಿಯಾದರೆ ಒಳ್ಳೆಯದೆಂದು ಭಾವಿಸೋಣ. ವಿಫಲವಾದರೆ ಅದನ್ನೊಂದು ಪಾಠವೆಂದು ಭಾವಿಸೋಣ" ಎಂಬುದು ಅವರ ಕೊನೆಯ ಅಂಬೋಣವಾಯಿತು. ನಂತರ ಅವರು ಒಂದು ವರ್ಷದ 'ಮೌನವ್ರತ' ಘೋಷಿಸಿದರು. ಇದರಿಂದ ಸ್ಫೂರ್ತಿಗೊಂಡ ಸರ್ವೋದಯ ಕಾರ್ಯಕರ್ತರು ಬಿಹಾರದ ಸಂಪೂರ್ಣ ಕ್ರಾಂತಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು.

ಜನತಾ ವಿಧಾನಸಭೆಯ ಪ್ರಸ್ತಾಪ

೧೯೭೪ರ ಜುಲೈ ಮಧ್ಯಭಾಗದ ಹೊತ್ತಿಗೆ ಬಿಹಾರ ಆಂದೋಲನ ಹಳ್ಳಿ ಹಳ್ಳಿಗಳಿಗೂ ಹಬ್ಬಿತು. ರಾಜ್ಯಸರ್ಕಾರ ಆಂತರಿಕ ಸಂರಕ್ಷಣಾ ಕಾಯಿದೆ (ಮೀಸಾ) ಬಳಸಿ ವಿದ್ಯಾರ್ಥಿ ನಾಯಕರನ್ನು ಬಂಧಿಸಲಾರಂಭಿಸಿತು. ಸಾವಿರಾರು ವಿದ್ಯಾರ್ಥಿಗಳು ಸೆರೆಮನೆ ಸೇರಿದರು. ಜೊತೆಗೆ ಕರ್ಪೂರಿ ಠಾಕೂರ್, ಎಸ್.ಎಂ. ಜೋಷಿ, ಕೈಲಾಸಪತಿ ಮಿಶ್ರಾ, ಸಿದ್ಧರಾಜ

ಪಡ್ಡಾ ಮುಂತಾದ ರಾಜಕೀಯ ಹಾಗೂ ಸರ್ವೋದಯ ನಾಯಕರನ್ನು ಬಂಧಿಸಲಾಯಿತು. ರಾಜ್ಯಾದ್ಯಂತ 'ತೆರಿಗೆ ಕೊಡದೆ ಸರ್ಕಾರಿ ಕಛೇರಿಗಳನ್ನು ಘೇರಾವೋ ಮಾಡಿ' ಎಂಬ ಕರೆಯನ್ನು ಕೊಡಲಾಗಿ, ರಾಜ್ಯದ ವಿರೋಧ ಪಕ್ಷಗಳು ಸಮನ್ವಯ ಸಮಿತಿಯೊಂದನ್ನು ರಚಿಸಿಕೊಂಡು ಈ ಕಾರ್ಯಕ್ರಮದಲ್ಲಿ ಭಾಗವಹಿಸತೊಡಗಿದಾಗ, ಆಂದೋಲನ ರಾಜಕೀಯ ಆಯಾಮ ಪಡೆಯಿತು. ಸರ್ಕಾರ ಲಾಠಿ ಪ್ರಯೋಗ, ಬಂಧನ, ಸೆರೆಮನೆಯಲ್ಲಿ ಕಿರುಕುಳ ಮುಂತಾದ ದಮನ ಕ್ರಮಗಳನ್ನು ಹೆಚ್ಚಿಸಿತು. ಇದರ ವಿರುದ್ಧ ಜಯಪ್ರಕಾಶರು ಅಕ್ಟೋಬರ್ ೩, ೪ ಹಾಗೂ ೫ ರಂದು ಬಿಹಾರ್‌ಬಂದ್‌ಗೆ ಕರೆ ನೀಡಿದರು. ಛೋಟಾ ನಾಗಪುರ ಎಂಬ ಕಮ್ಯೂನಿಸ್ಟ್ ಕಾರ್ಮಿಕ ಸಂಘದ ಪ್ರಾಬಲ್ಯವಿರುವ ಜಿಲ್ಲಾ ಕೇಂದ್ರವೊಂದರ ಹೊರತಾಗಿ, ಇಡೀ ರಾಜ್ಯ ಶಾಂತಿಯುತ ಬಂದ್ ಆಚರಿಸಿತು.

ಜಯಪ್ರಕಾಶರು ಈ ಸಂದರ್ಭದಲ್ಲಿ, ಜನತೆ ಯಶಸ್ವಿ ಬಂದ್ ಮೂಲಕ ವ್ಯಕ್ತಪಡಿಸಿರುವ ಇಚ್ಛೆಯಂತೆ ವಿಧಾನಸಭಾ ಸದಸ್ಯರು ರಾಜೀನಾಮೆ ನೀಡುವಂತೆ ಆಗ್ರಹಿಸಿದರು. ಇದಕ್ಕೆ ನವೆಂಬರ್ ೪ರ ಗಡುವು ನೀಡಿ, ಅಂದು ಸಚಿವರೆಲ್ಲರ ಮನೆಗಳ ಮುಂದೆ ಧರಣೆ ಕಾರ್ಯಕ್ರಮದ ಘೋಷಣೆ ಮಾಡಿದರು. ರಾಜೀನಾಮೆ ನೀಡದೇ ಹೋದಲ್ಲಿ ರಾಜ್ಯದ ೩೧೮ ವಿಧಾನಸಭಾ ಕ್ಷೇತ್ರಗಳಲ್ಲೂ ಜನಸಂಘರ್ಷ ಸಮಿತಿಗಳ ಮೂಲಕ ಚುನಾವಣೆ ನಡೆಸಿ 'ಜನತಾ ವಿಧಾನಸಭೆ'ಯನ್ನು ಸಂಘಟಿಸುವುದಾಗಿ ಅವರು ಕೊನೆಯ ಎಚ್ಚರಿಕೆ ನೀಡಿದರು. ಅದಕ್ಕಾಗಿ ಪ್ರತಿಕ್ಷೇತ್ರದಲ್ಲೂ ಗ್ರಾಮಸಭೆ ಆಯ್ಕೆ ಮಾಡುವ ವಿವಿಧ ಹಂತದ ಜನಸಭೆಗಳ ರಚನೆಗಾಗಿ, ಛಾತ್ರ ಹಾಗೂ ಜನಸಂಘರ್ಷ ಸಮಿತಿಗಳಿಗೆ ಜವಾಬ್ದಾರಿಯನ್ನು ಹಂಚಿದರು. ಈ ಪ್ರಕ್ರಿಯೆಯ ಪ್ರತಿಹಂತದಲ್ಲೂ ಮಹಿಳೆಯರಿಗೆ, ಅಸ್ಪೃಶ್ಯರಿಗೆ, ಮುಸ್ಲಿಮರಿಗೆ, ಆದಿವಾಸಿಗಳಿಗೆ ಹಾಗೂ ಬಡವರಿಗೆ ಸೂಕ್ತ ಪ್ರಾತಿನಿಧ್ಯ ನೀಡುವಂತೆ ನೋಡಿಕೊಳ್ಳಲು ಸೂಚಿಸಿದರು. ಜನ ಯಾವ ಹಂತದಲ್ಲೂ ತೆರಿಗೆ ಕೊಡದೆ, ಪೊಲೀಸ್ ಠಾಣೆಗಳನ್ನು ಬಹಿಷ್ಕರಿಸಿ, ಗ್ರಾಮ ಶಾಂತಿದಳದ ಆಡಳಿತದಲ್ಲಿ ಹಳ್ಳಿಗಳು ಬದುಕು ನಡೆಸುವಂತೆ ಹಾಗೂ ಸ್ವಯಂ ಇಚ್ಛೆಯಿಂದ ಬರುವ ದೇಣಿಗೆಯ ಮೂಲಕ ಆಡಳಿತಾತ್ಮಕ ಖರ್ಚನ್ನು ನಿರ್ವಹಿಸುವಂತೆ ಅವರು ಸಲಹೆ ಮಾಡಿದರು.

■

೧೧ ಹಬ್ಬಿದ ಚಳುವಳಿ : ತುರ್ತು ಪರಿಸ್ಥಿತಿ ಘೋಷಣೆ

ಬಿಹಾರ ಆಂದೋಲನ ಜೆ.ಪಿ. ಚಳುವಳಿಯಾಗಿ ರಾಷ್ಟ್ರಾದ್ಯಂತ ಹಬ್ಬುವ ಸೂಚನೆಗಳು ದೊರೆಯಲಾರಂಭಿಸಿದೊಡನೆ, ಜೆ.ಪಿ ಮತ್ತು ಪ್ರಧಾನಿ ಇಂದಿರಾ ಅವರ ನಡುವೆ ಎರಡೂ ಕಡೆಯ ಹಿತೈಷಿಗಳ ಮಧ್ಯಸ್ಥಿಕೆಯಲ್ಲಿ ಒಪ್ಪಂದವೊಂದನ್ನು ಏರ್ಪಡಿಸುವ ವಿಫಲಪ್ರಯತ್ನವೂ ನಡೆಯಿತು. ಅಕ್ಟೋಬರ್ ೩೧ ರಂದು ಈರ್ವರೂ ದೆಹಲಿಯಲ್ಲಿ ಭೇಟಿ ಮಾಡಿದರಾದರೂ, ಸರ್ಕಾರದ ಪರವಾಗಿ ಚುನಾವಣಾ ಸುಧಾರಣೆ, ಭ್ರಷ್ಟಾಚಾರ ನಿವಾರಣೆ ಹಾಗೂ ಶಿಕ್ಷಣ ಕ್ಷೇತ್ರದ ಪುನಾರಚನೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಸಲಹೆ-ಕಾರ್ಯಕ್ರಮಗಳು ಪ್ರಸ್ತಾಪವಾಗದೇ ಹೋಯಿತು. ಇದರಿಂದಾಗಿ, 'ಈಗಾಗಲೇ ಬಿಹಾರವೊಂದರಲ್ಲೇ ೮೦೦ ಯುವಜನರ ಜೀವ ಬಲಿ ತೆಗೆದುಕೊಂಡಿರುವ ರಾಷ್ಟ್ರವ್ಯಾಪಿ ಆಂದೋಲನವನ್ನು ಹಿಂತೆಗೆದುಕೊಳ್ಳಲು ಅಸಾಧ್ಯ; ಏಕೆಂದರೆ ಈ ಆಂದೋಲನ ನನ್ನ ಜೇಬಿಂದ ಹುಟ್ಟಿದಲ್ಲ, ನಾನು ಹಿಂತೆಗೆದುಕೊಳ್ಳಲು' ಎಂದು ಹೇಳಿ ಜೆ.ಪಿ. ಪಾಟ್ನಾಕ್ಕೆ ವಾಪಸಾದರು. ಅಂದು ಸಂಜೆಯೇ ಇಂದಿರಾ ಅವರು ಸಾರ್ವಜನಿಕಸಭೆಯೊಂದನ್ನು ಉದ್ದೇಶಿಸಿ ಮಾತನಾಡಿ, 'ಜನರಿಂದ ಆಯ್ಕೆಯಾದ ವಿಧಾನಸಭೆಗಳನ್ನು ವಿಸರ್ಜಿಸುವ ಒತ್ತಾಯಕ್ಕೆ ಮಣಿಯುವ ಪ್ರಶ್ನೆಯೇ ಇಲ್ಲ. ಬದಲಾಗಿ ನಾನು ರಾಜೀನಾಮೆ ನೀಡಿಯೇನು. ಗುಜರಾತ್ ವಿಧಾನಸಭೆಯನ್ನು ವಿಸರ್ಜಿಸಿ ನಾನೀಗಾಗಲೇ ತಪ್ಪು ಮಾಡಿರುವುದು ನನ್ನ ಅರಿವಿಗೆ ಬಂದಿದೆ. ಆಂದೋಲನ ನಡೆಸುತ್ತಿರುವವರಿಗೆ ನಿಜವಾದ ಜನಬೆಂಬಲವಿದ್ದಲ್ಲಿ ಬರಲಿರುವ ಚುನಾವಣೆಗಳಲ್ಲಿ ಆದರ ಪರೀಕ್ಷೆ ನಡೆದೇ ಹೋಗಲಿ' ಎಂದು ಸವಾಲು ಎಸೆದರು. ಜೆ.ಪಿ. ಈ ಸವಾಲನ್ನು ಸ್ವೀಕರಿಸಿದರು. ಪಾಟ್ನಾಗೆ ಹಿಂದಿರುಗಿದ ಜೆ.ಪಿ. ನವೆಂಬರ್ ೪ರ 'ಧರಣಿ ಕಾರ್ಯಕ್ರಮ'ದ ಸಿದ್ಧತೆಗೆ ತೊಡಗಿದರು.

ಜೆ.ಪಿ. ಮೇಲೆ ಹಲ್ಲೆ - ಬಿಗಡಾಯಿಸಿದ ಪರಿಸ್ಥಿತಿ

ನವೆಂಬರ್ ೪ ರಂದು ಸರ್ಕಾರ ೬೦ ಸಾವಿರದಷ್ಟು ಸೈನಿಕರನ್ನು ಹಾಗೂ ಪೊಲೀಸರನ್ನು ಪಾಟ್ನಾಕ್ಕೆ ಕರೆಸಿ ಬೀದಿ ಬೀದಿಗಳಲ್ಲಿ ಅವರ ನಿಯೋಜನೆ ಮಾಡಿತು. ಎಲ್ಲ ಮುಖ್ಯ ರಸ್ತೆಗಳಿಗೆ ಅಡ್ಡಗಟ್ಟೆಗಳನ್ನು ಕಟ್ಟಲಾಯಿತು. ಪಾಟ್ನಾಗೆ ರೈಲು ಮತ್ತು ನೌಕಾಸೇವೆಯನ್ನು ರದ್ದುಪಡಿಸಲಾಯಿತು. ೧೪೪ನೇ ಸೆಕ್ಷನನ್ನೂ ಜಾರಿ ಮಾಡಿ, ಇಡೀ ನಗರದಲ್ಲಿ ಭಯದ ವಾತಾವರಣವನ್ನು ನಿರ್ಮಾಣ ಮಾಡಲಾಯಿತು. ಜೆ.ಪಿ. ಅಂದು ಬೆಳಿಗ್ಗೆ ತಮ್ಮ ಮನೆಯಿಂದ ನೂರಾರು ಬೆಂಬಲಿಗರೊಡನೆ ಬಿಹಾರದ ಸಚಿವರ ಮನೆ ಮುಂದೆ ಧರಣಿ

ನಡೆಸುವ ಕಾರ್ಯಕ್ರಮಕ್ಕಾಗಿ, ತೆರೆದ ಜೀಪಿನಲ್ಲಿ ಗಾಂಧಿಮೈದಾನದ ಕಡೆ 'ಜಾಥಾ' ಹೊರಟರು. ಅನತಿ ಕಾಲದಲ್ಲೇ ನೂರಾರು ಜನರಿದ್ದ ಗುಂಪು ಸಾವಿರಾರು ಜನರ ಗುಂಪಾಯಿತು. ಬೀದಿ ಬದಿಗಳಲ್ಲಿ ಹೆಂಗಸರು ಮಕ್ಕಳೆನ್ನದೆ ಜೆ.ಪಿ ಮತ್ತು ಅವರ ಅನುಯಾಯಿಗಳ ಮೇಲೆ ಹೂಮಳೆಗೆರೆದರು. ಜೆ.ಪಿ. ಅವರ ವಾಹನವನ್ನು ರಸ್ತೆಯ ಒಂದೆಡೆಯಿಂದ ಬಿಟ್ಟ ಪೊಲೀಸರು ಮತ್ತೊಂದೆಡೆಯಿಂದ ಅಡ್ಡಗಟ್ಟಿದರು. ಜೆ.ಪಿ. ಅವರ ರಕ್ಷಣೆಗೆ ಧಾವಿಸಿದ ಜನರ ಮೇಲೆ ಲಾಠಿ ಪ್ರಹಾರ ಮಾಡಲು ಆದೇಶಿಸಿದ ಜಿಲ್ಲಾ ದಂಡಾಧಿಕಾರಿ, ಇಡೀ ಮೆರವಣಿಗೆಯನ್ನು ಕಾನೂನು ವಿರೋಧಿ ಎಂದು ಘೋಷಿಸಿದರು. ಸಾವಿರಾರು ಜನರನ್ನು ಬಂಧಿಸಿ ಬಯಲು ಸೆರೆಮನೆಗೆ ಗೂಡಲಾಯಿತು. ಹಿರಿಯ ಅಧಿಕಾರಿಗಳನ್ನು ಹೊತ್ತ ವಿಮಾನವೊಂದು ಆಕಾಶದಲ್ಲಿ ಹಾರುತ್ತಾ ಪರಿಸ್ಥಿತಿಯನ್ನು ವೀಕ್ಷಿಸುತ್ತಿತ್ತು.

ಈ ಗೊಂದಲದಲ್ಲಿ ಜೆ.ಪಿ. ವಾಹನದಿಂದಿಳಿದು ಶಾಂತಿ ಕಾಪಾಡುವಂತೆ ಪೊಲೀಸರನ್ನೂ, ಜನರನ್ನೂ ಕೋರಿದರು. ಗಾಂಧಿ ಮೈದಾನದೆಡೆಗೆ ಜೆ.ಪಿ. ಅವರ ವಾಹನ ಹೋಗಲು ಅನುಮತಿ ನೀಡದ ಜಿಲ್ಲಾಧಿಕಾರ, ಅಲ್ಲಿ ಜನ ಸೇರದಂತೆ ಎಲ್ಲೆಲ್ಲೂ ಅಡ್ಡಗಟ್ಟೆ ನಿರ್ಮಿಸಿ ಜನರನ್ನು ಚದುರಿಸಲು ಅಶ್ರುವಾಯು ಪ್ರಯೋಗಿಸಿ ಲಾಠಿ ಪ್ರಹಾರ ಮಾಡಲು ಆದೇಶಿಸಿತು. ಇದರಿಂದ ಕುಪಿತಗೊಂಡ ಜೆ.ಪಿ., ಸಚಿವರ ಮನೆ ಮುಂದೆ ಪ್ರತಿಭಟನೆ ನಡೆಸಲು ತಮ್ಮ ವಾಹನವನ್ನು ಸಚಿವರ ಮನೆಗಳ ಕಡೆ ತಿರುಗಿಸಲು ಸೂಚಿಸಿದರು. ಇದೇ ಸಂದರ್ಭವನ್ನು ಬಳಸಿಕೊಂಡ ಪೊಲೀಸರು ಜೆ.ಪಿ.ಯವರನ್ನು ಜನಜಂಗುಳಿಯಿಂದ ರಕ್ಷಿಸುವ ನೆಪದಲ್ಲಿ ಅವರ ವಾಹನವನ್ನು ಸುತ್ತುವರಿದು, ಇದ್ದಕ್ಕಿದ್ದಂತೆ ಬೆತ್ತಗಳಿಂದ ಒಂದೇ ಸಮನೆ ಅವರ ಮೇಲೆ ಪ್ರಹಾರ ಮಾಡತೊಡಗಿದರು. ಆಗಿನ ಜನಸಂಘದ ನಾಯಕ ನಾನಾಜಿ ದೇಶಮುಖರು ಆ ಬಹುಪಾಲು ಏಟುಗಳನ್ನು ತಾವು ತಿಂದು ಜೆ.ಪಿ. ಅವರನ್ನು ರಕ್ಷಿಸಿರದಿದ್ದರೆ, ತೀವ್ರ ಹೃದಯ ಅಸ್ವಸ್ಥತೆಯ ನಡುವೆಯೂ ಪ್ರತಿಭಟನಾ ಪ್ರದರ್ಶನಕ್ಕೆ ಬಂದಿದ್ದ ಜೆ.ಪಿ., ಅಂದು ಮಾರಣಾಂತಿಕವಾಗಿ ಗಾಯಗೊಳ್ಳಬೇಕಿತ್ತು. ಆದರೂ ಕೈಕಾಲುಗಳು ಹಾಗೂ ಹೆಗಲು ಮೂಳೆಗಳಿಗೆ ಬಲವಾದ ಪೆಟ್ಟು ಬಿದ್ದು, ಜೆ.ಪಿ. ಮೂರ್ಛೆ ಹೋದರು. ಅವರನ್ನೊಯ್ದು ರಸ್ತೆಬದಿಯ ಮರದ ನೆರಳಿನಲ್ಲಿ ಮಲಗಿಸಿ ಶುಶ್ರೂಷೆ ನೀಡಲಾಯಿತು. ತಮಗೊಪ್ಪಿಸಿದ್ದ ಕೆಲಸವನ್ನು ಯಶಸ್ವಿಯಾಗಿ ಮುಗಿಸಿದೆವೆಂದು ಭಾವಿಸಿದ ಪೊಲೀಸರು ಅಲ್ಲಿಂದ ನಿರ್ಗಮಿಸಿದರು. ಅದಾದ ಸ್ವಲ್ಪ ಹೊತ್ತಿನಲ್ಲೇ ಚೇತರಿಸಿಕೊಂಡು ಎದ್ದ ಜೆ.ಪಿ., ಜಾಥಾವನ್ನು ರದ್ದುಪಡಿಸಲಾಗ ದೆಂದು ಘೋಷಿಸಿ, ಇಂದಿನ ಹಿಂಸಾಚಾರಕ್ಕೆ ಕಾರಣರಾದ ರಾಜ್ಯದ ಗೃಹಮಂತ್ರಿ ದರೋದಾ ಪ್ರಸಾದ್ ರೈ ಅವರ ರಾಜೀನಾಮೆಗೆ ಒತ್ತಾಯಿಸಲು ಅವರ ಮನೆ ಕಡೆ ಧಾವಿಸುವಂತೆ ತಮ್ಮ ಬೆಂಬಲಿಗರಿಗೆ ಸೂಚಿಸಿ ತಾವೂ ವಾಹನದಲ್ಲಿ ಅತ್ತ ನಡೆದರು. ದಾರಿಯುದ್ದಕ್ಕೂ ರಕ್ತಸಿಕ್ತರಾದ ಸರ್ವೋದಯ ಸತ್ಯಾಗ್ರಹಿಗಳು, ಶಾಂತಿಗೀತೆ ಹಾಡುವ ಮಹಿಳಾ ಗಾಂಧಿವಾದಿಗಳು, ಸರ್ಕಾರದ ವಿರುದ್ಧ ಘೋಷಣೆ ಕೂಗುವ ವಿದ್ಯಾರ್ಥಿಗಳು...

ಗೃಹಮಂತ್ರಿ ಮನೆ ಬಳಿ ಬಂದ ಜೆ.ಪಿ. ಹಾಗೂ ಅವರ ನೂರಾರು ಜನ ಬೆಂಬಲಿಗರನ್ನು ಬಂಧಿಸಿ ಬಸ್ಸುಗಳಿಗೆ ತುಂಬಲಾಯಿತು. ರಾತ್ರಿ ಹತ್ತು ಗಂಟೆಗೆ ಜೆ.ಪಿ. ಅವರನ್ನು ಅವರ ಮನೆಗೆ ಕರೆದೊಯ್ದು ಬಿಟ್ಟು, ಮನೆಯ ಸುತ್ತ ಜನ ಸೇರದಂತೆ ಪೊಲೀಸ್ ಪಹರೆ ಹಾಕಲಾಯಿತು. ಮನೆಯೊಳಗೆ ಹೋಗುವ ಮುನ್ನ ಜೆ.ಪಿ., 'ಬ್ರಿಟಿಷ್ ಆಳ್ವಿಕೆಯಲ್ಲಿ ಕೂಡಾ ಇಂತಹ ಬರ್ಬರ ಹಿಂಸಾಚಾರಕ್ಕೆ ನಾವು ತುತ್ತಾಗಿರಲಿಲ್ಲ. ನಾನು ಬದುಕುಳಿದರೆ, ಇದಕ್ಕೆ ಜವಾಬ್ದಾರರಾದ ಜನರನ್ನು ಸರಿದಾರಿಗೆ ತರುವೆ' ಎಂದು ಹೇಳಿಕೆ ನೀಡಿ, ಮಾರನೆಯ ದಿನ ರಾಜ್ಯ ಬಂದ್‌ಗೆ ಕರೆ ನೀಡಿದರು.

ವಿರೋಧ ಪಕ್ಷಗಳ ದೃಢ ಸಂಕಲ್ಪ

ರಾಜ್ಯಸರ್ಕಾರ ಜೆ.ಪಿ. ಚಳುವಳಿಯ ಸೊಂಟ ಮುರಿದು ಹಾಕಲಾಗಿದೆ ಎಂದು ಬೀಗಿತು. ಆದರೆ ಅಂದಿನ ಪ್ರದರ್ಶನದಲ್ಲಿ ಭಾಗವಹಿಸಲು ದೆಹಲಿ ಮತ್ತಿತರ ಕಡೆಗಳಿಂದ ಬಂದಿದ್ದ ವಿವಿಧ ಕಾಂಗ್ರೆಸ್ಸೇತರ ಪಕ್ಷಗಳ-ಭಾರತೀಯ ಕಮ್ಯೂನಿಸ್ಟ್ ಪಕ್ಷವನ್ನು ಹೊರತುಪಡಿಸಿದಂತೆ-ನಾಯಕರು, ಜೆ.ಪಿ.ಯವರನ್ನು 'ಮುಗಿಸುವ' ರಾಜ್ಯಸರ್ಕಾರದ ಅನಾಗರಿಕ ವರ್ತನೆಯಿಂದ ದಿಗ್ಭ್ರಮೆರಾಗಿದ್ದರು ಬಿಹಾರದ ಆಂದೋಲವನ್ನು ಕಾಂಗ್ರೆಸ್ ಪಕ್ಷಕ್ಕೆ ಪರ್ಯಾಯ ರೂಪಿಸುವ ರಾಷ್ಟ್ರವ್ಯಾಪಿ ಆಂದೋಲನವನ್ನಾಗಿ ಪರಿವರ್ತಿಸಲು ಅವರು ಅಂದು ದೃಢಸಂಕಲ್ಪಮಾಡಿದರು. ಖಚಿತ ನಿಲುವಿಗೆ ಬರಲಾಗದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್‌ಪಕ್ಷದ ಹೊರತಾಗಿ ಪ್ರಮುಖ ವಿರೋಧಪಕ್ಷಗಳಾದ ಭಾರತೀಯ ಲೋಕದಳ, ಭಾರತೀಯ ಜನಸಂಘ, ಸಮಾಜವಾದಿ ಪಕ್ಷ ಹಾಗೂ ಸಂಸ್ಥಾ ಕಾಂಗ್ರೆಸ್ ಪಕ್ಷಗಳ ನಾಯಕರು ಈ ದಿಸೆಯಲ್ಲಿ ಮಾತುಕತೆಗಳನ್ನು ಆರಂಭಿಸಿದರು. ನವೆಂಬರ್ ಕೊನೆಯ ಹೊತ್ತಿಗೆ ಜೆ.ಪಿ.ಯವರನ್ನು ದೆಹಲಿಗೆ ಆಹ್ವಾನಿಸಿ ಕಾಂಗ್ರೆಸ್‌ಗೆ ಪರ್ಯಾಯವಾದ ವ್ಯವಸ್ಥೆಯ ನೇತೃತ್ವ ವಹಿಸುವಂತೆ ಅವರನ್ನು ಕೋರಿದರು. ಆದರೆ ಜೆ.ಪಿ. ಯಾವುದೇ ಸಾಮಾನ್ಯ ತಾತ್ವಿಕ ಆಧಾರ ರೂಪಿಸಿಕೊಳ್ಳದ ಹಾಗೂ ತಮ್ಮ ಪ್ರತ್ಯೇಕ ತಾತ್ವಿಕ-ಸಾಂಸ್ಥಿಕ ಚಹರೆಗಳನ್ನು ಕಳೆದುಕೊಳ್ಳದ ರಾಜಕೀಯ ಪರ್ಯಾಯದ ಸೂತ್ರಧಾರತ್ವವನ್ನು ತಾವು ವಹಿಸಿಕೊಳ್ಳಲು ಇಚ್ಛಿಸುವುದಿಲ್ಲವೆಂದು ಸ್ಪಷ್ಟಪಡಿಸಿದರು. ಆದರೆ ಈ ಪಕ್ಷಗಳ ಸಮನ್ವಯ ಸಮಿತಿ ರೂಪಿಸುವ ಕಾರ್ಯಕ್ರಮ-ಸಭೆಗಳಲ್ಲಿ ಪಕ್ಷೇತರವಾಗಿ ಭಾಗವಹಿಸಲು ತಮ್ಮದೇನೂ ಅಭ್ಯಂತರವಿಲ್ಲವೆಂದು ಅವರು ಸಾರಿದರಲ್ಲದೆ, ಡಿಸೆಂಬರ್‌ನಲ್ಲಿ ವಾರಾಣಾಸಿಯಲ್ಲಿ ನಡೆದ ಇಂತಹ ಒಂದು ಬೃಹತ್ ಸಭೆಯಲ್ಲಿ ಭಾಗವಹಿಸಿದರು. ತಮ್ಮ 'ಸಂಪೂರ್ಣ ಕ್ರಾಂತಿ' ಕಾರ್ಯಾಚರಣೆ ಕಾಂಗ್ರೆಸ್ ಜಾಗದಲ್ಲಿ ಇನ್ನೊಂದು ಪಕ್ಷವನ್ನು, ಇಂದಿರಾ ಜಾಗದಲ್ಲಿ ಚರಣಸಿಂಗರನ್ನೋ, ವಾಜಪೇಯಿ ಅವರನ್ನೋ ಅಧಿಕಾರಕ್ಕೆ ತರುವ ಸಂಕುಚಿತ ಉದ್ದೇಶ ಹೊಂದಿಲ್ಲ. ಆದ್ದರಿಂದ ಜನ ಪಕ್ಷಬೇಧ ಮರೆತು ಗ್ರಾಮ ಹಾಗೂ ವಿಭಾಗಮಟ್ಟದಲ್ಲಿ ಸ್ವಯಮಾಡಳಿತ ನಡೆಸಲು ಪೂರಕವಾಗುವ ಜನಸಂಘರ್ಷ ಸಮಿತಿಗಳ ರಚನೆಯಲ್ಲಿ ಪಾಲ್ಗೊಳ್ಳಬೇಕೆಂದು ಅವರು ಆ ಸಭೆಯಲ್ಲಿ ಕರೆ ನೀಡಿದರು.

ಕಾಂಗ್ರೆಸ್-ಸಿ.ಪಿ.ಐ.ನ ಪ್ರತಿಚಳುವಳಿ

ಇದನ್ನು ಗಮನಿಸಿದ ಕಾಂಗ್ರೆಸ್ ಪಕ್ಷ, 'ನಿರ್ದಿಷ್ಟ ಗುರಿ ಇಲ್ಲದ, ಫ್ಯಾಸಿಸ್ಟ್ ಶಕ್ತಿಗಳ ವಶವಾಗಿರುವ, ವಿದೇಶಿ ಸಂಚಿಗೆ ಬಲಿಯಾಗಿರುವ ಪ್ರಜಾಪ್ರಭುತ್ವ ವಿರೋಧಿ ಜೆ.ಪಿ. ಚಳುವಳಿ'ಗೆ ವಿರುದ್ಧವಾಗಿ ರಾಷ್ಟ್ರಾದ್ಯಂತ ನವೆಂಬರ್ ೫ ರಿಂದ ೧೨ ರವರೆಗೆ 'ಪ್ರಜಾಪ್ರಭುತ್ವ ಉಳಿಸಿ' ಚಳುವಳಿ ಸಪ್ತಾಹವನ್ನು ಹಮ್ಮಿಕೊಳ್ಳಲು ನಿರ್ಧರಿಸಿತು. ಈ ನಿರ್ಧಾರ ಕೈಗೊಂಡ ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ಕೆ. ಚಂದ್ರಶೇಖರ್ ನೇತೃತ್ವದ 'ತರುಣ ಕೂಟ'ವು ಈ ನಿರ್ಧಾರವನ್ನು ವಿರೋಧಿಸಿತು. ಅಲ್ಲದೆ ಜೆ.ಪಿ. ಚಳುವಳಿಯ ಆಶಯಗಳನ್ನು ಅರ್ಥಮಾಡಿಕೊಂಡು ಸೂಕ್ತ ಪ್ರತಿಸ್ಪಂದನ ನೀಡುವ ಮೂಲಕ ಈ ಚಳುವಳಿಯನ್ನು ಎದುರಿಸಬಹುದೆಂದು ತನ್ನ ಭಿನ್ನಾಭಿಪ್ರಾಯ ವ್ಯಕ್ತಪಡಿಸಿತು. ಆದರೆ ಕಾಂಗ್ರೆಸ್‌ನೊಳಗಿದ್ದ ಭಾರತೀಯ ಕಮ್ಯೂನಿಸ್ಟ್ ಹಿತಚಿಂತಕರ ಗುಂಪು ಈ ಭಿನ್ನಾಭಿಪ್ರಾಯಕ್ಕೆ 'ಜೆ.ಪಿ. ಪಿತೂರಿ'ಯೇ ಕಾರಣವೆಂದು ಆರೋಪಿಸಿ, ಸಪ್ತಾಹಾಚರಣೆಗೆ ಭಾರತೀಯ ಕಮ್ಯೂನಿಸ್ಟ್ ಪಕ್ಷದ ಸಹಕಾರದೊಂದಿಗೆ ಸಿದ್ಧತೆ ಕೈಗೊಳ್ಳಲು ಪಕ್ಷವನ್ನು ಪ್ರೇರೇಪಿಸಿತು. ಇದರ ಅಂಗವಾಗಿ ನವೆಂಬರ್ ೧೧ ರಂದು ಪಾಟ್ನಾದಲ್ಲಿ ಸಿ.ಪಿ.ಐ., ರೈತ-ಕಾರ್ಮಿಕರ ಹಾಗೂ ಬಿಲ್ಲು ಬಾಣ, ಕತ್ತಿಗಳಿಂದ ಸಜ್ಜಿತರಾಗಿದ್ದ ಬುಡಕಟ್ಟು ಜನರನ್ನೊಳಗೊಂಡ ಬೃಹತ್ ಪ್ರದರ್ಶನವೊಂದನ್ನು ಏರ್ಪಡಿಸಿ ಜೆ.ಪಿ. ಚಳುವಳಿಯ ವಿರುದ್ಧ ರಕ್ತ ಕ್ರಾಂತಿ ಮಾಡುವ ಬೆದರಿಕೆ ಹಾಕಿತು. ಈ ಪ್ರದರ್ಶನದಲ್ಲಿ 'ಜೆ.ಪಿ ಕಾಯಿಲೆಗೆ ಮದ್ದುಂಟು—ಬೂಟು ಚಪ್ಪಲಿಗಳ ತಿರುಗೇಟು', 'ಅಟಲ್ ಬಿಹಾರಿ, ಜೆ.ಪಿ. ಜೋಡಿ-ಅಮೆರಿಕಾದ ದಲ್ಲಾಲಿಗಳ ಮೋಡಿ' ಮುಂತಾದ ಹೇಯ ಹಾಗೂ ಪ್ರಚೋದನಕಾರಿ ಶೀರ್ಷಿಕೆಗಳ ಭಿತ್ತಿಪತ್ರಗಳನ್ನು ಕೊಂಡೊಯ್ಯಲಾಯಿತು. ಇದಾದ ಕೆಲವೇ ದಿನಗಳಲ್ಲಿ ಕಾಂಗ್ರೆಸ್ ಕೂಡಾ ಡಿ.ಕೆ. ಬರೂವಾ, ತಾರಕೇಶ್ವರಿ ಸಿನ್ಹಾ, ಜಗಜೀವನರಾಂ, ಎಲ್.ಎನ್. ಮಿಶ್ರಾ ಮುಂತಾದ ರಾಷ್ಟ್ರನಾಯಕರ ನೇತೃತ್ವದಲ್ಲಿ ಪ್ರದರ್ಶನ ಹಾಗೂ ಬೃಹತ್ ಸಭೆ ನಡೆಸಿ, ಜೆ.ಪಿ. ಆಂದೋಲನವನ್ನು ಖಂಡಿಸಿತು. ಈ ಎರಡೂ ಸಭೆಗಳಿಗೆ ರಾಜ್ಯಸರ್ಕಾರ ಸಾರಿಗೆ-ಊಟ-ವಸತಿ ಸೇರಿದಂತೆ ಎಲ್ಲ ವ್ಯವಸ್ಥೆಯನ್ನು ತಾನೇ ನಿಂತು ನಿರ್ವಹಿಸಿತು.

ಛಾತ್ರಯುವ ಸಂಘರ್ಷ ವಾಹಿನಿ ರಚನೆ - ಉಪಚುನಾವಣೆಗಳಲ್ಲಿ ಜಯ

ಇದರಿಂದ ಯಾವ ರೀತಿಯಲ್ಲೂ ವಿಚಲಿತರಾಗದ ಜೆ.ಪಿ., 'ಜನ ಬೆಂಬಲವಿದ್ದರೆ ಮುಂದಿನ ಚುನಾವಣೆಗಳಲ್ಲಿ ಗೆದ್ದು ತೋರಿಸಲಿ' ಎಂಬ ಇಂದಿರಾ ಅವರ ಸವಾಲಿಗೆ ಜವಾಬು ನೀಡುವ ಕಾರ್ಯಕ್ರಮದ ಅಂಗವಾಗಿ ಬಿಹಾರ ವಿಧಾನಸಭೆಯ ಮಹಾದ್ವಾರದ ಬಳಿ ಶಾಸಕರ ರಾಜೀನಾಮೆಗಾಗಿ ಧರಣಿ ನಡೆಸಿದರು ರಾಜೀನಾಮೆ ನೀಡದ ಶಾಸಕರ ಮನೆಗಳ ಬಳಿ ಘೇರಾವೋ ಹಾಗೂ ಧರಣಿ ಸತ್ಯಾಗ್ರಹಗಳು ನಿರಂತರವಾಗಿ ನಡೆಯುವಂತೆ ಕಾರ್ಯಕ್ರಮ ರೂಪಿಸಿದರು. ಹಾಗೇ ಗಾಂಧಿ ಮೈದಾನದಲ್ಲಿ ಜನತಾ ವಿಧಾನಸಭೆ ಕರೆಮ

ಅಲ್ಲಿಂದಲೇ ಸಮಾನಂತರ ಸರ್ಕಾರ ನಡೆಸುವ ಯೋಜನೆಯ ನೀಲನಕ್ಷೆ ತಯಾರಿಸತೊಡಗಿದರು. ಇದಕ್ಕಾಗಿ ಒಂದು ವರ್ಷಕಾಲ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳಬಲ್ಲ ವಿದ್ಯಾರ್ಥಿಗಳನ್ನು ಗುರುತಿಸುವ ಕೆಲಸ ಆರಂಭಿಸಿದರು. ಪಾಟ್ನಾ ವಿಶ್ವವಿದ್ಯಾಲಯವೊಂದರಿಂದಲೇ ಒಂದು ವರ್ಷ ಶಿಕ್ಷಣ ತೊರೆದು ಬರಲು ೩೦೦ ಜನ ವಿದ್ಯಾರ್ಥಿಗಳು ಸಿದ್ಧರಾದರು. ಇವರಲ್ಲದೆ ೨೫೦೦ ವಿದ್ಯಾರ್ಥಿಗಳು ವಾರಕ್ಕೊಂದು ದಿನ ಜೆ.ಪಿ. ಹೇಳಿದ ಕೆಲಸ ಮಾಡಲು ಮುಂದೆ ಬಂದರು.

ಜೆ.ಪಿ. ತಮ್ಮ ನೀಲನಕ್ಷೆಯ ಜಾರಿಗಾಗಿ ಯುವಕಾರ್ಯಕರ್ತರ ಪಡೆಯೊಂದನ್ನು ಸಿದ್ಧಪಡಿಸುವ ಸಲುವಾಗಿ ಛಾತ್ರ ಸಂಘರ್ಷ ಸಮಿತಿಗಳನ್ನು ವಿಸರ್ಜಿಸಿ ಛಾತ್ರ ಯುವ ಸಂಘರ್ಷ ವಾಹಿನಿ ಎಂಬ ವ್ಯಾಪಕವಾದ ಸ್ವಯಂಸೇವಾದಳವನ್ನು ರಚಿಸಿದರು. ಇದು ಒಂದು ವರ್ಷದಲ್ಲಿ ಒಂದು ಲಕ್ಷ ಜನರ ಸದಸ್ಯತ್ವ ಪಡೆಯುವ ಗುರಿಯನ್ನು ಘೋಷಿಸಿದರು. ಈ ವಾಹಿನಿಗೆ ಹಾಗೂ ಜನ ಸಂಘರ್ಷ ಸಮಿತಿಗಳಿಗೆ ಗ್ರಾಮ ಹಾಗೂ ವಿಭಾಗಮಟ್ಟದಲ್ಲಿ ಜನಪ್ರತಿನಿಧಿಗಳ ಪ್ರಾಥಮಿಕ ಆಯ್ಕೆ ಮಾಡುವ ಸಂಯುಕ್ತ ಜವಾಬ್ದಾರಿ ನೀಡಲಾಯಿತು. ರಾಜಕೀಯ ಪಕ್ಷಗಳು ಕೂಡಾ ವಿಧಾನಸಭೆ ಹಾಗೂ ಸಂಸತ್ತಿಗೆ ತಮ್ಮ ಅಭ್ಯರ್ಥಿಗಳನ್ನು ಈ ವ್ಯವಸ್ಥೆಯ ಮೂಲಕವೇ ತೀರ್ಮಾನಿಸಿ ನಿಲ್ಲಿಸಬಹುದೆಂದು ಸೂಚಿಸಲಾಯಿತು. ಈ ಬಗ್ಗೆ ವಿವಿಧ ರಾಜಕೀಯ ಪಕ್ಷಗಳ ಪ್ರತಿಕ್ರಿಯೆ ಕೋರಲಾಯಿತು. ಪ್ರಯೋಗವಾಗಿ ಮಧ್ಯಪ್ರದೇಶದಲ್ಲಿ ನಡೆಯಲಿದ್ದ ಒಂದು ವಿಧಾನಸಭಾ ಹಾಗೂ ಒಂದು ಲೋಕಸಭಾ ಕ್ಷೇತ್ರದ ಉಪಚುನಾವಣೆಗಳಿಗೆ ಕಾಂಗ್ರೆಸ್-ಸಿ.ಪಿ.ಐ. ಮೈತ್ರಿಕೂಟದ ಅಭ್ಯರ್ಥಿಗಳ ವಿರುದ್ಧ ಜನತೆಯ ಅಭ್ಯರ್ಥಿಗಳನ್ನು ನಿಲ್ಲಿಸಲಾಯಿತು. ಪಾರಂಪರಿಕ ಕಾಂಗ್ರೆಸ್ ಭದ್ರಕೋಟೆಗಳೆನಿಸಿದ್ದ ಎರಡೂ ಕ್ಷೇತ್ರಗಳಲ್ಲಿ ಜನತೆಯ ಅಭ್ಯರ್ಥಿಗಳು ಭಾರಿ ಜಯಗಳಿಸಿದರು. ಜಬ್ಬಲಪುರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕ ಸೇಠ್ ಗೋವಿಂದ ದಾಸರನ್ನು ವಿದ್ಯಾರ್ಥಿ ನಾಯಕ ಶರದ್ ಯಾದವ್ ಸುಮಾರು ಒಂದು ಲಕ್ಷ ಮತಗಳ ಅಂತರದಿಂದ ಸೋಲಿಸಿ, ರಾಷ್ಟ್ರಾದ್ಯಂತ ಚುನಾವಣಾ ಗಾಳಿ ಯಾವ ಕಡೆ ಬೀಸುತ್ತದೆ ಎಂಬುದರ ಸೂಚನೆ ನೀಡಿದರು.

ಜೆ.ಪಿ. ವಿರುದ್ಧ ಅಪಪ್ರಚಾರ

ಇದರಿಂದ ಗಾಬರಿಗೊಂಡ ಇಂದಿರಾಗಾಂಧಿಯವರು ಜೆ.ಪಿ.ಯವರ ವಿರುದ್ಧ ವೈಯಕ್ತಿಕ ದಾಳಿ ಆರಂಭಿಸಿದರು. 'ಜೆ.ಪಿ. ಚಳುವಳಿ ಸಾಮಾನ್ಯ ಮನುಷ್ಯನ ದೈನಂದಿನ ಜೀವನಕ್ಕೆ ಧಕ್ಕೆ ತರುತ್ತಿದೆ; ಅವನ ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಕಸಿದುಕೊಳ್ಳುತ್ತಿದೆ' ಎಂದು ಅಭಿಪ್ರಾಯಪಟ್ಟರಲ್ಲದೆ, 'ಜೆ.ಪಿ., ಭಾರತ ಬಿಟ್ಟು ತೊಲಗಿ ಚಳುವಳಿಯ ಕಾಲದಲ್ಲಿ ಮಹಾತ್ಮ ಗಾಂಧಿ ಹಾಗೂ ಸರ್ದಾರ್ ಪಟೇಲರ ವಿರೋಧಿಗಳಾಗಿದ್ದರು' ಎಂಬ ಆರೋಪ ಹೊರಿಸಿದರು. ಅಲ್ಲದೆ 'ಜೆ.ಪಿ. ಈಗ ಗಾಂಧಿಯನ್ನು ಕೊಂದವರ ಸಹವಾಸದಲ್ಲಿ ಕ್ರಾಂತಿ

ಮಾಡಹೊರಟಿದ್ದಾರೆ' ಎಂದು ಜೆ.ಪಿ. ಚಳುವಳಿಯಲ್ಲಿ ಭಾರತೀಯ ಜನಸಂಘ ಹಾಗೂ ರಾಷ್ಟ್ರೀಯ ಸೇವಕ ಸಂಘ ಸಕ್ರಿಯವಾಗಿ ಭಾಗವಹಿಸುತ್ತಿರುವುದನ್ನು ಎತ್ತಿ ಆಡಿ ಹಂಗಿಸುವ ಪ್ರಯತ್ನ ಮಾಡಿದರು. ಇದಕ್ಕೆ ಪೂರಕವಾಗಿ ಸೋವಿಯತ್ ವಾರ್ತಾ ಸಂಸ್ಥೆ ತಾಸ್ ಜಯಪ್ರಕಾಶರನ್ನು ಪ್ರತಿಗಾಮಿ ಶಕ್ತಿಗಳ ಮಹಾನಾಯಕರೆಂದು ವರ್ಣಿಸಿ, ಕೋಮುವಾದಿ, ಪಟ್ಟಭದ್ರ ಹಿತಾಸಕ್ತವಾದಿ ಹಾಗೂ ಫ್ಯಾಸಿಸ್ಟ್ ವಿಚಾರಧಾರೆಯ ಕೆಲವು ಬಲಪಂಥೀಯ ಪುಡಿ ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ಅವರು ಭಾರತೀಯ ಜನತೆಯ ಪ್ರಜಾಸತ್ತಾತ್ಮಕ ಸಾಧನೆಗಳನ್ನು ಬುಡಮೇಲುಗೊಳಿಸಲು ಯತ್ನಿಸುತ್ತಿದ್ದಾರೆ ಎಂದು ವ್ಯಾಖ್ಯಾನ ಮಾಡಿತು. ಇದರ ವಿರುದ್ಧ ಕಾಂಗ್ರೆಸ್ ಪಕ್ಷದೊಳಗಿನ ಪ್ರಗತಿಶೀಲ ಶಕ್ತಿಗಳ ಜೊತೆ ಭಾರತದ ಕಮ್ಯೂನಿಸ್ಟರನ್ನೊಳಗೊಂಡ ಎಲ್ಲ ಎಡಪಂಥೀಯ ಶಕ್ತಿಗಳೂ ಕೈಗೂಡಿಸಿ ಹೋರಾಡುವ ತುರ್ತು ಒದಗಿದೆ ಎಂದು ಅದು ಸಾರಿತು!

ದೆಹಲಿಯಲ್ಲಿ ಬೃಹತ್ ಜಾಥಾ

ಆದರೆ ಈ ಎಲ್ಲ ಪ್ರತಿದಾಳಿಯೂ ವಿರೋಧಪಕ್ಷಗಳ ಸಮನ್ವಯ ಸಮಿತಿಯ ಕೆಲಸವನ್ನು ಚುರುಕುಗೊಳಿಸಿತು. ಜೆ.ಪಿ. ಅವರನ್ನು ದೆಹಲಿಗೆ ಬರಮಾಡಿಕೊಂಡು ವಿರೋಧಪಕ್ಷಗಳ ಐಕ್ಯತೆಯ ವಿವಿಧ ಸಾಧ್ಯತೆಗಳನ್ನು ಚರ್ಚಿಸಿತು. ಚರಣಸಿಂಗರು ಎಲ್ಲ ವಿರೋಧ ಪಕ್ಷಗಳೂ ವಿಸರ್ಜನೆಗೊಂಡು ಒಂದು ಸಾಮಾನ್ಯ ಕಾಂಗ್ರೆಸ್ಸೇತರ ಪಕ್ಷದ ಸ್ಥಾಪನೆಯ ಒಲವು ತೋರಿದರೆ, ಇದನ್ನು ಒಪ್ಪಲು ಸಿದ್ಧವಿಲ್ಲದ ಇತರ ಪಕ್ಷಗಳು ಸಂಸತ್ತು, ಶಾಸನ ಸಭೆಗಳಲ್ಲಿ ಒಂದು ಒಕ್ಕೂಟವಾಗಿ ಕಾರ್ಯನಿರ್ವಹಿಸುವ ಒಲವು ತೋರಿದವು. ಇಂತಹ ಚಟುವಟಿಕೆಗಳಲ್ಲಿ ಅಷ್ಟೇನೂ ಆಸಕ್ತಿ ತೋರದಿದ್ದ ಜೆ.ಪಿ., ೧೯೭೫ರ ಫೆಬ್ರವರಿಯ ತಮ್ಮ ಈ ದೆಹಲಿಯ ಭೇಟಿ ಸಂದರ್ಭದಲ್ಲಿ ಸರ್ಕಾರಿ ನೌಕರರ ಬೃಹತ್ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ, ದೆಹಲಿಯ ಕಾಂಗ್ರೆಸ್ ಸರ್ಕಾರ ಬಂಗ್ಲಾದೇಶದಲ್ಲಿ ಈಗ ಷೇಕ್ ಮುಜೀಬರ ರೆಹಮಾನ್ ಮಾಡಿರುವಂತೆ ಏಕಪಕ್ಷ ಸರ್ವಾಧಿಕಾರ ಸ್ಥಾಪಿಸುವ ಸಾಧ್ಯತೆಗಳಿದ್ದು, ಇದರ ವಿರುದ್ಧ ಎಚ್ಚರದಿಂದ ಇರಬೇಕೆಂದು ಕರೆಕೊಟ್ಟರು. ಬಂಗ್ಲಾ ಯುದ್ಧದ ಸಮಯದಲ್ಲಿ ಘೋಷಿಸಲಾದ ಬಾಹ್ಯ ತುರ್ತುಪರಿಸ್ಥಿತಿ ಕಾನೂನುಗಳನ್ನು ರದ್ದುಪಡಿಸದೆ ಇಷ್ಟು ವರ್ಷಗಳ ನಂತರವೂ ಜೀವಂತವಾಗಿಟ್ಟಿರುವುದರ ಬಗೆಗೆ ಆತಂಕವನ್ನೂ ವ್ಯಕ್ತಪಡಿಸಿದರು. ನಂತರ ವಿರೋಧ ಪಕ್ಷಗಳ ನಾಯಕರ ಜೊತೆಗೂಡಿ, ರೌಲೆಟ್ ಕಾಯಿದೆ ವಿರುದ್ಧ ಮಹಾತ್ಮಗಾಂಧಿ ಮೊದಲ ಬೃಹತ್ ಪ್ರತಿಭಟನೆ ನಡೆಸಿದ ಮಾರ್ಚ್ ಆರರ ನೆನಪಿನಲ್ಲಿ ೭೫ರ ಮಾರ್ಚ್ ೬ರಂದು ದೆಹಲಿಯಲ್ಲಿ ಬೃಹತ್ ಜಾಥಾ ನಡೆಸಲು ತೀರ್ಮಾನಿಸಿದರು.

ಮಾರ್ಚ್ ೬ರಂದು ದೆಹಲಿಯ ಬೋಟ್‌ಕ್ಲಬ್‌ನಲ್ಲಿ ಜೆ.ಪಿ. ಲಕ್ಷಾಂತರ ಜನರ ಬೃಹತ್ ಜಾಥಾದ ನೇತೃತ್ವ ವಹಿಸಿ ಮಾತನಾಡಿದರು. ನಂತರ ಲೋಕಸಭೆಯ ಅಧ್ಯಕ್ಷರಿಗೆ ಹಾಗೂ ರಾಜ್ಯಸಭೆಯ ಉಪಸಭಾಪತಿ ಅವರಿಗೆ ತಮ್ಮ ನೇತೃತ್ವದ ಚಳುವಳಿಯ ಬೇಡಿಕೆಗಳ

ಪಟ್ಟಿಯೊಂದನ್ನು ಸಲ್ಲಿಸಿದರು. ಇವುಗಳಲ್ಲಿ ಭ್ರಷ್ಟಾಚಾರ ವಿರೋಧಿ ಕಾರ್ಯಾಚರಣೆ, ಚುನಾವಣಾ ಸುಧಾರಣೆ ಹಾಗೂ ಶಿಕ್ಷಣ ಕ್ಷೇತ್ರದ ಪುನಾರಚನೆಯ ಬೇಡಿಕೆಗಳು ಪ್ರಮುಖವಾಗಿದ್ದವು.

ನಂತರ ಜೆ.ಪಿ. ಬಿಹಾರದಲ್ಲಿ ಪ್ರದರ್ಶನ, ಧರಣಿ ಮತ್ತು ಜನಸಂಘರ್ಷ ಸಮಿತಿ ಹಾಗೂ ಛಾತ್ರ ಸಂಘರ್ಷ ಯುವವಾಹಿನಿಗಳ ಸಭೆಗಳ ಕಾರ್ಯಾಚರಣೆಗಳಲ್ಲಿ ಪಾಲ್ಗೊಂಡು ಬಿಹಾರ ಸರ್ಕಾರದ ಆಡಳಿತವನ್ನು ಅಸ್ತವ್ಯಸ್ತಗೊಳಿಸಲಾರಂಭಿಸಿದರು. ಮುಖ್ಯಮಂತ್ರಿ ಅಬ್ದುಲ್ ಗಫೂರ್ ಜೆ.ಪಿಯವರನ್ನು ಬಂಧಿಸಿಡುವ ಮಾತನ್ನಾಡಿದರು. ಇಂದಿರಾಗಾಂಧಿಯವರು ದೇಶ-ವಿದೇಶಗಳ ಸುದ್ದಿ ಪತ್ರಿಕೆಗಳಿಗೆ ಹಾಗೂ ವಾರ್ತಾಸಂಸ್ಥೆಗಳಿಗೆ ನೀಡಿದ ಸಂದರ್ಶನಗಳಲ್ಲಿ, ಜೆ.ಪಿ. ಚಳುವಳಿ ದೇಶದ ಪ್ರಜಾಪ್ರಭುತ್ವದ ಅಡಿಗಲ್ಲುಗಳನ್ನೇ ಅಲ್ಲಾಡಿಸುತ್ತಿರುವುದರಿಂದ ಸಂಧಾನದ ಸಾಧ್ಯತೆಗಳು ಕಡಿಮೆ ಎಂದೂ ಹೇಳಿದರು. ಆಗ ಕಾಂಗ್ರೆಸ್‌ನ ಚಂದ್ರಶೇಖರ್ ಜೊತೆಗೆ ಕೃಷ್ಣಕಾಂತರೂ ಇಂದಿರಾರ ಅಭಿಪ್ರಾಯದ ವಿರುದ್ಧ ತಮ್ಮ ದನಿ ಎತ್ತಿದರು. ಮೋಹನ ಧಾರಿಯಾ ಅವರಂತೂ ತಮ್ಮ ಸಚಿವ ಸ್ಥಾನ ತ್ಯಾಗಮಾಡಿ, ಜೆ.ಪಿ. ಜೊತೆ ಸಂಧಾನದ ಬಗ್ಗೆ ಇಂದಿರಾ ಅವರ ಮನವೊಲಿಸಲು ಪ್ರಯತ್ನಿಸಿ ವಿಫಲರಾದರು. ರಾಜಕೀಯ ವಾತಾವರಣ ಬಿಗುಗೊಂಡು ಕಹಿಯಾಗತೊಡಗಿತು.

ರಾಷ್ಟ್ರಪ್ರವಾಸ - ಎಲ್ಲೆಲ್ಲೂ ಜೆ.ಪಿ. ಚಳುವಳಿ

ಈ ಮಧ್ಯೆ ಜಯಪ್ರಕಾಶರು ವಿವಿಧ ರಾಜ್ಯಗಳ ವಿದ್ಯಾರ್ಥಿನಾಯಕರ, ಸರ್ವೋದಯ ಕಾರ್ಯಕರ್ತರ ಹಾಗೂ ಬುದ್ಧಿಜೀವಿಗಳ ಆಹ್ವಾನದ ಮೇರೆಗೆ ಕರ್ನಾಟಕವೂ ಸೇರಿದಂತೆ ಅನೇಕ ರಾಜ್ಯಗಳ ಪ್ರವಾಸ ಕೈಗೊಂಡು ಸಂಪೂರ್ಣ ಕ್ರಾಂತಿಗೆ ಬೆಂಬಲ ಕೋರಿದರು. ಎಲ್ಲಿಯೂ ಪಕ್ಷ ರಾಜಕಾರಣದ ಪರಿಭಾಷೆಯಲ್ಲಿ ಮಾತನಾಡದೆ, ರಾಷ್ಟ್ರದ ರಾಜಕೀಯದ ಒಟ್ಟಾರೆ ಅವನತಿಯನ್ನು ತಡೆಯಲು ಜನಶಕ್ತಿಯನ್ನು ಸಂಘಟಿಸುವ ಆಂದೋಲನ ರೂಪಿಸುವಂತೆ ಕರೆಕೊಟ್ಟರು. ಇದರಿಂದಾಗಿ, ರಾಜಕೀಯ ಪಕ್ಷಗಳ ನಾಯಕರಲ್ಲಿ ವಿಶ್ವಾಸ ಕಳೆದುಕೊಂಡು ಹೊಸ ನಾಯಕರ ಆಗಮನಕ್ಕಾಗಿ ತಹತಹಿಸುತ್ತಿದ್ದ ಇಡೀ ರಾಷ್ಟ್ರದ ಅಶಾಂತ ವಿದ್ಯಾರ್ಥಿ ಹಾಗೂ ಯುವಶಕ್ತಿ, ಜಯಪ್ರಕಾಶರನ್ನು ತಮ್ಮ ನಾಯಕನನ್ನಾಗಿ ಒಪ್ಪಿಕೊಂಡಿತು. ಅವರು ಭೇಟಿನೀಡಿದ ಉತ್ತರಪ್ರದೇಶ, ಹರಿಯಾಣ, ಪಂಜಾಬ್, ಒರಿಸ್ಸಾ, ಆಂಧ್ರ, ಮಹಾರಾಷ್ಟ್ರ, ರಾಜಸ್ಥಾನ, ಕರ್ನಾಟಕ, ಮಧ್ಯಪ್ರದೇಶ ಮುಂತಾದ ರಾಜ್ಯಗಳಲ್ಲಿ ಸಂಪೂರ್ಣ ಕ್ರಾಂತಿಗಾಗಿ ಜನ ಸಂಘರ್ಷ ಸಮಿತಿಗಳನ್ನೂ, ನವನಿರ್ಮಾಣ ಸಮಿತಿಗಳನ್ನೂ ರಚಿಸಲಾಯಿತು. ಇವುಗಳ ಚಟುವಟಿಕೆಗಳು ಜೆ.ಪಿ. ಚಳುವಳಿಯೆಂದೇ ಪ್ರಖ್ಯಾತವಾಯಿತು. ಲೋಕನಾಯಕ ಜಯಪ್ರಕಾಶ ನಾರಾಯಣರು ಈಗ ಜನರ ನೆಚ್ಚಿನ ಜೆ.ಪಿ. ಆಗಿದ್ದರು.

ಕರ್ನಾಟಕದಲ್ಲಿ ಜೆ.ಪಿ. ಪ್ರವಾಸ

ಸಂಪೂರ್ಣ ಕ್ರಾಂತಿ ಆಂದೋಲನದ ಪ್ರಭಾವ ಕರ್ನಾಟಕದ ಮೇಲೂ ಆಗದಿರಲಿಲ್ಲ. ಎಲ್ಲ ರಾಜ್ಯಗಳನ್ನೂ ಕಾಡುತ್ತಿದ್ದ ಭ್ರಷ್ಟಾಚಾರ, ಬೆಲೆ ಏರಿಕೆ, ವಿದ್ಯಾರ್ಥಿ ಅಶಾಂತಿ ಇತ್ಯಾದಿ ಸಮಸ್ಯೆಗಳನ್ನು ಕರ್ನಾಟಕವನ್ನೂ ಕಾಡುತ್ತಿತ್ತು. ಗಾಂಧಿವಾದಿ ಹಾಗೂ ಮಾಜಿ ಮುಖ್ಯಮಂತ್ರಿ ಕಡಿದಾಳು ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ಪ್ರಗತಿಪರ ಪತ್ರಿಕೋದ್ಯಮಿ ಬಿ.ಎನ್.ಗುಪ್ತ ಹಾಗೂ ಸರ್ವೋದಯ ಮುಖಂಡ ಪಿ. ವೆಂಕೋಬರಾಯರೂ ಸೇರಿದಂತೆ ಕರ್ನಾಟಕ ಸಂಘರ್ಷ ಸಮಿತಿ ರಚಿತವಾಗಿ, ರಾಜ್ಯಾದ್ಯಂತ ಸಂಘರ್ಷ ಸಮಿತಿಗಳ ಸಂಘಟನೆ ನಡೆದಿತ್ತು. ಈ ಸಮಿತಿಯ ಆಹ್ವಾನದ ಮೇರೆಗೆ, ಜೆ.ಪಿ. ೧೯೭೫ರ ಮೇ ೧೪ರಿಂದ ೧೮ ರವರೆಗೆ ಕರ್ನಾಟಕದ ಐದು ದಿನಗಳ ಕ್ರಾಂತಿ ಯಾತ್ರೆಗೆ ಬಂದರು

ಮಂಗಳೂರಿನಿಂದ ಆರಂಭವಾದ ಈ ಯಾತ್ರೆ, ಬೆಳಗಾಂ, ಹುಬ್ಬಳ್ಳಿ, ಧಾರವಾಡ, ಹಾವೇರಿ, ದಾವಣಗೆರೆ, ಬೆಂಗಳೂರು, ಮೈಸೂರು ಹೀಗೆ ರಾಜ್ಯಾದ್ಯಂತ ಮುಖ್ಯ ಸ್ಥಳಗಳಲ್ಲಿ ಸಂಚರಿಸಿ, ಕರ್ನಾಟಕದ ಜನತೆಯನ್ನು ಸಂಪೂರ್ಣ ಕ್ರಾಂತಿಗಾಗಿ ಬಡಿದೆಬ್ಬಿಸಿತು. ಜೆ.ಪಿ. ಹೋದೆಡೆಯಲ್ಲೆಲ್ಲ ಅವರ ಸುತ್ತ ಜನಸಾಗರವೇ ಸೇರುತ್ತಿತ್ತು. ಈ ಎಲ್ಲ ಸ್ಥಳಗಳಲ್ಲಿ ಜೆ.ಪಿ. ತಮ್ಮ ಸಂಪೂರ್ಣ ಕ್ರಾಂತಿಯ ಅಗತ್ಯವನ್ನೂ, ಉದ್ದೇಶವನ್ನೂ, ಮಾರ್ಗವನ್ನೂ ವಿವರಿಸುತ್ತಿದ್ದರು. ಮುಖ್ಯವಾಗಿ ಅವರು ಸ್ವಾತಂತ್ರ್ಯ ಹೋರಾಟ ನಮಗೆ ತಂದುಕೊಟ್ಟ ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲುಗೊಳ್ಳತ್ತಿರುವ ಬಗ್ಗೆ ತಮ್ಮ ಆತಂಕ ವ್ಯಕ್ತಪಡಿಸುತ್ತಿದ್ದರು. ಭ್ರಷ್ಟಾಚಾರ, ಅಧಿಕಾರಶಾಹಿ ಹಾಗೂ ಜಾತೀಯತೆಗಳ ವಿರುದ್ಧ ಹೋರಾಟದ ಮೂಲಕ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಬಹುದು ಎಂಬುದು ಅವರ ಭಾಷಣದ ತಿರುಳಾಗಿರುತ್ತಿತ್ತು.

ಜೆ.ಪಿ.ಯವರ ಕರ್ನಾಟಕ ಪ್ರವಾಸದ ಬಗ್ಗೆ ಪಿ.ವೆಂಕೋಬರಾಯರು ಬರೆದಿರುವ ಕಿರುಪುಸ್ತಕದಲ್ಲಿ ಎರಡು ಗಮನಾರ್ಹ ಅಂಶಗಳನ್ನು ನಾವು ಗುರುತಿಸಬಹುದು. ಒಂದು ಅವರು ಹದಗೆಟ್ಟ ಅನಾರೋಗ್ಯದ ನಡುವೆಯೂ ಬಿಡುವಿಲ್ಲದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಿದ್ದುದು! ಹಿಂದಿನ ರಾತ್ರಿ ನಾಡಿಬಡಿತ ಏರುಪೇರಾಗಿ, ಜೆ.ಪಿ. ಕೂಡಲೇ ತಮ್ಮೆಲ್ಲ ಕಾರ್ಯಕ್ರಮಗಳನ್ನು ರದ್ದು ಮಾಡಬೇಕೆಂದು ಹೇಳುತ್ತಿದ್ದ ವೈದ್ಯರೇ, ಮಾರನೇ ಬೆಳಿಗ್ಗೆ ಪರೀಕ್ಷೆಯ ನಂತರ, ಈಗ ಎಲ್ಲ ಆರಾಮವಾಗಿದೆ; ಅವರು ತಮ್ಮ ಕಾರ್ಯಕ್ರಮಗಳನ್ನು ಮುಂದುವರಿಸಬಹುದು ಎಂದು ಹೇಳುತ್ತಿದ್ದುದು... ಇನ್ನೊಂದು ಆರ್.ಎಸ್.ಎಸ್. ಕುರಿತ ಜೆ.ಪಿ. ಅವರ ನಿಲುವು. ಅವರು ಎಂದೂ ಆರೆಸ್ಸೆಸಿಗರನ್ನು ಅವರ ಸಮವಸ್ತ್ರದಲ್ಲಿ ಭೇಟಿ ಮಾಡಲು ಅವಕಾಶ ನೀಡುತ್ತಿರಲಿಲ್ಲ ಹಾಗೂ ಆ ಸಂಘದ ಸ್ವಯಂಸೇವಕರು ತಮ್ಮ ಸನಿಹದಲ್ಲಿ ಕಾಣಿಸಿಕೊಂಡರೆ ಸಹಿಸುತ್ತಿರಲಿಲ್ಲ.

ಕರ್ನಾಟಕದ ಜೆ.ಪಿ. ಪ್ರವಾಸದ ಸಂದರ್ಭದಲ್ಲಿ ಈ ಮೊದಲು ಪ್ರಸ್ತಾಪಿಸಿದ ಮೂವರ ಜೊತೆಗೆ ಅವರೊಂದಿಗೆ ಗುರುತಿಸಿಕೊಂಡ ಪ್ರಮುಖರೆಂದರೆ ಶಿವರಾಮ ಕಾರಂತರು, ಕೆ.ಎಸ್.ಹೆಗಡೆ, ಎಸ್ ನಿಜಲಿಂಗಪ್ಪನವರು, ವೀರೇಂದ್ರ ಪಾಟೀಲ, ರಾಮಕೃಷ್ಣ ಹೆಗಡೆ ಹಾಗೂ ಡಾ. ಬಂದಿ ಗೌಡರು. ಇವರೆಲ್ಲರ ಜೊತೆಗೆ ರಾಜ್ಯದ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟೇತರ

ಪಕ್ಷಗಳ ವಿವಿಧ ನಾಯಕರು, ಕರ್ನಾಟಕ ಸರ್ವೋದಯ ಚಳುವಳಿಯ ಇತರ ನಾಯಕರು ಹಾಗೂ ಪ್ರೊ. ಎಂ.ಡಿ.ನಂಜುಡಸ್ವಾಮಿ ನೇತೃತ್ವದ ಸಮಾಜವಾದಿ ಯುವಜನ ಸಭಾದ ಉತ್ಸಾಹಿ ಯುವಜನರು ಕರ್ನಾಟಕದ ಜೆ.ಪಿ. ಪ್ರವಾಸದ ವ್ಯವಸ್ಥೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಬೆಂಗಳೂರು ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ನಡೆದ ಪ್ರವಾಸದ ಕೊನೆಯ ಸಾರ್ವಜನಿಕ ಸಭೆಯಲ್ಲಿ ಜೆ.ಪಿ.ಯವರಿಗೆ ಮೂರುಲಕ್ಷ ರೂಪಾಯಿಗಳ ಹಮ್ಮಿಣಿಯನ್ನು ಅರ್ಪಿಸಲಾಯಿತು. ಅದರಲ್ಲಿ ಅವರು ಒಂದು ಲಕ್ಷ ರೂಪಾಯಿಗಳನ್ನು ಕರ್ನಾಟಕದಲ್ಲಿ ಸಂಪೂರ್ಣ ಕ್ರಾಂತಿಯ ಆಂದೋಲನದ ಸಂಘಟನೆಯ ಕೆಲಸಗಳಹಾಗಿ ಹಿಂದಿರುಗಿಸಿದರು. ಇದರೊಂದಿಗೆ ಕರ್ನಾಟಕದಲ್ಲೂ ಜೆ.ಪಿ. ಅವರ ಸಂಪೂರ್ಣ ಕ್ರಾಂತಿಯ ಕಲ್ಪನೆಯನ್ನು ಹರಡುವ ನವನಿರ್ಮಾಣ ಚಳುವಳಿ ಗರಿಗೆದರಿತು.

ಅಲಹಾಬಾದ್ ಉಚ್ಚ ನ್ಯಾಯಾಲಯದ ತೀರ್ಪು

ಈ ಮಧ್ಯೆ ೧೯೭೫ರ ಜೂನ್ ೧೨ರಂದು ೧೯೭೧ರಲ್ಲಿ ಇಂದಿರಾಗಾಂಧಿಯವರು ರಾಯ್‌ಬರೇಲಿ ಲೋಕಸಭಾ ಕ್ಷೇತ್ರದಿಂದ ಗೆದ್ದಿದ್ದನ್ನು ಪ್ರಶ್ನಿಸಿ ಅವರ ವಿರುದ್ಧ ಭಾರತೀಯ ಲೋಕದಳದ ರಾಜನಾರಾಯಣರು ಅಲಹಾಬಾದ್ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿ ಕುರಿತ ತೀರ್ಪು ಹೊರಬಿತ್ತು. ಚುನಾವಣಾ ಭ್ರಷ್ಟಾಚಾರ ನಡೆದಿದೆ ಎಂಬುದಕ್ಕೆ ಆಧಾರವಿದೆ ಎಂದು ನ್ಯಾಯಾಧೀಶ ಜಗಮೋಹನ ಲಾಲ್ ಸಿನ್ಹಾ ಅವರು ತೀರ್ಪುನೀಡಿ, ಇಂದಿರಾ ಗಾಂಧಿಯವರ ಆಯ್ಕೆಯನ್ನು ಅಸಿಂಧು ಎಂದು ಘೋಷಿಸಿದರು. ಕಾಂಗ್ರೆಸ್ ಪಕ್ಷ ಹಾಗೂ ಸರ್ಕಾರ ತಬ್ಬಿಬ್ಬಾಯಿತು. ಇಂದಿರಾ ಗಾಂಧಿಯವರು ರಾಜೀನಾಮೆ ನೀಡುವರೆಂಬ ವಿರೋಧಪಕ್ಷಗಳ ನಿರೀಕ್ಷೆಗೆ ವಿರುದ್ಧವಾಗಿ ಅವರು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿ, ಲೋಕಸಭೆಯ ಕಾರ್ಯಕಲಾಪಗಳಲ್ಲಿ ಮತದಾನದ ಹಕ್ಕಿಲ್ಲದ ಸದಸ್ಯರಾಗಿ ಹಾಗೂ ಆ ಮೂಲಕ ಪ್ರಧಾನಮಂತ್ರಿಯಾಗಿಯೂ ಮುಂದುವರಿಯಲು ತಾತ್ಕಾಲಿಕ ಅನುಮತಿ ಪಡೆದುಕೊಂಡರು.

ಬಂಡಾಯಕ್ಕೆ ಕರೆ-ಆ ಕರಾಳ ರಾತ್ರಿ

ಇದು ವಿರೋಧಪಕ್ಷಗಳ ಕಣ್ಣಿಗೆ ಅನೈತಿಕವೂ ಪ್ರಜಾಸತ್ತೆಯ ಹೃದಯಕ್ಕೆ ಘಾತ ಉಂಟುಮಾಡುವ ಕ್ರಮವಾಗಿಯು ಕಂಡಿತು. ಅವು ಇಂದಿರಾ ಗಾಂಧಿಯವರ ರಾಜೀನಾಮೆ ಒತ್ತಾಯಿಸಿ ರಾಷ್ಟ್ರಾದ್ಯಂತ ಚಳುವಳಿ ನಡೆಸುವ ಸಿದ್ಧತೆ ನಡೆಸಿದವು. ಜೂನ್ ೨೫ರಂದು ಈ ಸಂಬಂಧ ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಭೆ ನಡೆಸುವ ಯೋಜನೆ ಹಾಕಿ, ಜೆ.ಪಿ.ಯವರನ್ನು ಈ ಸಭೆಗೆ ಆಹ್ವಾನಿಸಿದವು. ಸುಮಾರು ಹತ್ತು ಲಕ್ಷ ಜನ ಸೇರಿದ್ದ ಆ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಜೆ.ಪಿ., ಇಂದಿರಾ ಅವರ ರಾಜೀನಾಮೆಯನ್ನು ನೈತಿಕ ನೆಲೆಯಲ್ಲಿ ಒತ್ತಾಯಿಸಿದರಲ್ಲದೆ, ಕಾಂಗ್ರೆಸ್‌ನೊಳಗಿನ ಪ್ರಜಾಸತ್ತಾತ್ಮಕ

ಶಕ್ತಿಗಳು ನಾಯಕತ್ವದ ವಿರುದ್ಧ ಬಂಡೇಳುವಂತೆ ಕರೆಕೊಟ್ಟರು. ಕೇಂದ್ರ ಸರ್ಕಾರವನ್ನು ಒಂದು ಅನೈತಿಕ ಸರ್ಕಾರ ಎಂದು ಬಣ್ಣಿಸಿದ ಅವರು, ಇಂತಹ ಸರ್ಕಾರದ ಕಾನೂನುಬಾಹಿರ ಆದೇಶಗಳನ್ನು ಮಾನ್ಯ ಮಾಡದಂತೆ ಸರ್ಕಾರಿ ನೌಕರರಿಗೆ, ಪೊಲೀಸರಿಗೆ, ಸೇನೆಗೆ ಕರೆಕೊಟ್ಟರು. ಇಡೀ ದೇಶದ ಆಡಳಿತವನ್ನು ಸ್ಥಗಿತಗೊಳಿಸುವ ಮೂಲಕ ಭ್ರಷ್ಟ ಸರ್ಕಾರವನ್ನು ಕೊನೆಗಾಣಿಸಬೇಕೆಂದು ದೇಶದ ಇಡೀ ಜನತೆಯನ್ನು ಒತ್ತಾಯಿಸಿದರು. ಸಭೆ, ಮಾರನೆಯ ದಿನದಿಂದ ಪ್ರಧಾನಿಯ ರಾಜೀನಾಮೆಯನ್ನು ಆಗ್ರಹಿಸಿ ಅವರ ನಿವಾಸಕ್ಕೆ ಮುತ್ತಿಗೆ ಹಾಕುವ ನಿರ್ಧಾರ ಕೈಗೊಂಡಿತು. ಸಂಜೆಯ ಹೊತ್ತಿಗೆ ವಿಜಯ ಘೋಷದೊಂದಿಗೆ ಬೃಹತ್ ಸಭೆ ಚದುರಿಹೋಯಿತು.

ಅಂದು ಮಧ್ಯರಾತ್ರಿಯೇ ಗಾಂಧಿ ಶಾಂತಿ ಪ್ರತಿಷ್ಠಾನ ಕಟ್ಟಡದ ಕೋಣೆಯೊಂದರಲ್ಲಿ ವಿಶ್ರಮಿಸುತ್ತಿದ್ದ ಜಯಪ್ರಕಾಶರನ್ನು ಆಂತರಿಕ ಭದ್ರತಾ ಸಂರಕ್ಷಣಾ ಕಾಯಿದೆಯಡಿ ಬಂಧಿಸಲಾಯಿತು. ಬೆಳಗಿನ ಜಾವದ ಹೊತ್ತಿಗೆ ಅವರನ್ನು ಪಾರ್ಲಿಮೆಂಟ್ ವೀಧಿಯ ಪೊಲೀಸ್ ಠಾಣೆಯಲ್ಲಿ ಹಾಜರು ಪಡಿಸಿ ನಂತರ ಹರ್‍ಯಾಣದ ಸೊಹನಾ ಎಂಬಲ್ಲಿನ ಅತಿಥಿ ಗೃಹವೊಂದರಲ್ಲಿ ಗೃಹ ಬಂಧನದಲ್ಲಿರಿಸಲಾಯಿತು.

ಇವರ ಜೊತೆಗೆ ಜೆ.ಪಿ. ಚಳುವಳಿಯಲ್ಲಿ ಭಾಗವಹಿಸಿದ ವಿರೋಧಪಕ್ಷಗಳ ಎಲ್ಲ ನಾಯಕರನ್ನೂ, ಸರ್ವೋದಯ ಮುಖಂಡರನ್ನೂ, ಕಾಂಗ್ರೆಸ್‌ನೊಳಗಿನ ಜೆ.ಪಿ. ಅಭಿಮಾನಿ ಬಳಗವನ್ನೂ ಬಂಧಿಸಿ ಸೆರೆಮನೆಗೆ ದೂಡಲಾಯಿತು. ಮಾರನೆಯ ದಿನದ ಹೊತ್ತಿಗೆ 'ಪೊಲೀಸು, ಸೇನೆಗೆ ಆದೇಶ ಪಾಲಿಸದಂತೆ ಕರೆಕೊಡುವ ಮೂಲಕ ದೇಶದಲ್ಲಿ ನಾಗರಿಕ ಅಶಾಂತಿ ಉಂಟುಮಾಡುವ ಕೆಲವು ನಾಯಕರ ಹುನ್ನಾರದಿಂದ ದೇಶವನ್ನು ರಕ್ಷಿಸಲು' ಪ್ರಧಾನಿ ಇಂದಿರಾಗಾಂಧಿಯವರ ತುರ್ತುಪರಿಸ್ಥಿತಿ ಘೋಷಿಸಿ ಇಡೀ ರಾಷ್ಟ್ರದ ಬಾಯಿ ಕಟ್ಟಿದ್ದರು.

ತುರ್ತು ಪರಿಸ್ಥಿತಿ ಘೋಷಣೆ–ಸ್ಥಗಿತಗೊಂಡ ಪ್ರಜಾಪ್ರಭುತ್ವ

ಜೂನ್ ೨೫ರ ಮಧ್ಯರಾತ್ರಿಯ ಹೊತ್ತಿಗೆ ವಿರೋಧಪಕ್ಷಗಳ ಸರಿಸುಮಾರು ಎಲ್ಲ ನಾಯಕರನ್ನೂ—ರಾಷ್ಟ್ರದ ರಾಜಧಾನಿಯಲ್ಲಲ್ಲದೆ ಇತರ ರಾಜ್ಯಗಳ ಬೇರೆ ಬೇರೆ ಸ್ಥಳಗಳಲ್ಲೂ—ಮತ್ತು ಜೆ.ಪಿ. ಚಳುವಳಿಗೆ ಬೆಂಬಲ ನೀಡುತ್ತಿದ್ದ ಸರ್ವಸೇವಾಸಂಘ, ರಾಷ್ಟ್ರೀಯ ಸ್ವಯಂಸೇವಕ ಸಂಘ ಇತ್ಯಾದಿ ಸಂಘಸಂಸ್ಥೆಗಳ ಪ್ರಮುಖರನ್ನು ಬಂಧಿಸಿ ಸೆರೆಮನೆಗೆ ದೂಡುವಲ್ಲಿ ಇಂದಿರಾಗಾಂಧಿಯವರು ಯಶಸ್ವಿಯಾಗಿದ್ದರು. ಅವರು ೨೬ರ ನಸುಕಿನಲ್ಲಿಯೇ ತಮ್ಮ ಸಚಿವಸಂಪುಟದ ಸಭೆ ಕರೆದು, ಸಂವಿಧಾನದ ೩೫೨ನೇ ವಿಧಿಯ ಕಲಮು(೧)ರ ಅಡಿಯಲ್ಲಿ 'ಆಂತರಿಕ ಗಲಭೆಗಳಿಂದ ಭಾರತದ ಸುಭದ್ರತೆಗೆ ಬೆದರಿಕೆ ಉಂಟಾಗಿರುವ ಗಂಭೀರ ಪರಿಸ್ಥಿತಿಯ ಕಾರಣ' ಜೂನ್ ೨೫ರಿಂದಲೇ ಜಾರಿಗೆ ಬರುವಂತೆ ಆಂತರಿಕ ತುರ್ತುಪರಿಸ್ಥಿತಿ ಘೋಷಣೆಗೆ ಒಪ್ಪಿಗೆ ಪಡೆದರು. ತಕ್ಷಣವೇ ಸಂಬಂಧಪಟ್ಟ ಪ್ರಕಟಣೆಯನ್ನು ರಾಷ್ಟ್ರಪತಿಭವನಕ್ಕೆ ಕಳಿಸಿ, ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್

ಅವರಿಂದ ಅದಕ್ಕೆ ಸಹಿ ಪಡೆಯಲಾಯಿತು. ಅಂದೇ ರಾಷ್ಟ್ರಪತಿಯವರು ಮತ್ತೊಂದು ವಿಶೇಷಾಜ್ಞೆ ಹೊರಡಿಸಿ ಸಂವಿಧಾನದತ್ತವಾಗಿದ್ದ ಮೂಲಭೂತ ಹಕ್ಕುಗಳನ್ನು—ಅವುಗಳ ಜಾರಿಗಾಗಿ ನ್ಯಾಯಾಲಯಗಳಿಗೆ ಮೊರೆ ಹೋಗುವುದನ್ನೂ ನಿಷೇಧಿಸಿ—ಸ್ಥಗಿತಗೊಳಿಸಿದರು. ಈ ಕಾರ್ಯಾಚರಣೆ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿ ಪ್ರಭುತ್ವಕ್ಕೆ ಅಸಾಮಾನ್ಯ ಅಧಿಕಾರ ನೀಡುವ ಮೂಲಕ ಪ್ರಜಾಪ್ರಭುತ್ವದ ತತ್ವವನ್ನೇ ಹತ್ತಿಕ್ಕುವ ಆಶಯ ಹೊಂದಿತ್ತು. ಇದಕ್ಕೆ ತಾಸೊಂದರಲ್ಲೇ ಸಚಿವ ಸಂಪುಟ ಹಾಗೂ ರಾಷ್ಟ್ರಪತಿಯವರ ಒಪ್ಪಿಗೆ ದೊರೆತದ್ದು, ಆ ಸಮಯದಲ್ಲಿ ನಮ್ಮ ರಾಷ್ಟ್ರದ ಪ್ರಜಾಪ್ರಭುತ್ವ ಯಾವ ಸ್ಥಿತಿಯನ್ನು ಮುಟ್ಟಿತ್ತು ಎಂಬುದರ ದ್ಯೋತಕವಾಗಿತ್ತು.

ರಾಷ್ಟ್ರಾದ್ಯಂತ ಎಲ್ಲ ಪ್ರಮುಖ ವಾರ್ತಾಪತ್ರಿಕೆಗಳ ಕಛೇರಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಳ್ಳುವಂತೆ ನೋಡಿಕೊಳ್ಳಲಾಯಿತಾದ್ದರಿಂದ, ೨೬ರ ಬೆಳಿಗ್ಗೆ ಯಾವ ಪ್ರಮುಖ ವಾರ್ತಾಪತ್ರಿಕೆಗಳೂ ಹೊರಬರಲಿಲ್ಲ. ಆಕಾಶವಾಣಿಯ ದಿನದಾರಂಭದ ವಾರ್ತಾ ಸಂಗ್ರಹಗಳಲ್ಲೂ ವಿಶೇಷ ಸುದ್ದಿಯೇನೂ ಇರಲಿಲ್ಲ. ಆದರೆ ಬಿ.ಬಿ.ಸಿ. ೨೫ರ ಮಧ್ಯರಾತ್ರಿಯಿಂದಲೇ ಜೆ.ಪಿ., ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಅಡ್ವಾನಿ, ಮಧುದಂಡವತೆ ಮುಂತಾದ ನಾಯಕರ ಬಂಧನಗಳ ಸುದ್ದಿಯನ್ನು ಬಿತ್ತಲಾರಂಭಿಸಿದುದರಿಂದ, ರಾಷ್ಟ್ರಾದ್ಯಂತ ವದಂತಿಗಳನ್ನಾಧರಿಸಿದ ಬಿಗುವು ಆತಂಕಗಳ ವಾತಾವರಣ ಸೃಷ್ಟಿಯಾಗಿತ್ತು. ಬೆಳಿಗ್ಗೆ ೮ ಗಂಟೆ ಹೊತ್ತಿಗೆ ಪ್ರಧಾನಿಯವರೇ ಆಕಾಶವಾಣಿ ಮೂಲಕ ವಿಶೇಷ ಪ್ರಸಾರ ಭಾಷಣ ಮಾಡಿದರು ಜೆ.ಪಿ. ನೇತೃತ್ವದಲ್ಲಿ ವಿರೋಧಪಕ್ಷಗಳು ಸರ್ಕಾರವನ್ನೇ ಬುಡಮೇಲುಗೊಳಿಸುವ ಅರಾಜಕ ಪರಿಸ್ಥಿತಿಯನ್ನು ಉಂಟುಮಾಡುವ ಕಾರ್ಯಕ್ರಮವನ್ನು ಘೋಷಿಸಿ ರಾಷ್ಟ್ರವ್ಯವಸ್ಥೆಗೆ ಗಂಡಾಂತರ ತಂದೊಡ್ಡಿದ್ದವು. ಈ ಹಿನ್ನೆಲೆಯಲ್ಲಿ ಸಂವಿಧಾನದತ್ತ ವಿಶೇಷಾಧಿಕಾರ ಬಳಸಿ ಪರಿಸ್ಥಿತಿಯನ್ನು ತಹಬಂದಿಗೆ ತರಲು ಆಂತರಿಕ ತುರ್ತುಪರಿಸ್ಥಿತಿಯನ್ನು ಘೋಷಿಸುವ ವಿಷಾದದ ಆದರೆ ಅನಿವಾರ್ಯವಾದ ತೀರ್ಮಾನ ತೆಗೆದುಕೊಳ್ಳಬೇಕಾಯಿತೆಂದು ಅವರು ವಿವರಿಸಿದರು.

ಪತ್ರಿಕಾ ಸೆನ್ಸಾರ್‌ಷಿಪ್ ಉಂಟುಮಾಡಿದ ವದಂತಿಗಳು

ತುರ್ತುಪರಿಸ್ಥಿತಿಯ ವಿಶೇಷಾಧಿಕಾರಗಳಲ್ಲಿ ಪತ್ರಿಕಾ ಸೆನ್ಸಾರ್‌ಷಿಪ್ ಕೂಡಾ ಸೇರಿದ್ದುದರಿಂದ ಮಾರನೆಯ ದಿನ ಪ್ರಕಟವಾದ ಪತ್ರಿಕೆಗಳಲ್ಲೂ ನಾಯಕರ ಬಂಧನದ ವಿವರಗಳು ಪ್ರಕಟವಾಗಲಿಲ್ಲ. ಕೆಲವು ಪತ್ರಿಕೆಗಳು ತಮ್ಮ ಸಂಪಾದಕೀಯ ಜಾಗವನ್ನು ಖಾಲಿಬಿಟ್ಟು ಪತ್ರಿಕಾ ಸೆನ್ಸಾರ್‌ಷಿಪ್ ಅಧಿಕಾರವನ್ನು ಪ್ರತಿಭಟಿಸಿದ್ದವು. ಇದರಿಂದಾಗಿ ಜೆ.ಪಿ.ಯವರ ಬಂಧನ, ಅವರ ಉಪವಾಸ, ಅವರಿಗೆ ಬಲವಂತವಾಗಿ ಆಹಾರ ಕೊಡಲು ಮಾಡಿದ ಪ್ರಯತ್ನ, ಅವರ ಅನಾರೋಗ್ಯ, ಸಾವು—ಹೀಗೆ ಅನೇಕಾನೇಕ ವದಂತಿಗಳು ಹಬ್ಬಲಾರಂಭಿಸಿದವು. ಆದರೆ ತುರ್ತುಪರಿಸ್ಥಿತಿಯ ಕಾನೂನುಗಳು ಜನರನ್ನು ಕಾರಣ ನೀಡುವ ಅಗತ್ಯವಿಲ್ಲದೆ ಬಂಧಿಸುವ ಮತ್ತು ಅವರ ಜೀವದ ಹಕ್ಕನ್ನು ಕೂಡಾ ತಾತ್ಕಾಲಿಕವಾಗಿ ಸ್ಥಗಿತಗೊಳಿಸುವ ಅಧಿಕಾರವನ್ನು ಸರ್ಕಾರಕ್ಕೆ ಕೊಟ್ಟಿದ್ದುದರ ಕಾರಣದಿಂದಾಗಿ ಸಾಮಾನ್ಯ ಜನತೆ ದಿಕ್ಕುಗಾಣದೆ ನಿಸ್ಸಹಾಯಕವಾಗಿತ್ತು. ಬಂಧನಕ್ಕೊಳಗಾಗಿದ್ದ ಜೆ.ಪಿ. ಅಭಿಮಾನಿಗಳಲ್ಲಿ ಕೆಲವರು—ಮೀನೂ ಮಸಾನಿ, ತಾರ್ಕುಂಡೆ, ಶಾಂತಿಭೂಷಣ್, ಎ.ಜಿ. ನೂರಾಣಿ, ಸೋಲಿ ಸೊರಾಬ್ಜಿ

ಮುಂತಾದ ಕಾನೂನುತಜ್ಞರು—ದೆಹಲಿ ಉಚ್ಚ ನ್ಯಾಯಾಲಯದಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಹಾಕಲು ಆಲೋಚಿಸಿದರು. ಅದಕ್ಕೆ ಮುನ್ನ ಅವರು ಪ್ರಧಾನಿಯವರಿಗೆ, ಜೆ.ಪಿ.ಯವರ ಆರೋಗ್ಯದ ಬಗ್ಗೆ ಆತಂಕಕಾರಿ ವದಂತಿಗಳು ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಅವರ ಆರೋಗ್ಯದ ಬಗ್ಗೆ ವೈದ್ಯರ ಅಧಿಕೃತ ಹೇಳಿಕೆಗಳನ್ನು ಆಕಾಶವಾಣಿ ಮತ್ತು ಪತ್ರಿಕೆಗಳ ಮೂಲಕ ಪ್ರಕಟಿಸಬೇಕೆಂದು ಒತ್ತಾಯಿಸಿ ತಂತಿ ಕಳಿಸಿದರು. ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಸರ್ಕಾರ ಜುಲೈ ಮೊದಲ ವಾರದ ಹೊತ್ತಿಗೆ 'ಜೆ.ಪಿ. ಅವರು ತಮ್ಮ ಅನಾರೋಗ್ಯಕ್ಕಾಗಿ ದೆಹಲಿಯ ಅಖಿಲಭಾರತ ವೈದ್ಯಕೀಯ ಸಂಸ್ಥೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ, ಈಗ ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ಸಂಸ್ಥೆಗೆ ವರ್ಗಾಯಿಸಲ್ಪಟ್ಟಿದ್ದಾರೆ' ಎಂಬ ಅಧಿಕೃತ ಪ್ರಕಟಣೆ ಹೊರಡಿಸಿತು.

ಸೆರೆಮನೆಯ ದಿನಚರಿ

೧೯೭೫ರ ನವೆಂಬರ್‌ನಲ್ಲಿ ಬಿಡುಗಡೆಯಾಗುವವರೆಗೂ, ಆ ಸಂಸ್ಥೆಯ ಒಂದು ಕೊಠಡಿಯಲ್ಲೇ ಏಕಾಂಗಿಯಾಗಿ ಬಂಧನದಲ್ಲಿರಬೇಕಾಗಿ ಬಂದ ಜೆ.ಪಿ.ಯವರಿಗೆ, ಕೆಲವು ದಿನಗಳ ನಂತರ ಬಂಧುಗಳನ್ನೂ ಮಿತ್ರರನ್ನೂ ಭೇಟಿ ಮಾಡಲು ಸೀಮಿತ ಅನುಮತಿ ನೀಡಲಾಯಿತು. ಆದರೆ ಅವರೊಂದಿಗೆ ಮಾತುಕತೆ ಪೊಲೀಸು ಪಹರೆಯಲ್ಲೇ ನಡೆಯಬೇಕಾಗಿತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಜೆ.ಪಿ. ಹಲವಾರು ಬಾರಿ ಸೆರೆಮನೆ ಸೇರಿ ಬ್ರಿಟಿಷ್ ಆಳ್ವಿಕೆಯಲ್ಲಿ ಚಿತ್ರಹಿಂಸೆ ಅನುಭವಿಸಿದ್ದರು. ಆದರೆ ಅವರೀಗ ಸ್ವತಂತ್ರ ಭಾರತದಲ್ಲಿ ಬಂಧಿತರಾಗಿ ತಮ್ಮದೇ ಸರ್ಕಾರದ ಪಹರೆಯ ನಿಗಾಕ್ಕೆ ಒಳಗಾಗಿದ್ದರು. ದಿನೇ ದಿನೇ ಈ ಏಕಾಂತ ಸೆರೆವಾಸ ಜೆ.ಪಿ.ಗೆ ಜಿಗುಪ್ಸೆ ತಂದಿತು. ಬ್ರಿಟಿಷ್ ಆಳ್ವಿಕೆ ಕೂಡಾ, ಸೆರೆಯಾಳುಗಳನ್ನು ಇನ್ನಷ್ಟು ಉದಾರವಾಗಿ ನಡೆಸಿಕೊಳ್ಳುತ್ತಿತ್ತು ಎಂದು ಹೇಳಿ ತಮಗೆ ಮನುಷ್ಯ ಸಹವಾಸವಿರುವಂತಹ ಮುಕ್ತ ವಾತಾವರಣ ಕಲ್ಪಿಸಬೇಕೆಂದು ತಮ್ಮ ಕಾನೂನು ತಜ್ಞಗೆಳೆಯರ ಮೂಲಕ ಅರ್ಜಿ ಸಲ್ಲಿಸಿದರು. ಆದರೆ ದೆಹಲಿ ಉಚ್ಚ ನ್ಯಾಯಾಲಯ, ಜೆ.ಪಿ. ಅವರು ಸೆರೆಮನೆಯಲ್ಲಿರದೆ ವೈದ್ಯಕೀಯ ಸಂಸ್ಥೆಯಲ್ಲಿ ಬಂಧಿತರಾಗಿರುವುದರಿಂದ, ಅವರ ಮನವಿಯನ್ನು ಪರಿಗಣಿಸಲಾಗುವುದಿಲ್ಲ ಎಂದು ತೀರ್ಪು ನೀಡಿತು! ಜೆ.ಪಿ. ಇಂತಹ ಅನಿವಾರ್ಯ ಏಕಾಂತವಾಸದ ಸಮಯದಲ್ಲಿ ತಮ್ಮನ್ನು ತಾವು ಸ್ಥಿಮಿತದಲ್ಲಿಟ್ಟುಕೊಳ್ಳಲು ದಿನಚರಿ ಬರೆಯಲಾರಂಭಿಸಿದರು. ಇದೇ ಮುಂದೆ ಸಂಕಲಿತವಾಗಿ 'ಜೆ.ಪಿ. ಸೆರೆಮನೆ ದಿನಚರಿ' ಎಂದು ಪ್ರಸಿದ್ಧವಾಯಿತು.

ಇದರಲ್ಲಿ ಜೆ.ಪಿ.ಯವರು ತಮ್ಮ ಸೆರೆಮನೆ ವಾಸದಾದ್ಯಂತ ಮಾಡಿದ ಬಂಧುಮಿತ್ರರ ಭೇಟಿಯ ವಿವರಗಳನ್ನು, ತಮಗೆ ದೊರೆಯುತ್ತಿದ್ದ ಏಕೈಕ ದಿನಪತ್ರಿಕೆ 'ಟ್ರಿಬ್ಯೂನ್' ಮೂಲಕ ಗೊತ್ತಾಗುತ್ತಿದ್ದ ರಾಷ್ಟ್ರೀಯ-ಅಂತಾರಾಷ್ಟ್ರೀಯ ವಿದ್ಯಮಾನಗಳ ಕುರಿತ ತಮ್ಮ ಟೀಕೆ-ವ್ಯಾಖ್ಯಾನಗಳನ್ನು, ತಮ್ಮ ಬಂಧನಕ್ಕೆ ಮುನ್ನ ಉಂಟಾದ ಪರಿಸ್ಥಿತಿ ಕುರಿತ ತಮ್ಮ ಹಿನ್ನೋಟಗಳನ್ನು, ತಮ್ಮ ಸಂಪೂರ್ಣ ಕ್ರಾಂತಿ ಕುರಿತು ಟಿಪ್ಪಣಿಗಳನ್ನೂ, ತಮ್ಮ ಅನಾರೋಗ್ಯದ ಸೂಚನೆಗಳನ್ನೂ ದಾಖಲಿಸಿದ್ದಾರೆ. ಜುಲೈ ೨೧ರಂದು "ನನ್ನ ಜಗತ್ತು ನನ್ನ ಸುತ್ತ ಛಿದ್ರ ಛಿದ್ರವಾಗಿ ಬಿದ್ದಿದೆ.

ಇವನ್ನೆಲ್ಲಾ ಮತ್ತೆ ಒಂದುಗೂಡಿಸಲಾಗುವುದನ್ನು ನನ್ನ ಜೀವಿತಕಾಲದಲ್ಲಿ ನಾನು ಕಾಣಲಾರೆ ಎಂದೆನಿಸುತ್ತಿದೆ. ಬಹುಶಃ ನನ್ನ ಎಳೆಯ ಬಂಧುಗಳು ಇದನ್ನು ಕಾಣಬಹುದೇನೋ...." ಎಂದು ಆರಂಭವಾಗುವ ಈ ದಿನಚರಿ; ತಮ್ಮಿಂದಾಗಿ ರಾಷ್ಟ್ರಾದ್ಯಂತ ಸಾವಿರಾರು ಜನ ಬಂಧನ ಮತ್ತು ಚಿತ್ರಹಿಂಸೆಗೆ ಒಳಗಾಗಬೇಕಾದುದರ ಬಗೆಗೆ ದುಃಖಿಸುತ್ತಾ, ಇದರಲ್ಲಿ ತಪ್ಪೇನಾದರೂ ಇದೆಯಾ ಎಂದು ಆತ್ಮಾವಲೋಕನ ಮಾಡಿಕೊಂಡು ತಮ್ಮ ಗುರಿ ಮತ್ತು ಮಾರ್ಗದ ಬಗ್ಗೆ ನಂಬಿಕೆಯನ್ನು ಸಂಘಟಿಸಿಕೊಂಡಿರುವುದರ ದಾಖಲೆಯೂ ಆಗಿದೆ. ಈ ದಿನಚರಿಯಲ್ಲಿ ಅನುಬಂಧವಾಗಿ ಪ್ರಕಟವಾಗಿರುವ, ದಿನಚರಿ ಬರವಣಿಗೆಗೆ ನಾಂದಿ ಹಾಡಿದಂತಿರುವ, ಅವರು ಜುಲೈ ೨೧ರಂದು ಪ್ರಧಾನಿಗೆ ಬರೆದಿರುವ ಪತ್ರವು ಜೆ.ಪಿ. ಅವರ ಅಂದಿನ ಮಾನಸಿಕ ಸ್ಥಿತಿ, ನಿಲುವು ಹಾಗೂ ನಂಬಿಕೆಗಳಿಗೆ ಸಾಕ್ಷಿಯಂತಿದೆ*

ಸಾಮಾಜಿಕ ಪ್ರಜಾಪ್ರಭುತ್ವಕ್ಕೆ ಸಜ್ಜು

ಜೆ.ಪಿ. ಹಾಗೂ ವಿರೋಧಪಕ್ಷಗಳ ನಾಯಕರು ಸೆರೆಮನೆಯಲ್ಲಿರುವಾಗಲೇ ಪ್ರಧಾನಿಯವರು ಸಂಸತ್ ಅಧಿವೇಶನಗಳನ್ನು ನಡೆಸಿ ಸಂವಿಧಾನದ ಮೂಲಭೂತ ಸ್ವರೂಪಕ್ಕೇ ಧಕ್ಕೆ ತರುವಂತಹ ತಿದ್ದುಪಡಿಗಳಿಗೆ ಅನುಮೋದನೆ ಪಡೆದುಕೊಂಡರು. ೧೯೭೬ರ ಡಿಸೆಂಬರ್‌ನಲ್ಲಿ ಜಾರಿಯಾದ ಸಂವಿಧಾನದ ೪೨ನೇ ತಿದ್ದುಪಡಿಯು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ನಡುವಣ ಸಮತೋಲನಕ್ಕೇ ಧಕ್ಕೆ ತಂದು, ಶಾಸಕಾಂಗ ಹಾಗೂ ನ್ಯಾಯಾಂಗಗಳನ್ನು ಕಾರ್ಯಾಂಗದ ಅಧೀನಕ್ಕೆ ಒಳಪಡಿಸುವ ಅಪಾಯಗಳನ್ನು ಒಳಗೊಂಡಿತ್ತು. ಇದರಡಿಯಲ್ಲಿ ಸಂಸದೀಯ ಪ್ರಜಾಪ್ರಭುತ್ವದ ಮೂಲಾಧಾರವಾದ ಜನತಾ ಪ್ರಾತಿನಿಧ್ಯ ಕಾಯಿದೆಯನ್ನು ವ್ಯಾಪಕವಾಗಿ ತಿದ್ದಲಾಗಿತ್ತು. ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನಮಂತ್ರಿ ಹಾಗೂ ಲೋಕಸಭಾಧ್ಯಕ್ಷರಿಗೆ ಸಂಬಂಧಿಸಿದ ಚುನಾವಣೆಗಳನ್ನು ನ್ಯಾಯಾಂಗದ ಪರಮಾರ್ಶೆಯ ವ್ಯಾಪ್ತಿಯಿಂದ ಮುಕ್ತಗೊಳಿಸಲಾಗಿತ್ತು. ಈ ಕ್ರಮಗಳೆಲ್ಲವೂ ದೇಶವನ್ನು ಇಂದಿರಾಗಾಂಧಿ ಕೆಲವು ವರ್ಷಗಳಿಂದ ಪ್ರತಿಪಾದಿಸುತ್ತಿದ್ದ ಸೋವಿಯತ್ ಒಕ್ಕೂಟದ ಆಶ್ರಯದಲ್ಲಿನ ಪೂರ್ವ ಈರೋಪ್‌ದೇಶಗಳು ಅಳವಡಿಸಿಕೊಂಡಿದ್ದ ಸಾಮಾಜಿಕ ಪ್ರಜಾಪ್ರಭುತ್ವ ವ್ಯವಸ್ಥೆಯೆಡೆಗೆ ಒಯ್ಯುವ ಸೂಚನೆಗಳನ್ನು ನೀಡಿದವು. ಇವರ ಜೊತೆಗೆ ವಿಶೇಷಾಜ್ಞೆಗಳ ಮೂಲಕ ಕಾರ್ಮಿಕ ಸಂಘಗಳ ಮುಷ್ಕರದ ಹಕ್ಕುಗಳನ್ನು ಸ್ಥಗಿತಗೊಳಿಸಲಾಯಿತು; ಸಂಸತ್ತಿನ ಕಾರ್ಯಕಲಾಪಗಳ ವರದಿಗಳ ಮೇಲೆ ನಿರ್ಬಂಧಗಳನ್ನು ಹೇರಲಾಯಿತು. ೧೯೬೫ರ ಪತ್ರಿಕಾಮಂಡಳಿ ಕಾಯಿದೆಯನ್ನು ರದ್ದುಗೊಳಿಸಲಾಯಿತು. ಆರ್.ಎಸ್.ಎಸ್., ಜಮಾತ್-ಎ-ಇಸ್ಲಾಮಿ, ಆನಂದಮಾರ್ಗ ಮುಂತಾದ ೨೬ ಸಂಸ್ಥೆಗಳ ಮೇಲೆ ನಿಷೇಧಹೇರಲಾಯಿತು. ಇವೆಲ್ಲಕ್ಕಿಂತ ಕಿರೀಟವಿಟ್ಟಂತೆ ಸಂಸತ್ತಿನಲ್ಲಿ 'ತುರ್ತುಪರಿಸ್ಥಿತಿ ಏಕೆ?' ಎಂಬ ಶ್ವೇತಪತ್ರವನ್ನು ಮಂಡಿಸಿ ಈ ಎಲ್ಲ ಕ್ರಮಗಳನ್ನು ಸಾಮಾಜಿಕ ಹಿತ, ಶಾಂತಿ ಹಾಗೂ ಸುವ್ಯವಸ್ಥೆ ಹಾಗೂ ಸಾರ್ವಜನಿಕ ಒಳಿತಿಗಾಗಿ... ಪ್ರಜಾಪ್ರಭುತ್ವವನ್ನು ವಿರೋಧಿ ಪಕ್ಷಗಳ ನಾಯಕರ ಅರಾಜಕ ಚಟುವಟಿಕೆಗಳಿಂದ ಹಾಳಾಗದಂತೆ ರಕ್ಷಿಸಲು ತೆಗೆದುಕೊಳ್ಳಲಾಗಿದೆ ಎಂದು ಸಮರ್ಥಿಸಲಾಯಿತು.

---

* ಅನುಬಂಧ - ೨ ನೋಡಿರಿ

ವಿನೋಬಾರ 'ಅನುಶಾಸನ ಪರ್ವ'

ಇದೆಲ್ಲದಕ್ಕೂ—ಲೋಕಸಭೆಯ ಅವಧಿಯನ್ನು ಅನಿರ್ದಿಷ್ಟ ಕಾಲದವರೆಗೆ ವಿಸ್ತರಿಸಿ ಚುನಾವಣೆಗಳನ್ನು ಮುಂದೂಡುವ, ಯಾವುದೇ ಪ್ರಜೆಯನ್ನು ಯಾವುದೇ ನಿರ್ದಿಷ್ಟದೂರಿನ ದಾಖಲೆಯಿಲ್ಲದ ವಿಚಾರಣೆಯ ಅಗತ್ಯವಿಲ್ಲದೆ ಅನಿರ್ದಿಷ್ಟಕಾಲ ಬಂಧನದಲ್ಲಿಡಬಹುದಾದ ಕಾನೂನು ತಿದ್ದುಪಡಿಗಳಿಗೂ—ಸಂಸತ್ತಿನ ಸುಲಭ ಒಪ್ಪಿಗೆ ಸಿಕ್ಕಿತೆಂದರೆ, ಅಂದಿನ ಸಂಸತ್ತು ಯಾವ ಸ್ಥಿತಿಯಲ್ಲಿತ್ತು ಮತ್ತು ಅಧಿಕಾರದಲ್ಲಿದ್ದ ರಾಜಕಾರಣಿಗಳು, ಅಧಿಕಾರಿಗಳು ಹಾಗೂ ಸಂವೈಧಾನಿಕ ಮುಖ್ಯಸ್ಥರು ಎಷ್ಟು ದುರ್ಬಲರಾಗಿಹೋಗಿದ್ದರು ಎಂಬುದು ಗೊತ್ತಾಗುತ್ತದೆ. ಇದರಿಂದ ಆತಂಕಗೊಂಡ ಕೆಲವು ಗಣ್ಯರು—ಜೆ.ಪಿ.ಯವರ ಆರೋಗ್ಯದ ಬಗ್ಗೆ ಆರಂಭದಲ್ಲಿ ಆತಂಕಗೊಂಡಿದ್ದವರು— ಇಂದಿರಾ ಮತ್ತು ಜೆ.ಪಿ. ನಡುವೆ ಮತ್ತೆ ಒಪ್ಪಂದ ಏರ್ಪಡಿಸಲು; ಬೇಗನೆ ಚುನಾವಣೆಗಳನ್ನು ಘೋಷಿಸಿ ದೇಶ ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯನ್ನು ಕೊನೆಗಾಣಿಸುವಂತೆ ಇಂದಿರಾ ಅವರ ಮನವೊಲಿಸಲು ಪ್ರಯತ್ನಪಟ್ಟರಾದರೂ, ಅವರ ಪ್ರಯತ್ನ ಸಫಲವಾಗಲಿಲ್ಲ. ಶಿಕ್ಷೆಯ ಭಯ ಹುಟ್ಟಿಸುವ ವಿಶೇಷಾಜ್ಞೆಗಳ ಮೂಲಕ ಸರ್ಕಾರೀ ಯಂತ್ರವನ್ನು ಚುರುಕುಗೊಳಿಸಿ ಸರ್ಕಾರಿ ವಲಯದ ಕಛೇರಿಗಳನ್ನು, ಕಾರ್ಖಾನೆಗಳನ್ನು ಕಟ್ಟುನಿಟ್ಟಿನ ಶಿಸ್ತಿಗೆ ಒಳಪಡಿಸಲಾಯಿತು. ಇದನ್ನು ಗಮನಿಸಿ ಆಚಾರ್ಯ ವಿನೋಬಾ ತುರ್ತುಪರಿಸ್ಥಿತಿ ಸಂದರ್ಭವನ್ನು 'ಅನುಶಾಸನ ಪರ್ವ' ಎಂದು ಬಣ್ಣಿಸಿದರು. ಇದರ ಜೊತೆಗೆ ತಮ್ಮ ೨೦ ಅಂಶಗಳ ಹಾಗೂ ತಮ್ಮ ಮಗ ಸಂಜಯ ಗಾಂಧಿಯ ೧೦ ಅಂಶಗಳ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳ ಅನುಷ್ಠಾನದ ಮೂಲಕ, ಪರಿಸ್ಥಿತಿಯನ್ನು 'ತಹಬಂದಿ'ಗೆ ತರಲು ಯತ್ನಿಸುತ್ತಿದ್ದ ಇಂದಿರಾಗಾಂಧಿಯವರ ಪ್ರಕಾರ ಬಂಧಿತರ ಬಿಡುಗಡೆಗೆ, ಚುನಾವಣೆಗಳಿಗೆ ಕಾಲವಿನ್ನೂ ಪಕ್ವವಾಗಿರಲಿಲ್ಲ. ಸೆಪ್ಟೆಂಬರ್‌ನಲ್ಲಿ ಬಿಹಾರದಲ್ಲಿ ಭೀಕರ ಪ್ರವಾಹವುಂಟಾಗಿ ಪರಿಸ್ಥಿತಿ ಆತಂಕಕಾರಿ ಘಟ್ಟ ಮುಟ್ಟಿದಾಗ ತಮ್ಮ ಜನರ ಸಂಕಷ್ಟಗಳಿಗಾಗಿ ಜೆ.ಪಿ. ಮರುಗಿದರು. ತಾವು ಪರಿಹಾರ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯತೆಯುಂಟಾಗಿದ್ದು, ತಮ್ಮನ್ನು ಪರೋಲ್ ಮೇಲೆ ಸ್ವಲ್ಪಕಾಲ ಬಿಡುಗಡೆ ಮಾಡಬೇಕೆಂದು ಅವರು ಕೋರಿದರಾದರೂ ಅವರ ಕೋರಿಕೆಗೆ ಮನ್ನಣೆ ಸಿಗಲಿಲ್ಲ.

ಬಿಹಾರದ ಕರೆ : ಪರೋಲ್‌ಗೆ ಮನವಿ

ಈ ಮಧ್ಯೆ ದಿನೇ ದಿನೇ ಅವರ ಆರೋಗ್ಯ ಕೆಡಲಾರಂಭಿಸಿತು. ಜ್ವರ, ಕೆಮ್ಮು ಕಫಗಳು ಕಾಣಿಸತೊಡಗಿದವು. ತಿಂದ ಆಹಾರ ಜೀರ್ಣವಾಗದೆ ಹೊಟ್ಟೆನೋವು ಆರಂಭವಾಗುತ್ತಿತ್ತು. ಮೂತ್ರಪಿಂಡಗಳು ಸೋಲತೊಡಗಿರುವುದರ ಸೂಚನೆಯಾಗಿ ಕಾಲುಗಳು ಊದತೊಡಗಿ, ಜೆ.ಪಿ. ಮಾನಸಿಕ ಖಿನ್ನತೆಗೆ, ದೈಹಿಕ ದುರ್ಬಲತೆಗೆ ಈಡಾಗತೊಡಗಿದರು. ಅವರನ್ನು ಆರೋಗ್ಯ ವಿಚಾರಿಸಲು ನಿಯಮಿತವಾಗಿ ಭೇಟಿಮಾಡುತ್ತಿದ್ದ ಅವರ ಸೋದರ ರಾಜೇಶ್ವರ ಪ್ರಸಾದ್ ಇದನ್ನು ಗಮನಿಸಿ ಆತಂಕಗೊಂಡರು. ಈ ಮಧ್ಯೆ ಜೆ.ಪಿ. ಅವರನ್ನು ವಿಶೇಷ ಚಿಕಿತ್ಸಾವಿಭಾಗಕ್ಕೆ ದಾಖಲುಮಾಡಿ ತೀವ್ರ ನಿಗಾ ಇಟ್ಟು ಉಪಚರಿಸಲಾಯಿತಾದರೂ, ಅವರ ಆರೋಗ್ಯ ಕ್ರಮೇಣ ಹದಗೆಡತೊಡಗಿತು. ಇದನ್ನು ವಿವರಿಸಿ, ಪರಿಸ್ಥಿತಿ ಹೀಗೇ ಮುಂದುವರಿದರೆ

ಜೆ.ಪಿ. ಇನ್ನೊಂದೆರಡು ತಿಂಗಳುಗಳೂ ಬದುಕಲಾರರು ಎಂದು ಎಚ್ಚರಿಸಿ ರಾಜೇಶ್ವರ ಪ್ರಸಾದರು ಪ್ರಧಾನಿಗೆ ಪತ್ರ ಬರೆದರು.

ಹದಗೆಟ್ಟ ಆರೋಗ್ಯ - ಪರೋಲ್ ಮೇಲೆ ಬಿಡುಗಡೆ

ಈ ಪತ್ರ ಸರ್ಕಾರವನ್ನು ಪೇಚಿಗೆ ಸಿಲುಕಿಸಿತು. ವೈದ್ಯಕೀಯ ವರದಿಗಳನ್ನು ತರಿಸಿಕೊಂಡು ಪರಿಶೀಲಿಸಿದ ಸರ್ಕಾರ, ಜೆ.ಪಿ.ಯವರನ್ನು ಅನಾರೋಗ್ಯದ ಕಾರಣಗಳ ಆಧಾರದ ಮೇಲೆ ಪರೋಲ್ ಮೇಲೆ ಬಿಡುಗಡೆ ಮಾಡುವ ತೀರ್ಮಾನವನ್ನು ೧೯೭೬ರ ನವೆಂಬರ್ ೧೧ ರಂದು ಕೈಗೊಂಡು, ೧೩ ರಂದು ಸಾರ್ವಜನಿಕವಾಗಿ ಪ್ರಕಟಿಸಿತು. ಅದಾದ ಒಂದೆರಡು ದಿನಗಳಲ್ಲೇ ಪ್ರಧಾನಮಂತ್ರಿಯವರು ಕಾರ್ಯಾಲಯದ ಸೂಚನೆಯ ಮೇರೆಗೆ ಚಂಡೀಗಢದಿಂದ ಜೆ.ಪಿ.ಯವರನ್ನು ದೆಹಲಿಯ ಅಖಿಲಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಚಿಕಿತ್ಸೆ ಕೊಡಿಸಿ, ಅವರ ಇಚ್ಛೆಯಂತೆ ಮುಂಬೈಗೆ ಕರೆದೊಯ್ದು ಬಿಡಲಾಯಿತು. ಚಂಡೀಗಢದಿಂದ ಹೊರಡುವ ಮುನ್ನ ಜೆ.ಪಿ.ಯವರನ್ನು ಭೇಟಿ ಮಾಡಿದ್ದ ಅವರ ಹಳೆಯ ಮಿತ್ರ ಮೀನೂ ಮಸಾನಿಯವರು, ೨೨ರಂದು ಜೆ.ಪಿ. ಮುಂಬೈ ತಲುಪುವ ಹೊತ್ತಿಗೆ 'ಅವರ ಆರೋಗ್ಯವೀಗ ನಾನು ಕೆಲವೇ ದಿನಗಳ ಹಿಂದೆ ಚಂಡೀಗಢದಲ್ಲಿ ಗಮನಿಸಿದ್ದಕ್ಕಿಂತ ತೀರಾ ಭಿನ್ನವಾಗಿ, ಹದಗೆಟ್ಟಿದೆ' ಎಂದು ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. ಜೆ.ಪಿ.ಯವರ ಮೂತ್ರಪಿಂಡಗಳಿಗೆ ಅವರ ಬಂಧನದ ಕಾಲದಲ್ಲಿಯೇ ಸರ್ಕಾರ ಉದ್ದೇಶಪೂರ್ವಕವಾಗಿ ಆಘಾತ ಮಾಡಿದೆ ಎಂದು ಮುಂದಿನ ದಿನಗಳಲ್ಲಿ ಕೇಳಿಬಂದ ಆರೋಪಗಳಿಗೆ ಇದೊಂದು ಹಿನ್ನೆಲೆ ಒದಗಿಸಿತೆಂದು ಹೇಳಬಹುದು.

ರಾಜಕೀಯ ಇಷ್ಟಪತ್ರ ನೋಂದಣಿ

ಜೆ.ಪಿ. ಮುಂಬೈನ ಜಸ್‌ಲೋಕ್ ಆಸ್ಪತ್ರೆಯಲ್ಲಿ ಮೂತ್ರಪಿಂಡಗಳ ಚಿಕಿತ್ಸೆಗಾಗಿ ದಾಖಲಾದರು. ಅವರ ಮೂತ್ರಪಿಂಡಗಳು ದುರ್ಬಲವಾಗಿದ್ದುದು ಕಂಡುಬಂದು, ಅವರನ್ನು ಮೊದಲಬಾರಿಗೆ ಡಯಾಲಿಸಿಸ್ (ಕೃತಕ ಮೂತ್ರಪಿಂಡದ ಅಳವಡಿಕೆ)ಗೆ ಒಳಪಡಿಸಲಾಯಿತು. ಜೆ.ಪಿ. ಅವರ ಮೂತ್ರಪಿಂಡಗಳ ಪರೀಕ್ಷಾಕ್ರಮ ತುಂಬಾ ಸಂಕೀರ್ಣವಾಗಿದ್ದು ಜೀವಾಪಾಯದ ಆತಂಕವೂ ಇತ್ತು. ಆದ್ದರಿಂದ, ಜೆ.ಪಿ.ಯವರೇನಾದರೂ ಈ ಸಂದರ್ಭದಲ್ಲಿ ನಿಧನರಾದರೆ ಸರ್ಕಾರದಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು, ಸೆರೆಮನೆ ವಾಸದ ಅವಧಿಯಲ್ಲಿ ಅವರಲ್ಲಿ ಮನಃಪರಿವರ್ತನೆ ಉಂಟಾಗಿತ್ತು ಎಂದು ಪ್ರಚಾರ ಮಾಡಿ (ಕಾಮರಾಜ್ ನಾಡಾರ್ ನಿಧನರಾದ ನಂತರ ಮಾಡಿದಂತೆ) ಜೆ.ಪಿ. ಯವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವುದನ್ನು ತಪ್ಪಿಸಲು, ಅವರ ಸಹಿ ಇರುವ ಒಂದು ಹೇಳಿಕೆಯ ದಾಖಲೆಯನ್ನು ಸಿದ್ಧಪಡಿಸಲು ಮೀನೂ ಮಸಾನಿ ನಿರ್ಧರಿಸಿದರು. ಡಿಸೆಂಬರ್ ೫ ರಂದು ಸೋಲಿ ಸೊರಾಬ್ಜಿಯವರ ಉಪಸ್ಥಿತಿಯಲ್ಲಿ ಓರ್ವ ಪಬ್ಲಿಕ್ ನೋಟರಿ ಮುಂದೆ ಜೆ.ಪಿ. ಸಹಿ ಹಾಕಿ 'ರಾಜಕೀಯ ಇಷ್ಟಪತ್ರವನ್ನು' ನೋಂದಣಿ ಮಾಡಿದರು. ಇದರಲ್ಲಿ ಅವರು ಭಾರತದ ಪ್ರಸಕ್ತ ರಾಜಕೀಯ ಪರಿಸ್ಥಿತಿ ಬಗ್ಗೆ ತಮ್ಮ ಈ ದಿನದ ಅಭಿಪ್ರಾಯಗಳು, ೧೯೭೫ರ ಜೂನ್ ೨೫ ರಂದು ತಾವು ಹೊಂದಿದ್ದ ಮತ್ತು ಅದೇ ಜುಲೈನಲ್ಲಿ ಪ್ರಧಾನಮಂತ್ರಿಗೆ ತಾವು ಬರೆದ ಪತ್ರದಲ್ಲಿ ವ್ಯಕ್ತವಾಗಿರುವ

ಅಭಿಪ್ರಾಯಗಳೇ ಆಗಿವೆ ಎಂದು ಸ್ಪಷ್ಟಪಡಿಸಿದ್ದಾರೆ.* ಆಶ್ಚರ್ಯವೆಂದರೆ ಈ ದಾಖಲೆ ಸೋರಿಕೆಯಾದ ದಿನದಂದೇ ಸರ್ಕಾರ ಜೆ.ಪಿ.ಯವರನ್ನು ಬೇಷರತ್ತಾಗಿ ಬಿಡುಗಡೆ ಮಾಡಿರುವುದಾಗಿ ಪ್ರಕಟಿಸಿತು!

ಪಾಟ್ನಾಕ್ಕೆ ವಾಪಸ್

ಮೂತ್ರಪಿಂಡದ ವೈದ್ಯಕೀಯ ಪರೀಕ್ಷೆಯ ಸಮಯದಲ್ಲಿ, ಜೆ.ಪಿ. ಅವರ ಪ್ರಾಣಕ್ಕೆ ತೊಂದರೆಯೇನೂ ಉಂಟಾಗಲಿಲ್ಲವಾದರೂ, ಚಿಕಿತ್ಸೆ ಅಸಾಧ್ಯವೆನಿಸುವಷ್ಟು ಅವರ ಮೂತ್ರಪಿಂಡಗಳು ಸೋತುಹೋಗಿದ್ದು ಗೊತ್ತಾಯಿತು. ಡಯಾಲಿಸಿಸ್ ಕಡ್ಡಾಯವಾಯಿತು. ಆಸ್ಪತ್ರೆಯಿಂದ ಹೊರಬಂದ ಜೆ.ಪಿ. ಮುಂಬೈನಲ್ಲೇ ಇದ್ದ ತಮ್ಮನ ಮನೆಯಲ್ಲಿದ್ದುಕೊಂಡು, ಡಯಾಲಿಸಿಸ್ ಅಗತ್ಯವಾದಾಗ ಆಸ್ಪತ್ರೆಗೆ ಹೋಗಿಬರುತ್ತಿದ್ದರು. ಆದರೆ ಅವರಲ್ಲಿ ಪಾಟ್ನಾದ ಕರೆ ತೀವ್ರವಾಗತೊಡಗಿತ್ತು. ಕದಂಕುಂವಾದ ತಮ್ಮ ಮನೆಗೆ ಹೋಗಿ ನೆಲಸುವ ಹಾಗೂ ಸ್ಥಳೀಯ ಗೆಳೆಯರನ್ನು ಭೇಟಿ ಮಾಡುವ ಅವರ ಆಕಾಂಕ್ಷೆ, ಸ್ವಲ್ಪಕಾಲದಲ್ಲೇ ಕೈಗೂಡಿತು. ಡಯಾಲಿಸಿಸ್ ವ್ಯವಸ್ಥೆಯನ್ನು ಮನೆಯಲ್ಲೇ ಅಳವಡಿಸಲು ಸಾಧ್ಯವಾದುದರಿಂದ ಅವರು ಪಾಟ್ನಾಕ್ಕೆ ತೆರಳಿದರು. ಆದರೆ ತುರ್ತುಪರಿಸ್ಥಿತಿಯ ಭಯದ ವಾತಾವರಣದಲ್ಲಿ ಅವರ ಮನೆಗೆ ಬರುವವರ ಸಂಖ್ಯೆ ಹೆಚ್ಚೇನಿರಲಿಲ್ಲ. ಹೀಗಾಗಿ ಜೆ.ಪಿ.ಗೆ ಅಗತ್ಯವಾಗಿದ್ದ ವಿಶ್ರಾಂತಿ ಅಲ್ಲಿ ದೊರಕಿತಾದರೂ, ಆರೋಗ್ಯ ತುಂಬ ಕೆಟ್ಟಾಗ ಹೆಚ್ಚಿನ ಚಿಕಿತ್ಸೆಗಾಗಿ ಮುಂಬೈಗೆ ಬರಲೇಬೇಕಿತ್ತು. ಹಾಗೆ ಬಂದಾಗಲೆಲ್ಲಾ ಜೆ.ಪಿ. ತಮ್ಮ ಮಿತ್ರರೊಂದಿಗೆ ಮುಂದಿನ ರಾಜಕೀಯ ಕ್ರಮಗಳ ಬಗ್ಗೆ ಚರ್ಚಿಸುತ್ತಿದ್ದರು. ಸರ್ಕಾರದ ಪರವಾಗಿ, ತುರ್ತುಪರಿಸ್ಥಿತಿಯ ಸಾಧನೆಗಳ ಬಗ್ಗೆ ಪತ್ರಿಕೆಗಳಲ್ಲಿ ಸರ್ಕಾರದ ಅಧಿಕೃತ ಹೇಳಿಕೆಗಳು ಪ್ರಕಟವಾದಾಗಲೆಲ್ಲಾ ಅವರು ಖಿನ್ನರಾಗುತ್ತಿದ್ದರು. ತಾವು ಪ್ರತಿಕ್ರಿಯಿಸಲಾಗದ, ಪ್ರತಿಕ್ರಿಯಿಸಿದರೂ ಅದು ಪತ್ರಿಕೆಗಳಲ್ಲಿ ಪ್ರಕಟವಾಗದ ಪರಿಸ್ಥಿತಿ ಅವರನ್ನು ಅಸಹಾಯಕತೆಗೆ ದೂಡುತ್ತಿತ್ತು. ಅಂದಿನ ವಾತಾವರನದಲ್ಲಿ ತಮಗಿದ್ದ ಸೀಮಿತ ಸಂಪರ್ಕಗಳನ್ನು ಬಳಸಿಕೊಂಡೇ ಲಭ್ಯ ವಿರೋಧಪಕ್ಷಗಳ ನಾಯಕರೊಡನೆ ಸಮಾಲೋಚಿಸಿ, ಎಲ್ಲ ವಿರೋಧಪಕ್ಷಗಳನ್ನೂ ಒಂದುಗೂಡಿಸುವ ಪ್ರಯತ್ನವನ್ನು ಅವರು ಮುಂದುವರೆಸಿದರು. ಸಮಯ ಬಂದಾಗ ಸರ್ಕಾರಕ್ಕೆ ಸವಾಲೊಡ್ಡಲು ಏಕೀಕೃತ ವಿರೋಧಪಕ್ಷವೊಂದೇ ಸದ್ಯಕ್ಕಿರುವ ಮಾರ್ಗವೆಂದು ಅವರಿಗನ್ನಿಸತೊಡಗಿತ್ತು.

* ಅನುಬಂಧ - ೩ ನೋಡಿರಿ

೧೨. ಜನತಾ ಸರ್ಕಾರ : ಅಪೂರ್ಣ ಕ್ರಾಂತಿ

ಸರ್ಕಾರಕ್ಕೆ ಸವಾಲೊಡ್ಡುವ ಆ ಸಮಯ ಜೆ.ಪಿ.ಯವರು ನಿರೀಕ್ಷಿಸಿದುದಕ್ಕಿಂತ ಮುಂಚೆಯೇ ಬಂದುಬಿಟ್ಟಿತು. ಪಶ್ಚಿಮದ ದೇಶಗಳ ಒತ್ತಾಯವೋ, ಆ ವರ್ಷದ ಒಳ್ಳೆಯ ಮಳೆ-ಬೆಳೆಗಳೋ ಅಥವಾ ತುರ್ತುಪರಿಸ್ಥಿತಿಯ ಆಡಳಿತಾತ್ಮಕ ಸಾಧನೆಗಳು ಜನಾಭಿಪ್ರಾಯವನ್ನು ತನ್ನೆಡೆಗೆ ತಿರುಗಿಸಿದೆ ಎಂಬ ಭಾವನೆಯೋ, ವರದಿಯೋ, ಪ್ರಧಾನಿ ಇಂದಿರಾಗಾಂಧಿಯವರು ೧೯೭೭ರ ಜನವರಿ ೧೮ರಂದು ಸಂಸತ್ತನ್ನು ವಿಸರ್ಜಿಸಿ, ಮಾರ್ಚ್ ಸುಮಾರಿಗೆ ಚುನಾವಣೆಯನ್ನು ನಡೆಸುವ ತಮ್ಮ ನಿರ್ಧಾರವನ್ನು ಪ್ರಕಟಿಸಿದರು. ಇದರ ಪರಿಣಾಮವಾಗಿ ತುರ್ತುಪರಿಸ್ಥಿತಿಯ ಕಾನೂನುಗಳನ್ನು ಸಾಕಷ್ಟು ಸಡಿಲಿಸಿ ದೇಶದ ವಿವಿದೆಡೆ ಸೆರಮನೆಗಳಲ್ಲಿದ್ದ ರಾಜಕೀಯ ಪಕ್ಷಗಳ, ವಿವಿಧ ಸಂಘ-ಸಂಸ್ಥೆಗಳ ನಾಯಕರು ಹಾಗೂ ಕಾರ್ಯಕರ್ತರನ್ನು ಬಿಡುಗಡೆ ಮಾಡಲಾಯಿತು. ಹದಿನಾರು ತಿಂಗಳುಗಳ ಕಾಲ ಭಯದಿಂದ ಮುದುಡಿಹೋಗಿದ್ದ ರಾಷ್ಟ್ರ, ಹೊಸ ಸ್ವಾತಂತ್ರ್ಯೋತ್ಸಾಹದಿಂದ ಅರಳಿ ನಿಂತಿತು. ಫೆಬ್ರವರಿ ೨ರ ಹೊತ್ತಿಗೆ ಜಗಜೀವನರಾಂ, ಬಹುಗುಣ ಹಾಗೂ ನಂದಿನಿ ಸತ್ಪಥಿ ಕಾಂಗ್ರೆಸ್ ತ್ಯಜಿಸಿ 'ಪ್ರಜಾಸತ್ತೆಗಾಗಿ ಕಾಂಗ್ರೆಸ್' (ಕಾಂಗ್ರೆಸ್ ಫಾರ್ ಡೆಮಾಕ್ರಸಿ) ಎಂಬ ರಂಗವೊಂದನ್ನು ಸ್ಥಾಪಿಸಿ ಇಂದಿರಾ ಅವರನ್ನು ಪೇಚಿಗೆ ಸಿಲುಕಿಸಿದರು.

ತಮ್ಮ ದೀರ್ಘ ಬದುಕಿನುದ್ದಕ್ಕೂ ಮಾಡಿಕೊಂಡುಬಂದಿದ್ದ ಹೋರಾಟವು ತುರ್ತುಪರಿಸ್ಥಿತಿ ಯೆಂಬ ಕೆಟ್ಟ ಕನಸಿನೊಂದಿಗೆ ಕೊನೆಗೊಳ್ಳುವ ಸಾಧ್ಯತೆಯ ಬಗೆಗೆ ಆಲೋಚಿಸಿ ಜೆ.ಪಿ. ತೀವ್ರವಾಗಿ ನೊಂದಿದ್ದರು, ತಾನು ರಾಷ್ಟ್ರಕ್ಕೆ ಕೊನೆಯದಾಗಿ ಹೇಳಬೇಕಾದುದನ್ನು ಹೇಳಲು, ಬಿಹಾರದ ಆಂದೋಲನದ ಮೂಲಕ ತಾನು ಮಾಡಿದ ಕೊನೆಯ ಹೋರಾಟ ವ್ಯರ್ಥವಾದುದಲ್ಲ ಎಂದು ಸಾಬೀತು ಮಾಡಲು ಇದು ದೈವವೇ ನಿರ್ಮಿಸಿಕೊಟ್ಟಿರುವ ಅವಕಾಶವೆಂದು ಅವರು ಬಗೆದರು. ತಮ್ಮ ಅನಾರೋಗ್ಯವನ್ನು ಲೆಕ್ಕಿಸದೇ ನವಯುವಕರಂತೆ ದೇಶದ ತುಂಬಾ ಅಡ್ಡಾಡಿದರು. ವಿರೋಧಪಕ್ಷಗಳ ಎಲ್ಲ ನಾಯಕರ ಸಭೆ ಕರೆದು ಕಾಂಗ್ರೆಸ್ ಪಕ್ಷದ ವಿರುದ್ಧ ಒಂದೇ ಪಕ್ಷವಾಗಿ ಸ್ಪರ್ಧೆ ಒಡ್ಡಲು ಆಗ್ರಹಿಸಿದರು. ಅವರೆಲ್ಲರೂ ರಾಜಕೀಯವಾಗಿ ಬದುಕುಳಿಯಲು ಇದು ಕೊನೆಯ ಅವಕಾಶವೆಂದು ಅವರಿಗೆ ಮನವರಿಕೆ ಮಾಡಿದರು. ಏಕೀಕೃತ ಪಕ್ಷದ ರಚನೆಗೆ ಒಪ್ಪದಿದ್ದಲ್ಲಿ ತಾವು ಯಾರ ಪರವಾಗಿಯೂ ಚುನಾವಣಾ ಪ್ರಚಾರ ಮಾಡುವುದಿಲ್ಲವೆಂದು ಎಚ್ಚರಿಸಿದರು. ಪಕ್ಷ ರಾಜಕೀಯದ ಗೊಡವೆಯನ್ನೇ ಬಿಟ್ಟಿದ್ದ ಜೆ.ಪಿ.ಗೆ ಇದೊಂದು, ತಮ್ಮ ಬದುಕಿನ ಒಂದು ಅನಿವಾರ್ಯ ತಾತ್ವಿಕ ರಾಜಿಯಾಗಿತ್ತು. ಮೊರಾರ್ಜಿ ದೇಸಾಯಿ ಅವರ ಹಿರಿತನದಲ್ಲಿ ಭಾರತೀಯ ಲೋಕದಳ, ಭಾರತೀಯ ಜನಸಂಘ, ಸಂಸ್ಥಾ ಕಾಂಗ್ರೆಸ್, ಸಮಾಜವಾದಿ ಪಕ್ಷಗಳ ಜೊತೆಗೆ ಚಂದ್ರಶೇಖರ್, ಮೋಹನ ಧಾರಿಯಾ,

ಕೃಷ್ಣಕಾಂತ್ ಮುಂತಾದ 'ಕಾಂಗ್ರೆಸ್ ತರುಣ ಕೂಟ'ದ ಸದಸ್ಯರೂ ಹಾಗೂ ಹೊಸದಾಗಿ ಆರಂಭಗೊಂಡಿದ್ದ 'ಪ್ರಜಾಸತ್ತೆಗಾಗಿ ಕಾಂಗ್ರೆಸ್' ರಂಗವೂ ಸೇರಿ ಜನತಾಪಕ್ಷವೆಂಬ ಏಕೀಕೃತವಾದ ಹೊಸಪಕ್ಷ, ಚುನಾವಣೆಗಳನ್ನು ಎದುರಿಸಲು ಸಿದ್ಧವಾಯಿತು.

ಅವಿಶ್ರಾಂತ ಚುನಾವಣಾ ಪ್ರಚಾರ - ನವ ಯುವಕರಾದ ಜೆ.ಪಿ.

ವಾರದಲ್ಲಿ ಮೂರು ದಿವಸ ಡಯಾಲಿಸಿಸ್‌ಗೆ ಒಳಗಾಗಬೇಕಿದ್ದ ಜೆ.ಪಿ. ಪಾಟ್ನಾ, ಕಲ್ಕತ್ತಾ, ಜೈಪುರ, ಅಹಮದಾಬಾದ್, ಹೈದರಾಬಾದ್, ಮುಂಬೈ ಎನ್ನದೇ ಒಂದೂವರೆ ತಿಂಗಳ ಕಾಲ ಚುನಾವಣಾ ಪ್ರವಾಸ ಕೈಗೊಂಡರು. ಹತ್ತೊಂಬತ್ತು ತಿಂಗಳುಗಳ ಸ್ವಾತಂತ್ರ್ಯ ದಮನದ ಕಾಲದಲ್ಲಿ ಮಡುಗಟ್ಟಿದ್ದ ಸ್ವಾತಂತ್ರ್ಯ ದಾಹವೆಲ್ಲವನ್ನೂ ಈ ಒಂದೂವರೆ ತಿಂಗಳುಗಳಲ್ಲೇ ತೀರಿಸಿಕೊಳ್ಳುವ ಆತುರದಲ್ಲಿದ್ದಂತೆ ತೋರಿದ ರಾಷ್ಟ್ರದ ಜನತೆ, ಜೆ.ಪಿ. ಅವರ ಹಾಗೂ ಜನತಾಪಕ್ಷದ ಚುನಾವಣಾ ಸಭೆಗಳಿಗೆ ಕಿಕ್ಕಿರಿದು ಸೇರಿ ಜಯಕಾರ ಹಾಕತೊಡಗಿತು. ಹೋದೆಡೆಯಲ್ಲೆಲ್ಲಾ ಜೆ.ಪಿ., 'ಇದು ಪ್ರಜಾಸತ್ತೆಯ ಅಳಿವು-ಉಳಿವನ್ನು, ದೇಶದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಚುನಾವಣೆ' ಎಂದು ಎಚ್ಚರಿಸಿದರು. ಅವರ ಅವಿಶ್ರಾಂತ ಚುನಾವಣಾ ಪ್ರವಾಸ ಅವರ ಆರೋಗ್ಯವನ್ನು ನಿರ್ಣಾಯಕವಾಗಿ ಹದಗೆಡಿಸಿತು. ಫೆಬ್ರವರಿ ೨೫ರಂದು ಅವರನ್ನು ಗಂಭೀರ ಸ್ಥಿತಿಯಲ್ಲಿ ಮುಂಬೈನ ಜಸ್‌ಲೋಕ್ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಅವರನ್ನು ಪರೀಕ್ಷಿಸಿದ ವೈದ್ಯರು ಇನ್ನುಮುಂದೆ ಚುನಾವಣಾ ಪ್ರವಾಸ-ಪ್ರಚಾರದಲ್ಲಿ ತೊಡಗಿದಲ್ಲಿ ಅವರ ಪ್ರಾಣಕ್ಕೂ ಅಪಾಯವಿದೆ ಎಂದು ಅಭಿಪ್ರಾಯಪಟ್ಟರು. ಜೆ.ಪಿ. ಗೆ ಆಂತಕಪೂರಿತವಾದ ನಿರಾಶೆಯಾಯಿತಾದರೂ; ತಾನೆಷ್ಟು ಮಾಡಬಹುದೋ ಅಷ್ಟನ್ನೂ ಮಾಡಿದ್ದೇನೆ, ಉಳಿದವರು ಕೆಲಸವನ್ನು ಪೂರ್ಣಗೊಳಿಸಬೇಕಷ್ಟೇ ಎಂಬ ನಿರ್ಲಿಪ್ತ ನಿಲುವು ತಳೆದು ಚಿಕಿತ್ಸೆ-ವಿಶ್ರಾಂತಿಗೆ ತಮ್ಮನ್ನು ಒಡ್ಡಿಕೊಂಡರು. ಮಾರ್ಚ್ ೧೨ರಂದು ತಮ್ಮ ಹಾಸಿಗೆಯಿಂದಲೇ 'ಇದೇ ಕೊನೆಯ ಅವಕಾಶ. ಎಚ್ಚರ ತಪ್ಪಿದರೆ ಹತ್ತೊಂಬತ್ತು ತಿಂಗಳ ದಮನ, ಹತ್ತೊಂಬತ್ತು ವರ್ಷಗಳ ದಮನವಾಗಿ ವಿಸ್ತರಿಸೀತು. ಈ ಚುನಾವಣೆಯಲ್ಲಿ ಇಂದಿರಾಗಾಂಧಿಯವರಿಗೆ ಜಯ ದೊರಕಿಸಿಕೊಟ್ಟಲ್ಲಿ, ಇದೇ ಕೊನೆಯ ಚುನಾವಣೆಯಾಗುವ ಎಲ್ಲ ಸಂಭವವಿದೆ. ಆದುದರಿಂದ ಸರ್ಕಾರವನ್ನು ಸೋಲಿಸಿ ಬದಲಾವಣೆ ತನ್ನಿರಿ' ಎಂಬ ಹೇಳಿಕೆ ನೀಡಿ, ಮತದಾರರಿಗೆ ತಮ್ಮ ಕೊನೆಯ ಮನವಿ ಮಾಡಿದರು. ಹಾಗೇ, ಹೊಸಪಕ್ಷದ ಆಶಯ ತನ್ನ ಪ್ರಣಾಳಿಕೆಯಲ್ಲಿ ಸೂಚಿಸಿದಂತೆ, ಅಂತ್ಯೋದಯವನ್ನು ಆಧರಿಸಿದ ಗಾಂಧಿವಾದಿ ಭಾರತವನ್ನು ಸೃಷ್ಟಿಸುವುದೇ ಆಗಿದೆ ಎಂದು ಜನತೆಗೆ ಭರವಸೆ ನೀಡಿದರು.

ಜನತಾಪಕ್ಷದ ವಿಜಯಘೋಷ - ಇಂದಿರಾಗೆ ಸಾಂತ್ವನ

ಮಾರ್ಚ್ ಮೂರನೇವಾರದ ಹೊತ್ತಿಗೆ, ಚುನಾವಣೆಗಳು ನಡೆದು ಫಲಿತಾಂಶಗಳು ಬರಲಾರಂಭಿಸಿದವು. ತುರ್ತುಪರಿಸ್ಥಿತಿಯ ಕಠೋರತೆಯನ್ನು ಅಷ್ಟಾಗಿ ಅನುಭವಿಸದ ದಕ್ಷಿಣ ಹಾಗೂ ಈಶಾನ್ಯ ರಾಜ್ಯಗಳ ಹೊರತಾಗಿ, ಇಂದಿರಾಗಾಂಧಿಯವರ ಕಾಂಗ್ರೆಸ್ ಪಕ್ಷ

ಎಲ್ಲೆಲ್ಲೂ ಭಾರೀ ಸೋಲನ್ನು ಅನುಭವಿಸಿತ್ತು. ಸ್ವತಃ ಅವರೇ ರಾಯ್‌ಬರೇಲಿಯಲ್ಲಿ ರಾಜನಾರಾಯಣರ ವಿರುದ್ಧ ಸುಮಾರು ಐವತ್ತುಸಾವಿರ ಮತಗಳ ಅಂತರದಿಂದ ಸೋತಿದ್ದರು. ತುರ್ತುಪರಿಸ್ಥಿತಿಯ ಹೆಚ್ಚಿನ ಅತ್ಯಾಚಾರಗಳಿಗೆ- ಕಡ್ಡಾಯ ಕುಟುಂಬ ಯೋಜನಾ ಮೂಲಪಕ್ಷಗಳ ಶಸ್ತ್ರಚಿಕಿತ್ಸೆಗಳು, ಪುನರ್ವಸತಿಯ ವ್ಯವಸ್ಥೆ ಇಲ್ಲದೆ ಕೊಳಚೆ ಪ್ರದೇಶಗಳಿಂದ ಜನರನ್ನು ಒಕ್ಕಲೆಬ್ಬಿಸುವುದು, ಸಾರ್ವಜನಿಕ ದುಂಡಾವರ್ತಿ ಇತ್ಯಾದಿಗಳಿಗೆ ಕಾರಣರೆಂದು ಹೇಳಲಾಗಿದ್ದ ಅವರ ಮಗ ಸಂಜಯಗಾಂಧಿ, ಓರ್ವ ಅನಾಮಿಕ ಅಭ್ಯರ್ಥಿಯ ಎದುರು ಹೀನಾಯ ಸೋಲನ್ನು ಅನುಭವಿಸಿದ್ದರು. ಅತ್ತ ಹೊಸ ಜನತಾಪಕ್ಷದ ಎಲ್ಲ ಪ್ರಮುಖ ನಾಯಕರೂ ಭಾರೀ ವಿಜಯ ಸಾಧಿಸಿದ್ದರು. ತುರ್ತುಪರಿಸ್ಥಿತಿಯ ಕಾಲದಲ್ಲಿ ಬಂಧನಕ್ಕೆ ಸಿಗದೆ ಸರ್ಕಾರದ ವಿರುದ್ಧ ಬುಡಮೇಲು ಕೃತ್ಯಗಳಲ್ಲಿ ತೊಡಗಿ ಬರೋಡಾ ಡೈನಾಮೈಟ್ ಪ್ರಕರಣದಲ್ಲಿ ಕೊನೆಗೂ ದಸ್ತಗಿರಿಯಾಗಿದ್ದ ಜಾರ್ಜ್ ಫರ್ನಾಂಡೀಸ್ ಸೆರೆಮನೆಯಲ್ಲಿದ್ದುಕೊಂಡೇ, ಬಿಹಾರದ ಮುಜಾಫರ್‌ಪುರ ಕ್ಷೇತ್ರದಿಂದ ಲಕ್ಷಾಂತರ ಮತಗಳ ಅಂತರದಲ್ಲಿ ಗೆಲವು ಸಾಧಿಸಿದ್ದರು. ಆ ಸಮಯದಲ್ಲಿ ರಾಷ್ಟ್ರಾದ್ಯಂತ ಕಂಡುಬಂದ ಆವೇಶ, ಉತ್ಸಾಹ, ಹರ್ಷೋಲ್ಲಾಸಗಳು ರಾಷ್ಟ್ರ ಪುನರ್ಜನ್ಮ ಪಡೆದಿದೆಯೇನೋ ಎಂಬಂತಿತ್ತು. ರಾಷ್ಟ್ರ ಎರಡನೇ ಸ್ವಾತಂತ್ರ್ಯ ಯುದ್ಧದಲ್ಲಿ ಜಯಶಾಲಿಯಾಗಿದೆ ಎಂದು ರಾಜಕೀಯ ಪರಿಣತರು ಜನತಾಪಕ್ಷದ ಈ ಚುನಾವಣಾ ವಿಜಯವನ್ನು ವ್ಯಾಖ್ಯಾನಿಸಿದರು. ದಂಗಾದ ಇಂದಿರಾ ಗಾಂಧಿಯವರು ಮಾರ್ಚ್ ೨೧ರಂದು ತುರ್ತುಪರಿಸ್ಥಿತಿ ಘೋಷಣೆಯನ್ನು ಹಿಂತೆಗೆದುಕೊಂಡು ರಾಜೀನಾಮೆ ನೀಡಿದರು. ಜೆ.ಪಿ., ಇಂದಿರಾಗಾಂಧಿಯವರ ನಿವಾಸಕ್ಕೆ ಹೋಗಿ ಅವರಿಗೆ ಸಾಂತ್ವನ ಹೇಳಿಬಂದರು. ಜೆ.ಪಿ.ಯವರನ್ನು ಬೀಳ್ಕೊಡಲು ತಮ್ಮ ನಿವಾಸದಿಂದ ಹೊರ ಬಂದ ಇಂದಿರಾ ಗಾಂಧಿ ಕಣ್ಣೀರಿಟ್ಟರು.

ಸರ್ಕಾರ ರಚನೆ - ಗಾಂಧಿ ಸಮಾಧಿ ಬಳಿ ಪ್ರತಿಜ್ಞೆ

ಬಹುಶಃ ಇದು ಜೆ.ಪಿ.ಯವರ ಬದುಕಿನ ಅಪೂರ್ವ ಹರ್ಷದ ಸಂದರ್ಭವಾಗಿತ್ತು. ನಲವತ್ತೇಳರ ಸ್ವಾತಂತ್ರ್ಯ, ರಾಷ್ಟ್ರವಿಭಜನೆಯ ಕೋಮು ಹಿಂಸಾಚಾರದಿಂದಾಗಿ; ಕಾಂಗ್ರೆಸ್ ನಾಯಕರೊಡನೆಯ ತೀವ್ರ ತಾತ್ವಿಕ ಭಿನ್ನಾಭಿಪ್ರಾಯಗಳಿಂದಾಗಿ, ಜೆ.ಪಿ.ಯವರಿಗೆ ಅಷ್ಟೇನೂ ಸವಿಯಾಗಿ ಕಂಡಿರಲಿಲ್ಲ. ಅಲ್ಲದೆ ಅದು ಗಾಂಧೀಜಿ ನಾಯಕತ್ವದಲ್ಲಿ ನಡೆದ ಮಹಾ ಹೋರಾಟದ ಫಲ. ಆದರೆ ಈ ನವಸ್ವಾತಂತ್ರ್ಯೋದಯ ಸ್ವತಃ ಜೆ.ಪಿ.ಯವರ ನೇತೃತ್ವದಲ್ಲಿಯೇ ಆಗಿತ್ತು. ಆದುದರಿಂದ ಇದು ಅವರಿಗೆ ವೈಯಕ್ತಿಕವಾಗಿ ಹೆಚ್ಚು ಸವಿಯೆನಿಸುವ ಸಂದರ್ಭವೇ ಆಗಿತ್ತೇನೋ....

ಆದರೆ ಈ ಸವಿ ಹೆಚ್ಚುಕಾಲ ಉಳಿಯಲಾರದೆಂಬ ಸೂಚನೆ, ರಾಷ್ಟ್ರದ ಹೊಸ ಪ್ರಧಾನಿಯ ಆಯ್ಕೆಯ ಸಂದರ್ಭದಲ್ಲೇ ಸಿಗಲಾರಂಭಿಸಿತು. ಮೊರಾರ್ಜಿ ದೇಸಾಯಿ-ಚರಣಸಿಂಗ್-ಜಗಜೀವನರಾಂ ನಡುವೆ ಉಂಟಾದ ತ್ರಿಕೋನ ಸ್ಪರ್ಧೆಯಲ್ಲಿ ಮೊದಲನೆಯವರನ್ನು ಪ್ರಧಾನಮಂತ್ರಿಯನ್ನಾಗಿ, ಉಳಿದಿಬ್ಬರನ್ನು ಉಪಪ್ರಧಾನಿಮಂತ್ರಿಗಳನ್ನಾಗಿ ಮಾಡಿ ಬಗೆಹರಿಸಬೇಕಾಯಿತು. ಪಕ್ಷದ ಹೊಸ ಅಧ್ಯಕ್ಷರ ಆಯ್ಕೆಯೂ ಪಕ್ಷವನ್ನು ಒಡಿತದಲ್ಲಿಟ್ಟುಕೊಳ್ಳುವ

ಮೂಲ ಪಕ್ಷಗಳ ರಾಜಕೀಯ ಹುನ್ನಾರದ ಒತ್ತಡಗಳಿಗೆ ಸಿಲುಕಿತು. ಕೊನೆಗೆ ಜೆ.ಪಿ. ಯವರೇ, ಹೊಸಪಕ್ಷದ ನೇತೃತ್ವ ಯುವಶಕ್ತಿಯ ಕೈಯಲ್ಲಿರಲಿ ಎಂದು ಚಂದ್ರಶೇಖರರನ್ನು ಅಧ್ಯಕ್ಷರೆಂದು ಸೂಚಿಸಿದರು. ಈ ಬೆಳವಣಿಗೆಗಳಿಂದ ಆತಂಕಗೊಂಡ ಜೆ.ಪಿ., ಹೊಸಪಕ್ಷದ ಎಲ್ಲ ನಾಯಕರ ಮೇಲೆ ನೈತಿಕ ಒತ್ತಡ ಹೇರಲು ಮಾರ್ಚ್ ೨೪ರಂದು ದೆಹಲಿಯ ರಾಜಘಾಟ್‌ನ ಗಾಂಧಿ ಸಮಾಧಿ ಬಳಿ ಹಿರಿಯ ರಾಜಕೀಯ ಮುತ್ಸದ್ದಿ ಆಚಾರ್ಯ ಕೃಪಲಾನಿ ಅವರ ಉಪಸ್ಥಿತಿಯಲ್ಲಿ ಜನತಾಪಕ್ಷದ ಎಲ್ಲ ನಾಯಕರಿಂದ 'ತಾವು ಒಂದಾಗಿ ಇದ್ದು ತಮ್ಮ ಸಾರ್ವಜನಿಕ ಮತ್ತು ಖಾಸಗಿ ಬದುಕುಗಳೆರಡರಲ್ಲೂ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಕಾಪಾಡಿಕೊಂಡು, ಮಹಾತ್ಮಗಾಂಧೀಜಿ ಆರಂಭಿಸಿದ್ದ ಕೆಲಸವನ್ನು ಪೂರ್ಣಗೊಳಿಸಲು ಶ್ರದ್ಧೆಯಿಂದ ದುಡಿಯುವುದಾಗಿ' ಪ್ರತಿಜ್ಞಾ ಸ್ವೀಕಾರ ಮಾಡಿಸಿದರು.

ಜನತಾಪಕ್ಷದ ಸರ್ಕಾರ ಸಂವಿಧಾನದ ೪೩ನೇ ಮತ್ತು ೪೪ನೇ ತಿದ್ದುಪಡಿಗಳ ಮೂಲಕ ಇಂದಿರಾ ಆಳ್ವಿಕೆಯಲ್ಲಿ ಮಾಡಲಾಗಿದ್ದ ಸಂವಿಧಾನ ತಿದ್ದುಪಡಿಗಳನ್ನು ರದ್ದುಗೊಳಿಸಿ ಜನತಾ ಪ್ರಾತಿನಿಧ್ಯ ಕಾಯಿದೆಗೆ ಸಂಪೂರ್ಣ ಪ್ರಜಾಸತ್ತಾತ್ಮಕ ಸ್ವರೂಪವನ್ನು ಮರಳಿ ನೀಡಿತು. ಅಲ್ಲದೆ, ಮುಂದೆ ಯಾವುದೇ ಸರ್ಕಾರ ಆಂತರಿಕ ತುರ್ತುಪರಿಸ್ಥಿತಿಯನ್ನು ಇಂದಿರಾ ಸರ್ಕಾರದಂತೆ ಸಲೀಸಾಗಿ ಘೋಷಿಸುವುದನ್ನು ತಡೆಯಲು ಸೂಕ್ತವಾದ ಸಂವೈಧಾನಿಕ ರಕ್ಷಣಾ ನಿಯಮಗಳನ್ನು ಜಾರಿಗೆ ತಂದಿತು. ಹಿಂದಿನ ಸರ್ಕಾರ ಕಸಿದುಕೊಂಡಿದ್ದ ನಾಗರಿಕ ಸ್ವಾತಂತ್ರ್ಯಗಳನ್ನು ಜನತೆಗೆ ಮರಳಿ ನೀಡಿತು. ತುರ್ತುಪರಿಸ್ಥಿತಿ ಕಾನೂನುಗಳ ಹೆಸರಿನಲ್ಲಿ ನಡೆದಿದ್ದ ಆಡಳಿತಾತ್ಮಕ, ಆರ್ಥಿಕ ಹಾಗೂ ರಾಜಕೀಯ ಅತ್ಯಾಚಾರಗಳ ವಿಚಾರಣೆಗಾಗಿ ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಎಂ.ಬಿ.ಷಾ ಅಧ್ಯಕ್ಷತೆಯಲ್ಲಿ ಆಯೋಗವೊಂದನ್ನು ನೇಮಿಸಿತು. ಒಟ್ಟಿನಲ್ಲಿ ೨೧ ತಿಂಗಳುಗಳ 'ಕರಾಳ ಅವಧಿ'ಯಲ್ಲಿ ಉಂಟಾಗಿದ್ದ ವಕ್ರತೆಗಳನ್ನೂ, ವಿಕ್ಷಿಪ್ತತೆಗಳನ್ನೂ ನಿವಾರಿಸುವ ತನ್ನ ಚುನಾವಣಾ ಭರವಸೆಯನ್ನು ಜನತಾಸರ್ಕಾರ ಕ್ಷಿಪ್ರಗತಿಯಲ್ಲಿ ಈಡೇರಿಸತೊಡಗಿತು. ಆದರೆ ಜೆ.ಪಿ. ವೈಯಕ್ತಿಕ ನೆಲೆಯಲ್ಲಿ ಜನತೆಗೆ ನೀಡಿದ್ದ, ಅಂತ್ಯೋದಯವನ್ನಾಧರಿಸಿದ ಗಾಂಧಿವಾದಿ ಭಾರತವನ್ನು ನಿರ್ಮಿಸುವ ಸಂಪೂರ್ಣ ಕ್ರಾಂತಿಯ ಭರವಸೆ?

ಸಂಪೂರ್ಣಕ್ರಾಂತಿಯ ಪುನಃಶ್ಚೇತನ - ಜನತಾಪಕ್ಷದ ನಿರಾಸಕ್ತಿ

ನಿಜ, ಜನತಾಪಕ್ಷ ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಹತ್ತು ವರ್ಷಗಳಲ್ಲಿ ಅನಕ್ಷರತೆಯನ್ನು ನಿವಾರಿಸಿ ಎಲ್ಲರಿಗೂ ಉದ್ಯೋಗ ನೀಡುವ; ಕೃಷಿ, ನೀರಾವರಿ, ಸಣ್ಣ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಒತ್ತುಕೊಡುವ ಸ್ಥೂಲವಾದ ಒಂದು ಗಾಂಧಿವಾದಿ ಆರ್ಥಿಕ ಕಾರ್ಯಕ್ರಮವನ್ನೇ ನಿರೂಪಿಸಿತ್ತು. ಆದರೆ ಈ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಮಾಧ್ಯಮ, ಎಂದಿನಂತೆ ಸರ್ಕಾರಿ ಅಧಿಕಾರಿವರ್ಗವೇ ಆಗಿತ್ತು. ಅಂದರೆ ಇದು ಸಂಪೂರ್ಣವಾಗಿ ರಾಜ್ಯಶಕ್ತಿಯ ಚಟುವಟಿಕೆ. ಆದರೆ ಜೆ.ಪಿ.ಯವರ ಸಂಪೂರ್ಣ ಕ್ರಾಂತಿಯ ಪರಿಕಲ್ಪನೆಯಲ್ಲಿ ಈ ರಾಜ್ಯಶಕ್ತಿಯ ಚಟುವಟಿಕೆಗಳಲ್ಲಿ ಲೋಕಶಕ್ತಿಯೂ ಭಾಗಿಯಾಗಿ, ಈ ಚಟುವಟಿಕೆಗಳು ನಿಜವಾದ ಅರ್ಥದಲ್ಲಿ ಜನತೆಯ ಚಟುವಟಿಕೆಗಳಾಗಿ ಪರಿಣಮಿಸಬೇಕಿತ್ತು. ಛಾತ್ರ

ಯುವಸಂಘರ್ಷವಾಹಿನಿ ಹಾಗೂ ಸರ್ವಸೇವಾಸಂಘದ ಆಶ್ರಯದಲ್ಲಿ ಸರ್ವೋದಯ ಕಾರ್ಯಕರ್ತರು ಗ್ರಾಮದಿಂದ ಜಿಲ್ಲೆಯವರೆಗೆ ಬಿಹಾರದಲ್ಲಿ ಜನಸಭಾಗಳ ಮೂಲಕ ರಚಿಸಿದ್ದಂತಹ ಜನ (ಸಂಘರ್ಷ) ಸಮಿತಿಗಳು ಲೋಕಶಕ್ತಿಯ ಪ್ರತಿನಿಧಿಗಳಾಗಿದ್ದವು. ಅವು ರಾಜ್ಯಶಕ್ತಿಯ ಸಾಮಾಜಿಕ-ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದ ಅನೌಪಚಾರಿಕ ಉಸ್ತುವಾರಿ ವಹಿಸಿಕೊಳುವಂತಾಗಬೇಕೆಂಬುದು ರಾಜನೀತಿ ಮತ್ತು ಲೋಕನೀತಿಗಳ ನಡುವಣ ಸಂಬಂಧ ಕುರಿತ ಜೆ.ಪಿ. ಅವರ ಕಲ್ಪನೆಯ ಆಶಯವಾಗಿತ್ತು. ಈ ಸಂಬಂಧ ವಾಸ್ತವಿಕವಾಗಿ ಯಶಸ್ವಿಯಾಗಲು ಸಾಧ್ಯವಿರುವುದು ಶಾಸಕರನ್ನು ಆರಿಸಿ ಕಳಿಸುವ ಪ್ರಕ್ರಿಯೆಯಲ್ಲೂ ಈ ಜನಸಮಿತಿಗಳ ಸಕ್ರಿಯ ಪಾತ್ರವಿದ್ದಾಗ ಮಾತ್ರ.

ಈ ಹಿನ್ನೆಲೆಯೊಂದಿಗೇ, ೭೭ರ ಏಪ್ರಿಲ್ ೩೦ರಂದು ಛಾತ್ರ ಯುವಸಂಘರ್ಷ ವಾಹಿನಿಯನ್ನು ಪುನಶ್ಚೇತನ ಗೊಳಿಸಲಾಯಿತು. ತುರ್ತುಪರಿಸ್ಥಿತಿಗೆ ಮುನ್ನ, ೧೪ ರಿಂದ ೩೦ವರ್ಷಗಳ ವಯೋಮಾನದ ಸುಮಾರು ೩೦ ಸಾವಿರ ಸ್ವಯಂಸೇವಕರನ್ನು ಹೊಂದಿದ್ದ ವಾಹಿನಿ, ಇನ್ನು ಮೂರು ತಿಂಗಳಲ್ಲಿ ೫೦ ಸಾವಿರ ಸದಸ್ಯರನ್ನು ಸಂಘಟಿಸುವ ರಾಷ್ಟ್ರೀಯ ಕಾರ್ಯಕ್ರಮವನ್ನು ಹಾಕಿಕೊಂಡಿತು. ವಿನೋಬಾ ಅವರು ೭೬ರ ಡಿಸೆಂಬರ್‌ನಲ್ಲಿ 'ಸಂಘರ್ಷ'ದ ಸಾಧುತ್ವದ ಬಗ್ಗೆ ಜೆ.ಪಿ.ಯವರೊಂದಿಗೆ ಚರ್ಚಿಸಿ ಒಂದು ವರ್ಷದ ಮೌನವ್ರತ ಕೈಗೊಳ್ಳುವ ಮುನ್ನ ಸರ್ವಸೇವಾ ಸಂಘವನ್ನು ವಿಸರ್ಜಿಸುವಂತೆ ಸೂಚನೆಯನ್ನು ನೀಡಿದ್ದರು. ಇದರ ಪಾಲನೆಯನ್ನು ಸಂಘವು 'ನಾಯಕರ ಬಂಧನಗಳ ಕಾರಣ'ದ ಮೇಲೆ ಮುಂದೂಡಿತ್ತು. ೭೭ರ ಮೇನಲ್ಲಿ ಸಮಾವೇಶಗೊಂಡ ಸಂಘದ ಸಮ್ಮೇಳನದಲ್ಲಿ ಜೆ.ಪಿ.ಯವರು ವಿಸರ್ಜನೆಯ ಸಲಹೆಯನ್ನು ತಳ್ಳಿಹಾಕಿ, ಸಂಘದ ಕಾರ್ಯಕರ್ತರು ಸಂಪೂರ್ಣಕ್ರಾಂತಿಯ ಕ್ರಿಯಾಶೀಲ ಕಾರ್ಯಕರ್ತರಾಗಬೇಕೆಂದು ಆಗ್ರಹಿಸಿದರು. ರಾಷ್ಟ್ರಾದ್ಯಂತ ಲೋಕಶಕ್ತಿಯ ಪ್ರತಿನಿಧಿಗಳಾಗಿ ಕೆಲಸ ಮಾಡುವಂತಹ ಜನಸಮಿತಿಗಳ ರಚನೆಗಾಗಿ ೭೭ರ ಜುಲೈನಲ್ಲಿ ಹಿರಿಯ ಗಾಂಧಿವಾದಿ ನಾರಾಯಣ ದೇಸಾಯಿ ಅವರ ಅಧ್ಯಕ್ಷತೆಯಲ್ಲಿ ತತ್ಕಾಲೀನ ರಾಷ್ಟ್ರೀಯ ಸಮಿತಿಯನ್ನು ರಚಿಸಲಾಯಿತು. ಅದು ರಾಷ್ಟ್ರಾದ್ಯಂತ ಪ್ರವಾಸಮಾಡಿ ಹಂಗಾಮಿ ರಾಜ್ಯ ಸಮಿತಿಗಳನ್ನೂ ರಚಿಸಿತು.

ಲೋಕಸಭಾ ಚುನಾವಣೆಗಳು ಮುಗಿದ ಅನತಿಕಾಲದಲ್ಲೇ ವಿವಿಧ ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಿ ಹೊಸದಾಗಿ ಚುನಾವಣೆಗಳನ್ನು ಘೋಷಿಸಿಲಾಯಿತು. ವಿಧಾನಸಭಾ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆಯನ್ನು, ಜನ ಸಮಿತಿಗಳು ಈಗಾಗಲೇ ಅಸ್ತಿತ್ವದಲ್ಲಿರುವ ಕ್ಷೇತ್ರಗಳಲ್ಲಾದರೂ—ಹೆಚ್ಚಾಗಿ ಬಿಹಾರ ಮತ್ತು ಸ್ವಲ್ಪಮಟ್ಟಿಗೆ ಉತ್ತರಪ್ರದೇಶ—ಆಯಾ ಸಮಿತಿಗಳ ಸರ್ವಾನುಮತದ ತೀರ್ಮಾನಕ್ಕೆ ಬಿಡಬೇಕೆಂಬ ಜೆ.ಪಿ. ಯವರ ಸೂಚನೆಗೆ ಜನತಾಪಕ್ಷದ ಉನ್ನತ ಹಂತಗಳಲ್ಲೇ ಬೆಂಬಲ ದೊರೆಯಲಿಲ್ಲ. ಜೆ.ಪಿ. ನಿರಾಶರಾದರು. ತಮ್ಮ ತೀವ್ರ ಅನಾರೋಗ್ಯದ ಪರಿಸ್ಥಿತಿಯಲ್ಲಿ ಮತ್ತು ಆಗ ತಾನೇ ಸರ್ಕಾರ ಆಡಳಿತ ಆರಂಭಿಸಿದ್ದುದರ ಹಿನ್ನೆಲೆಯಲ್ಲಿ ಅವರು ಈ ದಿಸೆಯಲ್ಲಿ ಹೆಚ್ಚಿನ ಒತ್ತಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಜೊತೆಗೆ ವಾಹಿನಿ ಮತ್ತು ಸರ್ವೋದಯ ಕಾರ್ಯಕರ್ತರ ನಡುವೆ ಸಮನ್ವಯದ ಕೊರತೆಯೂ ಜನಸಮಿತಿಗಳ ರಚನೆಯ ಕೆಲಸವನ್ನು ನಿಧಾನಗೊಳಿಸಿತ್ತು.

ವಾಹಿನಿಯ ಕಾರ್ಯಕರ್ತರಲ್ಲಿ ಸಾಕಷ್ಟು ಜನ ಮಾರ್ಕ್ಸ್‌ವಾದದ ಒಲವುಳ್ಳವರಾಗಿದ್ದು, ಗಾಂಧಿವಾದಿಗಳಾದ ಸರ್ವೋದಯ ಕಾರ್ಯಕರ್ತರ ಕಾರ್ಯಶೈಲಿಯ ಬಗ್ಗೆ ಅವರು ಅಸಮಧಾನ ಹೊಂದಿದವರಾಗಿದ್ದುದೇ ಇದಕ್ಕೆ ಕಾರಣವಾಗಿತ್ತು.

ಜನತಾಪಕ್ಷದಲ್ಲಿ ಬಿರುಕು - ಕುಂದತೊಡಗಿದ ವಿಶ್ವಾಸಾರ್ಹತೆ

ಈ ನಂತರ ಜೆ.ಪಿ. ಮೂತ್ರಪಿಂಡಗಳ ಚಿಕಿತ್ಸೆಗಾಗಿ ಅಮೆರಿಕಾಗೆ ಹೋಗಿ ಬರಬೇಕಾಯಿತು. ಆದರೂ ಅವರ ಆರೋಗ್ಯ ಮೊದಲಿನಂತಾಗಲು ಸಾಧ್ಯವಾಗದಾಯಿತು. ಹಾಗಾಗಿಯೇ ಅವರು 'ನನ್ನ ಆರೋಗ್ಯ ಮೊದಲಿನಂತೆ ದೇಶಪ್ರವಾಸ ಮಾಡಿ ಜನಶಕ್ತಿಯನ್ನು ಸಂಘಟಿಸುವ ಮಟ್ಟಿಗೆ ಇದೆಯೋ ಇಲ್ಲವೋ ಹೇಳಲಾರೆ. ಆದರೆ ನಾನು–ನನ್ನನ್ನು ಗಾಂಧೀಜಿಯೊಂದಿಗೆ ಹೋಲಿಸಿಕೊಳ್ಳುವ ಅಪರಾಧ ಮಾಡಲಾರೆನಾದರೂ —ಗಾಂಧೀಜಿಯಂತೆ ಒಂದೆಡೆ ಕೂತು ನನ್ನೊಡನೆ ಸಮಾಲೋಚಿಸಲು ಬರುವವರೊಡನೆ ಮಾತನಾಡುವ ಮೂಲಕ ಮತ್ತು ಬರವಣಿಗೆಯ ಮೂಲಕ ನನಗೆ ಸಾಧ್ಯವಿರುವ ಪ್ರಭಾವವನ್ನು ಬೀರಲು ಯತ್ನಿಸುವೆ' ಎಂದು ತಮ್ಮನ್ನು ಭೇಟಿಮಾಡಿದ ಸಂಪೂರ್ಣಕ್ರಾಂತಿಯ ಕಾರ್ಯಾಚರಣೆ ಬಗ್ಗೆ ಕೇಳಿದ ಮಿತ್ರರಿಗೆ ತಿಳಿಸಿದರು. ಅದರಂತೆಯೇ ಚುನಾವಣಾ ಸುಧಾರಣೆ, ಸರಿಯಾಗಿ ಕೆಲಸ ಮಾಡದ ಶಾಸಕರನ್ನು ಹಿಂದಕ್ಕೆ ಕರೆಸಿಕೊಳ್ಳುವುದು, ಶಿಕ್ಷಣ ಕ್ಷೇತ್ರದ ಪುನಾರಚನೆ, ರಾಜಕೀಯ ಸೆರೆಯಾಳುಗಳ ಬಿಡುಗಡೆ, ದೊಡ್ಡ ರಾಜ್ಯಗಳ ಪುನರ್ಘಟನೆ, ಹಿಂದುಳಿದ ವರ್ಗಗಳಿಗೆ ಉದ್ಯೋಗ ಮೀಸಲಾತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕ್ಷಿಪ್ರ ಕ್ರಮ ಕೈಗೊಳ್ಳುವಂತೆ ಅವರು ಸರ್ಕಾರಕ್ಕೆ ಸಲಹೆ-ಸೂಚನೆಗಳನ್ನು ಪತ್ರ ಮುಖೇನ ನೀಡತೊಡಗಿದರು.

ಈ ಹೊತ್ತಿಗೆ ಜನತಾಪಕ್ಷದಲ್ಲಿ ಬಿರುಕುಗಳು ಮೂಡಲಾರಂಭಿಸಿದ್ದವು. ಭಾರತೀಯ ಜನಸಂಘದ ಗುಂಪು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಾರ್ಯಕರ್ತರ ಮೂಲಕ ಜನತಾಪಕ್ಷವನ್ನು ವಶಪಡಿಸಿಕೊಳ್ಳಲೆತ್ನಿಸುತ್ತಿದ್ದಾರೆಂದು; ಸಮಾಜವಾದಿ ಗುಂಪಿನ ಮಧುಲಿಮಯೆ ಆಕ್ಷೇಪವೆತ್ತಿದರು. ಆರ್.ಎಸ್.ಎಸ್. ಸದಸ್ಯರು ಜನತಾಪಕ್ಷದ ಸದಸ್ಯರಾಗಬೇಕಿದ್ದಲ್ಲಿ, ಅವರು ಮೊದಲು ಆರ್.ಎಸ್.ಎಸ್. ಸದಸ್ಯತ್ವವನ್ನು ಬಿಡಬೇಕೆಂದು ಅವರು ವಾದಿಸಿದರು. ಇದನ್ನು ಜನಸಂಘೀಯ ಗುಂಪು ಒಪ್ಪದೇ ಹೋಯಿತು. ಈ ಮಧ್ಯೆ ಮೊರಾರ್ಜಿದೇಸಾಯಿ ಅವರ ಮಗ ಕಾಂತಿ ದೇಸಾಯಿ ಅವರ ಮೇಲೆ ಹಣಕಾಸಿನ ಅವ್ಯವಹಾರಗಳ ಆರೋಪಗಳೂ ಕೇಳಿ ಬಂದು, ಜನತಾಸರ್ಕಾರದ ವಿಶ್ವಾಸಾರ್ಹತೆ ಕುಂದತೊಡಗಿತ್ತು. ಸ್ವತಃ ಜೆ.ಪಿ. ಅವರಿಗೇ ತಮ್ಮ ಕನಸು ನನಸಾಗುವ ಬಗೆಗೆ ಅನುಮಾನಗಳು ಆರಂಭವಾಗಿದ್ದವು.

ಕೊನೆಯ ಸಾರ್ವಜನಿಕ ಹೇಳಿಕೆ - ಇಂದಿರಾಗೆ ಹಾರೈಕೆ

ಈ ಹಿನ್ನೆಲೆಯಲ್ಲಿ ೧೯೭೮ರ ಹುತಾತ್ಮರ ದಿನದಂದು (ಗಾಂಧಿ ಪುಣ್ಯದಿನ) ಅವರು ಒಂದು ಸಾರ್ವಜನಿಕ ಹೇಳಿಕೆ ನೀಡಿ; 'ನಾವು ರಾಜಘಾಟ್‌ನಲ್ಲಿ ಸ್ವೀಕರಿಸಿದ ಪ್ರತಿಜ್ಞೆ ಪ್ರಕಾರ ವರ್ತಿಸುತ್ತಿದ್ದೇವೆಯೇ, ನಮ್ಮ ಜೀವನಶೈಲಿಯನ್ನು ಅಳವಡಿಸಿಕೊಂಡಿದ್ದೇವೆಯೇ, ನಾವು ಒಂದು ಗುರಿಯುಳ್ಳ ಏಕೀಕೃತ ದಳವಾಗಿ ಕೆಲಸ ಮಾಡಲು, ಸಮಾಜದ ಕಟ್ಟಕಡೆಯ

ಮನುಷ್ಯನಿಗೆ ಪ್ರಯೋಜನವಾಗುವ ಹಾಗೆ ನಮ್ಮ ನೀತಿಗಳನ್ನು ಬದಲಾಯಿಸಿಕೊಳ್ಳಲು, ಸಾಮಾನ್ಯ ಪ್ರಜೆಗಳಿಗೆ ತಮ್ಮ ದೈನಂದಿನ ಬದುಕಿನಲ್ಲಿ ಇದು ದಿಟವಾಗಿ ನಮ್ಮ ಸರ್ಕಾರ, ಇದು ದಿಟವಾಗಿ ಭಿನ್ನರೀತಿಯ ಸರ್ಕಾರ ಅನ್ನಿಸುವಂತೆ ಮಾಡಲು ನಮ್ಮೆಲ್ಲಾ ಪ್ರಯತ್ನಗಳನ್ನು ಮಾಡಿದ್ದೇವೆಯೇ' ಎಂದು ತಮ್ಮನ್ನು ತಾವೇ ಕೇಳಿಕೊಳ್ಳಲು ಜನತಾಪಕ್ಷ ಹಾಗೂ ಸರ್ಕಾರದ ಮುಖಂಡರಿಗೆ ಮನವಿ ಮಾಡಿದರು. ಇದೇ ಜೆ.ಪಿ.ಯವರು ನೀಡಿದ ಕೊಟ್ಟ ಕೊನೆಯ ಸಾರ್ವಜನಿಕ ಹೇಳಿಕೆಯಾಗಿತ್ತು. ಇದಾದ ಕೆಲವೇ ತಿಂಗಳುಗಳಲ್ಲಿ, ಅಂದರೆ ಅದೇ ವರ್ಷದ ಅಕ್ಟೋಬರ್ ಹೊತ್ತಿಗೆ ಇಂದಿರಾಗಾಂಧಿಯವರು ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆಯಲ್ಲಿ ಗೆದ್ದು ಮತ್ತೆ ತಮ್ಮಪಕ್ಷದ ಜನಮನ್ನಣೆಗಾಗಿ ಗಂಭೀರ ಪ್ರಯತ್ನ ನಡೆಸಿದ್ದರು. ಇಂದಿರಾಗಾಂಧಿಯವರಿಗೆ 'ಉತ್ತಮ ಭವಿಷ್ಯ' ಹಾರೈಸಿದ ಜೆ.ಪಿ., ನಂತರ ದಿನೇ ದಿನೇ ಹದಗೆಡುತ್ತಿದ್ದ ತಮ್ಮ ಆರೋಗ್ಯದ ಹಿನ್ನೆಲೆಯಲ್ಲಿ ಎಲ್ಲ ಸಂಘ ಸಂಸ್ಥೆಗಳೊಂದಿಗೆ ತಮ್ಮ ಸಂಬಂಧ ಕಡಿದುಕೊಂಡರು.

ಇದರ ನಂತರವೂ ಜೆ.ಪಿ., ವೈಯುಕ್ತಿಕ ನೆಲೆಯಲ್ಲಿ ರಾಷ್ಟ್ರದ ವಿದ್ಯಮಾನಗಳಿಗೆ ಪ್ರತಿಕ್ರಿಯಿಸುತ್ತಿದ್ದರು. ೭೮ರ ಜೂನ್‌ನಲ್ಲಿ ತಮ್ಮನ್ನು ಭೇಟಿಮಾಡಿದ ವಾಹಿನಿ ಕಾರ್ಯಕರ್ತರಿಗೆ ಸಂಪೂರ್ಣಕ್ರಾಂತಿಯ ಎರಡನೇ ಹಂತವನ್ನು—ಅಂದರೆ ಪ್ರಸಕ್ತ ಸರ್ಕಾರದ ಜಡತೆಯ ವಿರುದ್ಧ ಪ್ರತಿಭಟನೆಯಾಗಿ 'ವರ್ಗ ಸಂಘರ್ಷ'ವನ್ನು—ಆರಂಭಿಸುವಂತೆ ಸೂಚಿಸಿದರು. ಈ ಮಧ್ಯೆ ಜೆ.ಪಿ.ಯವರ ಮೌನ ಸಮ್ಮತಿಯೊಂದಿಗೆ ವಾಹಿನಿಕಾರ್ಯಕರ್ತರು, ಸರ್ವಸೇವಾಸಂಘದ ಸರ್ವೋದಯ ಕಾರ್ಯಕರ್ತರು, ರಾಷ್ಟ್ರೀಯ ಜನಸಮಿತಿ ಹಾಗೂ 'ಪ್ರಜಾಸತ್ತೆಗಾಗಿ ಪ್ರಜೆಗಳು' ವೇದಿಕೆಯ ಸದಸ್ಯರು ಒಟ್ಟಾಗಿ, ೭೯ರ ಹುತಾತ್ಮರ ದಿನದಂದು ಗಾಂಧಿಸಮಾಧಿ ಬಳಿಗೆ 'ಶಾಂತಿ ಜಾಥಾ' ನಡೆಸಿದರು. ಅಲ್ಲಿ ಒಂದು ದಿವಸದ ಉಪವಾಸ ಮಾಡಿ, ಜನತಾಪಕ್ಷದ ಮುಖಂಡರಿಗೆ ಅವರ ಪ್ರತಿಜ್ಞೆಯ ನೆನಪು ಮಾಡಿಕೊಟ್ಟರು.

ಆದರೆ ಈ ಹೊತ್ತಿಗೆ ಜೆ.ಪಿ.ಯವರೂ, ಸಂಪೂರ್ಣ ಕ್ರಾಂತಿ ಬಗೆಗಿನ ಕ್ಷೇತ್ರಕಾರ್ಯದ ಸಮೀಕ್ಷೆಗೆಂದು ೭೯ರ ಜನವರಿಯಲ್ಲಿ ಇಂಗ್ಲೆಂಡಿನ ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದಿಂದ ಬಂದಿದ್ದ ಜೆಫ್ರಿ ಓಸ್ಟರ್‌ಗಾರ್ಡ್ ಎಂಬ ರಾಜಕೀಯ ಶಾಸ್ತ್ರಜ್ಞರು, 'ಈಗ ಜನ ಸಮಿತಿಗಳ ಜನಾಂದೋಲನದ ಉತ್ಸಾಹ ಅಷ್ಟಾಗಿ ಏಕೆ ಕಂಡುಬರುತ್ತಿಲ್ಲ?' ಎಂದು ಕೇಳಿದ ಪ್ರಶ್ನೆಗೆ "ಬಹುಶಃ ಅವರಿಗೆ ಈಗ ಸಾಧಿಸಿರುವುದೇ ತೃಪ್ತಿ ತಂದಿರಬಹುದು. ಇದು ಅದೇ ಹಳೆಯ ತಪ್ಪು: ತಾವು ಕ್ರಾಂತಿಕಾರಿಗಳಾಗಿ ಸಮಾಜ ಪರಿವರ್ತನೆಗಾಗಿ ಮಾಡಬೇಕೆಂದಿದ್ದೆಲ್ಲವನ್ನೂ ಅಧಿಕಾರದಲ್ಲಿ, ಅಧಿಕಾರದೊಂದಿಗೆ ಮತ್ತು ಅಧಿಕಾರದ ಮೂಲಕ, ಮಾಡಬಹುದೆಂಬುದು. ಆದರೆ ಇದನ್ನೆಲ್ಲ ಮಾಡುವುದು ಅಸಾಧ್ಯ, ಇದಕ್ಕೆ ಜನಾಂದೋಲನ ಅಗತ್ಯವೆಂದು ಗೊತ್ತಾಗಲು ಅವರಿಗೆ ಸ್ವಲ್ಪ ಕಾಲ ಬೇಕಾಯಿತೇನೋ. ಆದರೆ ಕಾಲ ಮೀರಿತ್ತು—ಜನರ ಉತ್ಸಾಹ ಇಳಿದುಹೋಗಿತ್ತು, ಮತ್ತದೇ ವಾತಾವರಣವನ್ನು ಪುನರ್ನಿರ್ಮಾಣ ಮಾಡುವುದು ಕಷ್ಟವಾಗಿತ್ತು. ಇದು ಕಳೆದುಹೋದ ಮತ್ತೊಂದು ಐತಿಹಾಸಿಕ ಅವಕಾಶ... ಈಗ ಎಂತಹ ಹೊಸ ಪ್ರಯತ್ನಗಳಾಗಬೇಕೋ, ಅಗತ್ಯವೋ ನನಗೆ ತಿಳಿಯುತ್ತಿಲ್ಲ... ಆದರೆ ಯಾರಾದರೊಬ್ಬರು ಹೊಸ ಪ್ರಯತ್ನಗಳನ್ನು ಮಾಡಲೇಬೇಕಿದೆ... ನನ್ನ ಅನಾರೋಗ್ಯದ ಕಾರಣ ನಾನೀಗ ಈ

ಸಂದರ್ಭದಿಂದಲೇ ಹೊರಗುಳಿದುಬಿಟ್ಟಿದ್ದೇನೆ..." ಎಂಬ ಉತ್ತರದ ಮೂಲಕ ತಾವು ಎಲ್ಲದರ ಆಸೆ ಕೈಬಿಡುತ್ತಿರುವ ಸೂಚನೆ ನೀಡಿದ್ದರು.

ಜನತಾ ಸರ್ಕಾರದ ಅಂತಿಮ ಪತನ - ಜೆ.ಪಿ. ಕಣ್ಣೀರು

೧೯೭೯ರ ಮಧ್ಯಭಾಗದ ಹೊತ್ತಿಗೆ ಜನತಾಪಕ್ಷ ನಿರ್ಣಾಯಕವಾಗಿ ಒಡೆಯುವ ಹಂತ ತಲುಪಿತ್ತು. ಜನತಾ ಪಕ್ಷದ ಒಡಕಿನ ಮೂಲವೆಂದು ತಾವು ಬಗೆದಿದ್ದ ಚರಣಸಿಂಗರನ್ನು ಸಚಿವ ಸಂಪುಟದಿಂದ ಮೊರಾರ್ಜಿ ಕೈಬಿಟ್ಟಿದ್ದರು, ಜೆ.ಪಿ.ಯವರ ಕೋರಿಕೆಯ ಮೇರೆಗೆ ಮತ್ತೆ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿತ್ತಾದರೂ, ಮಧುಲಿಮೆಯೆ ಅವರು ಎತ್ತಿದ್ದ 'ದ್ವಿಸದಸ್ಯತ್ವ'ದ ವಿವಾದ ದೊಡ್ಡ ತಾತ್ವಿಕ ಜಿಜ್ಞಾಸೆಗೇ ಕಾರಣವಾಗಿ, ಸರ್ಕಾರ ಯಾವುದೇ ದಿನ ಬಿದ್ದುಹೋಗುವ ಆತಂಕ ಸೃಷ್ಟಿಯಾಯಿತು. ಕೊನೆಗೊಂದು ದಿನ ಜನತಾಪಕ್ಷದ 'ಜನಸಂಘೀಕರಣ'ದ ವಿರುದ್ಧ ಚರಣ್‌ಸಿಂಗ್ ನೇತೃತ್ವದಲ್ಲಿ 'ಸಮಾಜವಾದಿ' ಗುಂಪು ಬಂಡೆದ್ದ ಕಾರಣ ಮೊರಾರ್ಜಿ ದೇಸಾಯಿ ರಾಜೀನಾಮೆ ನೀಡಬೇಕಾಯಿತು. 'ಪಟ್ಟಭದ್ರ'ರನ್ನೂ 'ಫ್ಯಾಸಿಸ್ಟ್ ಕೋಮುವಾದಿ'ಗಳನ್ನು ಬಗ್ಗು ಬಡಿಯಲು ಕಾಂಗ್ರೆಸ್ ಸಹಕಾರ ಪಡೆದ ಚರಣಸಿಂಗ್ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು!

ಆ ಹೊತ್ತಿಗೆ ಸರ್ವ ಸೇವಾಸಂಘವು ಹನ್ನೊಂದು ರಾಜ್ಯಗಳ ಆಯ್ದ ೧೧೦ ವಿಭಾಗಗಳಲ್ಲಿ ಸಂಪೂರ್ಣಕ್ರಾಂತಿಯ ಕನಸನ್ನು ಒಂದಿಷ್ಟಾದರೂ ನನಸು ಮಾಡಲು ಅನುವಾಗುವಂತೆ ಜನಸಂಘಟನೆಯ ಪೂರ್ವಭಾವಿ ಸಿದ್ಧತೆಗಳನ್ನು ಕೈಗೊಂಡು ಜೆ.ಪಿ.ಯವರಿಗೂ ಆ ಬಗ್ಗೆ ಮಾಹಿತಿ ನೀಡಿತ್ತು. ಆದರೆ ಸಕಾರ ಇದನ್ನೂ ಪರಿಗಣಿಸಿ ಸಹಕಾರ ನೀಡದೇ ಹೋದ ಹಿನ್ನೆಲೆಯಲ್ಲಿ, ೭೯ರ ಜುಲೈನಲ್ಲಿ ಸಮಾವೇಶಗೊಂಡ ಸರ್ವಸೇವಾ ಸಂಘದ ಸಮ್ಮೇಳನವು ಕನಿಷ್ಠ ರಾಜಕೀಯ ಮರ್ಯಾದೆ ಯನ್ನಾಗಲೀ ಘನತೆಯನ್ನಾಗಲೀ ತೋರದೆ ರಾಷ್ಟ್ರಪಿತನ ಸಮಾಧಿ ಮುಂದೆ ಕೈಗೊಂಡ ಪ್ರತಿಜ್ಞೆಯನ್ನು ಗಾಳಿಗೆ ತೂರಿದ್ದಕ್ಕಾಗಿ, ಜನತಾಪಕ್ಷದ ಮುಖಂಡರಿಗೆ, ಛೀಮಾರಿ ಹಾಕಿತು. ಜೆ.ಪಿ. ತಮ್ಮ 'ಜಿಗುಪ್ಸೆ'ಯನ್ನಷ್ಟೇ ವ್ಯಕ್ತಪಡಿಸಿ ಈ ಛೀಮಾರಿಗೆ ತಮ್ಮ ಸಾಂಕೇತಿಕ ಸಮ್ಮತಿ ನೀಡಿದರು. ಈ ಮಧ್ಯೆ 'ಇಂದಿರಾ ರಾಜಕಾರಣ'ಕ್ಕೆ ಶರಣಾಗಲು ನಿರಾಕರಿಸಿದ ಚರಣಸಿಂಗರು ಸಂಸತ್ತನ್ನು ವಿಸರ್ಜಿಸಿ ಡಿಸೆಂಬರ್ ಹೊತ್ತಿಗೆ ಚುನಾವಣೆಗಳನ್ನು ನಡೆಸಲು ರಾಷ್ಟ್ರಪತಿಯವರಿಗೆ ಶಿಫಾರಸ್ಸು ಮಾಡಿದಾಗ, ಜೆ.ಪಿ. ಅವರ ಕಣ್ಮುಂದೆಯೇ ಅವರು ಮಹತ್ವಾಕಾಂಕ್ಷೆಯಿಂದ ರೂಪಿಸಿದ್ದ ಜನತಾಸರ್ಕಾರ ನಾಮಾವಶೇಷವಾಯಿತು. ಜೆ.ಪಿ. ಮೌನವಾಗಿ ಕಣ್ಣೀರಿಡುವುದರ ಹೊರತಾಗಿ ಮತ್ತೇನೂ ಮಾಡುವ ಸ್ಥಿತಿಯಲ್ಲಿರಲಿಲ್ಲ... ಮುಂದಿನ ಒಂದೆರಡು ತಿಂಗಳುಗಳನ್ನು ಜೆ.ಪಿ. ತೀವ್ರ ಅಸ್ವಸ್ಥತೆಯ ನಡುವೆ ಮೌನವಾಗಿ ಹಾಸಿಗೆಯಲ್ಲೇ ಕಳೆದರು.

ಮಹಾಮೌನದೆಡೆಗೆ...

೧೯೭೯ರ ಅಕ್ಟೋಬರ್ ೧ ರಂದು ಪಾಟ್ನಾದ ಕದಂಕುಂವಾದ ತಮ್ಮ ಮನೆಯಲ್ಲಿ ಹಿಂದೂ ಸಂವತ್ಸರದ ಪ್ರಕಾರ ತಮ್ಮ ೭೮ನೆಯ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಜೆ.ಪಿ.,

ತಮ್ಮ ವೈದ್ಯ ಡಾ. ಸಿ.ಪಿ. ಠಾಕೂರ್ ಅವರೊಂದಿಗೆ ಮಾತನಾಡುತ್ತಾ 'ನಾನು ಸಾಕಷ್ಟು ಬದುಕಿದ್ದಾಯಿತು. ಇನ್ನು ಇಲ್ಲಿಂದ ಜಾಗ ಖಾಲಿಮಾಡಬೇಕು' ಎಂದರು. ನಂತರ ತಮ್ಮ ಆರೋಗ್ಯ ವಿಚಾರಿಸಲು ಬಂದ ಸಮಾಜವಾದಿ ಗೆಳೆಯ ಅಚ್ಯುತ ಪಟವರ್ಧನರಿಗೆ 'ನಾನು ಸುಮ್ಮನೆ ದಿನ ಸವೆಸುತ್ತಾ ಸಾವಿಗಾಗಿ ಕಾಯುತ್ತಿದ್ದೇನೆ' ಎಂದಷ್ಟೇ ಹೇಳಿದರು. ಅದೇ ಅಕ್ಟೋಬರ್ ೮ರ ಮುಂಜಾನೆ ೫.೩೦ರ ಹೊತ್ತಿಗೆ ಜೆ.ಪಿ. ಹೃದಯಾಘಾತದಿಂದ ನಿದ್ದೆಯಲ್ಲೇ ಮಹಾಮೌನಕ್ಕೆ ಸಂದಿದ್ದರು.

ಉಸ್ತುವಾರಿ ಪ್ರಧಾನಮಂತ್ರಿಯಾಗಿದ್ದ ಚರಣ್ ಸಿಂಗ್ ನೇತೃತ್ವದ ಕೇಂದ್ರ ಸರ್ಕಾರ 'ಸ್ವಾತಂತ್ರ್ಯೋತ್ತರ ಭಾರತದ ಆತ್ಮಸಾಕ್ಷಿ'ಯಂತೆ ಕೆಲಸಮಾಡಿದ ಮಹಾನಾಯಕನ ಗೌರವಾರ್ಥ ಏಳು ದಿನಗಳ ರಾಷ್ಟ್ರೀಯ ಶೋಕವನ್ನು ಘೋಷಿಸಿತು. ಎಲ್ಲ ರಾಜ್ಯ ಸರ್ಕಾರಗಳೂ ಅಂದು ಸಾರ್ವತ್ರಿಕ ರಜೆ ಘೋಷಿಸಿ, ಲೋಕನಾಯಕನಿಗೆ ತಮ್ಮ ಗೌರವ ಅರ್ಪಿಸಿದವು. ದೇಶ ವಿದೇಶಗಳಿಂದ ಶ್ರದ್ಧಾಂಜಲಿ ಸಂದೇಶಗಳು ಬಂದವು. ವಿಶ್ವಸಂಸ್ಥೆಯ ಸಾಮಾನ್ಯ ಸಭೆ ಶೋಕ ನಿರ್ಣಯವನ್ನು ಅನುಮೋದಿಸಿತು.

ಕದಂಕುಂವಾದಲ್ಲಿ ಜನಸಾಗರವೇ ನೆರೆಯಿತು. ಲೋಕನಾಯಕನ ಅಂತಿಮದರ್ಶನ ಪಡೆಯಲು ಕಿಕ್ಕಿರಿದ ಜನಸ್ತೋಮವನ್ನು ತಹಬಂದಿಯಲ್ಲಿಡಲು ಪೋಲೀಸರು ಲಾಠಿಪ್ರಹಾರ ಮಾಡಬೇಕಾಯಿತು. ಪರಿಸ್ಥಿತಿ ತಹಬಂದಿಗೆ ಬರದಾದಾಗ ಪಾರ್ಥಿವ ಶರೀರವನ್ನು ಗಾಂಧಿ ಮೈದಾನದ ಬಳಿಯ ವಿಶಾಲವಾದ ಶ್ರೀಕೃಷ್ಣ ಸ್ಮಾರಕ ಭವನಕ್ಕೆ ಕೊಂಡೊಯ್ಯಲಾಯಿತು. ಮಾರನೆಯ ದಿನದ ಬೆಳಿಗ್ಗೆಯವರಿಗೂ ದೇಶದ ವಿವಿಧ ಭಾಗಗಳಿಂದ ಬಂದ ಗಣ್ಯ ಅತಿಥಿಗಳೂ ಜನಸಾಮಾನ್ಯರೂ ಅಂತಿಮದರ್ಶನಕ್ಕೆ ಬರುತ್ತಲೇ ಇದ್ದರು.

ಅಕ್ಟೋಬರ್ ೧೦ರ ಮಧ್ಯಾಹ್ನ ಗಂಗಾನದಿಯ ತಟದಲ್ಲಿ ಬೃಹತ್ ಜನಸ್ತೋಮದ 'ಜೆ.ಪಿ. ಜಿಂದಾಬಾದ್, ಲೋಕನಾಯಕ ಅಮರ್ ರಹೇ!' ಎಂಬ ಮುಗಿಲುಮುಟ್ಟುವ ಘೋಷಣೆಗಳ ಮಧ್ಯೆ, ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ, ಉಪರಾಷ್ಟ್ರಪತಿ ಎಂ. ಹಿದಾಯತುಲ್ಲಾ, ಪ್ರಧಾನಿ ಚರಣಸಿಂಗ್ ಹಾಗೂ ಇನ್ನೂ ಅನೇಕ ರಾಷ್ಟ್ರೀಯ ನಾಯಕರು, ಹಿರಿಯ ಗಾಂಧಿವಾದಿಗಳು ಹಾಗೂ ಲೇಖಕ-ಬುದ್ಧಿಜೀವಿಗಳ ಸಮಕ್ಷಮದಲ್ಲಿ ಸಕಲ ಸರ್ಕಾರಿ ಮರ್ಯಾದೆಗಳೊಂದಿಗೆ, ಜೆ.ಪಿ. ಅವರ ತಮ್ಮನ ಮಗ ಅನಿಲ್‌ಕುಮಾರ್ ಸಿನ್ಹಾ ಪಾರ್ಥಿವಶರೀರಕ್ಕೆ ಅಗ್ನಿಸ್ಪರ್ಶ ಮಾಡಿದರು.

ಅಂತೂ ಜೆ.ಪಿ. ಎಂಬ ಸತತ ಪ್ರಯೋಗಗಳ ಬದುಕು, ಮುಗಿಯದ ಕ್ರಾಂತಿಯ ಕನಸಿನೊಂದಿಗೇ ಕೊನೆಗೊಂಡಿತ್ತು.

ಆ ನಂತರ......

ಅನತಿ ಕಾಲದಲ್ಲೇ ಕಾಂಗ್ರೆಸ್, ತುರ್ತು ಪರಿಸ್ಥಿತಿ ಅವಧಿಯ ಅನಾಚಾರಗಳ ವಿರುದ್ಧ ಹೂಡಿದ್ದ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಡ ಹೇರತೊಡಗಿದ್ದಾಗ, ಚರಣಸಿಂಗರು ಸಂಸತ್ತನ್ನು ವಿಸರ್ಜಿಸಿ ಡಿಸೆಂಬರ್‌ನಲ್ಲಿ ಹೊಸ ಚುನಾವಣೆಗಳನ್ನು ಘೋಷಿಸುವಂತೆ ರಾಷ್ಟ್ರಪತಿಯವರಿಗೆ ಶಿಫಾರಸು ಮಾಡಿದರು. ಇದರ ವಿರುದ್ಧ ಮೂಲ

ಜನತಾ ಪಕ್ಷದ ಅಧ್ಯಕ್ಷ ಚಂದ್ರಶೇಖರ್ ತಮ್ಮ ಪಕ್ಷದ ಜಗಜೀವನರಾಂ ನೇತೃತ್ವದಲ್ಲಿ ಸರ್ಕಾರ ರಚಿಸಲು ಅವಕಾಶ ನೀಡಿಬೇಕೆಂದು ಮನವಿ ಸಲ್ಲಿಸಿದರೂ, ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿಯವರು ಅದಕ್ಕೆ ಅವಕಾಶ ನೀಡದೆ ಸಂಸತ್ತನ್ನು ವಿಸರ್ಜಿಸಿದರು.

ಡಿಸೆಂಬರ್‌ನಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತು. ಇಂದಿರಾಗಾಂಧಿ ಮತ್ತೆ ಪ್ರಧಾನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಚರಣಸಿಂಗ್ ಮತ್ತು ಚಂದ್ರಶೇಖರ್ ನೇತೃತ್ವಗಳಲ್ಲಿ ಎರಡು ಹೋಳಾಗಿದ್ದ ಜನತಾ ಪಕ್ಷ ಜನತೆಯ ಸಂಪೂರ್ಣ ವಿಶ್ವಾಸವನ್ನು ಕಳೆದು ಕೊಂಡಿತ್ತು.... ಜೆ.ಪಿ.ಯವರ 'ಸಂಪೂರ್ಣ ಕ್ರಾಂತಿ'ಯ ಕನಸು ಮೂರೇ ವರ್ಷಗಳಲ್ಲಿ ಛಿದ್ರವಾಗಿತ್ತು. ಇದಕ್ಕೆ ಬಹುಶಃ ಕಾರಣ, ಈ ಕ್ರಾಂತಿಯ ಕನಸನ್ನು ಅವರು ರಾಜಕೀಯ ಅನಿವಾರ್ಯತೆಗಳ ಅವಸರದಲ್ಲಿ ತಾತ್ವಿಕ ತೇಪೆ ಹಾಕಿ ರೂಪಿಸಿದ ರಾಜಕೀಯ ಪಕ್ಷವೊಂದರ ಸಹಕಾರದಲ್ಲಿ ನನಸು ಮಾಡಲು ಹೊರಟದ್ದು ಇರಬಹುದು. ಅಲ್ಲದೆ, ಸಂಪೂರ್ಣ ಕ್ರಾಂತಿಯ ಅದರ ಮೂರ್ತ ಹಾಗೂ ಸ್ಪಷ್ಟ ರೂಪಗಳು ಅರಳುವ ಮುನ್ನವೇ ಅವುಗಳ ರಾಜಕೀಯ ಪ್ರಯೋಗಗಳಲ್ಲಿ ತೊಡಗಿಕೊಳ್ಳಬೇಕಾದ ಒತ್ತಡಗಳಿಗೆ ಅವರು ಒಳಗಾಗಬೇಕಾಯಿತು. ಜೆ. ಪಿ. ಅವರಸರದಲ್ಲಿದ್ದಂತಿದ್ದರು. ಕಾಲ ಕೂಡ ಅವರಿಗೆ ಕಾಯುವ ಸ್ಥಿತಿಯಲ್ಲಿರಲಿಲ್ಲ.... ಏಕೆಂದರೆ ರಾಜ ನೀತಿಯನ್ನು ತೊರೆದು ಲೋಕ ನೀತಿಯನ್ನು ಅರಸಿಕೊಂಡು ಹೋದ ಅವರು ಮತ್ತೆ ರಾಜನೀತಿಯಡೆಗೆ ಕಣ್ಣು ಹಾಯಿಸುವ ಅನಿವಾರ್ಯತೆ ಉಂಟಾಗುವ ವೇಳೆಗೆ ಇಳಿ ವಯಸ್ಸಿಗೆ ಸಂದಿಸಿದ್ದರು. ಜೆ.ಪಿ. ತಮ್ಮ ಕಣ್ಮುಂದೆಯೇ ತಮ್ಮ ಕನಸು ಕುಸಿಯುತ್ತಿರುವುದನ್ನು ನೋಡಿ ಅಸಹಾಯಕರಾಗಿ ಕಣ್ಮುಚ್ಚಬೇಕಾಯಿತು.

ಇದೇ ಭಾರತೀಯ ರಾಜಕಾರಣದ ಕೊನೆಯ ತಾತ್ವಿಕ ಹೋರಾಟ ಕೂಡಾ ಎನಿಸಿತು. ಆದರೆ ಅದು ಹೀಗೆ ಮುಕ್ತಾಯವಾಗುವಂತಾದುದೇ ಇಂದು ನಾವು ವಿಶ್ವಬ್ಯಾಂಕ್ ಪ್ರಣೀತ ಅಭಿವೃದ್ಧಿ ರಾಜಕಾರಣಕ್ಕೆ ಸಿಕ್ಕಿ, ಭಾರತದ ಒಂದು ಭಾಗ ಕ್ಯಾಲಿಫೋರ್ನಿಯಾ ಮತ್ತೊಂದು ಭಾಗ ಇಥಿಯೋಪಿಯಾ ಆಗಬಹುದಾದ ಬಿಕ್ಕಟ್ಟನ್ನು ಎದುರಿಸುವಂತಾಗಿರುವುದು ಎಂದರೆ ಉತ್ಪ್ರೇಕ್ಷೆಯ ಮಾತಾಗದೇನೋ!

■

---

* ಇವು ಕೂಡಾ ಮುಂದೆ ನಾಲ್ಕಾರು ಹೋಳುಗಳಾಗಿ;ಆರ್. ಎಸ್. ಎಸ್. ಮೂಲದವರು ಭಾರತೀಯ ಜನತಾ ಪಕ್ಷವನ್ನು ಕಟ್ಟಿಕೊಂಡು ಅದನ್ನು ಬೆಳೆಸಿದರೆ, ಮಿಕ್ಕವು ಮತ್ತಷ್ಟು ಹೋಳುಗಳಾಗಿ 'ಜನತಾ ಪರಿವಾರ' ವೆಂಬ ಹೆಸರಿನಲ್ಲಿ ಈಗ ಕೌಟುಂಬಿಕ ರಾಜಕಾರಣದಲ್ಲಿ ನಿರತವಾಗಿವೆ!



ಡಾ॥ ಲೋಹಿಯಾ ಹಾಗೂ ಪತ್ನಿ ಪ್ರಭಾವತಿ ಅವರೊಂದಿಗೆ (೧೯೫೨)




ಪಾಟ್ನಾದ ಪ್ರತಿಭಟನಾ ಸಭೆಯೊಂದರಲ್ಲಿ (ಜೂನ್ ೫, ೧೯೭೪)



ಪಾಟ್ನಾದಲ್ಲಿ ವಿಧಾನಸಭೆ ಮುತ್ತಿಗೆ ಕಾರ್ಯಕ್ರಮದಲ್ಲಿ ಜೆ.ಪಿ. ಮೇಲೆ ಹಲ್ಲೆ (ನವೆಂಬರ್ ೪, ೧೯೭೪)



ದಾವಣಗೆರೆಯಲ್ಲಿ ಕಡಿದಾಳು ಮಂಜಪ್ಪ ಮತ್ತು ಪಿ. ವೆಂಕೋಬರಾಯರೊಂದಿಗೆ, ಜೆ.ಪಿ. (ಮೇ. ೧೯೭೫)



ದೆಹಲಿಯ ಬೋಟ್ ಕ್ಲಬ್‌ನಲ್ಲಿ ಸಾರ್ವಜನಿಕ ಸಭೆ (ಮಾರ್ಚ್ ೬, ೧೯೭೫)



ರಾಜಘಾಟ್‌ನಲ್ಲಿ ಜನತಾಪಕ್ಷದ ನಾಯಕರಿಗೆ ಪ್ರತಿಜ್ಞಾವಿಧಿ (ಮಾರ್ಚ್ ೨೪, ೧೯೭೭)

ಅನುಬಂಧ-೧

೧೪ ಅಂಶಗಳ ಕಾರ್ಯಕ್ರಮ (೧೯೫೩)

೧. ಅ) ಸಾಮಾಜಿಕ ಬದಲಾವಣೆಗೆ ಇರುವ ಅಡ್ಡಿಗಳನ್ನು ನಿವಾರಿಸಲು

ಆ) ರಾಜಮಹಾರಾಜರಿಗೆ, ಅಧಿಕಾರಶಾಹಿಗೆ ನೀಡಲಾಗಿರುವ ಸಂವೈಧಾನಿಕ ಅನುಕೂಲಗಳನ್ನು ಹಿಂತೆಗೆದುಕೊಳ್ಳಲು

ಇ) ರಾಜ್ಯಸಭೆಯನ್ನು ರದ್ದುಪಡಿಸಲು

ಸಂವಿಧಾನ ತಿದ್ದುಪಡಿ ಮಾಡುವುದು.

೨. ಅ) ರಾಜಕೀಯ ಅಧಿಕಾರ ಹಾಗೂ ಆಡಳಿತಾಧಿಕಾರಗಳ ವಿಕೇಂದ್ರೀಕರಣವೂ ಒಳಗೊಂಡ ಆಡಳಿತಾತ್ಮಕ ಸುಧಾರಣೆ

ಆ) ಕಾನೂನು ಮತ್ತು ಕಾನೂನುಸಂಬಂಧಿಯಾದ ವಿಧಿ ವಿಧಾನಗಳ ಸರಳೀಕರಣ

ಇ) ಭ್ರಷ್ಟಾಚಾರ ನಿವಾರಣೆಗೆ ಕ್ಷಿಪ್ರ ಮತ್ತು ಪರಿಣಾಮಕಾರಿ ವ್ಯವಸ್ಥೆ.

೩. ಅ) ಭಾಷೆ, ಆರ್ಥಿಕತೆ ಮತ್ತು ಆಡಳಿತಾತ್ಮಕತೆಗಳನ್ನು ಪರಿಗಣಿಸಿ ಭಾರತದ ಆಡಳಿತ ನಕ್ಷೆಯ ಪರಿಷ್ಕರಣೆ. ಈ ಅಂಶಗಳ ಆಧಾರದ ಮೇಲೆ ರಾಜ್ಯಗಳ ಪುನರ್ವಿಂಗಡಣೆಗಾಗಿ ವಿವರಗಳನ್ನು ಸಿದ್ಧಪಡಿಸಲು ಸಂಸತ್ತಿನಿಂದ ಆಯೋಗದ ನೇಮಕ.

ಆ) ಪ್ರಾದೇಶಿಕ ರಾಜ್ಯಪಾಲರು, ರಾಜ್ಯ ಉಚ್ಚನ್ಯಾಯಾಲಯಗಳು ಹಾಗೂ ಇತರೆ ಉನ್ನತ ಹಂತದ ತೀರ್ಪುಮಂಡಳಿಗಳು ಮತ್ತು ಸಾರ್ವಜನಿಕ ಸೇವಾ ಆಯೋಗಗಳ ನೇಮಕರಚನೆ ಮೂಲಕ ಆಡಳಿತಾತ್ಮಕ ವೆಚ್ಚವನ್ನು ತಗ್ಗಿಸುವುದು.

೪. ಅ) ಆರ್ಥಿಕ ಅಸಮಾನತೆ ಹಾಗೂ ಶೋಷಣೆಯನ್ನು ನಿವಾರಿಸಲು ಭೂ ಹಿಡುವಳಿ ಮಿತಿಯನ್ನು ನಿಗದಿಪಡಿಸುವುದು; ಇದರ ಲಾಭ ಭೂರಹಿತರಿಗೆ ಮತ್ತು ಬಡ ರೈತರಿಗೆ ತಲುಪುವಂತೆ ಯೋಜನೆಗಳನ್ನು ರೂಪಿಸುವುದು.

ಆ) ಒಕ್ಕಲೆಬ್ಬಿಸುವ ಎಲ್ಲ ಪ್ರಯತ್ನಗಳನ್ನು ಕೂಡಲೇ ನಿಲ್ಲಿಸುವುದು.

ಇ) ಹಿಡುವಳಿಗಳು ಒಡೆದು ಹೋಗದ ಹಾಗೆ ಅವುಗಳನ್ನು ಒಟ್ಟುಗೂಡಿಸಲು ಅನುವು ಮಾಡಿಕೊಡುವಂತಹ ಶಾಸನ ರಚನೆ.

ಈ) ಜಮೀನ್ದಾರಿ ಪದ್ಧತಿಯ ಅವಶೇಷ ರೂಪಗಳ ನಿರ್ಮೂಲನ

ಉ) ವಿವಿಧೋದ್ದೇಶ ಸಂಘಗಳ ಮೂಲಕ ಕಡ್ಡಾಯವಾಗಿ ಗ್ರಾಮೀಣ ಆರ್ಥಿಕತೆಯನ್ನು ಸಹಕಾರಿ ಆರ್ಥಿಕತೆಯನ್ನಾಗಿ ರೂಪಾಂತರಿಸುವುದು.

ಊ) ಪ್ರಭುತ್ವವು ಆದಷ್ಟೂ ಮಟ್ಟಿಗೆ ರೈತನೊಂದಿಗೆ, ವ್ಯಕ್ತಿಗತವಾಗಿ ವ್ಯವಹರಿಸದೆ ಒಂದು ಸಹಕಾರಿ ಅಥವಾ ಪಂಚಾಯತ್ ರೂಪದಲ್ಲಿ ಸಂಘಟಿತವಾಗಿರುವ ರೈತ ಸಮುದಾಯದೊಂದಿಗೇ ವ್ಯವಹರಿಸುವುದು. ಇದು ಕಂದಾಯ ವಸೂಲಿಯನ್ನೂ ಒಳಗೊಂಡಿದ್ದು, ಇದರ ಒಂದು ಭಾಗ ವಿವಿಧೋದ್ದೇಶ ಸಂಘ ಅಥವಾ ಪಂಚಾಯತ್ ರೂಪದಲ್ಲಿ ಸಂಘಟಿತವಾಗಿರುವ ಹಳ್ಳಿಯ ಪಾಲಿಗೇ ಸೇರುವುದು.

೫. 'ಗ್ರಾಮ ಸಮುದಾಯ'ಗಳ ಮೂಲಕ ಬಂಜರುಭೂಮಿ ಅಭಿವೃದ್ಧಿ ಮತ್ತು ಅದರಲ್ಲಿ ಭೂರಹಿತರ ಪುನರ್ವಸತಿ; ಯಾವುದೇ ಬಂಜರು ಭೂಮಿಯನ್ನು ಬಂಡವಾಳಶಾಹಿ ಬೇಸಾಯಕ್ಕಾಗಿ ಮಂಜೂರು ಮಾಡದಿರುವುದು.

೬. ಬ್ಯಾಂಕುಗಳ ಹಾಗೂ ವಿಮಾ ಸಂಸ್ಥೆಗಳ ರಾಷ್ಟ್ರೀಕರಣ

೭. ಸರ್ಕಾರೀ ವ್ಯಾಪಾರ ವ್ಯವಸ್ಥೆಯ ಪ್ರಗತಿಶೀಲ ಅಭಿವೃದ್ಧಿ

೮. ಸರ್ಕಾರ ಅಥವಾ ಸಹಕಾರಿಗಳ ಅಥವಾ ಕಾರ್ಮಿಕ ಮಂಡಳಿಗಳ ನಿಗಮಗಳಿಂದ ವಿವಿಧ ಕೈಗಾರಿಕೆಗಳಲ್ಲಿನ ಆಯ್ದ ಕಾರ್ಖಾನೆಗಳ ಮಾಲೀಕತ್ವ ಹಾಗೂ ನಿರ್ವಹಣೆ. ಸರ್ಕಾರೀ ಉದ್ಯಮ ಸಂಸ್ಥೆಗಳಿಗೆ ಪರಿಣಿತ ಸಲಹೆ ಹಾಗೂ ಆಡಳಿತ ಸಿಬ್ಬಂದಿ ಒದಗಿಸುವ ತಂತ್ರಜ್ಞರು ಹಾಗೂ ವ್ಯವಸ್ಥಾಪಕರ ವೇದಿಕೆಗಳ ನಿರ್ಮಾಣ.

೯. 'ಒಂದು ಕಾರ್ಖಾನೆಗೆ ಒಂದು ಕಾರ್ಮಿಕ ಸಂಘ' ತತ್ವದ ಆಧಾರದ ಮೇಲೆ ಕಾರ್ಮಿಕ ಚಳುವಳಿಯ ಏಕೀಕರಣ—ಇದರಿಂದ ಕಾರ್ಮಿಕ ಸಂಘಗಳು ಸಾಮಾಜಿಕ ಹೊಣೆಯುಳ್ಳ ಸಂಸ್ಥೆಗಳಾಗಿಯೂ ಮಾರ್ಪಾಡಾಗಲು ಸಾಧ್ಯವಾಗುವುದು.

೧೦. ಕಲ್ಲಿದ್ದಲು ಮತ್ತು ಮುಖ್ಯ ಖನಿಜಗಳನ್ನು ಹೊರತೆಗೆಯುವ ಇತರ ಗಣಿಗಳ ರಾಷ್ಟ್ರೀಕರಣ.

೧೧. ಸರ್ಕಾರೀ ಉದ್ಯಮ ಸಂಸ್ಥೆಗಳ ನಿರ್ವಹಣೆಯಲ್ಲಿ ಕಾರ್ಮಿಕರಿಗೂ ಪಾತ್ರ.

೧೨. ದೊಡ್ಡ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ವಲಯ ವಿಂಗಡಣೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಸ್ಥಾಪನೆ, ಪ್ರೋತ್ಸಾಹನೆ ಮತ್ತು ಸಂರಕ್ಷಣೆ.

೧೩. ದೇಶದಲ್ಲಿ ಆರ್ಥಿಕ ಸಮಾನತೆಯನ್ನು ಸಾಧಿಸುವ ದಿಸೆಯಲ್ಲಿನ ಮೊದಲ ಹೆಜ್ಜೆಯಾಗಿ ಸರ್ಕಾರಿ ಸೇವಾ ವಲಯದಲ್ಲಿನ ಉನ್ನತ ಸಂಬಳ-ಸಾರಿಗೆ ಶ್ರೇಣಿಗಳ ಕಡಿತ.

೧೪. 'ಸ್ವದೇಶಿ' ಆಂದೋಲನದ ಪುನಃಶ್ಚೇತನ ಹಾಗೂ ಅದು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಹರಡುವಂತೆ ಉತ್ತೇಜನ.

ಅನುಬಂಧ-೨

ಸೆರೆಮನೆಯಿಂದ ಪ್ರಧಾನಿಗೆ ಬರೆದ ಪತ್ರ (೧೯೭೫)

ಜುಲೈ ೨೧, ೧೯೭೫
ಚಂಡೀಘಡ

ಪ್ರಿಯ ಪ್ರಧಾನಮಂತ್ರಿಯವರೆ,

ನಿಮ್ಮ ಭಾಷಣಗಳ ಹಾಗೂ ಸಂದರ್ಶನಗಳನ್ನು ಕುರಿತ ಪತ್ರಿಕಾ ವರದಿಗಳನ್ನು ಕಂಡು ನಾನು ಗಾಬರಿಗೊಂಡಿದ್ದೇನೆ. (ನೀವು ಕೈಗೊಂಡಿರುವ ಕ್ರಮವನ್ನು ಸಮರ್ಥಿಸಲು ಪ್ರತಿದಿನವೂ ನೀವು ಏನಾದರೊಂದು ಹೇಳುತ್ತಿರುವುದನ್ನು ನೋಡಿದರೇನೇ, ನೀವು ಪಾಪಪ್ರಜ್ಞೆಯಿಂದ ನರಳುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ) ಪತ್ರಿಕೆಗಳ ಬಾಯಿ ಮುಚ್ಚಿಸಿ ಮತ್ತು ಎಲ್ಲ ರೀತಿಯ ಸಾರ್ವಜನಿಕ ಭಿನ್ನಾಭಿಪ್ರಾಯವನ್ನು ದಮನ ಮಾಡಿ, ಈಗ ಯಾವುದೇ ಟೀಕೆ ಅಥವಾ ನಿರಾಕರಣೆಯ ಭಯವಿಲ್ಲದೆ ನಿಮ್ಮ ಬೊಗಳೆ ಹಾಗೂ ಸುಳ್ಳುಗಳನ್ನು ಮುಂದುವರಿಸಿದ್ದೀರಿ. ಈ ಮೂಲಕ ನೀವು ಸಾರ್ವಜನಿಕರ ದೃಷ್ಟಿಯಲ್ಲಿ ನಿಮ್ಮನ್ನು ಸಮರ್ಥಿಸಿಕೊಳ್ಳಬಲ್ಲಿರಿ ಮತ್ತು ವಿರೋಧಪಕ್ಷಗಳನ್ನು ರಾಜಕೀಯ ಅಧಃಪತನದತ್ತ ತಳ್ಳಬಲ್ಲಿರಿ ಎಂದು ಭಾವಿಸಿದ್ದರೆ ಅದು ನಿಮ್ಮ ದೊಡ್ಡ ತಪ್ಪಾಗುತ್ತದೆ. ಈ ಬಗ್ಗೆ ನಿಮಗೆ ಸಂದೇಹವಿದ್ದರೆ, ತುರ್ತುಪರಿಸ್ಥಿತಿಯನ್ನು ರದ್ದುಮಾಡಿ, ಜನರಿಗೆ ಅವರ ಮೂಲಭೂತ ಹಕ್ಕುಗಳನ್ನು ಹಿಂತಿರುಗಿಸಿ, ಪತ್ರಿಕಾ ಸ್ವಾತಂತ್ರ್ಯವನ್ನು ಪುನರ್ ಸ್ಥಾಪಿಸಿ, ತಮ್ಮ ದೇಶಾಭಿಮಾನೀ ಕರ್ತವ್ಯವನ್ನು ನಿರ್ವಹಿಸಿದ ಏಕಮಾತ್ರ ಅಪರಾಧಕ್ಕಾಗಿ ನಿಮ್ಮಿಂದ ಬಂಧನಕ್ಕೊಳಗಾಗಿರುವ ಅಥವಾ ಸ್ಥಾನಬದ್ಧತೆಯಲ್ಲಿರುವ ಎಲ್ಲರನ್ನೂ ಬಿಡುಗಡೆ ಮಾಡಿ, ನನ್ನ ಈ ಮೇಲಿನ ಮಾತನ್ನು ಪರೀಕ್ಷಿಸಬಹುದು. ನಿಮ್ಮ ನಿಜಸ್ವರೂಪವನ್ನು ತಿಳಿದುಕೊಳ್ಳಬಲ್ಲ ಆರನೇ ಇಂದ್ರಿಯವನ್ನು ಪಡೆದಿರುವ ಜನತೆಗೆ, ನಿಮ್ಮ ಅಧಿಕಾರಾವಧಿಯ ೯ ವರ್ಷಗಳು ಕಡಿಮೆಯೇನೂ ಅಲ್ಲ ತಾಯಿ.

ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯೊಂದನ್ನು ರೂಪಿಸಲಾಗಿತ್ತು ಮತ್ತು ನಾಗರಿಕ ಹಾಗೂ ಮಿಲಿಟರಿ ಪಡೆಗಳಲ್ಲಿ ಅವಿಧೇಯತೆಯನ್ನು ಪ್ರಚೋದಿಸುವ ಪ್ರಯತ್ನವನ್ನು ಒಬ್ಬ ವ್ಯಕ್ತಿ ಮಾಡುತ್ತಿದ್ದನು ಎಂಬುದೇ, ನೀವು ಪದೇ ಪದೇ ಹಾಡುವ ಹಾಡಿನ ಸಾರಾಂಶ ಎಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಇವೇ ನಿಮ್ಮ ಪ್ರಮುಖ ಅಸ್ತ್ರಗಳೆಂಬುದನ್ನೂ ಬಲ್ಲೆ. ಆದರೆ ಇನ್ನೂ ಕೆಲವು ಸಣ್ಣಪುಟ್ಟ ಅಸ್ತ್ರಗಳೂ ಇವೆ, ನಿಮ್ಮ ಬಳಿ. ಪ್ರಜಾಪ್ರಭುತ್ವಕ್ಕಿಂತ ದೇಶವೇ ಮುಖ್ಯವಾದದ್ದು ಮತ್ತು ಭಾರತಕ್ಕೆ ಸಾಮಾಜಿಕ ಪ್ರಜಾಪ್ರಭುತ್ವ ಸೂಕ್ತ ಮುಂತಾದ,

ಇಂತಹುದೇ ತಮ್ಮದೇ ಆದ ನುಡಿಮುತ್ತುಗಳನ್ನು ಸಂದರ್ಭ ಸಿಕ್ಕಾಗಲೆಲ್ಲಾ ಉದುರಿಸುತ್ತಿದ್ದೀರಿ.

ಈ ಪ್ರಸಂಗದ ಖಳನಾಯಕ ನಾನೇ ಆಗಿರುವುದರಿಂದ, ನಾನು ಹೇಳಬೇಕಾದ್ದನ್ನು ಹೇಳಬಯಸುವೆ. ಈ ಬಗ್ಗೆ ನಿಮಗೆ ಆಸಕ್ತಿ ಇಲ್ಲದಿರಬಹುದು-ಏಕೆಂದರೆ ನಿಮ್ಮೆಲ್ಲಾ ಬೊಗಳೆ ಹಾಗೂ ಸುಳ್ಳುಗಳು ಕ್ರೋಧಮಯ ಹಾಗೂ ಉದ್ದೇಶಪೂರ್ವಕವಾಗಿವೆ-ಆದರೆ ಕನಿಷ್ಠಪಕ್ಷ, ಇಲ್ಲಿ ಸತ್ಯವಾದರೂ ದಾಖಲಾದಂತಾಗುತ್ತದೆ.

ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯ ಬಗ್ಗೆ ಹೇಳುವುದಾದರೆ, ಅಂತಹ ಯೋಜನೆಯೇ ಇರಲಿಲ್ಲ, ಅದು ನಿಮಗೆ ಗೊತ್ತೂ ಹೌದು. ವಾಸ್ತವಾಂಶಗಳನ್ನಷ್ಟೇ ನಾನಿಲ್ಲಿ ಹೇಳಬಯಸುವೆ.

ಭಾರತದ ಎಲ್ಲ ರಾಜ್ಯಗಳ ಪೈಕಿ ಜನತಾ ಆಂದೋಲನ ಬಿಹಾರದಲ್ಲಿ ಮಾತ್ರ ನಡೆದಿತ್ತು. ಆ ರಾಜ್ಯದ ಮುಖ್ಯಮಂತ್ರಿಗಳ ಹಲವಾರು ಹೇಳಿಕೆಗಳ ಪ್ರಕಾರ, ಅಂತಹುದೇನಾದರೂ ಇದ್ದಿದ್ದಲ್ಲಿ, ಅದೂ ಕೂಡಾ ಬಹಳ ಹಿಂದೆಯೇ ನಶಿಸಿಹೋಗಿತ್ತು. ಆದರೆ ನಿಜ ಸಂಗತಿ ಎಂದರೆ—ನಿಮ್ಮ ಸರ್ವವ್ಯಾಪೀ ಗೂಢಚರ್ಯೆ ವ್ಯವಸ್ಥೆ ನಿಮಗೆ ಸೂಕ್ತವಾಗಿ ಸೇವೆ ಸಲ್ಲಿಸಿದ್ದಲ್ಲಿ, ನಿಮಗೇ ಗೊತ್ತಿರುವಂತೆ—ಅದು ದೃಢಗತಿಯಲ್ಲಿ ವ್ಯಾಪಿಸುತ್ತಿತ್ತು ಮತ್ತು ಮೂಲೆಮೂಲೆಯ ಹಳ್ಳಿ ಪ್ರದೇಶಗಳಿಗೂ ಮುಟ್ಟುತ್ತಿತ್ತು. ನನ್ನನ್ನು ಬಂಧಿಸುವ ಹೊತ್ತಿಗೆ, ಹಳ್ಳಿ ಮಟ್ಟದಿಂದ ವಿಭಾಗಮಟ್ಟದವರೆಗೆ ಜನತಾ ಸರ್ಕಾರಗಳನ್ನು ಸ್ಥಾಪಿಸಲಾಗಿತ್ತು. ಈ ನಂತರ, ಇದನ್ನು ಜಿಲ್ಲಾ ಹಾಗೂ ರಾಜ್ಯಮಟ್ಟದವರೆಗೂ ಮುಂದುವರಿಸುವ ಆಶಯವಿತ್ತು.

ಈ ಜನತಾ ಸರ್ಕಾರಗಳು ಹಾಕಿಕೊಂಡಿದ್ದ ಕಾರ್ಯಕ್ರಮಗಳ ಕಡೆ ನೀವು ಗಮನಕೊಡುವ ಕೃಪೆ ತೋರಿದ್ದರೆ, ಅವುಗಳಲ್ಲಿ ಹೆಚ್ಚಿನವು ರಚನಾತ್ಮಕವಾಗಿದ್ದವು ಎಂಬ ಅಂಶ ನಿಮಗೆ ಗೊತ್ತಾಗುತ್ತಿದ್ದಿತು: ನಾಗರಿಕ ಪೂರೈಕೆ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸುವುದು, ಭೂಸುಧಾರಣಾ ಕಾನೂನುಗಳನ್ನು ಜಾರಿಗೆ ತರುವುದು, ವ್ಯಾಜ್ಯಗಳನ್ನು ಕಾಲಾನುಕಾಲದಿಂದ ಬಂದಿರುವ ಚರ್ಚೆ ಹಾಗೂ ಮನವೊಲಿಸುವಿಕೆಯ ಮೂಲಕ ತೀರ್ಮಾನಿಸುವುದು, ಹರಿಜನರಿಗೆ ನ್ಯಾಯ ಒದಗಿಸಿಕೊಡುವುದು, ವರೋಪಚಾರ ಮತ್ತು ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳನ್ನು ಹತ್ತಿಕ್ಕುವುದು—ಹೀಗೇ ಇನ್ನೂ ಅನೇಕ. ಎಷ್ಟು ಆಳವಾದ ಯೋಚನೆ ಮಾಡಿದರೂ ಇವಾವುಗಳಲ್ಲೂ 'ಬುಡಮೇಲು ಕೃತ್ಯ' ಎಂದು ಕರೆಯಬಹುದಾದ ಯಾವ ಅಂಶಗಳೂ ಇರಲಿಲ್ಲ. ಜನತಾ ಸರ್ಕಾರಗಳು ಎಲ್ಲಿ ದೃಢವಾಗಿ ಸಂಘಟಿತಗೊಂಡಿದ್ದವೋ ಅಲ್ಲಿ ಮಾತ್ರ ತೆರಿಗೆ ಕೊಡದಿರುವಿಕೆಯಂತಹ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಪಟ್ಟಣ ಪ್ರದೇಶಗಳಲ್ಲಿ ಆಂದೋಲನ ತೀವ್ರಘಟ್ಟ ಮುಟ್ಟಿದಾಗ, ಧರಣಿ ಹಾಗೂ ಮತಪ್ರದರ್ಶನಗಳ ಮೂಲಕ ಸರ್ಕಾರಿ ಕಚೇರಿಗಳು ಕೆಲಸ ಮಾಡದಂತೆ ತಡೆಯುವ ಪ್ರಯತ್ನಗಳನ್ನು ಮಾಡಲಾಯಿತು. ಪಾಟ್ನದಲ್ಲಿ, ವಿಧಾನಸಭೆಯ ಅಧಿವೇಶನ ಆರಂಭವಾದಾಗಲೆಲ್ಲಾ, ಸದಸ್ಯರು ರಾಜೀನಾಮೆ ಕೊಡುವಂತೆ ಅವರ ಮನವೊಲಿಸುವ ಮತ್ತು ಸಭೆಗೆ ಹೋಗದಂತೆ ಅವರನ್ನು ಶಾಂತಿಯುತ ರೀತಿಯಲ್ಲಿ ತಡೆಯುವ ಪ್ರಯತ್ನಗಳನ್ನು

ಮಾಡಲಾಯಿತು. ಇವೆಲ್ಲಾ ನಾಗರಿಕ ಅಸಹಕಾರದ ನಿಯೋಜಿತ ಕಾರ್ಯಕ್ರಮಗಳಾಗಿದ್ದು, ಈ ಸಂಬಂಧದಲ್ಲಿ ರಾಜ್ಯಾದ್ಯಂತ ಸಾವಿರಾರು ಪುರುಷರು ಹಾಗೂ ಮಹಿಳೆಯರನ್ನು ಬಂಧಿಸಲಾಯಿತು ಕೂಡಾ.

ಇದೆಲ್ಲವೂ ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಪ್ರಯತ್ನವೇ ಎಂದು ನೀವು ಹೇಳುವುದಾದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಷ್ ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ಅಸಹಕಾರ ಸತ್ಯಾಗ್ರಹಗಳ ಮೂಲಕ ಇಂತಹುದೇ ಪ್ರಯತ್ನಗಳನ್ನು ಮಾಡಲಾಗಿತ್ತು ಎಂಬುದನ್ನು ನಾನು ನೆನಪಿಸಬಯಸುವೆ. ಅದಾದರೋ ವಸಾಹತುಶಾಹಿ ಸರ್ಕಾರವಾಗಿದ್ದರೆ, ಬಿಹಾರ ಸರ್ಕಾರ ಹಾಗೂ ಶಾಸಕಾಂಗಗಳೆರಡೂ ಸಂವಿಧಾನ ರೀತ್ಯಾ ಸ್ಥಾಪಿತವಾದವುಗಳು. ಹೀಗಿರುವಾಗ, ಚುನಾಯಿತ ಸರ್ಕಾರ ಹಾಗೂಚುನಾಯಿತ ಶಾಸಕಾಂಗ ಹೋಗಬೇಕೆಂದು ಕೇಳುವ ಹಕ್ಕು ಯಾರಿಗಿದೆ? ನಿಮ್ಮ ಪ್ರಿಯ ಪ್ರಶ್ನೆಗಳಲ್ಲಿ ಇದೂ ಒಂದು. ಆದರೆ ಈ ಪ್ರಶ್ನೆಗೆ, ಸಂವಿಧಾನ ಪರಿಣತರಾದ ಸುಪ್ರಸಿದ್ಧ ವಕೀಲರೂ ಸೇರಿದಂತೆ ಹಲವಾರು ಸಮರ್ಥರು ಹತ್ತಾರು ಬಾರಿ ಉತ್ತರಿಸಿದ್ದಾರೆ. ಚುನಾಯಿತ ಸರ್ಕಾರವೊಂದು ಭ್ರಷ್ಟಾಚಾರದಲ್ಲಿ ಮುಳುಗಿ ದುರಾಡಳಿತದಲ್ಲಿ ತೊಡಗಿದ್ದರೆ, ಅದರ ರಾಜೀನಾಮೆಯನ್ನು ಒತ್ತಾಯಿಸುವ ಹಕ್ಕು ಜನತೆಗಿದೆ ಎಂಬುದೇ ಈ ಪ್ರಶ್ನೆಗೆ ಉತ್ತರವಾಗಿದೆ. ಇಂತಹ ಸರ್ಕಾರವನ್ನು ಪೋಷಿಸುವ ಶಾಸಕಾಂಗವೊಂದಿದ್ದರೂ, ಅದೂ ಕೂಡಾ ಹೋಗಬೇಕು ಮತ್ತು ಆ ಮೂಲಕ ಜನತೆ ಇನ್ನೂ ಉತ್ತಮ ಪ್ರತಿನಿಧಿಗಳನ್ನು ಆಯ್ಕೆಮಾಡಲು ದಾರಿಯಾಗಬೇಕು.

ಆದರೆ ಇಂತಹ ಸಂದರ್ಭದಲ್ಲಿ, ಜನ ಏನನ್ನು ಬಯಸುತ್ತಿದ್ದಾರೆ ಎಂಬುದನ್ನು ಹೇಗೆ ನಿರ್ಣಯಿಸುವುದು? ಬಿಹಾರದ ಬಗ್ಗೆ ಹೇಳುವುದಾದರೆ, ಪಾಟ್ನಾದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಗಳು ಮತ್ತು ಪ್ರದರ್ಶನಗಳು, ರಾಜ್ಯಾದ್ಯಂತ ಮತಕ್ಷೇತ್ರಗಳಲ್ಲಿ ನಡೆದ ಸಾವಿರಾರು ಸಭೆಗಳು, ಮೂರು ದಿನಗಳ ಬಿಹಾರ ಬಂದ್, ನವೆಂಬ್ ೪ ರಂದು ನಡೆದ ಆ ಸ್ಮರಣಾರ್ಹ ಘಟನೆಗಳು ಮತ್ತು ನವೆಂಬರ್ ೧೮ ರಂದು ಗಾಂಧಿ ಮೈದಾನದಲ್ಲಿ ನಡೆದ ಅಭೂತಪೂರ್ವ ಸಭೆ—ಇವೆಲ್ಲಾ ಜನತೆಯ ಛಲದ ಪ್ರತೀಕವಾಗಿದ್ದವು. ಆದರೆ ಬಿಹಾರ ಸರ್ಕಾರ ಮತ್ತು ಕಾಂಗ್ರೆಸ್ ಬಳಿ, ಇದಕ್ಕೆ ಪ್ರತ್ಯುತ್ತರ ನೀಡಬಲ್ಲ ಯಾವ ಸಾಧನ ಸಂಪತ್ತಿತ್ತು? ಶ್ರೀ ಬರೂವಾ ಅವರ ಯೋಜನೆಯ ಪ್ರಕಾರ ನವೆಂಬರ್ ೧೬ರಂದು ನಡೆಸಿದ ಆ ದೌರ್ಜನ್ಯವೇ ನಿಮ್ಮ ಉತ್ತರವಾಗಿತ್ತು; ವಿಶ್ವಸನೀಯ ವರದಿಗಳ ಪ್ರಕಾರ ಇದಕ್ಕಾಗಿ ೬೦ ಲಕ್ಷ ರೂಪಾಯಿಗಳಷ್ಟು ಭಾರೀ ಮೊತ್ತದ ಹಣವನ್ನು ಖರ್ಚುಮಾಡಲಾಯಿತು. ಹೋಗಲಿ, ಸಭೆ ಪ್ರದರ್ಶನಗಳೆಲ್ಲಾ ಜನತೆಯ ಆಶೋತ್ತರಗಳ ಸೂಕ್ತ ಪ್ರತೀಕಗಳಾಗದಿದ್ದಲ್ಲಿ, ಪ್ರಜಾಭಿಪ್ರಾಯ ಮತ ಸಂಗ್ರಹಣೆ ನಡೆಯಲಿ ಎಂದು ನಾನು ಮತ್ತೆ ಮತ್ತೆ ಕೋರಿದೆ. ಆದರೆ ಜನತೆಯನ್ನೆದುರಿಸುವ ತಾಕತ್ತು ನಿಮಗಿರಲಿಲ್ಲ.

ಬಿಹಾರ ಆಂದೋಲನವನ್ನು ಪ್ರಸ್ತಾಪಿಸುತ್ತಿರುವ ಈ ಸಂದರ್ಭದಲ್ಲೇ, ಇಂತಹ ಆಂದೋಲನದ ರಾಜಕೀಯ ಗುಣದ ಬಗ್ಗೆ ಬೆಳಕು ಚೆಲ್ಲುವ ಮತ್ತೊಂದು ಮಹತ್ವದ

ಅಂಶವನ್ನು ತಿಳಿಸಬಯಸುವೆ. ಬಿಹಾರದ ವಿದ್ಯಾರ್ಥಿಗಳೇನೂ ತಮ್ಮ ಆಂದೋಲನವನ್ನು ಇದ್ದಕ್ಕಿದ್ದಂತೆ, ಸುಮ್ಮಸುಮ್ಮನೆ ಆರಂಭಿಸಲಿಲ್ಲ. ಸಮ್ಮೇಳನವೊಂದರಲ್ಲಿ ತಮ್ಮ ಬೇಡಿಕೆಗಳನ್ನು ರೂಪಿಸಿದ ನಂತರ ಅವರು ಮುಖ್ಯಮಂತ್ರಿ ಹಾಗೂ ಶಿಕ್ಷಣ ಮಂತ್ರಿಯವರನ್ನು ಭೇಟಿಯಾಗಿದ್ದರು. ಅವರು ಹಲವಾರು ಸಭೆಗಳನ್ನು ನಡೆಸಿದರು. ಆದರೆ ದುರದೃಷ್ಟವಶಾತ್ ಸಣ್ಣ ಮನಸ್ಸಿನ ಹಾಗೂ ಭ್ರಷ್ಟ ಬಿಹಾರ ಸರ್ಕಾರ, ವಿದ್ಯಾರ್ಥಿಗಳನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ನಂತರ ವಿದ್ಯಾರ್ಥಿಗಳು ವಿಧಾನ ಸಭೆಯನ್ನು ಘೇರಾವೊ ಮಾಡಿದರು. ಅಂದು ನಡೆದ ಘಟನೆಗಳೇ ಬಿಹಾರದ ಆಂದೋಲನಕ್ಕೆ ಅಸ್ತಿಭಾರ ಹಾಕಿದವು. ಆಗಲೂ ಕೂಡಾ ವಿದ್ಯಾರ್ಥಿಗಳೇನೂ ಮಂತ್ರಿಮಂಡಲದ ರಾಜೀನಾಮೆಯನ್ನಾಗಲೀ, ಅಥವಾ ವಿಧಾನಸಭೆಯ ವಿಸರ್ಜನೆಯನ್ನಾಗಲೀ ಒತ್ತಾಯಿಸಲಿಲ್ಲ. ಗೋಲೀಬಾರು, ಲಾಠಿ ಪ್ರಯೋಗ ನಡೆದು, ಗೊತ್ತುಗುರಿ ಇಲ್ಲದೆ ಯಾರೆಂದವರನ್ನೇ ಬಂಧಿಸತೊಡಗಿದ ಹಲವಾರು ವಾರಗಳ ನಂತರವೇ, ಈ ಒತ್ತಾಯವನ್ನು ಮಂಡಿಸುವುದು ಛಾತ್ರ ಸಂಘರ್ಷ ಸಮಿತಿಗೆ ಅನಿವಾರ್ಯವಾಯಿತು. ಈ ಘಟ್ಟದಲ್ಲಿಯೇ ಆಂದೋಲನ ಹಿಂದಡಿ ಇಡಲಾಗದ ಪರಿಸ್ಥಿತಿಯನ್ನು ಪ್ರವೇಶಿಸಿದ್ದು.

ಹೀಗೆ, ಬಿಹಾರದಲ್ಲಿ, ಮಾತುಕತೆಗಳ ಮೂಲಕ ಬಿಕ್ಕಟ್ಟನ್ನು ಇತ್ಯಾರ್ಥಪಡಿಸಲು ಸರ್ಕಾರಕ್ಕೆ ಅವಕಾಶ ಕೊಡಲಾಗಿತ್ತು. ವಿದ್ಯಾರ್ಥಿಗಳ ಯಾವುದೇ ಬೇಡಿಕೆ ವಿವೇಚನಾರಹಿತ ವಾಗಿರಲಿಲ್ಲ ಮತ್ತು ಸಂಧಾನಕ್ಕೆ ಅನರ್ಹವಾಗಿರಲಿಲ್ಲ. ಆದರೆ ಬಿಹಾರ ಸರ್ಕಾರ ಸ್ಪಂದನಹೀನ ಮಾರ್ಗವನ್ನು ಆಯ್ದುಕೊಂಡಿತು; ಯಾರೇ ಆಗಲಿ ಕೈಗೊಳ್ಳಲು ಹೇಸುವಂತಹ ದಮನಕಾರಿ ನೀತಿಗೆ ಅಂಟಿಕೊಂಡಿತು. ಉತ್ತರ ಪ್ರದೇಶದಲ್ಲೂ ಹೀಗೇ ಆಯಿತು. ಎರಡೂ ರಾಜ್ಯಗಳು, ಮಾತುಕತೆಗಳ ಮೂಲಕ ಸಮಸ್ಯೆಯನ್ನು ಇತ್ಯರ್ಥಪಡಿಸುವ ಸಂಧಾನ ಮಾರ್ಗವನ್ನು ತಿರಸ್ಕರಿಸಿ, ಘರ್ಷಣೆಯ ಮಾರ್ಗವನ್ನು ಹಿಡಿದವು. ಇದು ಹೀಗಾಗದಿದ್ದರೆ, ಆಂದೋಲನವೆಂಬುದೇ ಇರುತ್ತಿರಲಿಲ್ಲ.

ಈ ಸರ್ಕಾರಗಳೇಕೆ ವಿವೇಚನೆಯಿಂದ ವರ್ತಿಸಲಿಲ್ಲ? ಈ ಒಗಟನ್ನು ಬಿಡಿಸಲು ಹಲವಾರು ಬಾರಿ ಯತ್ನಿಸಿದ್ದೇನೆ. ಭ್ರಷ್ಟಾಚಾರವೇ ಅವುಗಳನ್ನು ಹಾಗೆ ವರ್ತಿಸಲು ತಡೆದಿರುವ ಅಂಶ ಎಂಬುದೇ ನನಗೆ ದೊರೆತಿರುವ ಉತ್ತರವಾಗಿದೆ. ಏಕೋ ಏನೋ ಸರ್ಕಾರಗಳು ತಮ್ಮ ನೌಕರ ವರ್ಗದಲ್ಲಿರುವ, ಅದರಲ್ಲೂ ನಿರ್ದಿಷ್ಟವಾಗಿ ಉನ್ನತ ಹಂತ ಅಂದರೆ, ಸ್ವತಃ ಮಂತ್ರಿ ವರ್ಗದಲ್ಲಿರುವ ಭ್ರಷ್ಟಾಚಾರವನ್ನು ತೊಡೆದುಹಾಕಲು ಅಸಮರ್ಥವಾಗಿದ್ದವು. ಆದುದರಿಂದಲೇ ಭ್ರಷ್ಟಾಚಾರ, ಅದರಲ್ಲೂ ನಿರ್ದಿಷ್ಟವಾಗಿ ಸರ್ಕಾರ ಹಾಗೂ ಆಡಳಿತದಲ್ಲಿನ ಭ್ರಷ್ಟಾಚಾರ, ಆಂದೋಲನದ ಕೇಂದ್ರ ಬಿಂದುವಾಯಿತು.

ಏನೇ ಹೇಳಿದರೂ, ಬಿಹಾರವೊಂದನ್ನುಳಿದರೆ, ಭಾರತದ ಮತ್ತಾವ ರಾಜ್ಯದಲ್ಲಿಯೂ ಅಂತಹ ಆಂದೋಲನವಿರಲಿಲ್ಲ. ಉತ್ತರ ಪ್ರದೇಶದಲ್ಲಿ ಏಪ್ರಿಲ್ ಹೊತ್ತಿಗೆ ಸತ್ಯಾಗ್ರಹ ಆರಂಭವಾಯಿತಾದರೂ, ಅದು ಜನತಾ ಆಂದೋಲನವಾಗಲು ಬಹಳ ಕಾಲ ಬೇಕಿತ್ತು. ಇನ್ನು ಕೆಲವು ರಾಜ್ಯಗಳಲ್ಲಿ ಹೋರಾಟ ಸಮಿತಿಗಳನ್ನು ರಚಿಸಲಾಗಿತ್ತಾದರೂ, ಯಾವುದೇ

ಕಡೆ ಸಾಮೂಹಿಕ ಆಂದೋಲನ ಆರಂಭವಾಗುವ ಸಾಧ್ಯತೆಗಳಿರಲಿಲ್ಲ. ಅಲ್ಲದೆ, ಲೋಕಸಭಾ ಚುನಾವಣೆಗಳು ಆಗ್ಗೆ ಹತ್ತಿರ ಬರುತ್ತಿದ್ದುದರಿಂದ, ವಿರೋಧ ಪಕ್ಷಗಳ ಗಮನ ನಾಗರಿಕ ಅಸಹಕಾರವನ್ನೊಳಗೊಂಡ ಹೋರಾಟದ ಕಡೆಗಿಂತ, ಬರಲಿದ್ದ ಚುನಾವಣಾ ಹೋರಾಟದ ಕಡೆಗೇ ಹೆಚ್ಚಿತು.

ಹೀಗೆ, ನೀವು ಹೇಳುವ ಯೋಜನೆ, ಸರ್ಕಾರಿ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ರೂಪಿಸಲಾಗಿತ್ತೆಂದು ಹೇಳುವ ಯೋಜನೆ, ಕೇವಲ ನಿಮ್ಮ ಸರ್ವಾಧಿಕಾರೀ ಕ್ರಮಗಳನ್ನು ಸಮರ್ಥಿಸಲು ನೀವು ಮುಂದಿಟ್ಟ ಕಟ್ಟುಕಥೆ ಮಾತ್ರವಾಗಿದೆ.

ಒಂದು ವೇಳೆ ವಾದಕ್ಕಾಗಿಯಾದರೂ ಅಂತಹ ಯೋಜನೆಯೊಂದಿತ್ತು ಎಂದು ಒಂದು ಕ್ಷಣ ನಾನು ಒಪ್ಪಿಕೊಂಡಲ್ಲಿ, ಶ್ರೀ ಮೊರಾರ್ಜಿ ದೇಸಾಯಿ ಹಾಗೂ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯ ಶ್ರೀ ಚಂದ್ರಶೇಖರ್—ಇವರೂ ಈ ಯೋಜನೆಯಲ್ಲಿ ಭಾಗಿಗಳಾಗಿದ್ದರು ಎಂದು ನಿಮಗೆ ಪ್ರಾಮಾಣಿಕವಾಗಿ ಅನ್ನಿಸುತ್ತದೆಯೇ? ಹಾಗಿದ್ದರೆ, ಅವರನ್ನೂ ಮತ್ತು ಅಂತಹ ಅನೇಕರನ್ನು ಬಂಧಿಸಿದ್ದಾದರೂ ಏಕೆ?

ಇಲ್ಲ ಪ್ರಿಯ ಪ್ರಧಾನಮಂತ್ರಿಯವರೇ, ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆಯೆಂಬುದೇ ಇರಲಿಲ್ಲ. ಯಾವುದೇ ಯೋಜನೆ ಇದ್ದಿದ್ದರೂ, ಅದು ಸರಳವಾದ, ನಿರಪಾಯಕಾರಿಯಾದ ಮತ್ತು ನಿಮ್ಮ ಮೇಲ್ಮನವಿ ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನ ವಾಗುವವರೆಗೆ ಮುಂದುವರಿಯಲಿದ್ದ ಅಲ್ಪಾವಧೀ ಯೋಜನೆ ಮಾತ್ರ. ಇದೇ ಯೋಜನೆಯನ್ನೇ ಜೂನ್ ೨೫ರಂದು ರಾಮಲೀಲಾ ಮೈದಾನದಲ್ಲಿ ನಾನಾಜಿ ದೇಶಮುಖ್ ಪ್ರಕಟಿಸಿದ್ದು. ಅಂದು ಸಂಜೆ ನಾನು ಮಾತಾಡಿದ್ದೂ ಈ ಯೋಜನೆಯನ್ನು ಕುರಿತೇ. ಸುಪ್ರೀಂ ಕೋರ್ಟು ತನ್ನ ತೀರ್ಮಾನ ಕೊಡುವವರೆಗೆ ನೀವು ಪ್ರಧಾನಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕೆಂಬ ಬೇಡಿಕೆಗೆ ಬೆಂಬಲವಾಗಿ ನಿಮ್ಮ ಮನೆಯ ಮುಂದೆ ಅಥವಾ ಬಳಿ, ಆಯ್ದ ಕೆಲವರು ಸತ್ಯಾಗ್ರಹ ನಡೆಸಬೇಕೆಂಬುದೇ ಈ ಯೋಜನೆಯ ಕಾರ್ಯಕ್ರಮವಾಗಿತ್ತು. ಈ ಕಾರ್ಯಕ್ರಮವನ್ನು ದೆಹಲಿಯಲ್ಲಿ ೭ ದಿನಗಳಲ್ಲಿ ನಡೆಸಿ, ನಂತರ ಅದನ್ನು ಎಲ್ಲ ರಾಜ್ಯಗಳಿಗೂ ವಿಸ್ತರಿಸಬೇಕೆಂದಿತ್ತು. ಅಲ್ಲದೆ, ಈ ಮೊದಲೇ ಹೇಳಿದಂತೆ ಇದು ಸುಪ್ರೀಂಕೋರ್ಟಿನ ತೀರ್ಪು ಹೊರಬೀಳುವವರೆಗೆ ಮಾತ್ರ ನಡೆಯುತ್ತಿತ್ತು. ಇದರಲ್ಲಿ ಎಂತಹ ಬುಡಮೇಲು ಅಥವಾ ಅಪಾಯದ ಅಂಶವಿತ್ತೋ ನಾ ಕಾಣೆ. ಪ್ರಜಾಪ್ರಭುತ್ವವೊಂದರಲ್ಲಿ, ಪರಿಹಾರ ಅಥವಾ ಸುಧಾರಣೆಯ ಬೇರೆಲ್ಲಾ ಮಾರ್ಗಗಳೂ ನಿಷ್ಪ್ರಯೋಜಕ ಎಂದೆನಿಸಿದಾಗ, ನಾಗರಿಕ ಅಸಹಕಾರ ಮಾರ್ಗವನ್ನು ಆಯ್ದುಕೊಳ್ಳುವುದು ಪ್ರಜೆಯ ಆಜನ್ಮಸಿದ್ಧ ಹಕ್ಕಾಗಿರುತ್ತದೆ. ಇದಕ್ಕಾಗಿ ಕಾನೂನು ಪ್ರಕಾರದ ಶಿಕ್ಷೆಯನ್ನು ಸತ್ಯಾಗ್ರಹಿ, ಸ್ವಇಚ್ಛೆಯಿಂದಲೇ ಆಹ್ವಾನಿಸುತ್ತಾನೆ ಮತ್ತು ಒಪ್ಪಿಕೊಳ್ಳುತ್ತಾನೆ ಎಂಬುದನ್ನು ಇಲ್ಲಿ ಹೇಳುವುದು ಅನಗತ್ಯ. ಇದು ಗಾಂಧೀಜಿ, ಪ್ರಜಾಪ್ರಭುತ್ವಕ್ಕೆ ಒದಗಿಸಿದ ಹೊಸ ಆಯಾಮ. ಆದರೆ ಗಾಂಧೀಜಿಯ ಭಾರತದಲ್ಲೇ ಇದನ್ನೂ ತಳ್ಳಿಹಾಕುತ್ತಿರುವುದು ಎಂತಹ ವಿಪರ್ಯಾಸ!

ಇಲ್ಲಿ ಗಮನಿಸಬೇಕಾದ ಮತ್ತು ಬಹಳ ಮುಖ್ಯವಾದ ಅಂಶವೆಂದರೆ, ನೀವು ಸುಮ್ಮನೆ ನಿಮ್ಮ ಅಧಿಕಾರಸ್ಥಾನಕ್ಕೆ ಭದ್ರವಾಗಿ ಅಂಟಿಕೊಂಡು ಕೂರುವುದರಲ್ಲೇ ತೃಪ್ತರಾಗಿದ್ದರೆ, ಈ ಸತ್ಯಾಗ್ರಹ ಕಾರ್ಯಕ್ರಮದ ಕಡೆ ವಿರೋಧಪಕ್ಷಗಳು ಕಣ್ಣು ಹಾಯಿಸುತ್ತಿರಲಿಲ್ಲ. ಆದರೆ ನೀವು ಹಾಗೆ ಮಾಡಲಿಲ್ಲ. ನಿಮ್ಮ ಬಂಟರ ಮೂಲಕ ನಿಮ್ಮ ಮನೆಯ ಮುಂದೆ ಜನರನ್ನು ಕರೆಸಿ, ನೀವು ರಾಜೀನಾಮೆ ಕೊಡಕೂಡದೆಂದು ಬೇಡಿಕೊಳ್ಳುವ ಸಭೆ-ಪ್ರದರ್ಶನಗಳನ್ನು ವ್ಯವಸ್ಥೆಗೊಳಿಸಿದಿರಿ. ಈ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ನೀವು, ನಿಮ್ಮ ಉದ್ರಿಕ್ತ ವಾದಗಳನ್ನು ಮಂಡಿಸಿದಿರಿ ಮತ್ತು ವಿರೋಧ ಪಕ್ಷದ ಮುಖಂಡರನ್ನು ಅನಾಗರಿಕ ರೀತಿಯಲ್ಲಿ ನಿಂದಿಸಿದಿರಿ. ಹೈಕೋರ್ಟಿನ ನ್ಯಾಯಾಧೀಶರ* ಪ್ರತಿಕೃತಿಯೊಂದನ್ನು ನಿಮ್ಮ ಮನೆ ಮುಂದೆ ಸುಡಲಾಯಿತು ಮತ್ತು ನ್ಯಾಯಾಧೀಶರು ಹಾಗೂ ಸಿ.ಐ.ಎ. ನಡುವೆ ಒಂದು ರೀತಿಯ ಸಂಬಂಧವಿದೆ ಎಂದು ಪ್ರಚಾರ ಮಾಡುವ ಭಿತ್ತಿಪತ್ರಗಳನ್ನು ನಗರದಲ್ಲೆಲ್ಲಾ ಅಂಟಿಸಲಾಯಿತು. ಪ್ರತಿದಿನವೂ ಇಂತಹ ಹೇಯ ಕೃತ್ಯಗಳು ನಡೆಯುತ್ತಿದ್ದಾಗ, ಈ ಕುಚೇಷ್ಟೆಯನ್ನು ಪ್ರತಿರೋಧಿಸುವ ಪ್ರಯತ್ನ ಮಾಡದೆ ವಿರೋಧಪಕ್ಷಗಳಿಗೆ ಬೇರೆ ದಾರಿಯಿರಲಿಲ್ಲ. ಇದನ್ನು ಮಾಡುವ ಬಗೆಯನ್ನು ಅವು ನಿರ್ಧರಿಸಿದ್ದಾದರೂ ಹೇಗೆ? ರೌಡಿತನದ ಮೂಲಕ ಅಲ್ಲ, ವ್ಯವಸ್ಥಿತ ಸತ್ಯಾಗ್ರಹದ ಮೂಲಕ; ಆತ್ಮತ್ಯಾಗದ ಮೂಲಕ.

ಜನತೆಯ ಸ್ವಾತಂತ್ರ್ಯಗಳನ್ನು ಅಪಹರಿಸಿ, ಪ್ರಜಾಪ್ರಭುತ್ವದ ಮೇಲೆ ಮರ್ಮಬೇಧಕ ಪ್ರಹಾರ ಮಾಡುವಷ್ಟು ನಿಮ್ಮನ್ನು ಸಿಟ್ಟಿಗೆಬ್ಬಿಸಿದ್ದು ಈ 'ಯೋಜನೆ'ಯೇ ಹೊರತು, ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ನಿಮ್ಮ ಕಾಲ್ಪನಿಕ ಯೋಜನೆಯಲ್ಲ.

ಪತ್ರಿಕಾ ಸ್ವಾತಂತ್ರ್ಯವನ್ನಾದರೂ ಏಕೆ ದಮನ ಮಾಡಲಾಗಿದೆ? ಭಾರತೀಯ ಪತ್ರಿಕಾರಂಗ ಬೇಜವಾಬ್ದಾರಿಯುತವಾಗಿತ್ತು, ಅಪ್ರಾಮಾಣಿಕವಾಗಿತ್ತು ಅಥವಾ ಸರ್ಕಾರ ವಿರೋಧಿಯಾಗಿತ್ತು ಎಂದಲ್ಲ. ವಾಸ್ತವವಾಗಿ, ಸ್ವತಂತ್ರ ವಾತಾವರಣದಲ್ಲಿ ಪತ್ರಿಕೆಗಳು, ಭಾರತದಲ್ಲಿದ್ದುದಕ್ಕಿಂತ ಹೆಚ್ಚು ಜವಾಬ್ದಾರಿಯುತವಾಗಿ, ವಿವೇಚನಾತ್ಮಕವಾಗಿ ಮತ್ತು ನ್ಯಾಯಯುತವಾಗಿ ಬೇರೆಲ್ಲೂ ನರ್ತಿಸಿಲ್ಲ. ನಿಜಸಂಗತಿ ಎಂದರೆ, ಇವುಗಳ ವಿರುದ್ಧ ನಿಮ್ಮ ಸಿಟ್ಟು ಮುಗಿಲುಮುಟ್ಟಿದ್ದು, ಹೈಕೋರ್ಟು ತೀರ್ಪಿನ ನಂತರ ನಿಮ್ಮ ರಾಜೀನಾಮೆಯ ಬಗ್ಗೆ ಕೆಲವು ಪತ್ರಿಕೆಗಳು ನಿಮಗೆ ತೀರಾ ಅಸಹನೀಯವಾದ ನಿಲುವು ತಳೆದಾಗ. ಸುಪ್ರೀಂ ಕೋರ್ಟು ಸಹ ತನ್ನ ತಡೆಯಾಜ್ಞೆಯಲ್ಲಿ ನಿಮ್ಮ ಲೋಕಸಭಾ ಸದಸ್ಯತ್ವವನ್ನು ತಾತ್ಕಾಲಿಕವಾಗಿ ರದ್ದು ಮಾಡಿದ ತೀರ್ಪು ನೀಡಿದ ಮಾರನೆಯ ದಿನ, ಅಡ್ಡಗೋಡೆಯ ಮೇಲೆ ದೀಪವಿಡುವ ಟೈಮ್ಸ್ ಆಫ್ ಇಂಡಿಯಾ ಸಹ ಸೇರಿದಂತೆ ಎಲ್ಲ ಪ್ರಮುಖ ಪತ್ರಿಕೆಗಳೂ ನೀವು ರಾಜೀನಾಮೆ ನೀಡಬೇಕೆಂದು ಸಲಹೆ ಮಾಡಿ, ಸರಕಾರಣವಾದ ಮತ್ತು ಪ್ರಬಲವಾದ ಸಂಪಾದಕೀಯಗಳನ್ನು

---

* ಚುನಾವಣೆಯಲ್ಲಿ ಭ್ರಷ್ಟಾಚಾರ ನಡೆಸಿ ಆಯ್ಕೆಯಾಗಿದ್ದಾರೆಂದು ಶ್ರೀಮತಿ ಗಾಂಧಿಯವರ ಪಾರ್ಲಿಮೆಂಟ್ ಸದಸ್ಯತ್ವವನ್ನು ರದ್ದುಗೊಳಿಸಿ ತೀರ್ಪು ನೀಡಿದ, ಅಲಹಾಬಾದ್ ಹೈಕೋರ್ಟಿನ ನ್ಯಾಯಾಧೀಶ ಶ್ರೀ ಜೆ.ಎಂ.ಎಲ್. ಸಿನ್ಹ.

ಬರೆದಾಗ ಪತ್ರಿಕಾ ಸ್ವಾತಂತ್ರ್ಯ ನಿಮಗೆ ಅರಗಿಸಿಕೊಳ್ಳಲು ತೀರಾ ಅಸಾಧ್ಯವಾದ ಸಂಗತಿಯಾಗಿ ಪರಿಣಮಿಸಿತು. ಆ ಕ್ಷಣದಲ್ಲೇ ಭಾರತೀಯ ಪತ್ರಿಕಾರಂಗದ ಸಮಾಧಿಯನ್ನು ತೋಡಲಾಯಿತು, ಮೃತ್ಯುಪ್ರಹಾರ ನಡೆಸಿದ್ದೂ ಆಯಿತು. ಪ್ರಜಾಪ್ರಭುತ್ವದ ಉಸಿರಾಗಿರುವ ಪತ್ರಿಕೆಗಳ ಅಮೂಲ್ಯ ಸ್ವಾತಂತ್ರ್ಯವನ್ನು ಕೇವಲ ಓರ್ವ ಪ್ರಧಾನಮಂತ್ರಿಯ ವೈಯುಕ್ತಿಕ ಲಾಭಕ್ಕಾಗಿ ದಮನ ಮಾಡುವುದು ಯಾರನ್ನಾದರೂ ದಿಗ್ಭ್ರಾಂತಗೊಳಿಸುವ ಅಂಶವಾಗಿದೆ.

ದೇಶದ ಪ್ರಧಾನಮಂತ್ರಿಯ ಸ್ಥಾನದ ಘನತೆ ಗೌರವಗಳನ್ನು ಹಾಳುಮಾಡಲು ತೊಡಗಿದ್ದಾರೆಂದು ನೀವು ವಿರೋಧ ಪಕ್ಷಗಳವರನ್ನು ದೂಷಿಸುತ್ತಿರುವಿರಿ. ಆದರೆ ನಿಜಸಂಗತಿ ಇದಕ್ಕೆ ವಿರುದ್ಧವಾದುದು. ಈ ಉನ್ನತ ಸ್ಥಾನದ ಘನತೆ ಗೌರವಗಳನ್ನು ಕೆಡಿಸುವಲ್ಲಿ ಸ್ವತಃ ನೀವು ಸಲ್ಲಿಸಿರುವಷ್ಟು ಕೊಡುಗೆಯನ್ನು ಇನ್ನಾರೂ ಸಲ್ಲಿಸಿಲ್ಲ. ಚುನಾವಣೆಯಲ್ಲಿ ಭ್ರಷ್ಟಾಚಾರ ವೆಸಗಿದ ತಪ್ಪಿನಿಂದಾಗಿ ಪಾರ್ಲಿಮೆಂಟ್ ಸದಸ್ಯತ್ವವನ್ನು ಕಳೆದುಕೊಂಡ ವ್ಯಕ್ತಿ, ಪ್ರಜಾಪ್ರಭುತ್ವ ದೇಶವೊಂದರ ಪ್ರಧಾನಮಂತ್ರಿಯಾಗಿರುವುದನ್ನು ಯಾರಾದರೂ ಕಲ್ಪಿಸಿಕೊಳ್ಳಲು ಸಾಧ್ಯವೇ? (ಸುಪ್ರೀಂ ಕೋರ್ಟು, ಹೈಕೋರ್ಟಿನ ತೀರ್ಪನ್ನು ವಜಾ ಮಾಡಬಹುದು—ಈ ಭಯೋತ್ಪಾದನೆಯ ದಿನಗಳಲ್ಲಿ ಆಗುವುದೂ ಹಾಗೆಯೇ—ಆದರೆ ಆವರೆಗೂ ನಿಮ್ಮ ಅಪರಾಧ ಮತ್ತು ಪಾರ್ಲಿಮೆಂಟಿನಲ್ಲಿ ಮತನೀಡುವ ಹಕ್ಕಿನ ರದ್ದತಿ ಮುಂದುವರಿಯುತ್ತದೆ).

ಸಶಸ್ತ್ರ ದಳಗಳಲ್ಲಿ ಹಾಗೂ ಪೊಲೀಸ್ ಪಡೆಗಳಲ್ಲಿ ಅವಿಧೇಯತೆಯನ್ನು ಬಿತ್ತಲು ಯತ್ನಿಸಿದನೆಂದು ಹೇಳಲಾದ 'ಒಬ್ಬ ವ್ಯಕ್ತಿ'ಯ ಬಗ್ಗೆ ಹೇಳುವುದಾದರೆ, ಆತ ಈ ಆಪಾದನೆಯನ್ನು ತಿರಸ್ಕರಿಸುತ್ತಾನೆ. ಆತ ಮಾಡಿದ್ದೆಲ್ಲಾ, ಪಡೆಗಳಲ್ಲಿನ ಸಿಪಾಯಿ ಹಾಗೂ ಅಧಿಕಾರಿಗಳಿಗೆ ಅವರ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಮನವರಿಕೆಮಾಡಿಕೊಡುವ ಪ್ರಯತ್ನವಷ್ಟೆ. ಆತ ಈ ಸಂಬಂಧದಲ್ಲಿ ಹೇಳಿರುವುದೆಲ್ಲವೂ ಕಾನೂನುಬದ್ಧವಾಗಿಯೇ—ಸಂವಿಧಾನ, ಸೇನಾ ಕಾನೂನು ಹಾಗೂ ಪೋಲೀಸ್‌ಕಾನೂನುಗಳ ಪ್ರಕಾರ—ಇದೆ.

ಇಷ್ಟೂ, ನಿಮ್ಮ ಪ್ರಮುಖ ಆಪಾದನೆಗಳಾದ ಸರ್ಕಾರೀ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸುವ ಯೋಜನೆ ಮತ್ತು ಸಶಸ್ತ್ರ ಪಡೆ ಹಾಗೂ ಪೋಲೀಸು ದಳಗಳಲ್ಲಿ ಅವಿಧೇಯತೆಯನ್ನು ಬಿತ್ತುವ ಪ್ರಯತ್ನದ ಬಗ್ಗೆ. ಈಗ ನಿಮ್ಮ ಕೆಲವು ಸಣ್ಣ ಪುಟ್ಟ ಆಪಾದನೆಗಳು ಹಾಗೂ ಆಟಾಟೋಪಗಳ ಬಗ್ಗೆ. ಪ್ರಜಾಪ್ರಭುತ್ವವೇನೂ ದೇಶಕ್ಕಿಂತ ದೊಡ್ಡದಲ್ಲ ಎಂದು ನೀವು ಹೇಳಿರುವುದಾಗಿ ವರದಿಯಾಗಿದೆ. ಮಾನ್ಯ ಪ್ರಧಾನಮಂತ್ರಿಯವರೇ, ನೀವು ಹೇಳಬೇಕಾದುದರ ಇತಿಮಿತಿಗಳನ್ನು ಮೀರುತ್ತಿಲ್ಲವಷ್ಟೆ? ದೇಶದ ಬಗ್ಗೆ ಕಳಕಳಿ ಇರುವುದು ನಿಮ್ಮೊಬ್ಬರಿಗೇ ಅಲ್ಲ. ನೀವು ಸ್ಥಾನಬದ್ಧತೆ ಇಲ್ಲವೇ ಸೆರೆಯಲ್ಲಿರಿಸಿರುವವರ ಪೈಕಿ, ದೇಶಕ್ಕಾಗಿ ನಿಮಗಿಂತ ಹೆಚ್ಚು ದುಡಿದಿರುವವರು ಅನೇಕರಿದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ನಿಮ್ಮಷ್ಟೇ ದೇಶಪ್ರೇಮಿಗಳಾಗಿದ್ದಾರೆ. ಆದುದರಿಂದ ದಯವಿಟ್ಟು, ದೇಶದ ಬಗ್ಗೆ ನಮಗೆ ಭಾಷಣ ಬಿಗಿದು ನಮ್ಮ ಗಾಯಗಳಿಗೆ ಉಪ್ಪು ಪಟ್ಟಬೇಡಿ.

ಅಲ್ಲದೆ, ನೀವು ಪ್ರತಿಪಾದಿಸುವ ಆಯ್ಕೆಯೂ ಅಸಂಬದ್ಧವಾಗಿದೆ. ಪ್ರಜಾಪ್ರಭುತ್ವ ಮತ್ತು ರಾಷ್ಟ್ರದ ನಡುವೆ ಯಾವುದಾದರೊಂದನ್ನು ಆಯ್ಕೆ ಮಾಡಬೇಕೆನ್ನುವುದೇ

ಅರ್ಥಹೀನವಾಗಿದೆ. ದೇಶದ ಒಳಿತಿನ ದೃಷ್ಟಿಯಿಂದಲೇ ಭಾರತದ ಜನತೆ, ೧೯೪೯ರ ನವೆಂಬರ್ ೨೬ ರಂದು 'ಭಾರತದ ಜನತೆಯಾದ ನಾವು, ಭಾರತವನ್ನು ಪರಮಾಧಿಕಾರವುಳ್ಳ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸಲು ವಿಧಿಯುಕ್ತವಾಗಿ ನಿರ್ಧರಿಸಿ... ಈ ಸಂವಿಧಾನವನ್ನು ನಾವಾಗಿ ಪಡೆದಿರುತ್ತೇವೆ' ಎಂದು ಘೋಷಿಸಿದ್ದು. ಇಂತಹ ಪ್ರಜಾಸತ್ತಾತ್ಮಕ ಸಂವಿಧಾನವನ್ನು ಕೇವಲ ಒಂದು ವಿಶೇಷಾಜ್ಞೆ ಅಥವಾ ಪಾರ್ಲಿಮೆಂಟಿನ ಒಂದು ಕಾನೂನಿನ ಮೂಲಕ ಸರ್ವಾಧಿಕಾರಾಧಿಪತ್ಯಶೀಲವಾಗಿ ಮಾಡಲಾಗದು.

ಇದೇ ವಿಶಿಷ್ಟ ಉದ್ದೇಶಕ್ಕಾಗಿ, ವಿಶೇಷವಾಗಿ ಚುನಾಯಿತವಾದ ಹೊಸ ಸಂವಿಧಾನ ಸಭೆಯ ಮೂಲಕ ಮಾತ್ರ ಜನತೆ ಇದನ್ನು ಮಾಡಬಲ್ಲುದು. ಆ ಸಂವಿಧಾನಕ್ಕೆ ಸಹಿಹಾಕಿದ ಕಾಲು ಶತಮಾನದ ನಂತರವೂ 'ಎಲ್ಲ ಪ್ರಜೆಗಳಿಗೆ' ನ್ಯಾಯ, ಸ್ವಾತಂತ್ರ್ಯ, ಸಮಾನತೆ ಹಾಗೂ ಭ್ರಾತೃತ್ವದ ಪರಿಚಯವಾಗಿರದಿದ್ದರೆ, ತಪ್ಪು, ಸಂವಿಧಾನ ಅಥವಾ ಪ್ರಜಾಪ್ರಭುತ್ವದ್ದಲ್ಲ; ತಪ್ಪಿರುವುದು, ಇಷ್ಟು ವರ್ಷಗಳವರೆಗೂ ದೆಹಲಿಯಲ್ಲಿ ಅಧಿಕಾರದ ಲಗಾಮು ಹಿಡಿದು ಕೂತ ಕಾಂಗ್ರೆಸ್ ಪಕ್ಷದಲ್ಲಿ. ಕಾಂಗ್ರೆಸ್ ಪಕ್ಷದ ಈ ವೈಫಲ್ಯದಿಂದಾಗಿಯೇ ಸಾಮಾನ್ಯಜನತೆ ಹಾಗೂ ಯುವಜನರಲ್ಲಿ ಇಷ್ಟೊಂದು ಅಶಾಂತಿ ತಲೆದೋರಿರುವುದು. ಆದರೆ ದಮನ ಇದಕ್ಕೆ ಪರಿಹಾರವಲ್ಲ. ಬದಲಾಗಿ ಅದು ವೈಫಲ್ಯವನ್ನು ಎತ್ತಿತೋರಿಸುತ್ತದಷ್ಟೆ.

ಹೌದು, ಈಚೆಗೆ ಪತ್ರಿಕೆಗಳ ತುಂಬಾ ಹೊಸ ನೀತಿಗಳ, ಹೊಸ ಕಾರ್ಯಾಚರಣೆಗಳ ಮತ್ತು ಹೊಸ ಉತ್ಸಾಹ ಮೂಡಿಕೆಯ ವರದಿಗಳೇ ತುಂಬಿಹೋಗಿರುವುದನ್ನು ನಾನು ನೋಡುತ್ತಿದ್ದೇನೆ. ಇದೆಲ್ಲದರ ಅರ್ಥ: ವ್ಯರ್ಥವಾದ ದಿನಗಳನ್ನು ಮರೆಮಾಚಲು, ಅಂದರೆ ಒಂಭತ್ತು ವರ್ಷಗಳ ನಿಮ್ಮ ವೈಫಲ್ಯವನ್ನು, ಅಲ್ಲಲ್ಲಿ ಒಂದಿಷ್ಟು ಕೆಲಸ ಮಾಡಿದಂತೆ ತೋರಿಸಿ, ಮುಚ್ಚಿಡುವ ಪ್ರಯತ್ನವನ್ನು ನೀವು ಮಾಡಿದ್ದೀರಷ್ಟೆ. ಆದರೆ ಇವೆಲ್ಲ ನಿಮ್ಮ ೨೦ ಅಂಶಗಳೂ, ನಿಮ್ಮ ಮಗನ ೧೦ ಅಂಶಗಳೂ ಹಾಗೂ ನಿಮ್ಮ "ಚೆಲ್ಲುವರಿದ ಆಲೋಚನೆಗಳು" (Stray thoughts)* ಹಿಡಿದ ಹಾದಿಯನ್ನೇ ಹಿಡಿಯುತ್ತವೆ. ನಿಮಗೆ ಖಚಿತವಾಗಿ ಹೇಳುತ್ತಿದ್ದೇನೆ: ಜನ ಈ ಸಲ ಮೋಸಹೋಗುವುದಿಲ್ಲ. ನಾನು ಇನ್ನೊಂದು ವಿಷಯವನ್ನೂ ಖಚಿತವಾಗಿ ಹೇಳುವೆ: ಸ್ವಾರ್ಥಿಗಳು, ಬೆನ್ನೆಲುಬಿಲ್ಲದ ಸಮಯ ಸಾಧಕರು ಮತ್ತು ಹೌದಪ್ಪಗಳಿಂದ ತುಂಬಿರುವ—ಓ, ಇದು ಹೀಗಾಗಬಾರದಿತ್ತು—ಕಾಂಗ್ರೆಸ್ಸಿನಂತಹ ಪಕ್ಷ ಮೌಲಿಕವಾದದ್ದೇನನ್ನೂ ಮಾಡಲಾರದು (ಎಲ್ಲ ಕಾಂಗ್ರೆಸ್ಸಿಗರೂ ಹೀಗಲ್ಲ. ಪಕ್ಷದ ಸದಸ್ಯತ್ವವನ್ನು ಮತ್ತು ಸ್ವಾತಂತ್ರ್ಯವನ್ನು ನಿರಾಕರಿಸಲಾಗಿರುವ ಕೆಲವರು ಇದಕ್ಕೆ ಅಪವಾದವಾಗಿದ್ದಾರೆ; ನಿಮ್ಮ ಏಕಚಕ್ರಾಧಿಪತ್ಯ ಧರ್ಮದ ಪ್ರಕಾರ ಪಕ್ಷದೊಳಗೂ ಟೀಕೆಟಿಪ್ಪಣಿಗಳಿಗೆ ಅವಕಾಶವಿಲ್ಲ). ಕಾಗದದ ಮೇಲೆ ಬೇಕಾದಷ್ಟು ಪ್ರಚಾರ ಮತ್ತು ಸಾಧನೆಯ ದಾಖಲೆಗಳಿರುತ್ತವೆ; ಆದರೆ ಬೇರುಮಟ್ಟದಲ್ಲಿ ಒಂದಿಷ್ಟೂ ಬದಲಾವಣೆಯ ಸೋಂಕಿರುವುದಿಲ್ಲ. ಬಡವರ ಸ್ಥಿತಿಗತಿಯಂತೂ-ದೇಶದ

---

* ಇದು ೧೯೬೯ರಲ್ಲಿ ಬೆಂಗಳೂರಿನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಆರ್ಥಿಕ ನೀತಿಯ ಬಗ್ಗೆ ಶ್ರೀಮತಿ ಗಾಂಧಿ ಕಳಿಸಿದ ಟಿಪ್ಪಣಿಯ ಪ್ರಸ್ತಾಪ.

ಬಹುಭಾಗದಲ್ಲಿ ಬಹುಸಂಖ್ಯಾತರಾಗಿರುವವರು ಇವರೇ—ಕಳೆದ ಕೆಲವು ವರ್ಷಗಳಿಂದ ಹದಗೆಡುತ್ತಲೇ ಇದೆ. ಈ ಹದಗೆಡುತ್ತಿರುವ ಪ್ರವೃತ್ತಿಯನ್ನಷ್ಟೆ ತಡೆದರೆ ಸಾಕಾಗದು. ಅದರ ಬದಲ್ಲಿ, ಇಡೀ ರಾಜಕೀಯ ಹಾಗೂ ಆರ್ಥಿಕ ಧೋರಣೆಗಳೇ ಬದಲಾಗಬೇಕಾಗಿದೆ.

ನಾನು ಇವನ್ನೆಲ್ಲಾ ಮುಕ್ತಮನಸ್ಸಿನಿಂದ ಮತ್ತು ಸ್ಪಷ್ಟವಾಗಿ ತಡಕಾಡದೆಯೇ ಬರೆದಿರುವೆ. ದ್ವೇಷದಿಂದಾಗಲೀ ಅಥವಾ ಪದಪ್ರಯೋಗದಲ್ಲಿ ನಿಮ್ಮನ್ನು ಮೀರಿಸಲೆಂದಾಗಲೀ ನಾನು ಹೀಗೆ ಮಾಡಿಲ್ಲ. ಅದು ಕೇವಲ ನಿಷ್ಕಪಟತನವಾಗುತ್ತದಷ್ಟೆ. ನನ್ನ ಆರೋಗ್ಯದ ಬಗ್ಗೆ ತೆಗೆದುಕೊಳ್ಳಲಾಗಿರುವ ಎಚ್ಚರಿಕೆಯ ಬಗ್ಗೆ ನಾನು ಕೃತಘ್ನನಾಗಿಲ್ಲ ಎಂದೇನೂ ಇದರ ಅರ್ಥವಲ್ಲ. ನೀವು ಮುಚ್ಚಿಡಲು ಮತ್ತು ವಿರೂಪಗೊಳಿಸಲು ಯತ್ನಿಸುತ್ತಿದ್ದ ನಗ್ನ ಸತ್ಯವನ್ನು, ನಿಮ್ಮ ಮುಖದ ಮುಂದೆ ಹಿಡಿಯುವುದೇ ಇಲ್ಲಿ ನನ್ನ ಉದ್ದೇಶವಾಗಿದೆ.

ಈ ಅಸಂತೋಷಕರ ಕರ್ತವ್ಯವನ್ನು ನಿರ್ವಹಿಸಿದ ನಂತರ, ಕೆಲವು ಕೊನೆಯ ಬುದ್ಧಿಮಾತುಗಳನ್ನು ಹೇಳಿ ಇದನ್ನು ಮುಕ್ತಾಯಗೊಳಿಸಲೆ? ನಿಮಗೇ ತಿಳಿದಿರುವಂತೆ ನಾನೊಬ್ಬ ವಯಸ್ಸಾದ ಮನುಷ್ಯ. ನನ್ನ ಜೀವನದ ದುಡಿಮೆ ಮುಗಿದಿದೆ. ಪ್ರಭಾ ಅಗಲಿದ ನಂತರ ನಾನು ಇನ್ನಾರಿಗಾಗಿಯೂ ಬದುಕಬೇಕಾಗಿಲ್ಲ. ನನ್ನ ತಮ್ಮ ಹಾಗೂ ಸೋದರ ಸಂಬಂಧಿಗೆ ಅವರದೇ ಆದ ಕುಟುಂಬಗಳಿವೆ ಮತ್ತು ನನ್ನ ತಂಗಿಗೆ—ಅಕ್ಕ ಬಹಳ ವರ್ಷಗಳ ಹಿಂದೆಯೇ ಅಗಲಿದಳು—ಆಕೆಯ ಮಗ ಮತ್ತು ಮಗಳಾಗಿದ್ದಾರೆ. ನಾನು ನನ್ನ ವಿದ್ಯಾಭ್ಯಾಸ ಮುಗಿಸಿದ ನಂತರ ನನ್ನ ಇಡೀ ಬದುಕನ್ನೇ ದೇಶಕ್ಕಾಗಿ ಅರ್ಪಿಸಿದ್ದೇನೆ ಮತ್ತು ಅದಕ್ಕೆ ಪ್ರತಿಫಲವನ್ನೇನೂ ನಾನು ಬೇಡಿಲ್ಲ. ಆದುದರಿಂದ ನಿಮ್ಮ ಆಧಿಪತ್ಯದಲ್ಲಿ ಬಂದಿಯಾಗಿಯೇ ಸಾಯಲು ಸಿದ್ಧನಿರುವೆ.

ಇಂತಹ ಮನುಷ್ಯನ ಬುದ್ಧಿ ಮಾತುಗಳನ್ನು ಸ್ವಲ್ಪ ಕೇಳುವಿರಾ? ನಿಮ್ಮ ಮಾನ್ಯ ತಂದೆಯವರೂ ಸೇರಿದಂತೆ ಈ ರಾಷ್ಟ್ರದ ಹಿರಿಯರು ಹಾಕಿದ ಅಭಿಪ್ರಾಯವನ್ನು ದಯವಿಟ್ಟು ಪಾಲಿಸುವಂತೆ ಬೇಡುವೆ. ನೀವು ಹಿಡಿದಿರುವ ಹಾದಿಯಲ್ಲಿ ಸಂಕಷ್ಟ ಮತ್ತು ನೋವನ್ನುಳಿದು ಮತ್ತೇನೂ ಇಲ್ಲ. ಒಂದು ಅಪೂರ್ವ ಪರಂಪರೆ, ಘನ ಮೌಲ್ಯಗಳು ಹಾಗೂ ಸಕ್ರಿಯ ಪ್ರಜಾಪ್ರಭುತ್ವ. ಪರಿಪಾಲನೆಗಾಗಿ ಈಗ ನಿಮ್ಮ ವಶದಲ್ಲಿವೆ. ಮುಂದಿನ ಜನಾಂಗಕ್ಕೆ ಇವೆಲ್ಲದರ ಪಾಳನ್ನಷ್ಟೆ ಬಿಟ್ಟುಹೋಗಬೇಡಿ. ಅವನ್ನೆಲ್ಲಾ ಮತ್ತೆ ಸರಿಮಾಡುವುದಕ್ಕೆ ಬಹಳ ಕಾಲ ಬೇಕಾಗುತ್ತದೆ. ಇವನ್ನೆಲ್ಲಾ ಮತ್ತೆ ಸರಿಮಾಡಲಾಗುವುದೆಂಬುದರಲ್ಲಿ ನನಗೆ ಒಂದಿಷ್ಟು ಸಂದೇಹವಿಲ್ಲ. ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ ಹೋರಾಡಿ ಅದರ ಸೊಕ್ಕಡಗಿಸಿದ ಜನಾಂಗವೊಂದು ಅನಿರ್ದಿಷ್ಟ ಕಾಲದವರೆಗೆ ಈ ಸರ್ವಾಧಿಕಾರತ್ವದ ಅತ್ಯಾಚಾರ, ಹಾಗೂ ಅವಮಾನಗಳನ್ನು ಖಂಡಿತ ಸಹಿಸದು. ಮನುಷ್ಯ ಚೈತನ್ಯವನ್ನು— ಅದನ್ನೆಷ್ಟೇ ಆಳಕ್ಕೆ ತುಳಿದಿರಲಿ—ನಿರ್ಮೂಲ ಮಾಡಲು ಎಂದಿಗೂ ಸಾಧ್ಯವಿಲ್ಲ. ನಿಮ್ಮ ವೈಯಕ್ತಿಕ ಸರ್ವಾಧಿಕಾರವನ್ನು ಸ್ಥಾಪಿಸುವಲ್ಲಿ ಅದನ್ನು ಆಳಕ್ಕೆ ಹೂತುಬಿಟ್ಟಿದ್ದೀರಿ. ಆದರದು ಸಮಾಧಿಯಿಂದ ಎದ್ದೇಳುತ್ತದೆ. ರಷ್ಯಾದಲ್ಲೂ ಕೂಡಾ ಅದು ಕ್ರಮೇಣ ಜಾಗ್ರತವಾಗುತ್ತಿದೆ.

ನೀವು ಸಾಮಾಜಿಕ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಿದ್ದೀರಿ. ಈ ಮಾತುಗಳು ಮನಸ್ಸಿನಲ್ಲಿ ಅದೆಂತಹ ಸುಂದರ ಚಿತ್ರವನ್ನು ಕಲ್ಪಿಸುತ್ತವೆ! ಆದರೆ ವಾಸ್ತವ ಸ್ಥಿತಿ ಎಷ್ಟು ಕುರೂಪವಾಗಿದೆ ಎಂಬುದನ್ನು ನೀವು ಪೂರ್ವ ಹಾಗೂ ಮಧ್ಯ ಯುರೋಪ್‌ನಲ್ಲಿ ಕಂಡಿದ್ದೀರಿ: ನಗ್ನ ಸರ್ವಾಧಿಕಾರ ಮತ್ತು ಅಂತಿಮ ಪರಿಣಾಮದಲ್ಲಿ ರಷ್ಯಾದ ಒಡೆಯ ಯಜಮಾನಿಕೆ. ದಯವಿಟ್ಟು, ದಯವಿಟ್ಟು ಭಾರತವನ್ನು ಅಂತಹ ದುರ್ಗತಿಗೆ ತಳ್ಳಬೇಡಿ.

ಯಾವ ಉದ್ದೇಶಕ್ಕೆಂದು ಈ ಕ್ರೂರ ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ ಎಂದು ನಾನು ಕೇಳಬಹುದೇ? ನಿಮ್ಮ ಇಪ್ಪತ್ತು ಅಂಶಗಳನ್ನು ಜಾರಿಗೆ ತರಲು ಸಾಧ್ಯವಾಗಲೆಂದೇ? ಆದರೆ ಆ ಹತ್ತು ಹಲವು ಅಂಶಗಳನ್ನು ಜಾರಿಗೆ ತರುವಲ್ಲಿ ನಿಮ್ಮನ್ನು ಯಾರು ತಡೆದಿದ್ದರು? ಜನತೆ ಹಾಗೂ ಯುವಜನರು ಸಂಕಷ್ಟಕ್ಕೀಡಾಗುವಂತೆ ಮಾಡಿದ್ದ, ಅವರ ಮೇಲಿನ ಹೊರೆಯನ್ನು ಸ್ವಲ್ಪವಾದರೂ ಕಡಿಮೆ ಮಾಡುವಂತಹ ನಿಮ್ಮ ಯಾವುದೇ ಕಾರ್ಯಕ್ರಮವನ್ನು—ಅದೆಷ್ಟೇ ಅಸಮರ್ಪಕವಾಗಿರಲಿ—ಜಾರಿಗೆ ತರಲು ನೀವು ಯಾವುದೇ ಪ್ರಯತ್ನ ಕೈಗೊಳ್ಳದಿದ್ದುದರಿಂದಲೇ ಈ ಎಲ್ಲ ಅತೃಪ್ತಿ, ಪ್ರತಿಭಟನೆ ಹಾಗೂ ಸತ್ಯಾಗ್ರಹಗಳು ಆರಂಭವಾದದ್ದು. ಚಂದ್ರಶೇಖರ್, ಮೋಹನ ಧಾರಿಯಾ, ಕೃಷ್ಣಕಾಂತ್ ಹಾಗೂ ಅವರ ಸ್ನೇಹಿತರೆಲ್ಲಾ ಇದನ್ನೇ ಹೇಳುತ್ತಿದ್ದುದು; ಮತ್ತು ಇದಕ್ಕೆಂದೇ ಅವರು ಶಿಕ್ಷೆಗೆ ಒಳಗಾದದ್ದೂ ಕೂಡ.

ದೇಶದಲ್ಲಿ ಉಂಟಾಗಿರುವ ‘ಅನಿಶ್ಚಿತ ವಾತಾವರಣ’ದ ಬಗ್ಗೆ ನೀವು ಮಾತನಾಡಿದ್ದೀರಿ. ಆದರೆ ಇದಕ್ಕೆ ಕಾರಣ ವಿರೋಧಪಕ್ಷಗಳೇ ಅಥವಾ ನಾನೇ? ಈ ಅನಿಶ್ಚಿತತೆಗೆ ಕಾರಣ ನಿಮ್ಮ ನಿರ್ಧಾರ, ದಿಕ್ಕು ಹಾಗೂ ಕಾರ್ಯಾಚರಣೆಗಳಿಗೆ ಸಂಬಂಧಿಸಿದ ದೋಷವಷ್ಟೆ. ನಿಮ್ಮ ವೈಯಕ್ತಿಕ ಸ್ಥಾನ ಅಭದ್ರವಾದಾಗ ಮಾತ್ರ ನೀವು ತ್ವರಿತವಾಗಿ ಮತ್ತು ನಾಟಕೀಯ ರೀತಿಯಲ್ಲಿ ಕಾರ್ಯೋನ್ಮುಖರಾಗುತ್ತೀರಿ. ಒಮ್ಮೆ ಅದು ಖಚಿತವಾಯಿತೆಂದರೆ, ಮತ್ತೆ ಈ ಅನಿಶ್ಚಯತೆ ಆರಂಭವಾಗುತ್ತದೆ. ಪ್ರಿಯ ಇಂದಿರಾಜಿ, ದಯವಿಟ್ಟು ನಿಮ್ಮನ್ನು ದೇಶದೊಂದಿಗೆ ಗುರುತಿಸಿಕೊಳ್ಳಬೇಡಿ. ನೀವು ಅಮರರಲ್ಲ; ಆದರೆ ಭಾರತ ಅಮರ.

ನೀವು ವಿರೋಧಪಕ್ಷಗಳನ್ನು ಮತ್ತು ನನ್ನನ್ನು ಎಲ್ಲ ರೀತಿಯ ದುಷ್ಟಶಕ್ತಿಗಳೊಂದಿಗೆ ಹೋಲಿಸಿ ತೆಗಳಿದ್ದೀರಿ. ಆದರೆ ನೀವು ಸರಿ ಕೆಲಸಗಳನ್ನು—ಉದಾಹರಣೆಗೆ ೨೦ ಅಂಶಗಳ ಅನುಷ್ಠಾನ, ಮಂತ್ರಿ ಮಟ್ಟದಲ್ಲಿನ ಭ್ರಷ್ಟಾಚಾರದ ನಿರ್ಮೂಲನೆ, ಚುನಾವಣಾ ಕಾನೂನುಗಳ ಸುಧಾರಣೆ ಮುಂತಾದ ಕ್ರಮಗಳನ್ನು—ಕೈಗೊಂಡರೆ ಮತ್ತು ವಿರೋಧಪಕ್ಷಗಳನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅವುಗಳ ಸಲಹೆಗಳನ್ನೂ ಕೇಳತೊಡಗಿದರೆ, ನಮ್ಮೆಲ್ಲರ ಉತ್ಸಾಹಪೂರ್ಣ ಸಹಕಾರದ ಭರವಸೆಯನ್ನು ನಾನು ನೀಡುತ್ತೇನೆ. ಇದಕ್ಕಾಗಿ ನೀವು ಪ್ರಜಾಪ್ರಭುತ್ವವನ್ನೇ ನಾಶಮಾಡಬೇಕಾಗಿಲ್ಲ. ಈಗ ಮೊದಲ ಹೆಜ್ಜೆ ಇಡಬೇಕಾದವರು ನೀವೇ. ಆ ಬಗ್ಗೆ ನಿರ್ಧಾರವನ್ನು ನೀವೇ ಕೈಗೊಳ್ಳಬೇಕಾಗಿದೆ.

ಈ ಕೊನೆಯ ಮಾತುಗಳೊಂದಿಗೆ ನಾನು ನಿಮಗೆ ವಿದಾಯ ಹೇಳುವೆ. ದೇವರು ನಿಮ್ಮೊಂದಿಗಿರಲಿ.

ಜಯಪ್ರಕಾಶ್

ಅನುಬಂಧ - ೩

ರಾಜಕೀಯ ಇಷ್ಟಪತ್ರ (೧೯೭೫)

Today is the 5th of December 1975 and I am undergoing treatment at the Jaslok Hospital in Bombay for my kidneys which have been very badly damaged during the 4½ months of solitary confinement in detention from which I have just emerged.

Just in case I am removed from the scene, I would like to state for the information of my friends in India and abroad and the Indian people in general that my views about the situation in India are precisely what they were on 25th June 1975 and when I wrote to the Prime Minister in July 1975. Indeed all the ugly things that have happened since have only confirmed my apprehensions. I am making this clear just in case there should be any attempt to misrepresent the position when I am no longer there to correct any such misstatements. I hope the people of India will be able before long to liberate themselves non-violently from the present tyranny.

J.P. Narayan
5.12.75

Signed before me

NOTARY
MAHARASHTRA STATE
5.12.75





ಅನುಬಂಧ - ೪

ಒಂದು ಸಂದರ್ಶನ

ಭೋಲಾ ಚಟರ್ಜಿ: ಜೆ.ಪಿ., ೧೯೭೭ರ ಮಾರ್ಚ್ ಚುನಾವಣೆಗಳ ನಂತರ, ನಿಖರವಾಗಿ ಹೇಳುವುದಾದರೆ ೨೨ ಅಕ್ಟೋಬರ್ ೧೧ ರಂದು, ನೀವು ನನ್ನ ಜೀವನದಲ್ಲಿ ಮಾಡಬೇಕಾದ್ದನ್ನು 'ಮಾಡಿಯಾಗಿದೆ ಎಂದು ಹೇಳಿದ್ದೀರಿ. ಇದನ್ನು ಸ್ವಲ್ಪ ವಿವರಿಸಬೇಕು. ನನ್ನ ಪ್ರಶ್ನೆ ಇನ್ನೊಂದು ರೂಪದಲ್ಲಿ, ನಿಮ್ಮ ತತ್ವ, ನಂಬಿಕೆ ಹಾಗೂ ರಾಜಕೀಯ-ಸಾಮಾಜಿಕ ಕಾರ್ಯಾಚರಣೆಗಳ ತಂತ್ರಗಳ ನೆಲೆಯಲ್ಲಿ ನಿಜವಾಗಿ ಜಯಪ್ರಕಾಶ್ ನಾರಾಯಣ್ ಎಂದರೆ ಸಾರತಃ ಏನು ಎಂಬುದೇ ಆಗಿದೆ.

ಜೆ.ಪಿ.: ಇದು ಬಹಳ ಕಷ್ಟದ ಪ್ರಶ್ನೆ. ಮೊದಲಾಗಿ ಅಂದು ನಾನು ಹೇಳಿದ್ದೇನೋ ಸರಿಯಾಗಿ ನೆನಪಿಲ್ಲ. ಆದರೆ ನಿಮ್ಮ ಈ ಪ್ರಶ್ನೆ ಬಗ್ಗೆ ಈಗ ಯೋಚಿಸಿದಾಗ ನನಗೆ ಅನ್ನಿಸುವುದು—ರಾಜಕೀಯ ನೆಲೆಯಲ್ಲಿ ಸ್ವಾತಂತ್ರ್ಯವನ್ನು ಮರಳಿಪಡೆಯಲಾಗಿದೆ, ಪ್ರಜಾಪ್ರಭುತ್ವವನ್ನು ಆಂತರಿಕ ಅಪಾಯದಿಂದ ರಕ್ಷಿಸಲಾಗಿದೆ ಮತ್ತು ಇದರಲ್ಲಿ ನನ್ನ ಪಾತ್ರವನ್ನು ನಾನು ನಿರ್ವಹಿಸಿದ್ದೇನೆ ಎಂಬರ್ಥದಲ್ಲಿ ಅಂದು ನಾನು ನನ್ನ ಜೀವನದಲ್ಲಿ ನಾನು ಮಾಡಬೇಕಾದ್ದನ್ನು ಮಾಡಿದ್ದೇನೆ ಎಂದು ಹೇಳಿದ್ದೇನೆ ಎಂದು. ನನಗೆ ಯಾವುದೇ ರಾಜಕೀಯ ಸ್ಥಾನಮಾನದ ಅಥವಾ ಪ್ರಭಾವ ಕೇಂದ್ರವಾಗುವ ಆಸೆ ಇಲ್ಲ ಎಂಬರ್ಥದಲ್ಲಿ. ನಾನು ರಾಜಕೀಯ ಪ್ರಾಣಿಯಲ್ಲವಾದರೂ, ಬಡತನ ನಿರ್ಮೂಲನವಾಗಬೇಕು, ಜಾತಿಪದ್ಧತಿ ನಿರ್ಮೂಲನವಾಗಬೇಕು, ಮನುಷ್ಯ-ಮನುಷ್ಯ ಸಮಾನವಾಗಿರುವಂತಹ—ಪ್ರತಿಯೊಬ್ಬರೂ ಸಮಾನ ಸಂಪತ್ತು ಹೊಂದಿರಲಾಗದಿದ್ದರೂ—ಪ್ರತಿಯೊಬ್ಬರೂ ಯಾವುದೇ ಅಡ್ಡಿಗಳಿಲ್ಲದೆ ಸಮಾನ ಅವಕಾಶವಿರುವಂತಹ ಹೊಸದೊಂದು ಸಮಾಜ ನಿರ್ಮಾಣವಾಗುವುದನ್ನು ಕಾಣಬೇಕೆಂಬ ಆಸೆ ಖಂಡಿತ ನನಗಿದೆ. ಮಾಡಬೇಕಾದದ್ದು ಇನ್ನೂ ಬಹಳ ಇದೆಯಾದರೂ, ಈಗ ಈ ತರಹದ ಹೊಸ ಸಮಾಜ ನಿರ್ಮಾಣದ ಆಶಯವನ್ನಾದರೂ ಬಿತ್ತಲಾಗಿದೆ ಎಂದು ನಂಬಿದ್ದೇನೆ. ಬಡತನ ಇನ್ನೂ ಇದೆ, ಬಹುಶಃ ಹೆಚ್ಚುತ್ತಿದೆ. ಜಾತಿ ತಾರತಮ್ಯ ಕಡಿಮೆ ಯಾಗುತ್ತಿದ್ದರೂ ರಾಜಕಾರಣದಲ್ಲಿ ಜಾತಿಯ ಹಿಡಿತ ಹಾಗೇ ಇದೆ. ಮತ ಪಡೆಯಲು ಜಾತಿ ಬಳಸುವ ಪ್ರವೃತ್ತಿ ಈ ಅಸಮಾನ-ಅನ್ಯಾಯಯುತ ಪದ್ಧತಿಗೆ ಹೊಸ ಜೀವ ನೀಡುತ್ತಿದೆ ಎಂದು ನಾನು ಭಾವಿಸಿದ್ದೇನೆ. ಈ ದಿಸೆಯಲ್ಲಿನ್ನೂ ಕೆಲಸ ಆಗಬೇಕಿದೆ, ನಿಜ. ಬಹುಶಃ ಆಗ, ಈಗಾಗಲೇ ಏನನ್ನೂ ಮಾಡಲಾಗಿದೆಯೋ ಅಥವಾ ನನಗೆ ಏನು ಮಾಡಲು ಸಾಧ್ಯವಾಗಿತ್ತೋ ಅದೇ ಹೆಚ್ಚೆಂದರೆ ನಾನು ಮಾಡಬಹುದಾಗಿದ್ದದ್ದು ಎಂದೆನ್ನಿಸಿದ್ದಿರಬಹುದು. ಆ ಅರ್ಥದಲ್ಲಿ ನನ್ನ ಬದುಕಿನಲ್ಲಿ ಮಾಡಬೇಕಾದ್ದನ್ನು ಮಾಡಿಯಾಗಿದೆ ಎಂದು ಹೇಳಿದ್ದು. ನಿಜ, ಕವಿಭಾಷೆಯಲ್ಲಿ ಹೇಳುವುದಾದರೆ ಮಾಡದೆ ಉಳಿದಿರುವುದು ಅಷ್ಟು, ಮಾಡಿಯಾಗಿರುವುದು ಇಷ್ಟೆ. ಈ ದೃಷ್ಟಿ ಇಲ್ಲದೇ ಹೋದರೆ, ಮನುಷ್ಯ ಕ್ರಿಯಾಶೀಲನಾಗುವ, ತನ್ನನ್ನು ಉತ್ತಮಗೊಳಿಸಿಕೊಳ್ಳುವ, ಮುಂದಕ್ಕೆ ಹೆಜ್ಜೆ ಇಡುವ, ಉತ್ತಮ ಸಮಾಜ ನಿರ್ಮಿಸುವ ಅಭೀಪ್ಸೆಯನ್ನೇ ಕಳೆದುಕೊಳ್ಳುತ್ತಾನೆ. ನಾನು ಆ ಮಾತುಗಳನ್ನಾಡಿದಾಗ ಇದೆಲ್ಲವೂ ನನ್ನ ಮನಸ್ಸಿನಲ್ಲಿತ್ತು.

ಭೋಲಾ: ಆದರೂ ಒಂದು ವಿಷಯ ಸ್ಪಷ್ಟಗೊಳ್ಳದೆ ಹಾಗೇ ಉಳಿದಿದೆ, ಜೆ.ಪಿ. ಜಯಪ್ರಕಾಶ್ ನಾರಾಯಣ್ ಅಂದರೆ ಸಾರತಃ ಏನು, ನಿಮ್ಮ ಪ್ರಕಾರ?

ಜೆ.ಪಿ.: ಇದು ಇತರರು ಕಂಡುಕೊಳ್ಳಬೇಕಾದ ವಿಷಯ. ನಾನಂತೂ ಜಯಪ್ರಕಾಶ್ ನಾರಾಯಣ್ ಸಾರತಃ ಏನು ಎಂಬುದು ಗೊತ್ತಿದೆಯೆಂದು ನಟಿಸಲಾರೆ. ಹೆಚ್ಚೆಂದರೆ ನಾನು ಹೇಳಬಹುದಾದ್ದು ಇಷ್ಟೆ—ನನ್ನ ಮಟ್ಟಿಗೆ ನಾನು ಸತ್ಯವಂತನಾಗಿರಲು ಪ್ರಯತ್ನಿಸಿರುವೆ; ಯಾವುದೇ ಭ್ರಮೆಗೀಡಾಗದಂತೆ ಎಚ್ಚರಿಕೆ ವಹಿಸಿರುವೆ. ನನ್ನ ತಪ್ಪುಗಳು, ದೌರ್ಬಲ್ಯಗಳು ನನ್ನ ವೈಫಲ್ಯಗಳು ನನಗೆ ಗೊತ್ತಿದೆ. ನನ್ನ ಅಲ್ಪ ಯಶಸ್ಸಿಗೆ ಸುಮಾರು ಅನುಕೂಲಕರ ಸಂದರ್ಭ ಹಾಗೂ ಪರಿಸ್ಥಿತಿಗಳೇ ಕಾರಣವೇ ಹೊರತು, ನನ್ನದೇ ಕೊಡುಗೆ ಅತ್ಯಲ್ಪ. ಇದು ಹುಸಿ ವಿನಯದ ಮಾತಲ್ಲ, ನನಗೆ ನಿಜವಾಗಿಯೂ ಹಾಗೆನ್ನಿಸಿದ್ದರಿಂದಲೇ ಈ ಮಾತುಗಳನ್ನು ಹೇಳುತ್ತಿರುವುದು.

ಭೋಲಾ: ಜೆ.ಪಿ., ನಿಮ್ಮನ್ನು ತುಂಬಾ ವೈಯಕ್ತಿಕವೆನ್ನಿಸುವ ಪ್ರಶ್ನೆಯನ್ನು ಕೇಳುತ್ತಿದ್ದೇನೆ, ಕ್ಷಮಿಸಿ. ದಯವಿಟ್ಟು ನಿಮ್ಮ ಪತ್ನಿಯ ಬಗ್ಗೆ ಒಂದಿಷ್ಟು ಹೇಳುವಿರಾ? ನಿಮ್ಮ ಪತ್ನಿಯ ಸಾವಿನ ನಂತರ ನಿಮ್ಮ ಬದುಕಿನ ದಿಕ್ಕೇ- ಗತಿಗಳೇ ಬದಲಾಯಿತು ಎಂದು ಹೇಳಿದರೆ ತಪ್ಪಾದೀತೇ?

ಜೆ.ಪಿ.: ನಮ್ಮಿಬ್ಬರ ನಡುವೆ ಒಂದು ವಿಶಿಷ್ಟ ರೀತಿಯ ಸಂಬಂಧವಿತ್ತು. ಮದುವೆಯಾದ ಕೂಡಲೇ ನಾನು ಅಮೆರಿಕಾಗೆ ಹೋದೆ; ಕಟ್ಟಾ ಮಾರ್ಕ್ಸ್‌ವಾದಿಯಾಗಿ ಹಿಂತಿರುಗಿದೆ. ಆದರೆ ಆಕೆ ಸಾಬರ್ಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿಯ ಸಾಕುಮಗಳೇ ಆಗಿಹೋದಳು ಮತ್ತು ಗಾಂಧೀಜಿ ಹಾಗೂ ಗಾಂಧಿಚಿಂತನೆಯ ಶಿಷ್ಯತ್ವ ಸ್ವೀಕರಿಸಿದಳು. ಸಹಜವಾಗಿಯೇ ನಮ್ಮಿಬ್ಬರ ನಡುವೆ ಅಭಿಪ್ರಾಯ ವ್ಯತ್ಯಾಸಗಳಿದ್ದವು. ಆದರೆ ಕೇವಲ ಗಂಡ-ಹೆಂಡತಿ ನಡುವಣ ಸಾಮಾನ್ಯ ಸಂಬಂಧಕ್ಕಿಂತಲೂ ಹೆಚ್ಚಿನದಾದ—ಆ ಸಂಬಂಧವನ್ನು ವರ್ಣಿಸುವುದು ಕಷ್ಟ—ಸಂಬಂಧ ನಮ್ಮ ನಡುವೆ ಇದ್ದುದರಿಂದ ನಾವಿಬ್ಬರೂ ಒಟ್ಟಿಗಿರಲು, ಎಲ್ಲ ರೀತಿಯ ಒಳ ಹಾಗೂ ಹೊರ ಹೋರಾಟಗಳನ್ನು ದಾಟಿ ಬರಲು ಸಾಧ್ಯವಾಯಿತು. ಉದಾಹರಣೆಗೆ, ನಾನು ಅಮೆರಿಕೆಯಲ್ಲಿದ್ದಾಗ ಆಕೆ ಕೈಗೊಂಡ ಬ್ರಹ್ಮಚರ್ಯೆಯ ಪ್ರತಿಜ್ಞೆಯನ್ನು ಒಪ್ಪಿಕೊಳ್ಳಲು ನನಗೆ ಬಹಳ ಕಷ್ಟವೇ ಆಯಿತು. ನನಗೂ ಹರೆಯ, ಆಕೆಗೂ ಹರೆಯ; ಅದು ಅಷ್ಟು ಸುಲಭವಾಗಿರಲಿಲ್ಲ. ಆಕೆ ತನ್ನ ಮಾತನ್ನು ಖಂಡಿತ ಉಳಿಸಿಕೊಂಡಳಾದರೂ, ನನ್ನ ವಿಷಯದಲ್ಲಿ ಹಾಗೆ ಹೇಳಲಾರೆ. ನೀವು ಅದನ್ನು ಪಾಪವೆಂದಾದರೂ ಕರೆಯಿರಿ, ದುರ್ವರ್ತನೆಯೆಂದಾದರೂ ಕರೆಯಿರಿ—ಏನೆಂದಾದರೂ ಕರೆದುಕೊಳ್ಳಿ—ನಾನು ಆ ಆದರ್ಶವನ್ನು ಪಾಲಿಸದಾದೆ. ದಾರಿಬಿಟ್ಟೆನೆಂದರೂ ಸರಿಯೆ. ಆದರೆ ನಮ್ಮಿಬ್ಬರ ನಡುವಣ ಪ್ರೇಮಬಂಧನದಿಂದಾಗಿ ಹೇಗೋ ಆಕೆ ಕೊನೆಯಲ್ಲಿ ವಿಜಯಿಯಾಗಿ ಬಹಳ ದೀರ್ಘಕಾಲ ನನ್ನ ಮೇಲೆ ಪ್ರಭಾವ ಬೀರಿದಳು ಮತ್ತು ಈಗ ನಾನು ಏನಾಗಿದ್ದೇನೆಯೋ ಹಾಗಾಗಲು ನನಗೆ ನೆರವು ನೀಡಿದಳು. ನನ್ನನ್ನು 'ನಿರ್ಮಾಣ' ಮಾಡುವಲ್ಲಿನ ಅವಳ ಕೊಡುಗೆಯನ್ನು ನಾನು ಮರೆಯಲಾರೆ. ನಿಮಗೆ ಇನ್ನೇನು ತಿಳಿಸಬೇಕೋ ನಾನರಿಯೆ. ನನ್ನ ವೈಯಕ್ತಿಕ ವಿಷಯಗಳ ಬಗ್ಗೆ ಮಾತಾಡಲು ನಾನು ಯಾವಾಗಲೂ ಹಿಂಜರಿಯುತ್ತೇನೆಯಾದರೂ, ನಿಮ್ಮ ಪ್ರೀತಿ ವಿಶ್ವಾಸಗಳಿಂದಾಗಿ, ನನ್ನ ಸದ್ಯದ ಮಿತಿಗಳ ಮಧ್ಯೆ ಕೆಲವು ವಿಷಯಗಳನ್ನು ಬಿಚ್ಚುಮನಸ್ಸಿನಿಂದ ಹೇಳಲಾಗದಿದ್ದರೂ ಎಷ್ಟು ಸಾಧ್ಯವೋ ಅಷ್ಟನ್ನು ಹೇಳಿದ್ದೇನೆ.

ಗ್ರಂಥಋಣ

1. **J.P. His Biography** by Allan and Wendy scarfe, Orient Longman, New Delhi (1975)

2. **Jayaprakash-Rebel Extrodinary** by Dr. Lakshmi Narain Lal, Indian Book Company, New Delhi (1975)

3. **J.P. Mission Partly accomplished** by Minoo Masani, MacMillan, Delhi (1977)

4. **Jayaprakash Narayana (Political thinkers of Modern India - 8)** Ed: Verinder Grover, Deep Publications, New Delhi (1991)

5. **Towards Total Revolution - Politics in India - Jayaprakash Narayana** Ed: Brahmanand, Popular Prakashan, Bombay (1978)

6. **Marx, Gandhi and Socialism** by Dr. Ram Manohar Lohia, Rammanohar Lohia Samata Vidyalaya Nyasa, Hyderabad (1978)

7. **J.P. - Profile of a non-conformist** by Bhola Chatterji, Minerva Associates, Calcutta (1979)

8. **Emergency Power in Indian Democracy** by Dr. Zubair Alam, S.K. Publishers, New Delhi (1987)

9. **ಜೆ.ಪಿ. ಸೆರೆಮನೆಯ ದಿನಚರಿ** ಅನು: ಡಿ.ಎಸ್. ನಾಗಭೂಷಣ, ನೆಲಮನೆ ಪ್ರಕಾಶನ, ಮೈಸೂರು (1977)

10. **ಭಾರತದ ಸ್ವಾತಂತ್ರ್ಯ ಚಳುವಳಿ: 1857-1947** ಲೇ. ಎ. ಪಿ. ಶ್ರೀನಿವಾಸಮೂರ್ತಿ, ಅಭ್ಯುದಯ ಪ್ರಕಾಶನ, ಬೆಂಗಳೂರು (1987)

ಇದೇ ಲೇಖಕರ ಇತರ ಕೃತಿಗಳು

- ಕುವೆಂಪು ಸಾಹಿತ್ಯ ದರ್ಶನ
- ಮರಳಿ ಬರಲಿದೆ ಸಮಾಜವಾದ!
- ರಾಷ್ಟ್ರಕವಿ. ಜಿ.ಎಸ್. ಶಿವರುದ್ರಪ್ಪ
- ಲೋಹಿಯಾ ಸಮಾಜವಾದ ದರ್ಶನ
- ಒಂದನೇ ತರಗತಿಯಿಂದ ಇಂಗ್ಲೀಷ್ ಕಲಿಕೆ : ಏಕೆ ಬೇಡ?
- ಬೇರು ಬೀಳಲು (ಸಮಾಜವಾದಿ ಸಂಕಥನಗಳು)
- ಅನೇಕ (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ)
- ಗಮನ (ಸಾಹಿತ್ಯ ವಿಮರ್ಶೆ-ಸಾಮಾಜಿಕ ಚಿಂತನೆ)
- ಜೆ.ಪಿ. ಸೆರೆಮನೆಯ ದಿನಚರಿ (ಅನುವಾದ)

ಸಂಪಾದನೆ

- ಕುವೆಂಪು : ಒಂದು ಪುನರನ್ವೇಷಣೆ
  (ಕುವೆಂಪು ಬದುಕು ಬರಹಗಳು ಒಂದು ಹಿನ್ನೋಟ)
- ಮಾನವ (ಸಮಾಜವಾದಿ ಮಾಸಿಕ)
- ಸಾಹಿತ್ಯ ಸಂವಾದ) (ಸಾಹಿತ್ಯಕ ದ್ವೈಮಾಸಿಕ)
- ಲೋಹಿಯಾ: ವ್ಯಕ್ತಿ-ವಿಚಾರ-ವಿಮರ್ಶೆ (ಲೋಹಿಯಾ ವಿಚಾರ ಸಮೀಕ್ಷೆ)
- ಒಲವು (ಅಂತರ್ಜಾತಿ ವಿವಾಹಿತರ ಸಮಾವೇಶದ ಸ್ಮರಣ ಸಂಪುಟ)

ಸಹ ಸಂಪಾದನೆ

- ಹಣತೆ
  (ಜಿ.ಎಸ್. ಶಿವರುದ್ರಪ್ಪ ಅಭಿನಂದನ ಗ್ರಂಥ)
- ಮಾಸ್ತಿ ಸಾಹಿತ್ಯ: ಸಮಗ್ರದರ್ಶನ
  (ಮಾಸ್ತಿ ಅವರ ಸಾಹಿತ್ಯ ಸಮೀಕ್ಷೆ)
- ಕಾಡಿನ ಹುಡುಗ ಕೃಷ್ಣ
  (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)



ಭೌತವಾದಿ ನಾಗರೀಕತೆಯಲ್ಲಿ ಮನುಷ್ಯ ಒಳ್ಳೆಯವನಾಗಿರಲು ಯಾವುದೇ ಕಾರಣ ಅಥವಾ ಪ್ರೇರಣೆ ಇಲ್ಲವಾಗಿದೆ... ಆದುದರಿಂದ ಒಳ್ಳೆಯತನದ ಪ್ರೇರೇಪಣೆಗಳಿಗಾಗಿ ಮನುಷ್ಯ ಭೌತವಾದವನ್ನು ಮೀರಿ ಹೋಗಬೇಕಾಗಿದೆ ಎಂದು ನನಗೀಗ ಮನವರಿಕೆಯಾಗಿದೆ. ಹೀಗಾಗಿ ಸಾಮಾಜಿಕ ಪುನಾರಚನೆ ಒಂದು ಭೌತವಾದಿ ತತ್ವಶಾಸ್ತ್ರದ ಸ್ಫೂರ್ತಿಯೊಂದಿಗೆ ಯಶಸ್ವಿಯಾಗಲಾರದೆಂದೂ ನನಗನ್ನಿಸಿದೆ.

ಭೌತೇತರವಾದವು-ನನ್ನ ಗಮನದಲ್ಲಿ ಸದ್ಯಕ್ಕೆ ಇಂತಹ ಯಾವುದೇ ನಿರ್ದಿಷ್ಟ ವಾದವಾಗಲೀ ಅಥವಾ ಸಿದ್ಧಾಂತವಾಗಲೀ ಇಲ್ಲದಿರುವುದರಿಂದ, ಈ ಸ್ಥೂಲ ಪದವನ್ನು ಬಳಸುತ್ತಿರುವೆ-ಭೌತ ವಸ್ತುವನ್ನು ಆತ್ಯಂತಿಕ ಸತ್ಯವೆಂದು ಪರಿಗಣಿಸಲು ನಿರಾಕರಿಸುತ್ತದೆ. ಹಾಗಾಗಿ, ಅದು ಸಹಜವಾಗಿಯೇ ವ್ಯಕ್ತಿಯನ್ನು ಒಂದು ನೈತಿಕ ಚಿಂತನೆಯ ಪಾತಳಿಗೆ ಕೊಂಡೊಯ್ಯುತ್ತದೆ. ಹಾಗೂ ಯಾವುದೇ ಹೊರಗಣ ತರ್ಕದ ಸಂಜ್ಞೆಗಳಿಲ್ಲದೆ ತನ್ನ ನಿಜ ಸ್ವಭಾವವನ್ನು ಅರಿತು, ತನ್ನ ಅಸ್ತಿತ್ವದ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಆತನನ್ನು ಪ್ರೇರೇಪಿಸುತ್ತದೆ. ಇಂತಹ ಸಂಚಲನೆ ಸಹಜವಾಗಿಯೇ ಆತನನ್ನು ಒಳ್ಳೆಯದರೆಡೆಗೆ, ಸತ್ಯದ ಕಡೆಗೆ ಕೊಂಡೊಯ್ಯುವ ಪ್ರಬಲ ಪ್ರೇರಕ ಶಕ್ತಿಯಾಗಿ ಕೆಲಸ ಮಾಡುತ್ತದೆ. ಒಟ್ಟಾರೆಯಾಗಿ ಹೇಳುವುದೆಂದರೆ, ಭೌತವಾದವನ್ನು ಮೀರಿ ನಿಂತಾಗ ಮಾತ್ರ ವ್ಯಕ್ತಿಗೆ ತಾನು ಮಾರ್ಗವು ಹೇಗೋ ಗುರಿಯೂ ಆಗಿದ್ದೇನೆ ಎಂಬ ತಿಳಿವುಂಟಾಗುವುದು.

–ಜಯಪ್ರಕಾಶ್ ನಾರಾಯಣ(೧೯೫೨)

ISBN 81-7877-070-9
9 788178 770703

ಅಭಿರುಚಿ ಪ್ರಕಾಶನ
ನಂ. 386, 14ನೆಯ ಮುಖ್ಯರಸ್ತೆ,
3ನೆಯಅಡ್ಡರಸ್ತೆ, ಸರಸ್ವತೀಪುರ ಮೈಸೂರು-9